ಮ್ಯಾಸಬೇಡ ಸಮುದಾಯದ ಮಹಿಳೆ

(ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ರೇಣುಕುಮಾರಿ ಆರ್.ಟಿ.

ಮಾರ್ಗದರ್ಶಕರು

ಡಾ. ಸಿ.ಟಿ. ಗುರುಪ್ರಸಾದ್

ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೭

ಮ್ಯಾಸಬೇಡ ಸಮುದಾಯದ ಮಹಿಳೆ

(ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ರೇಣುಕುಮಾರಿ ಆರ್.ಟಿ.

ಮಾರ್ಗದರ್ಶಕರು

ಡಾ. ಸಿ.ಟಿ. ಗುರುಪ್ರಸಾದ್

ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಮ್ಯಾಸಬೇಡ ಸಮುದಾಯದ ಮಹಿಳೆ (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ರೇಣುಕುಮಾರಿ ಆರ್.ಟಿ.** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ: 19.06.2017

ಸ್ಥಳ: ವಿದ್ಯಾರಣ್ಯ

ಡಾ. ಸಿ.ಟಿ. ಗುರುಪ್ರಸಾದ್
ಸಹ ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಮ್ಯಾಸಬೇಡ ಸಮುದಾಯದ ಮಹಿಳೆ (ಚಿತ್ರದುರ್ಗ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಸಿ.ಟಿ. ಗುರುಪ್ರಸಾದ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

R.T.R

ದಿನಾಂಕ: 19.06.2017

ಸ್ಥಳ: ವಿದ್ಯಾರಣ್ಯ

(ರೇಣುಕುಮಾರಿ ಆರ್.ಟಿ.)
ಸಂಶೋಧನ ವಿದ್ಯಾರ್ಥಿನಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

---

* ಅಧ್ಯಯನದ ಉದ್ದೇಶ, ಮಹತ್ವ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ
* ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಮಹತ್ವ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

ಪ್ರಸ್ತಾವನೆ:

ಭಾರತವು ಹಲವು ಧರ್ಮ ಹಾಗೂ ಸಂಸ್ಕೃತಿಗಳ ನೆಲೆವೀಡು. ಇಲ್ಲಿ ಈ ಎಲ್ಲಾ ವಿವಿಧತೆಗಳ ನಡುವೆ ಏಕತೆಯನ್ನು ಕಾಪಾಡಿಕೊಂಡು ಬರಲಾಗಿದೆ. ಇಂತಹ ನಾಡಿನಲ್ಲಿ ಹಲವು ಜಾತಿ, ಸಮುದಾಯಗಳು ತಮ್ಮದೇ ಆದ ಸಂಸ್ಕೃತಿ, ಆಚಾರ, ವಿಚಾರ, ರೀತಿ, ನೀತಿ, ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿವೆ. ಇಂತಹ ಸಮುದಾಯಗಳು ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ತಮ್ಮ ಅನನ್ಯತೆಯನ್ನು ಕಾಪಾಡಿಕೊಂಡು ಇಂದಿಗೂ ಮುಂದುವರೆದುಕೊಂಡು ಬಂದಿವೆ. ಇಂತಹ ಬುಡಕಟ್ಟುಗಳಲ್ಲಿ ಮ್ಯಾಸಬೇಡ ಸಮುದಾಯವು ಒಂದಾಗಿದೆ. ಈ ಮ್ಯಾಸಬೇಡ ಸಮುದಾಯವು ಮೂಲತಃ ಬುಡಕಟ್ಟು ಸಮುದಾಯವಾಗಿದ್ದು, ಕರ್ನಾಟಕದ ಆಂಧ್ರಪ್ರದೇಶದ ಗಡಿನಾಡ ಪ್ರಾಂತ್ಯಗಳಾದ ಬಳ್ಳಾರಿ, ರಾಯಚೂರು, ಚಿತ್ರದುರ್ಗ ಹಾಗೂ ದಾವಣಗೆರೆ ಭಾಗದ ಗುಡ್ಡಗಾಡು ಪರಿಸರದಲ್ಲಿ ತಮ್ಮ ನೆಲೆಗಳನ್ನು ಕಂಡುಕೊಂಡು ಬಂದಿದ್ದಾರೆ. ಈ ಮ್ಯಾಸಬೇಡ ಸಮುದಾಯಗಳು ತನ್ನದೇ ಆದ ವಿಶಿಷ್ಟವಾದ ಸಂಪ್ರದಾಯವನ್ನು ಹೊಂದಿದ್ದು, ನಾಗರಿಕ ಬದುಕಿನಿಂದ ದೂರ ಸರಿದು ಗುಡ್ಡಗಾಡುಗಳಲ್ಲಿ ಹಾಗೂ ಪ್ರತ್ಯೇಕವಾದ ಹಟ್ಟಿಗಳನ್ನು ಸ್ಥಾಪಿಸಿಕೊಳ್ಳುವ ಮೂಲಕವಾಗಿ ಮಡಿ ಮೈಲಿಗೆಯನ್ನು ಕಾಪಾಡಿಕೊಂಡು ಬಂದಿವೆ.

ಮ್ಯಾಸಬೇಡ ಬುಡಕಟ್ಟು ಸಮುದಾಯವು ಮೂಲತಃ ಪಿತೃ ಪ್ರಧಾನವಾದ ಸಂಸ್ಕೃತಿಯನ್ನು ಹೊಂದಿದ್ದು, ಇಲ್ಲಿ ಮಹಿಳೆಯು ಕೂಡ ಪುರುಷನಷ್ಟೆ ಸರಿಸಮಾನವಾದ ಅಧಿಕಾರವನ್ನು ಹೊಂದಿದವಳಾಗಿದ್ದಾಳೆ. ಇಲ್ಲಿ ಮಹಿಳೆಯು ತನ್ನ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ವಿವಿಧ ಕೆಲಸ ಕಾರ್ಯಗಳನ್ನು ನಿರ್ವಹಿಸಿಕೊಂಡು ಪುರುಷನಿಗೆ ಸಮಾನ ನೆಲೆಯಲ್ಲಿ ತನ್ನ ಬಾಳನ್ನು ನಡೆಸಿಕೊಂಡು ಬಂದಿದ್ದಾಳೆ. ಈ ಸಮುದಾಯದ ಮಹಿಳೆಯು ಕೇವಲ ಮನೆ ನಿರ್ವಹಣೆಯನ್ನು ಮಾತ್ರವಲ್ಲದೆ ಬೇಟೆ, ವ್ಯವಸಾಯ, ಹೈನುಗಾರಿಕೆಯಂತಹ ಕೆಲಸಗಳನ್ನು ನಿರ್ವಹಿಸಿರುವುದು ಮಾತ್ರವಲ್ಲದೆ, ಕೆಲವು ಪಾಳೆ ಪಟ್ಟುಗಳನ್ನು ನಿರ್ಮಿಸಿಕೊಂಡು ಅಧಿಕಾರವನ್ನು ನಡೆಸಿರುವ ಹಲವು ನಿದರ್ಶನಗಳಿವೆ. ಆರ್ಥಿಕ ಕೇಂದ್ರಿಕರಣದ ಪ್ರಬಲ ಶಕ್ತಿ ಸಾಮರ್ಥ್ಯವನ್ನು ಹೊಂದಿರುವ ಈ ಮಹಿಳೆಯು ವೈದಿಕತೆಯ ಆಕ್ರಮಣಕಾರಿ ನೀತಿಯಿಂದಾಗಿ ತನ್ನ ಹಕ್ಕುಗಳು ಹಾಗೂ ಸ್ವಾತಂತ್ರ್ಯಗಳನ್ನು ಕಳೆದುಕೊಂಡು

ಪುರುಷನ ಅಧೀನತೆಗೆ ಒಳಗಾಗಬೇಕಾದ ಅನಿವಾರ್ಯತೆಯು ಬಂದೊದಗಿತು. ಇಂತಹ ಸಂದರ್ಭದಲ್ಲಿಯೂ ಉತ್ತಮವಾದ ಗೃಹ ನಿರ್ವಹಣೆಯ ಜವಬ್ದಾರಿಯನ್ನು ನಿರ್ವಹಿಸುತ್ತ ಬಂದಿರುವುದನ್ನು ಮ್ಯಾಸಬೇಡ ಬುಡಕಟ್ಟಿನ ಮಹಿಳೆಯರಲ್ಲಿ ಕಾಣಬಹುದು.

ಕರ್ನಾಟಕದಲ್ಲಿ ತಮ್ಮ ನೆಲೆಗಳನ್ನು ಕಾಪಾಡಿಕೊಂಡು ಬಂದಿರುವ ಮ್ಯಾಸಬೇಡ ಸಮುದಾಯವು ತಮ್ಮದೇ ಆದ ಸಂಸ್ಕೃತಿಯನ್ನು ಪಾಲಿಸಿಕೊಂಡು ಬಂದಿದೆ. ಮೂಲ ಸಂಸ್ಕೃತಿಯನ್ನು ಕೆಲವು ಮ್ಯಾಸಬೇಡರ ಹಟ್ಟಿಗಳಲ್ಲಿ ನಾವು ಇಂದಿಗೂ ಗಮನಿಸಬಹುದಾಗಿದೆ. ಆಧುನಿಕ ಯುಗದಲ್ಲಿಯೂ ತನ್ನ ಸಂಸ್ಕೃತಿ, ಆಚರಣೆ, ರೂಢಿ, ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿರುವ ಮ್ಯಾಸಬೇಡ ಸಮುದಾಯದಲ್ಲಿ ಮಹಿಳೆಯು ವಿಶಿಷ್ಟ ಪಾತ್ರವನ್ನು ನಿರ್ವಹಿಸಿಕೊಂಡು ಬಂದಿದ್ದಾಳೆ. ಪ್ರಸ್ತುತ ಅಧ್ಯಯನದಲ್ಲಿ ಮ್ಯಾಸಬೇಡ ಮಹಿಳೆಯನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಸಮುದಾಯದ ಮಹಿಳೆಯು ಹೊಂದಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸ್ಥಾನಮಾನಗಳನ್ನು ಪ್ರಸ್ತುತ ಅಧ್ಯಯನದ ಅಡಿಯಲ್ಲಿ ಸಂಶೋಧನೆಗೆ ಒಳಪಡಿಸಲಾಗಿದೆ.

ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ಕಂಡುಬರುವ ಮ್ಯಾಸಬೇಡ ಸಮುದಾಯವು ತನ್ನ ಮೂಲ ಸಾಂಸ್ಕೃತಿಕ ಚಹರೆಗಳನ್ನು ಕಾಪಾಡಿಕೊಂಡು ಬಂದಿದ್ದು, ಆಧುನಿಕ ಬದುಕಿನಲ್ಲಿಯೂ ತನ್ನ ಅಸ್ತಿತ್ವವನ್ನು ಕಂಡುಕೊಂಡು ಬಂದಿದೆ. ಇಂತಹ ಸಮುದಾಯದಲ್ಲಿ ಕಂಡುಬರುವ ಮಹಿಳೆಯು ಕೂಡ ಬದಲಾದ ಕಾಲಕ್ಕೆ ತಕ್ಕಂತೆ ತನ್ನ ಉಡುಗೆ ತೊಡುಗೆ, ವೇಶಭೂಷಣ, ಆಹಾರ ಕ್ರಮ, ಭಾಷಾಶೈಲಿಯಲ್ಲಿ ಗಣನೀಯವಾದ ಬದಲಾವಣೆಯನ್ನು ಕಂಡುಕೊಂಡು ಬಂದಿದ್ದಾಳೆ. ಮೂಲತಃ ಬೇಟೆ ಸಂಸ್ಕೃತಿಯಿಂದ ಬೆಳೆದುಬಂದ ಈ ಸಮುದಾಯದ ಮಹಿಳೆಯರು ಇಂದು ಆಧುನಿಕ ದಿನಮಾನಗಳಲ್ಲಿ ವಿಜ್ಞಾನ, ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ತನ್ನ ಸಹಭಾಗಿತ್ವವನ್ನು ಪ್ರದರ್ಶಿಸುತ್ತ ಬಂದಿದ್ದಾಳೆ. ಆಧುನಿಕ ಬದುಕಿನ ಎಲ್ಲಾ ಚಹರೆಗಳನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿದ್ದರು ಸಹ ತನ್ನ ಮೂಲ ಪರಂಪರೆಯ ಸಾಂಸ್ಕೃತಿಕ ಅಂಶಗಳನ್ನು ಆಚರಣೆಯ ಭಾಗವಾಗಿ ಕಾಪಾಡಿಕೊಂಡು ಬಂದಿರುವುದು ಈ ಸಮುದಾಯದ ಮಹಿಳೆಯ ವಿಶೇಷತೆಯಾಗಿ ಕಂಡುಬರುತ್ತದೆ.

ಮ್ಯಾಸಬೇಡ ಸಮುದಾಯವು ಮೂಲತಃ ಅರಣ್ಯವಾಸಿ ಬುಡಕಟ್ಟು ಸಮುದಾಯವಾಗಿದ್ದು, ತನ್ನದೇ ಆದ ರೀತಿ ನೀತಿ, ಆಚಾರ ವಿಚಾರ, ಸಂಪ್ರದಾಯ, ನಂಬಿಕೆಗಳನ್ನು ಪಾಲಿಸಿಕೊಂಡು ಬಂದಿದೆ. ಈ ಎಲ್ಲ ಆಚರಣೆ, ನಂಬಿಕೆಗಳು ಧಾರ್ಮಿಕ ನೆಲೆಯಲ್ಲಿ ಮುಂದುವರೆಸಿಕೊಂಡು ಬಂದಿದ್ದು, ಮುಂದಿನ ಪೀಳಿಗೆಗೂ ಅವುಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಆದರೆ ಧಾರ್ಮಿಕ ನೆಲೆಯಲ್ಲಿ ಅಂತರ್ಗತವಾಗಿರುವ ಕೆಲವು ಮೌಢ್ಯಗಳನ್ನು ತೊರೆದು ವೈಜ್ಞಾನಿಕ ನೆಲೆಯಲ್ಲಿ ತಮ್ಮ ಬದುಕನ್ನು ರೂಢಿಸಿಕೊಂಡು ಬಂದಿದ್ದಾರೆ. ಸಾಂಸ್ಕೃತಿಕ ಚಲನೆಯಲ್ಲಿ ಕೆಲವು ಮಾರ್ಪಾಡುಗಳಾಗಿದ್ದರು ಸಹ ಅವುಗಳು ಈ ಸಮುದಾಯದ ಜನತೆಯ ಬದುಕಿಗೆ ಪೂರಕವಾಗಿವೆಯೇ ಹೊರತು ಯಾವುದೇ ರೀತಿಯ ಮಾರಕ ಪ್ರವೃತ್ತಿಯನ್ನು ಉಂಟುಮಾಡುವಂತದ್ದಾಗಲಿ ಕಂಡುಬರುವುದಿಲ್ಲ.

ಈ ನೆಲೆಯಲ್ಲಿ ಮ್ಯಾಸಬೇಡ ಸಮುದಾಯದ ಮಹಿಳೆಯ ಬದುಕಲ್ಲಿ ಹಲವಾರು ಮಾರ್ಪಾಡುಗಳಾಗಿದ್ದರು ಸಹ ಅವುಗಳು ಮೂಲ ಸಂಸ್ಕೃತಿಗೆ ಪೂರಕವಾದ ನೆಲೆಯಿಂದ ಕೂಡಿವೆ.

ಆರ್ಯರಂತೆ ದ್ರಾವಿಡ ಪರಂಪರೆಯಲ್ಲಿ ಕಂಡುಬರುವ ಬುಡಕಟ್ಟು ಸಮುದಾಯವಾದ ಮ್ಯಾಸಬೇಡ ಸಮುದಾಯವು ಪಶುಪಾಲನೆಯನ್ನು ತನ್ನ ಮುಖ್ಯ ಕುಲಕಸುಬಾಗಿ ಮುಂದುವರೆಸಿಕೊಂಡು ಬಂದ ಇವರು ಪಿತೃ ಆರಾಧಕರಾಗಿದ್ದು, ಇವರಲ್ಲಿ ಪಿತೃ ಪ್ರಧಾನ ನೆಲೆಯ ಸಮಾಜ ರೂಪಿತವಾಗಿರುವುದು ಇವರ ಸಂಸ್ಕೃತಿಯಲ್ಲಿ ಕಂಡುಬರುತ್ತದೆ. ನಮ್ಮಲ್ಲಿ ಪ್ರಮುಖವಾಗಿ ಎರಡು ನೆಲೆ ಸಂಸ್ಕೃತಿಗಳು ಕಂಡುಬರುತ್ತವೆ. ಒಂದು, ಮುಂಡಾ ಮೂಲದ ಬೇಸಾಯಗಾರ ಮಾತೃ ಪ್ರಧಾನ ಸಂಸ್ಕೃತಿ; ಇನ್ನೊಂದು ದ್ರಾವಿಡ ಪಶುಪಾಲಕರ ಪಿತೃ ಪ್ರಧಾನ ಹಟ್ಟಿ ಸಂಸ್ಕೃತಿ.' ಈ ಎರಡು ನೆಲೆಯ ಪ್ರಧಾನ ಸಂಸ್ಕೃತಿಗಳು ನಮ್ಮಲ್ಲಿ ಕಂಡುಬರುತ್ತವೆ. ಮಾತೃ ಸಂಸ್ಕೃತಿಯ ಕೃಷಿ ಮೂಲ ಸಂಸ್ಕೃತಿಗಿಂತ ಭಿನ್ನವಾದ ಪರಂಪರೆಯನ್ನು ರೂಪಿಸಿಕೊಂಡು ಬಂದ ಈ ಹಟ್ಟಿ ಸಂಸ್ಕೃತಿಯ ಮ್ಯಾಸಬೇಡ ಸಮುದಾಯವು ನಾಗರಿಕ ಬದುಕಿನಿಂದ ಬಹುದೂರ ಉಳಿಯುವ ಮೂಲಕವಾಗಿ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿದೆ. ಇಲ್ಲಿ ಪಿತೃ ಪ್ರಧಾನವಾದ ಸಂಸ್ಕೃತಿಯು ಪ್ರಮುಖವಾಗಿ ಕಂಡುಬಂದರು ಸಹ ಮಾತೃ ಮೌಲ್ಯಗಳನ್ನು ಹತ್ತಿಕ್ಕುವ ಯಾವುದೆ ಷಡ್ಯಂತ್ರಗಳು ನಡೆದಿರುವ ನಿದರ್ಶನಗಳಿಲ್ಲ. ಹೆಣ್ಣನ್ನು ಕೂಡ ಪುರುಷನ ಸರಿಸಮಾನವೆಂಬಂತೆ ನಡೆಸಿಕೊಂಡು ಬರಲಾಗಿದೆ. ಹಾಗೆಯೇ ಬೇಡ ಸಮುದಾಯವನ್ನು ಪ್ರತಿನಿಧಿಸುವ ಸ್ತ್ರೀದೈವಗಳು ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ಕಂಡುಬರುತ್ತವೆ. ಆದರೆ ಆಚರಣೆಯಲ್ಲಿ ಆದಿಮ ಪರಂಪರೆಯ ಮಾತೃ ಪ್ರಧಾನ ಸಂಸ್ಕೃತಿಗಿಂತ ಭಿನ್ನವಾದ ಸಾಂಸ್ಕೃತಿಕ ಅಂಶಗಳನ್ನು ಈ ಪರಂಪರೆಯು ಮುಂದುವರೆಸಿಕೊಂಡು ಬಂದಿದೆ.

ದ್ರಾವಿಡ ಸಂಸ್ಕೃತಿಯ ಪ್ರತೀಕವಾದ ಈ ಮ್ಯಾಸಬೇಡ ಪರಂಪರೆಯು ಮಹಿಳೆಯನ್ನು ಪುರುಷನ ಸರಿಸಮಾನವಾಗಿ ನಡೆಸಿಕೊಂಡು ಬಂದಿದೆ. ಹಾಗೆಯೇ ಫಲವಂತಿಕೆಯ ಸಂಕೇತವಾದ ಹೆಣ್ಣನ್ನು ಪ್ರಕೃತಿಯ ಸಂಕೇತವಾಗಿ ಆರಾಧಿಸಿಕೊಂಡು ಬಂದಿದ್ದಾರೆ. ಇಲ್ಲಿ ಹೆಣ್ಣಿಗೆ ದೈವಿಕವಾದ ಸ್ಥಾನಮಾನಗಳು ಲಭಿಸಿವೆ. ಇಲ್ಲಿ ಹೆಣ್ಣು ಮುಕ್ತವಾದ ನೆಲೆಯಲ್ಲಿ ತನ್ನ ವ್ಯವಹಾರಿಕ ಕಾರ್ಯಗಳಲ್ಲಿ ಪುರುಷನ ಸರಿಸಮಾನ ನೆಲೆಯಲ್ಲಿ ಬಾಳಿ ಬದುಕಿದ್ದಾಳೆ. ತನಗೆ ಅನ್ಯಾಯವಾದಾಗ ಪುರುಷ ರೂಪಿತ ನಿಯಮಗಳನ್ನು ಮೆಟ್ಟಿ ನಿಂತು ತನ್ನ ಬಂಡಾಯವನ್ನು ಪ್ರದರ್ಶಿಸಿದ್ದಾಳೆ. ಪುರುಷನಂತೆ ಪಶುಪಾಲನೆ ಕಾರ್ಯಗಳಲ್ಲಿ ತನ್ನ ಸಹಭಾಗಿತ್ವವನ್ನು ಪ್ರದರ್ಶಿಸಿದ್ದಾಳೆ. ಇದಕ್ಕೆ ನಿದರ್ಶನವಾಗಿ ಗಾದ್ರಿಪಾಲ ನಾಯಕನ ಹೆಂಡತಿಯರಾದ ಕೆಂಚವ್ವ ಮತ್ತು ಕಾಮವ್ವ ಎಂಬ ಸ್ತ್ರೀಯರು ಪಶುಪಾಲನೆಗೆ ಸಂಬಂಧಿಸಿದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಾಳಿ ಬದುಕಿರುವುದಕ್ಕೆ ಸಂಬಂಧಿಸಿದ ಹಲವಾರು ಐತಿಹ್ಯ ಹಾಗೂ ಜಾನಪದ ಸಾಹಿತ್ಯದಲ್ಲಿ ಉಲ್ಲೇಖಗಳು ಲಭಿಸುತ್ತವೆ. ಈ ಮಹಿಳೆಯರ ಪ್ರವೃತ್ತಿಗಳು ಅವರಿಗಿರುವ ಸ್ವತಂತ್ರ ನೆಲೆಗಟ್ಟನ್ನು ಎತ್ತಿಹಿಡಿಯುತ್ತವೆ.

ಕರ್ನಾಟಕದ ಪ್ರಮುಖ ಬುಡಕಟ್ಟುಗಳಲ್ಲಿ ಒಂದಾಗಿರುವ ಮ್ಯಾಸಬೇಡ ಸಮುದಾಯವು ತನ್ನದೇ ಆದ ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದ್ದು, ಆಧುನಿಕ ಯುಗದಲ್ಲಿಯೂ ತನ್ನ ಸಂಪ್ರದಾಯ, ಆಚರಣೆ, ನಂಬಿಕೆಗಳನ್ನು ಕಾಪಾಡಿಕೊಂಡು ಮುನ್ನಡೆಯುತ್ತಿದೆ. ಈ ಬುಡಕಟ್ಟು ಸಮುದಾಯದ ಮೇಲೆ ವೈದಿಕತೆಯ ಪ್ರಭಾವವಾಗಿದ್ದರು ಸಹ ತನ್ನ ಮೂಲ ಸಂಪ್ರದಾಯ, ನಂಬಿಕೆಗಳನ್ನು ಮಾತ್ರ ಮುಂದುವರೆಸಿಕೊಂಡು ಬಂದಿರುವ ಈ ಸಮುದಾಯವು ಆಧುನಿಕ ಯುಗದಲ್ಲಿಯೂ ತನ್ನ ಪ್ರತಿನಿಧಿತ್ವವನ್ನು ವ್ಯಕ್ತಪಡಿಸುತ್ತ ಮುಂದುವರೆದಿದೆ. ಈ ಸಮುದಾಯವು ಬುಡಕಟ್ಟುವಾಸಿಯಾಗಿದ್ದು, ನಾಗರಿಕ ಬದುಕಿಗೆ ಹೊಂದಿಕೊಳ್ಳುವುದು ಸ್ವಲ್ಪ ತಡವಾಗಿರಬಹುದು. ಆದರೆ ಸರ್ಕಾರದ ವಿಶೇಷ ನೆರವು ಹಾಗೂ ಯೋಜನೆಗಳಿಂದಾಗಿ ಈ ಸಮುದಾಯವು ಕೂಡ ಇಂದು ಪ್ರಗತಿಯ ಹಾದಿಯಲ್ಲಿ ಮುಂದುವರೆಯುತ್ತಿದೆ. ಇದಕ್ಕೆ ಪೂರಕವಾದ ನೆಲೆಯಲ್ಲಿ ಈ ಸಮುದಾಯದ ಮಹಿಳೆಯರು ವಿವಿಧ ಕ್ಷೇತ್ರಗಳಾದ ವಿಜ್ಞಾನ, ತಂತ್ರಜ್ಞಾನ, ವೈದ್ಯಕಿಯ ಮುಂತಾದ ಕ್ಷೇತ್ರಗಳಲ್ಲಿ ದಾಪುಗಾಲು ಹಾಕುತ್ತಿದ್ದಾರೆ. ಹಾಗೆಯೇ ಇನ್ನು ಕೆಲವು ಹಿಂದುಳಿದ ಪ್ರದೇಶಗಳಲ್ಲಿ ಮಹಿಳೆಯರು ಅಕ್ಷರ ವಂಚಿತರಾಗಿಯೇ ಜೀವನವನ್ನು ಸಾಗಿಸುವಂತಹ ವಾತಾವರಣ ಕಂಡುಬರುತ್ತದೆ. ಸರ್ಕಾರದ ಸವಲತ್ತುಗಳಿಂದ ವಂಚಿತವಾದ ಈ ಸಮುದಾಯವು ಇಂದಿಗೂ ಆದಿ ಕಾಲದ ತನ್ನ ಬದುಕಿನ ಸ್ವರೂಪವನ್ನು ಕಾಯ್ದುಕೊಂಡು ಮುನ್ನೆಡೆಯುತ್ತಿರುವುದು ಕಂಡುಬರುತ್ತದೆ.

೧.೧ ಅಧ್ಯಯನದ ಉದ್ದೇಶ

ಪ್ರಸ್ತುತ ಸಂಶೋಧನ ವಿಷಯವಾಗಿರುವ 'ಮ್ಯಾಸಬೇಡ ಸಮುದಾಯದ ಮಹಿಳೆ' ಎಂಬ ಅಧ್ಯಯನದ ಉದ್ದೇಶಗಳು ಈ ಮುಂದಿನಂತಿವೆ.

- ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ಹಲವಾರು ಬುಡಕಟ್ಟು ಸಮುದಾಯಗಳು ಕಂಡುಬರುತ್ತವೆ. ಇಂತಹ ಬುಡಕಟ್ಟು ಸಮುದಾಯಗಳಲ್ಲಿ ಮ್ಯಾಸಬೇಡ ಸಮುದಾಯವು ಒಂದಾಗಿದೆ. ಈ ಮ್ಯಾಸಬೇಡ ಸಮುದಾಯವು ತನ್ನದೇ ಆದ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದೆ. ಇಂತಹ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುವಲ್ಲಿ ಮಹಿಳೆಯು ತನ್ನದೇ ಆದ ಪಾತ್ರವನ್ನು ನಿರ್ವಹಿಸಿರುವುದು ಕಂಡುಬರುತ್ತದೆ. ಆದ್ದರಿಂದಾಗಿ ಮ್ಯಾಸಬೇಡ ಸಮುದಾಯದ ಮಹಿಳೆಯ ಸಾಂಸ್ಕೃತಿಕ ಅನನ್ಯತೆಯನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿರುತ್ತದೆ.
- ಭಾರತದಲ್ಲಿ ಸನಾತನ ಹಿಂದೂಧರ್ಮವು ಹೆಣ್ಣನ್ನು ಸ್ವತಂತ್ರ್ಯಕ್ಕೆ ಅರ್ಹಳಲ್ಲ ಎಂಬುದಾಗಿ ಪ್ರತಿಪಾದಿಸುತ್ತ ಬಂದಿದೆ. ಆ ಮೂಲಕ ಮಹಿಳೆಗಿರುವ ಎಲ್ಲ ಹಕ್ಕು ಹಾಗೂ ಸ್ವಾತಂತ್ರ್ಯಗಳನ್ನು ಹತ್ತಿಕ್ಕುತ್ತ ಬಂದಿರುವ ಶತಮಾನಗಳ ಚರಿತ್ರೆಯು ನಮ್ಮ ಮುಂದಿದೆ. ಆದರೆ ಮೂಲತಃ ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆಗೆ ಈ ರೀತಿಯ ಯಾವುದೇ ನಿರ್ಬಂಧಗಳಿರುವುದು ಕಂಡುಬರುವುದಿಲ್ಲ. ಇಲ್ಲಿ ಮಹಿಳೆಯು ಸಹ ಪುರುಷನಂತೆ ಸರಿಸಮಾನವಾದ ರೀತಿಯಲ್ಲಿ

ತನ್ನ ಪಾತ್ರವನ್ನು ನಿರ್ವಹಿಸಿಕೊಂಡು ಬಂದಿದ್ದಾಳೆ. ಆದ್ದರಿಂದಾಗಿ ಈ ಸಮುದಾಯದಲ್ಲಿ ಮಹಿಳೆಯು ಹೊಂದಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಸ್ಥಾನಮಾನಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶ.

- ಆಧುನಿಕ ಸಂದರ್ಭದಲ್ಲಿ ಸ್ತ್ರೀವಾದವು ಪಾಶ್ಚಿಮಾತ್ಯ ಸಾಹಿತ್ಯ ಹಾಗೂ ಸಂಸ್ಕೃತಿಯ ಪ್ರಭಾವದಿಂದಾಗಿ ಭಾರತದಲ್ಲಿ ತನ್ನ ಅಸ್ತಿತ್ವವನ್ನು ಪಡೆದುಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಈ ಸ್ತ್ರೀವಾದವು ಆದಿಮ ಪರಂಪರೆಯ ಬುಡಕಟ್ಟು ಸಮುದಾಯದ ಮಹಿಳೆಯ ಮೇಲೆ ಇದರ ಪ್ರಭಾವವು ಕಂಡುಬರುತ್ತದೆಯೋ, ಇಲ್ಲವೋ ಎಂಬುದನ್ನು ತಿಳಿಯುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿರುತ್ತದೆ.

- ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ಕಂಡುಬರುವ ಈ ಮ್ಯಾಸಬೇಡ ಸಮುದಾಯದ ಮಹಿಳೆಯರ ಜೀವನ ಕ್ರಮವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ಕಂಡುಬರುತ್ತದೆ. ಈ ಪ್ರಾದೇಶಿಕ ಭಿನ್ನತೆಗೆ ಹಲವಾರು ಕಾರಣಗಳಿರುತ್ತವೆ. ಆದ್ದರಿಂದಾಗಿ ಪ್ರಸ್ತುತ ಅಧ್ಯಯನದ ಅಡಿಯಲ್ಲಿ ಮ್ಯಾಸಬೇಡ ಸಮುದಾಯದ ಮಹಿಳೆಯರ ಜೀವನ ಕ್ರಮದಲ್ಲಿನ ಪ್ರಾದೇಶಿಕ ಭಿನ್ನತೆಗಳನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಉದ್ಧೇಶವಾಗಿದೆ.

- ಪಶುಪಾಲನೆಯನ್ನು ಕುಲಕಸುಬಾಗಿ ಮುಂದುವರೆಸಿಕೊಂಡು ಬಂದಿರುವ ಈ ಮ್ಯಾಸಬೇಡ ಬುಡಕಟ್ಟು ಪರಂಪರೆಯು ಪಿತೃ ಪ್ರಧಾನ ನೆಲೆಯ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದಿದೆ. ಇಲ್ಲಿ ಪುರುಷ ದೈವಗಳೆ ಪ್ರಧಾನವಾಗಿ ಕಂಡುಬರುತ್ತವೆ. ಇಂತಹ ಪುರುಷ ಪ್ರಧಾನ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದಿರುವ ಮ್ಯಾಸಬೇಡ ಸಮುದಾಯದಲ್ಲಿ ಸ್ತ್ರೀದೈವಗಳು ಕೆಲವೊಂದು ಪ್ರಾಂತ್ಯದಲ್ಲಿ ಕಂಡುಬರುತ್ತವೆ. ಈ ಬುಡಕಟ್ಟು ಪರಂಪರೆಯು ಪಿತೃ ಪ್ರಧಾನವಾಗಿದ್ದರು ಕೂಡ ವೈದಿಕ ಸಂಸ್ಕೃತಿಯಂತೆ ಇಲ್ಲಿ ಹೆಣ್ಣನ್ನು ಬಂಧನದಲ್ಲಿ ಗುರಿಪಡಿಸಿರುವ ನಿದರ್ಶನಗಳು ಕಂಡುಬರುವುದಿಲ್ಲ. ಆದ್ದರಿಂದಾಗಿ ವೈದಿಕರ ಪಿತೃ ಸಂಸ್ಕೃತಿಗಿಂತ ದ್ರಾವಿಡ ನೆಲೆಯ ಈ ಬುಡಕಟ್ಟು ಸಂಪ್ರದಾಯದ ಪಿತೃ ಸಂಸ್ಕೃತಿಯು ಹೇಗೆ ಭಿನ್ನವಾಗಿದೆ ಹಾಗೂ ಇಲ್ಲಿ ಮಹಿಳೆಗಿರುವ ಸ್ವತಂತ್ರವು ಯಾವ ನೆಲೆಯದಾಗಿದೆ ಎಂಬುದನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

- ಮ್ಯಾಸಬೇಡ ಸಮುದಾಯವು ಪ್ರಮುಖ ಬುಡಕಟ್ಟು ಸಮುದಾಯಗಳಲ್ಲೊಂದಾಗಿದೆ. ಈ ಸಮುದಾಯವು ಅಲೆಮಾರಿಯಾಗಿ ಜೀವನವನ್ನು ಸಾಗಿಸಿಕೊಂಡು, ನಂತರ ಪಶುಪಾಲನೆಯನ್ನು ಪ್ರಮುಖ ಕುಲಕಸುಬಾಗಿ ಮುಂದುವರೆಸಿಕೊಂಡು ಬಂದಿದೆ. ಇಂತಹ ಬುಡಕಟ್ಟು ಸಮುದಾಯದಲ್ಲಿ ಮಹಿಳೆಯು ಕೂಡ ಪುರುಷನ ಸರಿಸಮಾನವಾದ ನೆಲೆಯಲ್ಲಿ ಪಶುಪಾಲನೆಯ ಕಾರ್ಯದಲ್ಲಿ ತನ್ನ ಸಹಭಾಗಿತ್ವವನ್ನು ವ್ಯಕ್ತಪಡಿಸುತ್ತ ಬಂದಿದ್ದಾಳೆ. ಹೀಗೆ ಮುಂದುವರೆದ ಈ ಸಮುದಾಯವು ಕೃಷಿಯಲ್ಲಿಯೂ ಮುಂದುವರೆದಿದೆ. ಈ ಎಲ್ಲ ಕ್ಷೇತ್ರದ ಬೆಳವಣಿಗೆಯಲ್ಲಿ

ಮಹಿಳೆಯ ಪಾತ್ರವು ಪ್ರಮುಖವಾಗಿ ಕಂಡುಬರುತ್ತದೆ. ಇದಕ್ಕೆ ಚಾರಿತ್ರಿಕ ಸಮರ್ಥನೆಯಾಗಿ ಮೌಖಿಕ ಸಾಹಿತ್ಯದಲ್ಲಿ ಹಲವಾರು ನಿದರ್ಶನಗಳು ನಮಗೆ ಕಂಡುಬರುತ್ತವೆ. ಈ ಚಾರಿತ್ರಿಕ ಕಥನಕ್ಕೆ ಮಾಹಿತಿಯನ್ನು ನೀಡುವ ಮೌಖಿಕ ಸಾಹಿತ್ಯ (ಜಾನಪದ)ದಲ್ಲಿ ಸಿಗುವ ಆಕರಗಳನ್ನು ಆಧಾರವಾಗಿಟ್ಟುಕೊಂಡು ಮ್ಯಾಸಬೇಡ ಸಮುದಾಯದ ಮಹಿಳೆಯ ವಿವಿಧ ಕ್ಷೇತ್ರಗಳ ಸಹಭಾಗಿತ್ವವನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

- ಮ್ಯಾಸಬೇಡ ಸಮುದಾಯವು ಪ್ರಕೃತಿಯ ಮಡಿಲಿನಲ್ಲಿ ಬೆಳೆದುಬಂದಿದ್ದು, ತನ್ನದೆ ಆದ ಮೌಖಿಕ ಸಾಹಿತ್ಯ ಪರಂಪರೆಯೊಂದನ್ನು ಬದುಕಿನ ಭಾಗವಾಗಿ ಮುಂದುವರೆಸಿಕೊಂಡು ಬಂದಿದೆ. ಈ ಮೌಖಿಕ ಸಾಹಿತ್ಯವನ್ನು ಮ್ಯಾಸಬೇಡ ಸಮುದಾಯದ ಮಹಿಳೆಯರು ಮುಂದುವರೆಸಿಕೊಂಡು ಬಂದಿದ್ದಾರೆ. ಈ ಮಹಿಳೆಯರು ತಮ್ಮ ಬದುಕಿನ ಕಷ್ಟ, ಸುಖ, ನೋವು, ನಲಿವುಗಳನ್ನು ಪದಕಟ್ಟಿ ಹಾಡುವ ಮೂಲಕವಾಗಿ ತಮ್ಮ ಸಂವೇದನೆಗಳನ್ನು ಈ ಹಾಡುಗಳ ಮೂಲಕವಾಗಿ ವ್ಯಕ್ತಪಡಿಸುತ್ತ ಬಂದಿದ್ದಾರೆ. ಆದ ಕಾರಣ ಈ ಸಮುದಾಯದ ಮಹಿಳೆಯರನ್ನು ಸಾಂಸ್ಕೃತಿವಾಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಈ ಮೌಖಿಕ ಸಾಹಿತ್ಯ ಪ್ರಕಾರವನ್ನು ಅಧ್ಯಯನಕ್ಕೆ ಒಳಪಡಿಸುವುದು ಸೂಕ್ತವೆಂದು ಭಾವಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧.೨ ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ತನ್ನದೇ ಆದ ಮಹತ್ವವನ್ನು ಒಳಗೊಂಡಿದೆ. ಅವು ಈ ಮುಂದಿನಂತಿವೆ;

- ಕರ್ನಾಟಕದಲ್ಲಿ ಕಂಡುಬರುವ ವಿವಿಧ ಬುಡಕಟ್ಟುಗಳ ಕುರಿತಾಗಿ ಇದುವರೆಗೂ ಸಾಕಷ್ಟು ಅಧ್ಯಯನಗಳು ವಿವಿಧ ನೆಲೆಯಲ್ಲಿ ನಡೆದಿವೆ. ಪ್ರಸ್ತುತ ಅಧ್ಯಯನದ ಅಡಿಯಲ್ಲಿ ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ತನ್ನ ನೆಲೆಯನ್ನು ಕಂಡುಕೊಂಡಿರುವ ಮ್ಯಾಸಬೇಡ ಸಮುದಾಯದ ಸಾಂಸ್ಕೃತಿಕ ಆಯಾಮಗಳನ್ನು ಜಾನಪದೀಯ ನೆಲೆಯಲ್ಲಿ ಗುರುತಿಸುವುದರಿಂದ ಮ್ಯಾಸಬೇಡ ಸಮುದಾಯದ ಸಾಂಸ್ಕೃತಿಕ ವೈಶಿಷ್ಟತೆಯನ್ನು ಅರಿಯಲು ಸಹಕಾರಿಯಾಗುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನವು ತನ್ನದೇ ಆದ ಮಹತ್ವವನ್ನು ಒಳಗೊಂಡಿದೆ.
- ನಾಗರಿಕ ಬದುಕಿನಿಂದ ದೂರ ಉಳಿದು ತನ್ನದೇ ಆದ ಬದುಕನ್ನು ರೂಪಿಸಿಕೊಂಡು ಬೆಳೆದು ಬಂದಿರುವ ಮ್ಯಾಸಬೇಡ ಸಮುದಾಯದಲ್ಲಿ ಮಹಿಳೆಯ ಸ್ಥಿತಿಗತಿಗಳನ್ನು ತಿಳಿಯುವುದು ಸಂಸ್ಕೃತಿಯ ಅಧ್ಯಯನದ ಸಂದರ್ಭದಲ್ಲಿ ಅತ್ಯಂತ ಮಹತ್ವದ ಅಂಶವಾಗಿ ಕಂಡುಬರುತ್ತದೆ. ಇದರಿಂದ ಈ ಬುಡಕಟ್ಟು ಸಂಪ್ರದಾಯದಲ್ಲಿ ಹೆಣ್ಣಿಗೆ ನೀಡಿರುವ ಸ್ಥಾನಮಾನವನ್ನು ತಿಳಿಯುವುದಕ್ಕೆ ಸಹಕಾರಿಯಾಗುತ್ತದೆ.

- ಮ್ಯಾಸಬೇಡ ಸಮುದಾಯವು ಮೂಲದಲ್ಲಿ ಅರಣ್ಯವಾಸಿ ಸಮುದಾಯವಾಗಿದ್ದು, ನಂತರದ ದಿನಮಾನಗಳಲ್ಲಿ ಕಾಡಿನಿಂದ ನಾಡಿಗೆ ಪ್ರವೇಶವನ್ನು ಪಡೆದು, ಇಂದಿಗೂ ಕೆಲವು ಭಾಗಗಳಲ್ಲಿ ಪ್ರತ್ಯೇಕವಾದ ಹಟ್ಟಿ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇಂತಹ ಸಮುದಾಯದಲ್ಲಿ ಹೆಣ್ಣು ನಿರ್ವಹಿಸಿರುವ ಕೌಟುಂಬಿಕ ಹಾಗೂ ಸಾಮಾಜಿಕ ಜವಬ್ದಾರಿಯ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಇಂದಿಗೆ ಮಹತ್ವವೆಂದು ಭಾವಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.
- ಬುಡಕಟ್ಟು ಪರಂಪರೆಯಾಗಿ ಗುರುತಿಸಿಕೊಂಡು ಬಂದಿರುವ ಮ್ಯಾಸಬೇಡ ಸಮುದಾಯದಲ್ಲಿ ಮಹಿಳೆಯರು ತನ್ನದೇ ಆದ ಸಾಂಸ್ಕೃತಿಕ ಜೀವನವನ್ನು ರೂಢಿಸಿಕೊಂಡು ಬಂದಿದ್ದಾರೆ. ಇಲ್ಲಿ ಮಹಿಳೆಯರ ಉಡುಗೆ, ತೊಡುಗೆ, ವೇಶಭೂಷಣಗಳು ಭಿನ್ನತೆಯಿಂದ ಕೂಡಿರುತ್ತವೆ. ಆದರೆ ಇಂದಿನ ಆಧುನಿಕ ಸಂದರ್ಭದಲ್ಲಿನ ಮ್ಯಾಸಬೇಡ ಮಹಿಳೆಯರು ತಮ್ಮ ಹಿರಿಯರು ಕಾಪಾಡಿಕೊಂಡು ಬಂದಿರುವ ಸಾಂಸ್ಕೃತಿಕ ಉಡುಗೆಗಳಿಂದ ದೂರ ಉಳಿದಿದ್ದಾರೆ. ಮ್ಯಾಸಬೇಡ ಸಮುದಾಯದ ಮಹಿಳೆಯ ಪಾರಂಪರಿಕ ಉಡುಪು ಹಾಗೂ ಅವರ ವೇಶಭೂಷಣಗಳು ಉಳಿದಿರುವುದು ಹಿಂದಿನ ತಲೆಮಾರಿನ ಮಹಿಳೆಯರಲ್ಲಿ ಮಾತ್ರ. ಆದ್ದರಿಂದ ಬದಲಾವಣೆಯ ಸಂಕ್ರಮಣ ಕಾಲಘಟ್ಟದಲ್ಲಿರುವ ಮ್ಯಾಸಬೇಡ ಮಹಿಳೆಯರು ಜೀವನ ಶೈಲಿಯನ್ನು ಅಧ್ಯಯನ ಮಾಡುವುದು ಇಂದಿಗೆ ಭಾವಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.
- ಆಂಧ್ರದ ಶ್ರೀ ಶೈಲ ಮೂಲದಿಂದ ಬಂದು ಕರ್ನಾಟಕದ ವಿವಿಧ ಭಾಗಗಳಲ್ಲಿ ತಮ್ಮ ನೆಲೆಗಳನ್ನು ಕಂಡುಕೊಂಡಿರುವ ಮ್ಯಾಸಬೇಡ ಸಮುದಾಯವು ತಮ್ಮ ಮಾತೃಭಾಷೆಯಾಗಿ ತೆಲುಗನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇಂದಿಗೂ ಹಲವಾರು ಭಾಗಗಳಲ್ಲಿ ತೆಲುಗನ್ನು ತಮ್ಮ ಮನೆಭಾಷೆಯಾಗಿ ಕಂಡುಬರುತ್ತದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಕಂಡುಬುರುವ ಈ ಸಮುದಾಯದ ಮಹಿಳೆಯರು ಮೌಖಿಕ ಸಾಹಿತ್ಯದ ಅಡಿಯಲ್ಲಿ ಪರಂಪರಾಗತವಾಗಿ ಕಾಪಾಡಿಕೊಂಡು ಬಂದಿರುವ ಸೋಬಾನೆ ಹಾಡುಗಳು, ಗಾದೆ, ಒಗಟು, ಒಡಪು ಹಾಗೂ ಕಥೆಗಳನ್ನು ತೆಲುಗು ಭಾಷೆಯಲ್ಲಿಯೆ ಮುಂದುವರೆಸಿಕೊಂಡು ಬಂದಿದ್ದಾರೆ. ಇಂತಹ ತೆಲುಗು ಭಾಷೆಯಲ್ಲಿ ಅಂತರ್ಗತವಾಗಿರುವ ಮ್ಯಾಸಬೇಡ ಮಹಿಳೆಯರ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸುವುದು ಇಂದಿಗೆ ಮಹತ್ವವೆಂದು ಭಾವಿಸಲಾಗಿದೆ.
- ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ತಮ್ಮ ನೆಲೆಗಳನ್ನು ಕಾಪಾಡಿಕೊಂಡು ಬಂದಿರುವ ಈ ಮ್ಯಾಸಬೇಡ ಸಮುದಾಯವು ಮೂಲದಲ್ಲಿ ಒಂದೆ ಕುಲಮೂಲದಿಂದ ಕೂಡಿದ್ದು, ಅಲೆಮಾರಿಯಾಗಿ ಜೀವನವನ್ನು ಸಾಗಿಸುತ್ತ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚಾರವನ್ನು ಕೈಗೊಂಡು ತಮಗೆ ಯೋಗ್ಯವಾದ ಸ್ಥಳದಲ್ಲಿ ವಾಸಸ್ಥಾನವನ್ನು ಕಂಡುಕೊಂಡಿದ್ದಾರೆ. ಆದರೆ ಕೆಲವು ಭಾಗಗಳಲ್ಲಿ ಈ ಸಮುದಾಯವು ತನ್ನ ಮೂಲ ಸಾಂಸ್ಕೃತಿಕ ಆಚರಣೆಗಳನ್ನು

ಮೂಲ ಸ್ವರೂಪದಲ್ಲಿ ಕಾಪಾಡಿಕೊಂಡು ಬಂದಿದ್ದಾರೆ. ಆದರೆ ಕೆಲವೊಂದು ಪ್ರಾಂತ್ಯಗಳಲ್ಲಿ ನೆಲೆಸಿರುವ ಈ ಸಮುದಾಯವು ತನ್ನ ಹಿಂದಿನ ಸಾಂಸ್ಕೃತಿಕ ಆಚರಣೆಗಳಲ್ಲಿ ಕೆಲವು ಬದಲಾವಣೆಗಳನ್ನು ಕಂಡುಕೊಂಡಿದೆ. ಆದ್ದರಿಂದ ಇಲ್ಲಿ ಮಹಿಳೆಯರ ಬದುಕಿನಲ್ಲಿಯೂ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಈ ಭಿನ್ನತೆಗೆ ಕಾರಣಗಳನ್ನು ಗುರುತಿಸುವುದು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಮಹತ್ವವೆಂದು ಭಾವಿಸಲಾಗಿದೆ.

- ಮ್ಯಾಸಬೇಡ ಸಮುದಾಯದ ಮಹಿಳೆಯರ ಚಾರಿತ್ರಿಕ ಬದುಕನ್ನು ಅವಲೋಕಿಸಿದಾಗ ಇವರು ಪುರುಷನ ಸರಿಸಮಾನವಾಗಿ ಬಾಳಿ ಬದುಕಿದ್ದು, ಹಲವಾರ ವ್ಯಾಪಾರ ವಹಿವಾಟು, ಬೇಟೆ, ವ್ಯವಸಾಯ, ಪಶುಪಾಲನೆಯಂತಹ ಅನೇಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಂದಿದ್ದಾರೆ. ಮಹಿಳೆಯನ್ನು ನಾಲ್ಕು ಗೋಡೆಗಳ ಮಧ್ಯೆ ಬಂಧಿಸಿರುವ ಕಾಲಘಟ್ಟದಲ್ಲಿ ಸ್ವತಂತ್ರವಾಗಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿರುವ ನೆಲೆಗಳನ್ನು ಅಧ್ಯಯನ ಮಾಡುವುದು ಮಹತ್ವಪೂರ್ಣವಾದುದೆಂದು ಭಾವಿಸಲಾಗಿದೆ.

- ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ತನ್ನ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿರುವ ಮ್ಯಾಸಬೇಡ ಸಮುದಾಯದ ಬಗೆಗೆ ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳು ಮ್ಯಾಸಬೇಡ ಸಮುದಾಯದ ಸಂಪ್ರದಾಯ, ಆಚಾರ, ನಂಬಿಕೆ, ದೈವ, ಭಾಷೆಗಳಂತಹ ವಿಷಯಗಳ ಬಗ್ಗೆ ಅಧ್ಯಯನಗಳು ನಡೆದಿದ್ದು, ಕೃತಿ ಹಾಗೂ ವಿಮರ್ಶ ಲೇಖನಗಳ ಅಡಿಯಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆ. ಆದರೆ ಮ್ಯಾಸಬೇಡ ಸಮುದಾಯದ ಮಹಿಳೆಯರ ಬಗೆಗೆ ಪ್ರತ್ಯೇಕವಾದ ಅಧ್ಯಯನಗಳು ನಡೆದಿರುವುದಿಲ್ಲ. ಆದ್ದರಿಂದ ಪ್ರಸ್ತುತ ಅಧ್ಯಯನ ಅಡಿಯಲ್ಲಿ ಮಹಿಳೆಯನ್ನು ಸಾಂಸ್ಕೃತಿಕವಾಗಿ ಅಧ್ಯಯನಕ್ಕೆ ಒಳಪಡಿಸುವುದು ಮಹತ್ವಪೂರ್ಣವಾದುದಾಗಿದೆ.

ಈ ಮೇಲೆ ತಿಳಿಸಿದಂತೆ ಪ್ರಸ್ತುತ ಅಧ್ಯಯನವು ತನ್ನದೇ ಆದ ಮಹತ್ವವನ್ನು ಒಳಗೊಂಡಿದೆ. ಇವುಗಳನ್ನು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಸೂಕ್ತವಾದ ಮಾಹಿತಿಯನ್ನು ಸಂಗ್ರಹಿಸುವ ಮೂಲಕವಾಗಿ ವಿವರಣೆ ಹಾಗೂ ವಿಶ್ಲೇಷಣೆಗೆ ಒಳಪಡಿಸಲಾಗುವುದು.

೧.೩ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಸಂಶೋಧನ ವಿಷಯವಾಗಿರುವ 'ಮ್ಯಾಸಬೇಡ ಸಮುದಾಯದ ಮಹಿಳೆ' ಎಂಬುದರ ವ್ಯಾಪ್ತಿಯನ್ನು ಅಧ್ಯಯನದ ದೃಷ್ಟಿಯಿಂದಾಗಿ ನಿರ್ದಿಷ್ಟವಾಗಿ ಗುರುತಿಸಿಕೊಳ್ಳಲಾಗಿದೆ. ಇದರ ವ್ಯಾಪ್ತಿಯನ್ನು ಮ್ಯಾಸಬೇಡ ಸಮುದಾಯವು ಹೆಚ್ಚಾಗಿ ತನ್ನ ನೆಲೆಗಳನ್ನು ಕಂಡುಕೊಂಡಿರುವ ಚಿತ್ರದುರ್ಗ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲಾಗಿದೆ. ಈ ಭಾಗದಲ್ಲಿ ಮ್ಯಾಸಬೇಡ ಸಮುದಾಯಗಳು ಹೆಚ್ಚಾಗಿ ಕಂಡುಬರುತ್ತಿರುವ ಕಾರಣದಿಂದಾಗಿ ಇಲ್ಲಿನ ಮಹಿಳೆಯರ ಸಾಂಸ್ಕೃತಿಕ ಜೀವನ ಕ್ರಮವನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು. ಆದರೆ

ಸಾಂದರ್ಭಿಕವಾಗಿ ಮ್ಯಾಸಬೇಡ ಸಮುದಾಯವು ತನ್ನ ವಿಸ್ತೃತ ನೆಲೆಯನ್ನು ಕಂಡುಕೊಂಡಿರುವ ದಾವಣಗೆರೆ ಹಾಗೂ ಕರ್ನಾಟಕದ ಇತರೆ ಪ್ರದೇಶಗಳನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗುವುದು.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯೊಳಗೆ ಮ್ಯಾಸಬೇಡ ಸಮುದಾಯದ ಮಹಿಳೆಯನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನವನ್ನು ಕೈಗೊಂಡರು ಸಹ, ಕರ್ನಾಟಕದಲ್ಲಿ ಕಂಡುಬರುವ ಇತರೆ ಪ್ರಾಂತ್ಯಗಳ ಮಹಿಳೆಯರ ಬದುಕಿನ ಸಾಂಸ್ಕೃತಿಕ ನೆಲೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗುವುದು. ಹಾಗೆಯೇ ಪ್ರಸ್ತುತ ಅಧ್ಯಯನವು ಮಹಿಳಾ ಕೇಂದ್ರಿತವಾಗಿದ್ದರೂ ಈ ಸಮುದಾಯದ ಪುರುಷರ ಜೀವನ ಕ್ರಮಗಳನ್ನು ಪ್ರಸ್ತುತ ಅಧ್ಯಯನದ ಭಾಗವಾಗಿ ಅಧ್ಯಯನದ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲಾಗಿದೆ.

೧.೪ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಸ್ವರೂಪವನ್ನು ಪ್ರಮುಖವಾಗಿ ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಇದನ್ನು ಸಂಕ್ಷಿಪ್ತವಾಗಿ ಈ ಮುಂದಿನಂತೆ ಗುರುತಿಸಲಾಗಿದೆ.

ಪ್ರಸ್ತುತ ಸಂಶೋಧನ ವಿಷಯವಾಗಿರುವ 'ಮ್ಯಾಸಬೇಡ ಸಮುದಾಯದ ಮಹಿಳೆ' ಎಂಬ ಪ್ರಬಂಧದ ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ಧೇಶ, ಮಹತ್ವ, ವ್ಯಾಪ್ತಿ, ಸ್ವರೂಪ ಹಾಗೂ ವೈಧಾನಿಕತೆಯ ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಈ ಅಧ್ಯಾಯವು ಮ್ಯಾಸಬೇಡ ಸಮುದಾಯದ ಮಹಿಳೆಯರ ಬಗೆಗಿನ ಸಾಂಸ್ಕೃತಿಕ ಬದುಕನ್ನು ಕುರಿತಂತೆ ಪರಿಚಯಾತ್ಮಕ ನೆಲೆಯಿಂದ ಕೂಡಿದ್ದು, ಒಟ್ಟಾರೆಯಾಗಿ ಸಂಶೋಧನ ಮಹಾಪ್ರಬಂಧದ ಸಾರವನ್ನು ಕಟ್ಟಿಕೊಡುವಂತಿದೆ.

ಎರಡನೇ ಅಧ್ಯಾಯವಾಗಿರುವ 'ಮ್ಯಾಸಬೇಡ ಸಮುದಾಯ ಮತ್ತು ಮಹಿಳೆ' ಎಂಬ ಅಧ್ಯಾಯದಲ್ಲಿ ಮ್ಯಾಸಬೇಡ ಸಮುದಾಯದ ಸ್ಥೂಲ ಪರಿಕಲ್ಪನೆ ಹಾಗೂ ಮ್ಯಾಸಬೇಡ ಬೇಡ ಪದ ನಿಷ್ಪತ್ತಿ ಕುರಿತಾದ ಚರ್ಚೆಯನ್ನು ಕೈಗೊಳ್ಳಲಾಗಿದೆ.

ಮೂರನೇ ಅಧ್ಯಾಯವಾಗಿರುವ 'ಮ್ಯಾಸಬೇಡರ ನಂಬಿಕೆಗಳು, ಸಂಪ್ರದಾಯ ಮತ್ತು ಮಹಿಳೆ' ಎಂಬ ಅಧ್ಯಾಯದಲ್ಲಿ ಈ ಸಮುದಾಯದ ಮಹಿಳೆಯರ ಸಂಸ್ಕೃತಿಯ ಪ್ರತೀಕವಾಗಿರುವ ಆಚರಣೆಗಳನ್ನು ಅಧ್ಯಯನ ದೃಷ್ಟಿಯಿಂದಾಗಿ ಸಾಮಾಜಿಕ ಆಚರಣೆಗಳು ಹಾಗೂ ಧಾರ್ಮಿಕ ಆಚರಣೆಗಳು ಎಂಬುದಾಗಿ ವಿಂಗಡಿಸಿಕೊಂಡು ಈ ಸಮುದಾಯದಲ್ಲಿ ಕಂಡುಬರುವ ಆಚರಣೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ನಾಲ್ಕನೇ ಅಧ್ಯಾಯವಾಗಿರುವ 'ಮ್ಯಾಸಬೇಡ ಸಮುದಾಯದ ಸ್ತ್ರೀ ದೈವಗಳು' ಎಂಬ ಅಧ್ಯಾಯದಲ್ಲಿ ಮ್ಯಾಸಬೇಡ ಸಮುದಾಯದ ಸಾಂಸ್ಕೃತಿಕ ನಾಯಕಿಯರಾದ ದಾನಸಾಲಮ್ಮ, ಅಕ್ಕರಾಯಮ್ಮ, ದಡ್ಲುಮಾರಮ್ಮ, ಗೌರಸಂದ್ರಮಾರಮ್ಮ, ಮುಂಗಲುದೇವಮ್ಮ, ಮಲಿಯಮ್ಮ, ಚಳ್ಳಕೆರಮ್ಮ,

ಕಂಚವ್ವ, ಕಾಮವ್ವ ಹಾಗೂ ತಮಟಕಲ್ಲಿನ ಓಬವ್ವ ಇವರುಗಳನ್ನು ಈ ಸಮುದಾಯದಲ್ಲಿ ದೈವತ್ವದ ನೆಲೆಯಲ್ಲಿ ಆರಾಧಿಸಿಕೊಂಡು ಬಂದಿದ್ದಾರೆ. ಈ ಮಹಿಳೆಯರು ಸಮಾಜ ಹಾಗೂ ಸಮುದಾಯದ ಒಳಿತಿಗಾಗಿ ತಮ್ಮ ಪ್ರಾಣವನ್ನೆ ಸಮರ್ಪಿಸಿದವರು. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಾಯಕಿಯರನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಐದನೇ ಅಧ್ಯಾಯವಾಗಿರುವ 'ಮ್ಯಾಸಬೇಡ ಮಹಿಳೆ ಮತ್ತು ಸಮಾಜ' ಎಂಬ ಅಧ್ಯಾಯದಲ್ಲಿ ಈ ಸಮುದಾಯದ ಮಹಿಳೆಯರು ವಿವಿಧ ಕ್ಷೇತ್ರಗಳಾದ ಸಾಮಾಜಿಕ, ರಾಜಕೀಯ, ಕೌಟುಂಬಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಈ ಮಹಿಳೆಯರ ಸ್ಥಿತಿಗತಿಗಳ ಬಗೆಗೆ ಇಲ್ಲಿ ಚರ್ಚಿಸಲಾಗಿದೆ.

ಆರನೇ ಅಧ್ಯಾಯವಾಗಿರುವ 'ಆಧುನಿಕತೆ ಮತ್ತು ಮ್ಯಾಸಬೇಡ ಸಮುದಾಯದ ಮಹಿಳೆ' ಎಂಬ ಅಧ್ಯಾಯದಲ್ಲಿ ಬುಡಕಟ್ಟುವಾಸಿಯಾದ ಮ್ಯಾಸಬೇಡ ಸಮುದಾಯದ ಮಹಿಳೆಯರ ಜೀವನ ಕ್ರಮದ ಮೇಲೆ ಆಧುನಿಕತೆಯ ಪ್ರಭಾವದ ಕುರಿತು ಚರ್ಚೆಯನ್ನು ಕೈಗೊಳ್ಳಲಾಗಿದೆ. ಉದಾ: ಉಡುಗೆ-ತೊಡುಗೆ, ಆಹಾರ ಪದ್ಧತಿ, ಜೀವನ ಶೈಲಿ, ಧಾರ್ಮಿಕತೆ, ಶಿಕ್ಷಣ

ಏಳನೇ ಅಧ್ಯಾಯವಾಗಿರುವ 'ಮ್ಯಾಸಬೇಡ ಸಮುದಾಯದ ಜಾನಪದ ಸಾಹಿತ್ಯ' ಎಂಬ ಅಧ್ಯಾಯದಲ್ಲಿ ಮಹಿಳಾ ಪ್ರಧಾನ ಜಾನಪದ ಹಾಡುಗಳಾದ ನಾಮಕರಣದ ಹಾಡುಗಳು, ಋತುಮತಿ ಹಾಡುಗಳು, ಮದುವೆ ಹಾಡುಗಳು, ದೇವರ ಹಾಡುಗಳು, ಗಾದೆ, ಒಗಟು, ಒಡಪು ಹಾಗೂ ಮಹಿಳೆಯರ ಜಾನಪದ ಆಟಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಎಂಟನೇ ಅಧ್ಯಾಯವಾದ ಸಮಾರೋಪದಲ್ಲಿ ಅಧ್ಯಯನದ ಫಲಿತಗಳು, ಪರಾಮರ್ಶನ ಗ್ರಂಥಗಳು, ವಕ್ತೃ ವಿವರ, ಪ್ರಮುಖ ಛಾಯಚಿತ್ರಗಳನ್ನು ನೀಡಲಾಗಿದೆ. ಹೀಗೆ ಪ್ರಸ್ತುತ ಅಧ್ಯಯನವು ತನ್ನದೆ ಆದ ಸ್ವರೂಪವನ್ನು ಒಳಗೊಂಡಿರುತ್ತದೆ.

೧.೫ ಅಧ್ಯಯನದ ವಿಧಾನ

ಪ್ರಸ್ತುತ ಸಂಶೋಧನೆಗೆ ಆಯ್ದುಕೊಂಡಿರುವ ವಿಷಯವು ಜಾನಪದ ನೆಲೆಯದಾಗಿದ್ದು, ಸಂಸ್ಕೃತಿ ಅಧ್ಯಯನವಾಗಿರುತ್ತದೆ. ಆದ್ದರಿಂದಾಗಿ ಇದು ಕ್ಷೇತ್ರಾಧಾರಿತ ಅಧ್ಯಯನವಾದ್ದರಿಂದ ಕ್ಷೇತ್ರಕಾರ್ಯದ ಮೂಲಕವಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದು ಬುಡಕಟ್ಟು ಸಮುದಾಯ ಕೇಂದ್ರಿತ ಅಧ್ಯಯನವಾಗಿರುವುದರಿಂದ ಇತರೆ ಬುಡಕಟ್ಟು ಸಮುದಾಯದ ಮಹಿಳೆಯರ ಜೀವನ ಕ್ರಮದೊಂದಿಗೆ ಮ್ಯಾಸಬೇಡ ಸಮುದಾಯದ ಮಹಿಳೆಯರ ಸಂಸ್ಕೃತಿ ಹಾಗೂ ಜೀವನ ವಿಧಾನವನ್ನು ತೌಲನಿಕವಾಗಿ ಅಧ್ಯಯಕ್ಕೆ ಒಳಪಡಿಸಲಾಗಿದೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ತೌಲನಿಕ ಅಧ್ಯಯನ ವಿಧಾನವನ್ನು ಅಳವಡಿಸಿಕೊಂಡು ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

ಮ್ಯಾಸಬೇಡ ಸಮುದಾಯದ ಮಹಿಳೆಯನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನವನ್ನು ಕೈಗೊಂಡಿದ್ದರು ಸಹ ಇಲ್ಲಿ ಪುರುಷರ ಜೀವನ ವಿಧಾನಗಳನ್ನು ಸಾಂದರ್ಭಿಕವಾಗಿ ಅಧ್ಯಯನಕ್ಕೆ

ಒಳಪಡಿಸಲಾಗಿದೆ. ಈ ಅಧ್ಯಯನವು ಕ್ಷೇತ್ರಕಾರ್ಯ ಪ್ರಧಾನ ಅಧ್ಯಯನವಾಗಿದ್ದರು ಸಹ ಇದುವರೆಗೂ ಬುಡಕಟ್ಟು ಸಮುದಾಯಗಳು ಹಾಗೂ ಜಾನಪದ ಸಾಹಿತ್ಯ, ಸಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದ ಕೃತಿಗಳನ್ನು ಕೂಡ ಪ್ರಸ್ತುತ ಅಧ್ಯಯನ ವಿಧಾನದಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗುವುದು. ಹೀಗೆ ವಿವಿಧ ವಿಧಾನಗಳನ್ನು ಅಳವಡಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮ್ಯಾಸಬೇಡ ಮಹಿಳೆ ಎಂಬ ಸಂಶೋಧನ ವಿಷಯಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸಲು, ಆ ಮೂಲಕವಾಗಿ ಸಂಶೋಧನೆಗೆ ಒಳಪಡಿಸಲು ಕೆಲವು ತಾಂತ್ರಿಕ ಮಾದರಿಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಅವುಗಳೆಂದರೆ;

ಪ್ರಶ್ನಾವಳಿ ವಿಧಾನ:

ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವ ಉದ್ದೇಶದಿಂದ ಪೂರ್ವ ಯೋಜಿತವಾಗಿ ಪ್ರಶ್ನಾವಳಿಯನ್ನು ತಯಾರಿಸಿಕೊಳ್ಳಲಾಗಿದೆ. ಮಹಿಳಾ ವಕ್ತೃಗಳಿಂದ ಮಾಹಿತಿಯನ್ನು ಸಂಗ್ರಹಿಸುವ ಸಂದರ್ಭದಲ್ಲಿ ಯಾವುದೇ ಗೊಂದಲವಾಗದಂತೆ ಮುನ್ನೆಚ್ಚರಿಕೆ ದೃಷ್ಟಿಯಿಂದಾಗಿ ಇದು ಸೂಕ್ತ ವಿಧಾನವಾಗಿ ಕಂಡುಬರುತ್ತದೆ. ಈ ಪ್ರಶ್ನಾವಳಿಯನ್ನು ತಯಾರಿಸುವ ಸಂದರ್ಭದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತಹ ಪೂರ್ವ ತಯಾರಿಯನ್ನು ನಡೆಸಲಾಗುತ್ತದೆ. ಇದರಿಂದ ಆ ಸಮುದಾಯದ ವಕ್ತೃಗಳಿಂದ ಪಡೆಯಬಹುದಾದ ಮಾಹಿತಿಯನ್ನು ನಿರ್ದಿಷ್ಟ ಮಾದರಿಯಲ್ಲಿ ಸಿದ್ಧಪಡಿಸಲು ಅನುಕೂಲವಾಗುತ್ತದೆ. ಇದರಿಂದ ಸಂಶೋಧನೆಯಲ್ಲಿ ಎದುರಾಗಬಹುದಾದ ಸಮಸ್ಯೆಗಳಿಗೆ ಸೂಕ್ತವಾದ ಮಾಹಿತಿಯು ಲಭಿಸುತ್ತದೆ. ಆದ್ದರಿಂದ ಸಂಶೋಧನೆಗೆ ಪ್ರಸ್ತುತ ಮಾದರಿಯು ಅತ್ಯಂತ ಉಪಯುಕ್ತವೆಂದು ಭಾವಿಸಿ, ಇದನ್ನು ಅನುಸರಿಸಲಾಗುವುದು.

ಅವಲೋಕನ ವಿಧಾನ:

ಪ್ರಸ್ತುತ ಸಂಶೋಧನೆಗೆ ಆಯ್ದುಕೊಂಡಿರುವ ವಿಷಯವು ಕ್ಷೇತ್ರಾಧಾರಿವಾಗಿದೆ. ಆದ್ದರಿಂದಾಗಿ ಇಲ್ಲಿ ಸಂಶೋಧನೆಗೆ ಆಯ್ದುಕೊಂಡಿರುವ ಸಮುದಾಯದ ಮಹಿಳೆಯರ ಬಗೆಗೆ ಅಧ್ಯಯನ ಮಾಡುವ ಸಂದರ್ಭದಲ್ಲಿ ಅವರಿಗೆ ತಿಳಿಯದಂತೆ ಸೂಕ್ಷ್ಮವಾಗಿ ಅವಲೋಕನ ಮಾಡುವ ಮೂಲಕ ಮಾಹಿತಿಯನ್ನು ಸಂಗ್ರಹಿಸುವುದು ಸಂಶೋಧನೆಯಲ್ಲಿ ಒಂದು ಪ್ರತ್ಯೇಕವಾದ ವಿಧಾನವಾಗಿ ಗುರುತಿಸಿಕೊಳ್ಳಲಾಗಿದೆ. ಪ್ರಶ್ನಾವಳಿಯ ಮೂಲಕ ಪಡೆಯುವ ಮಾಹಿತಿಯು ವಾಸ್ತವಕ್ಕೆ ದೂರವಿರುವ ಸಾಧ್ಯತೆಯಿರುತ್ತದೆ. ಇದಕ್ಕೆ ಕಾರಣ ನಾವು ಯಾರಿಂದ ಮಾಹಿತಿಯನ್ನು ಪಡೆಯುತ್ತೇವೊ ಅವರು ಕೆಲವು ಸೂಕ್ಷ್ಮ ಹಾಗೂ ಮುಜುಗರ ತರುವಂತಹ ವಿಚಾರಗಳಿಗೆ ನೇರವಾದ ಮತ್ತು ಸ್ಪಷ್ಟವಾದ ಉತ್ತರ ನೀಡುವಲ್ಲಿ ಹಿಂದೇಟು ಹಾಕುವ ಮತ್ತು ಸತ್ಯವನ್ನು ಮುಚ್ಚಿಡುವ ಸಾಧ್ಯತೆಯು ಕಂಡುಬರುತ್ತದೆ. ಆದ್ದರಿಂದ ಇಂತಹ ಮಾಹಿತಿಗಳನ್ನು ವಾಸ್ತವ ನೆಲೆಯಲ್ಲಿ ಸಂಗ್ರಹಿಸಬೇಕಾದರೆ ಅವಲೋಕನ ಮಾದರಿಯು ಹೆಚ್ಚು ಸೂಕ್ತವಾಗಿರುತ್ತದೆ. ಆದ್ದರಿಂದಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ

ವಿಶೇಷ ದಿನಗಳನ್ನು ನಿಗದಿಪಡಿಸಿಕೊಂಡು ಅವಲೋಕನ ವಿಧಾನವನ್ನು ಅನುಸರಿಸುವ ಮೂಲಕ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗುವುದು.

ದತ್ತಾಂಶ ಸಂಗ್ರಹಣೆ

ಸಂಶೋಧನ ವಿಷಯಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಣೆ ಮಾಡುವುದು ಸಂಶೋಧನ ವಿಧಾನದಲ್ಲಿ ಮಹತ್ವ ಪೂರ್ಣವಾಗಿದೆ. ಸೂಕ್ತವಾದ ಮಾಹಿತಿ ಲಭ್ಯವಾದರೆ ಮಾತ್ರ ಸಂಶೋಧನೆಯು ಯಶಸ್ವಿಯಾಗುತ್ತದೆ. ಮಾಹಿತಿ ಲಭ್ಯವಿಲ್ಲದೆ ಹೋದರೆ ಸಂಶೋಧನೆಯನ್ನು ಸಮಸ್ಯಿಕರಿಸುವದು ಕಷ್ಟದಾಯಕವಾಗುತ್ತದೆ. ಆದ್ದರಿಂದ ಸಂಶೋಧನ ವಿಷಯಕ್ಕೆ ಪೂರಕವಾದ ಕೃತಿ, ಲೇಖನ, ನಿಯತಕಾಲಿಕೆ, ಉಪನ್ಯಾಸ ಟಿಪ್ಪಣಿ, ವಕ್ತೃಗಳಿಂದ ದತ್ತಾಂಶವನ್ನು ಸಂಗ್ರಹಣೆ ಮಾಡುವ ವಿಧಾನವನ್ನು ಅನುಸರಿಸಲಾಗಿದೆ.

ಸಂದರ್ಶನ ವಿಧಾನ

ಮ್ಯಾಸಬೇಡ ಮಹಿಳೆಯ ಬದುಕಿನ ಕ್ರಮಗಳು ಹಾಗೂ ಸಾಂಸ್ಕೃತಿಕ ಆಯಾಮಗಳನ್ನು ತಿಳಿಯುವ ಉದ್ದೇಶದಿಂದಾಗಿ ನಿರ್ದಿಷ್ಟವಾದ ಕೆಲವು ಗ್ರಾಮಗಳನ್ನು ಗುರುತಿಸಿಕೊಂಡು, ಆ ಗ್ರಾಮದಲ್ಲಿನ ಹಿರಿಯ ತಲೆಮಾರಿನವರಿಂದ ಆಧುನಿಕ ಬದುಕಿಗೆ ತೆರೆದು ಕೊಂಡವರನ್ನು ಸಂದರ್ಶನ ಮಾಡಲಾಗಿದೆ. ಇಲ್ಲಿ ನಿಗದಿಪಡಿಸಿಕೊಂಡವರಲ್ಲಿ ಕೇವಲ ಮಹಿಳೆಯರು ಮಾತ್ರ ಇರುವುದಿಲ್ಲ. ಮ್ಯಾಸಬೇಡ ಸಮುದಾಯದ ಪುರುಷರನ್ನು ಸಹ ಸಂದರ್ಶನ ಮಾಡಿ, ಅಗತ್ಯ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯ

ಸಂಶೋಧನ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲು ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಗಿದೆ. ಇದಕ್ಕಾಗಿ ಮ್ಯಾಸಬೇಡ ಸಮುದಾಯಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಆಚರಣೆ, ಹಬ್ಬ, ಉತ್ಸವ ಹಾಗೂ ಇತರೆ ವಿಶೇಷ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಮ್ಯಾಸಬೇಡ ಸಮುದಾಯದ ಮಹಿಳೆಯರ ಸ್ಥಿತಿಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಕೈಗೊಂಡ ಪ್ರಮುಖ ಸ್ಥಳಗಳೆಂದರೆ; ಚಳ್ಳಕೆರೆ, ಮೊಳಕಾಲ್ಮೂರು, ಚಿತ್ರದುರ್ಗ ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಕಂಡುಬರುವ ಮ್ಯಾಸಬೇಡ ಸಮುದಾಯದ ಹಟ್ಟಿಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ದುಕೊಳ್ಳಲಾಗಿದೆ.

೧.೬ ಈವರೆಗಿನ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ಬುಡಕಟ್ಟುಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ನಮಗೆ ಸಿಗುವ ಕೃತಿಗಳೆಂದರೆ ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಾಚಾರಿಯವರು ರಚಿಸಿರುವ 'Castes and Tribes of Southern India Vol-7' ಮತ್ತು ಹೆಚ್.ವಿ.ನಂಜುಡಯ್ಯ ಮತ್ತು ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರ 'The

Mysore Tribes and Castes Vol 1-4' ಎಂಬ ಕೃತಿಗಳು ಬುಡಕಟ್ಟುಗಳ ಅಧ್ಯಯನಕ್ಕೆ ಮೂಲ ಆಕರ ಗ್ರಂಥಗಳಾಗಿವೆ. ಈ ಕೃತಿಗಳಲ್ಲಿ ಮ್ಯಾಸಬೇಡ ಬುಡಕಟ್ಟನ್ನು ಬೇಟೆಗಾರಿಕೆಯ ಹಂತದಲ್ಲಿ ಗುರುತಿಸಲಾಗಿದೆ. ಡಾ.ಲೂಯಿಸ್ ತಮ್ಮ 'Tribes of Mysore' ಎಂಬ ಕೃತಿಯಲ್ಲಿ ಕರ್ನಾಟಕದ ನೆಲೆಸಿರುವ ಇಪ್ಪತ್ತೇಳು ಬುಡಕಟ್ಟುಗಳ ಬಗೆಗೆ ವಿವರಣೆಯನ್ನು ನೀಡುತ್ತಾರೆ.

ಮುಖ್ಯವಾಗಿ ಮ್ಯಾಸಬೇಡರ ಸಂಸ್ಕೃತಿಯ ಮೇಲೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಬೇಡ ಜನಾಂಗದವರು ಬಯಲು ಸೀಮೆಯಾದ ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚಾಗಿ ವಾಸವಾಗಿದ್ದಾರೆ. ಈ ಅಧ್ಯಯನಗಳು ಅವರ ಸಂಸ್ಕೃತಿ ಮೇಲೆ ಬೆಳಕು ಚೆಲ್ಲಿದೆ. ಮ್ಯಾಸಬೇಡರ ಸಂಸ್ಕೃತಿಯನ್ನು ಪ್ರಧಾನ ಅಂಶವಾಗಿಟ್ಟುಕೊಂಡು ಅನೇಕ ವಿದ್ವಾಂಸರು ಸಂಶೋಧನೆ ನಡೆಸಿ ಬೇರೆ ಜಗತ್ತಿಗೆ ಈ ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ. ಪ್ರಮುಖವಾಗಿ ಥರ್ಸ್ಟನ್, ಎಲ್.ಕೆ.ಅನಂತಕೃಷ್ಣ ಅಯ್ಯರ್, ಹೆಚ್.ವಿ.ನಂಜುಂಡಯ್ಯ, ಕೃಷ್ಣಮೂರ್ತಿ ಹನೂರು, ಎಂ.ಜಿ.ಈಶ್ವರಪ್ಪ, ಪ್ರೊ.ಲಕ್ಷಣ ತೆಲಗಾವಿ, ಮೀರಾಸಾಬಿಹಳ್ಳಿ ಶಿವಣ್ಣ, ಕರಿಶೆಟ್ಟಿ ರುದ್ರಪ್ಪ, ಎ.ಎಸ್.ಪ್ರಭಾಕರ, ವಿರೂಪಾಕ್ಷಿ ಪೂಜಾರಳ್ಳಿ ಮುಂತಾದವರು ಕೈಗೊಂಡಿದ್ದಾರೆ. ಈ ಎಲ್ಲ ವಿದ್ವಾಂಸರು ಮ್ಯಾಸಬೇಡರ ಸಂಸ್ಕೃತಿಯನ್ನು ಸಾಮಾಜಿಕ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ಮನೋವಿಶ್ಲೇಷಣೆಯ ದೃಷ್ಟಿಯಿಂದ ತಾತ್ವಿಕವಾಗಿ, ಸಾಂಸ್ಕೃತಿಕವಾಗಿ ಅಧ್ಯಯನವನ್ನು ಮಾಡಿದ್ದಾರೆ.

ಮೊದಲು ಪ್ರಸ್ತಾಪಗೊಳ್ಳುವವರು ಎಂದರೆ ಪಿ.ಕೃಷ್ಣರಾವ್. ಇಪ್ಪತ್ತರ ದಶಕದಲ್ಲಿ (೧೯೯೧) ಇವರು ಚಿತ್ರದುರ್ಗ ಕುರಿತು ತಮ್ಮ ಉಪನ್ಯಾಸವನ್ನು ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟಿಸಿದ್ದಾರೆ. ಅನಂತರ ೧೯೫೦ರಲ್ಲಿ ಇವರ ಉಪನ್ಯಾಸವು ಚಿತ್ರದುರ್ಗದ ಬೆಟ್ಟ ಮತ್ತು ನಾಯಕ ಸಾಮ್ರಾಜ್ಯ ಎಂಬ ಶೀರ್ಷಿಕೆಯಲ್ಲಿ ಬೆಳಕು ಕಂಡಿತು. ಹುಲ್ಲೂರು ಶ್ರೀನಿವಾಸ ಜೋಯಿಸ, ಎಂ.ಎಸ್. ಪುಟ್ಟಣ್ಣನವರಿಗೆ ಚಿತ್ರದುರ್ಗದ ಸ್ಮಾರಕಗಳು ಮತ್ತು ಇತಿಹಾಸದ ಕುರಿತು ಅಧ್ಯಯನ ಕೈಗೊಳ್ಳಲು ಪ್ರೇರಣೆ ನೀಡಿದಂತಹ ಕೃತಿ ಇದು ಎಂದರೆ ಇದರ ಮಹತ್ವ ಮನದಟ್ಟಾದೀತು. ೧೯೨೨ ರಿಂದ ೧೯೫೬ ರವರೆಗೆ ಸತತವಾಗಿ ಇತಿಹಾಸ-ಸಾಹಿತ್ಯ-ಸಂಸ್ಕೃತಿ ಕುರಿತು ಬರಹ ಕೃಷಿ ನಡೆಸಿದ ಹುಲ್ಲೂರು ಶ್ರೀನಿವಾಸ ಜೋಯಿಸರು ಚಿತ್ರದುರ್ಗದ ಮೂಲ ದಾಖಲೆಗಳನ್ನು ಪರಿಚಯಿಸಿ ಶೋಧಿಸುವ ನಿಟ್ಟಿನಲ್ಲಿ ಇವರು ಮಾಡಿದ ಕೆಲಸವು ತೀರಾ ಮಹತ್ವಪೂರ್ಣವಾದುದು. ಚಿತ್ರದುರ್ಗದ ಬಖೈರಿನೊಡನೆ ಮದಕರಿ ರಾಜೇಂದ್ರ ದಂಡಕ ಹಿರೇ ಮದಕರಿ ನಾಯಕ ತಾರಾವಳಿ ದೊರೆರಾಯ, ಭರಮಣ್ಣನಾಯಕನ ಸಮರ ವಿಜಯ, ಐತಿಹಾಸಿಕ ಪತ್ರ ವ್ಯವಹಾರಗಳು, ಉತ್ಸವಾಂಬೆಯ ಪ್ರಾರ್ಥನಾ ಪದಗಳಂತಹ ಮೂಲ ರಚನೆಗಳನ್ನು ಬೆಳಕಿಗೆ ತಂದರು. ನಾಯಕ ಅರಸರ ವಂಶಾವಳಿಗಳನ್ನು ತಮ್ಮ ಬರಹಗಳ ಮೂಲಕ ಪರಿಚಯಿಸಿದರು. ಒಟ್ಟಿನಲ್ಲಿ ಚಿತ್ರದುರ್ಗ ಚರಿತ್ರೆ ಶೋಧನೆಯ ಅಗಾಧತೆಯನ್ನು ತೋರಿಸಿಕೊಟ್ಟವರಲ್ಲಿ ಜೋಯಿಸರು ಮೊದಲಿಗರು.

ಜಿಲ್ಲೆಯ ಜಾನಪದದ ಕುರಿತು ಸಮೀಕ್ಷಾ ಬರಹಗಳನ್ನು ಪ್ರಕಟಿಸಿದವರಲ್ಲಿ ತೀ.ನಂ. ಶಂಕರನಾರಾಯಣ, ಎಂ.ಜಿ.ಈಶ್ವರಪ್ಪ, ಕೃಷ್ಣಮೂರ್ತಿ ಹನೂರು, ಮೀರಸಾಬಿಹಳ್ಳಿ ಶಿವಣ್ಣ, ಮೈಲನಹಳ್ಳಿ

ರೇವಣ್ಣ ಮೊದಲಾದವರು ಮುಖ್ಯರೆನಿಸಿಕೊಳ್ಳುತ್ತಾರೆ. ಎಂ.ಜಿ.ಈಶ್ವರಪ್ಪನವರ 'ಮ್ಯಾಸಬೇಡರು'(೧೯೮೨) ಹಾಗೂ ರಾಜಣ್ಣನವರ 'ನಾಯಕ ಜನಾಂಗದ ಇತಿಹಾಸ'(೧೯೮೨) ಕೃತಿಗಳು ಚಿಕ್ಕದಾದರೂ ಉಪಯುಕ್ತವಾದವು. ಚಿತ್ರದುರ್ಗ ಸಂಸ್ಥಾನದ ದಳವಾಯಿ ಪರಶುರಾಮ ನಾಯಕರು ರಚಿಸಿದ 'ಶಕ್ತಿ ವಾಹಿನಿ'(೧೯೮೯)ಯು ಬೇಡ ಕುಲದ ಮಹಾ ಪುರುಷರು ಮತ್ತು ಅರಸರನ್ನು ಕೀರ್ತಿಸುವಂತಹ ಪುಸ್ತಕ.

ಕೃಷ್ಣಮೂರ್ತಿ ಹನೂರು ಅವರ 'ಮ್ಯಾಸಬೇಡರ ಸಂಸ್ಕೃತಿ'(೧೯೯೩) ಎಂಬ ಅಧ್ಯಯನ ಕೃತಿಯು ಆ ನಂತರದ ಇಂಥದೇ ಪ್ರಯತ್ನಗಳಿಗೆ ಪ್ರೇರಣೆ ನೀಡಿತು. ೧೯೯೫ರಲ್ಲಿ ಕರಿಶೆಟ್ಟಿ ರುದ್ರಪ್ಪನವರ 'ಮ್ಯಾಸಬೇಡರು ಒಂದು ಜನಾಂಗಿಕ ಅಧ್ಯಯನ' ಕೃತಿಯು ಹೊರಬಂದಿತು. ವೀರೂಪಾಕ್ಷಿ ಪೂಜಾರಹಳ್ಳಿಯವರು ೧೯೯೯ರಲ್ಲಿ 'ಗಾದರಿ ಪಾಲನಾಯಕ' ಕೃತಿಯನ್ನು ಪ್ರಕಟಿಸಿದರಲ್ಲದೇ ೨೦೦೨ರಲ್ಲಿ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' ಮತ್ತು 'ಅಕ್ಕಮ್ಮನ ಆಚರಣೆ'ಗಳಂತಹ ಗಮನಾರ್ಹ ಕೃತಿಗಳನ್ನು ಹೊರತಂದರು. ಈ ಎಲ್ಲಾ ಕೃತಿಗಳೂ ಮ್ಯಾಸಬೇಡರ ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿವರಗಳನ್ನು ಒಳಗೊಂಡಿವೆ. ಚಿತ್ರದುರ್ಗ ನಾಯಕ ಅರಸರು ಅವರ ಸಂಬಂಧಿತರ ಮಾಹಿತಿಯನ್ನು ಹೊಂದಿವೆ. ೧೯೯೫ರಲ್ಲಿ ಬೆಳಕು ಕಂಡ ಎಂ.ಜಿ.ಈಶ್ವರಪ್ಪನವರ 'ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ' ಅಧ್ಯಯನ ಕೃತಿಯು ಪ್ರಾಸಂಗಿಕವಾಗಿ ಪಾಳೆಯಗಾರರ ಕಾಲದ ಕೃಷಿ ಪದ್ಧತಿಯನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತದೆ.

ಬಾಗೂರು ಆರ್ ನಾಗರಾಜಪ್ಪನವರು ಜಾನಪದ ನೆಲೆಯಲ್ಲಿ ಇಡೀ ಒಂದು ತಾಲ್ಲೂಕನ್ನು ಗಮನಿಸಿದರು. ಅವರ ಎಲ್ಲ ಬರಹಗಳು 'ಹೊಸದುರ್ಗ ಸೀಮೆ ಜನಪದ'ದಲ್ಲಿ ಅಡಕಗೊಂಡಿವೆ. ಚಳ್ಳಕೇರಮ್ಮನನ್ನು ವಿಭಿನ್ನ ಪಂಥಗಳ ನೆಲೆಯಲ್ಲಿ ವಿಶ್ಲೇಷಿಸಿರುವ ಸಿ.ಆರ್.ಶ್ಯಾಮಲ ಈ ದೇವತೆಗೆಂದು ನಿರ್ಮಿಸಿರುವ ದೇವಾಲಯದ ವಾಸ್ತುಶಿಲ್ಪವನ್ನು ಗುರುತಿಸಿದ್ದಾರೆ. ಕೆ.ಎಂ.ಮೇತ್ರಿ ಅವರು ಗೌರಸಂದ್ರದ ಮಾರಮ್ಮ, ಗಾದರಿಪಾಲ ನಾಯಕ ಮೊದಲಾದವರ ಬಿಡಿ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದುದನ್ನು ಇಲ್ಲಿ ಉಲ್ಲೇಖಿಸಬಹುದು. ಎಂ.ಎನ್.ಪ್ರಭಾಕರ್ ಸಂಗ್ರಹಿಸಿದ 'ನಾಯಕನ ಹಟ್ಟಿ ಬಖೈರು'(ನಾಯಕನ ಹಟ್ಟಿ ದೊರೆಗಳ ವಂಶಾವಳಿ) ಪ್ರಕಟಣೆ(೧೯೭೬) ಈ ಕೃತಿಯಲ್ಲಿ ಮ್ಯಾಸಬೇಡರ ಮೂಲವೃತ್ತಿ ಪಶುಪಾಲನೆಯಾಗಿತ್ತು ಎಂಬುದಾಗಿ ಗುರುತಿಸಲಾಗಿದೆ. ಡಾ.ಕೃಷ್ಣಮೂರ್ತಿ ಹನೂರರು 'ಬೇಡನಾಯಕರು' ಎಂಬ ಸಂಶೋಧನ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಬೇಡರನ್ನು ಕುರಿತು ಅಧ್ಯಯನ ಮಾಡಿದ್ದಾರೆ.

ಬುಡಕಟ್ಟು ಸಮುದಾಯಗಳ ಬಗ್ಗೆ ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆಯ ಅಡಿಯಲ್ಲಿ ವಿವಿಧ ಲೇಖಕರ ಸಲವತ್ತೆರಡು ಗ್ರಂಥಗಳನ್ನು ಬರಗೂರು ರಾಮಚಂದ್ರಪ್ಪನವರ ನೇತೃತ್ವದಲ್ಲಿ ಪ್ರಕಟಿಸಲಾಗಿದೆ. ಅವುಗಳಲ್ಲಿ ಬುಡಕಟ್ಟು ಸಮುದಾಯಗಳ ಬಗ್ಗೆ ವಿಸ್ತೃತ ಅಧ್ಯಯಸಕ್ಕೆ ವಿಪುಲ ಮಾಹಿತಿಯನ್ನು ಒದಗಿಸಲಾಯಿತು. ಈ ಮಾಲೆಯಲ್ಲಿ ಡಾ.ಕೃಷ್ಣಮೂರ್ತಿ ಹನೂರು ಅವರು 'ಮ್ಯಾಸಬೇಡರ ಸಂಸ್ಕೃತಿ' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಬೇಡ ಸಮುದಾಯ

ಕುರಿತ ಕೃಷ್ಣಮೂರ್ತಿ ಹನೂರು ಅವರ ಈ ಅಧ್ಯಯನದಲ್ಲಿ ಹೆಚ್ಚು ಸೂಕ್ತವೂ, ಸಮಗ್ರ ವಿವರಗಳ ಮೂಲಕ ಬೇಡ ಸಮುದಾಯದ ವಿವಿಧ ಆಯಾಮಗಳನ್ನು ಬೆಳಕಿಗೆ ತರಲು ಪ್ರಯತ್ನಿಸಿದ್ದಾರೆ. ಹನೂರು ಅವರು ಸ್ವತಃ ಸೃಜನಶೀಲ ಲೇಖಕರೂ ಆಗಿದ್ದರಿಂದ ಅವರ ಸಮುದಾಯ ಅಧ್ಯಯನಕ್ಕೆ ಸೃಜನಶೀಲ ಆಯಾಮವೊಂದು ಸಂಶೋಧನ ವಲಯಕ್ಕೆ ಸೇರ್ಪಡೆಗೊಂಡಿದೆ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಬೇಡ ಸಮುದಾಯವನ್ನು ಯಾರೇ ಅಧ್ಯಯನ ಮಾಡಲಿ ಅವರಿಗೆ ಹನೂರರ ಕೃತಿಯು ಮಾರ್ಗದರ್ಶಕ ಕೃತಿಯಾಗಿ ನಿಲ್ಲುತ್ತದೆ. ಇಲ್ಲಿ ವೈಚಾರಿಕ ಮನಸ್ಸೊಂದು ಸೃಜನಶೀಲವಾಗಿ ಕಟ್ಟಿದ ಸಮುದಾಯದ ಕಥನವಾದ ಕಾರಣಕ್ಕೆ ಈ ಅಧ್ಯಯನಕ್ಕೆ ಹೆಚ್ಚಿನ ಮಹತ್ವವಿದೆ. ಈ ಅಧ್ಯಯನವು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ವಾಸವಾಗಿರುವ ಮ್ಯಾಸರ ಬುಡಕಟ್ಟು ಸಂಸ್ಕೃತಿಯ ಅಧ್ಯಯನವಾಗಿದೆ.

ಎಡ್ವರ್ ಥರ್‌ಸ್ಟನ್ ಅವರ ಕೃತಿಗಿಂತ ಬೇಡ ಜನಾಂಗದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅನಂತಕೃಷ್ಣ ಅಯ್ಯರ್ ಎಲ್.ಕೆ. ಅವರ 'The Mysore Tribes and Castes Vol 2' ಪುಸ್ತಕವು ಒದಗಿಸುತ್ತದೆ. ಈ ಕೃತಿಯಲ್ಲಿ ಇವರು ಆರ್ಯೇತರರು, ದಕ್ಷಿಣ ದ್ರಾವಿಡ ಜನಾಂಗದ ಪೂರ್ವಜರು ಎಂದು ಅಭಿಪ್ರಾಯಪಡುತ್ತಾರೆ. ಅಲ್ಲದೇ ಸಂಸ್ಕೃತದ ಮ್ಯಾಸ ಪದದಿಂದ ಬೇಡ ಎಂಬ ಪದ ನಿಷ್ಪನ್ನವಾಗಿದೆ ಎಂದು ಹೇಳುತ್ತಾರೆ. ಇದರೊಂದಿಗೆ ಬೇಡರ ಪ್ರಮುಖ ಉಪಪಂಗಡಗಳಾದ ಊರಬೇಡ, ಮ್ಯಾಸಬೇಡ, ಗುಡಿಸಲಬೇಡ ಅಲ್ಲದೇ ಬೆಡಗುಗಳ ವಿವರಣೆಯೂ ದೊರೆಯುತ್ತದೆ. ಇಲ್ಲಿ ನಲವತ್ತೆರಡು ಬೆಡಗುಗಳನ್ನು ಹೆಸರಿಸಿದ್ದಾರೆ.

ಸ್ವಾತಂತ್ರ್ಯದ ನಂತರದಲ್ಲಿ ಬುಡಕಟ್ಟುಗಳ ಮಾದರಿಯಲ್ಲಿ ಬದಲಾವಣೆ ಉಂಟಾಯಿತು. ಬುಡಕಟ್ಟುಗಳ ಸಮಗ್ರ ಅಧ್ಯಯನಕ್ಕಿಂತ ಪ್ರತ್ಯೇಕ ಅಧ್ಯಯನಗಳಿಗೆ ಮಾನ್ಯತೆ ದೊರೆಯಿತು. ಲಂಬಾಣಿ, ಕುರುಬ, ಗೊಲ್ಲ, ಬೇಡ ಸಮುದಾಯದ ಕುರಿತು ಅನೇಕ ಅಧ್ಯಯನಗಳು ನೆಡೆದಿವೆ. ಬೇಡರ ಕುರಿತು ನಡೆದ ಅಧ್ಯಯನಗಳಲ್ಲಿ ೧೯೪೮ರಲ್ಲಿ ಹೆಚ್.ವಿ.ವೀರನಾಯಕರ ಕೃತಿ 'ಕ್ಷಾತಂಶ ಪ್ರಬೋಧ'ವು ಬೇಡ ಜನಾಂಗದ ಪೌರಾಣಿಕ, ಐತಿಹಾಸಿಕ ಮೂಲದ ಬಗ್ಗೆ ಮಾಹಿತಿ ನೀಡುತ್ತದೆ. ಆರ್.ರಾಜಣ್ಣ ಅವರ 'ನಾಯಕ ಜನಾಂಗದ ಇತಿಹಾಸ'(೧೯೮೨)ವು ಬೇಡರ ಕುರಿತು ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಬೇಡರ ಮೂಲವನ್ನು ಹಾಗೂ ಮೂಲ ಪುರುಷರ, ಐತಿಹಾಸಿಕ ಪುರುಷರ ಕಥೆಗಳನ್ನು ಹೇಳುತ್ತದೆ. ಇಲ್ಲಿ ಸಮಾಜ, ಸಂಸ್ಕೃತಿ, ಆಚಾರ-ವಿಚಾರಗಳನ್ನು ತಿಳಿಸಿಕೊಡುವುದಿಲ್ಲ. ಆದರೆ ಕೃತಿಯ ಆರಂಭದಲ್ಲಿ ನಾಯಕರನ್ನು ಯಾವ ರೀತಿ ಗುರುತಿಸಬೇಕು ಎಂದು ವಿವರಿಸುವಾಗ ಬೇಡರ ದೈಹಿಕ ಲಕ್ಷಣ, ಅವರ ಉಡುಗೆ-ತೊಡುಗೆ, ಆಚಾರ-ವಿಚಾರ, ಧಾರ್ಮಿಕತೆ ಇತ್ಯಾದಿಗಳನ್ನು ಸ್ಥೂಲವಾಗಿ ಪರಿಚಯಿಸುತ್ತಾರೆ. ನಾಯಕರು ಸಾಲಿಗ್ರಾಮ ಮತ್ತು ಲಿಂಗವನ್ನು ಪ್ರತ್ಯೇಕ ಬುಟ್ಟಿಯಲ್ಲಿ ಸಣ್ಣ ಬುಟ್ಟಿಗಳನ್ನಿಟ್ಟು ಬುಟ್ಟಿಗಳನ್ನು ಪೂಜೆ ಮಾಡುತ್ತಾರೆ. ಈ ಬುಟ್ಟಿಗಳಲ್ಲಿರುವ ಸಾಲಿಗ್ರಾಮ ಮತ್ತು ಲಿಂಗವು ಕ್ರಮವಾಗಿ ವೈಷ್ಣವ ಮತ್ತು ಶೈವ ಪಂಥದವರ ದೈವಗಳು. ವೈಷ್ಣವ ಮತ್ತು ಶೈವ

ಪಂಥದವರು ನಾಮವನ್ನು ಧರಿಸುವುದಿಲ್ಲ. ಇಂತಹ ಅನೇಕ ಸ್ವ ಅನುಭವಗಳನ್ನು ಲೇಖಕರು ಕೃತಿಯಲ್ಲಿ ಪರಿಚಯಿಸಿಕೊಟ್ಟಿದ್ದಾರೆ. ಈ ವಿವರಣೆಯು ಮ್ಯಾಸಬೇಡರಿಗೆ ಮಾತ್ರ ಸಂಬಂಧಿಸಿದ್ದಾಗಿದೆ. ಇಂದು ಸಹ 'ಪ್ರಾತ್ರಾಂಶ ಪ್ರಬೋಧ'ದಂತೆ ಜನಾಂಗದ ಶ್ರೇಷ್ಟತೆಯನ್ನು ಎತ್ತಿ ಹಿಡಿಯುವಂತಹ ಕೃತಿ. ಎಂ.ಎನ್.ಪ್ರಭಾಕರ್ ಅವರು ೧೯೭೬ರಲ್ಲಿ ಚಂದ್ರವಳ್ಳಿ ಕೃತಿಯಲ್ಲಿ ನಾಯಕನ ಹಟ್ಟಿ ಬಖೈರು ವಿವರಿಸಿ ಮ್ಯಾಸ ರಂಪಳವು ಶ್ರೀಶೈಲ ಮೂಲದಿಂದ ಕಾಟಮಲ್ಲನಾಯಕನ ನೇತೃತ್ವದಲ್ಲಿ ಹೊರಟು ಪಶುಸಂಪತ್ತಿನೊಂದಿಗೆ ಸಮುದಾಯವು ಈ ಭಾಗವನ್ನು ಪ್ರವೇಶಿಸಿತು ಎಂಬ ವಿವರವನ್ನು ಕೊಡುತ್ತಾರೆ.

ಢಂಗ.ಡಿ.ಬಿ ಅವರ 'ಜನಾಂಗ ಪರಿಚಯ'(೧೯೮೮)ದಲ್ಲಿ ಒಟ್ಟು ಎಂಟು ಜನಾಂಗಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಮೊದಲ ಲೇಖನವು ನಾಯಕ ಸಮುದಾಯಕ್ಕೆ ಸಂಬಧಿಸಿದ್ದಾಗಿದೆ. ಇಲ್ಲಿ ಲೇಖಕರು ನಾಯಕ ಜನಾಂಗವು ವೇದಗಳ ಕಾಲದಿಂದಲೇ ಅಸ್ತಿತ್ವದಲ್ಲಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಢಂಗ ಅವರು ಬೇಡ, ನಾಯಕ, ತಳವಾರ, ವಾಲ್ಮೀಕಿ ಮಕ್ಕಳು, ಸನ್ನಯ್ಯನ ಮಕ್ಕಳು ಇತ್ಯಾದಿ ಹೆಸರುಗಳ ಜನಪದ ಕಥೆಗಳನ್ನು ಕೊಟ್ಟಿದ್ದಾರೆ. ಇಂತಹ ಕಾರಣಕ್ಕಾಗಿ ಈ ಹೆಸರು ಬಂದಿತು ಎಂಬುದಾಗಿ ವಿವರಿಸುತ್ತಾರೆ. ಆದರೆ ಇಲ್ಲಿ ಬೇಡರ ಸಮಾಜ, ಸಂಸ್ಕೃತಿಯ ಪ್ರಸ್ತಾಪವನ್ನೇ ಮಾಡಿಲ್ಲ. ಹೆಸರೇ ಹೇಳುವಂತೆ ಈ ಕೃತಿಯು ಕೇವಲ ಜನಾಂಗದ ಪರಿಚಯವನ್ನು ಮಾತ್ರ ಮಾಡಿಕೊಡುತ್ತದೆ. ವಿದ್ವಾಂಸರು ಕರ್ನಾಟಕದ ಬೇಡರು ಪಶುಪಾಲನೆ ಮಾಡುತ್ತಾ ವಲಸೆ ಬಂದವರು ಮತ್ತು ದ್ರಾವಿಡ ಮೂಲದವರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಚಿತ್ರಲಿಂಗಯ್ಯ.ಎಂ.ವಿ. ಅವರು ತಮ್ಮ 'ನಾಯಕ ಜನಾಂಗದ ನಿಜ ನಿಷ್ಪತ್ತಿ'(ಇತಿಹಾಸ ಚಂದ್ರಿಕೆ)ಯ ಕುರಿತು ಚರ್ಚೆ ಮಾಡುತ್ತಾ ನಾಯಕ ಎಂಬ ಪದ ೯ನೆಯ ಶತಮಾನದಿಂದಲೇ ಕಂಡುಬರುತ್ತದೆ ಎಂದು ಹೇಳಿರುವರು. ಮಹಾಕಾವ್ಯಗಳಲ್ಲಿ, ಪುರಾಣಗಳಲ್ಲಿ ಬೇಡರ ಕಥೆಗಳು ಬರುವುದರಿಂದ ಢಂಗ ಅವರು ನಾಯಕರು ವೇದಗಳ ಕಾಲದಲ್ಲಿ ಇದ್ದಂತಹ ಜನ ಎಂದು ನಂಬಿರಬೇಕು.

ಎಂ.ಜಿ.ಈಶ್ವರಪ್ಪ ಅವರು 'ಮ್ಯಾಸಬೇಡರು'(೧೯೮೨) ಎಂಬ ಕಿರುಪುಸ್ತಕವನ್ನು ಪ್ರಕಟಿಸಿದ್ದಾರೆ. ಕೃತಿಯಲ್ಲಿ ಸಂಕ್ಷಿಪ್ತವಾಗಿ ಮ್ಯಾಸಬೇಡರ ಪದನಿಷ್ಪತ್ತಿ, ಅವರ ದೈವಾರಾಧನೆ, ವೇಷ-ಭೂಷಣ, ವಾಸದ ನೆಲೆ, ಕುಟುಂಬ ಪದ್ಧತಿ, ಸಾಂಪ್ರದಾಯಿಕ ನಂಬಿಕೆಗಳು, ಹುಟ್ಟು-ಸಾವಿನ ವಿವರ, ಹಬ್ಬ-ಹರಿದಿನ, ನ್ಯಾಯ ತೀರ್ಮಾನ ಇವುಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ.

ಇಷ್ಟೇ ಅಲ್ಲದೇ ಅವರ ಪುಸ್ತಕಗಳಲ್ಲಿ ಹಾಗೂ ಲೇಖನಗಳಲ್ಲಿ ಬೇಡರ ಕುರಿತು ಪರೋಕ್ಷ ಮಾಹಿತಿ ದೊರೆಯುತ್ತದೆ. ಶೆಕ್ಕಿರಳ್‌ನ 'ಪೆರಿಯ ಪುರಾಣ'ದಲ್ಲಿ ಕಾಳಹಸ್ತಿಯ ನಾಡಿನಲ್ಲಿ ವಾಸವಾಗಿದ್ದ ಬೇಡರ ವಿವರಣೆ ಇದೆ. ಬೇಟೆಗಾರನಾದ ಬೇಡರ ಕಣ್ಣಪ್ಪನು ಶಿವಭಕ್ತನಾದ ಕಥೆ ಇಲ್ಲಿ ದೊರೆಯುತ್ತದೆ. ೧೯೨೪ರಲ್ಲಿ ಎಂ.ಎಸ್.ಪುಟ್ಟಣ್ಣನವರ 'ಪಾಳೆಯಗಾರರು' ಎಂಬ ಕೃತಿಯಿಂದ ವಿಜಯನಗರ ಸೈನ್ಯಕ್ಕೆ ಬೇಡ ಸೈನಿಕರು ಬಂದ ಉಲ್ಲೇಖ ದೊರೆಯುತ್ತದೆ. 'ಚಿತ್ರದುರ್ಗ ಪಾಳೆಯಗಾರರು'

ಎಂಬ ಗ್ರಂಥದಲ್ಲಿ ಬೇಡರು ಹಂಪೆಯ ಮೂಲಕ ಚಿತ್ರದುರ್ಗಕ್ಕೆ ಬಂದ ಕಥೆ ದೊರೆಯುತ್ತದೆ. ಕಪಟರಾಳ ಕೃಷ್ಣರಾವ್ ಅವರ 'ಸುರಪುರ ಸಂಸ್ಥಾನದ ಇತಿಹಾಸ'ದಲ್ಲಿ ಅರಸರು ದಕ್ಷಿಣದಿಂದ ಬಂದ ಕಥೆಯನ್ನು ಕೊಟ್ಟಿದ್ದಾರೆ.

ವೆಂಕಟರತ್ನ, ಎ.ವಿ. ಅವರ 'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳಿಯ ಸರ್ಕಾರ' ಎಂಬ ಗ್ರಂಥದಲ್ಲಿ ವಿಜತಯನಗರದ ಆಳ್ವಿಕೆಯ ಸಮಯದಲ್ಲಿ ಬೇಡರ ಸ್ಥಳೀಯ ಆಡಳಿತದ ದಾಖಲೆ ದೊರೆಯುತ್ತದೆ. ಹಾಗೂ ಕ್ಯಾತನಹಳ್ಳಿ ರಾಮಣ್ಣ ಅವರ ಫ್ಲೀಟರು ಸಂಗ್ರಹಿಸಿದ 'ಐದು ಲಾವಣಿಗಳು' ಕೃತಿಯಲ್ಲಿ ಹಲಗಲಿ ಬೇಡರ ಲಾವಣಿಯು ಇವರ ಸಾಹಸ, ಧೈರ್ಯ ಮುಂತಾದವುಗಳನ್ನು ಚಿತ್ರಲಿಂಗಯ್ಯ.ಎಂ.ವಿ. ಅವರ ಲೇಖನಗಳು ನಾಯಕ ಸಮುದಾಯದ, ಅವರ ಬೆಡಗಿನ ಅವರ ಸಪ್ತಮಾತೃಕೆ ಮತ್ತು ಪೋತರಾಜನ ಆರಾಧನೆ ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಇವರ ವಾಲ್ಮೀಕಿ ಸಂದೇಶ ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾದ 'ನಾಯಕನಹಟ್ಟಿ ಬಖೈರು: ಕೆಲವು ಟಿಪ್ಪಣಿಗಳು' ಬಹುಮುಖ್ಯವಾದ ಆಧಾರ ಗ್ರಂಥವಾಗಿದೆ. ಹಾಗೆಯೇ ಲಕ್ಷಣ ತೆಲಗಾವಿ ಅವರ ಚಂದ್ರವಳ್ಳಿ ಮತ್ತು ಇತಿಹಾಸ ದರ್ಶನದಲ್ಲಿ ಪ್ರಕಟಿತವಾದ ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಲೇಖನಗಳು, ಇಪ್ಪತ್ತೇಳು ಪಾಳೆಯಗಾರರು, ಚಿತ್ರದುರ್ಗ ನಾಯಕ ಅರಸರ ರಾಜಕೀಯ ಚಿತ್ರ ಮುಂತಾದ ಹಲವು ಕೃತಿಗಳು ನಾಯಕ ಬುಡಕಟ್ಟಿನ ಮೇಲೆ ಬೆಳಕು ಚೆಲ್ಲುತ್ತದೆ. ಜೊತೆಗೆ ಸರ್ಕಾರ ಮೀಸಲಾತಿ ಹೊರತಂದ ಹಾವನೂರು ವೆಂಕಟಸ್ವಾಮಿ ವರದಿ ಮತ್ತು ಚಿನ್ನಪ್ಪರೆಡ್ಡಿ ಆಯೋಗದ ವರದಿಗಳು, ಗೆಝಟಿಯರ್‌ಗಳು, ಜನಸಂಖ್ಯಾ ವರದಿಗಳು ಹಾಗೂ ಅಖಿಲ ಕರ್ನಾಟಕ ನಾಯಕ ಸಂಘವು ಹೊರತಂದ ಹೊತ್ತಿಗೆಗಳು ಬೇಡರ ಜನಸಂಖ್ಯೆ, ಅವರ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸ್ಥಾನಮಾನ, ಅವರು ಪಡೆಯುತ್ತಿರುವ ಸೌಲಭ್ಯ ಇತ್ಯಾದಿಗಳ ಬಗ್ಗೆ ವಿವರಗಳನ್ನು ಒಳಗೊಂಡಿದೆ.

ಚಾರಿತ್ರಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಿ ನೋಡಿದವರಲ್ಲಿ ವೀರೂಪಾಕ್ಷಿ ಪೂಜಾರಹಳ್ಳಿ ಅವರು ಪ್ರಮುಖರು. ಚಿತ್ರದುರ್ಗ ಜಿಲ್ಲೆಯಲ್ಲಿರುವ ಬುಡಕಟ್ಟು ಸಮುದಾಯಗಳ ಪೈಕಿ ಪ್ರಮುಖ ಬುಡಕಟ್ಟು ಸಮುದಾಯವಾದ ಮ್ಯಾಸಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಾಂಸ್ಕೃತಿಕ ವಿವರಗಳನ್ನು ದಾಖಲಿಸಿದ್ದಾರೆ. ಈ ಸಮುದಾಯದ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಈಗಾಗಲೇ ಕೆಲವು ಕೃತಿಗಳು ಪ್ರಕಟವಾಗಿದ್ದರೂ ಬುಡಕಟ್ಟಿನ ವಿವರಗಳನ್ನು ಮತ್ತು ಜಿಲ್ಲೆಯಲ್ಲಿರುವ ಆರಾಧನಾ ನೆಲೆಗಳು ಮತ್ತು ಆ ಕಾರಣದಿಂದಾಗಿ ಹುಟ್ಟಿಕೊಂಡ ಸಾಂಸ್ಕೃತಿಕ ನಡಳಿಕೆಗಳನ್ನು ವಿವರಗಳನ್ನು ದಾಖಲಿಸಿದ್ದಾರೆ. ಜಿಲ್ಲೆಯ ಪ್ರಮುಖ ಐತಿಹಾಸಿಕ ಸ್ಥಳಗಳನ್ನು ಮತ್ತು ಆ ಸ್ಥಳಗಳ ಕಥೆಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ.

ಕರಿಶೆಟ್ಟಿ ರುದ್ರಪ್ಪನವರು ಈ ಸಮುದಾಯದ ಸಾಂಸ್ಕೃತಿಕ ವಿವರಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಮಾಡಿ ಮೇಲ್ಪದರದ ವಿವರಗಳನ್ನು ತಮ್ಮ 'ಮ್ಯಾಸನಾಯಕರು ಒಂದು ಜನಾಂಗಿಕ

ಅಧ್ಯಯನ' ಕೃತಿಯಲ್ಲಿ ತಿಳಿಸಿದ್ದಾರೆ. ಊರನಾಯಕರ ಮತ್ತು ಮ್ಯಾಸನಾಯಕರ ನಡುವಿನ ವೈವಿಧ್ಯತೆ ಸಾಮ್ಯತೆಗಳನ್ನು ತೌಲನಿಕವಾಗಿ ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಈ ವಿಷಯ ಕುರಿತು ಎಂ.ಪಿ.ವೀಣಾ ಎಂಬುವವರು ಎಂ.ಫಿಲ್ ಮಾಡಿದ್ದಾರೆ. ಡಾ.ವಿರೂಪಾಕ್ಷಿ ಪೂಜಾರಳ್ಳಿ ಅವರು ೨೦೦೭ರಲ್ಲಿ ಬೇಟೆ ಮತ್ತು ಬೇಡರು ಎಂಬ ಕೃತಿಯಲ್ಲಿ ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ 'ಬೇಟೆ ಮತ್ತು ಬೇಡ' ಸಮೂಹದ ಐತಿಹಾಸಿಕ ವಿವರಗಳ ಅಮೂಲಾಗ್ರ ಮಾಹಿತಿಯನ್ನು ಕಟ್ಟಿಕೊಟ್ಟಿದ್ದಾರೆ. ಇದರಲ್ಲಿ ಬೇಟೆಯ ಚಾರಿತ್ರಿಕ ಪರಿಕಲ್ಪನೆ, ಬೇಡ ಬುಡಕಟ್ಟಿನ ಚಾರಿತ್ರಿಕ ಹಿನ್ನೆಲೆ, ಕನ್ನಡ ಕಾವ್ಯ ಮತ್ತು ಸಮಕಾಲೀನ ಗ್ರಂಥಗಳಲ್ಲಿ ಬೇಟೆಯ ಪ್ರಸ್ತಾಪ ಮುಂತಾದ ವಿವರಗಳ ಬಗ್ಗೆ ಹೆಚ್ಚು ಮಾಹಿತಿಯನ್ನು ಒದಗಿಸಿದ್ದಾರೆ. ವೀರೂಪಾಕ್ಷಿ ಪೂಜಾರಳ್ಳಿಯವರು ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠದ ಸಂಚಾಲಕರಾಗಿದ್ದ ಸಮಯದಲ್ಲಿ ಕೈಗೊಂಡ ಯೋಜನೆಗಳು ಬೇಡ ಸಮುದಾಯದ ಅಧ್ಯಯನಕ್ಕೆ ಮಹತ್ವದ ಕೊಡುಗೆಗಳಾಗಿವೆ. ಕಾಮಗೇತ ವಂಶಜರ ಚರಿತ್ರೆ, ಕರ್ನಾಟಕದಲ್ಲಿ ತಳವಾರಿಕೆ, ವಾಲ್ಮೀಕಿ ಸಮುದಾಯದ ಪ್ರಾತಃ ಸ್ಮರಣೀಯರು, ತರೀಕೆರೆ ಪಾಳೆಯಗಾರರ ಸರ್ಜಪ್ಪನಾಯಕನ ಕಥನ ಕಾವ್ಯ ಮುಂತಾದ ಕೃತಿಗಳು ಬೇಡ ಸಮುದಾಯದ ಭಿನ್ನ ಗುರುತುಗಳನ್ನು ಹುಡುಕಲು ಯತ್ನಿಸಿವೆ.

ಸಿ.ಬಿ.ಅನ್ನಪೂರ್ಣಮ್ಮನವರು ತಮ್ಮ 'ಮ್ಯಾಸನಾಯಕರ ಸಾಂಸ್ಕೃತಿಕ ನಾಯಕಿಯರು' ಎಂಬ ಸಂಶೋಧನಾ ಪ್ರಬಂಧದಲ್ಲಿ ಸಾಂಸ್ಕೃತಿಕ ನಾಯಕಿಯರ ಬಗ್ಗೆ ವಿವರಿಸಿದ್ದಾರೆ. ದೇವರ ಕುರಿ ಓಬಯ್ಯನವರ ಸಂಶೋಧನಾ ಪ್ರಬಂಧದಲ್ಲಿ ಮ್ಯಾಸಬೇಡರ ಆತ್ಮಕಥನದಲ್ಲಿ ಭಾಷಿಕ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಬೇಡ ಬುಡಕಟ್ಟಿನ ಬಗ್ಗೆ ಕಳೆದ ಎರಡು ಶತಮಾನಗಳಿಂದ ಅಧ್ಯಯನಗಳಾಗಿವೆ. ಅದರಲ್ಲಿ ಪ್ರಮುಖರನ್ನು ಇಲ್ಲಿ ಸ್ಮರಿಸಬಹುದು. ಸೈಯ್ಯದ್ ಸಿರಾಜ್, ಉಲ್‌ಹಸನ್, ಹುಲ್ಲೂರು ಶ್ರೀನಿವಾಸ ಜೋಯಿಸ, ಅಬ್ದುಲ್ ಸತ್ತಾರ್, ಮೀರಾಸಾಬಿಹಳ್ಳಿ ಶಿವಣ್ಣ, ಎ.ಎಸ್.ಪ್ರಭಾಕರ, ಬಿ.ರಾಜಶೇಖರಪ್ಪ, ಜಿ.ವರದರಾಜರಾವ್, ಕುಂಬಾ ಸದಾಶಿವಪ್ಪ, ಸಂತೇಬೆನ್ನೂರು ಸುಮತೀಂದ್ರ ನಾಡಿಗ, ಬಿ.ಆರ್.ತುಬಾಕಿ, ಹೆಚ್.ಜೆ.ಲಕ್ಕಪ್ಪಗೌಡ, ಬಾಗೂರು ಆರ್ ನಾಗರಾಜಪ್ಪ, ರಂಗರಾಜವನದುರ್ಗ, ಆರ್.ವೈ.ನಾಯಕ್, ಎಸ್.ಬಿ.ತಿಪ್ಪನಾಯಕ, ಎನ್.ಪಿ.ತಿಪ್ಪೇಸ್ವಾಮಿ, ಎನ್.ಟಿ.ಎರ್ರಿಸ್ವಾಮಿ ಮುಂತಾದವರು ಬೇಡರನ್ನು ಕುರಿತು ಲೇಖನಗಳನ್ನು, ಕೃತಿಗಳನ್ನು, ಸಂಶೋಧನಾ ಪ್ರಬಂಧಗಳನ್ನು ಬರೆದಿರುವರು. ಇವುಗಳ ಸಹಾಯದಿಂದ ಸಮಕಾಲೀನ ಇತಿಹಾಸವನ್ನು ಅಧ್ಯಯನ ಮಾಡಬಹುದಾಗಿದೆ. ಇಷ್ಟೆಲ್ಲಾ ಅಧ್ಯಯನಗಳು ನಡೆದಿದ್ದರೂ ಅವುಗಳು ಮಾನವಶಾಸ್ತ್ರ, ಜಾನಪದದ ಹಿನ್ನೆಲೆಯಲ್ಲಿ ನಡೆದಿವೆ. ಆದರೂ ಸಹ ಆಳವಾದ ಅಧ್ಯಯನದ ಅವಶ್ಯಕತೆ ಇದೆ. ಮನೆಯಲ್ಲಿರುವ ಕುರಿ, ದನ ಇತರೆ ಸಮಸ್ತ ಸಂಪತ್ತನ್ನು ಹಟ್ಟಿ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಹಟ್ಟಿಗಳ ಮೂಲಕ ಅವರ ವಾಸದ ನೆಲೆ ಸಮಾಜ ಸಂಸ್ಕೃತಿಯನ್ನು ಕುರಿತು ಚಾರಿತ್ರಿಕವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನವಾಗಿದೆ.

* * * *

ಅಧ್ಯಾಯ : ಎರಡು

ಮ್ಯಾಸಬೇಡ ಸಮುದಾಯ ಮತ್ತು ಮಹಿಳೆ

೨.೧ ಮ್ಯಾಸಬೇಡ ಸಮುದಾಯದ ಸ್ಥೂಲ ಪರಿಕಲ್ಪನೆ
೨.೨ ಮ್ಯಾಸಬೇಡ ಪದ ನಿಷ್ಪತ್ತಿ
೨.೩ ಬೆಡಗುಗಳಲ್ಲಿ ಮಹಿಳೆ

ಅಧ್ಯಾಯ : ಎರಡು

ಮ್ಯಾಸಬೇಡ ಸಮುದಾಯ ಮತ್ತು ಮಹಿಳೆ

೨.೧ ಮ್ಯಾಸಬೇಡರ ಸಮುದಾಯದ ಸ್ಥೂಲ ಪರಿಚಯ:

ಬೇಡ ಸಮುದಾಯದಲ್ಲಿ ಪ್ರಮುಖವಾಗಿ ಎರಡು ಪಂಗಡಗಳು ಕಂಡುಬರುತ್ತವೆ. ಅವುಗಳೆಂದರೆ, ಊರುಬೇಡ ಮತ್ತು ಮ್ಯಾಸಬೇಡ. ಬುಡಕಟ್ಟು ವಾಸಿಯಾದ ಮ್ಯಾಸಬೇಡರನ್ನು ಮ್ಯಾಸನಾಯಕ, ಅಡವಿಬೇಡ ಎಂದು ಕರೆಯಲಾಗುವುದು. ಹೆಸರುಗಳೇ ಸೂಚಿಸುವಂತೆ ಊರಿನಲ್ಲಿ ವಾಸ ಮಾಡುವವರನ್ನು ಊರುಬೇಡರೆಂದೂ, ಊರ ಹೊರಗೆ ಪ್ರತ್ಯೇಕವಾಗಿ ಅಥವಾ ಅರಣ್ಯ ವಾಸಿಗಳನ್ನು ಮ್ಯಾಸಬೇಡ ಅಥವಾ ಅಡವಿಬೇಡ ಎಂಬುದಾಗಿ ಕರೆಯಲಾಗುತ್ತದೆ. ಮ್ಯಾಸಬೇಡರು ತುಂಬಾ ಆಚಾರ, ವಿಚಾರ, ಸಂಪ್ರದಾಯಗಳನ್ನು ಅನುಸರಿಸುವವರಾದ್ದರಿಂದ ಇವರು ಪ್ರತ್ಯೇಕವಾದ ಜೀವನ ಕ್ರಮವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಇವರನ್ನು ಅಡವಿ ಮ್ಯಾಸರು ಎಂಬುದಾಗಿಯೂ ಕರೆಯಲಾಗುತ್ತದೆ. ಎಲ್ಲಿ ಕೋಳಿಗಳು ಕಾಣಿಸುವುದಿಲ್ಲವೋ ಅಲ್ಲಿ ಮ್ಯಾಸಬೇಡರು ಇದ್ದಾರೆ ಎಂದರ್ಥ.

ಮ್ಯಾಸಬೇಡ ಬುಡಕಟ್ಟು ಇತರೆ ಸಮುದಾಯದಂತೆ ಕಂಡುಬಂದರೂ ಇವರ ರೂಢಿ–ಸಂಪ್ರದಾಯಗಳು ಭಿನ್ನವಾಗಿವೆ. ಉದಾಹರಣೆಗೆ, ಇವರು ಈಚಲು ಚಾಪೆಯ ಮೇಲೆ, ಈಚಲು ಮರದ ಕೆಳಗೆ ಕುಳಿತುಕೊಳ್ಳುವುದಿಲ್ಲ. ಕೋಳಿ ತಿನ್ನುವುದಿಲ್ಲ. ಅಲ್ಲದೇ ಕೋಳಿ ಕೂಗುವ ಊರುಗಳಲ್ಲಿ ವಾಸಿಸುವುದಿಲ್ಲ. ಸಾರಾಯಿ, ಹೆಂಡಕ್ಕೆ ಬಲಿಯಾದ ವ್ಯಕ್ತಿಯನ್ನು ಹಟ್ಟಿ ಮತ್ತು ತಮ್ಮ ಕುಲದಿಂದ ಹೊರಹಾಕುತ್ತಿದ್ದರು. ಒಬ್ಬ ಹೆಣ್ಣು ಹಾದರ ಮಾಡಿದರೆ ಅಥವಾ ಪರಸ್ತ್ರೀಯನ್ನು ಅಪಹರಿಸಿದ ವ್ಯಕ್ತಿಗಳಿಗೆ ಶಿಕ್ಷೆ ಕಠಿಣ ವಿಧಿಸುತ್ತಿದ್ದರು. ಕೆಲವು ಸಲ ಜಾತಿ ಬಾಹಿರರಾಗುತ್ತಿದ್ದರು. ಬೇಡನಿಗೆ ಯಾರಾದರೂ ಮೆಟ್ಟಿನಿಂದ ಹೊಡೆದರೆ, ಅವರ ದೇವರ ಕಟ್ಟೆಮನೆಗೆ ಹೋಗಿ ದೇವರೆತ್ತುಗಳ ರೂಪದಲ್ಲಿ ನೀರು ಹಾಕಿಸಿಕೊಂಡು ಕುಲಕ್ಕೆ ಸೇರಿಸಿಕೊಳ್ಳುತ್ತಾರೆ. ನಾಯಿ ಕಡಿದರೂ ಸಹ ಇಂತಹ ನಿಯಮಗಳಿಗೆ ಒಳಗಾಗಬೇಕಾಗುತ್ತದೆ. ಇದು ಪೂಜಾರಿಗಳಿಗಷ್ಟೇ ಇಂದು ಸೀಮಿತವಾಗಿದೆ. ಪೂಜಾರಿ, ದಾಸಯ್ಯ, ಗೌಡ, ಯಜಮಾನ, ಗೊಂಚಿಕಾರ ಮೊದಲಾದ ಜಾತಿ ಸಂಘಟನೆಯ ಹುದ್ದೆಗಳಲ್ಲಿದ್ದವರನ್ನು ಕುಲಕೆಡಿಸಿದ ವ್ಯಕ್ತಿಗೆ ಉಗ್ರ ಶಿಕ್ಷೆ ಇತ್ತು.

ಊರಿನಲ್ಲಿ ವಾಸ ಮಾಡುವವರು ಊರುಬೇಡ ಎಂದಾದರೆ, 'ಮ್ಯಾಸಬೇಡ' ಎಂಬುದರಲ್ಲಿ ಮ್ಯಾಸ ಎನ್ನುವ ಶಬ್ದ ವಿಚಾರಣೀಯ. ಕೆಲವೊಮ್ಮೆ ಮ್ಯಾಸಬೇಡರು, ಮ್ಯಾಸನಾಯಕರು ಎಂದು ಕರೆದುಕೊಳ್ಳದೆ 'ನೀವು ಯಾವ ಜನ?' ಎಂದರೆ 'ಮ್ಯಾಸರು' ಎನ್ನುತ್ತಾರೆ. ಈ ಜನಾಂಗದ ಕೆಲವರು ವಿಜಯನಗರ ಸಾಮ್ರಾಜ್ಯದಲ್ಲಿ ಮೀಸಲು ಪಡೆಯ ನಾಯಕರಾಗಿದ್ದುದರಿಂದ ನಾಯಕರು, ಮ್ಯಾಸನಾಯಕರು ಎಂದಾಗಿದೆ ಎನ್ನುತ್ತಾರೆ. ಕೆಲವು ಐತಿಹ್ಯಗಳ ಪ್ರಕಾರ ಇವರು ಪಶುಪಾಲನೆ ಮಾಡುತ್ತಿದ್ದರೆಂದೂ ಇವರು ಶ್ರೀಶೈಲದ ಕಡೆಗಳಿಂದ ಪಶುಗಳನ್ನು ಮೇಯಿಸಿಕೊಳ್ಳುತ್ತಾ ಕರ್ನಾಟಕದ ಕಡೆಗೆ ಬಂದರೆಂದು ತಿಳಿಯುತ್ತದೆ. ಹಿಂದೆ ಒಬ್ಬ ಮುಂದೆ ಒಬ್ಬ ಇದ್ದದು, ಹಿಂದಿನವನು ಆಕಳ ಕರುವಿನ ಕಾಲು ಮುರಿದು ತಿನ್ನಲು ಶುರುಮಾಡಿದನಂತೆ. ಅದಕ್ಕೆ ಮುಂದಿದ್ದವನು "ನೀನು ಗೋಮಾಂಸ ತಿಂದೆ ನೀನು ಬ್ಯಾಡ" ಎಂದು ಅವನನ್ನು ಬಿಟ್ಟು ಮುಂದೆ ಬಂದನಂತೆ. ಮುಂದೆ ಬಂದವನು 'ಕಾಡುಗೊಲ್ಲ' ಆದ. ಹಿಂದೆ ಉಳಿದವನು 'ಮ್ಯಾಸಬ್ಯಾಡ' ಆದನಂತೆ. ಕಾಡುಗೊಲ್ಲರ ಬಗ್ಗೆ ನಾವು ಈಗಾಗಲೇ ತಿಳಿದಿರುವಂತೆ ಮೇಯಿಸುವವರು> ಮೇಸುವವರು> ಮ್ಯಾಸರು ಎಂದಾಗಿರುವ ಸಾಧ್ಯತೆಗಳಿವೆ. "ಕಾರಣಾಂತರಗಳಿಂದ ಕಾಡಿನಲ್ಲಿ ಸೇರಿಕೊಂಡು ಅಲೆಮಾರಿಗಳಂತಿದ್ದ ಈ ಜನರಲ್ಲಿ ಕೆಲವರು ಊರು, ರಾಜ್ಯಗಳನ್ನು ಕಟ್ಟಿ ಆಳುತ್ತಿದ್ದರೆ ಅವರಿಗೆ ಸಹಾಯಕರಾಗಿ ದೇವತಾಪೂಜೆ ಮಾಡಿಕೊಂಡು ದೇವರ ನೈವೇದ್ಯಕ್ಕೆ ಮೊಸರು, ಹಾಲು ತರುವ ಉದ್ದಿಶ್ಯ ಬೇರೆ ಹಟ್ಟಿಗಳನ್ನು ಕಟ್ಟಿಕೊಂಡು ಗೋಪಾಲಕರಾಗಿ ಯಾದವರೆನಿಸಿಕೊಂಡು ಮೀಸಲು ನಾಯಕರೆಂತಲೂ, ಕ್ರಮೇಣ ಶಬ್ದ ರೂಪಾಂತರದಿಂದ ಮ್ಯಾಸನಾಯಕರೆಂತಲೂ ಕರೆಯಿಸಿಕೊಂಡಿದ್ದಾರೆ."[೧] ಹೀಗೆ ಮ್ಯಾಸಬೇಡರು ದೇವತಾಕಾರ್ಯಗಳಿಗೆ ಬೇಕಾಗುವ ಮೀಸಲು ಹಾಲು ಮೊಸರುಗಳನ್ನು ಒದಗಿಸಿಕೊಂಡು ವೃತ್ತಿಯ ಆಧಾರದ ಮೇಲೆ ಇವರಿಗೆ 'ಮೀಸಲು ಬೇಡರು' ಎಂದು ಕರೆಯುತ್ತಾರೆ.

ಮ್ಯಾಸಬೇಡರು ಹೆಚ್ಚಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಇವರ ಗುಡಿಕಟ್ಟುಗಳು, ಕಟ್ಟೆಮನೆಗಳು ಹೆಚ್ಚಾಗಿ ಇರುವುದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕಿನಲ್ಲಿ. ಈ ತಾಲೂಕುಗಳಲ್ಲಿರುವ ಜನರ ಮನೆಯಲ್ಲಿ ಮಾತನಾಡುವುದು ತೆಲುಗು. ಚಿತ್ರದುರ್ಗ, ದಾವಣಗೆರೆ ತಾಲೂಕುಗಳಲ್ಲಿ ವಾಸಮಾಡುವ ಜನರಿಗೆ ತೆಲುಗು ಮರೆತುಹೋಗಿದ್ದರೂ ಅರ್ಥವಾಗುತ್ತದೆ ಎನ್ನುವುದನ್ನು ಗಮನಿಸಿದರೆ ಈ ಜನಾಂಗದವರು ಆಂಧ್ರ ಪ್ರದೇಶದ ಕಡೆಯಿಂದ ಬಂದವರಿರಬೇಕು ಎನಿಸುತ್ತದೆ. ಈ ಮಾತಿಗೆ ಇವರ ಕೆಲವು ಐತಿಹ್ಯಗಳು ಸಮರ್ಥನೆ ನೀಡುತ್ತವೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿಯೂ ಇವರು ಹೆಚ್ಚಾಗಿ ಕಂಡುಬರುತ್ತಾರೆ. ಮ್ಯಾಸಬೇಡರಲ್ಲಿಯೇ ಊರುಮ್ಯಾಸ, ಅಡವಿಮ್ಯಾಸ ಮತ್ತು ಮುಂಜಿಮ್ಯಾಸ ಎಂಬ ಮೂರು ಪ್ರಭೇದಗಳಿವೆ. ಚಿತ್ರದುರ್ಗದ ಪಾಳೆಯಗಾರನಾದ ಮದಕರಿನಾಯಕ ಮ್ಯಾಸ ನಾಯಕನಾದವನು (ಕಾಮಗೇತಿ ಕುಲ) ಎಂದು ಹೆಮ್ಮೆಪಡುತ್ತಾರೆ.

ಬುಡಕಟ್ಟಿನ ಸಮಾಜ ಮತ್ತು ಸಂಸ್ಕೃತಿಗಳು ಜೀವನಶೈಲಿಯ ವೈವಿಧ್ಯತೆಯನ್ನು ಉಳಿಸಿಕೊಂಡಿವೆ. ಇವರ ಸಂಸ್ಕೃತಿಯಲ್ಲಿ ಹೆಚ್ಚಿನದಾಗಿ ಆದೀನ ಸಮುದಾಯದ ಕನಸು ಮತ್ತು ಸ್ಮೃತಿಗಳನ್ನು

ಕಾಣುತ್ತೇವೆ. ಇವರ ಸ್ಮೃತಿಗಳು ಯುಗ-ಯುಗಗಳನ್ನು ದಾಖಲಿಸುತ್ತೇವೆ. ಸಮಷ್ಟಿಪ್ರಜ್ಞೆಯನ್ನು ತನ್ನ ಒಡಲೊಳಗೆ ಇಟ್ಟುಕೊಂಡಿರುವಂತಹ ಬುಡಕಟ್ಟಿನ ಸಮೂಹದಲ್ಲಿ ವಿಸ್ಮಯವಾದ ಸಾಂಸ್ಕೃತಿಕ ಅನನ್ಯತೆಯನ್ನು ನೋಡುತ್ತೇವೆ. ಇಲ್ಲಿನ ವ್ಯಕ್ತಿ– ಮಹಿಳೆ– ಸಮಾಜ– ಸಂಸ್ಕೃತಿ– ಪ್ರಕೃತಿ ಇವೆಲ್ಲವೂ ಒಂದಕ್ಕೊಂದು ಪೂರಕವಾಗಿ ಬೆರೆತು ಪಾರಂಪರಿಕ ಜೀವನ ಮೌಲ್ಯಗಳನ್ನು ಗಟ್ಟಿಮಾಡಿವೆ. ಇಂತಹ ಅಪ್ಯಾಯಮಾನವಾದ ಬುಡಕಟ್ಟು ಸಂಸ್ಕೃತಿಯಲ್ಲಿ ಮಣ್ಣಿನ ವಾಸನೆ ಸಿದ್ಧಿಯಾಗಿದೆ. ಹಾಗಾಗಿ ಜಾಗತಿಕ ಮಟ್ಟದಲ್ಲಿ ಮತ್ತು ಭಾರತೀಯ ಬುಡಕಟ್ಟಿನ ಜನರಿಗೂ ಅವರವರ ಸಂಸ್ಕೃತಿಯಲ್ಲಿ ಸಾಕಷ್ಟು ಸಾಮ್ಯತೆ ಕಾಣುತ್ತೇವೆ. ಇವೆರಡೂ ಸಂಸ್ಕೃತಿಯ ಜನರ ಬಹುರೂಪಿತನ ಸಂಸ್ಕೃತಿ ಉಳಿವೆಗೆ ಸಹಕಾರಿಯಾಗಿದೆ. ಜೊತೆಗೆ ಅದು ಬುಡಕಟ್ಟು ಜನರ ಅಂತರ್ಯದಲ್ಲಿ ಕ್ರಿಯಾಶೀಲವಾಗಿ ಚಾಲ್ತಿಯಲ್ಲಿದೆ. ಆದ್ದರಿಂದಲೇ ಭಾರತೀಯ ಸಂಸ್ಕೃತಿಯಲ್ಲಿ ಅಸಂಖ್ಯಾತ ಬುಡಕಟ್ಟು ಸಂಸ್ಕೃತಿಗಳು ವಿಶಿಷ್ಟ ಶೈಲಿಯಲ್ಲಿ ರೂಪುಗೊಂಡಿರುತ್ತವೆ. ಇಲ್ಲಿನ ಪ್ರತಿಯೊಂದು ಸಮುದಾಯಗಳ ಜೀವನಶೈಲಿ, ಮೂಢನಂಬಿಕೆ, ಆಚಾರ– ವಿಚಾರ, ಸಂಪ್ರದಾಯ, ವಿಧಿ ನಿಯಮ, ವೃತ್ತಿ, ಕಾನೂನು ಕಟ್ಟಳೆ, ನಡೆ ನುಡಿ, ಭಾಷೆ ಹೀಗೆ ಇನ್ನಿತರ ಆಚರಣೆಗಳಲ್ಲಿ ವಿಸ್ಮಯ ಲೋಕವನ್ನೇ ನೋಡುತ್ತೇವೆ. ಇಂತಹ ವಿಸ್ಮಯ ಲೋಕದ ಸಂಸ್ಕೃತಿಯ ಅಧ್ಯಯನವನ್ನು ಕೈಗೊಳ್ಳುವುದರಿಂದ ಸಮಾಜದ ಒಳನೋಟಗಳು ನಮ್ಮ ತಿಳುವಳಿಕೆಗೆ ಬರುತ್ತವೆ. ಆದ್ದರಿಂದಲೇ ಭಾರತವನ್ನು ಆಳಲು ಬಂದ ಬ್ರಿಟಿಷರು ಇಲ್ಲಿನ ಬುಡಕಟ್ಟು ಜನರ ಸಂಸ್ಕೃತಿಯನ್ನು ಅಧ್ಯಯನ ಮಾಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಪೆರಿಯರ್, ಎಲ್ವಿನ್‌ರಂತಹ ಸಂಶೋಧಕರು ಭಾರತದ ಬುಡಕಟ್ಟುಗಳ ಬಗ್ಗೆ ಅದ್ಯಯನ ಕೈಗೊಂಡು ಅವರ ಉದ್ಧಾರಕ್ಕಾಗಿ ತಮ್ಮನ್ನು ಸಂಪೂರ್ಣ ಅರ್ಪಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಬೇಡರು ಮುಖ್ಯವಾಗಿ ರಾಯಚೂರು, ಗುಲ್ಬರ್ಗಾ, ಬೆಳಗಾವಿ, ಧಾರವಾಡ, ಬಳ್ಳಾರಿ, ಶಿವಮೊಗ್ಗ, ತುಮಕೂರು, ಮೈಸೂರು, ಚಾಮರಾಜನಗರ, ದಾವಣಗೆರೆ, ಕೋಲಾರ, ಚಿತ್ರದುರ್ಗ ಇನ್ನೂ ಮುಂತಾದ ಜಿಲ್ಲೆಗಳಲ್ಲಿ ವಾಸವಾಗಿದ್ದಾರೆ. ಈ ಬೇಡ ಸಮುದಾಯವು ಪ್ರಾದೇಶಿಕವಾಗಿ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಬೇರೆ ಬೇರೆ ಹೆಸರಿನಲ್ಲಿ ನೆಲೆಸಿದ್ದಾರೆ. ಅಂದರೆ ಬೇಡ, ವಾಲ್ಮೀಕಿ, ತಳವಾರ, ನಾಯಕ, ಪಾಳೆಗಾರ, ಮ್ಯಾಸಬೇಡ, ಊರುಬೇಡ ಪರಿವಾರದವರೆಂದು ಗುರುತಿಸಿಕೊಂಡು ತಮ್ಮದೆ ಆದ ಚೌಕಟ್ಟಿನೊಳಗೆ ವಾಸಿಸುತ್ತಾ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಇಷ್ಟೆಲ್ಲಾ ಹೆಸರುಗಳಿಂದ ಗುರುತಿಸಿಕೊಂಡಿರುವ ಈ ಬೇಡ ಜನಾಂಗವು 'ನಾಯಕ' ಎಂಬ ಜಾತಿ ಸೂಚಕ ಪದದಿಂದ ಕರ್ನಾಟಕದಲ್ಲಿ ತನ್ನ ಅಸ್ತಿತ್ವವನ್ನು ಭದ್ರಪಡಿಸಿಕೊಂಡಿದೆ. ಈ ಬೇಡ (ನಾಯಕ)ರು ಹಾವನೂರ ವರದಿ ಪ್ರಕಾರ ಹದಿನೇಳು ಪರ್ಯಾಯ ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿ ಮೀಸಲಾತಿ ಪಡೆಯುತ್ತಿದ್ದಾರೆ. ಹೀಗೆ ಬೇರೆ ಬೇರೆ ಹೆಸರಿನಲ್ಲಿ ಗುರುತಿಸಿಕೊಂಡಿರುವ ಬೇಡ ಜನಾಂಗವು ಸಾಂಸ್ಕೃತಿಕವಾಗಿ ವಿಶಿಷ್ಟ ಸ್ವರೂಪ ಪಡೆದುಕೊಂಡಿದೆ. ಬೇಡರು ಮೂಲದಲ್ಲಿ ಅರಣ್ಯವಾಸಿಗಳಾಗಿದ್ದರು. ಇವರು ಪ್ರಕೃತಿ ಪ್ರೇಮಿಗಳಾಗಿದ್ದರು. ಹಾಗಾಗಿ ಸೂರ್ಯ ಚಂದ್ರನನ್ನು

ಪೂಜಿಸುತ್ತಿದ್ದರು. ಪಶುಪಾಲನೆ ಮತ್ತು ಬೇಟೆಯಾಡುವುದು ಇವರ ಪ್ರಮುಖ ವೃತ್ತಿಯಾಗಿತ್ತು. ಕಾಲಕ್ರಮೇಣ ಇವರು ಸಾಂಸ್ಕೃತಿಕ ಪರಂಪರೆಯೊಳಗೆ ಐತಿಹಾಸಿಕ, ಚಾರಿತ್ರಿಕ ಮತ್ತು ಪೌರಾಣಿಕ ಪುರುಷನನ್ನು ತಮ್ಮ ಜನಾಂಗದವರೆಂದು ತಿಳಿದು ಅವರನ್ನು ದೈವತ್ವದ ನೆಲೆಯಲ್ಲಿ ಪೂಜಿಸುತ್ತಾರೆ. ಅವರಲ್ಲಿ ಮುಖ್ಯವಾಗಿ ವಾಲ್ಮೀಕಿ, ಶಬರಿ, ಏಕಲವ್ಯ, ಬೇಡರ ಕಣ್ಣಪ್ಪ, ಕುಮಾರರಾಮ, ಕಂಪಿಲರಾಮ, ಎಚ್ಚೆಮ್ಮ ನಾಯಕ, ಮದಕರಿನಾಯಕ ಇವರುಗಳು ಕರ್ನಾಟಕದ ಎಲ್ಲಾ ಭಾಗದ ಬೇಡರ ದೇವರುಗಳಾಗಿದ್ದಾರೆ.

ಶಿಷ್ಟ ಸಮಾಜದಲ್ಲಿನ ಇತಿಹಾಸದ ದಾಖಲೆಗಳನ್ನು ಪರಿಶೀಲಿಸಿದಾಗ ಬೇಡರನ್ನು ವಿವಿಧ ರೀತಿಯಲ್ಲಿ ಗುರುತಿಸಿರುವುದು ನಮಗೆ ತಿಳಿಯುತ್ತದೆ. ಕದಂಬರು ಇವರನ್ನು ಬೇಡ ಎಂದು ಗುರುತಿಸಿದರೆ, ಶಾತವಾಹನರು ತಳವಾರ ಎಂದು ಗುರುತಿಸಿದ್ದಾರೆ. ಅದೇರೀತಿ ವಡ್ಡಾರಾಧನೆ ಎಂಬ ಗದ್ಯಕೃತಿಯಲ್ಲಿ 'ತಳವಾರ' ಎಂಬ ಹೆಸರು ಬರುತ್ತದೆ. ಕ್ರಮೇಣ ರಾಷ್ಟ್ರಕೂಟರು 'ನಾಯಕ' ಪದವಿಗೆ ಬಡ್ತಿ ಕೊಟ್ಟಿದ್ದಾರೆ. ಹಾಗೆಯೇ ಮುಂದುವರಿದಂತೆ ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಪ್ರಜೆಗಳು, ಸೈನಿಕರು, ಸೇವಕರು ಹೆಚ್ಚಿನ ಪಾಲು ಬೇಡರೇ ಆಗಿದ್ದರು ಎಂಬ ಮಾಹಿತಿ ನಮಗೆ ಇತಿಹಾಸದಿಂದ ತಿಳಿಯುತ್ತದೆ. ನಂತರ ಹೀಗೆ ಕಾಲಚಕ್ರ ತಿರುಗಿದಂತೆ ಬೇಡರು ಸಾಕಷ್ಟು ಅವಕಾಶಗಳನ್ನು ಪಡೆದುಕೊಂಡರು. ಇವರು ರಾಜಕೀಯ ನಿಪುಣತೆಯನ್ನು ಪಡೆದು ತಮ್ಮದೇ ಆದ ದುರ್ಗ, ಕೋಟೆಗಳನ್ನು ಕಟ್ಟಿ ತಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಂಡರು. ಕಂಪಿಲರಾಮ, ಕುಮಾರರಾಮ, ಹಲಗಲಿಯ ಬೇಡರು, ಸಿಂಧೂರಿನ ಬೇಡರು, ಚಿತ್ರದುರ್ಗದ ನಾಯಕರು ಇನ್ನೂ ಅನೇಕ ಬೇಡ ನಾಯಕರು ಸಾಮ್ರಾಜ್ಯವನ್ನು ಪಾಳಪಟ್ಟಗಳನ್ನು ಕಟ್ಟಿಕೊಂಡು ದೇಶ ಆಳಿದರು.

ಇತ್ತೀಚೆಗೆ ಮಹಿಳೆಯರ ಉಡುಪುಗಳಲ್ಲಿ ಸಾಕಷ್ಟು ಬದಲಾವಣೆಗೊಂಡು ಆಧುನಿಕ ಶೈಲಿಯ ಉಡುಪುಗಳನ್ನು ಸಹಜವಾಗಿಯೇ ಬಳಸುತ್ತಿದ್ದಾರೆ. ಭಾದ್ರಪದ ಮಾಸದಲ್ಲಿ ಮಾರಿ ಹಬ್ಬವನ್ನು, ಯುಗಾದಿ ಹಾಗೂ ವಿಜಯ ದಶಮಿಗಳಂದು ಪಿತೃಪಕ್ಷಗಳನ್ನೂ, ಉಳಿದಂತೆ ಗುಗ್ಗರಿ ಹಬ್ಬ ಮತ್ತು ಎತ್ತಿನ ಹಬ್ಬಗಳನ್ನು ಮಾತ್ರ ಆಚರಿಸುವವರು. ಒಬ್ಬ ಕುಲದೇವರನ್ನು ಮಾತ್ರ ದೇವರೆಂದು ಸ್ವೀಕರಿಸಿ ಅವುಗಳಿಗೆ ನಡೆದುಕೊಳ್ಳುವರು. ಬಿದಿರಿನ ಬುಟ್ಟಿಗಳಲ್ಲಿ ಸಾಲಿಗ್ರಾಮ ಮತ್ತು ಲಿಂಗಗಳನ್ನಿಟ್ಟಿದ್ದು, ಬುಟ್ಟಿಗಳನ್ನು ಯಾವಾಗಲೂ ಮುಚ್ಚಿಟ್ಟಿರುವರು. ಈ ಬುಟ್ಟಿಗಳನ್ನು ದೇವಾಲಯದಲ್ಲಿಟ್ಟು ಯಜಮಾನರುಗಳ ನೇತೃತ್ವದಲ್ಲಿ ಪೂಜಾರಿಗಳು ಪೂಜೆ ಸಲ್ಲಿಸುತ್ತಾರೆ. ವರ್ಷದಲ್ಲಿ ಯಾವುದಾದರೂ ವಿಶೇಷ ಸಂದರ್ಭಗಳಲ್ಲಿ ಈ ಬುಟ್ಟಿಗಳನ್ನು ತೊರೆಗಳ ಬಳಿಗೆ ಒಯ್ಯುತ್ತಾರೆ. ಆಗ ಮಾತ್ರ ಬುಟ್ಟಿಯೊಳಗಿನ ಸಾಲಿಗ್ರಾಮ ಮತ್ತು ಲಿಂಗಗಳನ್ನು ಹೊರಕ್ಕೆ ತೆಗೆಯುತ್ತಾರೆ. ತೊರೆಯ ಬಳಿ ನೆಲವನ್ನು ತೋಡಿ, ಅಲ್ಲಿ ಬರುವ ಜಲದಿಂದಲೇ ಸಾಲಿಗ್ರಾಮ ಮತ್ತು ಲಿಂಗಗಳಿಗೆ ಜಲಾಭಿಷೇಕವನ್ನು ಪೂಜಾರಿಗಳು ತೆರೆಯ ಮರೆಯಲ್ಲಿ ಮಾಡುತ್ತಾರೆ. ಸಾಲಿಗ್ರಾಮ ಮತ್ತು ಲಿಂಗಗಳನ್ನು ಪ್ರತ್ಯೇಕವಾಗಿ ಕಟ್ಟಿ ಬುಟ್ಟಿಯಲ್ಲಿಟ್ಟು, ಬುಟ್ಟಿಯನ್ನು ಮುಚ್ಚುತ್ತಾರೆ. ಈ ಪೂಜಾ ಕಾರ್ಯ ನಡೆಯುವಾಗ ಪೂಜಾರಿಗಳು ಮಡಿಯಲ್ಲಿದ್ದು,

ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು ಬಹಳ ಶ್ರದ್ಧೆಯಿಂದ, ಭಯ ಭಕ್ತಿಯಿಂದ ಕೂಡಿರುತ್ತಾರೆ. ಈ ದೇವರುಗಳಿಗೆ ಅರ್ಪಿಸುವ ನೈವೇದ್ಯವೆಂದರೆ ಕೆಲವು ಜನ ನಿರ್ದಿಷ್ಟ ನಾಯಕರು ಮೀಸಲಾಗಿ ನೀಡಿದ ಹಾಲು ಹಾಗೂ ಭಕ್ತಾದಿಗಳು ನೀಡಿದ ಬಾಳೆಹಣ್ಣು ಮತ್ತು ತೆಂಗಿನಕಾಯಿ, ಭಕ್ತರು ಬುಟ್ಟಿಗಳಿಂದ ಬಹುದೂರದಲ್ಲಿ ಭಯ ಭಕ್ತಿಗಳಿಂದ ನಿಂತಿರುವರು. ಈ ಬುಟ್ಟಿಗಳಲ್ಲಿರುವ ಸಾಲಿಗ್ರಾಮ ಮತ್ತು ಲಿಂಗವು ಕ್ರಮವಾಗಿ ವೈಷ್ಣವ ಮತ್ತು ಶೈವ ಪಂಗಡದವರ ದೈವಗಳು. ಭಕ್ತಾದಿಗಳೇ ವೈಷ್ಣವ ಸಂಪ್ರದಾಯದವರು ಮತ್ತು ಶೈವ ಸಂಪ್ರದಾಯದವರೆಂದು ಎರಡು ಪಂಥಗಳೇ ಇವೆ. ಪೂಜಾರಿಗಳಾದವರು ಮಾತ್ರ ಎರಡೂ ದೈವಗಳಿಗೂ ಒಂದೇ ರೀತಿಯಲ್ಲಿ ಪೂಜೆ ಸಲ್ಲಿಸುತ್ತಾರೆ. ವೈಷ್ಣವ ಪಂಥದವರು ಹಾಗೂ ಶೈವ ಪಂಥದವರು ವಿಭೂತಿ ಧರಿಸುತ್ತಾರೆ.

ಗುಗ್ಗರಿ ಹಬ್ಬ ಎತ್ತಿನ ಹಬ್ಬದ ದಿನಗಳಲ್ಲಿ ಬುಟ್ಟಿ ದೇವರುಗಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಈ ಹಬ್ಬಗಳನ್ನು 'ಉದಿ' ಎಂದರೆ ಬುಟ್ಟಿಯ ದೇವರುಗಳು ಮತ್ತು 'ಪದಿ' ಎಂದರೆ ದೇವರ ಬಸವಗಳು ಎಂದು ರೂಢಿಗೆ ಬಂದಿವೆ. ಆ ದಿನ ಬುಟ್ಟಿ ದೇವರುಗಳನ್ನು ದೇವರ ಬಸವನನ್ನೂ ಪೂಜಿಸುವುದರಿಂದ ಸೇರುವಿಕೆಯ ದಿನವೆನ್ನುತ್ತಾರೆ. ಆ ಸಂದರ್ಭದಲ್ಲಿ ಭಕ್ತಾದಿಗಳು ತಮ್ಮ ತಮ್ಮ ಪಂಗಡಗಳ ನಾಯಕರ ಮುಖಾಂತರ 'ಕಾಸಿನ ಕಾಣಿಕೆ'ಯನ್ನು ಮತ್ತು 'ಮೀಸಲು ಹಾಲು'ಗಳನ್ನು ಸಮರ್ಪಿಸುತ್ತಾರೆ. ಯುಗಾದಿಯಂದು ಆಚರಿಸುವ ಪಿತೃಹಬ್ಬದಲ್ಲಿ ಮಾತ್ರ ಸಿಹಿಯೂಟ ಉಣ್ಣುವರು. ವಿಜಯದಶಮಿಯಂದು ಆಚರಿಸುವ ಪಿತೃಹಬ್ಬದಲ್ಲಿ ಮಾಂಸ, ಸಿಹಿ ಆಹಾರ ಉಪಯೋಗಿಸುತ್ತಾರೆ. ಬುಟ್ಟಿದೇವರು ಮತ್ತು ದೇವರ ಬಸವಗಳ ಸಾತ್ವಿಕ ಪೂಜೆಯಲ್ಲದೆ ಮಾರಿ ದೇವತೆಯ ಪೂಜೆಯನ್ನು ಭಾದ್ರಪದ ಮಾಸದಲ್ಲಿ ಕುರಿ, ಕೋಣ, ಕೋಳಿ, ಹಾಗೂ ಮೇಕೆಗಳ ಬಲಿಯ ಮುಖಾಂತರ ಅವರವರ ಶಕ್ತ್ಯಾನುಸಾರ ಹಾಗೂ ಪದ್ದತಿ ಮತ್ತು ಹರಕೆಗಳ ಪ್ರಕಾರ ನಡೆಸುತ್ತಾರೆ. ಬೇವಿನ ಮರವನ್ನು ದೇವಿ ಮರವೆಂದು ಮತ್ತು ಬನ್ನಿ ಮರವನ್ನು ಮಹಾಕಾಳಿಯ ಮರವೆಂದು ಸ್ವೀಕರಿಸಿ, ಕೆಲವು ಬೇವಿನ ಮರಗಳ ಬುಡದ ಹತ್ತಿರ ಕಲ್ಲುಗಳನ್ನು ಪ್ರತಿಷ್ಠಾಪಿಸಿ ಅವುಗಳನ್ನು ದೇವಿ ಮತ್ತು ಮಹಾಕಾಳಿ ಎಂದು ಪೂಜಿಸುತ್ತಾರೆ. ಮಾರಿ, ದೇವಿ, ಮಹಾಕಾಳಿ ಮುಂತಾದ ದೈವಗಳು ಕೆಲವು ನಿರ್ದಿಷ್ಟ ಜನರ ಮೈ ಮೇಲೆ ಆಗಾಗ್ಗೆ ಅವಾಹನೆಗಾಗಿ ಸೂಚನೆಗಳನ್ನು ನೀಡುತ್ತವೆಯೆಂದು ನಂಬಿ ಆ ಸೂಚನೆಗಳನ್ನು ಎಷ್ಟೇ ಅಡ್ಡ ಬರಲಿ ಸ್ವೀಕರಿಸಿ ಪಾಲಿಸಿಯೇ ತೀರುತ್ತಾರೆ.

ಕೆಲವು ಜನರು ಬೇರೆ ಬೇರೆ ದೇವರುಗಳನ್ನು ತಮ್ಮ ಕುಲದೈವಗಳೆಂದು ಸ್ವೀಕರಿಸಿ ಆ ದೇವರುಗಳಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಆದ್ದರಿಂದ ಹುಟ್ಟುವ ಮೊದಲೇ ಮಗುವಿಗೆ ಕುಲದೈವದ ಹೆಸರನ್ನು ಇಟ್ಟು ಆ ಮಗುವು ಗಂಡಾಗಲಿ ಅಥವಾ ಹೆಣ್ಣಾಗಲಿ ತಲೆಯ ಕೂದಲನ್ನು ಮುಡುಪಾಗಿ ಬೆಳೆಸಿ ಮೂರು ವರ್ಷಗಳ ಒಳಗೆ ಆ ದೇವರ ಸಮ್ಮುಖಕ್ಕೆ ಹೋಗಿ ಕೂದಲನ್ನು ತೆಗೆಸುತ್ತಾರೆ. ಅಲ್ಲೇ ಅದರ ಕಿವಿ ಚುಚ್ಚುವ ಶಾಸ್ತ್ರವನ್ನೂ ನಡೆಸುತ್ತಾರೆ. ಅತಿಥಿಗಳನ್ನು, ಪೂಜಾರಿಗಳನ್ನು, ಯಜಮಾನರನ್ನು ಹಾಗೂ ನೆಂಟರಿಷ್ಟರನ್ನು ಸತ್ಕರಿಸಲು ಕರಿಕಂಬಳಿಯನು ಪೀಠವಾಗಿ ಹಾಸುತ್ತಾರೆ. ಸತ್ತವರನ್ನು ಸ್ಮಶಾನಕ್ಕೆ ಒಯ್ಯುವಾಗ ವಾರಸುದಾರನಾದವನು ಒಂದು ಮಣ್ಣಿನ ಮಡಕೆಯಲ್ಲಿ

ಪಿಂಡವನ್ನಿಟ್ಟುಕೊಂಡು ಹೆಣದ ಮುಂದೆ ಸಾಗುತ್ತಾನೆ. ಮಾರ್ಗ ಮಧ್ಯದಲ್ಲಿ ಒಂದು ಹಸಿರು ಗಿಡದ ಬುಡದಲ್ಲಿ ಪಿಂಡದ ಮಡಕೆಯನ್ನಿಟ್ಟು ಸ್ಮಶಾನಯಾತ್ರೆಯಲ್ಲಿ ಪಾಲ್ಗೊಳ್ಳುವವರೆಲ್ಲರೂ ಕಲ್ಲುಗಳನ್ನು ಬೀರಿ ಆ ಮಡಕೆಯನ್ನು ನುಚ್ಚುನೂರು ಮಾಡುತ್ತಾರೆ. ನಂತರ ಹೆಣವನ್ನು ರುದ್ರಭೂಮಿಯಲ್ಲಿ ಸಮಾಧಿ ಮಾಡುತ್ತಾರೆ. ಮಾರನೆಯ ದಿನ ಸತ್ತವರ ಸಂಬಂಧಿಕರು ಸಮಾಧಿಗೆ ಪೂಜೆಮಾಡಿ ಮನೆಗೆ ಹಿಂತಿರುಗಿದ ನಂತರ 'ಕರಿ'ಯನ್ನು ತೀರಿಸುತ್ತಾರೆ. ಯಾವ ಸ್ಥಳದಲ್ಲಿ ವ್ಯಕ್ತಿಯು ನಿಧನನಾದನೋ ಆ ಜಾಗದಲ್ಲಿ ಒಂದು ಟಗರು ಮರಿಯನ್ನು ಬಲಿ ಮಾಡುವ ಕರ್ಮಕ್ಕೆ 'ಕರಿ' ಎಂದು ಹೆಸರು. ಅದೇ ಮಾಂಸದಿಂದ ಮನೆಮಂದಿಯೆಲ್ಲಾ ಅಡುಗೆ ಮಾಡಿ ಉಣ್ಣುತ್ತಾರೆ. ತೀರ ಬಡವರಾದವರು ಕಟುಕರಿಂದ ಟಗರಿನ ತಲೆಬುರುಡೆಯನ್ನು ತಂದಾದರೂ ಕರಿ ತೀರಿಸುತ್ತಾರೆ. ಕರಿ ತೀರಿಸುವ ಕರ್ಮ ಮುಗಿಯುವ ವರೆಗೆ ಅನ್ಯರಿಗೆ ಆ ಮನೆಗೆ ಪ್ರವೇಶವಿರುವುದಿಲ್ಲ. ಹದಿನಾಲ್ಕನೆಯ ದಿನ ಕೈಲಾಸ ಆರಾಧನೆಯನ್ನು ಸತ್ತವರ ಹೆಸರಿನಲ್ಲಿ ತಮ್ಮ ತಮ್ಮ ಯೋಗ್ಯತಾನುಸಾರವಾಗಿ ನಡೆಸುತ್ತಾರೆ. ಈ ರೀತಿಯ ಆಚಾರ ವಿಚಾರಗಳನ್ನು ಹೊಂದಿರುವ ಜನರು ಯಾರೆಂದಾಗ ತಾವು ನಾಯಕರೆಂದೂ, ಕೆಲವರು ತಾವು ನಾಯಕ ಮಕ್ಕಳೆಂದೂ, ಕೆಲವರು ಶಬರರೆಂದೂ, ಕೆಲವರು ಪರಿವಾರದವರೆಂದೂ, ಕೆಲವರು ಪಾಳೆಯದವರೆಂದೂ ಇನ್ನೂ ಕೆಲವರು ತಳವಾರರೆಂದೂ ಮತ್ತೆ ಕೆಲವರು ಬಲ್ಲಿದರೆಂದು ಹೇಳುತ್ತಾರೆ. ಏಕರೀತಿಯ ಮತೀಯ ಪದ್ಧತಿಗಳಿದ್ದರೂ ಮತ್ತೊಂದು ಹೆಸರಿನ ಪಂಗಡದವರೊಡನೆ ಕೊಳು ಕೊಡು ನೆಂಟನ್ನು ಹೊಂದಿರುವುದಿಲ್ಲವೆಂದರೆ ವಿಸ್ಮಯವಾಗುತ್ತದೆ. ಇವರ ಮತೀಯ ನಡವಳಿಕೆಗಳಿಂದ ಇವರೆಲ್ಲರೂ ಒಂದೇ ಮೂಲದಿಂದ ಬಂದಿದ್ದು, ಪರಿಸ್ಥಿತಿ ಮತ್ತು ಸನ್ನಿವೇಶಗಳ ಒತ್ತಡದಿಂದಾಗಿ ಬೇರೆ-ಬೇರೆಯಾಗಿದ್ದೇವೆಂದು ಹೇಳುತ್ತಾರೆಂಬುದು ಅರ್ಥವಾಗುತ್ತದೆ. ಈ ಬುಡಕಟ್ಟಿನ ಜನರ ಒರಟುತನ, ಸದೃಢವಾದ ಶರೀರ, ಬೇಟೆಯಾಡುವಿಕೆ, ಪಶುಪಾಲನೆ, ಬೇಸಾಯ ಮಾಡುವಿಕೆ, ಮೈಮೇಲಿನ ಅಲ್ಪ ಉಡುಪು ಮತ್ತು ಮನೆಗಳಲ್ಲಿಟ್ಟುಕೊಂಡಿರುವ ಆಯುಧಗಳು ಇವುಗಳನ್ನು ಗಮನಿಸಿದರೆ, ಇವರೆಲ್ಲಾ ಕಾಡುಗಳಲ್ಲಿ ವಾಸ ಮಾಡುತ್ತಿದ್ದರೆಂಬುದು ತಿಳಿದುಬರುತ್ತದೆ.

ಬೇಡ ಜನಾಂಗದ ಸಾಂಸ್ಕೃತಿಕ ವಿವರಗಳನ್ನು ಅಧ್ಯಯನ ಮಾಡಲು ನಮಗೆ ಮ್ಯಾಸಬೇಡ ಸಮುದಾಯದ ಸಾಂಸ್ಕೃತಿಕ ವಿವರಗಳನ್ನು ಸಾಕಷ್ಟು ಪುರಾವೆಗಳನ್ನು ದಾಖಲೆಗಳನ್ನು ಸಾಂಸ್ಕೃತಿಕ ವೀರರ ಚಿತ್ರಗಳನ್ನು ಕಟ್ಟಿಕೊಡುತ್ತವೆ. ಆದ್ದರಿಂದ ಇಂದು ಬೇಡ ಜನಾಂಗವನ್ನು ಕುರಿತು ಅಧ್ಯಯನಕ್ಕೆ ತೊಡಗಿದಾಗ ನಮಗೆ 'ಮ್ಯಾಸಬೇಡ ಸಂಸ್ಕೃತಿ' ಮುಖ್ಯವಾಗುತ್ತದೆ. ಈ ಮ್ಯಾಸಬೇಡರು ಕರ್ನಾಟಕದ ಮಧ್ಯಭಾಗದ ಚಿತ್ರದುರ್ಗ ಜಿಲ್ಲೆಯಲ್ಲಿ ವಾಸವಾಗಿದ್ದಾರೆ. ಇದು ಬರಗಾಲ ಪ್ರದೇಶವೆಂದು ಗುರುತಿಸಿಕೊಂಡಿದ್ದರೂ ಸಾಂಸ್ಕೃತಿಕವಾಗಿ ಒಳ್ಳೆಯ ಹೆಸರು ಪಡೆದುಕೊಂಡಿದೆ.

ಬೇಡರು ಕಾಡಿನಲ್ಲಿ ಒಂದು ಕಡೆ ವಾಸಿಸಲು ಪ್ರಾರಂಭಿಸಿದ ನಂತರ ಪಶುಪಾಲನೆ ಮಾಡಲು ಪ್ರಾರಂಭಿಸಿದರು. 'ಬೇಡ' ಎಂಬುದು ಜಾತಿಸೂಚಕ ಪದವಾಗಿದೆ. ಇದಕ್ಕೆ ವಿಶೇಷಣ ಪದವಾಗಿ ಮ್ಯಾಸ ಎಂಬುದು ಸೇರಿಕೊಂಡಿದೆ. 'ಮ್ಯಾಸವೆಂದರೆ ದನಕರುಗಳನ್ನು ಮೇಯಿಸುವವನು ಎಂಬ

ಅರ್ಥವನ್ನು ಕೊಡುತ್ತದೆ. ಈಗಾಗಲೇ ಮ್ಯಾಸಬೇಡ ಎನ್ನುವ ಪದದ ನಿಷ್ಪತ್ತಿಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. 'ಮ್ಯಾಸಬೇಡ' ಸಂಸ್ಕೃತಿಯು ಬೇಡ ಜನಾಂಗದ ಅಧ್ಯಯನಕ್ಕೆ ಮತ್ತು ತಿಳಿವಳಿಕೆಗೆ ತುಂಬಾ ಸಹಕಾರಿಯಾಗಿದೆ. ಈ ಬೇಡರು ಬೇಟೆ, ಪಶುಪಾಲನೆ ಮತ್ತು ಕೃಷಿಯನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡು ಬದುಕತೊಡಗಿದರು. ತರುವಾಯ ಇದೇ ಬೇಡರು ನಾಡಿನಾದ್ಯಂತ ಚದುರಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಂಡಿದ್ದಾರೆ. ಆದರೆ ಆ ಎಲ್ಲಾ ಹೆಸರಿನ ಮೂಲವೇ ಬೇಡ. ಈ ಬೇಡ ಎಂಬ ಪದವೇ ಜನಪದರ ಸಂಸ್ಕೃತಿಯಲ್ಲಿ ಇಂದಿಗೂ ಉಳಿದಿದೆ.

೨.೨ ಮ್ಯಾಸಬೇಡ ಪದನಿಷ್ಪತ್ತಿ

ಸಾಮಾನ್ಯ ಅರ್ಥದಲ್ಲಿ 'ಬುಡಕಟ್ಟು' ಎಂದರೆ ಕುಟುಂಬ, ಕುಲ, ಸಮೂಹ ಎಂಬ ಅರ್ಥಗಳಿವೆ. ಆಂಗ್ಲ ಭಾಷೆಯ 'Tribe'ಗೆ ಸಂವಾದಿಯಾಗಿ ಕನ್ನಡದಲ್ಲಿ ಬುಡಕಟ್ಟು ಎಂದು ಕರೆಯಲಾಗುತ್ತಿದೆ. ಪ್ರಾಚೀನ ಲ್ಯಾಟೀನ್ ಭಾಷೆಯಲ್ಲಿ 'Tribes' ಎಂಬ ಪದ ಉಗಮವಾಯಿತು. ಗ್ರೀಕ್ ಮತ್ತು ರೋಮ್‌ನ ವಿದ್ವಾಂಸರು ಲ್ಯಾಟಿಯಂ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರಿಗೆ ಈ ರೀತಿಯಾಗಿ ಕರೆಯುತ್ತಿದ್ದರು.

ಬುಡಕಟ್ಟುಗಳ ಕುರಿತ ಅಧ್ಯಯನಗಳು ಪಾಶ್ಚಾತ್ಯರಿಂದ ಆರಂಭವಾದವು. ಅವರಲ್ಲಿ ವೆರಿಯರ್ ಎಲ್ವಿನ್, ಜಿ.ಹೆಚ್.ಹಟ್ಸನ್, ಜೆ.ಪಿ.ಮಿಲ್ಸ್, ಸ್ಮಿಥ್, ಹೈಮರ್ ಡಾರ್ಫ್ ಪ್ರಮುಖರು, ಇವರು ಉತ್ತರ ಭಾರತದ ಬುಡಕಟ್ಟುಗಳಾದ ಅಂಗಾಮಿ, ನಾಗ, ಸೆಮಾ, ಬೊಂಡಾ, ಭೈಗರು, ಮರಿಯ, ಸವೋರ ಬುಡಕಟ್ಟುಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇನ್ನೂ ಕೆಲವರು ಬ್ರಿಟೀಷರ ಸುವ್ಯವಸ್ಥಿತ ಆಡಳಿತದ ವ್ಯವಸ್ಥೆಗಾಗಿ ಜನಾಂಗೀಯ ಅಧ್ಯಯನ ಮಾಡಿದ್ದಾರೆ. ಅವರುಗಳಲ್ಲಿ ಗಿಯರ್‌ಸನ್, ಪಾಸಿಟ್ ಕ್ರುಕ್, ಎಡ್ವರ್ ಥರಸ್ಟನ್, ಹಯವದನರಾವ್, ಎಚ್.ವಿ.ನಂಜುಡಯ್ಯ ಎಲ್.ಕೆ.ಅನಂತಕೃಷ್ಣ ಅಯ್ಯರ್ ಮುಂತಾದವರು,ಭಾರತದಲ್ಲಿ ಮಧ್ಯಪ್ರದೇಶ, ಒರಿಸ್ಸಾ, ಅಸ್ಸಾಂ ರಾಜ್ಯಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಬುಡಕಟ್ಟುಗಳು ಕಂಡುಬರುತ್ತವೆ. ಭೌಗೋಳಿಕ ಮತ್ತು ಸಾಂಸ್ಕೃತಿಕ ಆಧಾರಗಳ ಮೇಲೆ ಬುಡಕಟ್ಟುಗಳನ್ನು ಮುಖ್ಯವಾಗಿ ಮೂರು ವಲಯಗಳಲ್ಲಿ ವಿಂಗಡಿಸಲಾಗಿದೆ.

೧. ದಕ್ಷಿಣ ವಲಯ

೨. ಮಧ್ಯ ವಲಯ

೩. ಈಶಾನ್ಯ ವಲಯ

ಬುಡಕಟ್ಟು ಕುರಿತು ಅಧ್ಯಯನ ನಡೆಸಿದವರಲ್ಲಿ 'ವೆಲಿಯನ್ ಎಲ್ವಿನ್' ಪ್ರಮುಖರು. ಇವರು "ಉತ್ತರ ಭಾರತದ ಬುಡಕಟ್ಟುಗಳಾದ ಗೈಗರು, ಮೆರಿಯರು, ಬೊಂಡೋಳುಗಳು, ತೊಂಡರು ಮತ್ತು ಸವೋರಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ದಕ್ಷಿಣ ಭಾರತದ ಬುಡಕಟ್ಟುಗಳಾದ 'ತೋಡ' ಜನಾಂಗದ ಕುರಿತು ರಿವರ್ಸ್ ಅವರು, 'ಪಮಾರ್' ಬುಡಕಟ್ಟಿನ ಬಗ್ಗೆ 'ದುಬೆ' ಅವರು, 'ಕಾಡರ್'

ಬುಡಕಟ್ಟಿನ ಬಗ್ಗೆ 'ಎಹ್ರೆನ್ ಫೆಲ್ಸ್' ಅವರು, 'ವರ್ಲಿ' ಬುಡಕಟ್ಟಿನ ಬಗ್ಗೆ 'ಸಾವೆ ಅವರು ಅಧ್ಯಯನ ನಡೆಸಿದ್ದಾರೆ."[೨] ಹಾಗೆಯೇ ಎಡ್ಗರ್ ಥರ್ಸ್ಟನ್, ಕೆ. ರಂಗಾಚಾರಿಯವರು ರಚಿಸಿರುವ 'Castes and Tribes of Southern India' Vol–೭ ಮತ್ತು ಹೆಚ್.ವಿ ನಂಜುಂಡಯ್ಯ ಹಾಗೂ ಅನಂತಕೃಷ್ಣ ಅಯ್ಯರ್ ಅವರ 'The Mysore Tribes and Castes' Vol.೧–೪ ನಾಲ್ಕು ಸಂಪುಟಗಳು ದಕ್ಷಿಣ ಭಾರತದ ಬುಡಕಟ್ಟುಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಮ್ಯಾಸಬೇಡ' ಶಬ್ಧದ ನಿಷ್ಪತ್ತಿ ತಿಳಿದುಕೊಳ್ಳುವುದಕ್ಕೆ ಮೊದಲು 'ಬೇಡ' ಪದದ ಬಗ್ಗೆ ತಿಳಿದುಕೊಳ್ಳೋಣ. 'ಬೇಡ' ಎಂದರೆ ಬೇಟೆಯನ್ನು ವೃತ್ತಿಯಾಗಿ ಉಳ್ಳವನು. ಎಂಬುದಾಗಿ ಕರೆಯಲಾಗುತ್ತದೆ. ಬೇಡ ಪದವನ್ನು ಕುರಿತು ಕಿಟೆಲ್ ಅವರು "ಬೇಡ=Beda, A hunts man a tribe of forest people living by the chase ಎಂಬುದಾಗಿ ಅರ್ಥಮಾಡಿಕೊಟ್ಟಿದ್ದಾರೆ. Bedas at present are fowlers, Formers, Merchents, Peons etc. ಬೇಡಜಾತಿ=A Beda Tribe, ಬೇಡರಸ=chief of hunts man, ಬೇಡವಟ್ಟಿ–ಹಟ್ಟಿ=A villege of hunts man, ಬೇಡಂ=A man of Trimmed Heart a limited man, ಬೇಡತಿ=A female of the Beda Tribe. ಹೀಗೆ ಬೇಡ ಶಬ್ಧಕ್ಕೆ ಸಂಬಂಧಿಸಿದಂತೆ ಹಾಗೂ ಬೇಡರಿಗೆ ಸಂಬಂಧಿಸಿದ ಹಟ್ಟಿ, ಜಾತಿಯ ಬಗ್ಗೆ ವಿವರಣೆಯನ್ನು ನೀಡಿದ್ದಾರೆ."[೩] ಕಾಡಿನಲ್ಲಿ ವಾಸವಿದ್ದುಕೊಂಡು ಬೇಟೆಯನ್ನು ತನ್ನ ಜೀವನ ವೃತ್ತಿಯಾಗಿರಿಸಿಕೊಂಡು ಬದುಕುವ ವೃತ್ತಿಯನ್ನು ಬೇಡ ಎಂಬುದಾಗಿ ಕರೆಯಬಹುದು.

ಬೇಡ ಪದದಲ್ಲಿ ಕಂಡುಬರುವ ಪೂರ್ವ ಪದವಾದ 'ಮ್ಯಾಸ' ಪದದ ವಿಶೇಷಣವನ್ನು ಈಗ ತಿಳಿಯುತ್ತಾ ಮ್ಯಾಸ ಎಂಬ ಪದವು ಅವರಲ್ಲಿ ಪ್ರಚಲಿತದಲ್ಲಿರುವ ಪಶುಪಾಲನಾ ವೃತ್ತಿಮೂಲದಿಂದ ಬಂದಂತಹ ಪದವಾಗಿದೆ. ಇದನ್ನು ಕುರಿತಂತೆ ಮುಂದೆ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನಲೆಯ ಆಧಾರಗಳಿಂದ ವಿವರಿಸಲಾಗಿದೆ. 'ಮ್ಯಾಸಬೇಡ' ಎಂಬುದು ಒಂದು ಬುಡಕಟ್ಟು ಜನಾಂಗವಾಗಿದ್ದು, ಈ ಜನಾಂಗವು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲೂಕುಗಳಲ್ಲಿ ಹೆಚ್ಚಾಗಿ ನೆಲೆಸಿದ್ದು ಉಳಿದಂತೆ ಕರ್ನಾಟಕದಾದ್ಯಂತ ಅಲ್ಲಲ್ಲಿ ಕಂಡುಬರುತ್ತದೆ.

ಬೇಡರನ್ನು ಕಿರಾತ, ಶಬರ, ವ್ಯಾದ, ವಾಗುರಿ, ವಾಲ್ಮೀಕಿ, ನಿಷಾದ, ಪುಲಿಂದ, ತಳವಾರ, ಪರಿವಾರ, ನಾಯಕ ಮೊದಲಾದ ಜಾತಿಸೂಚಕ ಪದಗಳಿಂದ ಕರೆದುಕೊಂಡಿದ್ದಾರೆ. ಮೂಲತಃ ಇವರೆಲ್ಲ ಒಂದೇ ಪಂಗಡದವರು. ಇವರ ಪೈಕಿ ಮ್ಯಾಸಬೇಡರ ಬುಡಕಟ್ಟಿನ ಸಂಸ್ಕೃತಿಯ ಹೆಗ್ಗುರುತುಗಳನ್ನು ಇಂದಿಗೂ ನೋಡಬಹುದು. 'ಮ್ಯಾಸ' ಎಂದರೆ ಮೇಯಿಸುವವರು (ಮೇಷ=ಕುರಿ) ಮ್ಯಾಸರು–ಮೀಸಲು ಪಡೆಗೆ ಸೇರಿ ವಿಜಯನಗರ ಕಾಲದಲ್ಲಿದ್ದವರು ಎನ್ನಲಾಗಿದೆ. ದೊರೆತ ಮಾಹಿತಿಯಂತೆ 'ಮ್ಯಾಸಬಾಡ್ಕಿ ನಾಯಕತನ' ಎಂಬುದು ಅಧಿಕಾರಯುಕ್ತ ಪದವಿಯಂತೆ ಹದಿನೆಂಟನೆ ಶತಮಾನದವರೆಗೂ ಇತ್ತು. ಬೇಡರು ತಮ್ಮ ರೂಢಿ, ಸಂಪ್ರದಾಯಗಳನ್ನು ತಿಳಿಸುವಾಗ ಕಾಸು–ಮೀಸಲು ಇಡುತ್ತಾರೆ. ಈ ಮೀಸಲು ಎಂದರೆ ಹಾಲು, ಮೊಸರನ್ನು ಎಂಜಲು ಮಾಡದಂತೆ

ದೇವರಿಗೆ ಅರ್ಪಿಸುವುದು ಎನ್ನುವುದುಂಟು. ಅರ್ಪಿಸುವ ವ್ಯಕ್ತಿಗೆ ಮೀಸಲಾರು ಎನ್ನುತ್ತಾರೆ. ಇನ್ನು ಕೆಲವರು 'ವ್ಯಾಸ'ನಿಂದ 'ಮ್ಯಾಸ'ನಾದರೆಂದು ಹೇಳಬಹುದು.

೨.೩. ಬೆಡಗುಗಳಲ್ಲಿ ಮಹಿಳೆ

ಯಾವುದೇ ಒಂದು ಬುಡಕಟ್ಟಿನ ಸಮುದಾಯದ ವಿಶಿಷ್ಟವಾದ ಉಪ ಘಟಕಗಳನ್ನು, ಒಳ ಗುಂಪುಗಳನ್ನು ಬೆಡಗು ಎಂಬುದಾಗಿ ಕರೆಯಲಾಗುತ್ತದೆ. ಈ ರೀತಿಯ ಒಳ ಗುಂಪುಗಳನ್ನು ಹಲವಾರು ರೀತಿಯ ಹೆಸರುಗಳಿಂದ ಕರೆಯಲಾಗುತ್ತದೆ. ಉದಾಹರಣೆಗೆ, ಕುಲಗಳು, ಬಳಿಗಳು, ಬೆಡಗುಗಳು ಹೀಗೆ ಹಲವಾರು ರೀತಿಯಲ್ಲಿ ವಿಶ್ಲೇಷಿಸಲಾಗುತ್ತದೆ. ಈ ಬೆಡಗುಗಳ ಹುಟ್ಟು ಅವರು ವಾಸಿಸುವ ಪರಿಸರ, ಭೌಗೋಳಿಕ ಹಿನ್ನಲೆಯಲ್ಲಿ ಹುಟ್ಟಿಕೊಂಡಿದೆ. ನಿಸರ್ಗಪ್ರಿಯರಾದ ಮ್ಯಾಸಬೇಡರಲ್ಲಿರುವ ಬೆಡಗುಗಳು ಇವರು ಪೂಜಿಸುವ ದೈವಗಳು, ಪೂರ್ವಜರು ಮತ್ತು ಪ್ರಕೃತಿಯಲ್ಲಿನ ಮರ, ಗಿಡ, ಬಳ್ಳಿ, ಹೂವು, ಅವರು ವಾಸಿಸುವ ಪ್ರದೇಶ, ಅವರ ವೃತ್ತಿ(ಕಸುಬು), ಪ್ರಾಣಿಗಳು ಇವುಗಳ ಮೇಲೆ ಅವಲಂಬಿತವಾಗಿದೆ. ಮ್ಯಾಸಬೇಡರಲ್ಲಿ ಬೇರೆಲ್ಲಾ ಬುಡಕಟ್ಟುಗಳಿಗಿಂತ ಹೆಚ್ಚಿನ ಬೆಡಗುಗಳಿರುವುದನ್ನು ನೋಡಬಹುದು. ಇವರು ಸಾಮಾನ್ಯವಾಗಿ ತಾವು ಸಾಕುವ ಪ್ರಾಣಿಗಳು ಮತ್ತು ತಾವು ಪೂಜಿಸುವ ಹಿರಿಯರು, ಸಾಂಸ್ಕೃತಿಕ ವೀರರ ಹೆಸರುಗಳನ್ನು ಇಡುವುದರ ಮೂಲಕ ತಮ್ಮ ಬೆಡಗುಗಳನ್ನು ಗುರುತಿಸಿಕೊಳ್ಳುತ್ತಾರೆ.

ಮ್ಯಾಸಬೇಡರಲ್ಲಿ ಮೂಲದಲ್ಲಿ ಒಂದೇ ಒಂದು ಬೆಡಗು ಇತ್ತೆಂದು ತಿಳಿಸುತ್ತಾರೆ. ಈ ರೀತಿಯಲ್ಲಿದ್ದ ಒಂದು ಬೆಡಗು ಹಲವು ಬೆಡಗುಗಳಾಗಿ ವಿಕಾಸಗೊಂಡ ಕ್ರಮವನ್ನು ತೆಲುಗಿನಲ್ಲಿ 'ಮಂದಸಾನ ಮಂದ ತಿರುಗ್ ಮಂದ' ಎಂಬುದಾಗಿ ಕರೆಯುತ್ತಾರೆ. ಆಗ ಯಾರು ಯಾರನ್ನಾದರೂ ವರಿಸಿ ಮದುವೆ ಮಾಡಿಕೊಳ್ಳಬಹುದಾಗಿತ್ತೆಂದು ಇಲ್ಲಿ ಯಾವುದೇ ರೀತಿಯ ಸೋದರ ಸಂಬಂಧಗಳಿಲ್ಲದೆ 'ಮಂದೆಯಲ್ಲಿ ಮುಂದೆ ತಿರುಗು ಮುಂದೆ' ಎಂಬುದಾಗಿ ಒಂದೇ ಒಂದು ಕುಲವಿದ್ದು, ಶುಕ್ಲ ಮಲ್ಲಿನಾಯಕ ಮತ್ತು ದಾನಸಾಲಮ್ಮನವರಿಂದ ಬೆಡಗುಗಳು(ಕುಲಗಳು) ಹುಟ್ಟಿದವು. ಶುಕ್ಲಮಲ್ಲಿನಾಯಕನ ಹೆಸರಿನಿಂದ 'ಮಲ್ಲಿನಾಯಕನೋರು' ಎಂಬುದಾಗಿ ಇವರ ಜೊತೆಗೆ 'ಮಳೇಲರು' ಎಂಬ ಮತ್ತೊಂದು ಬೆಡಗು ಹುಟ್ಟಿಕೊಂಡಿತು. ಇವರು ಎರಡೂ ಕಡೆಗೂ ಮಂದಲೋರು ಮತ್ತು ಮಲ್ಲಿನಾಯಕನೋರು ಬೆಡಗಿಗೆ ನೆಂಟರಾಗಿ ಗುರುತಿಸಿಕೊಳ್ಳುತ್ತಾರೆ. ಇವರನ್ನು 'ಏಳು ಮನೆಯ ಜೀಗರು' ಎಂಬುದಾಗಿ ಕರೆಯುತ್ತಾರೆ. ಮಂದಲೋರು ಮತ್ತು ಮಲ್ಲಿನಾಯಕನೋರು ನೆಂಟರು-ಬಂಟರು. ಈ ಎರಡು ಕುಲಗಳವರು ಸಂಬಂಧ ಬೆಳೆಸಬಹುದು. ಇವರಲ್ಲಿ ಮುಖ್ಯವಾಗಿ ಎರಡು ವಂಶಗಳನ್ನು ಕಾಣಬಹುದು. ಅವುಗಳಿಂದರೆ ಸೂರ್ಯವಂಶ ಮತ್ತು ಚಂದ್ರವಂಶ. ಸೂರ್ಯನ ವರಪ್ರಸಾದದಿಂದ ಉದ್ಭವವಾದ ವಂಶ ಮಲ್ಲಿನಾಯಕನಿಂದ ಮಲ್ಲಿನಾಯಕನೋರು (ಎನುಮನೋರು) ಬೆಡಗು ಸೂರ್ಯನಿಂದ ಮೂಲವಾದರೆ, ಚಂದ್ರವಂಶಕ್ಕೆ 'ಮಂದಲೋರು' ಬೆಡಗು ಮೂಲ. ಮ್ಯಾಸಬೇಡರಲ್ಲಿ ಪ್ರತ್ಯೇಕವಾಗಿರುವ 'ಮುಂಜಿ ಮ್ಯಾಸ'ರೆಂಬ ಪಂಗಡವೊಂದಿದೆ. ಇದು ಸ್ತ್ರೀ

ಕೇಂದ್ರಿತ ನೆಲೆಯಿಂದ ಹುಟ್ಟಿಕೊಂಡ ಬೆಡಗಾಗಿದೆ. ಮ್ಯಾಸಬೇಡ ಸಮುದಾಯದ ವ್ಯಕ್ತಿಯೊಬ್ಬ ಮುಸ್ಲಿಂ ಸಮುದಾಯದ 'ನನ್ನಿಯಮ್ಮ' ಎಂಬ ಮಹಿಳೆಯೊಂದಿಗೆ ಅಂತರ್ಜಾತಿಯ ವಿವಾಹವಾಗುತ್ತಾನೆ. ಇದರಿಂದ ಈತನನ್ನು ಕುಲದಿಂದ ಹೊರಗೆ ಹಾಕಲಾಗುತ್ತದೆ. ಅಲ್ಲಿಂದ ಹೊರಬಂದ ಇವರ ಸಂತಾನವು 'ಮೂಜಿಮ್ಯಾಸ' ಎಂಬ ಹೆಸರಿನಿಂದ ಗುರುತಿಸಿಕೊಂಡು ಬಂದಿದೆ. ಇದರಿಂದಾಗಿ ಪ್ರತ್ಯೇಕವಾದ ಮುಂಜಿಮ್ಯಾಸ ಎಂಬ ಬೆಡಗು ಹಾಗೂ ಇವರು ವಾಸವಾಗಿದ್ದ ಸ್ಥಳವು 'ನನ್ನಿವಾಳ' ಎಂಬ ಹೆಸರಿನಿಂದ ಗುರುತಿಸಿಕೊಂಡಿದೆ. ಈ ಮುಂಜಿಮ್ಯಾಸ ಎಂಬ ಕುಲವು ಮಹಿಳೆಯನ್ನು ಪ್ರತಿನಿಧಿಸುವ ನೆಲೆಯದಾಗಿದೆ.

ಕೊನೆ ಟಿಪ್ಪಣಿ

೦೧ ಹರ್ತಿಕೋಟೆ ವೀರೇಂದ್ರ ಸಿಂಹ, ವಾಲ್ಮೀಕಿ ಕಿರಣ, ಪು-೩೧

೦೨ ವೀರನಾಯಕ.ಎಚ್.ವಿ., ವಾಲ್ಮೀಕಿ(ಸ್ಮರಣ ಸಂಚಿಕೆ), ಪು-೩

೦೩ A Kannada - English Dictionary; Pev: Kittel Bashal Misssion Books and Trust

೦೪ ಕೃಷ್ಣಮೂರ್ತಿ ಹನೂರು, **ಮ್ಯಾಸಬೇಡರು,** ಪು-೫೮

* * * *

ಅಧ್ಯಾಯ : ಮೂರು

ಮ್ಯಾಸಬೇಡ ಸಮುದಾಯದ ನಂಬಿಕೆ, ಸಂಪ್ರದಾಯಗಳು ಮತ್ತು ಮಹಿಳೆ

ಅಧ್ಯಾಯ : ಮೂರು

ಮ್ಯಾಸಬೇಡ ಸಮುದಾಯದ ನಂಬಿಕೆ, ಸಂಪ್ರದಾಯಗಳು ಮತ್ತು ಮಹಿಳೆ

ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ತನ್ನ ನೆಲೆಯಲ್ಲಿ ಕಂಡುಕೊಂಡಿರುವ ಮ್ಯಾಸಬೇಡ ಸಮುದಾಯವು ತನ್ನದೇ ಆದ ನಂಬಿಕೆ ಮತ್ತು ಸಂಪ್ರದಾಯಗಳನ್ನು ಅಳವಡಿಸಿಕೊಂಡು ಬಂದಿದೆ. ಅರಣ್ಯ ವಾಸಿಯಾಗಿ ತನ್ನ ಬದುಕನ್ನು ರೂಪಿಸಿಕೊಂಡು ಬಂದಿರುವ ಈ ಸಮುದಾಯದಲ್ಲಿ ಕಂಡುಬರುವ ಆಚರಣೆ ಮತ್ತು ಸಂಪ್ರದಾಯಗಳು ಪ್ರಕೃತಿ ಸಹಜವಾದ ನೆಲೆಯಲ್ಲಿ ಕಂಡುಬರುತ್ತವೆ. ಇಲ್ಲಿ ಆಚರಣೆಗೊಳ್ಳುವ ಹಬ್ಬ, ಆಚರಣೆ, ಉತ್ಸವಗಳು ತನ್ನ ಬದುಕಿಗೆ ಸಹಯವನ್ನು ನೀಡುತ್ತ ಬಂದಿರುವ ಸನ್ನಿವೇಶಗಳಾಗಿವೆ. ಈ ಸಮುದಾಯವು ಧಾರ್ಮಿಕ ಹಾಗೂ ಸಾಮಾಜಿಕ ನೆಲೆಯಲ್ಲಿ ಆರಾಧಿಸಿಕೊಂಡು ಬಂದಿರುವ ದೈವಗಳು, ತಮ್ಮ ಜೀವನದ ಪ್ರಗತಿ ಹಾಗೂ ರಕ್ಷಣೆಗಾಗಿ ಹೋರಾಡಿದ ಕುಲಜರಾಗಿದ್ದಾರೆ. ಇಲ್ಲಿ ಮಹಿಳೆಯರು ಕೂಡ ದೈವತ್ವಕ್ಕೇರಿರುವುದು ಕಂಡುಬರುತ್ತದೆ. ಈ ಸಮುದಾಯದ ಸಮಗ್ರವಾದ ನಂಬಿಕೆ ಮತ್ತು ಸಂಪ್ರದಾಯಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

೩.೧ ಸಾಮಾಜಿಕ ಆಚರಣೆಗಳು

ಮನುಷ್ಯನು ಅಗೋಚರವಾದ ದೈವಶಕ್ತಿಗಳ ಪ್ರೀತಾರ್ಥವಾಗಿ ನಡೆಸುವ ಮತಾಚಾರಗಳು ಮತ್ತು ಕರ್ಮ ವಿಧಿವಿಧಾನಗಳು ಆಚರಣೆಗಳು ಎಂದು ಕರೆಸಿಕೊಳ್ಳುತ್ತವೆ. ಇವು ತಲೆತಲಾಂತರದಿಂದ ಸಮಾಜದ ಅಂಗೀಕಾರವನ್ನು ಪಡೆದ ಬಳಕೆಯಲ್ಲಿರುವಂತಹ ಮಾಟ-ಮಂತ್ರ ಮತ್ತು ಧಾರ್ಮಿಕ ವಿಧಿ-ವಿಧಾನಗಳನ್ನು ಜನಪದ ಆಚರಣೆಗಳೆನ್ನಬಹುದು.

ನಂಬಿಕೆ ಮತ್ತು ಆಚರಣೆಗಳು ಧರ್ಮದ ಎರಡು ಅಂಶಗಳೆನ್ನಬಹುದು. ನಂಬಿಕೆಯು ಒಂದು ಮಾನಸಿಕ ಕಲ್ಪನೆ. ಅದರ ಕ್ರಿಯಾತ್ಮಕ ರೂಪವೇ ಆಚರಣೆ. ನಿರ್ದಿಷ್ಟ ಸಮಾಜದಲ್ಲಿ ನಿರ್ದಿಷ್ಟ ಸಮಯದಲ್ಲಿ ಒಂದು ಜಾತಿ ಮತ್ತು ಉಪಜಾತಿಗಳಲ್ಲಿ ಬಳಕೆಯಲ್ಲಿರುವ ಆಚರಣೆಗಳ ಹುಟ್ಟಿಗೆ ಪ್ರಬಲವಾದ ಕಾರಣಗಳು ಇರಲೇಬೇಕು. ಅದು ಆರ್ಥಿಕ, ಸಾಮಾಜಿಕ, ಭಾವನಾತ್ಮಕ ಹೀಗೆ ಏನಾದರೂ ಆಗಿರಬಹುದು. ಒಬ್ಬ ವ್ಯಕ್ತಿ ಇಷ್ಟ ಪಟ್ಟು ಒಂದು ಆಚರಣೆಯನ್ನು ಮಾಡಲು ಸಾಧ್ಯವಿಲ್ಲ. ಒಂದು ಸಮುದಾಯದ ಜೀವನ ವಿಧಾನದ ಬೇಕು ಬೇಡಗಳ ಅಂಗವಾಗಿ ಆಚರಣೆ

ರೂಪ ಪಡೆಯುತ್ತದೆ. ಪ್ರಕೃತಿಯಲ್ಲಿ ಮಾನವನ ದೇಹದಲ್ಲಿ ಉಂಟಾಗುವ ಬದಲಾವಣೆಗಳನ್ನು ಆಚರಣೆಗಳ ಮೂಲಕ ಗುರುತಿಸಬಹುದು. ಮಾನವನ ಬದುಕಿಗೆ ಮತ್ತು ಅವನ ಭಾವ ಪ್ರಪಂಚಕ್ಕೆ ಸಂಬಂಧಿಸಿದ ಆಚರಣೆಗಳು ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಆಚರಣೆಗಳು ನೈಸರ್ಗಿಕ ಕ್ರಿಯೆಗಳಿಗೆ ಸಂಬಂಧಿಸಿದ ಆಚರಣೆಗಳು ಹೀಗೆ ಸ್ಥೂಲವಾಗಿ ವಿಂಗಡಿಸಬಹುದು.

ದೈವಕ್ಕೆ ಸಂಬಂಧಿಸಿದ ಆಚರಣೆಗಳನ್ನು ಜನಪದರು ದಿನಕ್ಕೊಂದು ಸಾರಿ, ವಾರಕ್ಕೊಂದು ಸಾರಿ, ತಿಂಗಳಿಗೊಂದು ಸಾರಿ, ವರ್ಷಕ್ಕೊಂದು ಸಾರಿ ಒಂದು ದೇವತೆಯ ಆರಾಧನೆಯ ಹಿನ್ನಲೆಯಲ್ಲಿ ಆಚರಿಸುತ್ತಾರೆ. ಹೀಗೆ ಸಕಲ ಪೂರ್ವಸಿದ್ಧತೆಗಳೊಂದಿಗೆ ಆಗುವ ಹಬ್ಬ-ಹರಿದಿನ, ತಿಥಿ-ಮತಿಗಳು ಅನೇಕ ಆಚರಣೆಗಳ ಮೊತ್ತವಾಗಿದೆ. ಆಚರಣೆಗಳನ್ನು ದೈನಿಕಾವರ್ತನದ ಆಚರಣೆಗಳು ಮತ್ತು ವಾರ್ಷಿಕಾವರ್ತನದ ಆಚರಣೆಗಳು ಜೀವನಾವರ್ತನದ ಆಚರಣೆಗಳು ಎಂದು ಮೂರು ರೀತಿಯಲ್ಲಿ ವಿಂಗಡಿಸಬಹುದು.

ಜೀವನಾವರ್ತವು ಮನುಷ್ಯನ ಹುಟ್ಟಿನಿಂದ ತೊಡಗಿ ಸಾವಿನಲ್ಲಿ ಕೊನೆಗೊಳ್ಳುತ್ತದೆ. ಇವುಗಳ ನಡುವೆ ಅನೇಕ ಸ್ಥಿತ್ಯಂತರದ ಆಚರಣೆಗಳು ಅಥವಾ ಪರಿವರ್ತನೆಯ ವಿಧಿಗಳೆಂದು ಕರೆಯಬಹುದು. ಇಂತಹ ವಿಧಿ ಆಚರಣೆಗಳು ಕಾಲದಿಂದ ಕಾಲಕ್ಕೆ ದೇಶದಿಂದ ದೇಶಕ್ಕೆ ವ್ಯತ್ಯಾಸವಾಗುತ್ತಾ ಹೋಗುತ್ತವೆ. ಭಾರತೀಯ ಸಂಬಂಧವನ್ನು ಗಮನಿಸಿ ಹೇಳುವುದಾದರೆ ಹೆಂಗಸರಲ್ಲಿ ಇಂತಹ ಸ್ಥಿತ್ಯಂತರ ಹಾಗೂ ಸ್ಥಿತ್ಯಂತರದ ವಿಧಿಗಳೇ ಹೆಚ್ಚು. ಹದಿಹರೆಯ ಮೈನೆರೆಯುವಿಕೆ, ಮದುವೆ, ಸೀಮಂತ, ಹುಟ್ಟಿನ ಆಚರಣೆ, ಸಾವಿನ ಆಚರಣೆ ಹೀಗೆ ವೈವಿಧ್ಯಮಯ ಆಚರಣೆಗಳೆಲ್ಲವೂ ಜೀವನಾವರ್ತನದ ಆಚರಣೆಗಳಾಗುತ್ತವೆ. ಸಮಾಜವು ಒಬ್ಬ ವ್ಯಕ್ತಿಯನ್ನು ಅಂಗೀಕರಿಸುವಂತೆ ಮಾಡುವಲ್ಲಿ ಈ ಜೀವನಾವರ್ತನದ ಆಚರಣೆಗಳು ಕರ್ನಾಟಕದ ಮಟ್ಟಿಗೆ ಪ್ರಾದೇಶಿಕವಾಗಿ ಬದಲಾವಣೆಯನ್ನು ಹೊಂದುತ್ತಾ ಬರುತ್ತವೆ.

- **ಜನನ ಸಂದರ್ಭದಲ್ಲಿ ಆಚರಣೆಗಳು**

ಜನನ ಸಂದರ್ಭದಲ್ಲಿ ಆಚರಣೆಯು ಪ್ರತಿಯೊಂದು ಸಮುದಾಯದವರಲ್ಲಿಯೂ ಆಚರಣೆಯಲ್ಲಿರುವಂತೆ ಮ್ಯಾಸಬೇಡರ ಸಮುದಾಯದಲ್ಲಿಯೂ ಆಚರಿಸುವರು. ಈ ಆಚರಣೆಗೆ ಸಂಬಂಧಿಸಿದಂತೆ ಈ ರೀತಿ ತಿಳಿಯಪಡಿಸಿದರು. "ನಾಮಕರಣ ನಾವೇನು ಬೇರೆ ಮಾಡಲ್ಲ. ಎಲ್ಲಾ ಜಾತಿಯವರು ಹೆಂಗೆ ಮಾಡ್ತಾರೋ ನಾವು ಕೂಡಾ ಹಾಗೆಯೇ ಮಾಡ್ತೀವಿ. ಮೊದ್ಲು ಮಗು ಯಾವ ವಾರದಲ್ಲಿ ಹುಟ್ಟಿದೆ ಅಂತ ನೋಡ್ಕೋತೀವಿ. ನೋಡ್ಕೊಂಡು ಜಾತ್ಕ ಕೇಳಿಸ್ತೀವಿ. ಇಂತ ವಾರ್ದಾಗೆ ನಮ್ಮ ಮಗು ಹುಟ್ಟದೆ. ಅದಕ್ಕೆ ಏನೇನು ಹೆಸರು ಇಡಬೇಕು ಅಂತ ಕೇಳ್ತೀವಿ. ಶಾಸ್ತ್ರ ಹೆಂಗೆ ಹೇಳ್ತಾರೋ ಹಂಗೆ ಹೆಸರಿಡ್ತೀವಿ. ಮೊದ್ಲು ನಾಲ್ಕು ಹೇಳಿರ್ತಾರೆ, ಅದರಲ್ಲಿ ನಮಗೆ ಯಾವುದು ಬೇಕೋ ಆ ಹೆಸರು ಕೊನೆಯದಾಗಿ ಖಾಯಂ ಮಾಡಿಕೊಂತೀವಿ. ಮೊದ್ಲು ಹೆಸರು ಇಡಬೇಕಾದ್ರೆ ಹದಿನೈದು ದಿನ, ಒಂದು ತಿಂಗಳು, ಮೂರು ತಿಂಗಳು ಒಂಬತ್ತು ತಿಂಗಳು ಹೀಗೆ ಇಷ್ಟು ದಿನಗಳಲ್ಲಿ

ಯಾವಾಗ ಬೇಕಾದರೂ ಇಡಬಹುದು. ಮೊದ್ಲು ಮನೆಯನ್ನು ಸಾರಣೆ ಮಾಡ್ತೀವಿ. ಮೊದ್ಲು ಗೋಮೂತ್ರ ತಂದು ಮನೆಯ ಒಳಗೆ ಸುತ್ತಮುತ್ತ ಚೆಲ್ಲಿಸ್ತೀವಿ. ಜಾಸ್ತಿ ಮೂರು ತಿಂಗಳಾಗ ಹೆಸರು ಇಡೋದು. ಆದರೆ ಇತ್ತಿತ್ಲಾಗ ಐದು ತಿಂಗಳಲ್ಲಿ ಇಡ್ತಾರೆ. ಯಾಕಂದರೆ ಮಗುವನ್ನು ಎಲ್ಲರೂ ಬಂದು ಎತ್ತಿಕೊಂಡು ಆಡಿಸುವುದು ಅಂತ ಎಲ್ಲಾ ಸಂಬಂಧಿಕರನ್ನು ಮೊದ್ಲು ಕರಿಸಿಕೊಳ್ತೀವಿ. ಕರಿಸಿಕೊಂಡು ಊರಿನಲ್ಲಿ ಎಲ್ಲ ಬಂಧುಬಳಗದವರಿಗೆ ಹೇಳ್ತೀವಿ. ತಟ್ಲು ಇಡ್ತೀವಿ. ಸಂಜೆಯ ಹೊತ್ತು ಎಲ್ಲರೂ ಬರ್ರಿ ಅಂತ ಹೇಳಿ ಅಡುಗೆ ಮಾಡಿಸ್ತೀವಿ. ಉಗ್ಗಿ, ಕೇಸರಿಬಾತು ಮಾಡಿ ತೊಟ್ಲು ಕಟ್ತೀವಿ. ಅದಕ್ಕೆ ಮಗುವನ್ನು ಹಾಕಿ ಸೋದರತ್ತೆ ಸೋದರ ಮಾವರಾದವರನ್ನು ಕರಿಸಿ, ಗುಗ್ಗರಿ ಹಾಕಿರ್ತೀವಲ್ಲಿ ಐದು ಗಂಟು ಕಟ್ಟಿ ಮಗೂನ ತೊಟ್ಟಿಲ್ಲಿ ಇಟ್ಟಿರ್ತೀವಿ."[೧] "ಆಗ ಸೋದರತ್ತೆ ಒಂದು ಪೂಜೆ ಮಾಡಿ, ಕಾಯಿ ಒಡೆಸಿ ತೊಟ್ಟಿಲಲ್ಲಿರುವ ಗಂಟುಗಳನ್ನು ಐದು ಜನ ಅತ್ತೆ ಮಾವಂದಿರಾದಂತವ್ರು ಬಾಯಿಯಿಂದ ತಗಂಡು ಆ ತೊಟ್ಟಿಲು ಸುತ್ತ ತಿರುಗ್ತಾರೆ. ತಿರುಗ್ತಾನೆ ಹೆಸರು ಕರೀತಾರೆ. ಮೊದ್ಲು ಮನೇದೇವ್ರ ಹೆಸ್ರು ಇಲ್ಲಾಂದ್ರೆ ಅವ್ರು ಹುಟ್ಟಿದ ದಿನ ಯಾವಾರ ಇರ್‍ತದೋ ಆ ಹೆಸ್ರಿಂದ ಹೆಸರು ಕರಿತಾರೆ ಒಳಗೆ, ಹೊರಗೆ ಓಡುತ್ತಾರೆ. ಆಗ ಆಕಡೆ ಈಕಡೆ ನಿಂತವರು ಪರಿಕೆ ತಗಂಡು ಮತ್ತು ಟವಲ್ಲು ಸುತ್ತಿ ಅವ್ರಿಗೆ ಹೊಡೀತಾರೆ. ಹಿಂಗೆ ಐದು ಸಲ ತಿರುಗಿ ಆ ಗುಗ್ಗರಿ ಸಕ್ಕರೆ ಹಂಚಿ ಊಟಕ್ಕೆ ಇಡುತ್ತಾರೆ. ಈಗಿನ ಕಾಲ್ದಲ್ಲಿ ಏನಂದ್ರೆ ಗುಗ್ಗರಿ ಸ್ವಲ್ಪ ಹಾಕ್ತಾರೆ. ಅಡುಗೆ ಕೂಡಾ ಲಾಡು, ಮೈಸೂರ್‌ಪಾಕ್, ಜಿಲೇಬಿ ಅಂತಹವುಗಳನ್ನು ಮಾಡಿ ಹಗಲು ಹೊತ್ತೇ ಹೆಸರು ಇಡ್ತಾರೆ. ಫೋಟೋಗೀಟೋ ತೆಗಿಸ್ತಾರೆ. ಈಗೆಲ್ಲಾ ದೇವ್ರ ಹೆಸ್ರು ಇಡೋರ ಸಂಖ್ಯೇ ಕಡಿಮೆ ಆಗದೆ. ಅವ್ರಿಗೆ ಇಷ್ಟ ಆಗೋ ಹೆಸರನ್ನ ಇಡ್ತಾರೆ. ಕಾಲ ಎಲ್ಲಾ ಬದ್ಲಾಗಿದೆ ನೋಡ್ರಿ."[೨] ಎಂಬುದಾಗಿ ತಿಳಿಸುತ್ತಾರೆ.

ನಾಮಕರಣದ ವಿವರಗಳನ್ನು ಗಮನಿಸಿದರೆ ಕೆಲವು ಸಂಗತಿಗಳು ತಿಳಿಯುತ್ತವೆ. ಮಗುವಿಗೆ ಹೆಸರಿಡಲು ಶಾಸ್ತ್ರ ಕೇಳುವ ಪದ್ಧತಿ ಇದೆ. ಹೀಗೆ ಶಾಸ್ತ್ರ ಹೇಳುವವರು ಜಂಗಮರು ಅಥವಾ ಆಊರಿನ ಮೇಲ್ವರ್ಗದವರಲ್ಲಿ ಒಬ್ಬರಾಗಿರ್ತಾರೆ. ಹೀಗೆ ಮೇಲ್ವರ್ಗದವರು ಶಾಸ್ತ್ರ ಹೇಳಿದ ಹೆಸರನ್ನು ಕೆಳವರ್ಗದವರು ಇಡುವ ಸ್ಥಿತ್ಯಂತರವನ್ನು ಗಮನಿಸಬಹುದು. ಮೂಲದಲ್ಲಿ ಮನೆ ದೇವರ ಹೆಸರು, ತಾವು ಆರಾಧಿಸುವ ದೇವರ ಹೆಸರು, ತಮ್ಮ ಹಿರಿಯರ ಹೆಸರು ಕರೆಯುತ್ತಾ ಸಾಂಸ್ಕೃತಿಕವಾಗಿ ಮುಂದಿನ ಪರಂಪರೆ ಕಟ್ಟಿಕೊಳ್ಳುತ್ತಿರುವುದು ಕಣ್ಮರೆಯಾಗುತ್ತಿರುವುದನ್ನು ಇಲ್ಲಿ ವಿಶೇಷವಾಗಿ ಗಮನಿಸಲು ಸಾಧ್ಯವಿದೆ. ಆಹಾರ ಪದ್ಧತಿ ಬದಲಾಗಿರುವುದು, ಇದೆಲ್ಲದರ ನಡುವೆಯೂ ಗುಗ್ಗರಿ ಕಾಳಿನ ಆಚರಣೆ ಮಾತ್ರ ಮೂಲ ಬುಡಕಟ್ಟಿನ ಫಲವಂತಿಕೆಯನ್ನು ಬಿಂಬಿಸುತ್ತದೆ.

"ಒಡಲಕ್ಕಿ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಗರ್ಭಿಣಿಯಾಗಿರುವಾಗ ಹೆಣ್ಣುಮಕ್ಕಳಿಗೆ ಮಾಡುವ ಶಾಸ್ತ್ರ ಯಾರೇ ಆಗಿರಬಹುದು. ಗರ್ಭಿಣಿಯಾದ ಐದನೇ ತಿಂಗಳಿನಲ್ಲಿ ಇಲ್ಲಾಂದ್ರೆ ಆರನೇ ತಿಂಗಳಿನಲ್ಲಿ ಈ ಶಾಸ್ತ್ರ ಮಾಡ್ತೀವಿ. ಯಾರೇ ಹೆಣ್ಣು ಮಗಳಾದ್ರೂ ಕೂಡಾ ಅವ್ರು ಎಂತಹ ಒಡತನದಲಿಯೇ ಇರಲಿ ಮೊದಲು ಗರ್ಭಿಣಿ ಆಗಿರುವಾಗ ಈ ಶಾಸ್ತ್ರ ಮಾಡ್ತೀವಿ. ಚೊಚ್ಚಲ

ಬಸಿರು ಅಂತಾರೆ. ಅಂತಹವರಿಗೆ ಗಂಡನ ಮನೆಯಲ್ಲಿರುವ ಹೆಣ್ಣುಮಕ್ಕಳನ್ನು ಕರಕೊಂಡು ಅವಳಿಗೆ ಒಂದು ಹಸಿರು ಸೀರೆ, ಹಸಿರು ಕುಪ್ಪಸ, ಹಸಿರು ಬಳೆ ಜೊತೆ ಅವರಿಗೆ ಇಷ್ಟವಾಗುವಂತ ಹಣ್ಣುಗಳನ್ನು ತರಬೇಕು. ತಂದು ಅಕ್ಕಿ, ಎಲೆ-ಅಡಿಕೆ, ಕೊಬ್ಬರಿ, ಕಡ್ಲೆ (ಪುಟಾಣಿ/ ಹಸಿಕಡ್ಲೆ ಅಂತೀವಿ) ಅರಿಶಿನ ಇವುಗಳನ್ನು ತಂದು ಅವಳಿಗೆ ಉಡಿ ತುಂಬ್ತೀವಿ. ಹಿಂಗೇ ತವರು ಮನೆಗೆ ಬಂದ ತಾಯಿ ಮಾತ್ರವಲ್ಲ ಅವರವರ ಸಂಬಂಧಿಕರೆಲ್ಲ ತರ್ತಾರೆ. ತಂದು ಅದೇ ರೀತಿ ಮಾಡ್ತಾರೆ. ಜೊತೆಗೆ ತಂದೆ ತಾಯಿ ಮನೆಯವರಲ್ಲದೆ ಕೆಲವರು ಗಂಡನ ಮನೆಯವರು ಕೂಡಾ ಹೀಗೆ ಮಾಡ್ತಾರೆ. ಹಿಂಗೆ ಅವಳಿಗೆ ಶಾಸ್ತ್ರ ಮಾಡುವುದರಿಂದ ಹೆರಿಗೆ ಆಗ್ತದಲ್ಲಾ ಆವಾಗ ಅವಳಿಗೆ ಏನೂ ತೊಂದರೆ ಆಗುವುದಿಲ್ಲ. ಅವಳಿಗೆ ಇಷ್ಟವಾದಂತವುಗಳನ್ನು ತರದಿದ್ದರೆ ಹೆರಿಗೆ ಸರಿಯಾಗಿ ಆಗುವುದಿಲ್ಲ ಅಂತಾರೆ. ಅದಕ್ಕೆ ಈ ಶಾಸ್ತ್ರ ಮಾಡ್ತೀವಿ. ಇದು ಹೊಸತೇನಲ್ಲ. ನಮ್ಮ ಮುತ್ತಜ್ಜನ ಕಾಲದಿಂದಲೂ ಮಾಡಿಕೊಂಡು ಬಂದಾರೆ ಅಂತ ಹೇಳ್ತಾರೆ. ಅಧಕ್ಕೆ ನಾವು ಕೂಡಾ ಅದೇ ರೀತಿ ಮಾಡ್ತೀವಿ ನೋಡ್ರಿ. ಕೆಲವಂತೂ ಪ್ರತೀ ಬಾರಿ ಗರ್ಭಿಣಿಯಾದಾಗಲೂ ಹೀಗೆಯೇ ಮಾಡ್ತಾರೆ. ಇಲ್ಲದಂತವರು ಒಂದೇ ಸಲ ಮಾಡ್ತಾರೆ ನೋಡ್ರಿ. ನಾವು ಒಡಲಕ್ಕಿ ತುಂಬುವ ಶಾಸ್ತ್ರ ಅಂತ ಕರೀತೀವಿ."[೩] ಬೋರಮ್ಮ ಹೇಳುವ ಒಡಲಕ್ಕಿ ಶಾಸ್ತ್ರದ ಆಚರಣೆ ಮ್ಯಾಸಬೇಡರಿಗೆ ತೀರಾ ವಿಶೇಷ ಅಂದೇನು ಅನ್ನಿಸುತ್ತಿಲ್ಲ. ಸಾಮಾನ್ಯವಾಗಿ ಬಹುಪಾಲು ಸಮುದಾಯಗಳು ಮಾಡುವ ಸಾಮಾನ್ಯ ವಿವರದಂತಿದೆ. ಅಂದರೆ ಈ ಬಗೆಯ ಆಚರಣೆಯ ಮೂಲಕ ಸಮುದಾಯವೊಂದು ತನ್ನ ವಿಶಿಷ್ಟತೆಯನ್ನು ಬಿಟ್ಟುಕೊಟ್ಟು, ಸಾಮಾನ್ಯವಾಗಿ ಎಲ್ಲಾ ಸಮುದಾಯಗಳು ಆಚರಿಸುವ ಏಕರೂಪಿ ಆಚರಣೆಯ ಕಡೆ ತುಡಿಯುತ್ತಿರುವ ಸೂಚನೆಗಳು ಈ ಮಾತಿನಲ್ಲಿವೆ.

- **ಋತುಮತಿ ಶಾಸ್ತ್ರ**

ಮ್ಯಾಸಬೇಡರು ಆಚರಿಸುವ ಆಚರಣೆಗಳಲ್ಲಿ ಋತುಮತಿ ಶಾಸ್ತ್ರವೂ ಭಿನ್ನವಾಗಿದೆ. ಈ ಒಂದು ಆಚರಣೆ ಪಾರಂಪರಿಕವಾಗಿ ಇವತ್ತಿನವರೆಗೂ ಮುಂದುವರಿದುಕೊಂಡು ಬಂದಿದೆ. ಸಾಮಾನ್ಯವಾಗಿ ಹೆಣ್ಣುಮಕ್ಕಳು ಹನ್ನೆರಡು ವರ್ಷ ವಯಸ್ಸು ಮೀರಿದ ಕೂಡಲೇ ಋತುಮತಿಯಾಗುತ್ತಾರೆ. ಇಂತಹ ಆಚರಣೆ ಸ್ವತಃ ಸಮುದಾಯದ ಹಿರಿಯ ಬಚ್ಚಿ ಬೋರಯ್ಯನಹಟ್ಟಿ ಸಣ್ಣಬೊಮ್ಮ ಹೇಳುವ ವಿವರ ಹೀಗಿದೆ.

"ನೋಡ ತಂಗಿ ನಾವು ಈ ಪದ್ಧತಿಯನ್ನು ಹಳೇಕಾಲದಿಂದ್ಲು ಮಾಡಿಕೊಂಡು ಬಂದೀವಿ. ಇದೇನು ಇವತಿಂದಲ್ಲ. ಹೆಣ್ಣುಮಕ್ಳು ಹನ್ನೆರಡು ಇಲ್ಲಂದ್ರೆ ಹದಿನಾಲ್ಕು ವರ್ಷಕ್ಕೆ ಋತುಮತಿಯಾಗ್ತಾರೆ. ಋತುಮತಿಯಾದಾಗ ಅವಳು ತಾಯಿಗೆ ಇಲ್ಲಂದ್ರೆ ತನ್ನ ಜೊತೆಯಲ್ಲಿ ಇರುವ ಹುಡುಗಿಯರಿಗೆ ಹೇಳ್ತಾಳೆ. ಇಲ್ಲಂದ್ರೆ ಸುಮ್ನೆ ಒಂದ್ಕಡೆ ಕೂತ್ಕೊಂಡು ಅಳ್ತಾಳೆ. ಹಿಂಗೆ ಋತುಮತಿಯಾದ ಕೂಡ್ಲೆ ಎಲ್ಲಾ ಸಂಬಂದಿಕರಿಗೂ ತಿಳಿಸ್ತೀವಿ. ಮೊದ್ಲು ಸೋದರ ಮಾವನಿಗೆ ಹೇಳ್ತೀವಿ. ಅವನು ಬೇವಿನ ಸೊಪ್ಪ ಇಲ್ಲಾಂದ್ರೆ ಹೊಂಗೆ ತೊಪ್ಪ ತರ್ತಾನೆ. ಸೋದರತ್ತೆ ಕೂಡ ನೀರು ಹಾಕಿಸ್ತೇವೆ. ಹಿಂಗೆ ನೀರು

ಹಾಕುವಾಗ ಜೊತೆಗೆ ಆರು–ಏಳು ವರ್ಷದ ಮಗುವನ್ನು ಜೊತೆಗೆ ಕುಂದ್ರಿಸಿ ಇಬ್ರಿಗೂ ಹಾಕಿ ಇಬ್ರನ್ನೂ ಗುಡ್ಲು ಹಾಕಿ ಅದರೊಳಗೆ ಕುಂದ್ರುಸ್ತೀವಿ. ಅವಳಿಗೆ ಊಟ ಮಾಡ್ಲಿಕ್ಕೆ ತಟ್ಟೆ ಮತ್ತು ನೀರು ಕುಡಿಯಲು ಮಗ್ಗಿನ ಗಿಂಡಿ ಇಲ್ಲಂದ್ರೆ ತೆಂಗಿನ ಚಿಪ್ಪು ಕೊಡ್ತೀವಿ. ಅದ್ರಲ್ಲೇ ಊಟ ನೀರು ಎಲ್ಲ. ಹಿಂಗೆ ಮದ್ಲು ಐದು ದಿನ ಕುಂದ್ರಿಸಿ ಐದನೇ ದಿನದಲ್ಲಿ ನೀರು ಹೊಯ್ದು ಊರ ಹೊರಗಡೆ ತಂಗಡೆ ಗಿಡ ದಾಟುವ ಕಾರ್ಯ ಮಾಡ್ತೀವಿ. (ತಂಗಡೆ ಗಿಡ ದಾಟುವ ಕಾರ್ಯ ಮಾಡುವ ಉದ್ದೇಶವೆಂದರೆ, ಇದು ಫಲವಂತಿಕೆಯ ಸಂಕೇತ. ಮುಂದೆ ಮಕ್ಕಳ ಫಲ ಲಭಿಸಲೆಂದು ಹೇಳುತ್ತಾರೆ. ಹಾಗೆ ಇದು ಮೂಲತಃ ಬುಡಕಟ್ಟುಗಳು ಕಾಡಿನಲ್ಲಿ ವಾಸಿಸುವುದರಿಂದ ಅವರು ಕಾಡಿನ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಂಕೇತವಾಗಿದೆ.)

ಹದಿನಾರು ದಿವಸದ ತನಕ ಕುಂದ್ರಿಸ್ತೀವಿ. ಎರಡು ಇಲ್ಲಾಂದ್ರೆ ಮೂರು ದಿನಕ್ಕೊಮ್ಮೆ ಹಸಿರು ತೊಪ್ಲ ತಂಡು ಒಣಗಿಸಿ ಬಂಡೆ ಚಿಪ್ಪು ಸಮೇತ ಸುಡ್ತೀವಿ. ಅವನ್ನು ಕೂಡಾ ಊರ ಹೊರಗಡೆ ತಂಗಡೆ ಗಿಡಕ್ಕೆ ಹಾಕಿ ಸುಡೋದು ಹಿಂಗೆ ಹದಿನಾರು ದಿವಸದ ತನಕ ಮಾಡ್ತೀವಿ. ಐದನೇ ದಿನದ ನಂತರ ಆರನೇ ದಿನದಿಂದ ಹತ್ತೊಂಬತ್ತನೇ ದಿನದ ತನಕ ಸಂಬಂಧಿಕರು ಮತ್ತು ಊರಿನ ಬಂಧು ಬಾಂಧವರು ಅವ್ಳಿಗೆ ಒಳ್ಳೊಳ್ಳೆ ಅಡುಗೆ ಮಾಡಿ ಹಾಕ್ತಾರೆ. ಕಡ್ಲೆ ಬೆಲ್ಲನೂ ಜೊತೆಗೆ ಕೊಡ್ತಾರೆ. ಹಿಂಗೆ ಹದಿನಾರು ದಿನದಲ್ಲಿ ಸ್ನಾನ ಮಾಡ್ಸಿ ಒಳಗೆ ಕರ್ಕೊಂತೀವಿ. ಆ ದಿನ ಸೋದರ ಮಾವ ಅವಳಿಗೆ ನಾಲಗೆ ಸುಡುತ್ತಾನೆ. (ನಾಲಗೆ ಸುಡುವ ಉದ್ದೇಶವೆಂದರೆ, ಅವಳು ಮೈಲಿಗೆಯಾಗಿರುತ್ತಾಳೆ. ನಾಲಗೆ ಸುಡುವ ಮೂಲಕ ಅವಳನ್ನು ಪವಿತ್ರಳನ್ನಾಗಿಸಿಕೊಳ್ಳುತ್ತಾರೆ.)ಮತ್ತು ಗೋಮೂತ್ರವನ್ನು ತಂದು ಅವಳಿಗೆ ಕುಡಿಯಲಿಕ್ಕೆ ಸ್ವಲ್ಪ ಕೊಡ್ತಾನೆ. ಇದು ಕೂಡ ಅವಳು ಮೈಲಿಗೆಯಾಗಿರುತ್ತಾಳೆ ಎಂಬ ಉದ್ದೇಶದಿಂದಲೇ ಚುಮುಕಿಸಲಾಗುತ್ತದೆ. ಜೊತೆಗೆ ಪಶುಪಾಲನಾ ಸಂಸ್ಕೃತಿಯ ದ್ಯೋತಕವೂ ಆಗಿದೆ. ಒಂದು ಪಕ್ಷ ಮದುವೆಯಾಗಿದ್ದರೆ ಋತುಮತಿಯ ಸುದ್ದಿ ಗಂಡನ ಮನೆಗೆ ಹಿಂದೆ ಮಡಿವಾಳನ ಮೂಲಕ ತಿಳಿಸುತ್ತಿದ್ದರಂತೆ. ಈಗಲೂ ಸಂಬಂಧಿಕರಲ್ಲಿ ಯಾರಾದರೂ ಒಬ್ಬರು ಹೋಗಿ ತಿಳಿಸುತ್ತಾರೆ. ಹಿಂಗೆ ತಿಳಿಸುವಾಗ ಗಂಡನ ಮನೆಯವರೇ ಸಿಹಿಯೂಟ ಕಟ್ಟಿಕೊಂಡು ಹಣ್ಣು ಹಂಪಲುಗಳ ಜೊತೆಗೆ ಹೊಸ ಬಟ್ಟೆಗಳನ್ನು ಸಹ ತರುತ್ತಾರೆ. ಇತ್ತೀಚಿನ ದಿನಗಳಲ್ಲಿ ಋತುಮತಿ ಶಾಸ್ತ್ರ ಹೆಂಗೆ ಮಾಡ್ತಾರಂದರೆ ಅವಳನ್ನು ಒಳಗೆ ಕರ್ಕೊಳ್ಳುವಾಗ ಆವೊತ್ತಿನ ದಿನ ರೇಡಿಯೋ ಹಾಕ್ಸಿ ಮೇಳವನ್ನು ಮಾಡಿಸುತ್ತಾರೆ. ಜೊತೆಗೆ ಒಳ್ಳೊಳ್ಳೆ ಅಡುಗೆ ಮಾಡುತ್ತಾರೆ. ಬಡವರಂತವ್ರು ಆದ್ರೆ ಊರಿನಲ್ಲೇ ಅಥವಾ ಬೇರೆ ಊರಿನಿಂದ ಹಲಗೆ ತರಿಸಿ ಹಲಗೆ ಬಾರಿಸಿಕೊಂಡು ಅವಳ ಕಾರ್ಯಗಳನ್ನು ಮಾಡುತ್ತಾರೆ. ಹಿಂಗೆ ಋತುಮತಿ ಶಾಸ್ತ್ರ ಮಾಡುತ್ತಾರೆ. ನೋಡ್ರಿ, ನಮ್ಮ ಜಾತಿಯೊಳಗೆ ಬೇರೆ ಬೇರೆ ಜಾತಿ ಹೆಂಗೋ ನಮಗೇನು ಜಾಸ್ತಿ ಗೊತ್ತಿಲ್ಲ."[೪]

"ಸಣ್ಣೊಬಮ್ಮ ಅವರು ಋತುಮತಿ ಶಾಸ್ತ್ರದ ಬಗ್ಗೆ ಕೊಡುವ ಮಾಹಿತಿಗಳನ್ನು ಗಮನಿಸಿದೆ ಕೆಲವು ಅಂಶಗಳು ಸ್ಪಷ್ಟವಾಗುತ್ತವೆ. ಈ ಆಚರಣೆಯು ಬಹುಪಾಲು ಮತ್ತೆ ಮತ್ತೆ ಕಾಡಿನ

ಸಂಬಂಧವನ್ನು ಮತ್ತೆ ಮತ್ತೆ ನೆನಪಿಸುತ್ತವೆ. ಇಲ್ಲಿನ ಮಾತಿನಲ್ಲಿ ಕಾಡು ಮತ್ತು ನಾಡಿನ ಹೊಂದಾಣಿಕೆಯು ಭಿನ್ನ ಆಯಾಮದಲ್ಲಿರುವುದನ್ನು ಗುರುತಿಸಬಹುದು. ಋತುಮತಿಯಾದ ಹುಡುಗಿಯನ್ನು ಮನೆ ಹೊರಗೆ ಹೊಗೆ ಸೊಪ್ಪಿನ ಗುಡಿಸಲು ಹಾಕಿ ಕೂರಿಸುವುದು ತಂಗಟೆ ಗಿಡ ಮುಟ್ಟಿಸುವುದು ಮಾವನಿಂದ ನಾಲಗೆ ಸುಡಿಸುವುದು, ಗೋಮೂತ್ರ ಚುಮುಕಿಸುವುದು ಇವುಗಳೆಲ್ಲವೂ ಪಶುಪಾಲನೆ ಮತ್ತು ಕಾಡಿನ ಸಂಬಂಧವನ್ನು ಅದರ ಸಂಕೀರ್ಣತೆಯನ್ನು ತೋರಿಸುತ್ತವೆ. ಹುಡುಗಿಗೆ ಮದುವೆಯಾಗಿದ್ದು ಋತುಮತಿಯಾದರೆ ಮಾಡುವ ಆಚರಣೆಯ ವಿವರಗಳನ್ನು ಗಮನಿಸಿದರೆ ಬಾಲ್ಯವಿವಾಹದ ಲಕ್ಷಣಗಳು ಕಾಣಿಸುತ್ತವೆ. ಸಣ್ಣಬೊಮ್ಮನ ಮಾತಿನಲ್ಲಿ ಈ ಆಚರಣೆ ಬದಲಾಗುತ್ತಿರುವ ಲಕ್ಷಣಗಳಿವೆ. ಈ ಬದಲಾವಣೆಯ ಬಗ್ಗೆ ಅವರಲ್ಲಿ ಆತಂಕವಾಗಲೀ ದುಃಖವಾಗಲೀ ಇಲ್ಲದಿರುವುದನ್ನು ಗಮನಿಸಬಹುದು. ಶಾಮಿಯಾನ ಹಾಕಿಸುವುದು ಮೈಕ್ ಹಾಕಿಸುವುದು ಈ ಮೂಲಕ ಋತುಮತಿ ಶಾಸ್ತ್ರ ಆಧುನಿಕ ಪರಿಕರಗಳ ಜೊತೆ ಬೆಸೆದುಕೊಳ್ಳುತ್ತಿರುವುದನ್ನು ಗಮನಿಸಬಹುದು."[೫]

ಈ ಮೇಲಿನ ಎಲ್ಲಾ ಕಾರ್ಯಗಳನ್ನು ಸಹ ಇವತ್ತು ಸಮುದಾಯ ಇದೇ ರೀತಿಯಾಗಿ ಮಾಡುತ್ತಿದೆ. ಯಾವುದೇ ರೀತಿಯ ಬದಲಾವಣೆಗಳು ಆಗಿಲ್ಲ. ಇಂದಿಗೂ ಕೂಡ ಹಬ್ಬಗಳಲ್ಲಿ ಪ್ರಚಲಿತವಿದೆ. ಆದರೆ ಕರಿಶೆಟ್ಟಿ ರುದ್ರಪ್ಪನವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ "ನಾಗರೀಕತೆಗೆ ಒಳಗಾಗಿ ಮನೆಯಲ್ಲಿಯೇ ಋತುಮತಿಯಾದವಳನ್ನು ಇರಿಸಿಕೊಂಡು ಕಾರ್ಯಗಳನ್ನು ಮಾಡುತ್ತಾರೆ ಎಂದಿದ್ದಾರೆ. ಆದರೆ ಅವರು ಹೇಳುವ ಪ್ರಕಾರ ಎಲ್ಲೋ ಒಂದು ಕಡೆ ಉದ್ಯೋಗಸ್ಥರ ಕುಟುಂಬದಲ್ಲಿ, ನಗರದಲ್ಲಿ ಇರಬಹುದು. ಹಳ್ಳಿಗಳಲ್ಲಿ ಅವರು ಹೇಳುವ ಪ್ರಕಾರ ಮನೆಯ ಹೊರಗಡೆಯೇ ಇರಿಸಿಕೊಂಡು ಕಾರ್ಯಗಳನ್ನು ಮಾಡುತ್ತಾರೆ."[೬]

ತೆರ ಕೊಡುವ ಪದ್ಧತಿ

"ಬೇಡರಲ್ಲಿ ಹಿಂದೆ ಹೆಣ್ಣುಕೊಡಲು ತಂದೆ, ತಾಯಿ, ಸೋದರ ಮಾವಂದಿರ ಒಪ್ಪಿಗೆ ಸೂಚಿಸಿದ ನಂತರ ಗಂಡಿನ ಕಡೆಯವರು ಹೆಣ್ಣಿಗೆ ತೆರ ಅಥವಾ ವಧುವನ್ನು ನಿಶ್ಚಯ ಮಾಡಿಕೊಂಡಿದ್ದರೆ ದಕ್ಷಿಣೆಯಾಗಿ ಹದಿನಾರು ರೂಪಾಯಿಯನ್ನು ಕೊಡಬೇಕು, ಒಂದು ವೇಳೆ ಅನುಕೂಲವಿದ್ದರೆ ಆ ತರುವಾಯದಲ್ಲಿ ಎರಡುಪಲ್ಲ ದವಸ, ಬೆಂಡೋಲೆ, ಬುಗುಡಿ ಕಡ್ಡಿ, ಬೆಳ್ಳಿಕಡಗ, ಧಾರೆ ಕಡಗವನ್ನು ಕೊಡುತ್ತಿದ್ದರು. ಹೀಗೆ ಕೊಟ್ಟಾಗಲೇ ಮದುವೆ ದಿನವನ್ನು ತೀರ್ಮಾನ ಮಾಡಿಕೊಂಡು ಹೋಗುವರು. ಆದರೆ ಇತ್ತೀಚಿನ ದಿನಗಳಲ್ಲಿ ವಧುದಕ್ಷಿಣೆ ಮರೆಯಾಗಿ ವರದಕ್ಷಿಣೆ ಅತಿ ವೇಗವಾಗಿ ಸಂಚಲನ ಮೂಡಿಸುತ್ತಿದೆ. ಆದರೆ ಒಂದು ಆಶಾಭಾವನೆ ಎಂದರೆ ಇತ್ತೀಚಿನ ದಿನಗಳು ೧೦೦೦ ಪುರುಷರಿಗೆ ೯೧೫ ಮಹಿಳೆಯರು ಅಷ್ಟೆಯಾದ ಕಾರಣ ಹೆಣ್ಣು ಮಕ್ಕಳ ಜನನ ಪ್ರಮಾಣ ಕುಗ್ಗುತ್ತಿರುವುದರಿಂದ ಮತ್ತೆ ವಧುದಕ್ಷಿಣೆ ತನ್ನ ಆರ್ಭಟವನ್ನು ಮಾಡಬಹುದೆಂಬ ಆಶಾಭಾವನೆಯನ್ನು ಇಟ್ಟುಕೊಳ್ಳಬಹುದಾಗಿದೆ. ಕಾರಣ ಹೆಣ್ಣು ಭ್ರೂಣ ಹತ್ಯೆಗಳು ಹೆಚ್ಚಾದ ಕಾರಣ ಅದು ಸಫಲವಾಗಬಹುದೆಂದು ಹೇಳಬಹುದಾಗಿದೆ."[೭]

ಮದುವೆ ಶಾಸ್ತ್ರ

ಮ್ಯಾಸಬೇಡರ ಮದುವೆ ಪದ್ದತಿ ಕುರಿತು ಭಿನ್ನತೆಗಳಿವೆ. ಈ ಕುರಿತು ಕಾಮಗೇತನಹಳ್ಳಿ ಪೂಜಾರಿ ನಿಜಲಿಂಗಪ್ಪ ಹೇಳುವ ಮಾಹಿತಿ ಇಂತಿದೆ. "ಮ್ಯಾಸಬೇಡರ ಮದುವೆ ಪದ್ದತಿಯು ಬಹಳ ಸರಳವಾಗಿರುತ್ತದೆ. ಕಡಿಮೆ ವೆಚ್ಚದಲ್ಲಿಯೇ ಮದುವೆ ಮಾಡಿ ಮುಗಿಸುತ್ತಾರೆ. ಆದರೆ ನಾಗರೀಕತೆ ಬದಲಾದಂತೆಲ್ಲಾ ಕೆಲವು ನಿಯಮಗಳು ಬದಲಾಗಿವೆ. ಆದರೆ ಹಿಂದಿನ ಕಾಲದಲ್ಲಿ ಮದುವೆ ವಧುವರನ ತಂದೆತಾಯಿಗಳೇ ನಿರ್ಧರಿಸುತ್ತಿದ್ದರು. ತಂದೆ ತಾಯಿಯರ ಒಪ್ಪಿಗೆಯಾದರೆ ವಧುವರರಿಗೆ ಒಪ್ಪಿಗೆಯಾಗುತ್ತಿತ್ತು. ಆದರೆ ಇಂದು ವಧುವರರೇ ತಮಗೆ ಒಪ್ಪಿಗೆಯಾದ ಗಂಡು ಅಥವಾ ಹೆಣ್ಣು ನೋಡಿ ನಿರ್ಧರಿಸಿದ ನಂತರ ತಂದೆತಾಯಿಗಳಿಗೆ ತಿಳಿಸುತ್ತಾರೆ. ಅವರ ನಿರ್ಧಾರದಂತೆ ಇಂದು ಮದುವೆಗಳು ನಡೆಯುತ್ತವೆ. ಇದು ಅನಿವಾರ್ಯ ಕೂಡ. ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಬದಲಾವಣೆ ಬಯಸುತ್ತಾರೆ. ಮೊದಲು ಬಾಲ್ಯ ವಿವಾಹ ಪದ್ಧತಿ ರೂಢಿಯಲ್ಲಿತ್ತು. ಇದು ಇಂದು ಕೂಡ ಕೆಲವು ಹಳ್ಳಿಗಳಲ್ಲಿದೆ. ಅದು ಕೂಡ ಬೆರಳೆಣಿಕೆಯಷ್ಟು ೧೩-೧೪ ವರ್ಷದವರಿಗೆ ಮದುವೆ ಮಾಡುವ ಪದ್ದತಿ ಇದೆ. ಒಂದೇ ಬೆಡಗಿಗೆ ಸಂಬಂಧಿಸಿದವರಲ್ಲಿ ವೈವಾಹಿಕ ಸಂಬಂಧಗಳು ನಡೆಯುವುದಿಲ್ಲ. ಇದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ. ಉದಾಹರಣೆಗೆ ಮಲ್ಲ ನಾಯಕರ ಬೆಡಗು-ಮಂದ್ಲಾರು ಬೆಡಗುಗಳ ನಡುವೆ ಸಂಬಂಧ ಏರ್ಪಡುತ್ತದೆ. ಆದರೆ ಮಲ್ಲೆ ನಾಯಕರಲ್ಲಿನ ಉಪಪಂಗಡಗಳಾದ ದಡ್ಡಿಸೂರನಾಯಕರು, ಅಜ್ಜಡ್ಲಾರು, ಅಬ್ಬನಾರು, ಬೋಸೆನಾರು, ಮೀಸ್ಲಾರು ಬೆಡಗಿಗೆ ದೇವರಗೊಡ್ಲಾರು, ಎರ್ರಗಾಟಲು ದಾದಿಗನಾಡು, ಎರ್ರೆಬೋತ್ಲಾರು, ಮಾನುಗ್ಲಾಡು, ಎರ್ರೆಗಾಟ್ಲು ಮುಂತಾದವರು ಮಂದ್ಲಾರು ಪಂಗಡದಲ್ಲಿ ಸೇರುತ್ತಾರೆ."[೮] ಹೀಗೆ ವಿರುದ್ಧ ಪಂಗಡಗಳಲ್ಲಿ ಮಾತ್ರ ಮದುವೆ ಮಾಡಲಿಕ್ಕೆ ಅವಕಾಶವಿದೆ.

ಮದುವೆಗಳು ಗಂಡಿನ ಕಡೆಯವರಾದರೆ ಮೂರು ದಿನಗಳು, ಹೆಣ್ಣಿನ ಕಡೆಯವರಾದರೆ ಎರಡು ದಿನಗಳವರೆಗೆ ನಡೆಯುತ್ತದೆ. ಆದರೆ ಅವರ ಆರ್ಥಿಕ ಸ್ಥಿತಿಗಳಿಗನುಗುಣವಾಗಿ ಮದುವೆ ನಡೆಯುತ್ತದೆ. ಮದುವೆ ಸಂದರ್ಭದಲ್ಲಿ ನಿಶ್ಚಿತಾರ್ಥ, ವೀಳ್ಯಶಾಸ್ತ್ರ, ಮುಹೂರ್ತಶಾಸ್ತ್ರ, ಗಂಗೆಶಾಸ್ತ್ರ ಇವು ಪ್ರಮುಖವಾಗಿ ನಡೆಯುವಂತಹ ಆಚರಣೆಗಳು, ಸುಮಾರು ೧೮-೨೦ ವರ್ಷದ ಯುವಕರಿಗೆ ಮನೆಯ ಹಿರಿಯರು ಮದುವೆ ಮಾಡಬೇಕೆಂದು ಯೋಚಿಸಿ ಸಂಬಂಧ ಬೆಳೆಸಬಹುದಾದ ಬೆಡಗಿನ ಹೆಚ್ಚಿನ ಹಬ್ಬಗಳನ್ನು ಗುರುತಿಸುತ್ತಾರೆ. ಯಾವುದಾದರೂ ಒಂದು ನಿಗದಿಗೊಳಿಸಿ ಒಬ್ಬ ಮಹಿಳೆಯೊಂದಿಗೆ (ಸೋದರಿ, ಸೋದರತ್ತೆ ಅಥವಾ ಕುಲದ ಮುತ್ತೈದೆ) ಒಟ್ಟು ಸರಿ ಸಂಖ್ಯೆಯೊಂದಿಗೆ ಆರು, ಎಂಟು, ಹತ್ತು ಜನರು ಸೇರಿ ಹೋಗುತ್ತಾರೆ. ಹೋಗುವ ದಾರಿಯಲ್ಲಿ ಬೆಕ್ಕು, ಸಟ್ಟಿಗೆ, ದಂಡೆ ಮುಂಡೆ ಅಡ್ಡ ಬಂದರೆ ಅಪಶಕುನವೆಂದು ಭಾವಿಸುತ್ತಾರೆ. ಹೆಣ್ಣಿನ ಮನೆಗೆ ಹೋದ ಸಂದರ್ಭದಲ್ಲಿ ಆತಿಥ್ಯ ನಡೆಯುತ್ತದೆ. (ನಿಶ್ಚಿತಾರ್ಥ ಆಗುವವರೆಗೆ ಅಲ್ಲಿ ಊಟ ಮಾಡುವಂತಿಲ್ಲ.) ವಧುವನ್ನು ನೋಡಿ ಮರಳಿ ಹೋಗುತ್ತಾರೆ. ಒಪ್ಪಿಗೆಯಾದಲ್ಲಿ ನಂತರ ಒಪ್ಪಿಗೆಯೆಂದು ಬೇರೆಯವರ ಮೂಲಕ ಹೇಳಿ ಕಳುಹಿಸುತ್ತಾರೆ.

ಮದುವೆಯ ಗಂಡು ಮತ್ತು ಹೆಣ್ಣು ತಾವು ಒಬ್ಬರಿಗೊಬ್ಬರು ಒಪ್ಪಿಗೆ ಮಾಡಿಕೊಂಡಾಗ ಗಂಡು ಮತ್ತು ಹೆಣ್ಣಿನ ಕಡೆಯವರು ಎಲ್ಲರಿಗೂ ಒಪ್ಪಿಗೆಯಾದ ನಂತರ ಹೆಣ್ಣನ್ನು ಖಾಯಂ ಮಾಡಲಿಕ್ಕೆ ಗಂಡಿನ ಕಡೆಯವರು ಒಂದು ಅಥವಾ ಎರಡು ಸೀರೆ, ಎರಡು ಕುಪ್ಪಸ, ಎರಡು ತೆಂಗಿನ ಕಾಯಿ, ಹಣ್ಣು ಹೂವುಗಳನ್ನು ತೆಗೆದುಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ.

ವೀಳ್ಯಶಾಸ್ತ್ರ ಕುರಿತು ಬೋರಯ್ಯ ಹೇಳುವ ಮಾಹಿತಿ ಹೀಗಿದೆ "ಹೆಣ್ಣು ಖಾಯಂ ಆದ ಕೂಡ್ಲೆ ಯಾವತ್ತಾದ್ರೂ ಒಂದು ಒಳ್ಳೆಯ ದಿನ ನೋಡಿ 'ವೀಳ್ಯ ಶಾಸ್ತ್ರ' ಅಂತ ಮಾಡ್ತೀವಿ. ಈ ಶಾಸ್ತ್ರಕ್ಕೆ ಹೆಣ್ಣಿನ ಮತ್ತು ಗಂಡಿನ ಕಡೆಯವರು ಎಲ್ಲರೂ ಸೇರ್‍ತಾರೆ. ಅವರ ಬಂಧು ಕರುಬಳ್ಳಿಯವರು ಎಲ್ಲರೂ ಸೇರಿ ಈ ಕಾರ್ಯ ಮಾಡ್ತೀವಿ. ಈ ಶಾಸ್ತ್ರವನ್ನು 'ಉಡಿ ತುಂಬುವ ಶಾಸ್ತ್ರ' ಅಂತ ನಾವು ಕರೆಯುತ್ತೇವೆ. ಈ ಶಾಸ್ತ್ರವನ್ನು ಹೆಣ್ಣಿನ ಮನೆಯಲ್ಲಿ ಮಾಡ್ತೀವಿ. ಈ ಕಾರ್ಯಕ್ರಮಕ್ಕೆ ಊರಿನ ಎಲ್ಲಾ ಬಂಧುಗಳೂ ಬರ್‍ತಾರೆ. ಹಿಂದೆ ಗಾಡಿಗಳನ್ನು ಕಟ್ಟಿಕೊಂಡು ಹೋಗ್ತಿದ್ರು, ಈಗ ಟ್ರ್ಯಾಕ್ಟರ್‌ಗಳಲ್ಲಿ ಹೋಗ್ತೀವಿ. ಆ ದಿನ ಉಗ್ಗಿ ಮಾಡ್ತೀವಿ. ಇದ್ದಂತವರಾದ್ರೆ ಲಡ್ಡು ಗಿಡ್ಡು ಮಾಡ್ತಾರೆ. ಇಲ್ಲದಂತವರು ಉಗ್ಗಿ ಮಾಡಿ ಮುಗಿಸ್ತೀವಿ. ಅದು ಕೂಡ ಎಲ್ಲರೂ ಹುಡುಗಿ ಮನೆಯ ಮುಂದೆ. ರಾತ್ರಿ ಸುಮಾರು ೭:೩೦-ಲಗಂಟೆ ಆಯ್ತದೆ. ಎಲ್ಲರೂ ಊಟ ಗೀಟ ಮಾಡಿ ಊರಿನ ಯಜಮಾನರನ್ನು ಕರೆಸಿ ಅವರಿಗೆ ಊಟ ಮಾಡಿಸಿ ಎಲ್ಲರೂ ಕೂತ್ಕೊಂಡ ಮೇಲೆ ಆ ಊರಿನ ಯಜಮಾನ 'ಏನಪ್ಪಾ ಯಾಕೆ ಬಹಳ ದೂರ ಬಂದ್ರಿ ಏನ್ ಸಮಾಚಾರ' ಅಂತ ಕೇಳ್ತಾನೆ. ಆಗ ಗಂಡಿನ ಕಡೆಯವರು 'ಇಂತಹವರ ಮನೆಯಲ್ಲಿ ಹಾಲು, ತುಪ್ಪ ಕುಡಿಯಲಿಕ್ಕೆ ಬಂದೀವಿ' ಅಂತ ಹೇಳ್ತಾರೆ. ಆಗ ಹೆಣ್ಣಿನ ಕಡೆ ಯಜಮಾನ ಅವರ ತಂದೆ ತಾಯಿಗಳಿಗೆ ಹೇಳ್ತಾನೆ. 'ನೋಡಪ್ಪಾ, ಇವರು ನಿಮ್ಮನೀಗೆ ಹಾಲು ತುಪ್ಪ ಕುಡೀಲಿಕ್ಕೆ ಬಂದಾರಂತೆ' ಅಂದಕೂಡ್ಲೆ ಸಂತೋಷ ಬಿಡು ಅಂತಾರೆ. ಹಾಗೆಯೇ ತಾಯಿಯನ್ನು ಕೇಳ್ತಾರೆ. ಆಗ ತಾಯಿ 'ಅವ್ರಿಗೆ ಸಂತೋಷವಾದ್ರೆ ನಮಗೂ ಸಂತೋಷ' ಅಂತಾರೆ.

ಹಾಗೆ ಇಂತವರ ಮನೆಗೆ ಇಂತವರ ಮಗಳನ್ನು ಕೇಳಲಿಕ್ಕೆ ಬಂದಾರಂತೆ ಅಂತ ಯಜಮಾನ ಹೇಳ್ತಾರೆ. ಆಗ ತಂದೆಯಿಂದ ಅವರ ಬಂಧು, ಬಳಗ ಎಲ್ಲರನ್ನೂ ಕೇಳ್ತಾರೆ. ಒಬ್ಬೊಬ್ಬರಂತೆ ಹುಡುಗಿಯ ತಾಯಿ, ಚಿಕ್ಕಪ್ಪ, ಚಿಕ್ಕಮ್ಮ, ಅಣ್ಣ ತಮ್ಮಂದಿರು, ಮಾವಂದಿರು, ಅತ್ತೆಯಂದಿರು ಎಲ್ಲರನ್ನೂ ಕೇಳ್ತಾರೆ. ಎಲ್ಲರೂ ಒಂದೇ ರೀತಿ ಹೇಳ್ತಾರೆ. ಅವರ ತಂದೆ ತಾಯಿ ಸಂತೋಷವೇ ನಮ್ ಸಂತೋಷ ಎಂದು ಹೇಳುತ್ತಾರೆ. ಊರ ಯಜಮಾನ್ರು ಸಹ ಉಳಿದ ಹಿರಿಯರಿಗೆ ಕೇಳ್ತಾರೆ. ಅವ್ರು ಸಹ ಒಂದೇ ರೀತಿಯ ಉತ್ತರ ಕೊಡ್ತಾರೆ. ಅಷ್ಟೆಲ್ಲಾ ಆದ ಮೇಲೆ ಸರಿ ನಮ್ ಮಗಳಿಗೆ ವಧುದಕ್ಷಿಣೆ ಏನೇನು ಕೊಡ್ತೀರಿ ಅಂತ ಕೇಳ್ತಾರೆ. ಆಗ ಒಂದು ಜೊತೆ ಬೆಂಡೋಲೆ ಕೊಡ್ತೀವಿ ಅಂತ ಹೇಳ್ತಾರೆ. ಇನ್ನು ಬೆಂಡೋಲೆ ಜೊತೆ ಜುಮ್ಕಿ, ಬುಗಡಿಕಡ್ಡಿ, ಎಲ್ಲ ತರಬೇಕು. ಆಯಿತು ಕೊಡೋಣ ಅಂತ ಹೇಳಿ ಅಲ್ಲಿಗೆ ಮುಗಿಸುತ್ತಾರೆ. ಮುಗ್ಸಿದ ಮೇಲೆ ಇಂತಹ ಬೆಡಗಿನವರ ಹೆಣ್ಣನ್ನು ಇಂತಹ ಬೆಡಗಿನವ್ರು ತಗಂತೀವಿ ಅಂತ ಎಲೆ ಅಡಿಕೆ ಬದಲಾಯಿಸಿಕೊಳ್ಳುವ ಮೂಲಕ ಹೇಳ್ತಾರೆ.

ಇಷ್ಟೆಲ್ಲಾ ಮುಗಿದ ಮೇಲೆ ಎಲ್ಲರಿಗೂ ಎಲೆಅಡಿಕೆ ಹಂಚುತ್ತಾರೆ. ಗಂಡಿನ ಕಡೆಯವರು ನಂತರ ಅವರಿಗೆ ಯಾವಾಗ ಅನುಕೂಲವಾಗುತ್ತದೆಯೋ ಆ ದಿನ ಮದುವೆಕಾರ್ಯಕ್ಕೆ ಏರ್ಪಾಡು ಮಾಡಿಕೊಳ್ಳುತ್ತಾರೆ. ಗಂಡಿನ ಕಡೆಯವರು ಆ ರಾತ್ರಿಯೇ ವಾಪಸ್ಸು ಬರ್ತಾರೆ. ಇಷ್ಟು ನೋಡ್ರಿ ವೀಳ್ಯೆ ಶಾಸ್ತ್ರ"[೯]

ಬೋರಯ್ಯ ಹೇಳುವ ವಿವರಗಳಲ್ಲಿ ಮೂಲದ ಆಚರಣೆ, ಬದಲಾದ ಸೂಕ್ಷ್ಮತೆಗಳು ಮತ್ತು ಸಮುದಾಯವೊಂದರ ಒಳಗೆ ಇರಬಹುದಾದ ಪರಸ್ಪರಾವಲಂಬನ ನಡವಳಿಕೆಗಳು, ಊರಿನ ಹಿರಿಯರನ್ನು ಅಂದರೆ ಊರಿನ ಎಲ್ಲಾ ಜಾತಿಯ ಹಿರಿಯರನ್ನು ಗೌರವಿಸುವ, ಪರಸ್ಪರ ಕೊಡುಕೊಳ್ಳುವಿಕೆ ಮುಂತಾದ ಸೂಕ್ಷ್ಮಗಳನ್ನು ಗುರುತಿಸಲಿಕ್ಕೆ ಸಾಧ್ಯವಿದೆ. ಒಳಪಂಗಡ ವ್ಯವಸ್ಥೆ, ವಧು ದಕ್ಷಿಣೆ, ತೆರ ಪಡೆಯುವ ವಿಧಾನದ ಬಗ್ಗೆ ಸೂಕ್ಷ್ಮ ವಿವರಗಳು ಇಲ್ಲಿವೆ. "ಇದ್ದಂತವರು ಕೇಸರಿಬಾತ್, ಲಡ್ಡು ಮಾಡ್ತಾರೆ, ನಾವು ಉಗ್ಗಿ ಮಾಡ್ತೀವಿ' ಎನ್ನುವಲಿಸಮುದಾಯದ ಒಳಗೇ ಇರುವಂತಹ ಶ್ರೇಣೀಕರಣದ ಅರಿವಾಗುತ್ತದೆ. ಜೊತೆಗೆ ಪ್ರಸ್ತುತ ದಿನಗಳಲ್ಲಿ ಹೆಣ್ಣುಮಕ್ಕಳಿಗೆ ತಮ್ಮ ಮದುವೆ ಆಗುವ ಹುಡುಗ ಇಷ್ಟನೇ, ಲೇಸಾ, ಬೇಡವಾ ಎಂಬ ಅಭಿಪ್ರಾಯವನ್ನು ಸಹ ಕೇಳುವುದಿಲ್ಲ. ಇದು ಇಂದಿನ ನೈಜ ಪರಿಸ್ಥಿತಿ ಆಗಿದೆ. ಹೆಣ್ಣು ಮಕ್ಕಳು ಅಕ್ಷರಸ್ಥರಾದರೂ ಒಲೆ ಊದುವುದು ತಪ್ಪೊಲ್ಲ ಎಂಬ ಮಾತನ್ನು ಸಾಬೀತು ಮಾಡಿದ ಹಾಗಾಗುತ್ತದೆ."[೧೦]

- ಮನೆಯ ಗಂಡು ಮಕ್ಕಳಿಗೆ ಮದುವೆ ಮಾಡಬೇಕಾದಾಗ ಗಂಡಿನ ಕಡೆಯ ಬಂಧು ಬಳಗದವರು ನಾಲ್ಕೈದು ಜನ ಕೂಡಿಕೊಂಡು ಹೆಣ್ಣಿನ ಮನೆಯವರಲ್ಲಿಗೆ ಬರುವುದು. ಅವರು ಬರುತ್ತಿದ್ದಂತೆಯೇ ಹೆಣ್ಣಿನ ಮನೆಯವರು ಇಷ್ಟು ಜನ ಇಷ್ಟು ದೂರ ಯಾಕೆ ಬಂದಿರಿ, ಕುಳಿತುಕೊಳ್ಳಿ ಎಂದು ಕಂಬಳಿ ಕೋರಿಗೆ ಹಾಕುವರು. ಈಗ ಗಂಡಿನ ಕಡೆಯ ಯಜಮಾನರು ಹಾಲು ಅನ್ನ ಊಟ ಮಾಡಿ ನಾಲ್ಕು ಒಳ್ಳೆಯ ಮಾತನಾಡಿ ಹೋಗೋಣ ಎಂದು ಬಂದೆವು ಎಂದು ಉತ್ತರಿಸುತ್ತಾರೆ. ಗಂಡಿನ ಕಡೆಯ ಯಜಮಾನನು ಹಾಲು ಅನ್ನ ಎಂಬ ಪದ ಉಪಯೋಗಿಸುತ್ತಿದ್ದಂತೆ ಹೆಣ್ಣಿನ ತಂದೆ ತಾಯಿಗಳಿಗೆ ಇವರು ಹೆಣ್ಣಿನ ಸಂಗತಿಗೆ ಬಂದಿರುವರು ಎಂದು ಅರ್ಥಮಾಡಿಕೊಳ್ಳುವರು ಆರಂಭದ ಮಾತುಕತೆ ಹೀಗೆ ಸಾಗಿ ಮುಂದಿನ ಹಂತದಲ್ಲಿ ಗಂಡಿನ ಕಡೆಯವರು ಹೆಣ್ಣಿನ ತಾಯಿಯನ್ನು ಉದ್ದೇಶಿಸಿ ತಾಯಿ ನಿನ್ನ ಹೊಟ್ಟೆಯನ್ನು ಬರಿದು ಮಾಡಿ ನಮ್ಮ ಮನೆಯನ್ನು ತುಂಬಿಸಿಕೊಳ್ಳಬೇಕು ಎಂದು ಬಂದಿದ್ದೇವೆ ಎಂಬ ಮಾತುಗಳನ್ನಾಡಿದರೆ ಹೆಣ್ಣಿನ ತಾಯಿ ಅದಕ್ಕೆ ಉತ್ತರ ಕೊಡುವಷ್ಟು ಶಕ್ತಿಯುಳ್ಳವಳಾಗಿರುವುದಿಲ್ಲ. ಗಂಡಿನವರು ತನ್ನ ಕಡೆ ಪ್ರಶ್ನೆ ಕೇಳಿದರೆ ಅದರ ಉತ್ತರಕ್ಕಾಗಿ ತನ್ನ ಗಂಡನ ಕಡೆ ನೋಡುವಳು. ಈ ಸಂದರ್ಭದಲ್ಲಿ ಗಂಡನು ಹೆಣ್ಣು ಕೇಳಲು ಬಂದಿರುವವರಿಗೆ ಏನೇ ಆಶ್ವಾಸನೆಯನ್ನು ಕೊಟ್ಟರು ತಾನು ಹೆತ್ತ ಮಗಳನ್ನು ನಿಮ್ಮ ಮನೆಗೆ ಮದುವೆ ಮಾಡಿ ಕಳಿಸುವುದಕ್ಕೆ ನನಗೆ ಸಂಪೂರ್ಣ ಇಷ್ಟವಿದೆ ಎಂಬ ಮಾತನ್ನು

ಹೆಣ್ಣಿನ ತಾಯಿ ಅಧಿಕೃತವಾಗಿ ಹೇಳಲೇಬೇಕು. ಹೆಣ್ಣಿನ ತಂದೆ ತಾನು ಮನೆಯ ಯಜಮಾನನಾಗಿದ್ದರು. ಗಂಡಿನವರೊಡನೆ ಏನೇ ಮಾತುಕತೆ, ಚರ್ಚೆ ನಡೆಸಿದರೂ ಕೊನೆಗೆ ಹೆಣ್ಣಿನ ತಾಯಿ ಒಪ್ಪಿರುವುದರಿಂದ ನನ್ನದೇನು ಅಭ್ಯಂತರವಿಲ್ಲ ಎಂಬ ಮಾತನ್ನು ಆಡಲೇ ಬೇಕು. ಆ ಮೇಲೆ ಗಂಡಿನ ಕಡೆಯವರು ಸೋದರಮಾವನನ್ನು ಕರೆಸುವರು, ಬಂದ ಸೋದರ ಮಾವನನ್ನು ಹುಡುಗಿ ನಿನ್ನ ಕಡೆಯದು ಅದರ ಮೇಲೆ ನಿನಗೆ ಹಕ್ಕುಂಟು. ನಿನ್ನ ಮಗನಿಗಾದರು ಮದುವೆ ಮಾಡಿಕೊಳ್ಳುವುದಿದ್ದರೆ ನಮ್ಮ ಅಭ್ಯಂತರವಿಲ್ಲ, ಹಾಗೇನಾದರೂ ಉದ್ದೇಶವಿಲ್ಲದಿದ್ದರೆ ತಿಳಿಸು. ನಿನ್ನ ಕಡೆಯ ಪದಾರ್ಥಗಳನ್ನು ನಾವು ಒಯ್ಯುತ್ತೇವೆ ಎಂದು ಕೇಳುವರು. ಆಗ ಸೋದರ ಮಾವನು ತನ್ನ ಕಡೆಯಲ್ಲಿ ಹುಟ್ಟಿದ ಆ ಹೆಣ್ಣು ಮಗಳನ್ನು ಮಗನಿಗೆ ಲಗ್ನ ಮಾಡಿಕೊಳ್ಳುವ ಯೋಚನೆಯಲ್ಲಿದ್ದರೆ ತಿಳಿಸಿಬಿಡುವನು. ಇಲ್ಲದಿದ್ದರೆ ಇಲ್ಲ ಎಂದು ಹೇಳಿದ ನಂತರ ಗಂಡಿನ ಕಡೆಯವರು ಮುಂದಿನ ಹಂತದ ಮಾತುಕತೆಗೆ ತೊಡಗುವರು ಇಷ್ಟು ಹೊತ್ತಿಗೆ ಹೆಣ್ಣಿನ ತಾಯಿಯ ಒಪ್ಪಿಗೆ, ತಂದೆ ಸೋದರ ಮಾವ ಇವರೆಲ್ಲರ ಒಪ್ಪಿಗೆ ಸಿಕ್ಕಂತಾಗಿರುತ್ತದೆ.

- ಲಗ್ನದ ದಿನ ತೀರ್ಮಾನ ಮಾಡಲು ಬೇಡನಾಯಕರು ಹಿಂದಿನ ಕಾಲದಲ್ಲಿ ಯಾವ ಪಂಚಾಂಗವನ್ನು ನೋಡಿ ಮುಹೂರ್ತ ನಿರ್ಧರಿಸುತ್ತಿರಲಿಲ್ಲ. ಹಿಂದಿನ ಶತಮಾನಗಳಲ್ಲಿ ಅಡವಿ ಸಂಚಾರಿಗಳಾಗಿದ್ದು ಬೇಡರಿಗೆ ಪಂಚಾಂಗ, ಪುರೋಹಿತರು ಸಿಗುವುದು ದುರ್ಬಲವಿತ್ತು. ಹೀಗಾಗಿ ಅವರು ತಮ್ಮ ಮಕ್ಕಳ ವಿವಾಹ ದಿನವನ್ನು ತಾವೇ ನಿರ್ಧರಿಸಿಕೊಳ್ಳುತ್ತಿದ್ದರು. ಬೇಡರ ಎರಡು ವಂಶಗಳು ಸೂರ್ಯ ಚಂದ್ರರಿಂದ ಉತ್ಪನ್ನವಾದವು ಎಂಬ ನಂಬಿಕೆಯಿರುವುದರಿಂದ ಚಂದ್ರವಂಶಕ್ಕೆ ಸೇರಿದವರು ಲಗ್ನಗಳನ್ನು ರಾತ್ರಿಯ ಹೊತ್ತು ಇಟ್ಟುಕೊಳ್ಳುವರು. ಸೂರ್ಯವಂಶಕ್ಕೆ ಸೇರಿದ ಬೇಡರು ಬೆಳಗಿನ ಜಾವ ಸೂರ್ಯನು ಉದಯಿಸುವ ಸಂದರ್ಭಕ್ಕೆ ಇಟ್ಟುಕೊಳ್ಳುವರು. ಗಂಡಿನವರು ನೋಡಿದ ಹೆಣ್ಣು ತಮ್ಮ ಮನೆಗೆ ಎಂಬ ವಿಚಾರವನ್ನು ತೀರ್ಮಾನ ಮಾಡಿಕೊಂಡ ಮೇಲೆಯೇ ಅವರು ಮನೆಯಲ್ಲಿ ಊಟ ಮಾಡುತ್ತಾರೆ. ಊಟದಲ್ಲಿ ಖಾರದ ಸಾರು. ಬೇರೆ ಖಾರದ ಪದಾರ್ಥ ಇರುವುದಿಲ್ಲ, ಬಿದಿರಕ್ಕಿಯ ಅನ್ನ, ಹಾಲು, ಮೊಸರು, ಮಜ್ಜಿಗೆಯನ್ನು ಮುಖ್ಯವಾಗಿ ಬಳಸಲಾಗುವುದು. ಇದಕ್ಕೆ ಉಪ್ಪು ಕಲಸಿಕೊಂಡು ಊಟ ಮಾಡುವರು. ಆದರೆ ಆಧುನಿಕ ಸಂದರ್ಭದಲ್ಲಿ ಈ ಆಚರಣೆಗಳೆಲ್ಲ ಕಣ್ಮರೆಯಾಗಿದ್ದು, ಆಧುನಿಕ ಶೈಲಿಯಲ್ಲಿ ಮದುವೆಯ ಕಾರ್ಯಗಳು ನಡೆಯುತ್ತಿವೆ.
- ಹೆಣ್ಣಿಗೆ ಒಂದು ಬಿಳಿಯ ಸೀರೆಯನ್ನು ಉಡಿಸುತ್ತಾರೆ. ಅದೇ ಸೀರೆಯ ಸೆರಗನ್ನು ಹೆಗಲು ಎದೆ ಮುಚ್ಚುವಂತೆ ಮರೆ ಮಾಡಿಕೊಂಡಿರುತ್ತಿದ್ದಳು. ಬೇಡ ನಾಯಕರ ಹೆಂಗಸರು ಕುಪ್ಪಸ ತೊಡುವ ಪದ್ಧತಿಯನ್ನು ಹಿಂದೆ ಇಟ್ಟುಕೊಂಡಿರಲಿಲ್ಲ. ಇತ್ತೀಚೆಗೆ ಅವರು ರವಿಕೆ ತೊಡುವ ಅಭ್ಯಾಸ ಮಾಡಿಕೊಂಡಿದ್ದಾರೆ. ಆದರೆ ಈಗಲೂ ಅರವತ್ತು-ಎಪ್ಪತ್ತು ವರ್ಷದ ಸ್ತ್ರೀಯರು ಕುಪ್ಪಸ ತೊಡದೆ ಇರುವುದನ್ನು ಮ್ಯಾಸರ ಹಬ್ಬಗಳಲ್ಲಿ ಕಾಣಬಹುದು.

➢ ಕಂಬಳಿ ಕೋರಿಗೆ ಹೊದ್ದುಕೊಂಡು ಇರುವ ವರನನ್ನೂ ಬಿಳಿಯ ಸೀರೆಯುಟ್ಟ ವಧುವನ್ನು ನೆಲದಲ್ಲಿ ಹಾಸಿದ ಕಂಬಳಿ ಕೋರಿಗೆಯ ಮೇಲೆ ನಿಲ್ಲಿಸುವರು. ಹೆಣ್ಣು ಉತ್ತರ ಕಡೆಗೆ, ಗಂಡು ದಕ್ಷಿಣದ ಕಡೆ ನಿಲ್ಲಬೇಕು. ಹೀಗೆ ನಿಲ್ಲುವುದು ಅವರು ಸಂಪ್ರದಾಯದಂತೆ ಗಂಡು ತಲೆ ಭಾಗದಲ್ಲಿ ನಿಂತಂತೆಯೂ ಹೆಣ್ಣು ಕೆಳಭಾಗದಲ್ಲಿ ಅಂದರೆ ಕಾಲಿನ ಭಾಗದಲ್ಲಿ ನಿಂತಂತೆಯೂ ತಿಳಿಸುತ್ತಾರೆ. ಹೆಣ್ಣು ಗಂಡು ಕಂಬಳಿಯ ಮೇಲೆ ನಿಂತಾಗ ಅವರಿಬ್ಬರ ನಡುವೆ ಕೆಳಗೆ ಮರದ ಕಟ್ಟೆ ಮಡಿಕೆ ಅಥವಾ ಅಗಲ ಬಾಯಿಯಿರುವ ಸ್ವಾರೆಯ ಮುಚ್ಚಳ ಇಡಲಾಗುವುದು. ಗಂಡಿನ ಕೈಗೆ ಒಂದು ಎಲೆ ಸುರುಳಿ ಹೆಣ್ಣಿನ ಕೈಗೆ ಒಂದು ಎಲೆ ಸುರುಳಿ ಕೊಡುವರು ಆಗ ತಾನೆ ಕರೆದು ತಂದ ಹಾಲನ್ನು ಹೆಣ್ಣಿನ ತಾಯಿ ಮೊದಲು ಗಂಡಿನ ಕೈ ಹಾಲು ಹೆಣ್ಣಿನ ಕೈ ಎಲೆ ಸುರುಳಿಗೆ ಬಿದ್ದು ಕೆಳಗಿನ ಮರಕ್ಕೆ ಸೇರುವುದು.

➢ ಹೆಣ್ಣಿನ ತಾಯಿ ಧಾರೆ ಹೊಯ್ದು ಮೇಲೆ ತಂದೆ, ಸೋದರಮಾವ ಹೀಗೆ ಮಿಕ್ಕಹಿರಿಯರು ಹಾಲಿನ ಧಾರೆ ಹೊಯ್ಯುವರು, ಇದಾದ ಮೇಲೆ ಗಂಡಿನ ಕಂಬಳಿ ಕೋರಿಗೆಗೆ ಹೆಣ್ಣಿನ ಸೆರಗೂ ಗಂಟು ಹಾಕಿಸಿ, ನಂತರ ಗಂಡು ಹೆಣ್ಣಿಗೆ ಕಟ್ಟುವ ಅರಿಶಿಣ ದಾರಕ್ಕೆ ಕಟ್ಟಾಣಿ ಮುತ್ತುಗಳನ್ನು ಪೋಣಿಸಬಹುದು. ಆದರೆ ಬಹು ಹಿಂದೆ ಇದ್ದ ಈ ಬಗೆಯ ಕಟ್ಟಾಣಿ ಮುತ್ತಿನ ಸರ ಕಟ್ಟುವುದು ತಪ್ಪಿ, ಈಚೆಗೆ ಬರಿ ಅರಿಶಿಣ ದಾರ ಕಟ್ಟುವುದು ರೂಢಿಗೆ ಬಂದಿದ್ದು ಇನ್ನೂ ಇತ್ತೀಚೆಗೆ ಚಿನ್ನದ ತಾಳಿ ಕಟ್ಟುವ ಸಂಪ್ರದಾಯ ರೂಢಿಗೆ ಬಂದಿದೆ. ಗಂಡು ಹೆಣ್ಣಿಗೆ ತಾಳಿಕಟ್ಟಿದ ಮೇಲೆ ಅವರಿಬ್ಬರನ್ನು ಹಟ್ಟಿಗೆ ಕರೆದುಕೊಂಡು ಸೂರ್ಯ ಚಂದ್ರರ ಹೆಸರು ಹೇಳಿಸಿ ದಿಕ್ಕು ದಿಕ್ಕಿಗೆ ಕೈಮುಗಿಸುವರು. ಧಾರೆಯದಿನ ಅವರವರ ಅನುಕೂಲಕ್ಕೆ ತಕ್ಕಂತೆ ಊಟವಿರುತ್ತದೆ.

➢ ಮಾರನೆ ದಿನ ಲಗ್ನವಾದ ಹೆಣ್ಣು ಮೂರು ನಾಲ್ಕು ಜನ ಮುತ್ತೈದೆಯರೊಡನೆ ಮಡಿಕೆ ಗುಂಬಹಿಡಿದುಕೊಂಡು ಗಂಗಮ್ಮನಿಗೆ ಹೋಗುವಳು. ಅಲ್ಲಿ ಗಂಗಮ್ಮನಿಗೆ ಪೂಜೆ ಮಾಡಿ ಮಡಿಕೆಯಲ್ಲಿ ನೀರು ತುಂಬಿಕೊಂಡು ಇತರ ಮುತ್ತೈದೆಯರೊಡನೆ ವಾಪಾಸಾಗುವಳು. ಹಾಗೇ ವಾಪಾಸಾದ ಹೆಣ್ಣು ಸೀದ ಮನೆಯ ಒಳಗೆ ನುಗ್ಗುವಂತಿಲ್ಲ. ಬಾಗಿಲಮುಂದೆ ನಿಂತುಕೊಳ್ಳಬೇಕು. ಆಗ ಮನೆಯ ಒಳಗಿನಿಂದ ಬರುವ ಗಂಡಸು ನೀರು ತಂದ ಹೆಂಡತಿಯನ್ನು ನೀವು ಯಾರ್‍ಯಾರು ಬಂದಿರಿ ಎಂದು ಕೇಳುತ್ತಾನೆ. ಆಗ ಹೆಂಡತಿಯು ನಾನು ಮತ್ತು ಗಂಗಮ್ಮ ಇಬ್ಬರು ಕೂಡಿ ಬಂದೆವು ಎಂದು ಹೇಳುವಳು ಗಂಡು ಅವಳ ತಲೆಯ ಮೇಲಿನ ನೀರು ಗುಂಬವನ್ನು ಇಳಿಸಿಕೊಳ್ಳುವನು. ಹೆಂಗಸರು ತೆಗೆಯುವರು ಒಳಗೆ ಬಂದ ಹೆಣ್ಣು ಅದೇ ಮಡಿಕೆಯ ನೀರಿನಿಂದ ನೆಲ ಸಾರಿಸಿ ಗುಡಿಸಲನ್ನು ಸ್ವಚ್ಛ ಮಾಡುವಳು ಅಲ್ಲಿಂದ ಆ ಜಾಗದಲ್ಲಿ ಅವಳ ಜೀವನ ಆರಂಭವಾದಂತೆ. ಹೆಂಡತಿಯು ನೆಲಸಾರಿಸುತ್ತ ಬರುವ ಹೆಣ್ಣಿನ ಕಡೆಗೆ ದವ್ಮಡಿಯನ್ನು ಬೀಸಾಡುವನು. ಆ ದಮ್ಮಡಿಯನ್ನು ತೆಗೆದು ತನ್ನ

ಸೀರೆಯ ಸೆರಗಿಗೆ ಕಟ್ಟಿಕೊಳ್ಳುವಳು ಅದನ್ನು ಮೀಸಲು ಕಾಸು, ಮುಡಿಪುಕಾಸು ಎಂದು ಭಾವಿಸುವುದರಿಂದ ಹೆಣ್ಣು ಆ ಕಾಸನ್ನು ಬಹಳ ಕಾಲ ರಕ್ಷಿಸಿ ಇಡುವಳು. ಮಾರನೆ ದಿನದ ಆ ಸಂಜೆ ಹೆಣ್ಣಿನೊಡನೆ ಬಂದಿದ್ದ ನೆಂಟರಸ್ಥರು ಹೆಣ್ಣನ್ನು ಕರೆದುಕೊಂಡು ತಮ್ಮ ಹಟ್ಟಿಗೆ ವಾಪಾಸಾಗುತ್ತಾರೆ.

- ಈ ಮೇಲಿನ ಎಲ್ಲಾ ಸಂಪ್ರದಾಯಗಳ ಕಾಲಕ್ಕೆ ತಕ್ಕಂತೆ ಆಧುನಿಕತೆಯ ಪ್ರವೇಶ ಆದಂತೆ. ಹೆಣ್ಣನ್ನು ನೋಡಲು ಈಗ ನೇರವಾಗಿ ಹೋಗಿ ಮಾತುಕತೆ ಮಾಡುತ್ತಾರೆ. ಹಿಂದಿನ ಕಾಲದ ಮುದುಕಿಯರು ಮಾತ್ರ ಕುಪ್ಪಸವನ್ನು ಹಾಕುತ್ತಿರಲಿಲ್ಲ. ಇತ್ತೀಚೆಗೆ ಅದು ನಶಿಸಿ ಎಲ್ಲರೂ ಕುಪ್ಪಸವನ್ನು ಹಾಕುತ್ತಿದ್ದಾರೆ. ಕುಪ್ಪಸವನ್ನು ಹಾಕದಿರುವುದು ತುಂಬಾ ವಿರಳ.
- ಇತ್ತೀಚಿನ ದಿನಗಳಲ್ಲಿ ಮದುವೆಯನ್ನು ಯಾರೋ ಕೆಲವು ಮಂದಿ ಮಾತ್ರ ಮನೆಯ ಮುಂದೆ ಮಾಡುವುದು. ಆದರೆ ಉಳಿದವರು ಛತ್ರಗಳಲ್ಲಿ ಮದುವೆ ಮಾಡುವ ಪರಂಪರೆ ಬೆಳೆಯುತ್ತಿದೆ. ಛತ್ರ ಅಥವಾ ಕಲ್ಯಾಣ ಮಂಟಪದಲ್ಲಿ ಮದುವೆ ಮಾಡುವುದರಿಂದ ಶಾಸ್ತ್ರ ಸಂಪ್ರದಾಯಗಳು ಸಡಿಲಗೊಳ್ಳುತ್ತಿವೆ.

ಮದ್ಲಿಂಗಿತ್ತಿ ಶಾಸ್ತ್ರ

ಮ್ಯಾಸಬೇಡರ ಮದ್ಲಿಗಿತ್ತಿ ಶಾಸ್ತ್ರದ ಬಗ್ಗೆ ಬೋರಜ್ಜ ಹೇಳುವಂತೆ "ನಮ್ಮ ಸಮುದಾಯದಲ್ಲಿ ಮದುವೆ ಹೆಣ್ಣಿನ ಮನೆಯ ಮುಂದೆ ನಡೆಯುತ್ತದೆ. ಕೆಲವೊಂದು ಟೈಮ್‌ನಲ್ಲಿ ದೇವರ ಗುಡಿಯ ಮುಂದೆ ನಡೀತಾವೆ. ಆದ್ರೆ ಎಲ್ಲಾರೂ ಮನೆಯ ಮುಂದೆ ಮಾಡ್ಲಿಕ್ಕೆ ಇಷ್ಟ ಪಡ್ತಾರೆ. ಮುಹೂರ್ತದ ಹಿಂದಿನ ದಿನವೇ ಗಂಡಿನ ಕಡೆಯವರು ಹೆಣ್ಣಿನ ಊರಿಗೆ ಬರ್ತಾರೆ. ಈಗ ಕೆಲವರು ಬೆಳಗ್ಗೆ ಬರ್ತಾರೆ. ಮುಹೂರ್ತ ಬೆಳಗ್ಗೆ ಎಷ್ಟು ಗಂಟೆಗೆ ಇರ್ತದೋ ಅದೆಲ್ಲಾ ನೋಡಿಕೊಂಡು ಹೆಣ್ಣಿನ ಮನೆಯಲ್ಲಿ ಏನೆಲ್ಲಾ ಕಾರ್ಯಗಳು ನಡೀಬೇಕು ಎಲ್ಲಾ ಮಾಡ್ತೀವಿ. ಲಗ್ನ ಅಂತ ಕಟ್ಟುಸ್ತಾರೆ. ಅದಕ್ಕೆ ಕೆಲವರು ಬೇರೆ ಊರಿಗೆ ಹೋಗಿ ಕಟ್ಟಿಸಿದ ಮೇಲೆ ಗಂಡಿನ ಕಡೆಯವರನ್ನು ಹೆಣ್ಣಿನ ಮನೆಯ ಹತ್ತಿರ ತರುತ್ತೇವೆ. ಮದುಮಗ ಅಲ್ಲೇ ಹತ್ತಿರ ಇರ್ತಾನೆ. ಊರಿನ ಎಲ್ಲಾ ಕೋಮಿನವರು ಬರ್ತಾರೆ. ಆಗ ಗಂಡಿನ ಕಡೆಯವರು ತಂದಿರುವ ಎಲೆ ಅಡಿಕೆಯನ್ನು ಮಗ್ಗೂರು ನಾಯಿಕಡ್ಲು ಅಂತಾರಲ್ಲ ಅವರಲ್ಲಿ ಯಾರಾದ್ರೂ ಒಬ್ರು ಗದ್ದಿಗೆ ಹಾಕ್ತಾರೆ. ಗದ್ದಿಗೆ ಹಾಕ್ಲಿಕ್ಕೆ ಎಲ್ಲಾ ಅಪ್ಪಣೆಯನ್ನು ಕೇಳ್ತಾನೆ. ಅಪ್ಪಣೆ ಅಂದ ಕೂಡ್ಲೆ ಗದ್ದಿಗೆ ಆಸ ಎಲೆ ಈ ಕೋಮಿಗೆ ಸೇರಿದ ಪ್ರಮುಖರು ಮೂವರು ಜನ ನಾಯಕರು, ಆರು ಜನ ನಾಯಕರು ಒಂಭತ್ತು ಜನ ನಾಯಕರು ಅಂತೇಳಿ ಇಷ್ಟು ಭಾಗ ಗದ್ದಿಗೆ ಮೇಲೆ ಇಡ್ತಾರೆ. ಇಷ್ಟು ಎಲ್ಲರಿಗೂ ಹಂಚುತ್ತಾರೆ. ಆ ಮೇಲೆ ಹೆಣ್ಣಿನ ಕಡೆಯವರ ಹೆಣ್ಣಿಗೆ ಸಂಬಂಧಪಟ್ಟ ಚಿಕ್ಕಮ್ಮ ಎಲೆಯ ಜೊತೆಗೆ ತಂದಿದ್ದ ವಡವೆಗಳನ್ನು ಒಂದು ಕಂಚಿನ ತಟ್ಟೆಯಲ್ಲಿ ಮೂರು ಬಾರಿ ತಗಂಡು ಒಳಗಡೆ ಹೋಗ್ತಾಳೆ. ಇದಾದ ಮೇಲೆ ಒಳಗಡೆ ಮದುವಣಗಿತ್ತಿ ಮಾಡ್ತಾರೆ, ಗದ್ದಿಗೆ ಮೇಲಿದ್ದ ೩ ಭಾಗ, ೬ ಭಾಗ, ೯ ಭಾಗ ಎಲೆಯನ್ನು ಆಯಾ ಕೋಮಿನವರಿಗೆ

ಕೊಡ್ತಾರೆ. ಕೊಟ್ಟ ಮೇಲೆ ಮದ್ಲಿಂಗನನ್ನು ಕರೆಸಿ ಮದುವಣಗಿತ್ತಿಯನ್ನು ಕರೆಸಿ ಒಬ್ರನ್ನು ಪೂರ್ವಕ್ಕೆ ಮತ್ತೊಬ್ರನ್ನು ಪಶ್ಚಿಮಕ್ಕೆ ಕೂರಿಸ್ತೇವೆ.ಆಗ ಹಾಲನ್ನು ಹಾಕಿ ಇಬ್ರೂ ಒಬ್ರ ಕೈಮೇಲೆ ಒಬ್ರು ಹಾಕಿ ಕಂಚಿನ ತಟ್ಟೆಯಲ್ಲಿ ಹಾಲು ಹಾಕಿ ಅದ್ರಲ್ಲಿ ಒಂದು ಉಂಗುರ ಹಾಕಿ ಹುಡುಕಿಸುತ್ತೇವೆ. ಉಂಗುರ ಮೂರು ಬಾರಿ ಹುಡುಕಿಸಿದ ಮೇಲೆ ತಾಳಿಯನ್ನು ಎಲ್ಲರಿಗೂ ತೋರಿಸುತ್ತೇವೆ. ಎಲ್ಲರೂ ಅದಕ್ಕೆ ಕೈಮುಗಿದ ನಂತರ ಅದನ್ನು ಮದ್ಲಿಂಗನ ಕೈಗೆ ಕೊಡುತ್ತೇವೆ. ಆಗ ಮದ್ಲಿಂಗನು ಎಲ್ಲರಿಗೂ ತೋರಿಸಿ ಸರಿಯಾದ ಸಮಯಕ್ಕೆ ಮದುವಣಗಿತ್ತಿಯ ಕೊರಳಿಗೆ ಮೂರು ಗಂಟು ಹಾಕುತ್ತಾನೆ. ನಂತರ ಬೇರೆಯವರು ಅದನ್ನು ಗಟ್ಟಿಯಾಗಿ ಕಟ್ಟಿ ಮುಗಿಸುತ್ತಾರೆ. ಇದೇ ತಾಳಿಶಾಸ್ತ್ರ. ಕೆಲವರು ತಾಳಿ ಕಟ್ತಾರೆ, ಇನ್ನು ಕೆಲವರು ಬರಿ ಕರಿಮಣಿ ಕಟ್ತಾರೆ"[೦೯] ಇಲ್ಲಿ ಬೋರಮ್ಮಜ್ಜಿ ಹೇಳುವ ತಾಳಿಶಾಸ್ತ್ರದಲ್ಲಿ ಕೆಲವು ಸೂಕ್ಷ್ಮ ವಿವರಗಳಿವೆ. ಜಂಗಮರ ಮನೆಗೆ ಹೋಗಿ ಲಗ್ನ ಕಟ್ಟಿಸಿಕೊಂಡು ಬರುವುದು, ಮದುವೆಗೆ ಎಲ್ಲರ ಅಪ್ಪಣೆ ಕೇಳುವುದು, ವೀಳ್ಯವನ್ನೂ ಸರ್ವರಿಗೂ ಹಂಚುವುದು ಬುಡಕಟ್ಟು ಸಮುದಾಯಕ್ಕೆ ವಿಶೇಷವಾದ ಸಮಾಜವಾದಿ ಲಕ್ಷಣಗಳಾಗಿವೆ.

ಗಂಗೆಶಾಸ್ತ್ರ

ಪ್ರತಿ ಸಮುದಾಯದ ಮದುವೆ ಸಂದರ್ಭದಲ್ಲಿ ಮಾಡುವ ರೀತಿಯಲ್ಲಿಯೇ ಇಲ್ಲಿಯೂ ಗಂಗೆಶಾಸ್ತ್ರವನ್ನು ಮಾಡುತ್ತಾರೆ. ಪಾಪಮ್ಮ ಹೇಳುವ ಪ್ರಕಾರ "ಗಂಗೆಶಾಸ್ತ್ರವನ್ನು ನಾವು ಮದುವೆಯ ಮೂರನೇ ದಿನದಲ್ಲಿ ಮಾಡ್ತೀವಿ. ಇದು ಮದುವೆಯ ಕೊನೆಯ ಕಾರ್ಯ ಮೂರನೇ ದಿನ ಬೆಳಗ್ಗೆ ಸುಮಾರು ಹತ್ತು ಅಥವಾ ಹನ್ನೊಂದು ಗಂಟೆಗೆ ಗಂಡು ಮತ್ತು ಹೆಣ್ಣು ಇಬ್ಬರನ್ನೂ ಸೇರಿಸಿ ಸ್ನಾನ ಮಾಡಿಸುತ್ತೇವೆ. ಸ್ನಾನ ಮಾಡಿದ ಮೇಲೆ ಇಬ್ರೂ ಎಲೆ ಅಡಿಕೆ ತಿಂದು ಒಬ್ರ ಮೇಲೆ ಒಬ್ರು ಆ ಕಡೆಗೆ ಉಗುಳುತ್ತಾರೆ. ನಂತರ ಒಳಗಡೆ ಬಂದು ಮದುಮಗಳು ಹೊಸ ಬಿಂದಿಗೆಯನ್ನು ಹೊತ್ಕಂಡು ಊರಿನ ಮುಂದೆ ಯಾವುದಾದರೂ ಬಾವಿ, ಇಲ್ಲಾಂದ್ರೆ ಕೆರೆ, ಅದೂ ಇಲ್ಲಾಂದ್ರೆ ಕೊಳವೆಯ ಹತ್ತಿರ ಹೋಗ್ತಾರೆ. ಮದುಮಗಳ ಜೊತೆಗೆ ಮತ್ತೆ ನಾಲ್ಕು ಜನ ಕೊಡಗಳನ್ನು ತಗಂಡು ಗಂಗೆಯ ಹತ್ತಿರ ಹೋಗ್ತಾರೆ. ಅಲ್ಲಿ ಒಟ್ಟು ಐದು ಕೊಡಗಳನ್ನು ಸಾಲಾಗಿ ತುಂಬಿಸಿಟ್ಟಿರುತ್ತಾರೆ. ಐದು ಸಣ್ಣ ಕಲ್ಲುಗಳು, ಐದು ಎಳ್ಳುಂಡೆ, ಐದು ಗೋದಿ ಉಂಡೆ ಮಾಡಿ ಐದು ಎಲೆ ಇಟ್ಟು ಮದುಮಾಗಿತ್ತಿ(ಮಾದ್ಲಿಗಿತ್ತಿ)ಯನ್ನು ಪೂಜೆ ಮಾಡ್ಲಿಕ್ಕೆ ಹೇಳ್ತಾರೆ. ಆಗ ಅವಳು ಪೂಜೆ ಮಾಡಿ ಐದು ಎಲೆಗಳಲ್ಲಿ ನಾಲ್ಕು ಎಲೆಗಳನ್ನು ಬೇರೆಯವರಿಗೆ ಉಡಿ ತುಂಬಿ ಒಂದನ್ನು ತಾನು ತುಂಬಿಕೊಂಡು ಎಲೆಯ ಜೊತೆಗೆ ಬಾಳೆಹಣ್ಣನ್ನು ಗಂಗೆಯಲ್ಲಿ ಬಿಟ್ಟು ನಮಸ್ಕರಿಸುತ್ತಾರೆ. ಜೊತೆಗೆ ಐದು ಉಂಡೆಗಳನ್ನು ಅಕ್ಕಿಯ ಜೊತೆಗೆ ಬೆರೆಸಿ ಗಂಗೆಗೆ ಬರುವ ಎಲ್ಲರಿಗೂ ಹಂಚುತ್ತಾರೆ. ನಂತರ ಮದುಮಗಳು ಕೊಡವನ್ನು ಹೊತ್ಕೊಂಡು ಅವಳ ಜೊತೆಗೆ ಇತರೆ ನಾಲ್ಕು ಜನ ಸೇರಿ ಒಟ್ಟಾಗಿ ಸಾಲಾಗಿ ಮನೆಗೆ ಬರ್ತಾರೆ. ಮನೆಗೆ ಬಂದಮೇಲೆ ಮದುಮಗ ಬಾಗಿಲಲ್ಲಿ ನಿಂತುಕೊಂಡು, ಕೊಡ ಹಿಡ್ಕೊಂಡು ಅದರೊಳಗೆ ಎರಡು ರೂಪಾಯಿ ಅಥವಾ ಐದು ರೂಪಾಯಿ ಹಾಕಿ ಯಾರ್‍ಯಾರು ಬಂದ್ರಿ ಅಂತ ಕೇಳ್ತಾರೆ. ಆಗ

ಮದುಮಗಳು ನಾನು ಗಂಗಮ್ಮ ಬಂದ್ವಿ ಅಂತ ಹೇಳ್ತಾಳೆ. ಆಗ ಮದುಮಗ ಕೊಡ ಇಳಿಸಿಕೊಂಡು ಒಳಗಡೆ ಇಳಿಸುತ್ತಾನೆ. ಇದು ನೋಡಿ ಗಂಗೆ ಶಾಸ್ತ್ರ ನಮ್ಮ ಕೊನೆಯ ಕಾರ್ಯ."[೧೨] ಪಾಪಮ್ಮ ಹೇಳುವ ವಿವರ ಜನಪ್ರಿಯವಾಗಿ ಎಲ್ಲಾ ಸಮುದಾಯದವರು ಮಾಡುವ ಆಚರಣೆಗಳಿಗೆ ಹೆಚ್ಚು ಸಾಮ್ಯತೆ ಇರುವುದನ್ನು ಮನಗಾಣಬಹುದು. ಇದು ಗ್ರಾಮೀಣ ಬದುಕಿನ ಭಾಗವಾಗಿ ರೂಪುಗೊಂಡ ಆಚರಣೆಯೇ ವಿನಃ, ಸಮುದಾಯ ನಿಷ್ಠವಾಗಿ ರೂಪುಗೊಂಡ ಆಚರಣೆಯಲ್ಲ. ಏಕೆಂದರೆ ಈ ಆಚರಣೆಗಳು ಎಲ್ಲಾ ಸಮುದಾಯಗಳಲ್ಲಿಯೂ ಕಂಡುಬರುತ್ತವೆ. ಊರಿಗೆ ಬಂದವಳು ನೀರಿಗೆ ಬರದೇ ಇರುವಳೇ ಎಂಬಂತೆ ನಮ್ಮ ಮನೆಯ ಸೊಸೆ ಎಂಬುದನ್ನು ಗಂಗೆ ದೇವಿ ಪೂಜೆಯ ಮುಖಾಂತರವಾಗಿ ಎಲ್ಲರಿಗೂ ಪರಿಚಯಿಸುವ ಪದ್ಧತಿ ಇದಾಗಿದೆ.

ಶವಸಂಸ್ಕಾರ

ಸಮಾಜದಲ್ಲಿ ಹುಟ್ಟು ಸಾವು ಖಚಿತ. ಇದಕ್ಕೆ ಹೊಂದಿಕೊಂಡಂತೆ ಸಮಾಜದಲ್ಲಿ ಎಲ್ಲರೂ ಮಾಡುವಂತೆ ಮ್ಯಾಸಬೇಡರಲ್ಲಿ ಶವಸಂಸ್ಕಾರ ಪದ್ಧತಿಯನ್ನು ಪೂರ್ವದಿಂದಲೂ ಮುಂದುವರಿಸಿಕೊಂಡು ಬಂದಿದ್ದಾರೆ. ನೆಲಗೇತನಹಟ್ಟಿ ಪಾಲಯ್ಯನವರ ಅಭಿಪ್ರಾಯದಂತೆ "ನೋಡ್ರಿ ಸಾವು ಎಲ್ಲರಿಗೂ ಬಂದೇ ಬರ್ತದೆ. ಹುಟ್ಟಿದ ಮೇಲೆ ಅವ್ರು ಎಂಥವರೇ ಆಗ್ಲಿ ಒಂದಲ್ಲಾ ಒಂದು ದಿನ ಸಾಯಲೇ ಬೇಕು. ನೋಡ್ರಿ ನಾವೇನು ಬೇರೆ ರೀತಿಯಾಗಿ ಮಾಡಲ್ಲ. ಎಲ್ಲರೂ ಹೆಂಗೆ ಮಾಡ್ತಾರೋ ನಾವು ಹಂಗೇ ಮಾಡ್ತೀವಿ. ನಮ್ಮಲ್ಲಿ ಯಾರಾದ್ರೂ ಸತ್ರೆ ಮೊದ್ಲು ಅವರನ್ನು ಮನೆಯಿಂದ ಹೊರಗಡೆ ತಂದು ಮಲಗಿಸ್ತೀವಿ. ಸತ್ತವರ ಸಂಬಂಧಿಕರಿಗೆಲ್ಲಾ ಊರಿನವ್ರು ಸೇರಿ ಹಿಂದೆ ಮಣೇಗಾರರನ್ನು ಹಿಂದಿನ ಕಾಲದಲ್ಲಿ ಬಸ್ ಚಾರ್ಜ್ ಕೊಟ್ಟು ಕಳುಹಿಸ್ತಿದ್ವಿ, ಈಗ ಫೋನ್ ಬಂದಿವೆ. ಫೋನ್ ಮಾಡಿಬಿಡ್ತೀವಿ. ಫೋನ್ ಇಲ್ಲದಿದ್ರೆ ಮಣೇಗಾರರು ಹೋಗ್ತಾರೆ. ಅವ್ರು ನಾವು ಯಾವ ಊರಿಗೆ ಕಳಿಸ್ತೀವೋ ಆ ಊರಿಗೆ ಹೋಗಿ ಮನೆಗೆ ಸುದ್ದಿ ತಲುಪಿಸಿ ವಾಪಾಸು ಬರುವವರೆಗೂ ಕಾಯ್ತೀವಿ. ಒಂದು ರಾತ್ರಿಯೆಲ್ಲಾ ಮನೆ ಮುಂದೆ ಭಜನೆ ಮಾಡಿಕೊಂಡು ಕಾಲ ಕಳೆಯುತ್ತೇವೆ. ಬೆಳಗ್ಗೆ ಎಲ್ಲಾ ಕಾರ್ಯಗಳಿಗೆ ರೆಡಿ ಮಾಡ್ಕೊಂಡು ಬಂದವರಿಗೆಲ್ಲಾ ಸಮಾಧಾನಪಡಿಸಿ ಶವಕ್ಕೆ ಹೊಸಬಟ್ಟೆ, ಹೂವಿನ ಹಾರ, ಹೊಸ ಮಡಿಕೆ ಎಲ್ಲಾ ತಯಾರಿ ಮಾಡಿಕೊಳ್ತೀವಿ. ಎಲ್ಲರೂ ಸೇರಿದ ಕೂಡ್ಲೇ ಚಟ್ಟವನ್ನು ಕಟ್ತೀವಿ. ಚಟ್ಟ ಕಟ್ಟಿ ಮನೆಯ ಮುಂದುಗಡೆ ಹೊಸ ಮಡಿಕೆ ತಂದು ಒಂದು ಪಾವು ಅಕ್ಕಿ ಹಾಕಿ ಅನ್ನ ಮಾಡ್ತಾರೆ. ಅಷ್ಟೊತ್ತಿಗಾಗ್ಲೇ ಎಲ್ಲಿ ಹೂಳ್‌ಬೇಕೋ ಆ ಜಾಗದಲ್ಲಿ ಮಣೇಗಾರರು ಕುಣಿ ತೆಗೆದಿರ್ತಾರೆ.

ಹೊಸ ಬಟ್ಟೆಯನ್ನು ಹಾಕಿ ಚಟ್ಟವನ್ನು ಭದ್ರವಾಗಿ ಕಟ್ಟಿ ಅದರ ಮೇಲೆ ಹೆಣ ಮಲಗಿಸ್ತೀವಿ. ಹೂವಿನ ಹಾರ ಹಾಕಿ ಬಾಯಿಯಲ್ಲಿ ರೊಕ್ಕ ಇಟ್ಟು ಪೂಜೆ ಮಾಡಿ ಹೊತ್ಕೊಂಡು ಹೋಗ್ತೀವಿ. ಕೆಲವು ಹೆಣದ ಹಿಂದೆ ಮಂಡಕ್ಕಿ, ನವಣೆ, ಎಲೆ ಚೆಲ್ಲಿಕೊಂಡು ಹೋಗ್ತಾರೆ. ಶವದ ಮುಂದೆ ಮಗ ಇಲ್ಲಾಂದ್ರೆ ಮೊಮ್ಮಗ ಅನ್ನದ ಮಡಿಕೆಯನ್ನು ತಗಂಡು ಮುಂದೆ ಹೋಗ್ತಾನೆ. ಅರ್ಧ ದಾರಿಗೆ

ಹೋದ ಕೂಡ್ಲೆ ಅಲ್ಲೊಂದು ತಂಗಡೆ ಗಿಡ ಇಲ್ಲಾಂದ್ರೆ ಹಸಿರು ಗಿಡದ ಹತ್ತಿರ ಚಟ್ಟವನ್ನು ಇಳಿಸಿದ ಕೂಡಲೆ ಕೂಳು ಹೊತ್ತ ಹಿರಿಯ ಮಗ ಅಥವಾ ಮೊಮ್ಮಗ ಮಡಕೆ ಅಥವಾ ಗಡಿಗೆಯನ್ನು ಹೊತ್ಕೊಂಡು ಮೂರು ಸುತ್ತು ತಿರುಗ್ತಾನೆ. ತದನಂತರ ಅದೇ ಗಿಡದ ಬುಡದಲ್ಲಿ ಮಡಕೆ ಇಡುತ್ತಾರೆ. ಒಂದು ಮಡಕೆಯಲ್ಲಿ ಹಾಲನ್ನು ಹೊತ್ಕೊಂಡು ತಿರುಗ್ತಾರೆ. ಹೀಗೆ ತಿರುಗಬೇಕಾದ್ರೆ ಹಿಂದೆ ಒಬ್ರು ಮಡಕೆಯನ್ನು ತೂತು ಮಾಡ್ತಾರೆ. ನಂತರ ಅವನು ತಿರುಗಿ ನೋಡದೆ ಅದನ್ನು ಬಿಡ್ತಾನೆ. ಅದು ಪೂರ್ತಿ ಒಡೆದ್ರೆ ಆಯುಷ್ಯ ಇಷ್ಟಕ್ಕೇ ಇತ್ತು ಅಂತ ಭಾವಿಸುತ್ತಾರೆ. ಒಡೆಯದಿದ್ದರೆ ಇನ್ನೂ ಆಯುಷ್ಯ ಇತ್ತು ಎಂದು ಭಾವಿಸುತ್ತಾರೆ. ಆ ವ್ಯಕ್ತಿಯನ್ನು ಕರ್ಕೊಂಡು ಒಬ್ರು ಮನೆಗೆ ಬರ್ತಾರೆ. ಹೆಂಡತಿ ಏನಾದರೂ ಇದ್ರೆ ಅಲ್ಲೇ ಅವಳ ಬಳೆ, ತಾಳಿ, ಕರಿಮಣಿಯನ್ನು ತೆಗೆದು ಗಿಡಕ್ಕೆ ಹಾಕಿ ಎಲ್ಲಾರೂ ಒಂದೊಂದು ಕಲ್ಲು ಹಾಕಿ ಹೂ ಹೊತ್ಕೊಂಡು ಹೋಗ್ತಾರೆ. ಇದನ್ನು ಗುಡ್ಡೆ ಎಂದು ಕರೆಯುತ್ತಾರೆ. ಮುಂದಿನ ತಲೆಮಾರಿನವರು ಹಿರಿಯರ ಆರಾಧನೆ ಮಾಡಿಕೊಂಡು ಹೋಗಲಿ ಅಂತ ನೆನಪಿಗೋಸ್ಕರ ಗುಡ್ಡೆ ಹಾಕ್ತಾರೆ.

"ಶವವನ್ನು ಹೊತ್ಕೊಂಡು ಹೋಗ್ತೀವಿ ಕುಣಿಯನ್ನು ಆಳವಾಗಿ ತೆಗೆದು ಮುಗಿಸಿದ ನಂತರ ಎಲ್ಲರೂ ಇನ್ನೊಂದು ಸಲ ಮುಖವನ್ನು ನೋಡ್ತಾರೆ. ಅದು ಕೊನೆಯ ಸಲ ನೋಡುವುದು. ನೋಡಿದ ನಂತರ ಕುಣಿಯಲ್ಲಿ ಶವವನ್ನು ಇಟ್ಟು ಎಲ್ಲಾರೂ ಒಂದೊಂದು ಹಿಡಿ ಮಣ್ಣು ಹಾಕ್ತಾರೆ. ಆಮೇಲೆ ಚಲಿಕೆಯಿಂದ ಮಣ್ಣು ಹಾಕಿ ಮುಚ್ಚುತ್ತಾರೆ. ಮುಚ್ಚಿದ ನಂತರ ಆ ಮಣ್ಣಿನ ಮೇಲೆ ಕಲ್ಲು ಕಲ್ಲಿನ ಸುತ್ತ ಒಂದಿಷ್ಟು ಮುಳ್ಳುಬೇಲಿ ಹಾಕಿ ಬರ್ತಾರೆ."[೧೩] (ಬೇಡರು ಮೂಲತಃ ಅರಣ್ಯ ಜೀವಿಗಳಾದ್ದರಿಂದ ನರಿ ನಾಯಿಗಳು ವಾಸನೆ ಹಿಡಿದು ಬಂದು ಸಮಾಧಿಯನ್ನು ಕೆರೆದು ಹೂಳಿದ್ದ ದೇಹವನ್ನು ತಿಂದು ಹಾಕಬಾರದೆಂದು ಕಲ್ಲು, ಮುಳ್ಳು ಹಾಕುವುದನ್ನು ರೂಢಿಸಿಕೊಂಡಿರಬೇಕು.)

ಆಮೇಲೆ ಪಕ್ಕದಲ್ಲಿ ಎಲ್ಲಾದ್ರು ಕೆರೆ ಅಥವಾ ಬಾವಿ ಇದ್ರೆ ಅದರಲ್ಲೇ ಎಲ್ಲರೂ ಸ್ನಾನ ಮಾಡಿಕೊಂಡು ನೇರವಾಗಿ ದೇವಸ್ಥಾನಕ್ಕೆ ಹೋಗ್ತಾರೆ. ದೇವಸ್ಥಾನದಲ್ಲಿ ಭಟ್ಟು, ಭಂಡಾರವನ್ನು ಹಚ್ಕೊಂಡು ಸತ್ತಿರುವವರ ಮನೆಯ ಹತ್ತಿರ ಎಲ್ಲಾರು ಕುಂತ್ಕೊಂಡು ನಂತರ ಅವರವರ ಮನೆಗೆ ಹೋಗ್ತಾರೆ. ಮೂರು ದಿನಗಳ ನಂತರ ದಿನದ ಕಾರ್ಯ ಮಾಡ್ತೀವಿ. ಅಂದು ಹಿರಿಯ ಮಗ ಇಲ್ಲಾಂದ್ರೆ ಮೊಮ್ಮಗ (ತಲುಗೊರುವ ಪಡಿಸ್ನಾರು) ಒಂದು ಮಡಿಕೆ, ಒಂದು ಪಾವು ಅಕ್ಕಿಯನ್ನು ತಗೊಂಡೋಗಿ ಸಮಾಧಿ ಹತ್ತಿರ ಅನ್ನವನ್ನು ಮಾಡ್ತಾರೆ. ಮಾಡಿದ ಅನ್ನವನ್ನು ಮೂರು ಎಲೆಗೆ ಹಾಕಿ ಪ್ರದಕ್ಷಿಣೆ ಹಾಕ್ತಾನೆ. ಅಲ್ಲೇ ಒಂದು ಮೂಲೆಯಲ್ಲೇ ಕೂಡ್ತಾನೆ. ಕಾಗೆ ಬಂದು ಅನ್ನ ತಿನ್ನುವವರೆಗೆ ಇದ್ದು ನಂತರ ಮನೆಗೆ ಬರ್ತಾನೆ. ಕಾಗೆ ತನ್ನಿಲ್ಲಾಂದ್ರೆ ಸತ್ತವರಿಗೆ ಸ್ವರ್ಗ ಸಿಗ್ಲಿಲ್ಲಂತ ನಂಬಿಕೆ. ನಂತರ ಐದು ಇಲ್ಲವೇ ಒಂಬತ್ತು ದಿವಸದಲ್ಲಿ ಸಿಹಿ ಅಡುಗೆ ಮಾಡ್ತಾರೆ. ಅದು ಸಣ್ಣ ಕಾರ್ಯ. ಆಮೇಲೆ ಹದಿನಾರು ದಿನಕ್ಕೆ ಇಲ್ಲಾಂದ್ರೆ ಒಂದು ತಿಂಗಳು ತುಂಬ್ತಿದ್ದಂಗೆ ದೊಡ್ಡ ದಿವಸ ಅಂತ ಮಾಡ್ತಾರೆ. ಆ ದಿವಸಕ್ಕೆ ಜ್ಯಾಟಿ ಕೊಯ್ತೀವಿ. ಈ ಕಾರ್ಯಕ್ಕೆ ನಮ್ ದೇವರಿಗೆ ಸೇರಿದವ್ರು

ಯಾರಾದ್ರೂ ಒಬ್ರು ಬರ್ತಾರೆ. ಆ ಕಾರ್ಯಕ್ಕೆ ಅವರು ಕಡ್ಡಾಯವಾಗಿ ಬರ್ಲೇಬೇಕು. (ಉದಾಹರಣೆಗೆ ದೇವರ ಗೊಡ್ಲಾರು ಕಾರ್ಯಕ್ಕೆ ಮಾನುಗ್ಲಾರು ಅಂತ ಬರ್ತಾರೆ. ಬಂದು ಎಲ್ಲಾ ಕಾರ್ಯಾನೂ ಅವರೇ ಮಾಡಬೇಕು. ಮತ್ತೆ ಗೂನೂರು ಬೆಡಗು ಇದೆ. ಅವರ ಕಾರ್ಯಕ್ಕೆ ಮೊನುಗ್ಲಾರು ಬರ್ತಾರೆ.) ಈ ಕಾರ್ಯಕ್ಕೆ ಊರಿನ ಎಲ್ಲರೂ ಬಂದು ಊಟ ಗೀಟ ಮಾಡಬಹುದು. ಕೆಲವರ ಕಾರ್ಯಕ್ರಮಕ್ಕೆ ಕೇವಲ ಅವರ ಸಂಬಂಧಿಕ್ರು ಮಾತ್ರ ಬರಬೇಕು. ಬೇರೆಯೋರು ಬರಂಗಿಲ್ಲ. ಹಿಂಗೆ ದಿಡ್ಡದಿವಸ ಮಾಂಸದ ಊಟದಿಂದ ಮುಕ್ತಾಯವಾಗುತ್ತದೆ. ಮರುದಿನ ಆ ಮನೆಗೆ ಯಾರಾದ್ರು ಬಂದು ಹೋಗಬಹುದು. ಎಲ್ಲಾ ಸುಣ್ಣಗಿಣ್ಣ ಬಳಿದು ಪಾಪ ಕರ್ಮಗಳನ್ನೆಲ್ಲಾ ಸೆಳೆದಿರ್ತೀವಿ. ಹಿಂಗೈತಿ ನೋಡ್ರಿ ನಮ್ ಕಾರ್ಯಗಳು."[೧೪]

ದೇವರ ಹಟ್ಟಿಯ ಗೊಡ್ಲು ಕಿಲಾರಿ ಹೇಳುವ ಶವಸಂಸ್ಕಾರದ ವಿವರವೂ ಒಂದು ಬುಡಕಟ್ಟಿಗೆ ವಿಶಿಷ್ಟವಾದ ಆಚರಣೆಯಾಗಿ ಉಳಿದಿಲ್ಲ. ಇಲ್ಲಿಯೂ ಗ್ರಾಮೀಣ ಭಾಗದ ಜೀವನ ವಿಧಾನ ಪ್ರಭಾವವಿರುವುದನ್ನು ಕಾಣಬಹುದು. ಬಹುಪಾಲು ತಳಸಮುದಾಯಗಳು ಅನುಸರಿಸುವ ಶವಸಂಸ್ಕಾರದ ವಿಧಿಗಳನ್ನೇ ಬೇಡರು ಆಚರಿಸುತ್ತಿದ್ದಾರೆ. ಇಲ್ಲಿ ಕಾಡುಜೀವನದ ಮೂಲನಿವಾಸಿತನದ ಆಚರಣೆಗಳು ಹೆಚ್ಚಾಗಿ ಕಂಡುಬರುತ್ತವೆ.

೩.೨ ಧಾರ್ಮಿಕ ಆಚರಣೆಗಳು

ಅ. ಹಬ್ಬಗಳು :

ಆಚರಣೆಗಳು ಹೆಚ್ಚಾಗಿ ಸಮೂಹ ನಿಷ್ಠವಾದವುಗಳು. ವರ್ಷಕ್ಕೊಂದಾವರ್ತಿ ಈ ಆಚರಣೆಗಳು ಪುನರಾವರ್ತನೆಗೊಳ್ಳುತ್ತಿರುತ್ತವೆ. ಅರಣ್ಯವಾಸಿಗಳಾಗಿದ್ದ ಮ್ಯಾಸಬೇಡರಿಗೆ ಹಬ್ಬಹರಿದಿನಗಳು ಅಷ್ಟು ಪ್ರಮುಖವಾಗಿ ಕಾಣಿಸಿಲ್ಲ. ಒಂದೊಂದು ಹಟ್ಟಿಯವರೂ ಆಚರಿಸುವ ಊರೊಬ್ಬನ ಹಬ್ಬಕ್ಕಿಂತ ಅವರ ಸಮುದಾಯದ ದೇವತೆಗಳ ಹೆಸರಿನಲ್ಲಿ ಆಚರಿಸುವ ಜಾತ್ರೆಗಳೇ ಅವರಿಗೆ ಹಬ್ಬದಂತೆ. ಹೀಗಾಗಿ ಅಲೆಮಾರಿಗಳಾಗಿದ್ದ ಅವರಲ್ಲಿ ದೀಪಾವಳಿ, ಯುಗಾದಿ, ವಿನಾಯಕ ಚತುರ್ಥಿ ಮೊದಲಾದ ಹಬ್ಬಗಳು ಆಚರಿಸಲ್ಪಡುತ್ತಿಲ್ಲವೆಂದು ವಕ್ತೃಗಳಿಂದ ತಿಳಿದಂತಹ ಮಾಹಿತಿಯಾಗಿದೆ. ಹಟ್ಟಿಯೊಳಗಿನ ಬೇಡನಾಯಕರು ಗ್ರಾಮ ಪಟ್ಟಣಗಳ ನಾಗರೀಕತೆಯಿಂದಾಗಿ ಎಲ್ಲರೂ ಆಚರಿಸುವ ಹಬ್ಬಗಳನ್ನೇ ಅಭ್ಯಾಸ ಮಾಡಿಕೊಂಡಿದ್ದಾರೆ. ಹಿಂದಿನ ದಿನಗಳಲ್ಲಿ ಅವರಿಗೆ ಮುಂಗಾರಿ ಹಬ್ಬ ಹಿರಿಯರ ಹಬ್ಬ, ನಾಗಪ್ಪನ ಪೂಜೆ ಇವು ಮುಖ್ಯವಾಗಿದ್ದವಂತೆ ಆ ಜನಾಂಗದ ಕೆಲವು ಹಿರಿಯ ವಕ್ತೃಗಳು ತಿಳಿಸುತ್ತಾರೆ.

ಮುಂಗಾರಿ ಹಬ್ಬ

ಇದು ಹೆಚ್ಚಾಗಿ ಎತ್ತುಗಳಿಗೆ ಸೀಮಿತವಾದ ಹಬ್ಬ. ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿಯೂ ದನಕರುಗಳನ್ನು ಅಲಂಕರಿಸಿ ಪೂಜಿಸುವ ಕಿಚ್ಚು ಹಾಯಿಸುವ ಹಬ್ಬ ಬೇರೆಬೇರೆ ಹೆಸರುಗಳಲ್ಲಿ ಪ್ರಚಲಿತದಲ್ಲಿದೆ. ಉತ್ತರ ಕರ್ನಾಟಕದ ಕಡೆ ಇದನ್ನು 'ಕಾರ ಹುಣ್ಣಿಮೆ' ಎಂದರೆ, ದಕ್ಷಿಣ

ಕರ್ನಾಟಕದ ಕಡೆ 'ಸಂಕ್ರಾಂತಿ' ಎನ್ನುವುದು. ಈ ಹಬ್ಬವನ್ನು ಮುಂಗಾರಿ ನಾಯಕರು 'ಮುಂಗಾರಿ ಹಬ್ಬ' ಎಂಬುದಾಗಿ ಆಚರಿಸುವರು. ಜ್ಯೇಷ್ಠ ಮಾಸದ ಶುದ್ಧ ಹುಣ್ಣಿಮೆಯಂದು ಬೇಡರು ಈ ಹಬ್ಬವನ್ನು ಮಾಡುವುದಿದೆ. ಆ ವರ್ಷ ಬೆಳೆದ ಕಾಳುಗಳನ್ನೆಲ್ಲಾ ಕಲಸಿ ಬೇಯಿಸಿ ಗುಗ್ರಿ ಮಾಡುವರು. ಎತ್ತುಗಳಿಗೆ ಮೈತೊಳೆದು, ವಿಭೂತಿ ಬಳಿದು, ಅರಿಶಿನ ಕುಂಕುಮ ಇಟ್ಟು ಹೂವಿನಿಂದ ಅಲಂಕರಿಸಿ ಪೂಜೆ ಮಾಡಲಾಗುತ್ತದೆ. ಪೂಜೆಯಾದ ಮೇಲೆ ಬೇಯಿಸಿದ ಗುಗ್ರಿಯನ್ನು ದನಗಳ ಮುಂದೆ ಇಡಲಾಗುವುದು. ಅದು ತಿಂದು ಬಿಟ್ಟದ್ದನ್ನು ಪ್ರಸಾದವೆಂದು ತೆಗೆದುಕೊಳ್ಳುವರು. ಸಂಜೆ ಎತ್ತುಗಳಿಗೆ ಮತ್ತಷ್ಟು ಅಲಂಕಾರ ಮಾಡಿ ಊರೆಲ್ಲಾ ಮೆರವಣಿಗೆ ಹೋಗಿ ವಾಪಾಸಾಗಿ ಮನೆಯ ಕಡೆ ಬರುವಲ್ಲಿ ಹೆಂಗಸರು ಆರತಿ ಎತ್ತುವರು.

ಬೇಡರು ಪಶುಪಾಲಕರಾಗಿರುವುದರಿಂದ ಎತ್ತಿನ ಹಬ್ಬವನ್ನು ಮಾಡುತ್ತಾರೆ. ಇದು ಮ್ಯಾಸಬೇಡರಲ್ಲಿ ವಿಶಿಷ್ಟವಾಗಿ ಆಚರಣೆಯಾಗುತ್ತದೆ. ಮ್ಯಾಸಬೇಡರು ತಮ್ಮ ಮನೆದೇವರುಗಳಾದ ಗಾದ್ರಿಪಾಲನಾಯಕ, ಜಗಳೂರಜ್ಜ, ಯರಗಟನಾಯಕ, ಕಂಪಳರಾಯ, ಇನ್ನು ಮುಂತಾದ ದೇವರುಗಳಿಗೆ ದನ-ಕರುಗಳನ್ನು ಕಟ್ಟುವುದಿಲ್ಲ. ಅವುಗಳನ್ನು ರಪ್ಪದಲ್ಲಿ ಬಿಟ್ಟಿರುತ್ತಾರೆ. ಆ ರಪ್ಪವನ್ನು ದೇವರ ಎತ್ತಿನ ರಪ್ಪ ಎಂದು ಕರೆಯುತ್ತಾರೆ. ಆ ದನಕರುಗಳನ್ನು ನೋಡಿಕೊಳ್ಳಲು 'ಕಿಲಾರಿ'ಯನ್ನು ನೇಮಕ ಮಾಡುತ್ತಾರೆ. 'ಕಿಲಾರಿ' ಎಂದರೆ ಗೋವುಗಳನ್ನು ಕಾಯುವವನು. ಕುಲದ ಹಿರಿಯ ನಾಯಕರು ಮನೆದೇವರ ಸನ್ನಧಿಯಲ್ಲಿ ಸೇರಿಕೊಂಡು ತಮ್ಮ ಕುಲದ ವ್ಯಕ್ತಿಯನ್ನು ಕಿಲಾರಿಯಾಗಿ ನೇಮಕ ಮಾಡುತ್ತಾರೆ. ಆ ವ್ಯಕ್ತಿಗೆ ಶಸ್ತ್ರೋಕ್ತವಾಗಿ ಮುದ್ರೆಯನ್ನು ಒತ್ತುತ್ತಾರೆ. ಅಂದು ಆವ್ಯಕ್ತಿ ತಲೆಗೆ ಬಿಳಿಯ ರುಮಾಲು, ಹೆಗಲಿಗೆ ಕರಿಕಂಬಳಿ, ಸೊಂಟಕ್ಕೆ ಬಿಳಿಯ ನಿಕ್ಕರ್ ಉಟ್ಟಿರುತ್ತಾನೆ. ಕೈಗೆ ಬೆತ್ತವನ್ನು ಕೊಡುತ್ತಾರೆ. ಇದು ಮನೆದೇವರ ನಾಗಮುರಿ ಬೆತ್ತವನ್ನು ಕೊಡುತ್ತಾರೆ. ಇದು ಮನೆದೇವರ ನಾಗಮುರಿ ಬೆತ್ತವನ್ನು ಪ್ರತಿಬಿಂಬಿಸುತ್ತದೆ. ಆ ವ್ಯಕ್ತಿ ಕಿಲಾರಿಯಾದ ಮೇಲೆ ತುಂಬಾ ಕಟ್ಟುನಿಟ್ಟಾಗಿ ಇರಬೇಕು. ಕಿಲಾರಿ ಮದುವೆ ಆಗಿರುತ್ತಾನೆ. ಇಲ್ಲಿ ಅವನ ಹೆಂಡತಿಯ ಪಾತ್ರವು ಮುಖ್ಯವಿರುತ್ತದೆ. ಅವಳು ಎಷ್ಟೋ ದಿನ ಗಂಡನಾದ ಕಿಲಾರಿಯಾತನ್ನು ಬಿಟ್ಟು ಇರಬೇಕಾಗುತ್ತದೆ. ಕಿಲಾರಿಯ ವಾಸ ಹೆಚ್ಚಿನ ಪಾಲು ದೇವರ ಎತ್ತುಗಳ ರಪ್ಪವೇ ಆಗಿರುತ್ತದೆ. ಕಿಲಾರಿಯು ಎರಡು ವಾರಕ್ಕೊ, ಮೂರು ವಾರಕ್ಕೊ ಒಂದು ಬಾರಿ ಮನೆಗೆ ಬಂದು ಹೋಗುತ್ತಾನೆ. ಎಲ್ಲಾ ಕುಲಸ್ಥರು ಸುಗ್ಗಿಯ ಕಾಲದಲ್ಲಿ ಗೌರವಪೂರ್ವಕವಾಗಿ ಜೀವನ ನಿರ್ವಹಣೆಗೆ ಕಾಳುಕಡಿಗಳನ್ನು ಕೊಡುತ್ತಾರೆ. ಅವರು ಕಿಲಾರಿಯನ್ನು ದೇವರ ಸಮಾನ ನೋಡುತ್ತಾರೆ. ದೇವರ ಎತ್ತುಗಳನ್ನೇ ಪ್ರಧಾನವಾಗಿಟ್ಟುಕೊಂಡು ದೇವರೆತ್ತಿನ ಜಾತ್ರೆ ಮಾಡುತ್ತಾರೆ. ಇಂದಿಗೂ ಚಿತ್ರದುರ್ಗ ತಾಲೂಕಿನ ಗ್ರಾಮದ ಬೇಡರು ಈ ಹಬ್ಬವನ್ನು ಮಾಡುತ್ತಾರೆ. ಊರು ಬೇಡರೂ ಸಹ ಈ ಹಬ್ಬವನ್ನು ಆಚರಿಸುತ್ತಾರೆ.

ಬೆಳಗಟ್ಟದಲ್ಲಿ ಇರುವ ಮ್ಯಾಸಬೇಡರು ಅಲ್ಲಿಯ ಪ್ರಮುಖ ದೇವರಾದ ಯರಗಟನಾಯಕನನ್ನು ಹೊರಡಿಸಿಕೊಂಡು ಊರ ಸಮೀಪದ ಗುಡ್ಡ(ದೇವರ ಎತ್ತಿನ ರಪ್ಪ ಇರುವ ಜಾಗ)ಕ್ಕೆ ಹೋಗಿ ಅಲ್ಲಿ

ಎರಡು ದಿನ ವಾಸ್ತವ್ಯ ಮಾಡುತ್ತಾರೆ. ಅವರು ದೇವರ ಎತ್ತುಗಳನ್ನು ಕಿಲಾರಿಯ ನೇತೃತ್ವದಲ್ಲಿ ಪೂಜಿಸುತ್ತಾರೆ. ಹರಕೆ ಹೊತ್ತು ಬಂದ ಭಕ್ತಾದಿಗಳು ಮನೆಯಿಂದ ರೊಟ್ಟಿ ಬುತ್ತಿಯನ್ನು ದೇವರ ಎತ್ತುಗಳಿಗೆ ಮಾಡಿಕೊಂಡು ಬಂದಿರುತ್ತಾರೆ. ಈ ದೇವರ ಎತ್ತಿನ ಜಾತ್ರೆ ಅಕ್ಟೋಬರ್ ಕೊನೆಗೆ ಅಥವಾ ನವೆಂಬರ್ ಮೊದಲ ವಾರದಲ್ಲಿ ನಡೆಯುತ್ತದೆ. ಯರಗಟನಾಯಕನ ಒಕ್ಕಲಿನವರು ಬಂದು ಇಲ್ಲಿ ಸೇರುತ್ತಾರೆ. ಅಲ್ಲಿ ದೇವರನ್ನು ಸೋಬಾನೆಯ ಮೂಲಕ ಕೊಂಡಾಡುತ್ತಾರೆ. ಮಕ್ಕಳು ಆಗದಿರುವ ಹೆಂಗಸರು ಒಂದು ದಿನ ರಾತ್ರಿ ದೇವರ ಎತ್ತುಗಳ ರಪ್ಪದಲ್ಲಿ ನಿದ್ರೆ ಮಾಡುತ್ತಾರೆ. ಜೊತೆಗೆ ಬೇರೆ ಏನಾದರೂ ಕಾಯಿಲೆ ಇದ್ದಾಗಲೂ ರಪ್ಪದಲ್ಲಿ ಹೋಗಿ ನಿದ್ದೆ ಮಾಡುತ್ತಾರೆ. ದೇವರ ಮೇಲೆ ಅವರಿಗಿರುವ ಅತಿಯಾದ ನಂಬಿಕೆಯನ್ನು ಇದು ಪ್ರತಿನಿಧಿಸುತ್ತದೆ. ದೇವರ ಎತ್ತಿನ ರಪ್ಪದಲ್ಲಿ ಒಂದು ರಾತ್ರಿ ಹೆಂಗಸರು ನಿದ್ರೆ ಮಾಡಿ ಬಂದರೆ ತುಂಬಾ ಒಳ್ಳೆಯದಾಗುತ್ತದೆ ಎಂಬುದು ಬಲವಾದ ನಂಬಿಕೆ ಇಂದಿಗೂ ಪ್ರತಿವರ್ಷ ಈ ಭಾಗದಲ್ಲಿ ಎತ್ತಿನ ಹಬ್ಬ ಮಾಡುತ್ತಾರೆ. ಈ ಜಾತ್ರೆಗೆ ನೆಂಟರಿಷ್ಟರು ಬಂಧು ಬಳಗ ಎಲ್ಲರೂ ಸೇರುತ್ತಾರೆ. ಜೊತೆಗೆ ಊರಿನಲ್ಲಿರುವ ಬೇರೆ ಬೇರೆ ಸಮುದಾಯದವರು ಈ ಹಬ್ಬವನ್ನು ಆಚರಿಸುತ್ತಾರೆ. ಕೆಳವರ್ಗದವರಲ್ಲಿನ ಮಾದಿಗರು, ಬೋವಿಗಳು, ಛಲವಾದಿಗಳು ಈ ಹಬ್ಬವನ್ನು ಮಾಡುತ್ತಾರೆ. ಅದರಲ್ಲೂ ಮಾದಿಗ ಜನಾಂಗದವರು ವಿಶೇಷವಾಗಿ ದೇವರ ಎತ್ತಿನ ಹಬ್ಬವನ್ನು ಆಚರಣೆ ಮಾಡುತ್ತಾರೆ.

ಕಿಲಾರಿಯು ದೇವರ ಎತ್ತು ಹಸುಗಳಲ್ಲಿ ಪ್ರಮುಖ ಹೋರಿಯ ಕಾಲಿಗೆ ಗಗ್ರ, ಮೈಯ್ಯಿಗೆ ಜೂಲು, ಕೊರಳಿಗೆ ಘಂಟೆಸರ, ಕೋಡಿಗೆ ಕೋಡಣಸು ಹಾಕಿ ಹೂವಿನ ಅಲಂಕಾರ ಮಾಡಿ ದೇವರ ರೀತಿಯಲ್ಲಿ ಪೂಜಿಸುತ್ತಾನೆ. ಅಲ್ಲಿ ಸೇರಿರುವ ಭಕ್ತಾದಿಗಳು ಪೂಜೆ ಮಾಡಿ ಹಣ್ಣುಕಾಯಿ ಮಾಡಿಸುತ್ತಾರೆ. ಹೆಂಗಸರು ಆ ದೇವರ ಎತ್ತಿನ ಪೂಜೆಮಾಡಿ ದೀರ್ಘದಂಡ ನಮಸ್ಕಾರ ಹಾಕುತ್ತಾರೆ. ಹೀಗೆ ಅಲಂಕಾರ ಮಾಡಿರುವ ದೇವರ ಎತ್ತನ್ನು ಇನ್ನಿತರ ಎತ್ತುಗಳ ಗುಂಪಿನಲ್ಲಿ ಓಡಿಸುತ್ತಾರೆ. ಆ ದೇವರ ಎತ್ತು ಕಾಲಿಗೆ ಗಗ್ರ ಧರಿಸಿದಾಗ ಅದು ದೇವರ ಸ್ವರೂಪವೇ ಎಂದು ಭಕ್ತಾದಿಗಳು ನಂಬುತ್ತಾರೆ. ಆ ದೇವರ ಎತ್ತು ಓಡುವುದನ್ನು ನೋಡುವುದೇ ಒಂದು ರೋಮಾಂಚನವಾದ ಅನುಭವವಾಗಿದೆ.

ಹೊಸದಾಗಿ ಮದುವೆಯಾದ ಹೆಂಗಸು ತನ್ನ ಗಂಡನೊಂದಿಗೆ ಜಾತ್ರೆಗೆ ಬರಲೇಬೇಕು ಎಂಬುದು ರೂಢಿಯಾಗಿದೆ. ಈ ಹಬ್ಬವನ್ನು ಮ್ಯಾಸಬೇಡರು ಹೆಚ್ಚಾಗಿ ವಾಸಿಸುವ ನನ್ನಿವಾಳ, ಗಂಜಿಗಟ್ಟೆ, ಕಂಪಳದೇವರಹಟ್ಟಿ, ಮುಚ್ಚುಗುಂಟೆ ಇನ್ನೂ ಮುಂತಾದ ಕಡೆಗಳಲ್ಲಿ ಆಚರಿಸುತ್ತಾರೆ. ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಬೇರೆ ರೀತಿಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಗುಲ್ಬರ್ಗದ ಶಹಾಪುರ, ಬೆಳಗಾವಿಯ ಯಮಕನ ಮರಡಿ, ಬಳ್ಳಾರಿ ಹಾಗೂ ರಾಯಚೂರು, ಧಾರವಾಡ, ಗದಗ, ಹಾವೇರಿ ಇನ್ನೂ ಮುಂತಾದ ಉತ್ತರ ಕರ್ನಾಟಕದ ಬೇಡರು ಕಾರಹುಣ್ಣಿಮೆ ಎನ್ನುವ ಹಬ್ಬವನ್ನು ಆಚರಿಸುತ್ತಾರೆ. ಆ ಹಬ್ಬದಲ್ಲಿ ಕರ್ನಾಟಕದ ಮಧ್ಯಭಾಗದಲ್ಲಿನ ಮ್ಯಾಸಬೇಡರು

[illegible]

ಆಚರಿಸುವ ಎತ್ತಿನ ಹಬ್ಬದಲ್ಲಿ ಹೋರಿಗೆ ಅಲಂಕಾರ ಮಾಡುವಂತೆ ಅವರು ಅಲ್ಲಿನ ಹೋರಿಗೆ ಅಲಂಕಾರ ಮಾಡಿ ಓಡಿಸುತ್ತಾರೆ. ಇದು ಅಲ್ಲಿನ ಒಂದು ವಿಶೇಷ ಹಬ್ಬವಾಗಿದೆ. ಹೀಗೆಯೇ ಮೈಸೂರು, ಚಾಮರಾಜನಗರ, ಹಾಸನ ಭಾಗಗಳಲ್ಲಿ ಹೋರಿಗಳನ್ನೇ ಪ್ರಧಾನವಾಗಿಟ್ಟುಕೊಂಡು ಸಂಕ್ರಾಂತಿ ಹಬ್ಬವನ್ನು ಆಚರಿಸುತ್ತಾರೆ. ಹೀಗೆ ಬೇಡರ ಸಂಸ್ಕೃತಿಯಲ್ಲಿ ಎತ್ತಿನ ಹಬ್ಬ ವಿಶೇಷವಾಗಿ ಆಚರಣೆಗೊಳ್ಳುತ್ತಿದೆ. ಇವರ ಮುಖ್ಯವಾದ ಇಂತಹ ಸಾಂಸ್ಕೃತಿಕ ಆಚರಣೆಗಳ ಹಿನ್ನಲೆಯಲ್ಲಿ ಮಹಿಳೆಯನ್ನು ಗುರುತಿಸಬಹುದು. ಅಂತಹ ಆಚರಣೆಗಳಲ್ಲಿ ಮುಖ್ಯವಾದವುಗಳೆಂದರೆ ಗುಗ್ಗರಿ ಹಬ್ಬ, ಎತ್ತಿನ ಹಬ್ಬ, ಹಿರಿಯರ ಹಬ್ಬ, ಮಾರಮ್ಮನ ಹಬ್ಬ ಮುಂತಾದವುಗಳು.

ನಾಗಪ್ಪನ ಪೂಜೆ

ಇದು ಶ್ರಾವಣ ಮಾಸದಲ್ಲಿ ಬರುವ ಹಬ್ಬ. ಆ ತಿಂಗಳ ನಾಲ್ಕನೇ ಶುಕ್ರವಾರ ಈ ಹಬ್ಬವನ್ನು ಆಚರಿಸುವುದುಂಟು. ಹೆಂಗಸರು ಬೆಳಗೆದ್ದು, ಮಡಿಯುಟ್ಟು, ತಂಬಿಟ್ಟು, ಹಾಲು, ಗಂಧದಕಡ್ಡಿ, ಹೂವು ಎಡೆ ಇಟ್ಟುಕೊಂಡು ಊರ ಮುಂದಣ ಹುತ್ತಗಳ ಕಡೆ ಬರುತ್ತಾರೆ. ಹುತ್ತದ ಬಾಯಿಗೆ ಆಗತಾನೆ ಕರೆದುತಂದ ನೊರೆಹಾಲು ಹೊಯ್ದು ಅದರ ಮೇಲೆ ತಂಬಿಟ್ಟಿನ ಚೂರುಗಳನ್ನು ಹಾಕುವರು. ಪೂಜೆ ಮಾಡಿದ ನಂತರ ನೊರೆಹಾಲು ಮತ್ತು ತಂಬಿಟ್ಟನ್ನು ಪ್ರಸಾದವೆಂದು ತಿಳಿಯುತ್ತಾರೆ. ಮ್ಯಾಸಬೇಡರು ಮುಂಗಾರಿ ಹಬ್ಬದಲ್ಲಿ ತಮ್ಮ ಆಸ್ತಿ, ಐಶ್ವರ್ಯ, ಸಂಪತ್ತೆಂದು ಗೋವುಗಳನ್ನು ಪೂಜಿಸಿದರೆ, ಗೋವುಗಳಿಗೂ ತಮಗೂ ಶತ್ರುವಾಗಿರುವ ನಾಗಪ್ಪನನ್ನು ಶ್ರಾವಣದಲ್ಲಿ ಪೂಜಿಸುತ್ತಾರೆ. ಒಂದು ರಕ್ಷಕ ದೈವ ಮತ್ತೊಂದು ಶಿಕ್ಷಕ ದೈವವಾಯಿತು. ಒಂದು ನಾಯಕರ ಪ್ರೀತಿಗೆ ಕಾರಣವಾದ ಪ್ರಾಣಿಯಾದರೆ ಇನ್ನೊಂದು ಭೀತಿಗೆ ಆಸ್ಪದ ಕೊಡುವ ಅದರಿಂದ ಪೂಜಿಸಿಕೊಳ್ಳುವ ದೈವವಾಯಿತು. ಈ ಎರಡು ಹಬ್ಬಗಳನ್ನು ಬಿಟ್ಟರೆ ಬೇಡರು ಆಚರಿಸುವ ಇನ್ನೊಂದು ಮುಖ್ಯ ಹಬ್ಬ ಹಿರಿಯವದು.

ಗುಗ್ಗರಿ ಹಬ್ಬ ಮತ್ತು ಆರತಿ ಪೂಜೆ

"ಈ ಹಬ್ಬ ಮ್ಯಾಸಬೇಡರ ವಿಶಿಷ್ಟವಾದ ಹಬ್ಬವಾಗಿದೆ. ಮ್ಯಾಸಬೇಡರು ತಮ್ಮ ಜಮೀನುಗಳಲ್ಲಿ ಹೊಸದಾಗಿ ಬೆಳೆದಂತಹ ದ್ವಿದಳ ಧಾನ್ಯಗಳಾದ ಹುರುಳಿ, ತೊಗರಿ, ಹಲಸಂಡೆ, ಹೆಸರುಕಾಳು, ಮುಂತಾದವುಗಳನ್ನು 'ಗುಗ್ಗರಿ ಹಬ್ಬ' ಮಾಡುವವರೆಗೂ ಒಂದು ಕಾಳನ್ನೂ ಸಹ ಯಾರೂ ಬಳಸುವಂತಿಲ್ಲ. ಮತ್ತು ಬೇಯಿಸುವಂತಿಲ್ಲ. ಈ ದ್ವಿದಳ ಧಾನ್ಯಗಳನ್ನು ಕುಲಸ್ಥರೆಲ್ಲಾ ಸೇರಿ ಒಂದು ದಿನ ಮನೆದೇವರ ಸನ್ನಿಧಿಯಲ್ಲಿ ಬೇಯಿಸಿ (ಮಡಕೆಯಲ್ಲಿ ನೀರು ಮತ್ತು ಕಾಳು ಹಾಕಿ ಕಟ್ಟಿಗೆಯ ಒಲೆಯಲ್ಲಿ ಬೇಯಿಸುವುದು) ಎಲ್ಲರೂ ಪೂಜೆ ಮಾಡಿ ಸಂತೋಷದಿಂದ ಹಂಚಿಕೊಂಡು ತಿನ್ನುವುದು. ಇವರ ಮನೆ ದೇವರುಗಳು ಪೆಟ್ಟಿಗೆ ದೇವರುಗಳಾಗಿರುತ್ತವೆ. ಪ್ರಾರಂಭದಲ್ಲಿ ಮ್ಯಾಸಬೇಡರು ಪಶುಪಾಲಕರಾಗಿದ್ದರು. ಹಾಗಾಗಿ ಒಂದು ಊರಿನಿಂದ ಮತ್ತೊಂದು ಊರಿಗೆ ವಲಸೆ ಹೋಗುತ್ತಿದ್ದರು. ಅಂತಹ ಸಂದರ್ಭದಲ್ಲಿ ಬಿದಿರಿನ ಪೆಟ್ಟಿಗೆಯಲ್ಲಿ ದೇವರನ್ನಿಟ್ಟುಕೊಂಡು ನೀರು, ನೆರಳು, ಆಹಾರ

ಸಿಗುವ ಕಡೆ ವಾಸವಾಗುತ್ತಿದ್ದರು. ಆದ್ದರಿಂದ ಇವರ ದೇವರುಗಳು ಪೆಟ್ಟಿಗೆ ದೇವರುಗಳಾಗಿರುತ್ತವೆ. ಈ ದೇವರುಗಳಿಗೆ ಪ್ರಮುಖ ಹಬ್ಬವಾಗಿ ಆಚರಿಸುವುದೇ ಗಗ್ಗರಿ ಹಬ್ಬ. ಚಳ್ಳಕೆರೆಯ ಸಮೀಪದ ನನ್ನಿವಾಳದಿಂದ ಹಿಡಿದು ದಾವಣಗೆರೆ ಸಮೀಪದ ಮಿಂಚೇರಿ ಗುಡ್ಡದವರೆಗೂ ಮ್ಯಾಸಬೇಡರು ಈ ಗುಗ್ಗರಿ ಹಬ್ಬ ಆಚರಿಸುತ್ತಾರೆ."[೧೪]

ಗುಗ್ಗರಿ ಹಬ್ಬ ಮ್ಯಾಸಬೇಡರ ವಿಶಿಷ್ಟ ಹಬ್ಬ. ಈ ಮ್ಯಾಸಬೇಡರುಗಳಲ್ಲಿ ಮುಖ್ಯವಾಗಿ ಕುಲಸ್ಥರು ಒಟ್ಟಿಗೆ ಸೇರಿಕೊಳ್ಳುತ್ತಾರೆ. ಗುಗ್ಗರಿ ಹಬ್ಬದ ದಿನ ಮನೆದೇವರ ಸನ್ನಿಧಿಯಲ್ಲಿ ಇವರೆಲ್ಲರೂ ಒಟ್ಟಿಗೆ ಸೇರಿ ಹಬ್ಬವನ್ನು ಆಚರಿಸುತ್ತಾರೆ. ಅಂದು ಕುಟುಂಬದ ಪ್ರಮುಖ ಸದಸ್ಯರು ಅಲ್ಲಿಗೆ ಹೋಗುತ್ತಾರೆ. ಹಬ್ಬದ ದಿನ ಮಹಿಳೆಯರ ಪಾತ್ರವು ಬಹಳ ಮುಖ್ಯವಾಗಿರುತ್ತದೆ. ಆ ಹೆಂಗಸರು ಮನೆಯಿಂದ ಹೊರಡುವಾಗ ಅಕ್ಕಿ, ಮೀಸಲು ಧಾನ್ಯಗಳು, ಹಣ್ಣುಕಾಯಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಅಂದು ಹಬ್ಬದ ದಿನ ಉಪವಾಸದಿಂದ ಇರುತ್ತಾರೆ. ಮ್ಯಾಸಬೇಡರ ಮಹಿಳೆಯ ಕೆಲಸ ಮುಖ್ಯವಾಗುತ್ತದೆ. ಕೆಲವು ಹೆಂಗಸರು ದೇವರ ಸನ್ನಿಧಿಯಲ್ಲಿ ದ್ವಿದಳ ಧಾನ್ಯದ ಗುಗ್ಗರಿಯನ್ನು ಬೇಯಿಸಿ ನಂತರ ದೇವರಿಗೆ ಗುಗ್ಗರಿಯ ಎಡೆ ಹಾಕಿ ಆಮೇಲೆ ಪಾಯಸ, ಅನ್ನ, ಸಾರು, ನೈವೇಧ್ಯ ಮಾಡಿ ಪೂಜೆ ಮಾಡಿ ಊಟ ಮಾಡುತ್ತಾರೆ. ಗುಗ್ಗರಿ ಹಬ್ಬದ ದಿನ ಊರ ಹೊರಗಿನ ಜನಿಗಿ ಹಳ್ಳಕ್ಕೆ ದೇವರನ್ನು ಕರೆದುಕೊಂಡು ಹೋಗಿ ಗಂಗಾದೇವತೆ ಪೂಜೆ ಮಾಡಿಕೊಂಡು ಬರ್ತಾರೆ. ಮ್ಯಾಸಬೇಡರು ದೇವರನ್ನು ಹೊಳೆಗೆ ಕರೆದುಕೊಂಡು ಹೋಗುವಾಗ ವಾದ್ಯ-ಗೋಷ್ಠಿಗಳ ನಾದದೊಂದಿಗೆ ಕರೆದುಕೊಂಡು ಹೋಗುತ್ತಾರೆ. ಇಂತಹ ಕಡೆ ಪೂಜಾರಿ ಮನೆಯ ಹೆಂಗಸರು ಮತ್ತು ಕುಲದ ಹೆಂಗಸರು ಅಲ್ಲಿ ಸೇರಿರುತ್ತಾರೆ. ಯಾರಾದರೂ ಒಬ್ಬಳು ಪೂಜಾರಿ ಮನೆಯ ಹೆಂಗಸು ದೇವರ ಕಳಸ ಹಿಡಿದುಕೊಂಡು ದೇವರ ಮುಂದೆ ಹೋಗುತ್ತಾಳೆ. ಹಾಗೆಯೇ ಹಿಂದೆ ಬರುವ ಹೆಂಗಸರು ದೇವರನ್ನು ಮುಖ್ಯವಾಗಿ ಭಾವಿಸಿಕೊಂಡು ಸೋಬಾನೆ ಪದಗಳ ಮುಖಾಂತರ ಹಾಡಿ ಹೊಗಳುತ್ತಾರೆ. ಕೆಲವರು ದೇವರಿಗೆ ಓಕುಳಿನೀರು ತೆಗೆಯುತ್ತಾರೆ. ನನ್ನಿವಾಳ, ಪತ್ತಂಬರಹಟ್ಟಿಯಿಂದ ಪ್ರಾರಂಭವಾದ ಗುಗ್ಗರಿ ಹಬ್ಬ ಮಧ್ಯದಲ್ಲಿನ ಹುಣಸೆ ಹಟ್ಟಿ, ಸುಲ್ತಾನಿಪುರ, ಬೊಮ್ಮನಹಳ್ಳಿ, ಮಿಂಚೇರಿ ಆಚೆಗಿನ ಗಂಜಿಗಟ್ಟಿ ಇಲ್ಲಿಯವರೆಗೂ ಈ ಹಬ್ಬ ನಡೆಯುತ್ತದೆ. ಮ್ಯಾಸಬೇಡರ ಸಾಂಸ್ಕೃತಿಕ ವೀರನಾದ ಗಾದ್ರಿಪಾಲನಾಯಕ ಜಗಳೂರಜ್ಜನ ಉತ್ಸವದ ದಿನ ಗುಗ್ಗರಿ ಹಬ್ಬ ನಡೆಯುತ್ತದೆ. ದ್ವಿದಳ ಧಾನ್ಯಗಳನ್ನು ಇಲ್ಲಿ ಬಳಸಿದ ಮೇಲೆಯೇ ಮನೆಗಳಲ್ಲಿ ಅಡುಗೆ ಮಾಡಲು ಬಳಸುತ್ತಾರೆ. ಈ ವಿಷಯದಲ್ಲಿ ಹೆಂಗಸರು ಜಾಗೃತರಾಗಿರುತ್ತಾರೆ. ಇದು ಮಧ್ಯ ಕರ್ನಾಟಕದ ಬಯಲುಸೀಮೆಯ ಬಹುಪಾಲನ್ನು ಆವರಿಸಿಕೊಂಡಿದೆ. ಈ ಹಬ್ಬವು ಪ್ರತಿವರ್ಷ ಶಿವರಾತ್ರಿ ಹಬ್ಬದ ಆಸುಪಾಸಿಗೆ ಶುರುವಾಗಿ ಆಮೇಲೆ ಯುಗಾದಿ ಹತ್ತಿರದವರೆಗೂ ನಡೆಯುತ್ತದೆ. ಇನ್ನೂ ಕೆಲವು ಕಡೆ ಕಾರ್ತಿಕ ಮಾಸದಲ್ಲಿ ಆಚರಿಸುತ್ತಾರೆ.

ಚಳ್ಳಕೆರೆ ಸಮೀಪದ ನನ್ನಿವಾಳ ಮ್ಯಾಸಬೇಡರ ಸಾಂಸ್ಕೃತಿಕ ಕೇಂದ್ರ ಅಲ್ಲಿ ಗುಗ್ಗರಿ ಹಬ್ಬ ನಡೆಯುವಾಗ ಜೊತೆಗೆ ಡಿಕ್ಕಿ ಹಬ್ಬವು ನಡೆಯುತ್ತದೆ. ಮ್ಯಾಸಬೇಡರ ಪೆಟ್ಟಿಗೆ ದೇವರುಗಳಲ್ಲಿ ಬಂಗಾರ(ಹುಲಿ) ದೇವರಿಗೆ ತೆಂಗಿನಕಾಯಿ ಒಡೆಯುವ ಹಾಗಿಲ್ಲ. ಆದರೆ ಹೆಂಗಸರು ಅದರ ನಿಮಿತ್ತವಾಗಿ ತಲೆಯ ಢಿಕ್ಕಿ ಹಬ್ಬ ಆಚರಿಸುತ್ತಾರೆ. ಆ ದೇವರಿಗೆ ಹರಕೆ ಹೊತ್ತ ಅತ್ತೆ-ಸೊಸೆಯಂದಿರು ಒಬ್ಬರಿಗೊಬ್ಬರು ತಲೆಯ ಕೂದಲು ಹಿಡಿದು ಢಿಕ್ಕಿ ಹೊಡೆಯುತ್ತಾರೆ. ಇದನ್ನು ಢಿಕ್ಕಿ ಹೊಡೆಯುವ ಹಬ್ಬವೆಂದು ಕರೆಯುತ್ತಾರೆ. ಹೀಗೆ ಡಿಕ್ಕಿ ಹೊಡೆದುಕೊಳ್ಳುವ ಮೂಲಕ ತೆಂಗಿನಕಾಯಿ ಬಡಿಸಿದ ತೃಪ್ತಿಪಟ್ಟುಕೊಳ್ಳುತ್ತಾರೆ. ಇದೊಂದು ಸಾಂಸ್ಕೃತಿಕ ಆಟವೂ ಆಗಿದೆ. ದೈನಂದಿನ ಬದುಕಿನಲ್ಲಿ ಬಹುಪಾಲು ಅತ್ತೆ-ಸೊಸೆಯಂದಿರಿಗೆ ಯಾವಾಗಲೂ ವೈಮನಸ್ಸು ಇದ್ದೇ ಇರುತ್ತದೆ. ದೇವರ ಹರಕೆ ತೀರಿಸಿಕೊಳ್ಳುವ ಸಂದರ್ಭದಲ್ಲಿ ಈ ಢಿಕ್ಕಿ ಹೊಡೆಸಿಕೊಳ್ಳುವ ಕ್ರಿಯೆಯನ್ನು ಕಂಡುಕೊಳ್ಳುತ್ತಾರೆ. ಇದನ್ನು ಅತ್ತೆ ಸೊಸೆಯಂದಿರು ಮಾತ್ರ ಮಾಡುತ್ತಾರೆ. ಇದು ಅತ್ತೆ-ಸೊಸೆಯಂದಿರ ನಡುವೆ ಇರುವ ವೈಮನಸ್ಸುಗಳನ್ನು ಪರೋಕ್ಷವಾಗಿ ದೂರಮಾಡುತ್ತದೆ. ಹೀಗೆ ಗುಗ್ಗರಿ ಹಬ್ಬದಲ್ಲಿ ಢಿಕ್ಕಿ ಹಬ್ಬವೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಇದು ನನ್ನಿವಾಳ ಎಂಬ ಊರಿನಲ್ಲಿ ನಡೆಯುವುದು. ಆದರೆ ಇತ್ತೀಚಿನ ದಿನಗಳಲ್ಲಿ ಈ ಪ್ರಕ್ರಿಯೆ ನಿಂತುಹೋಗಿದೆ.

ಈ ಹಬ್ಬವನ್ನು ಕೆರೆಯ ದಂಡೆಯಲ್ಲಿರುವ ಪಾಪಿನಾಯಕನ ಗುಡಿಯಲ್ಲಿ ನೆರವೇರಿಸುವರು. ಹೊಸಧಾನ್ಯ ಬಂದಂತಹ ಸಂದರ್ಭದಲ್ಲಿ ಜಗಳೂರಿನ ಬೇಡನಾಯಕರು ಈ ಹಬ್ಬವನ್ನು ಕೆರೆಯ ದಂಡೆಯಲ್ಲಿ ಇರುವ ಪಾಪನಾಯಕನ ಗುಡಿಯಲ್ಲಿ ನೆರವೇರಿಸುವರು. ಫೆಬ್ರವರಿ ತಿಂಗಳ ಹುಣ್ಣಿಮೆಯಂದು ಪ್ರತಿವರ್ಷ ಈ ಹಬ್ಬ ನಡೆಯುವುದು. ಹಗಲು ಹೊತ್ತಿನಲ್ಲಿ ಮೂರ್‍ನಾಲ್ಕು ಜನ ಹೆಂಗಸರು ಗುಡಿಯ ಹೊರ, ಒಳ ಅಂಗಳವನ್ನು ಸಾರಿಸಿ ಶುದ್ಧಮಾಡಿ ರಂಗೋಲಿ ಇಡುತ್ತಾರೆ. ಇದು ರಾತ್ರಿಯ ವೇಳೆ ನಡೆಯುವ ಹಬ್ಬವಾದ್ದರಿಂದ ಹಗಲು ಗುಡಿಯಲ್ಲಿ ಯಾವುದೇ ಕಾರ್ಯಕ್ರಮಗಳು ಇರುವುದಿಲ್ಲ. ಮಧ್ಯಾಹ್ನದ ವೇಳೆ ಪೂಜಾರಿಯು ಬಂದು ದೇವರನ್ನು ಬಿದಿರ ಪಟ್ಟಿಯಲ್ಲಿಟ್ಟುಕೊಂಡು ಊರೊಳಗಿನ ಅಕ್ಕಸಾಲಿಯಲ್ಲಿಗೆ ಬಂದು ಶುದ್ಧಿಗಾಗಿ ಕೊಡುತ್ತಾನೆ. ಅಕ್ಕಸಾಲಿಯಿಂದ ಶುದ್ಧಿಯಾದ ದೇವರು ಅದೇ ಪಟ್ಟಿಯಲ್ಲಿ ದೇವಸ್ಥಾನವನ್ನು ಸೇರುತ್ತದೆ.

ಯುಗಾದಿ ಹಬ್ಬ

ಯುಗಾದಿ ಹಬ್ಬವನ್ನು ಹಿಂದೂಗಳು ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕದಾದ್ಯಂತ ಕನ್ನಡಿಗರು ಆಚರಿಸುವುದನ್ನು ಕಾಣಬಹುದು. ಕನ್ನಡಿಗರಿಗೆ ಯುಗಾದಿ ಹಬ್ಬವು ಹೊಸವರ್ಷವಿದ್ದ ಹಾಗೆ. ಈ ಹಬ್ಬವು ಹಿಂದೂಗಳ ದಿನಚರಿಯಲ್ಲಿ ಹೊಸವರ್ಷವಾಗಿ ಗುರುತಿಸಲ್ಪಡುತ್ತದೆ. ಈ ಹಬ್ಬವು ಸಾಮಾನ್ಯವಾಗಿ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ನಡೆಯುತ್ತದೆ. ಕರ್ನಾಟಕದ ಜನತೆ ಈ ಯುಗಾದಿ ಹಬ್ಬವನ್ನು ಸತ್ತು ಸ್ವರ್ಗ ಸೇರಿರುವ ತಮ್ಮ ಪೂರ್ವಿಕರ ನೆನಪಿಗಾಗಿ 'ಪಿತೃಪಕ್ಷ' ಆಚರಿಸುವ ಮೂಲಕ ಪೂಜೆಮಾಡಿ, ಅವರಿಗೆ ದೇವರಸ್ಥಾನವನ್ನು ಕಲ್ಪಿಸಿ ಬೇವು ಬೆಲ್ಲವನ್ನು ತಿಂದು

ತಮ್ಮ ಜೀವನದಲ್ಲಿ ಬರುವ ಕಷ್ಟ-ಸುಖಗಳನ್ನು ಎದುರಿಸಲು ಸಿದ್ಧರಾಗುತ್ತಾರೆ. ಹಾಗೆಯೇ ಮ್ಯಾಸಬೇಡರು ಯುಗಾದಿ ಹಬ್ಬವನ್ನು ಬಹಳ ವಿಶೇಷವಾಗಿ ಆಚರಿಸಿಕೊಂಡು ಬರುವುದನ್ನು ಕಾಣಬಹುದಾಗಿದೆ. ಈ ಹಟ್ಟಿಗಳಲ್ಲಿನ ಜನರು ಯುಗಾದಿ ಹಬ್ಬವನ್ನು 'ಹಿರಿಯರ ಹಬ್ಬ' ಎಂಬುದಾಗಿ ಕರೆಯುತ್ತಾರೆ. ಯುಗಾದಿ ಹಬ್ಬವನ್ನು ಇಲ್ಲಿ ಮೂರು ದಿನಗಳ ಕಾಲ ಆಚರಿಸುವುದು ಕಂಡುಬರುತ್ತದೆ.

ಹಬ್ಬದ ಮೊದಲನೆಯ ದಿನ ಸಾಯಂಕಾಲದ ಹೊತ್ತಿಗೆ ಸುತ್ತಲಿನ ಬೇಡರು ತಮ್ಮ ಮನೆಗಳಲ್ಲಿರುವ ಹಸುಗಳಿಂದ ಹಾಲನ್ನು ಕರೆದು ದೇವರ ಮುಡುಪಾಗಿ ಕಾಸು ಕಟ್ಟಿಕೊಂಡು ಮೀಸಲು ತೆಗೆದುಕೊಂಡು ತಮ್ಮ ಹಟ್ಟಿಗಳಿಂದ ಹೊರಟು ಸ್ವಾಮಿಗಳ ಕೆರೆಯ ಬಳಿಯಿರುವ ದೇವರ ಎತ್ತಿನ ಗುಡಿಗೆ ಬಂದು ಸೇರುತ್ತಾರೆ. ಹೀಗೆ ಬಂದು ಸೇರಿದ ಜನರು ದೇವರ ಹೆಸರುಗಳಲ್ಲಿ ತಂದು ಹಾಕಿದ ಉದಿ-ಪದಿಯ ಮುಂದೆ ಕಾಸು ಮೀಸಲನ್ನು ತಮ್ಮ ಮನೆದೇವರು ಮತ್ತು ದೇವರೆತ್ತುಗಳಿಗೆ ಅರ್ಪಿಸಿ ಪೂಜೆ ಸಲ್ಲಿಸುತ್ತಾರೆ. ಹಾಗೆಯೇ ಎತ್ತಿನ ಗುಡಿಯಲ್ಲಿ ಬೇವು-ಬೆಲ್ಲ ಸ್ವೀಕರಿಸಿ ಆ ದಿನ ರಾತ್ರಿ ಎತತ್ತಿನ ಗುಡಿಯಲ್ಲಿ ಮಲಗಿ ಕಾಲ ಕಳೆಯುತ್ತಾರೆ. ಬೆಳಗ್ಗೆ ಎದ್ದು ಉದಿ-ಪದಿಗೆ ನಮಸ್ಕರಿಸಿ ತಮ್ಮ ತಮ್ಮ ಹಟ್ಟಿಗಳಿಗೆ ಹಿಂತಿರುಗಿ ಬಂದು ಬೇವು ಬೆಲ್ಲವನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುತ್ತಾರೆ.

ಹಬ್ಬದ ಎರಡನೆಯ ದಿನ ಮುಂಜಾನೆ ಬೇಗ ಎದ್ದು ಮಾವಿನ ತೋರಣಗಳನ್ನು ಕಟ್ಟಿ ಬಾಗಿಲುಪೂಜೆ ಮಾಡುತ್ತಾರೆ. ನಂತರ ತಮ್ಮ ಮನೆಗಳಲ್ಲಿರುವ ಆಯುಧಗಳನ್ನು ತೆಗೆದುಕೊಂಡು ಮನೆಗೆ ಒಬ್ಬರಂತೆ ಸುತ್ತಲಿನ ಹಳ್ಳಿಗಳ ಜನರು ಬೇಟೆಗೆ ಹೊರಟು ನಿಲ್ಲುತ್ತಾರೆ. ಈ ಸಂದರ್ಭದಲ್ಲಿ ಆಡುವ ಬೇಟೆಯನ್ನು 'ರಾಣ್ಯದ ಬೇಟೆ' ಎಂದು ಕರೆಯುತ್ತಾರೆ. ಈ ಬೇಟೆಯು ವಿಶಿಷ್ಟತೆಯಿಂದ ಕೂಡಿರುತ್ತದೆ. ಈ ಹಬ್ಬಗಳು ಹಿರಿಯರು ಹೇಳುವಂತೆ ತಮ್ಮ ಪೂರ್ವಿಕರೆಂದು ಗುರ್ತಿಸಿಕೊಳ್ಳುವ ಬೇಡರ ಕಣ್ಣಪ್ಪ, ವಾಲ್ಮೀಕಿ ಮುಂತಾದವರು ಬೇಟೆಗಾರರಾಗಿದ್ದು, ಬೇಟೆ ವೃತ್ತಿಯನ್ನು ಅನುಸರಿಸಿಕೊಂಡು ಬಂದಿದ್ದ ಕಾರಣ ನಾವು ಅವರ ನೆನಪಿಗಾಗಿ ಯುಗಾದಿ ಹಬ್ಬದ ಸಂದರ್ಭದಲ್ಲಿ ಬೇಟೆ ಮಾಡುವುದಾಗಿ ತಿಳಿಸುತ್ತಾರೆ.

ದೊರೆಯ ನೇತೃತ್ವದಲ್ಲಿ ಆಯುಧಗಳನ್ನು ಹಿಡಿದು ಹೊರಟ ಜನರು ಹಾಗೂ ದೊರೆಯು ತಮಟೆಯ ಸದ್ದಿನೊಂದಿಗೆ ಮೆರವಣಿಗೆಯಲ್ಲಿ ನನ್ನಿವಾಳದ ಕಟ್ಟೆಮನೆಯ ಪಾದಗಟ್ಟೆಯ ಬಳಿ ಬಂದು ಸೇರುತ್ತಾರೆ. ನಂತರ ಸುತ್ತಲಿನ ಹಟ್ಟಿಗಳ ಜನರೂ ಅಲ್ಲಿಗೆ ಬಂದು ಸೇರುತ್ತಾರೆ. ಹೀಗೆ ಪಾದಗಟ್ಟೆಯ ಬಳಿ ಬಂದು ಸೇರಿದ ಜನರು ಹಾಗೂ ದೊರೆ ಎಲ್ಲರು ಕಟ್ಟೆಮನೆ ದೇವರುಗಳಿಗೆ ನಮಸ್ಕರಿಸಿ, ಆಯುಧಗಳನ್ನು, ಬಲೆಗಳನ್ನು ಮತ್ತು ನಾಯಿಗಳನ್ನು ಜೊತೆಗೆ ಕರೆದುಕೊಂಡು ವಾದ್ಯಗಳ ಸದ್ದು ಮಾಡುತ್ತಾ ಬೇಟೆಗೆ ಹೋಗುತ್ತಾರೆ. ಕಾಡಿಗೆ ಹೋಗಿ ಬಲೆಗಳನ್ನು ಬಿಟ್ಟು ಕಾಡಿನಲ್ಲಿರುವ ಪ್ರಾಣಿಗಳಾದ ಜಿಂಕೆ, ಮೊಲ, ಕಾಡುಹಂದಿಗಳನ್ನು ಬೇಟೆಯಾಡಿ ಹಿಂದಿರುಗುತ್ತಾರೆ. ಹೀಗೆ ಬೇಟೆಗೆ ಹೊರಟ ಜನರು ಬೇಟೆ ಸಿಕ್ಕುವವರೆಗೂ ಎಷ್ಟೇ ದೂರವಾದರೂ ಹೋಗುತ್ತಾರೆ

ಆದರೆ ಬರಿಗೈಯ್ಯಲ್ಲಿ ಬರುವಂತಿಲ್ಲ. ಹಾಗೇನಾದರು ಬಂದರೆ ನಮಗೆ ಒಳ್ಳೆಯದಾಗುವುದಿಲ್ಲ. ಎಂಬ ನಂಬಿಕೆ ಇವರಲ್ಲಿ ಪ್ರಸ್ತುತ ದಿನಮಾನದಲ್ಲಿಯೂ ಬೇರೂರಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಬೇಟೆಯಾಡುವುದು ಮೊಲಗಳನ್ನು ಮಾತ್ರ ಮೊದಲೆಲ್ಲಾ ಜಿಂಕೆ ಮತ್ತು ಹಂದಿಗಳನ್ನು ಬೇಟೆಯಾಡುತ್ತಿದ್ದರು. ಈಗ ಬೇಟೆಯಾಡುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು ಶಿಕ್ಷೆಗೆ ಹೆದರಿ ಬೇಟೆಗೆ ಹೋಗುವುದಿಲ್ಲ. ಅಲ್ಲದೆ ಅರಣ್ಯನಾಶದಿಂದಾಗಿ ಕಾಡುಪ್ರಾಣಿಗಳ ಸಂಖ್ಯೆಯಲ್ಲಿ ಇಳಿಮುಖವಾಗಿರುವುದರಿಂದ ನೇಮಕಾವಸ್ಥೆಗೆ ಹಬ್ಬದ ದಿನಗಳ್ಲಿ ಮೊಲವನ್ನು ಗುರಿಯಾಗಿಟ್ಟುಕೊಂಡು ಬೇಟೆಯಾಡುತ್ತಾರೆ. ಮ್ಯಾಸಬೇಡರಲ್ಲಿ ಕಾಡುಹಂದಿ ಬೇಟೆಗೆ ವಿಶೇಷವಾದ ಸ್ಥಾನಮಾನವನ್ನು ಕಲ್ಪಿಸಲಾಗಿದೆ. ಬೇಟೆಯಾಡಿದ ಕಾಡುಹಂದಿಯನ್ನು ಮೆರವಣಿಗೆ ಮಾಡಿ ಅದನ್ನು ಊರಿನ ಹೊರವಲಯದಲ್ಲಿ ಹೂತು ಹಾಕುತ್ತಾರೆ. ಈ ರೀತಿ ಮಾಡುವುದರಿಂದ ಈ ವರ್ಷ ಊರಿಗೆ ಸಮೃದ್ಧಿ ಹೆಚ್ಚಾಗಿ ಮಳೆ ಬೆಳೆ ಚೆನ್ನಾಗಿ ಆಗುತ್ತದೆ. ಹಾಗೂ ಜನರು ಮತ್ತು ದನಕರುಗಳಿಗೆ ಯಾವುದೇ ರೀತಿಯ ರೋಗರುಜಿನಗಳು ತಗಲುವುದಿಲ್ಲ. ಎಂಬ ನಂಬಿಕೆ ಈ ಭಾಗದ ಜನರದ್ದಾಗಿದೆ. ಹಂದಿಬೇಟೆಯನ್ನು ಎರಡು ಮೂರು ಊರಿನವರು ಸೇರಿ ಒಟ್ಟಾಗಿ ಮಾಡಿದರೆ ಹಂದಿಯು ಯಾವ ಊರಿಗೆ ಸೇರಬೇಕು ಎಂಬ ವಿಷಯವಾಗಿ ದೊಡ್ಡದೊಡ್ಡ ವ್ಯಾಜ್ಯಗಳು ನಡೆದ ಉದಾಹರಣೆಗಳಿವೆ.

ಪ್ರಸ್ತುತ ಮೊಲದ ಬೇಟೆಯನ್ನು ಮಾತ್ರ ಮ್ಯಾಸಬೇಡರು ಮಾಡುವ ಕ್ರಮ ರೂಢಿಯಲ್ಲಿದೆ. ಬೇಟೆಯಾಡಿದ ಮೊಲವನ್ನು ಸಂಜೆಯಾಗುವ ಹೊತ್ತಿಗೆ ಬಂದು ಕಟ್ಟೆಮನೆಯ ಎದುರಿಗಿರುವ ಚಿಕ್ಕ ದಿಬ್ಬದ ಬಂಡೆಯ ಬಳಿ ಬೀಡು ಬಿಡುತ್ತಾರೆ. ನಂತರ ತಾವು ಬೇಟೆಯಾಡಿ ತಂದ ಮೊಲವನ್ನು ತೆಗೆದುಕೊಂಡು ಪಾದಗಟ್ಟೆಯ ಬಳಿ ಇಟ್ಟು ಕೈಕಾಲು ಮುಖ ತೊಳೆದುಕೊಂಡು ಕಟ್ಟೆಮನೆಯ ದೇವರುಗಳಿಗೆ ನಮಸ್ಕರಿಸುತ್ತಾರೆ. ಆಮೇಲೆ ದಂಡೆಗೆ ಸಂಬಂಧಿಸಿದ ಪೋಷಾಕುಗಳನ್ನು ತೆಗೆದುಕೊಂಡು ಬಂದು ಎದುರಿಗಿರುವ ಬೆಟ್ಟವನ್ನು ಹತ್ತುತ್ತಾರೆ.

ಕಟ್ಟೆಮನೆಯಿಂದ ತಂದ ವಸ್ತುಗಳನ್ನು ಒಂದು ನಿಗದಿತ ಸ್ಥಳದಲ್ಲಿಟ್ಟು ಹೆಂಗಸರನ್ನು ಕಾವಲಿಟ್ಟು ಬೇಟೆಗೆ ಹೋದ ಗಂಡಸರೆಲ್ಲ 'ಬಂಡೆ ದಿಂಡು' ಸುತ್ತುವುದಕ್ಕೆ ಮುಂದಾಗುತ್ತಾರೆ. ಹೀಗೆ ಬಂಡೆ ದಿಂಡು ಸುತ್ತುವ ಸಂದರ್ಭದಲ್ಲಿ ಜನರೆಲ್ಲಾ ಒಂದೆಡೆ ಕುಳಿತುಕೊಳ್ಳುತ್ತಾರೆ. ಯಾಮಾಡ್ಲ ಬೆಡಗಿನ ಹಿರಿಯನು ಜನರೆಲ್ಲರ ಒಪ್ಪಿಗೆ ಪಡೆದು ಕರಿ ಕಂಬಳಿಯ ಗದ್ದುಗೆ ಹಾಸುತ್ತಾನೆ. ಹೀಗೆ ಗದ್ದುಗೆ ಹಾಸಿ ಎಲೆ-ಅಡಿಕೆ ಹೊಂಬಾಳೆಯನ್ನು ಚಿಕ್ಕ ಚಿಕ್ಕ ರಾಶಿಯಾಗಿ ಇಟ್ಟು ಮೊದಲು ಆ ದಿನದ ಬೇಟೆಯಲ್ಲಿ ಪ್ರಮುಖ ಪಾತ್ರವಹಿಸಿ ಬೇಟೆಯಾಡಿದ ವ್ಯಕ್ತಿಗೆ ಕುಲಸಾವಿರದವರ ಒಪ್ಪಿಗೆಯ ಮೇರೆಗೆ ವಿಳ್ಯವನ್ನು ಕೊಡಲಾಗುತ್ತದೆ. ನಂತರ ಪ್ರತಿಯೊಂದು ಬೆಡಗಿನ ಹೆಸರುಗಳನ್ನು ಕೂಗಿ ಕರೆಯಲು ಆ ಬೆಡಗಿನ ಯಾರಾದರೂ ವ್ಯಕ್ತಿ ಬಂದು ವೀಳ್ಯವನ್ನು ಪಡೆಯುತ್ತಾನೆ. ಇದನ್ನು ವೀಳ್ಯ ಕೊಡುವುದು ಎಂದು ಕರೆಯುತ್ತಾರೆ. ವೀಳ್ಯ ಕೊಡುವ ಶಾಸ್ತ್ರ ಮುಗಿದ ನಂತರ ಬೆಟ್ಟದ ಸುತ್ತಲೂ ಸುತ್ತು ಹಾಕುತ್ತಾ ಬೆಟ್ಟದ

ಅಂಚಿನಲಿರುವ ತಮ್ಮ ಪೂರ್ವಿಕರ ಸಮಾಧಿಗಳಿಗೆ ನಮಸ್ಕರಿಸಿ, ದೊರೆಯ ವಸ್ತುಗಳನ್ನು ಇಟ್ಟಿರುವ ಸ್ಥಳಕ್ಕೆ ಬಂದು ಸೇರುತ್ತಾರೆ. ಹೀಗೆ ಬೆಟ್ಟ ಸುತ್ತುವುದನ್ನು ಬಂಡೆ ದಿಂಡು ಸುತ್ತುವುದು ಎಂದು ಕರೆಯುತ್ತಾರೆ.

ಬಂಡೆದಿಂಡು ಸುತ್ತಿ ಬಂದ ಜನರು ಒಂದು ನಿಗದಿತ ಸ್ಥಳದಲ್ಲಿ ಕುಳಿತುಕೊಳ್ಳಲು ದೊರೆಯಾದ ವ್ಯಕ್ತಿಗೆ ರೇಷ್ಮೆ ವಸ್ತ್ರಗಳಿಂದ ಅಲಂಕಾರ ಮಾಡಿ ನಿಲುವಂಗಿ ಹಾಕಿ ಪೇಟ ತೊಡಿಸಿ ಅಲಂಕಾರ ಮಾಡಲಾಗುತ್ತದೆ. ಹೀಗೆ ಅಲಂಕಾರ ಮಾಡುವ ಸಂದರ್ಭದಲ್ಲಿ ಮುತ್ತೈದೆಯರಿಂದ ಸೋಬಾನೆ ಪದಗಳನ್ನು ಹಾಡಿಸಲಾಗುತ್ತದೆ. ಅಲಂಕಾರಗೊಂಡ ದೊರೆಯೊಂದಿಗೆ ಅಲ್ಲಿ ಸೇರಿದ ಜನರಲ್ಲಿ ಸೋಬಾನೆ ಹಾಡನ್ನು ಹಾಡುತ್ತಾ ಪಾದಗಟ್ಟೆಯ ಬಳಿಗೆ ನಡೆದು ಬರುತ್ತಾರೆ. ಅಲ್ಲಿಂದ ದೊರೆ ಮತ್ತು ಕುಲದ ಗುರುವನ್ನು ಮೆರವಣಿಗೆಯಲ್ಲಿ ಕಟ್ಟಿಮನೆಯವರೆಗೆ ವಾದ್ಯಗಳ ಸದ್ದಿನೊಂದಿಗೆ ಆರತಿ ಹಿಡಿದು ಮುತ್ತೈದೆಯರೊಂದಿಗೆ ಕರೆತರಲಾಗುತ್ತದೆ. ಹೀಗೆ ಕರೆತರುವಾಗ ಉರುವೆ ವಾದ್ಯ ಹೊಡೆಯುವವನು ಹಿಮ್ಮುಖವಾಗಿ ಮೂರು ಹೆಜ್ಜೆ ನಡೆದರೆ ದೊರೆಯಾದವನು ಮೂರು ಹೆಜ್ಜೆ ಮುಂದಕ್ಕೆ ನಡೆಯುತ್ತಾನೆ. ಹೀಗೆ ಕಟ್ಟೀಮನೆಯವರೆಗೂ ಮೆರವಣಿಗೆಯಲ್ಲಿ ಬಂದ ಜನರು ಮತ್ತು ದೊರೆಯು ಮುತ್ತೇದಾರ ದೇವರು, ಬೊಮ್ಮ ದೇವರು, ಗಾದ್ರಿ ದೇವರು, ಬಂಗಾರು ದೇವರು ಮತ್ತು ಓಬಳ ದೇವರುಗಳ ಪಾಳಿಗಳಿಗೆ ಪೂಜೆ ಸಲ್ಲಿಸುತ್ತಾರೆ. ಆ ಮೇಲ್ಕಂಡ ದೊರೆಯು ಸಿಂಹಾಸನದ ಕಟ್ಟೆಯನ್ನು ಹತ್ತಿ ನಿಲ್ಲುತ್ತಾನೆ. ಸಿಂಹಾಸನವೇರಿದ ದೊರೆಗೆ ಕುಲಸಾವಿರದವರಿಂದ ತಲೆಬಾಗಿ ನಮಸ್ಕಾರ ಸಲ್ಲಿಸಲಾಗುತ್ತದೆ. ಮೊದಲು ನೆಲಗೇತಿ ಬುಲ್ಲಿಡಲು ರಾಯಭಾರಿಯಾದವರು, ಯಾಮಾಡ್ಲವರು ತಲೆಬಾಗಿ ಬಲಗೈ ಮುಂದಕ್ಕೆ ಮಾಡಿ ನಮಸ್ಕರಿಸುತ್ತಾರೆ. ಇದನ್ನು 'ಡೀಬಿ ಸಲಾಮು' ಎಂಬುದಾಗಿ ಕರೆಯಲಾಗುತ್ತದೆ. ಈ ರೀತಿ ನಮಸ್ಕರಿಸುವುದು ಬುಡಕಟ್ಟಿನ ಜನರು ದೊರೆಗೆ ಅಧೀನವಾಗಿ ಅವನ ಆಜ್ಞೆ ಮೀರದಂತೆ ನಡೆದುಕೊಳ್ಳುವುದರ ಸಂಕೇತವಾಗಿ ಕಂಡುಬರುತ್ತದೆ. ದೊರೆಗೆ ನಮಸ್ಕಾರ ಸಲ್ಲಿಸಿದ ನಂತೆ ಹಬ್ಬಕ್ಕೆ ಸೇರಿದ ಜನರೆಲ್ಲ ಒಬ್ಬರಿಗೊಬ್ಬರು ಕೈ ಕೈ ಮುಟ್ಟಿಕೊಂಡು ನಮಸ್ಕಾರ ಸ್ವೀಕರಿಸುತ್ತಾರೆ.

ದೊರೆಯ ಮೆರವಣಿಗೆ ಹಾಗೂ ಸಭೆಯು ಮುಗಿದ ನಂತರ ಜನರೆಲ್ಲಾ ತಮ್ಮ ತಮ್ಮ ಹಟ್ಟಿಗಳಿಗೆ ಹಿಂತಿರುಗಲು ಆಯಾ ಹಟ್ಟಿಯ ಹೆಂಗಳೆಯರಿಂದ ಬೇಟೆಗೆ ಹೋದ ಜನರಿಗೆ ಆರತಿ ಮಾಡಲಾಗುತ್ತದೆ. ಆರತಿ ಮಾಡಿಸಿಕೊಂಡವರು ತಮ್ಮ ಇಷ್ಟಾನುಸಾರ ಆರತಿ ತಟ್ಟೆಗೆ ಕಾಸು ಹಾಕುತ್ತಾರೆ. ಇದಾದ ನಂತರ ಮೆರವಣಿಗೆಯ ಮೂಲಕ ತಮ್ಮ ಹಟ್ಟಿಗಳಲ್ಲಿರುವ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ದೊರೆಯ ಮನೆಗೆ ಹೋಗಿ ಅಲ್ಲಿ ಹಿರಿಯರ ಪೂಜೆ 'ಪಿತೃಪಕ್ಷ'ದಲ್ಲಿ ಪಾಲ್ಗೊಂಡು ದೊರೆ ಮನೆಯಲ್ಲಿ ನೈವೇದ್ಯ ಸ್ವೀಕರಿಸಿ ಬಂದು ತಮ್ಮ ತಮ್ಮ ಮನೆಗಳಲ್ಲಿ ಸತ್ತು ಸ್ವರ್ಗ ಸೇರಿದ ತಮ್ಮ ಪೂರ್ವಿಕರಿಗೆ ಅವರು ಬಳಸುತ್ತಿದ್ದ ಆಯುಧಗಳು ಇಲ್ಲವೇ ಬೆತ್ತಗಳು ಇನ್ನೂ ಮುಂತಾದ ವಸ್ತುಗಳನ್ನು ಇಟ್ಟು ಎಡೆಹಾಕಿ ಪೂಜೆ ಸಲ್ಲಿಸುತ್ತಾರೆ.

"ಜಾನಪದರಲ್ಲಿ 'ದೇವರಗೂಡು' ಎಂದು ಕರೆಸಿಕೊಳ್ಳುವ ಈ ಹಬ್ಬವನ್ನು ಶಿಷ್ಟರು 'ಕಾರ ಹುಣ್ಣಿಮೆ' ಹಬ್ಬ ಎಂಬುದಾಗಿ ಕರೆಯುತ್ತಾರೆ. ಈ ಹಬ್ಬವನ್ನು ಬೇಡರು, ದೇವರ ಗುಡ್ಡೆ> ದೇವರಗೂಡು>ಕಾರಹಬ್ಬ ಎಂಬುದಾಗಿ ಕರೆಯುತ್ತಾರೆ. ಈ ಹಬ್ಬವು ಜೇಷ್ಠ ಮಾಸ ಅಂದರೆ ಮೇ ತಿಂಗಳಿನಲ್ಲಿ ಬರುತ್ತದೆ. ಈ ಹಬ್ಬವನು ಕುರಿತಂತೆ ಬೆಟಗೇರಿ ಕೃಷ್ಣಶರ್ಮರು "ಜೇಷ್ಠ ಶುದ್ದ ಪೌರ್ಣಿಮೆಯು ನಮ್ಮ ನಾಡಿನಲ್ಲಿ ಕಾರ ಹುಣ್ಣಿಮೆ ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಬಯಲು ನಾಡಿನ ರೈತರಿಗಂತೂ ಈ ಹಬ್ಬ ದೊಡ್ಡ ಹಬ್ಬ. ಕಾರ ಎಂದರೆ ಮಳೆ, ಮಳೆಗಾಲದ ಆರಂಭದ ಹುಣ್ಣಿಮೆಯಾದ್ದರಿಂದಲೇ ಇದಕ್ಕೆ 'ಕಾರಹುಣ್ಣಿಮೆ' ಎಂಬ ಹೆಸರು ಬಂದಿದೆ. ಹೊಲದಲ್ಲಿ ದುಡಿಯುವ ಎತ್ತುಗಳನ್ನು ದೇವರೆಂಬ ಭಾವನೆಯಿಂದ ಪ್ರತ್ಯೇಕವಾಗಿ ಪೂಜಿಸುವುದು ಈ ಹಬ್ಬದಲ್ಲಿ ಮುಖ್ಯ ಕಾರ್ಯಕ್ರಮ"[೧೫] ಎಂದು ಹೇಳುತ್ತಾರೆ. ಈ ಹಬ್ಬವು ರೈತರಿಗೆ ಕೃಷಿಗೆ ಸಂಬಂಧಿಸಿದ ಹಬ್ಬವಾಗಿದ್ದು, ಮುಂಗಾರು ಮೊದಲುಗೊಳ್ಳುವ ಸಮಯದಲ್ಲಿ ಇದನ್ನು ಆಚರಿಸಲಾಗುತ್ತದೆ. ರೈತರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಹಾಗೂ ಕೃಷಿ ಚಟುವಟಿಕೆಗಳು ಬಿರುಸುಗೊಳ್ಳುವುದರಿಂದ ಮಳೆ-ಬೆಳೆ ಚೆನ್ನಾಗಿ ಆಗಿ ತಮ್ಮ ಕಷ್ಟ ನಿವಾರಣೆಯಾಗುತ್ತದೆ. ಎಂಬ ಭಾವನೆಯಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಅದರಲ್ಲಿಯೂ ಮುಖ್ಯವಾಗಿ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಪಶುಗಳಿಗೆ ಪೂಜಿಸುವ ಹಬ್ಬವಾಗಿ ಈ ಕಾರಹುಣ್ಣಿಮೆ ಹಬ್ಬವು ಜನಪದರಲ್ಲಿ ಬಳಕೆಯಲ್ಲಿದೆ.

ಕೊನೆ ಟಿಪ್ಪಣಿಗಳು

೦೧ ನಾಗಮ್ಮ, ೩೮ ವರ್ಷ, ಸಾಸಲಟ್ಟಿ, ಮೊಳಕಾಲ್ಮೂರು(ತಾ)

೦೨ ಬೋರಮ್ಮ, ೪೪ ವರ್ಷ, ಮ್ಯಾಸರಟ್ಟಿ, ಮೊಳಕಾಲ್ಮೂರು(ತಾ)

೦೩ ಬೋರಮ್ಮ, ೪೩ ವರ್ಷ, ಬಿ.ಜಿ.ಕೆರೆ, ಚಳ್ಳಕೆರೆ(ತಾ)

೦೪ ಸಣ್ಣೋಬಯ್ಯ, ೩೫ ವರ್ಷ, ಬಚ್ಚಬೋರಯ್ಯನಹಟ್ಟಿ, ಚಿತ್ರದುರ್ಗ(ತಾ)

೦೫ ಸಣ್ಣೋಬಯ್ಯ, ೩೫ ವರ್ಷ, ಬಚ್ಚಬೋರಯ್ಯನಹಟ್ಟಿ, ಚಿತ್ರದುರ್ಗ(ತಾ)

೦೬ ಕರಿಶೆಟ್ಟಿರುದ್ರಪ್ಪ, ಮ್ಯಾಸ ನಾಯಕರು, ಪುಟ-೩೫

೦೭ ಬೋರಯ್ಯ, ೪೦ ವರ್ಷ, ಹಿರೇಹಳ್ಳಿ, ಚಳ್ಳಕೆರೆ(ತಾ)

೦೮ ಪೂಜಾರಿ ನಿಜಲಿಂಗಪ್ಪ, ೬೦ ವರ್ಷ, ಕಾಮಾಗೇತನಹಳ್ಳಿ, ಚಳ್ಳಕೆರೆ(ತಾ)

೦೯ ಬೋರಯ್ಯ, ೪೦ ವರ್ಷ, ಹಿರೇಹಳ್ಳಿ, ಚಳ್ಳಕೆರೆ(ತಾ)

೧೦ ಬೋರಜ್ಜಿ, ೭೦ ವರ್ಷ, ಸಂತಾಳ ದೇವರಹಟ್ಟಿ, ಮೊಳಕಾಲ್ಮೂರು(ತಾ)

೧೧ ಬೋರಮ್ಮಜ್ಜಿ, ೭೦ ವರ್ಷ, ನಲಗೇತನಹಟ್ಟಿ, ಚಿತ್ರದುರ್ಗ(ತಾ)

೧೨ ಪಾಲಯ್ಯ, ೪೦ ವರ್ಷ, ನೆಲಗೇತನಹಟ್ಟಿ, ಚಿತ್ರದುರ್ಗ(ತಾ)

೧೩ ಪಾಪಮ್ಮ, ೩೫ ವರ್ಷ, ಸಾಸಲಟ್ಟಿ, ಚಿತ್ರದುರ್ಗ(ತಾ)

೧೪ ಚೆನ್ನಮ್ಮ, ೬೦ ವರ್ಷ, ಗೋನೂರು, ಚಿತ್ರದುರ್ಗ(ತಾ)

೧೫ ಸಣ್ಣ ಓಬಯ್ಯ, ೫೫ ವರ್ಷ, ಹಾಯ್‌ಕಲ್, ಚಿತ್ರದುರ್ಗ(ತಾ)

* * * *

ಅಧ್ಯಾಯ : ನಾಲ್ಕು

ಮ್ಯಾಸಬೇಡ ಸಮುದಾಯದ ಸ್ತ್ರೀ ದೈವಗಳು

- ದಾನಸಾಲಮ್ಮ
- ಅಕ್ಕರಾಯಮ್ಮ (ದಡ್ಲುಮಾರಮ್ಮ)
- ಮಲಿಯಮ್ಮ
- ಗೌರಸಂದ್ರದ ಮಾರಮ್ಮ
- ಕಂಚವ್ವ- ಕಾಮವ್ವ
- ಮುಂಗುಲು ಮಾರಮ್ಮ
- ತಮಟಕಲ್ಲಿನ ಓಬವ್ವ
- ಅರವಜ್ಜಿ

ಅಧ್ಯಾಯ : ನಾಲ್ಕು

ಮ್ಯಾಸಬೇಡ ಸಮುದಾಯದ ಸ್ತ್ರೀ ದೈವಗಳು

ಗ್ರಾಮೀಣ ಜೀವನದಲ್ಲಿ ಅನಾದಿ ಕಾಲದಿಂದಲೂ ಹಾಸುಹೊಕ್ಕಾಗಿ ಬೆರೆತುಬಂದಿರುವ ಗ್ರಾಮೀಣ ದೇವತೆಗಳು ಜನಪದ ಬದುಕಿನ ಒಂದು ಭಾಗವಾಗಿದೆ. ಜಾನಪದ ಸಂಸ್ಕೃತಿ, ಅರ್ಥವ್ಯವಸ್ಥೆ, ಸಾಮಾಜಿಕ ಸ್ಥಿತಿಗಳನ್ನು ಅಧ್ಯಯನ ಮಾಡುವವರು ಗ್ರಾಮೀಣ ದೇವತೆಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ. ಒಂದು ದೇವತೆಗೆ ಸಂಬಂಧಿಸಿದ ಹಾಡು, ಕತೆ, ಐತಿಹ್ಯ, ದಂತಕಥೆ ಪುರಾಣಗಳಲ್ಲಿ ಆಯಾ ಜನಾಂಗದ ಹಲವು ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಿದೆ. ಒಂದು ನಿರ್ದಿಷ್ಟ ದೇವತೆಯ ಸಮಗ್ರ ಅಧ್ಯಯನದಿಂದ ಆ ದೇವತೆಯನ್ನು ಪೂಜಿಸುವ ಜನರ ಜೀವನ ರೀತಿ, ಚಿಂತನ ವಿಧಾನಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ. ಜ್ಞಾನದ ವಿವಿಧ ಶಾಖೆಗಳು ಅಂದರೆ ಇತಿಹಾಸ, ಮನಃಶಾಸ್ತ್ರ, ಭಾಷಾಶಾಸ್ತ್ರ, ಸಮಾಜಶಾಸ್ತ್ರ ಇನ್ನಿತರ ಶಿಸ್ತುಗಳು ಈ ಬಗೆಯ ಅಧ್ಯಯನದಿಂದ ನೆರವನ್ನು ಪಡೆಯಬಹುದು. ಇಂದು ಸಮಾಜ ತೀವ್ರವಾದ ಒಳಗಾಗುತ್ತಿದೆ. ವೈಜ್ಞಾನಿಕ ಸಂಶೋಧನೆ, ಕೈಗಾರೀಕರಣ, ನಗರೀಕರಣ ಇವುಗಳ ಫಲವಾಗಿ ಮಾನವನ ಆಲೋಚನೆಯ ರೀತಿ ಬದಲಾಗುತ್ತಿದೆ. ಹೊಸಬಗೆಯ ವಿಚಾರಗಳಿಗೆ, ಬದುಕಿಗೆ ಮನುಷ್ಯ ತನ್ನನ್ನು ಒಡ್ಡಿಕೊಂಡು ಜಗತ್ತಿನ ನಾನಾ ಭಾಗಗಳ ಕಡೆ ಕಣ್ಣಾಡಿಸುತ್ತಿದ್ದಾನೆ. ಚಂದ್ರಗ್ರಹವನ್ನು ಕಂಡು ಬಂದದ್ದೂ ಆಗಿದೆ. ಇಂಥ ಸ್ಥಿತಿಯಲ್ಲಿ ನಮ್ಮ ಜನಪದ ಸಂಸ್ಕೃತಿಯ ರೂಪವೂ ಬದಲಾವಣೆಗೆ ಒಳಗಾಗುತ್ತಿದೆ. ಹಿಂದಿನಿಂದ ಬಂದ ಗಾದೆ, ಕತೆ, ಒಗಟುಗಳು ಜೊತೆಗೆ ನಮ್ಮ ಗ್ರಾಮದೇವತೆಗಳು ಅವುಗಳಿಗೆ ಸಂಬಂಧಿಸಿದ ಪುರಾಣ, ಆಚರಣೆಗಳು, ದಿನದಿನಕ್ಕೂ ಕಡಿಮೆಯಾಗುತ್ತಾ ಕಣ್ಮರೆಯಾಗುತ್ತಿವೆ ಇಲ್ಲವೇ ರೂಪಾಂತರಗೊಳ್ಳುತ್ತಿವೆ. ಒಂದು ಕಾಲಘಟ್ಟದಲ್ಲಿ ಇವುಗಳಿಗಿದ್ದ ಸ್ವರೂಪವನ್ನು ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಔಚಿತ್ಯಪೂರ್ಣವಾಗಿದೆ. ಗ್ರಾಮದೇವತೆಗಳು ಗ್ರಾಮೀಣದ ಮೂಲಭೂತ ಅಗತ್ಯವೆನ್ನಬಹುದು. ದೇವತೆಯಿಲ್ಲದೆ ಅವರು ಯಾವುದನ್ನೂ ಆರಂಭಿಸುವುದಿಲ್ಲ ಬೆಳಗ್ಗಿನಿಂದ ಸಂಜೆಯ ತನಕದ ದುಡಿಮೆಯಲ್ಲಿ ಇನ್ನಿತರ ಸಮಯದಲ್ಲಿ ದೇವರ ಆಸರೆ ಅವರಿಗೆ ಬೇಕು. ಅವರ ಎಲ್ಲಾ ಚಿಂತನೆಗಳೂ, ಆಚರಣೆಗಳೂ, ಆಣೆ, ಪ್ರಮಾಣಗಳೂ ದೇವತೆಯ ಸಾಕ್ಷಿಯಲ್ಲಿ ಸಾಗುತ್ತವೆ. ಗ್ರಾಮದೇವತೆಗಳಿಗೆ ಸಂಬಂಧಿಸಿದಂತೆ ಊರಿನ ಎಲ್ಲಾ ಜಾತಿಗಳ ಜನಕ್ಕೂ ಒಂದೊಂದು ಜವಾಬ್ದಾರಿ ವಿತರಣೆಯಾಗಿರುತ್ತದೆ. ಈ ಜವಾಬ್ದಾರಿಯನ್ನು ಸಂಬಂಧಪಟ್ಟವರು

ಅನುವಂಶಿಕವಾಗಿ ನಿರ್ವಹಿಸುತ್ತಾ ಬಂದಿರುತ್ತಾರೆ. ಇಡೀ ಗ್ರಾಮದ ಐಕ್ಯತೆ, ಸಾಮರಸ್ಯದ ಜೀವಾಳ ಈ ಗ್ರಾಮದೇವತೆಯೇ ಆಗಿರುತ್ತದೆ. ಆದ್ದರಿಂದ ಪರೋಕ್ಷವಾಗಿ ವ್ಯಕ್ತಿಯ ಮತ್ತು ಗ್ರಾಮ ಸಮೂಹದ ಮಾನಸಿಕ ನಿಯಂತ್ರಣ ಈ ದೇವತೆಯದೆ ಆಗಿರುತ್ತದೆ. ವಿಶಿಷ್ಟವೂ ವೈವಿಧ್ಯಮಯವೂ ಆದ ಜನಪದ ಸಂಸ್ಕೃತಿಯನ್ನು ವಿವರಿಸಲು ಜನಪದರು ಹೇಳುವ ಪುರಾಣಗಳು, ಆಚರಿಸಿರುವ ಧಾರ್ಮಿಕ ವಿಧಿಗಳು ಸಹಕಾರಿಯಾಗಿರುತ್ತವೆ. ಈ ಸಂಸ್ಕೃತಿಯನ್ನು ಅರ್ಥೈಸುವ ಯಾರೇ ಆಗಲಿ ಜನಪದ ಪುರಾಣ ಪ್ರಪಂಚವನ್ನು ಎಚ್ಚರಿಕೆಯಿಂದ ಪ್ರವೇಶಿಸಿ ಅವುಗಳ ಅರ್ಥಪರಿವೀಕ್ಷಣೆಯಲ್ಲಿ ತೊಡಗಿ ಒಂದು ಪುರಾಣ ಬಿತ್ತುವ ಸಂದೇಶವನ್ನು ಅದು ಒಂದು ಕಾಲಕ್ಕೆ ನಿರ್ದಿಷ್ಟ ಜನವರ್ಗಕ್ಕೆ ಹೇಳಿದ ಸತ್ಯವನ್ನು ಗ್ರಹಿಸಬೇಕಗುತ್ತದೆ.

ಜಾನಪದ ಆಚರಣೆಯೊಂದರ ಎಲ್ಲಾ ಮುಖಗಳನ್ನೂ ಗಮನಿಸಿ ಅದರ ಸಾಮಾಜಿಕ ಸಂದರ್ಭದಲ್ಲಿ ಅದನ್ನು ವಿಶ್ಲೇಷಿಸುವ ಅಗತ್ಯವಿದೆ. ಪುರಾಣ ಮತ್ತು ಆಚರಣೆಗಳು ದೇವತೆಯ ಅಧ್ಯಯನದಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ದೇವತೆಗೆ ಸಂಬಂಧಿಸಿದ ಸೈದ್ಧಾಂತಿಕ ಭಾಗ ಪುರಾಣವಾದರೆ, ಅದಕ್ಕೆ ಸಂಬಂಧಿಸಿದ ಕ್ರಿಯಾ ಭಾಗವೇ ಆಚರಣೆ ಆಗಿರುತ್ತದೆ. ಮನುಷ್ಯನ ಪ್ರಥಮ ಆರ್ಥಿಕ ಚಟುವಟಿಕೆಯಾದ ಆಹಾರ ಸಂಗ್ರಹಣೆಯ ಹಂತದಲ್ಲಿ ಸ್ತ್ರೀಯ ಪಾತ್ರ ಪ್ರಧಾನವಾಗಿತ್ತು. ಮಕ್ಕಳನ್ನು ಹೆರುವುದಲ್ಲದೆ ಅವರನ್ನು ಪಾಲನೆ ಮಾಡುವ ಮತ್ತು ಬೆಳೆಸುವ ಹೊಣೆಗಾರಿಕೆ ಅವಳದ್ದಾಗಿತ್ತು. ಎಲ್ಲಾ ಪದ್ಧತಿಗಳು ಮತ್ತು ಸಾಂಸ್ಕೃತಿಕ ಲಕ್ಷಣಗಳು ಹೆಣ್ಣಿನ ಮೂಲಕವೇ ಸಂವಹನಗೊಳ್ಳುತ್ತಿದ್ದವು. ಹೆಣ್ಣು ಒಂದು ಜನಾಂಗದ ಸಂಕೇತವಷ್ಟೇ ಅಲ್ಲ. ಜೀವೋತ್ಪತ್ತಿಯ ಮೂಲಶಕ್ತಿಯಾಗಿದ್ದಳು. ಆಕೆಯ ಅಂಗಾಂಗಗಳು ಮತ್ತು ಗುಣಶಕ್ತಿಗಳಿಗೆ ಸೃಷ್ಟಿಶಕ್ತಿಯ ಸಾಮರ್ಥ್ಯವಿದೆಯೆಂದು ಭಾವಿಸಲಾಯಿತು. ಅವುಗಳನ್ನು ಚೈತನ್ಯಶಕ್ತಿಯ ಸಂಕೇತಗಳೆಂದು ತಿಳಿಯಲಾಯಿತು. ಸಮಾಜದ ಬೆಳವಣಿಗೆಯ ಮೂಲ ಹಂತದಲ್ಲಿ ಮಾತ್ರವೇ ಕೇಂದ್ರಸ್ಥಾನದಲ್ಲಿದ್ದಳು. ಆಹಾರ ಸಂಗ್ರಹಣೆ ಮತ್ತು ಆಹಾರದ ಉತ್ಪಾದನೆ ಸ್ತ್ರೀಯ ಕರ್ತವ್ಯವಾಗಿತ್ತು. ಇದರಿಂದ ಸ್ತ್ರೀಯ ಸ್ಥಾನಮಾನ ಹೆಚ್ಚಿತು. ಈ ಮಾನ್ಯತೆ ಅವಳನ್ನು ದೈವತ್ವಕ್ಕೇರಿಸುವವರೆಗೆ ಹೋಯಿತು. ಮಾತೃಪ್ರಧಾನ ವ್ಯವಸ್ಥೆಯು ಪ್ರಪಂಚದ ಯಾವುದೇ ಭಾಗಕ್ಕಿಂತ ಗುಣ ಮತ್ತು ಪ್ರಮಾಣ ಎರಡರಲ್ಲೂ ಭಾರತ ದೇಶದಲ್ಲಿ ವಿಫುಲವಾಗಿತ್ತೆಂದು ಭಾವಿಸುತ್ತಾರೆ. ಭಾರತದಲ್ಲಿ ಈ ಸ್ತ್ರೀ ಮಾನ್ಯತೆಯು ಕೃಷಿಯ ಆರಂಭದ ಹಂತದೊಡನೆ ಸಂಬಂಧ ಹೊಂದಿದ ವೇದಪೂರ್ವ ಕಾಲದ ಜನರ ಆರ್ಥಿಕ ಚಟುವಟಿಕೆಯು ಕೃಷಿಯಾಗಿತ್ತು. ಕೃಷಿಯು ಆರ್ಥಿಕ ಚಟುವಟಿಕೆಯಾಗಿದ್ದು ವಿಶ್ವದ ಎಲ್ಲಾ ಸಮುದಾಯಗಳಲ್ಲಿ ಮಾತೃದೇವತೆಯು ಅಗ್ರಮಾನ್ಯಳಾದಂತಹ ಧಾರ್ಮಿಕ ಪಂಥಗಳು ಸೃಷ್ಟಿಯಾದವು. ಭಾರತ ದೇಶದಲ್ಲಿ ಶಾಕ್ತ ಪಂಥದ ಉದಯಕ್ಕೆ ಕಾರಣವಾದ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಂಶಗಳಲ್ಲಿ ವಿವಿಧ ದೇಶಗಳ ಸಮೃದ್ಧಿ ಪಂಥಗಳ ಹುಟ್ಟಿಗೆ ಕಾರಣವಾಗಿದೆ ಎನ್ನಬಹುದು. ಏಕೆಂದರೆ ಶಾಕ್ತ ಆಚಾರಗಳು ಪ್ರಧಾನವಾಗಿ ಕೃಷಿಯ ಉತ್ಪನ್ನಗಳ ಸಮೃದ್ಧಿಗಾಗಿ ಹುಟ್ಟಿಕೊಂಡಿವೆ. ಈ ಸಾಂಸ್ಕೃತಿಕ ಹಂತದಲ್ಲಿ ಆಸ್ತಿಯ ಹಕ್ಕು ಹೆಣ್ಣಿನ ಒಡೆತನಕ್ಕೆ ಒಳಪಟ್ಟಿದ್ದು ಕೌಟುಂಬಿಕ

ತಲೆಮಾರುಗಳು ಹೆಣ್ಣಿನ ಕಡೆಯಿಂದಲೇ ಗುರುತಿಸಲ್ಪಡುತ್ತಿದ್ದವು. ಕೃಷಿಯನ್ನು ಕಂಡುಹಿಡಿದದ್ದು ಹೆಣ್ಣು ಎಂದು ಬಹುಪಾಲು ಮಾನವ ಶಾಸ್ತ್ರಜ್ಞರು ಒಪ್ಪುತ್ತಾರೆ. ಗಂಡು ಬೇಟೆಗೆ ಹೋಗಿದ್ದಾಗ ಆಹಾರ ಸಂಗ್ರಹಣೆಯನ್ನೂ ಗೃಹಕೃತ್ಯವನ್ನೂ ನೋಡಿಕೊಳ್ಳುತ್ತಿದ್ದ ಹೆಣ್ಣು ಬೀಜವು ಗಿಡವಾಗುವ ಪವಾಡವನ್ನು ಮೊದಲು ಕಂಡಳು. ಕೈಗುದ್ದಲಿಯಿಂದ ತೋಟ ಕೃಷಿಯನ್ನು ಆರಂಭ ಮಾಡಿದ ಹಿರಿಮೆ ಹೆಣ್ಣಿಗೆ ಸಲ್ಲುತ್ತದೆ. ಪ್ರಾರಂಭದ ಕೃಷಿಕಳಾಗಿದ್ದ ಹೆಣ್ಣು ಸಮೃದ್ಧಿಗೋಸ್ಕರ ನಡೆಯುವ ಕೃಷಿಯ ಆಚರಣೆಗಳನ್ನು ನಡೆಸಿಕೊಡುವ ಹೊಣೆಗಾರಿಕೆಯನ್ನು ಹೊತ್ತಳು. ಹೆಣ್ಣಿನ ಗರ್ಭಧಾರಣೆ ಮತ್ತು ಭೂಮಿಯ ಸತ್ವಧಾರಣೆ ಇವೆರಡಕ್ಕೂ ಸಾಮ್ಯತೆಯನ್ನು ಕಂಡುಕೊಂಡ ಆದಿಮಾನವ ಹೆಣ್ಣು ಮತ್ತು ಭೂಮಿ ಇವೆರಡೂ ಪೂಜ್ಯ ವಸ್ತುಗಳೆಂದು ಭಾವಿಸಿದ. ಪ್ರಪಂಚದ ಯಾವುದೇ ಸಂಸ್ಕೃತಿಯಲ್ಲಿ ಕೃಷಿ ಆರಂಭ ಕಾಲದ ಹುಟ್ಟಿದ ಈ ಧರ್ಮವು ಒಂದೇ ಮೂಲ ಆಶಯವನ್ನು ಹೊಂದಿದ್ದು, ಆಯಾ ಪ್ರದೇಶಕ್ಕೆ ಅನುಗುಣವಾಗಿ ವೈಲಕ್ಷಣವನ್ನು ಹೊಂದಿರುತ್ತದೆ. ಕೃಷಿಯ ಆರಂಭ ಚರಿತ್ರೆಯಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಗಮನಾರ್ಹವಾಗಿ ಬದಲಾವಣೆ ಮಾಡಿತಲ್ಲದೆ ಅನೇಕ ಸ್ತ್ರೀ ದೇವತೆಗಳ ಹುಟ್ಟಿಗೆ ಕಾರಣವಾಯಿತು. ಈಗಾಗಲೇ ಇದ್ದ ಸ್ತ್ರೀ ದೇವತೆಗಳು ಪ್ರವರ್ಧಮಾನಕ್ಕೆ ಬರಲು ಕಾರಣವಾಯಿತು. ಸ್ತ್ರೀಯರನ್ನು ಕುರಿತು ಪೂಜ್ಯ ಭಾವನೆಯ ಜೊತೆಗೆ ಪ್ರಪಂಚದ ಎಲ್ಲಾ ದೇವರುಗಳು ಶಕ್ತಿಯಿಂದ ಸೃಷ್ಟಿಯಾದವು ಎಂಬ ನಂಬಿಕೆ ಬೆಳೆಯತೊಡಗಿತು.

ಮಾತೆ ಎಲ್ಲಕ್ಕೂ ಮೊದಲಿಗಳು. ಭೂಮಿಯಂತೆಯೇ ಫಲವಂತಿಕೆ ಪಡೆದಿರುವವಳು. ಸಮೃದ್ಧಿಯ ಸಂಕೇತವಾದ ಇವಳನ್ನು ಭೂಮಿಯನ್ನು ಪೂಜಿಸುವಂತೆಯೇ ನಮ್ಮ ಆದೀಮ ಸಂಸ್ಕೃತಿ ಪೂಜಿಸುತ್ತಾ ಬಂದಿದೆ. ಒಟ್ಟಾರೆ ಮಾತೆಯೇ ದೇವತೆಯಾಗಿ ಆರಾಧನೆಗೆ ಒಳಗಾದವಳು. ಹೆತ್ತು ಪೊರೆವ ಮಾತೆಯಾದ ಇವಳ ಸ್ಥಾನ ಕುಟುಂಬದಲ್ಲಿ ಸಹಜವಾಗಿಯೇ ಮಹತ್ವದ್ದಾಗಿರುತ್ತದೆ. ಆದೀಮ ಸಂಸ್ಕೃತಿಯಲ್ಲಿ ಪ್ರಧಾನ ಸ್ಥಾನದಲ್ಲಿದ್ದ ಹೆಣ್ಣು ಸಹಜವಾಗಿಯೇ ನಾಯಕಿಯ ಸ್ಥಾನವನ್ನು ಪಡೆದಿದ್ದಳು. ಭಾರತದ ಮಟ್ಟಿಗೆ ಹೇಳುವುದಾದರೆ, ಮೂಲತಃ ಸ್ತ್ರೀ ಪುರುಷ ಸಮಾನತೆ ಇದ್ದು, ಇದೊಂದು ಮೌಲ್ಯವಾಗಿತ್ತು. ಹಾಗಾಗಿಯೇ ಇಂದಿಗೂ ಇಲ್ಲಿ ಪ್ರತಿಯೊಂದು ಸಮುದಾಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸ್ತ್ರೀ ಅಂದರೆ ಅಮ್ಮನ ಆರಾಧನೆ ರೂಢಿಯಲ್ಲಿದೆ. ಆರ್ಯರು ಬಂದ ನಂತರ ಅವರ ಧರ್ಮ ಇಲ್ಲಿ ವಿಸ್ತರಿಸುತ್ತಲೇ ಅವರ ಪುರುಷ ಯಜಮಾನ್ಯ ಸಂಸ್ಕೃತಿ ಇಲ್ಲಿಯ ಸ್ಥಳೀಯ ಸಂಸ್ಕೃತಿಗಳಿಗೆ ಆದರ್ಶವಾಯಿತು. ಮಹಿಳೆಯ ಸ್ಥಾನ ಗೌಣವಾಯಿತು. ಆ ನಂತರದಲ್ಲಿ ವರ್ಣವ್ಯವಸ್ಥೆ ಜಾತಿವ್ಯವಸ್ಥೆಯಾಗಿ ಇದರ ಪರಿಣಾಮದಿಂದ ಅನೇಕರು ಶೋಷಿತರಾಗಿ ಸಾಮಾಜಿಕ ಅಪಮಾನಗಳನ್ನು ಅನುಭವಿಸುತ್ತಾ ಬದುಕಿದ್ದು, ಬದುಕುತ್ತಿರುವುದು ನಮಗೆಲ್ಲಾ ತಿಳಿದಿರುವ ಸಂಗತಿ. ಆದರೆ ಇದೇ ರೀತಿಯಲ್ಲಿಯೇ ಮಹಿಳೆ ಮನುಷ್ಯ ಜಾತಿಯಲ್ಲಿಯೇ ಪುರುಷನಿಗೆ ಸಮಾನ ಘಟಕ ಎಂದು ಪರಿಗಣಿಸಲ್ಪಡದೆ ವಸ್ತುವಿನಂತೆ ಇತಿಹಾಸದುದ್ದಕ್ಕೂ ಪರಿಗಣಿಸುತ್ತಾ ಬಂದಿರುವುದು ಅಷ್ಟೇ ನಿಜ. ಇಂತಹ ಸಂದರ್ಭದಲ್ಲಿ ಕಳೆದುಕೊಂಡ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಟ ಮಾಡಿದ ಅಷ್ಟೇ ಅಲ್ಲದೆ ವ್ಯವಸ್ಥೆಯೊಂದರಿಂದ ತಿರಸ್ಕೃತನಾದ ಪುರುಷನ ಪರವಾಗಿಯೂ ಹೋರಾಟ

ಮಾಡಿದ ಸ್ತ್ರೀ ಇಲ್ಲಿ ಸಹಜವಾಗಿಯೇ ನಾಯಕಿಯ ಸ್ಥಾನವನ್ನು ಪಡೆಯುತ್ತಾಳೆ. ಬುಡಕಟ್ಟು ಸಮುದಾಯದ ಮಹಿಳೆಯರು ಸಾಮಾನ್ಯವಾಗಿ ದುರ್ಬಲರಲ್ಲ. ಮ್ಯಾಸಬೇಡರ ಬುಡಕಟ್ಟಿನಲ್ಲಿಯೇ ಸಬಲತೆಯಿಂದ ಸಮುದಾಯವನ್ನು ರಕ್ಷಿಸಿದ ಮಹಿಳೆಯರಿರುವುದು ವಿಶೇಷವಾದುದಾಗಿದೆ.

"ಮಾತೃದೇವತಾ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು."[೧] ಭಯ, ಭಕ್ತಿ, ಭೀತಿಯಿಂದ ಹುತ್ತ, ವೃಕ್ಷ, ಶಿಲೆಗಳನ್ನು ಆರಾಧಿಸುತ್ತಿದ್ದ ಗ್ರಾಮೀಣರು ಒಂದು ಕಾಲಘಟ್ಟದಲ್ಲಿ ಅವುಗಳಲ್ಲಿ ಗ್ರಾಮದೇವತೆಗಳನ್ನು ಕಂಡುಕೊಂಡರು. ತಮ್ಮ ಜೀವನದ ಅನುಭವದಿಂದಲೇ ಹುಟ್ಟಿದ್ದ ಪುರಾಣ ಕಥೆಗಳನ್ನು ಅವುಗಳಿಗೆ ಜೋಡಿಸಿದರು. "ಅನೇಕ ಗ್ರಾಮದೇವತೆಗಳು ಅತಿಪ್ರಾಚೀನವಾದ ಭೂಮಿಪೂಜೆ ಅಥವಾ ಮಾತೃಪೂಜೆಯ ಕುರುಹುಗಳಿಲ್ಲದೆ ಬೇರೆಯಿಲ್ಲ. ಕೆಲವೊಮ್ಮೆ ಅವು ಫಲಶಕ್ತಿಯ ಸ್ಪಷ್ಟ ಪ್ರತೀಕಗಳಂತೆ ಕಾಣುತ್ತವೆ. ಅರಣ್ಯವಾಸಿಗಳಾದ ಬುಡಕಟ್ಟು ಜನಾಂಗಗಳು ಪೂಜಿಸುವ ಪ್ರೇತಾತ್ಮಗಳು ಗ್ರಾಮ ಸಮುದಾಯಗಳು ಬೆಳೆದ ಮೇಲೆ ಗ್ರಾಮದೇವತೆಗಳಾಗಿ ಮಾರ್ಪಾಡು ಹೊಂದಿರುವ ಸಾಧ್ಯತೆಗಳಿವೆ. ಅಥವಾ ಐತಿಹಾಸಿಕ ಕಾಲದಲ್ಲಿ ನಡೆದ ಕೆಲವು ಘಟನೆಗಳು ಹಾಗೂ ಆಕಸ್ಮಿಕಗಳು ಕೂಡ ಇಂತಹ ದೇವತೆಗಳನ್ನು ಸೃಷ್ಟಿಸಿರಬಹುದು. ಕೆಲವೊಮ್ಮೆ ಕಾಲು ಜಾರಿ ಬಿದ್ದು ಅಥವಾ ಸಿಡಿಲು ಬಡಿದು ಅಥವಾ ಇತರ ಆಕಸ್ಮಿಕಗಳಿಗೆ ಸಿಕ್ಕು ಅಪಮೃತ್ಯುವಿಗೆ ತುತ್ತಾಗಿರಬಹುದು. ಇನ್ನೂ ಹಲವಾರು ಬಗೆಗಳಲ್ಲಿ ನಿರಪರಾಧಿಗಳು ಸಾಯಬಹುದು. ಹೀಗೆ ಸತ್ತವರ ಪ್ರೇತಾತ್ಮಗಳು ಜೀವನದಲ್ಲಿ ಭಯ, ಭಕ್ತಿಯನ್ನು ಹುಟ್ಟಿಸಿ ಅವರಿಂದ ಪೂಜೆಯನ್ನು ಪಡೆಯಬಹುದು."[೨] ಇದರ ಜೊತೆಗೆ ಚಾರಿತ್ರಿಕ ವ್ಯಕ್ತಿಗಳು ಮೃತರಾದ ನಂತರ ಹಲವು ವರ್ಷಗಳು ಕಳೆದಂತೆ ಗ್ರಾಮದೇವತೆಗಳೆನಿಸಿಕೊಳ್ಳಬಹುದು. ಗ್ರಾಮದೇವತೆಗಳ ಉಗಮದ ಇತಿಹಾಸವನ್ನು ಸ್ಪಷ್ಟಪಡಿಸಬೇಕಾದರೆ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಪರಿಣಾಮಗಳನ್ನು ಪರಿಶೀಲಿಸುವುದು ಮುಖ್ಯವಾಗುತ್ತದೆ.

ದಾನಸಾಲಮ್ಮ

ಮಂದರಾಜನ ಮಗ ಅಂಬೋಜರಾಜ, ಇತನ ಮಗಳು ದಾನಸಾಲಮ್ಮ ಹುಟ್ಟಿದ ನಕ್ಷತ್ರ ಚನ್ನಾಗಿಲ್ಲ ಎಂದು ತಮ್ಮನಾದ ಕಂಬೋರಾಜನಿಗೆ ಆಕೆಯನ್ನು ದಾನಕೊಡುತ್ತಾನೆ. ಪ್ರಾಪ್ತ ವಯಸ್ಕಳಾದಾಗ ತನ್ನ ತಂದೆ ಸೂಚಿಸಿದ ವರನನ್ನು ವಿವಾಹವಾಗಲು ಇಚ್ಚಿಸದೆ ಹಟ್ಟಿಯಿಂದ ಹೊರಕ್ಕೆ ಹಾಕಲ್ಪಡುತ್ತಾಳೆ. ಆದರೂ ಸೂರ್ಯನ ಮೇಲಿನ ಮೋಹವನ್ನು ಬಿಡದೆ ಧ್ಯಾನ ಮಾಡುತ್ತಾ ಕಾಲ ಕಳೆಯಲು ಶಿವ-ಪಾರ್ವತಿಯರಿಂದ ಅನುಗ್ರಹಿತಳಾಗುತ್ತಾಳೆ. ಶಿವನ ಸೂರ್ಯನಾರಾಯಣನ ಪ್ರತಿರೂಪವಾದ ದೈವ ಪ್ರೇರಣೆಯಿಂದ ಜನಿಸಿದ ಸಂಜು ಶಿಖಾನಾಯಕ ಈತನಿಗೆ ಸೆಟ್ಲು ಪಲ್ಲಪ್ಪ ರಾಜ, ಸುಕ್ಕಲು ಮಲ್ಲನಾಯಕ ಎಂದೂ ಕರೆಯುತ್ತಾರೆ. ಇವರಿಗೆ ಬಹುಕಾಲ ಮಕ್ಕಳಾಗದೇ ಇದ್ದಾಗ ಒಮ್ಮೆ ನಾರದ ತೋರಿಸಿದ ಮರದ ಹಣ್ಣನ್ನು ಈ ದಂಪತಿಗಳು ತಿನ್ನಲಾಗಿ ಇದರ ಫಲವಾಗಿ ಹೆಣ್ಣು ಮಗುವೊಂದನ್ನು ಪಡೆಯುತ್ತಾರೆ. ಈಕೆಯನ್ನು ಚುಂಚಲಕ್ಷ್ಮಿ

ಎಂದು ಕರೆಯುತ್ತಾರೆ. ತಂದೆ ಚಂಚರಿಂದ ಪೋಷಿಸಲ್ಪಟ್ಟವನಾದ್ದರಿಂದ ಈತನನ್ನು ಸಂಚು ಸಿಕಾನಾಯಕ ಎಂದು ಕರೆಯಲಾಗುತ್ತಿದ್ದು, ಈತನ ಮಗಳಾದ ಕಾರಣಕ್ಕಾಗಿ ಚುಂಚಲಕ್ಷ್ಮಿ ಎಂದು ಕರೆಯಲ್ಪಟ್ಟಳು. ತಂದೆ ತಾಯಿ ಈಕೆಯನ್ನು ಪ್ರೀತಿಯಿಂದ ಸಾಕುತ್ತಾರೆ. ಕಾಡಿನಲ್ಲಿ ದನಗಳ ರೊಪ್ಪದಲ್ಲಿ ಬೆಳೆಯುತ್ತಿದ್ದ ಇವಳು ಸಹಜವಾಗಿ ಬಿಲ್ಲುಬಾಣಗಳನ್ನು ಬೆಳೆಸುವುದರ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡಳು. ಅಪ್ರತಿಮ ಬೇಟೆಗಾರ್ತಿಯಾದಳು. ಪಶುಪಾಲಕರೊಂದಿಗೆ ಜೊತೆಗೂಡಿ ಕಾಡಿನಲ್ಲಿ ಸಂಚರಿಸುತ್ತಾ ಗೆಡ್ಡೆ-ಗೆಣಸು ಸಂಗ್ರಹಿಸುತ್ತಾ ಬೇಟೆಯಾಡುತ್ತಿದ್ದಳು.

ಚಿಗುರೆಲೆಗಳ ಸೀರೆ ಉಟ್ಟು, ಎಲೆ, ಬೇರಿನಿಂದ ಮಾಡಿದ ರವಿಕೆ ಉಟ್ಟು, ಗುಲಗಂಜಿ ಸರವನ್ನು ಕೊರಳ್ಳಿ ಧರಿಸಿ ಬಣ್ಣದ ಗರಿಯನ್ನು ಮಡಿಲಲ್ಲಿ ಸಿಕ್ಕಿಸಿಕೊಂಡು ಬಿಲ್ಲು ಬಾಣಗಳನ್ನು ಕೈಯ್ಯಲ್ಲಿ ಹಿಡಿದು ಅರಣ್ಯದಲ್ಲಿ ಇವಳು ಸಂಚರಿಸುತ್ತಿರುವಾಗ ಉಗ್ರನರಸಿಂಹನು ಈಕೆಯ ರೂಪ ಲಾವಣ್ಯವನ್ನು ಕಂಡು ಮೋಹಿಸಿ ಆಕೆಯ ಬಳಿ ಹೋಗಲು, ಹೆದರಿ ಓಡಿದ ಅವಳು ಗವಿಯೊಂದರಲ್ಲಿ ಸೇರಿಕೊಳ್ಳುತ್ತಾಳೆ. ಆತ ನರಸಿಂಹ ಎಂದು ಆಕೆಗೆ ತಿಳಿಯದು. ಆದರೆ ಆಕೆ ನರಸಿಂಹನ ಧ್ಯಾನ ಮಾಡುತ್ತಾ ಕಾಲ ಕಳೆಯುತ್ತಿರಲು ತನ್ನ ನಿಜ ರೂಪದಲ್ಲಿ ಪ್ರತ್ಯಕ್ಷವಾದ ನರಸಿಂಹ ತನ್ನ ದಶಾವತಾರಗಳನ್ನು ತೋರಿಸುತ್ತಾನೆ. ಸಂತೋಷದಿಂದ ಆತನನ್ನು ಮೆಚ್ಚಿ ವರಿಸುತ್ತಾಳೆ. ದೇವಾನುದೇವತೆಗಳೆಲ್ಲಾ ಇವರಿಗೆ ಹರಸುತ್ತಾರೆ. ಸಂತೋಷದಿಂದ ಆತನನ್ನು ಮೆಚ್ಚಿ ಅಕೆ ವರಿಸುತ್ತಾಳೆ. ದೇವಾನುದೇವತೆಗಳೆಲ್ಲಾ ಇವರನ್ನು ಹರಸುತ್ತಾರೆ. ಇತ್ತ ಸಂಚು ಶಿಖಾನಾಯಕ ತನ್ನ ಮಗಳನ್ನು ಅಡವಿ, ಬೆಟ್ಟ, ಗುಹೆಗಳಲ್ಲಿ ಹುಡುಕುತ್ತಾನೆ.

ಒಂದು ಗುಹೆಯಲ್ಲಿ ಪಗಡೆಯಾಡುತ್ತಾ ಪರಸ್ಪರ ಚಕ್ಕಂದವಾಡುತ್ತಾ ಇವರಿಬ್ಬರನ್ನೂ ನೋಡುತ್ತಾನೆ. ಕೋಪದಿಂದ ಹಿಂತಿರುಗಿ ಬಂದು ತನ್ನ ಹೆಂಡತಿಯಾದ ದಾನಸಾಲಿಗೆ ಈ ವಿಷಯ ತಿಳಿಸುತ್ತಾನೆ. ಇಬ್ಬರೂ ಸೇರಿ ಮಂದಗಿರಿಪುರಕ್ಕೆ ಹೋಗಿ ಕಾಮಗೇತಿ ಭೂಪಾಲನಿಗೆ ಮೊರೆಯಿಡುತ್ತಾರೆ. ಈತನನ್ನು ಸಹಸ್ರ ದಂಡು ದಳದೊಂದಿಗೆ ಬಂದು ಗೋಕರ್ಣ ಪರ್ವತವನ್ನು ಮುತ್ತಿಗೆ ಹಾಕುತ್ತಾನೆ. ಗವಿಯೊಳಗೆ ನರಸಿಂಹ ಮತ್ತು ಚುಂಚಲಕ್ಷ್ಮಿ ಇರುತ್ತಾರೆ. ತಂದೆಯಾದ ಮಲ್ಲನಾಯಕ ಚಿಪ್ಪುಗೊಡಲಿ ಹಿಡಿದು ಎಲ್ಲರಿಗಿಂತ ಮೊದಲು ಹೋಗಿ ಗವಿಯಲ್ಲಿದ್ದ ನರಸಿಂಹನನ್ನು ಕೊಲ್ಲಲು ಮುನ್ನುಗ್ಗುತ್ತಾನೆ. ಆಗ ಭಗವಂತನಾದ ನರಸಿಂಹ ಈ ಕಾಮಗೇತಿಯ ಸಹಸ್ರ ಸೈನ್ಯದ ಮೇಲೆ ತೀರ್ಥವನ್ನು ಪ್ರೋಕ್ಷಿಸುತ್ತಾನೆ. ಕೋಟಿ ಸೈನ್ಯವೆಲ್ಲವೂ ಆ ಕ್ಷಣದಲ್ಲಿಯೇ ನಿಲುವುಗಲ್ಲುಗಳಾಗುತ್ತವೆ. ಸಂಚು ಶಿಖಾನಾಯಕ ಘೋರವಾದ ದುಃಖ ಮಾಡುತ್ತಾ ಈತ ಯಾರು ಎಂದು ಮಗಳನ್ನು ಕೇಳುತ್ತಾನೆ. ಆತನು ನಮ್ಮ ಹಾಗೆ ಮಾನವರಲ್ಲ, ಪರಮಾತ್ಮ, ಶ್ರೀಕೃಷ್ಣ ಭಗವಂತನೇ ಈತ. ನನ್ನ ದಂಡುದಳವನ್ನು ಬದುಕಿಸಿಕೊಟ್ಟರೆ ಮಗಳಾದ ಚುಂಚಲಕ್ಷ್ಮಿಯನ್ನು ಕೊಟ್ಟು ಮದುವೆ ಮಾಡುತ್ತೇನೆ. ಎಂದು ಹರಕೆ ಮಾಡಿಕೊಳ್ಳು ಎನ್ನುತ್ತಾಳೆ. ಆಗ ಪರಮಾತ್ಮನಲ್ಲಿ ನೀನು ನಮಗೆ ಪ್ರಾಣ ದಾನ ಮಾಡಿದರೆ ಒಂದುಕೊಂಬು ಬಲ್ಲಾವಿನ ಹಾಲು ಕರೆದು, ಕಾಯಿಸಿ, ಹೆಪ್ಪುಹಾಕಿ, ಮಜ್ಜಿಗೆ ಮಾಡಿ ಬೆಣ್ಣೆ ತೆಗೆದು

ನೂರಾ ಒಂದು ದೀಪ ಹಚ್ಚಿ ಬೆತ್ತಲೆ ಬಸವಂತ ಆಡಿ ಚುಕ್ಕೆಗಳೆಲ್ಲಾ ಒಂದೇಕಡೆ ಸೇರುವ ವೇಳೆಗೆ ನಮಸ್ಕರಿಸುತ್ತೇವೆ. ಎಂದು ಹರಕೆ ಮಾಡಿಕೊಳ್ಳುತ್ತಾನೆ. ನಿಜರೂಪ ತಳೆದ ನರಸಿಂಹ ತೀರ್ಥವನ್ನು ಹಾಕಿ ಸೈನ್ಯ ಮತ್ತೆ ಚೈತನ್ಯ ಪಡೆಯುವಂತೆ ಮಾಡುತ್ತಾನೆ. ನರಸಿಂಹನನ್ನು ವರಿಸಿದ ಚುಂಚಲಕ್ಷ್ಮಿಯು ಸುಖದಿಂದ ಕಾಲಕಳೆಯುತ್ತಾಳೆ. ಮುಂದೆ ಕಾಲಾಂತರದಲ್ಲಿ ಗಂಡುಶಿಶುಗಳನ್ನು ಪಡೆದ ದಾನಸಾಲಿ ಗಂಡನ ಅಣತಿಯ ಮೇರೆಗೆ ಮಕ್ಕಳನ್ನು ಬಿಟ್ಟು ಗಂಡನೊಂದಿಗೆ ಹೋಗುತ್ತಾಳೆ. ಅನಾಥರಾದ ಈ ಮಕ್ಕಳನ್ನು ತಾಯಿ ತಂದೆಯರಂತೆ ಪೋಷಿಸಿ, ತರಬೇತುಗೊಳಿಸಿದ ಈ ಚುಂಚಲಕ್ಷ್ಮಿ ಮುಂದೆ ಅವರು ತಂದೆಯ ಬಳಿ ಹೋಗಿ ಹೋರಾಟ ಮಾಡಿ ಸಂಪತ್ತನ್ನು ಅದರೊಂದಿಗೆ ಅಸ್ತಿತ್ವವನ್ನೂ ಸಾಮಾಜಿಕ ಮನ್ನಣೆಯನ್ನೂ ಪಡೆಯುವಂತೆ ಮಾಡುತ್ತಾಳೆ. ಈಕೆಯೆನಗೆ ಗೌಡಗೆರೆಯಲ್ಲಿ ಲಕ್ಷ್ಮೀ ಎಂದೂ ಕಂಪಳೋಬಯ್ಯ ಅಂದರೆ ಕಂಪಳರಂಗನ ದೇವಸ್ಥಾನದ ಪಕ್ಕದಲ್ಲಿ ಭಾಗ್ಯದ ಲಕ್ಷ್ಮಮ್ಮನೆಂದು ಪೂಜಿಸುವ ಪರಿಪಾಠವಿದೆ. ಆಕೆಯನ್ನೇ 'ಪದ್ದಕ್ಕ ರಾಯಮ್ಮ' ಅಂದರೆ ಐದು ಮಂದಿ ಸಹೋದರರಿಗೆ ಹಿರಿಯಕ್ಕ ಎಂದು ಕರೆಯುತ್ತಾರೆ.

ದಾನಸಾಲಮ್ಮ ಮಂದಲರಾಜನ ಪರಂಪರೆಯಲ್ಲಿ ಬರುವ ಒಬ್ಬಳೇ ಮಗಳು. ತಂದೆ ತೋರಿಸಿದ ವರನನ್ನು ನಿರಾಕರಿಸಿದವಳು. ಅಲೌಖಿಕ ಶಕ್ತಿಯನ್ನು ಮೆಚ್ಚಿ ಆ ವರದಿಂದ ಮಕ್ಕಳನ್ನು ಪಡೆದವಳು ಎಂಬುದಾಗಿದೆ. ಇವಳಿಂದಲೇ ಪಶುಸಂಪತ್ತು ಇವಳ ಮಕ್ಕಳಿಗೆ ಬಂದಿತು ಎಂಬುದಾಗಿದೆ. ದಾನ ಮಾಡಿಬಿಡಿ ಎಂದು ಪರುರೋಹಿತರು ಸೂಚಿಸಲು, "ಆತ ತನ್ನ ತಮ್ಮನಿಗೆ ದಾನ ಮಾಡಿದನಂತೆ. ಹಾಗಾಗಿ ಇವಳಿಗೆ 'ದಾನಸಾಲಿ' ಎಂಬ ಹೆಸರು ಬಂದಿತು ಎನ್ನುತ್ತಾರೆ. ಬುಡಕಟ್ಟು ಸಮುದಾಯವೊಂದರಲ್ಲಿ ಮಗು ಜನಿಸಿದಾಗ ನಕ್ಷತ್ರ, ತಿಥಿ ಎಂದು ಪಂಚಾಗ ತೆರೆಸಿ ನೋಡುವ ಪದ್ದತಿ ಇತ್ತೇ ಎಂಬುದು ಇಲ್ಲಿ ಪ್ರಶ್ನೆಯಾಗುತ್ತದೆ. ಪ್ರಾಯಶಃ ಇದು ವೈದಿಕ ಮೂಲದ ಜೋತಿಷ್ಯವಾಗಿದೆ. ಇದಕ್ಕಿಂತ ಭಿನ್ನವಾದ ಗಿರಿಜನರ ರೂಢಿಗಳೂ ಇರಬಹುದು. ಮತ್ತೊಂದು ಮೂಲದ ಪ್ರಕಾರ ಮುಂದೆ ಈಕೆ ತಾನು ಬೆಳೆದ ಕುಂಬಳಕಾಯಿಯನ್ನು ಹಲವರಿಗೆ ದಾನ ಮಾಡಿದ್ದರಿಂದ ಈ ಹೆಸರು ಬಂದಿರಬಹುದು. ಎಂಬುದಾಗಿದೆ. ಮತ್ತೊಂದು ಮೂಲದ ಪ್ರಕಾರ ದೇವಲೋಕದ ಅಪ್ಸರೆಯರು ಭೂಲೋಕಕ್ಕೆ ಬಂದು ಸರೋವರದಲ್ಲಿ ಸ್ನಾನ ಮಾಡಿ ವಿಹರಿಸಿ ಆಕಾಶಕ್ಕೆ ಮರಳಿ ಹೋಗುವಾಗ ಪಿಂಡ ಜಾರಿ ಆ ಸರೋವರದಲ್ಲಿ ಬೆಸ್ತರವನು ಮೀನಿಗೆ ಬಲೆ ಹಾಕಿದ್ದು, ಅದರಲ್ಲಿ ಬಿದ್ದು ಆತ ಅದನ್ನು ತೆಗೆದು ನೋಡಲು, ಒಂದು ಹೆಣ್ಣು ಶಿಶುವಾಗಿತ್ತು. ತನ್ನ ಪ್ರಾಂತ್ಯವನ್ನು ಆಳುತ್ತಿದ್ದ ಮಂದಲ ಮಹಾದೇವರಾಯ ಪ್ರಬಲಶಾಲಿಯಾಗಿದ್ದರಿಂದ ಆ ಮಗುವನ್ನು ಆತನಿಗೆ ಕೊಟ್ಟನು. ಹೀಗೆ ಬೆಸ್ತರವನಿಂದ ದಾನ ಪಡೆದ ಮಗು ಎಂಬ ಕಾರಣಕ್ಕಾಗಿ ಇವಳಿಗೆ ಈ ಹೆಸರು ಬಂದಿತು ಎಂಬುದಾಗಿದೆ. ಹೀಗೆ ಆಕೆಯ ಹೆಸರಿನ ಸುತ್ತ ವಿಶೇಷವಾದ ವಿವರಗಳು ದೊರಕುತ್ತವೆ. ಬಹುಶಃ 'ಧನಸ್ಸು' ಎಂಬ ಮೂಲದಿಂದ ಈ ಹೆಸರನ್ನು ನಿಷ್ಪನ್ನ ಮಾಡಹೊರಟರೆ ಧನಸ್ಸು ಶಾಲಿ ಅಂದರೆ ಧನಸ್ಸನ್ನು ಧರಿಸಿದವಳು ಎಂದು ಊಹೆ ಮಾಡಬಹುದೆನಿಸುತ್ತದೆ. ಏಕೆಂದರೆ ಕಾಡು ಮೇಡುಗಳಲ್ಲಿ ಅಲೆಯುತ್ತಿದ್ದ ಬೇಡತಿಯರ ಸಾಮಾನ್ಯ ಲಕ್ಷಣವಿದು. ಧನಸ್ಸು ಶಾಲಿ

ದಾನಸಾಲಿ ಆಗಿರಲೂ ಸಾಧ್ಯವಿದೆ. "Dana, feed fordomestic Animals. ಸಾಕುಪ್ರಾಣಿಗಳಗೆ ಆಹಾರವನ್ನು ಕೊಡುತ್ತಿದ್ದವರು ಎಂಬ ಅರ್ಥ ತೆಲುಗಿನ ಪದಕೋಶದಲ್ಲಿದೆ."[೩] ಈ ಹಿನ್ನೆಲೆಯಿಂದಲೂ ಈಕೆಯ ಹೆಸರನ್ನು ಅರ್ಥೈಸಬಹುದಾಗಿದೆ. ಇದೇ ಸರಿಯಾದ ವಿವರಣೆ. ಮುಂದೆ ತಂದೆ–ತಾಯಿಯಿಂದ ದೂರವಾದ ನತದೃಷ್ಟಳೀಕೆ ಎಂಬುದಂತೂ ಸತ್ಯ. "ಸಾಕಿದ ತಂದೆಗೆ ಮತ್ತೊಬ್ಬ ಮಗನಿರುತ್ತಾನೆ. ಆತನ ಹೆಸರು ಕರಿಬೊಮ್ಮಂತರಾಜು. ಇವನನ್ನೇ ಮದುವೆ ಮಾಡಿಕೊಳ್ಳಲು ತಂದೆ ಈಕೆಗೆ ಸೂಚಿಸುತ್ತಾನೆ."[೪] ಇಷ್ಟಪಡದ ಈಕೆ ತನ್ನ ಹಟ್ಟಿಯಿಂದ ಹೊರಬೀಳುತ್ತಾಳೆ. ಈಕೆ ವರಿಸಿದ್ದು ಅನಾಥರಾದ ವಂಶದಿಂದ ಪೋಷಿಸಲ್ಪಟ್ಟ ಮಲ್ಲನಾಯಕನನ್ನು ಆದರೆ ಮಕ್ಕಳನ್ನು ಪಡೆದದ್ದು ಮಾತ್ರ ಸೂರ್ಯನಿಂದ ಇಲ್ಲಿ ಮಹಾಭಾರತದ ಕುಂತಿಯು ವಿವಾಹ ಪೂರ್ವದಲ್ಲಿಯೇ ಸೂರ್ಯನನ್ನು ಇಷ್ಟಪಟ್ಟು ಅವನಿಂದಲೇ ಕರ್ಣನನ್ನು ಪಡೆದುದನ್ನು ನೆನಪು ಮಾಡಿಕೊಳ್ಳಬಹುದು.

ಕೃಷ್ಣನ ಸೋದರತ್ತೆಯಾದ ಕುಂತಿಯು ಪಶುಪಾಲಕರ ವಂಶದವಳು ಇರಬಹುದು. ಜಂಗಮಕೊಟ್ಟ ಕುಂಬಳ ಬೀಜದಿಂದ ಬೆಳೆದ ಕುಂಬಳದ ಹಣ್ಣಿನಿಂದ ಹೀಗೆಲ್ಲಾ ವಿವರಗಳು ಸಿಗುತ್ತವೆ. ಆದಿವಾಸಿ ಸಮುದಾಯಗಳಲ್ಲಿ ಮೂಲದಲ್ಲಿ ಬಹುಶಃ ಸಾಮೂಹಿಕ ಜೀವನ ಪದ್ಧತಿ ಇತ್ತು. ಮಕ್ಕಳು ಸಮುದಾಯದಲ್ಲಿ ಎಲ್ಲಾ ಸ್ತ್ರೀಯರ ಮಕ್ಕಳೆಂದು ಪರಿಗಣಿಸಲ್ಪಡುತ್ತಿದ್ದರು. ಕ್ರಮೇಣ ನಿರ್ದಿಷ್ಟ ಹೆಂಗಸಿನ ಮಗು ಎಂದು ಗುರುತಿಸುವ ವ್ಯವಸ್ಥೆ ಪ್ರಾರಂಭಗೊಂಡಿತು. ತಂದೆಯ ಸ್ಥಾನ ತುಂಬಾ ಗೌಣವಾಗಿತ್ತು. ಮಾತೆಯ ಮೂಲಕ ಮಕ್ಕಳನ್ನು ಗುರುತಿಸುವಲ್ಲಿ ಮಾತೃಪ್ರಧಾನತೆ ನಿಚ್ಚಳವಾಗಿ ಕಂಡುಬರುತ್ತದೆ. ಪ್ರಕೃತಿಯಲ್ಲಿ ತಂದೆಯ ಸ್ಥಾನಕ್ಕಿಂತ ತಾಯಿಯ ಸ್ಥಾನ ಹೆಚ್ಚು ಖಚಿತವಾದದ್ದು. ಮೊದಮೊದಲು ತಾಯಿಯ ಹೆಸರಿನ ಮೂಲಕ ಮಕ್ಕಳನ್ನು ಗುರುತಿಸುತ್ತಿದ್ದುದೂ ಉಂಟು. "ಅದಿತಿಯ ಮಗ ಆದಿತ್ಯ, ಕೃತ್ತಿಕೆಯ ಮಗ ಕಾರ್ತಿಕೇಯ, ಗೌತಮ ಪುತ್ರ ಶಾತಕರ್ಣಿ ಇತ್ಯಾದಿ."[೫] ಮ್ಯಾಸಬೇಡರಲ್ಲಿಯೂ ಕೆಲವು ಬೆಡಗುಗಳು ಮಾತೃಮೂಲೀಯ ವ್ಯವಸ್ಥೆಯು ತಮ್ಮಲ್ಲಿದ್ದುದನ್ನು ಸೂಚಿಸುತ್ತವೆ. ನಲಟಬ್ಬನವರು, ಆರುವಟ್ಟಿನವರು, ಅಬ್ಬನದು, ಪಾಲಬ್ಬನಡು ಇತ್ಯಾದಿ 'ಅಬ್ಬ' ಎಂಬ ತೆಲುಗು ಪದ ಕನ್ನಡದಲ್ಲಿ ಅಮ್ಮ, ಅಜ್ಜಿ ಎಂಬರ್ಥದಲ್ಲಿ ಬಳಕೆಯಾಗುತ್ತಿದೆ. 'ದಾನಸಾಲಿಯ ಕಂದಲು' ಎಂದು ಹೇಳುವ ಕ್ರಮ ರೂಢಿಯಲ್ಲಿದೆಯೇ ಹೊರತಾಗಿ ಶುಕ್ಲಮಲ್ಲನಾಯಕನ ಮಕ್ಕಳು ಎನ್ನುವುದು ಅಪರೂಪವೇ. ಹೀಗಿದ್ದ ವ್ಯವಸ್ಥೆಯಿಂದ ಪಿತೃಪ್ರಧಾನ್ಯತೆಯ ಕಡೆ ಪಲ್ಲಟವಾಗುತ್ತಿದ್ದ ಸಂದರ್ಭವನ್ನು ನಾವು ದಾನಸಾಲಿಯ ಬದುಕಿನ ಮೂಲಕ ಕಾಣಬಹುದು. ಆದಿಮ ಸಂಸ್ಕೃತಿಯಲ್ಲಿ ರಕ್ತಶುದ್ಧಿಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಮತ್ತು ಆಸ್ತಿ ಪಾಲಾಗದಿರಲಿ ಎಂದೂ ಅಕ್ಕ ತಮ್ಮ, ಅಣ್ಣ ತಂಗಿ ಮದುವೆಯಾಗುವ ಪದ್ಧತಿಗಳಿದ್ದವು. ಬಹುಶಃ ಈ ಬಗೆಯ ವಿವಾಹಕ್ಕೆ ದಾನಸಾಲಿಯ ಮನಸ್ಸು ಒಪ್ಪುವುದಿಲ್ಲ. ಸೂರ್ಯನ ಮೇಲೆ ವ್ಯಾಮೋಹವನ್ನು ಬೆಳೆಸಿಕೊಂಡಿದ್ದ ಈಕೆ ಸೂರ್ಯನನ್ನೇ ವರಿಸುತ್ತೇನೆ ಎನ್ನುತ್ತಾಳೆ. ಸೂರ್ಯನ ಜಪ–ತಪದಲ್ಲಿದ್ದ ಈಕೆ ಪಾರ್ವತಿ ಪರಮೇಶ್ವರರಿಂದ ಅನುಗ್ರಹಿಸಲ್ಪಟ್ಟ ಒಂಟಿಕೊಂಬು ಬಲ್ಲಾವಿನ ಗೊರಸಿನಲ್ಲಿ ಜನಿಸಿದ 'ಚೆಟ್ಲು ಪಟ್ಲಪು' ರಾಜನನ್ನು ವರಿಸುತ್ತಾಳೆ. ಗಿಡಗಂಟೆಗಳ ರಾಜನಾದ ಇವನನ್ನು ಅಡವಿ ಚಂಡರು ಸಾಕಿದ

ಕಾರಣ 'ಸಂಚು ಚಿಕಾನಾಯಕ' ಎಂದೂ, ಶ್ರೀಶೈಲ ಮಲ್ಲಿಕಾರ್ಜುನನ ಭಕ್ತನಾದ್ದರಿಂದ ಸುಕ್ಕಲು ಮಲ್ಲಿನಾಯಕ ಎಂದೂ ಈತನಿಗೆ ಹೆಸರು. ಬಹುಕಾಲದ ನಂತರ ಈಕೆ ಮಕ್ಕಳನ್ನು ಪಡೆದ ರೀತಿಯೂ ನಿಗೂಢವೇ.

ಹಂಬಲಿಸಿ ಮಕ್ಕಳನ್ನು ಪಡೆದ ತಾಯಿ ತನ್ನ ಆ ಮಕ್ಕಳಿಗೇ ಕದ್ದು ಹಾಲುಣಿಸುವ ಅನಿವಾರ್ಯತೆ ಇಲ್ಲಿ ಆರಂಭಗೊಂಡ ಸ್ತ್ರೀ ಶೋಷಣೆಯನ್ನು ಸಂಕೇತಿಸುತ್ತದೆ. ಮಾನವೀಯ ನೆಲೆಯಿಂದ ಒಬ್ಬ ತಾಯಿಯನ್ನು ಗ್ರಹಿಸದ ಪುರುಷ ಪ್ರಧಾನ ಸಮಾಜದ ದೃಷ್ಟಿಕೋನಕ್ಕೆ ಇದು ಪುರಾವೆಯಾಗುತ್ತದೆ. ಆಕೆಯ ಮಕ್ಕಳನ್ನು ತನ್ನ ಮಕ್ಕಳು ಎಂದು ಒಪ್ಪಿಕೊಳ್ಳದೆ ಆಕೆಯ ಗಂಡ ನೀನು ನಿನ್ನ ಮಕ್ಕಳ ಬಳಿ ಹೋದರೆ ಸತ್ಯಭಂಗವಾಗುತ್ತದೆ. ನೀನು ನನ್ನ ಹೆಂಡತಿ ಎಂಬ ಸತ್ಯವನ್ನು ಬಿಟ್ಟಂತಯೇ ಎನ್ನುತ್ತಾರೆ. ತಾನು ಅಲ್ಲಿರುವುದೇ ಬೇಡವೆಂದು ಚಂದ್ರಗಿರಿ ಬೂದಾಳು ಕೋಟೆಗೆ ಹೊರಡುತ್ತಾನೆ. ದಾನಸಾಲಿಯೂ ಈತನನ್ನು ಅನುಸರಿಸಿ ಹೊರಡುವಂತೆ ಮಾಡುತ್ತಾನೆ. ಇಲ್ಲಿ ದಾನಸಾಲಿಯ ಮುಂದೆ ಎರಡು ಆಯ್ಕೆಗಳಿವೆ. ಒಂದು ಮಕ್ಕಳು, ಮತ್ತೊಂದು ಗಂಡ ತಾಯ್ತನಕ್ಕಾಗಿ ಅಷ್ಟೊಂದು ಹಂಬಲಿಸಿದ ಜೀವ ಅಷ್ಟು ಸುಲಭವಾಗಿ ಮಕ್ಕಳನ್ನು ಬಿಟ್ಟು ಹೊರಟದ್ದೇಕೆ, ಅದೇಗೆ ಸಾಧ್ಯವಾಯಿತು. ಎಂಬ ಪ್ರಶ್ನೆ ಇಲ್ಲಿ ಮೂಡುತ್ತದೆ. ಅದಕ್ಕೆ ಉತ್ತರವನ್ನು ಬಹುಶಃ ನಾವು ಇಲ್ಲಿ ಕಂಡು ಕೊಳ್ಳಬಹುದೇನೋ ಎಂಬ ಆಶಯ ಆಕೆಯ ಮನದಲ್ಲಿರಬಹುದು.

ಬಹುಶಃ ಈ ಕಾರಣಕ್ಕಾಗಿಯೇ ದಾನಸಾಲಿಯಮ್ಮ ಈಗಾಗಲೇ ತನ್ನ ಪುಟ್ಟ ಮಕ್ಕಳನ್ನು ಆರೈಕೆ ಮಾಡುವಷ್ಟು ಸ್ವಲ್ಪ ಹಿರಿಯವಳಾಗಿದ್ದ ಮಗಳು ಹೇಗೋ ಪೋಷಿಸಬಲ್ಲಳು. ಗಂಡನ ಜೊತೆ ನಡೆದರೆ ಮುಂದೆ ಎಂದಾದರೂ ಒಂದು ದಿನ ಅವನ ಮನಸ್ಸು ಬದಲಾಗಬಹುದೇನೋ ಎಂಬ ಆಸೆಯೇ ಕಾರಣವಾಗಿ ಆತನ ಹಿಂದೆ ಹೆಜ್ಜೆ ಹಾಕಿರುವ ಸಾಧ್ಯತೆಗಳೂ ಇವೆ. ನಾವು ಹೀಗೆ ಭಾವಿಸಿಕೊಳ್ಳದಿದ್ದರೆ ದಾನಸಾಲಿಯಮ್ಮ ತನ್ನ ಒಡಲ ಕಳವಳ ನೀಗಿಸಿಕೊಳ್ಳಲು ತಾಯ್ತನದ ಅಭೀಪ್ಸೆಯನ್ನು ಪೂರೈಸಿಕೊಳ್ಳಲು ಮಕ್ಕಳನ್ನು ಪಡೆದದ್ದೇ ಅರ್ಥಹೀನವೆನಿಸುತ್ತದೆ ಮಕ್ಕಳನ್ನು ಪಡೆದದ್ದೇ ನಿರಾಕರಿಸಿ ಪತಿಯನ್ನು ಆರಿಸಿಕೊಂಡಳು ಎಂದುಕೊಂಡರೆ ಪಡೆದ ತಾಯ್ತನವನ್ನು ಆಕೆ ನಿರಾಕರಿಸಿದಂತಾಗುತ್ತದೆ. ತಾಯ್ತನ ಒಂದು ಚಿರಂತನ ಸತ್ಯ. ತಾಯಿ ಮತ್ತು ಮಕ್ಕಳ ಮಧ್ಯೆ ಒಂದು ಆಳವಾದ ಭಾವನಾತ್ಮಕ ಸಂಬಂಧವಿರುತ್ತದೆ. ಮಕ್ಕಳಿಲ್ಲದ ತನ್ನ ಬದುಕು 'ಬಾಳೆಲೆ'ಯ ಹಾಸ್ಯುಂಡು ಬೀಸಿ ಒಗೆದ್ಹಾಂಗ' ಎಂದು ವ್ಯಥೆ ಪಡುತ್ತಾ ಹಂಗಿನ ಬಾನ ಉಣ್ಣುವ ಸ್ಥಿತಿಯಂದು ಕೊರಗುತ್ತಾಳೆ. ಹೆಣ್ಣು ಹೀಗಿರುವಾಗ ಇಂಥಹ ವ್ಯಥೆಗೆ ಕಾರಣವಾಗಿರುವ ಬಂಜೆತನದ ಅಭಿಶಪದಿಂದ ಪಾರಾಗಬೇಕೆಂಬ ಬಯಕೆಯೊಂದಿಗೆ ಆ ಮಕ್ಕಳನ್ನು ರಮಿಸಿ ಲಾಲಿಸುವ ಅನುಭವವನ್ನು ಹೊಂದುವುದೂ ಆಕೆಯ ಆಸೆಯಾಗಿದ್ದು, ಇದೇ ದಾನಸಾಲಿಯೂ ಕೂಡ ಮಕ್ಕಳನ್ನು ಪಡೆಯುವಿಕೆಯ ಹಿಂದಿರಬಹುದಾದ ಒತ್ತಡ, ಅವಳು ಕದ್ದುಮುಚ್ಚಿ ಮಕ್ಕಳಿಗೆ ಹಾಲುಣಿಸುತ್ತಿದ್ದಳೆಂಬುದೇ ಅವಳಿಗೆ ಮಕ್ಕಳ ಮೇಲಿರುವ ಮಮತೆಗೆ ಸಾಕ್ಷಿಯಾಗಿರುತ್ತದೆ. ಮಲೆ ಮಹದೇಶ್ವರ ಕಾವ್ಯದಲ್ಲಿ ಬರುವ ಸಂಕಮ್ಮ ಬೇಟೆಯಿಂದ

ತನ್ನ ಗಂಡ ಮರಳಿ ಬಂದಾಗ ದಿಟ್ಟತನದಿಂದ ಆತನನ್ನು ಎದುರಿಸುತ್ತಾಳೆ. ಆದರೆ ಆ ಎದೆಗಾರಿಕೆ ಇಲ್ಲಿ ದಾನಸಾಲಿಗೆ ಇಲ್ಲ. ಇಲ್ಲದಿರಲು ಕಾರಣವಾದ ಸಂದರ್ಭ, ಆ ಪರಿಸರ ಇದಕ್ಕೆ ಕಾರಣ. ಶಿಷ್ಟ ಪುರಾಣಗಳ ಸ್ತ್ರೀ ಮಾದರಿಯಂತೆ ತಾಳ್ಮೆ, ಸಹಿಷ್ಣುತೆ, ವಿಧೇಯತೆಯನ್ನು ಮೈಗೂಡಿಸಿಕೊಂಡಿರುವಳೇ ವಿನಃ ಈಕೆಯಲ್ಲಿ ಬಂಡುಕೋರತನ ಇಲ್ಲ. ಸದ್ದಿಲ್ಲದೆ ಗಂಡನನ್ನು ಅನುಸರಿಸಿ ಹೊರಡುತ್ತಾಳೆ. ಅವಳು ಆತನನ್ನು ಹಿಂಬಾಲಿಸಿದರೂ ಆ ನಿಶ್ಯಬ್ದ ಹಲವು ಧ್ವನಿಗಳನ್ನು ಹೊರಡಿಸುವುದು ಸತ್ಯ. ಈ ಮೌನದಲ್ಲಿ ಪ್ರಶಾಂತತೆ ಇಲ್ಲ ಬದಲಾಗಿ ಪ್ರಕ್ಷುಬ್ಧತೆ ಇದೆ. ಬುಡಕಟ್ಟಿನ ಒಂದು ಜೀವನಕ್ರಮ ಮತ್ತೊಂದು ತಿರುವನ್ನು ಪಡೆದುಕೊಳ್ಳುತ್ತಿರುವ ಸಂದರ್ಭವಿದು.

ಬೇಟೆಯ ಹಂತದಿಂದ ಪಶುಪಾಲನಾ ಹಂತಕ್ಕೆ ಬಂದಾಗಲೇ ನಮ್ಮ ಆದಿಮ ಸಂಸ್ಕೃತಿಗಳಲ್ಲಿ ಪುರುಷ ರಾಜಕಾರಣ ಆರಂಭವಾಯಿತು. ಮುಕ್ತವಾಗಿದ್ದ, ಮಾತೃಪ್ರಧಾನ ವ್ಯವಸ್ಥೆ ಬದಲಾಗತೊಡಗಿತು. ಒಂದು ಕೌಟುಂಬಿಕ ವ್ಯವಸ್ಥೆ ಎಂದಾಗ ಅಲ್ಲಿ ಯಾರೂ ಪ್ರಧಾನರಾಗಬೇಕಾದ ಅಗತ್ಯವಿಲ್ಲ. ಪರಸ್ಪರರಲ್ಲಿರುವ ಪ್ರೀತಿ, ನಂಬಿಕೆ, ಕಾಳಜಿ, ವಿಶ್ವಾಸ ಜನಪರ ಕಾಳಜಿಗಳೇ ಆ ಕುಟುಂಬಕ್ಕೆ ಒಂದು ಬಿಗಿಯಾದ ನೆಲೆಗಟ್ಟನ್ನು, ಸಾಮರಸ್ಯವನ್ನು ತಂದುಕೊಡುತ್ತದೆ. ಆಳುವ ಅದೀನವಾಗಿಸಿಕೊಳ್ಳುವ ಹಂಬಲ ಬಂದಾಗ ಇಲ್ಲಿ ಸಾಮರಸ್ಯಕ್ಕಿಂತ ಒಡೆಯ, ಆಳು ಎಂಬಂಥಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಲ್ಲಿ ದಾನಸಾಲಮ್ಮ ಪತಿಯ ಒಡೆತನವನ್ನು ಭಂಜಿಸಿ ತನ್ನದೇ ಆದ ಸ್ವತಂತ್ರ ನೆಲೆಯನ್ನು ಕಟ್ಟಿಕೊಂಡು ತಾಯ್ತನ ಪಡೆಯುತ್ತಾಳೆ. ತಾಯ್ತನದ ಹಂಬಲವೇ ಇವಳನ್ನು ಅಲ್ಲಿಗೆ ಕೊಂಡೊಯ್ಯುತ್ತದೆ. ಪುರುಷ ಪ್ರಾಧಾನ್ಯತೆಯನ್ನು ಕದಿಯುವವಳಂತೆ ಇವಳು ಕಂಡುಬಂದರೂ ಕೊನೆಗೆ ಒಡೆಯನ ಅಧಿಕಾರದ ಗತ್ತಿಗೆ ಅಧೀನಳಾಗುತ್ತಾಳೆ. ಇಲ್ಲಿಯ ಸುಕ್ಕಲು ಮಲ್ಲಿನಾಯಕನ ಆಲೋಚನೆ ಸಂಪೂರ್ಣವಾಗಿ ಆರ್ಯ ಮೂಲದ ಪುರುಷ ಪ್ರಧಾನ ದೃಷ್ಟಿಕೋನದಿಂದ ಪ್ರಭಾವಿತವಾದದ್ದು.

ಸ್ತ್ರೀಯನ್ನು ತನ್ನ ಅಂಕೆಯಲ್ಲಿರಿಸಿಕೊಳ್ಳುವ ಆಸೆಯಿಂದ ಕೂಡಿದ್ದು ಇಂತಹ ಪುರುಷ ರಾಜಕಾರಣದಲ್ಲಿ ಈಕೆ ಅಧೃಶ್ಯಳಾಗುತ್ತಾಳೆ. ಅಗಾಧವಾದ ಮೌನ ಇಲ್ಲಿ ಮುಡುಗಟ್ಟಿದೆ. ಹೆಂಡತಿಯೊಂದಿಗೆ ಮಲ್ಲಿನಾಯಕ ಬಂಗಾರು ಬಾನುಕೋಟೆಗೆ ಬರುತ್ತಾನೆ. ಈತ ಇಲ್ಲಿ ಪಡೆಯುವುದು ತನ್ನ ಹೆಂಡತಿಯ ತಾತನ ಆಸ್ತಿಯನ್ನು ಮಾತೃರೂಪಿ ಕುಟುಂಬ ವ್ಯವಸ್ಥೆಯಲ್ಲಿ ಮನೆತನದ ಆಸ್ತಿ ಮಹಿಳೆಗೆ ಸಂಬಂಧಿಸಿದ್ದಾಗಿರುತ್ತದೆ. ಇನ್ನೂ ಸಂಪೂರ್ಣವಾಗಿ ಪಿತೃರೂಪಿಯಾಗದ ಮಾತೃರೂಪವಲ್ಲದ ಸಂಕ್ರಮಣ ಸಂದರ್ಭ ಅದಾಗಿರಬಹುದು. ಹಾಗಿರದಿದ್ದರೂ ತವರಿನಿಂದ ಹೆಣ್ಣಿಗೆ ಆಸ್ತಿ ಅಂದರೆ ಪಶುಸಂಪತ್ತು, ಈ ಮೂಲಕ ತಾನು ಸಂಪಾದಿಸಿದ ಇತರ ಸಂಪತ್ತು ಮಲ್ಲಿನಾಯಕರ ಕೈಸೇರಿತು. ಇದನ್ನು ಗಮನಿಸಿದರೆ ಈತ ನಮಗೆ ಹೀಗೆ ಕಂಡುಬರುತ್ತಾನೆ. ಹೆಂಡತಿ ಬೇಕು ಈತನಿಗೆ, ಏಕೆಂದರೆ ಆಕೆಯ ಮೂಲಕ ತವರಿನ ಆಸ್ತಿಯನ್ನು ಕಬಳಿಸಲು ಈತನಿಗೆ ಇದು ತನ್ನದಾಗಬೇಕಾದರೆ ಅವಳು ತನ್ನೊಂದಿಗೆ ಇರಬೇಕು. ಆದರೆ ಆಕೆಯ ಮಕ್ಕಳನ್ನು ಸಾಕುವ ಹೊಣೆಗಾರಿಕೆ, ಕನಿಷ್ಠ ಜೀವಪರ ಕಾಳಜಿ ಇಲ್ಲದ ವ್ಯಕ್ತಿಯಾಗುತ್ತಾನೆ ಈತ. ಈ ವಿವರಗಳನ್ನು ಸ್ತ್ರೀವಾದಿ ನೆಲೆಯಿಂದ ಗಮನಿಸಬೇಕಾದ

ಅಗತ್ಯವಿದೆ. "ಸ್ತ್ರೀವಾದ ಎಂದ ಕೂಡಲೆ ಪುರುಷರಿಂದ ವಿಮೋಚನೆ ಪಡೆದು ತಮ್ಮದೇ ಆದ ಅಸ್ತಿತ್ವವನ್ನು ನಿರ್ಮಾಣ ಮಾಡಿಕೊಳ್ಳುವುದು ಎಂದಲ್ಲ. ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಸಾವಿರಾರು ವರ್ಷಗಳಿಂದ ಸ್ತ್ರೀಯರಿಗೆ ಸಹಜೀವನವನ್ನು ನೀಡದೆ ಅವಳಿಗೆ ತಂದಿತ್ತಿರುವ ಪಶುವ್ಯವಸ್ಥೆಯಿಂದ ಹೊರಬರುವುದು ಹಾಗೂ ತಮ್ಮ ಹಕ್ಕುಗಳನ್ನು ಪ್ರಸ್ತಾವನೆ ಮಾಡಿಕೊಳ್ಳುವುದಕ್ಕಾಗಿ ನಿರ್ಮಾಣಗೊಂಡಿರುವ ವ್ಯಾಸಪೀಠವಿದು."[೬] ಈ ಮಾತಿನ ಹಿನ್ನೆಲೆಯಲ್ಲಿ ಕನಿಷ್ಠ ಮಾನವೀಯ ಗುಣ ಇಲ್ಲದ ಮಲ್ಲಿನಾಯಕನ ವರ್ತನೆ ಅಸಹಜ, ಅಸಹನೀಯವಾದುದೆನಿಸುತ್ತದೆ.

ಈ ಬುಡಕಟ್ಟಿನ ಬಗ್ಗೆ ವಿಚಾರ ಮಾಡುವಾಗ ಈಗ ಪಿತೃಪ್ರಧಾನ ವ್ಯವಸ್ಥೆಯ ಮೂಲಕವಾಗಿಯೇ ನೋಡುವ ಕ್ರಮ ಬಳಕೆಯಲ್ಲಿದ್ದು, ಮ್ಯಾಸಬೇಡರು ಎಂದಾಕ್ಷಣ ಮಂದರಾಜ, ಆತನ ಮೊಮ್ಮಕ್ಕಳನ್ನು ವರಿಸಿದ ಸುಕ್ಕಲು ಮಲ್ಲಿನಾಯಕ ಅವನ ಪರಂಪರೆಯಿಂದ ಬಂದವನೇ ಕಾಟನಾಯಕನ ಮಲ್ಲಯ್ಯ. ಗಾದ್ರಿಪಾಲನಾಯಕ ಎಂಬ ಆಲೋಚನಾ ವಿಧಾನವೇ ಪ್ರಧಾನವಾಗಿದೆ. ದಾನಸಾಲಿಯಮ್ಮನಿಗೆ ಸಂಬಂಧಿಸಿದ ಯಾವ ಆಚರಣೆಯೂ ಈ ಸಮುದಾಯದಲ್ಲಿಲ್ಲ. ಸಂಬಂಧಿಸಿದ ದೇವಾಲಯವೂ ಇಲ್ಲ. ಈ ಕಥೆಯಲ್ಲಿ ಬಂದಿರುವ 'ಎನುಮಲವರು' ಎಂಬುದು ಮ್ಯಾಸನಾಯಕರಲ್ಲಿ ಪ್ರಮುಖವಾದ ಬೆಡಗು. ಈ ಎನುಮಲವರ ಒಟ್ಟುಕುಲಕ್ಕೆ ತಾಯಿ ಸ್ಥಾನಕ್ಕೆ ಸಲ್ಲುವವಳೇ ದಾನಸಾಲಮ್ಮ. ಹಾಗಾಗಿ ತಮಗೆ 'ಎನುಮಲವರು' ಎಂಬ ಪದ ಹೇಗೆ ಸಲ್ಲುತ್ತದೆ ಎಂಬುದಕ್ಕೆ ಅವರು ಕಟ್ಟಿಕೊಂಡಿರುವ ಕಥೆಯಿದು. ಮೂಲದ ಕಥೆಯನ್ನು ಉಳಿಸಿಕೊಂಡು ಸೂರ್ಯನ ವರದಿಂದ ಆಕೆ ಮಕ್ಕಳನ್ನು ಪಡೆದಳು. ಆ ಮಗುವನ್ನು ತಿಪ್ಪೆಯಲ್ಲಿ ಹೂಳಲು ಅದಕ್ಕೆ ಪ್ರತಿದಿನ ಎಮ್ಮೆಹಾಲು ಕರೆದುಬರುತ್ತಿದ್ದುದರ ಕಾರಣ ಅವನ ಪರಂಪರೆಗೆ ಈ ಹೆಸರು ಬಂದಿತು ಎಂದು ಹೇಳಿಕೊಳ್ಳುತ್ತಾ ಒಟ್ಟು ತಾವು ಈ ದಾನಸಾಲಿಯ ಪರಂಪರೆಯವರು ಎಂದು ಹೇಳಿಕೊಂಡು ಸ್ಮರಣೆಯಲ್ಲಿ ಉಳಿಸಿಕೊಂಡಿದ್ದಾರೆ.

ಇಷ್ಟೇ ಅಲ್ಲದೆ ಈಕೆ ನಿಡುಗಲ್ಲು ಮೂಲದಿಂದ ಬಂದವಳೆಂದೂ ಆಕೆಯ ಮಗನೇ ಈಗ ಶರಣನೆಂದು ಪ್ರಸಿದ್ಧಿಯಾಗಿರುವ ನಾಯಕನಹಟ್ಟಿ ತಿಪ್ಪೇಸ್ವಾಮಿಯೆಂದೂ ಹೇಳುತ್ತಾನೆ. ಹೀಗೆ ಆಕೆ ಸಮುದಾಯದ ಸ್ಮರಣೆಯಲ್ಲಿ ಉಳಿದಿದ್ದಾಳೆ. 'ಎನುಮಲವರು' ಬೆಡಗಿಗೆ ಸೇರಿದ ಈ ದಾನಸಾಲಮ್ಮನ ಮಕ್ಕಳಾದ ಐದೂ ಜನರ ಪರಂಪರೆಯಲ್ಲಿ ಈಗಲೂ ದಾನಸಾಲಿಯಮ್ಮ ಎಂದು ಹೆಣ್ಣುಮಕ್ಕಳಿಗೆ ನಾಮಕರಣ ಮಾಡುವ ಪದ್ಧತಿ ಇದೆ. ಆಕೆ ಆಚರಣೆ, ಆರಾಧನೆಯ ಸ್ವರೂಪದಲ್ಲಿ ಉಳಿಯದಿರಲು ಆಕೆ ತನ್ನ ಮಕ್ಕಳನ್ನು ಪೋಷಿಸಲಿಲ್ಲ ಎಂಬ ಕಾರಣವಿರಬಹುದೇ ಎಂದೆನ್ನಿಸಿದರೂ ಇದಕ್ಕೆ ಆಕೆ ಕಾರಣಳಲ್ಲ. ಅವಳ ಸಂದರ್ಭ ಹಾಗಿತ್ತಷ್ಟೆ. ಅಸಹಾಯಕತೆಯ ಕಡೆ ತಳ್ಳಿತು. ಆದರೆ ಈ ಮಕ್ಕಳನ್ನು ಪೋಷಿಸುತ್ತಿದ್ದ ಆಕೆಯ ಹಿರಿಯ ಮಗಳಾದ ದಾಯಮ್ಮನಿಗೆ ಅವಶ್ಯಕವೆನಿಸಿದ ಸಂದರ್ಭಗಳಲ್ಲೆಲ್ಲಾ ಈಕೆಯ ತಮ್ಮನಾದ ಕರಿಬೊಮ್ಮಂತರಾಜು ಬಂದು ಸಹಾಯ ಮಾಡುತ್ತಾನೆ. ಅಕ್ಕನಾದ ದಾನಸಾಲಿಯ ಮೇಲಿನ ಅಕ್ಕರೆಯನ್ನು ಆಕೆಯ ಮಕ್ಕಳಿಗೆ ಅವನು ಆಸರೆಯಾಗುವಂತೆ ಮಾಡುತ್ತದೆ. ಅಂದರೆ ಇಲ್ಲಿ ಪರೋಕ್ಷವಾಗಿ ದಾನಸಾಲಿಯ ಪಾತ್ರವಿದೆ. ಮುಂದೆ ಮಕ್ಕಳು ದೊಡ್ಡವರಾಗಿ ಸುಕ್ಕಲು ಮಲ್ಲನಾಯಕನನ್ನು

ಮಣಿಸಿ ಆತ ತಂದೆಯೆಂದು ಒಪ್ಪಿಕೊಳ್ಳುವ ಹಾಗೆ ಮಾಡಿ ಆತನಿಂದ ಪಶುಸಂಪತ್ತನ್ನೂ, ಆಯುಧಗಳನ್ನೂ ಪಡೆದುಬರುತ್ತಾರೆ. ಅಂದರೆ ಇವನು ಪಡೆದ ಸಂಪತ್ತು ಇವನ ತಾಯಿಯಾದ ದಾನಸಾಲಿಗೆ ಸೇರಿದುದಾಗಿತ್ತು. ಈ ಸಂಪತ್ತಿನ ಮೂಲಕವೇ ಮುಂದೆ ತಮ್ಮದೇ ಆದ ಸಂಸ್ಕೃತಿಯನ್ನು ಕಟ್ಟಿಬೆಳೆಸಲು ಅವನಿಗೆ ಸಾಧ್ಯವಾಯಿತು. ಹೀಗೆ ನೇರವಾಗಿ ಅಲ್ಲದಿದ್ದರೂ ಅವಳೇ ಕಾರಣವಾಗಿ ಆ ಸಮುದಾಯ ತನ್ನದೇ ಆದ ರೀತಿಯಲ್ಲಿ ಶ್ರೀಮಂತ ಸಂಸ್ಕೃತಿಯೆನಿಸಿತು.

ಅಕ್ಕರಾಯಮ್ಮ (ದಡ್ಲುಮಾರಮ್ಮ)

ಮ್ಯಾಸಬೇಡರಿಗೆ ಆರಾಧ್ಯ ದೇವತೆಯೆನಿಸಿರುವ ಅಕ್ಕರಾಯಮ್ಮನ ಬಗ್ಗೆ ಪ್ರಚಲಿತವಾಗಿರುವ ಪುರಾಣಗಳಿವೆ. ಮೌಖಿಕವಾಗಿ ಹಾಡಲಾಗುವ ಕಥನಗಳ ಮೂಲಕ ಮತ್ತು ಗದ್ಯರೂಪದಲ್ಲಿ ಹೇಳಲಾಗುವ ಕಥೆಗಳ ಮೂಲಕ ಅಕ್ಕರಾಯಮ್ಮನನ್ನು, ಆಕೆಯ ವ್ಯಕ್ತಿತ್ವವನ್ನೂ ನಾವು ಗ್ರಹಿಸಲು ಸಾಧ್ಯವಗುತ್ತದೆ. ಒಬ್ಬ ವ್ಯಕ್ತಿ ತನ್ನ ಸಮುದಾಯಕ್ಕೆ ನೀಡಿದ ವಿಶಿಷ್ಟ ಕಾಣಿಕೆಯೇ ಕಾರಣವಾಗಿ ಆ ಸಮುದಾಯದ ಸ್ಮರಣೆಯಲ್ಲಿ ಉಳಿದುಬಂದು ಜೀವಂತಿಕೆಯನ್ನು ಪಡೆಯುತ್ತಾರೆ. ರಾಯಮ್ಮನ ಅನನ್ಯತೆಯೇ ಕಾರಣವಾಗಿ ಆಕೆ ಅನೇಕ ನೆಲೆಗಳಲ್ಲಿ ಆರಾಧಿಸಲ್ಪಡುತ್ತಾ ಜನಮನದಲ್ಲಿ ಉಳಿದುಬಂದಿದ್ದಾಳೆ. ಈ ಹಿಂದೆ ಕೊಟ್ಟಿರುವ ಎರಡೂ ಕಥೆಗಳ ಆಧಾರದ ಮೇಲೆ ಅಕ್ಕರಾಯಮ್ಮ ದಾನಸಾಲಿ ಮತ್ತು ಸುಕ್ಕಲಿಮಲ್ಲಿನಾಯಕನ ಮಗಳು ಎಂಬುದು ಸ್ಪಷ್ಟವಾಗುತ್ತದೆ. ಸಂಚರಿಮದ ಪೋಷಿಸಲ್ಪಟ್ಟ ಈತ ಸಂಚು ಶಿಕಾನಾಯಕ ಎಂದು ಕರೆಸಿಕೊಳ್ಳುತ್ತಾನೆ. ಗಿಡಗಂಟೆಗಳ ರಾಜ ಎಂದೂ ಕರೆಯಲಾಗುತ್ತದೆ. ಈತ ಮಂದರಾಜನ ಮೊಮ್ಮಗಳಾದ ದಾನಸಾಲಿಯನ್ನು ವಿವಾಹವಾದ ಈತನ ಸಂತತಿಯವರೆ ಮುಂದೆ 'ಸಂಚು ಮ್ಯಾಸವಾಳು' ಅಂದರೆ ಸಂಚು ಮ್ಯಾಸನಾಯಕರು, ಮ್ಯಾಸನಾಯಕರು, ಮ್ಯಾಸಬೇಡರು ಎಂದು ಕರೆಯಲ್ಪಟ್ಟರು.

ದಾನಸಾಲಿ ಮತ್ತು ಈ ಸಂಚುಸಿಕಾನಾಯಕನ ಮಗಳೇ ಅಕ್ಕರಾಯಮ್ಮ ಸಂಚುಲಕ್ಷ್ಮಿ. ಈಕೆಯ ಜನನವೇ ವಿಶಿಷ್ಟವಾದುದು. ಮದುವೆಯಾಗಿ ಅನೇಕ ವರ್ಷಗಳು ಕಳೆದರೂ ಅವರಿಗೆ ಮಕ್ಕಳಾಗಿರುವುದಿಲ್ಲ. ಒಮ್ಮೆ ಜಂಗಮನೊಬ್ಬ ನೀಡಿದ ಕುಂಬಳಬೀಜ ನೆಡುವಾಗ ದಾನಸಾಲಿಯಮ್ಮ ಸೂರ್ಯನ ಧ್ಯಾನ ಮಾಡುತ್ತಾ ಆ ಸೂರ್ಯನನ್ನೇ ಧ್ಯಾನಿಸಲು ಕಿರಣಗಳ ಮೂಲಕ ಸೂರ್ಯನ ಅಂಶವೇ ಈ ಕುಂಬಳ ಬೀಜದ ಮೇಲೆ ಬಿದ್ದು, ಆ ಬೀಜ ನೆಡಲು ಅದು ಬಳ್ಳಿಯಾಯಿತು. ಈ ಎರಡೂ ವಿವರಗಳನ್ನು ಪರಿಶೀಲಿಸಿದಾಗ ಬಹುಶಃ ಇವರಿಬ್ಬರ ಮೊದಲ ಮಗಳೇ ಈ ರಾಯಮ್ಮ ಅಥವಾ ಸಂಚುಲಕ್ಷ್ಮಿ. ನಂತರ ಕೆಲವು ವರ್ಷಗಳ ಅಂತರದಲ್ಲಿ ಪಡೆದವರು ಉಳಿದ ಐದೂ ಮಂದಿ ಗಂಡುಶಿಶುಗಳು. ಹೆಣ್ಣಿನ ಮೂಲ 'ತುಂಬು' ಹಾಗಾಗಿ ತುಂಬಿನಲ್ಲಿ ಜನಿಸಿದಳು ರಾಯಮ್ಮ ಎಂಬ ಸಂಕೇತವಾದ ಚಿತ್ರಣವನ್ನು ಜನಪದರು ಕೊಡುತ್ತಾ ಬಂದಿದ್ದಾರೆ. ಹುಟ್ಟಿನ ಮೂಲ ನಿಗೂಢವಾಗಿದ್ದಾಗ ಕ್ರಮೇಣ ಬದುಕು ಶಿಷ್ಟತೆಯ ಕಡೆಗೆ ಸಾಗಿದಂತೆಲ್ಲಾ ಇಂತಹ ಕಥೆಗಳು ಹುಟ್ಟಿಕೊಳ್ಳುವುದು ಸಹಜ. ಇಲ್ಲಿ ಕುಂಬಳಕಾಯಿಯ ಕಥೆಯೂ ಹೀಗೆಯೇ ಸೃಷ್ಟಿಯಾಗಿದೆ.

ಅಕ್ಕರಾಯಮ್ಮನನ್ನು ಶರಣೆ ಎಂದು ಆಕೆಯ ಸಹೋದರರನ್ನು ಶರಣರು ಎಂದು ಕರೆಯುವ ವಾಡಿಕೆ ಈ ಬುಡಕಟ್ಟಿನಲ್ಲಿದೆ. ಮಕ್ಕಳು ಮಾತೆಯ ಮೂಲಕ ಸಹಜವಾಗಿ ಜನಿಸಿದವರು ಬಂದಾಗ ಅದು ಅಷ್ಟಾಗಿ ಶ್ರೇಷ್ಠವಲ್ಲ ಅಪವಿತ್ರ ಎಂಬ ಆಲೋಚನೆ ಕಾರಣವಾಗಿಯೂ ಇವರ ಹುಟ್ಟನ್ನು ಹೀಗೆ ವಿವರಿಸಬಹುದು. ಮಂಟೇಸ್ವಾಮಿ ತಾವರೆ ಹೂವಿನಲ್ಲಿ ಮರಿದುಂಬಿಯಾಗಿ ಹುಟ್ಟುತ್ತಾನೆ. ಏಸುಕ್ರಿಸ್ತನ ಹುಟ್ಟಿನ ಬಗ್ಗೆಯೂ ಇಂತಹುದೇ ನಂಬಿಕೆಯಿದ್ದು, ಅವನು ಕನ್ಯಾಪುತ್ರನೆಂದು ಹೇಳಲಾಗಿದೆ. ಈ ಹಿನ್ನೆಲೆಯಿಂದ ಈ ಕಥೆಯನ್ನು ಗ್ರಹಿಸಬಹುದಾಗಿದೆ. ತನ್ನ ಮಕ್ಕಳನ್ನು ನಿರಾಕರಿಸಿ, ಸಾಕುವ ಹೊಣೆಗಾರಿಕೆಯನ್ನು ಹೊತ್ತುಕೊಳ್ಳದೆ, ತನ್ನ ಪತ್ನಿಯನ್ನು ಅಲ್ಲಿಂದ ಕರೆದುಕೊಂಡು ಹೋಗಿ ಹೆಂಡತಿಯ ಮೂಲಕ ಆಕೆಯ ತಾತನಿಂದ ಪಶುಸಂಪತ್ತನ್ನು ಉಳಿದ ಅನೇಕ ವಿವಿಧ ಸಂಪತ್ತನ್ನು ಪಡೆದು ಅದಕ್ಕೆ ತಾನು ಯಜಮಾನನಾಗಿ ಈತ ಮೆರೆಯತೊಡಗುತ್ತಾನೆ. ಇತ್ತ ಅನಿವಾರ್ಯವಾಗಿ ಹಿರಿಯಕ್ಕನಾದ ರಾಯಮ್ಮನ ಮೇಲೆ ಪೋಷಣೆಯ ಹೊಣೆಗಾರಿಕೆ ಬೀಳುತ್ತದೆ.

ಮಾತೃ ಪ್ರಧಾನವಾಗಿದ್ದ ಬುಡಕಟ್ಟು ಸಮುದಾಯಗಳಲ್ಲಿ ಮೂಲತಃ ಪಿತೃವಿನ ಸ್ಥಾನ ಮುಖ್ಯವಾದುದೇ ಅಲ್ಲ. ಮಕ್ಕಳು ಒಟ್ಟು ಸಮುದಾಯದ ಮಕ್ಳು ಅಲ್ಲಿ ಎಲ್ಲರೂ ಮಾತೆಯರು. ಇಂತಹ ಸ್ಥಿತಿಯಿಂದ ಪಿತೃಪ್ರಾಧಾನ್ಯತೆಯ ಕಡೆ ವ್ಯವಸ್ಥೆ ಸರಿದಂತೆಲ್ಲಾ ಪುರುಷ ಪ್ರಾಧಾನ್ಯತೆಯೂ ಕಾಣಿಸಿಕೊಂಡಿತು. ಮ್ಯಾಸಬೇಡರಲ್ಲಿಯೂ ಮೂಲತಃ ಇದ್ದದ್ದು ಮಾತೃಮೂಲೀಯ ಕುಟುಂಬ ವ್ಯವಸ್ಥೆ. ಕಾರಣ ಅಲೆಮಾರಿ ಸಮುದಾಯಗಳಿವು. ಆಹಾರ ಸಂಪಾದನೆಯ ಹಂತದಿಂದ ಪಶುಪಾಲನೆಯ ಕಡೆ ತಿರುಗಿದಾಗಲೂ ಈ ಅಲೆಮಾರಿತನ ಅವರಿಗೆ ಅನಿವಾರ್ಯವಾಗಿತ್ತು. ಆಗ ಮಾತೆಯ ಸ್ಥಾನ ಮುಖ್ಯವಾದುದಾಗಿತ್ತು. ಆದರೆ ಕ್ರಮೇಣ ಅಲ್ಲಿ ಕಾಣಿಸಿಕೊಂಡ ಪುರುಷ ಪ್ರಾಧಾನ್ಯತೆಯ ಸಂದರ್ಭವನ್ನು ಸುಕ್ಕಲು ಮಲ್ಲನಾಯಕನ ವರ್ತನೆ ಸ್ಪಷ್ಟಪಡಿಸುತ್ತದೆ. ಹೀಗಾಗಿ ಈತನು ಪತ್ನಿಯನ್ನು ಆಕೆಯ ಮಕ್ಕಳಿಂದ ದೂರ ಮಾಡುತ್ತಾನೆ. ತಾನೂ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಾನೆ. ಹೀಗಾಗಿ ರಾಯಮ್ಮನೇ ಶ್ರಮದಿಂದ ತನ್ನ ತಮ್ಮಂದಿರನ್ನು ಸಾಕತೊಡಗುತ್ತಾಳೆ. ಓರಗೆಯ ಮಕ್ಕಳು ನಿಮ್ಮ ತಂದೆ ಯಾರು ಎಂದು ಅಪಹಾಸ್ಯ ಮಾಡುತ್ತಾರೆ. ತಂದೆಯ ಮೂಲಕ ಮಾತ್ರ ಸಮಾಜದಲ್ಲಿ ತಮಗೊಂದು ಅಸ್ತಿತ್ವ ದೊರೆತು ಸಾಮಾಜಿಕ ಮನ್ನಣೆ ಪ್ರಾಪ್ತವಾಗುತ್ತದೆ ಎಂದು ಅರಿತ ಈ ಹುಡುಗರು ತಮ್ಮ ತಂದೆ ಯಾರು ಎಂದು ಅಕ್ಕನನ್ನು ಪೀಡಿಸಿದಾಗ ಆಕೆ ಆತನ ವಿವರವನ್ನು ಕೊಡುತ್ತಾಳೆ. ಮೊದಲು ಹುಟ್ಟಿಬರುವ ಸೂರ್ಯನೇ ನಮ್ಮ ತಂದೆ ಎಂದು ಹೇಳುತ್ತಾಳೆ. ಹಾಗಾದರೆ ಆತನನ್ನು ತಮ್ಮ ತಂದೆ ಎಂದು ಒಪ್ಪಿಸಿಕೊಂಡು ಬರುತ್ತೇವೆ ಎಂದು ಅವರು ಹೊರಟಾಗ ಇದ್ದಕ್ಕಿದ್ದಂತೆಯೇ ಹೊರಟರೆ ಅದು ಸಾಧ್ಯವಾಗುವುದಿಲ್ಲ. ಅದಕ್ಕೆ ತಾಯಂದಿರ ಅಗತ್ಯವಿದೆ ಎಂದು ಅವರಿಗೆ ಶಸ್ತ್ರಾಭ್ಯಾಸ ಮಾಡಿಸತೊಡಗುತ್ತಾಳೆ. ತಮ್ಮಂದಿರಿಗೆ ಯುದ್ಧವಿದ್ಯೆಯನ್ನು ಕಲಿಸುವ ರಾಯಮ್ಮನ ವಿಶಿಷ್ಟತೆಯಿಂದ ಕೂಡಿದೆ. ನಾವು ಶಿಷ್ಟಪುರಾಣಗಳಲ್ಲಿ ಓದುವ ಶಸ್ತ್ರವಿದ್ಯೆಯನ್ನು ಕಲಿಸುವ ರೀತಿಗೂ, ಕಾಡಿನ ನಿವಾಸಿಯಾದ ರಾಯಮ್ಮ ಶಸ್ತ್ರವಿದ್ಯೆಯನ್ನು ಕಲಿಸುವ ರೀತಿಗೂ ಸಾಕಷ್ಟು ವ್ಯತ್ಯಾಸವಿದೆ. ಬುಡಕಟ್ಟಿನ ಮಹಿಳೆಗೆ ಇದು ಸಹಜವಾದುದು ಎಂದುಕೊಂಡರೂ ಇದಕ್ಕೆ ಆಕೆಯ ಕುಶಲತೆಯಿಂದ

ಕೂಡಿದ ಜ್ಞಾನವೂ ಕಾರಣವಾಗಿದೆ. ಎಂಬುದನ್ನು ಮರೆಯುವ ಹಾಗಿಲ್ಲ. ಜೊತೆಗೆ ಇಲ್ಲಿ ಕಲಿಸುತ್ತಿರುವವಳು ಹೆಣ್ಣು, ಕಲಿಯುತ್ತಿರುವವರು ಪುರುಷರು. ಮಹಿಳೆಗೆ ಜ್ಞಾನದ ವಿಶಿಷ್ಟರೂಪವಾದ ಆತ್ಮವಿರುವುದಿಲ್ಲವಾದ್ದರಿಂದ ಆಕೆಯ ಕೊಲೆ ಶಿಕ್ಷಾರ್ಹ ಅಪರಾಧವಾಗುವುದಿಲ್ಲ ಎಂದು ಚೀನಾದ ಖ್ಯಾತ ಚಿಂತಕ 'ಕನಪೋಷಿಯಸ್' ಹೇಳುತ್ತಾನೆ. ಜ್ಞಾನದ ವಿಶಿಷ್ಟ ರೂಪವಾದ ಆತ್ಮವೇ ಮಹಿಳೆಗೆ ಇಲ್ಲವೆಂದರೆ ಆಕೆಗೆ ಜ್ಞಾನವೇ ಇಲ್ಲವೆಂದರ್ತವಾಗುತ್ತದೆ. ಆದರೆ ಇಂತಹ ಅರ್ಥವಿಲ್ಲದ ದಾರ್ಶನಿಕನ ಮಾತಿನ ಈಕೆಯ ಕಾರ್ಯಕುಶಲತೆ, ಕಲಿಸುವ ಜ್ಞಾನ, ಶಿಸ್ತು ಪ್ರತಿ ಉತ್ತರವಾಗುತ್ತದೆ. ತಾನು ಕಲಿತಿದ್ದರೆ ಮಾತ್ರ ಮತ್ತೊಬ್ಬರಿಗೆ ಕಲಿಸಲು ಸಾಧ್ಯ. ತನ್ನದೇ ನೆಲೆಯಲ್ಲಿ ತನ್ನಲ್ಲಿರುವ ಪರಿಕರಗಳನ್ನು ಬಳಸಿಕೊಂಡು ಶಸ್ತ್ರವಿದ್ಯೆಯನ್ನು ಕಲಿಸುವ ದಾಯಮ್ಮನ ಈ ಶೈಲಿಯೇ ಅನನ್ಯತೆಯಿಂದ ಕೂಡಿದೆ. ಈ ಅನನ್ಯತೆಯೇ ನಮಗೆ ಅಚ್ಚರಿಯನ್ನು ಮೂಡಿಸುತ್ತದೆ. ಅಬಲೆಯೆಂದು ಭಾವಿಸಿಕೊಂಡು ಕೈಚೆಲ್ಲಿರುವ ಮಹಿಳೆ ತನಗಿರುವ ಸಾಧ್ಯತೆಗಳನ್ನು ಹುಡುಕಿಕೊಳ್ಳುವಂತೆ ಎಚ್ಚರಗೊಳಿಸುತ್ತದೆ. ತನ್ನ ತಮ್ಮಂದಿರಿಗಾಗಿ ಈಕೆ ಕಡಲೆಯನ್ನು ಬಿತ್ತಿಬೆಳೆಯುತ್ತಾಳೆ. ಪಶುಪಾಲಕರಾಗಿದ್ದ ಇವರಿಗೆ ಬೇಟೆ ಸಹಜವಾದುದಾಗಿರಲಿಲ್ಲ.

ಪಶುಪಾಲನೆಯೊಂದಿಗೆ ಕ್ರಮೇಣ ಕೃಷಿಯನ್ನು ಕಲಿಯತೊಡಗಿದ ಮಾನವ ಅವರಲ್ಲಿ ಮಹಿಳೆಯೇ ಮೊದಲಿಗಳು ಎಂಬ ಅಭಿಪ್ರಾಯವೂ ಇದೆ. ಕೃಷಿ ಗೊತ್ತಿಲ್ಲದ ಸಂದರ್ಭದಲ್ಲಿ ಬಹುಶಃ ಕೃಷಿಯನ್ನು ಕರಗತಮಾಡಿಕೊಳ್ಳಲು ಇವಳು ಮಾಡಿದ ಪ್ರಯತ್ನವನ್ನೇ ಆಕೆಯ ಪರಿಶ್ರಮವನ್ನೇ 'ಬಂಡೆಯ ಮೇಲೆ ರಾಯಮ್ಮ ಕಡಲೆ ಬಿತ್ತಿ ಬೆಳೆದಳು' ಎಂದು ಹೇಳಿರಬಹುದು. ಹೀಗೆ ತಾನು ಬೆಳೆದ ಕಡಲೆಯ ಹೊಲಕ್ಕೆ ಸೋದರಮಾವನಾದ ಕರಿಬೊಮ್ಮನನ್ನು ಕಾವಲು ಕಾಯಿಸಲೋಸುಗ ನೇಮಿಸುತ್ತಾಳೆ. ಮಾತೃಮೂಲೀಯ ಸಂಸ್ಕೃತಿಯಲ್ಲಿ ಸೋದರಮಾವ ತನ್ನ ಅಕ್ಕತಂಗಿಯರ ಮಕ್ಕಳಿಗೆ ಸಹಾಯ ನೀಡುವುದು ಸಾಮಾನ್ಯ ತುಂಬಾ ಆತ್ಮೀಯವಾದ ಬಾಂಧವ್ಯ ಇಲ್ಲಿರುತ್ತದೆ. 'ತಾಯಿ ಇಲ್ಲದ ಮಕ್ಕಳಿಗೆ ಸೋದರಮಾವನೇ ತಾಯಿ' ಎಂಬ ಗಾದೆಯೇ ಇದೆ. ಹೊಲಕ್ಕೆ ಮೇಯಲು ಬರುವ ಕುದುರೆಗಳನ್ನು ಹಿಡಿಯಲು ತನ್ನ ಮಾವನಿಗೆ ಉಕ್ಕಿನ ಚಾವಟಿಯನ್ನು ತಂದುಕೊಡುತ್ತಾಳೆ. ಬುಡಕಟ್ಟು ಸಮುದಾಯಗಳಲ್ಲಿ ಉಕ್ಕಿನ ಚಾವಟಿ ಎಂದರೆ ಅಪರೂಪದ್ದೇ. ಇದನ್ನು ದೊರಕಿಸಿಕೊಳ್ಳುತ್ತಾಳೆ.

ಹೊಲ ಮೇಯಲು ಬಂದ ಕುದುರೆಯ ಮರಿಗಳನ್ನು ಕರಿಬೊಮ್ಮ ಹಿಡಿದುಕೊಟ್ಟಾಗ, ಅವುಗಳನ್ನು ಸಾಕಿ ತನ್ನ ತಮ್ಮಂದಿರಿಗೆ ಕೊಡುತ್ತಾಳೆ. ಅಂದರೆ ತುಂಬಾ ಮುಂದಾಲೋಚನೆಯಿಂದ ತನ್ನ ತಮ್ಮಂದಿರಿಗೆ ಬದುಕನ್ನು ಕಟ್ಟಿಕೊಳ್ಳಲು ಬೇಕಾದುದೆಲ್ಲವನ್ನೂ ಈಕೆ ಜೋಡಿಸಿಕೊಳ್ಳುತ್ತಲೇ ಬರುತ್ತಾಳೆ. ಕುದುರೆಗಳ ಬಳಕೆ ಇಲ್ಲದಿದ್ದ ಈ ಸಮುದಾಯದಲ್ಲಿ ರಾಯಮ್ಮ ಅವುಗಳನ್ನು ಸಾಕಿದ್ದು ವಿಶೇಷ. ನೆಲಮಾಳಿಗೆಯಲ್ಲಿ ಗುಪ್ತವಾಗಿ ತುಂಬಾ ಜಾಣತನದಿಂದ ಅವುಗಳನ್ನು ಸಾಕುತ್ತಾಳೆ. ಜೊತೆಗೆ ತಮ್ಮಂದಿರನ್ನೂ ಸಾಕುತ್ತಾಳೆ. ತಂದೆ ತಾಯಿಯರಿಂದ ತಿರಸ್ಕೃತರಾದವರಿಗೆ ತಾನೇ ಆ ಸ್ಥಾನದಲ್ಲಿ ನಿಂತು ಸಾಕುವ ಹೊಣೆಗಾರಿಕೆ ಹೊತ್ತಿದ್ದಾಳೆ. ಈಕೆ ಇದನ್ನು ಸಾಧ್ಯ ಮಾಡಿಕೊಂಡದ್ದೇ

ಅದ್ಭುತವಾದ ಸಂಗತಿ. ಮಹಿಳೆ ಸದಾ ಪರಾವಲಂಬಿ, ಆಕೆಯನ್ನು ಪುರುಷ ಪೋಷಿಷಬೇಕು. ಎಂಬುದೇ ಸಾಮಾನ್ಯ ಸಂಗತಿಯಾಗಿರುವಾಗ ಈಕೆ ಸ್ವತಃ ತನ್ನನ್ನು ಮತ್ತು ತನ್ನ ಆಸರೆಗೆ ಸಿಲುಕಿದವರನ್ನು ಪೋಷಿಸಿದ್ದು ಅವಳ ದಕ್ಷತೆಗೆ ಸಾಕ್ಷಿಯಾಗುವ ಸಂಗತಿ. ಸಾಮಾಜಿಕ ಅಪಮಾನದಿಂದ ತತ್ತರಿಸಿ ತಮ್ಮಂದಿರನ್ನು ಹೋರಾಟಕ್ಕೆ ಅನಿಗೊಳಿಸಿ ಶಸ್ತ್ರಾಸ್ತ್ರಗಳನ್ನು, ಕುದುರೆಗಳನ್ನೂ ಕೊಟ್ಟು ತಂದೆಯ ವಿರುದ್ಧ ದಾಳಿಗೆ ಕಳುಹಿಸಿಕೊಡುತ್ತಾಳೆ. ಈ ಹೋರಾಟ ಅನಿವಾರ್ಯ ಅಷ್ಟೇ ಅವಶ್ಯಕ ಎಂದು ಆಕೆ ನಿರ್ಧರಿಸುವಲ್ಲಿ ಸಾಮಾಜಿಕ ನ್ಯಾಯವನ್ನು ಬೇಡುವ ಅವಳ ವೈಚಾರಿಕತೆ ಇಲ್ಲಿ ಎದ್ದು ಕಾಣುತ್ತದೆ. ದಾಳಿಗೆ ಹೋದ ತಮ್ಮಂದಿರು ನಿರೀಕ್ಷಿತ ಕಾಲಾವಧಿಯಲ್ಲಿ ಮರಳಿ ಬರದೇ ಇದ್ದಾಗ ಆತಂಕಿತಳಾಗುತ್ತಾಳೆ. ಒಂಟಿಕಾಲಲ್ಲಿ ಸೂರ್ಯನನ್ನು ಕುರಿತು ತಪಸ್ಸು ಮಾಡುತ್ತಾಳೆ. ಹರಕೆಗಳನ್ನು ಹೊರುತ್ತಾಳೆ. ಇದೆಲ್ಲಾ ತಮ್ಮಂದಿರ ಬಗ್ಗೆ ಅವಳಿಗಿದ್ದ ಪ್ರೀತಿಯನ್ನು ಸ್ಪಷ್ಟಪಡಿಸುತ್ತದೆ. ತನ್ನ ತಮ್ಮಂದಿರು ತೊಂದರೆಗೆ ಸಿಲುಕಿರಬಹುದು. ಹೋಗಿ ಸಹಾಯಮಾಡು ಎಂದು ಸೋದರಮಾವನಾದ ಕರಿಬೊಮ್ಮನನ್ನು ಕಳುಹಿಸಿಕೊಡುತ್ತಾಳೆ. ಆತ ಬೆನ್ನಿನ ಚರ್ಮವನ್ನು ಕಿತ್ತು, ಅಳಿಯಂದಿರ ಕುದುರೆಯ ಹರಿದ ಪಟ್ಟಿಗೆ ಬದಲಾಗಿ ಕಟ್ಟಿ, ಪಕ್ಕೆಯನ್ನು ತಿವಿದುಕೊಂಡು ನೆಣವನ್ನು ತೆಗೆದು ಬೆಳಕುಮಾಡಿ ಅವರ ದಾರಿಯನ್ನು ಸ್ಪಷ್ಟಮಾಡುತ್ತಾನೆ.

ಇಲ್ಲಿ ಈ ಪ್ರಸ್ತಾಪ ಮಾಡುತ್ತಿರುವ ಕಾರಣವೆಂದರೆ, ಪುರುಷನೊಬ್ಬನಲ್ಲಿಯೂ ಇರಬಹುದಾದ ಅಂತಃಕರಣ, ಸಹಾನುಭೂತಿಯನ್ನು ಗುರುತಿಸುವ ಸಲುವಾಗಿ "ಸಂಸ್ಕೃತಿಯನ್ನು ಬರಿ ನೆಗೆಟಿವ್ ನೆಲೆಯಲ್ಲಿಯೇ ಚರ್ಚಿಸಿ ನಮಗೆ ಅಭ್ಯಾಸವಾಗಿ ಹೋಗಿದೆ. ಸಂಸ್ಕೃತಿಗಳು ನಿರ್ಬಂಧಗಳ ನಿರ್ಮಾಪಕ ಎಂದೇ ಹೆಚ್ಚಾಗಿ ಗ್ರಹಿಸುವುದು. ಆದರೆ ಸಂಸ್ಕೃತಿಯೊಂದನ್ನು ನಿರ್ಬಂಧ ಮತ್ತು ಸಾಮರ್ಥ್ಯಗಳ ಜಂಟಿ ನಿರ್ಮಾಣ ಕ್ಷೇತ್ರ ಎಂದು ಭಾವಿಸುವುದೇ ಹೆಚ್ಚು ಪ್ರಯೋಜನಕರಿಯಾದ ವ್ಯಾಖ್ಯಾನ"[೭] ಎಂಬ ಡಿ. ಆರ್. ನಾಗರಾಜ್ ಅವರ ಹೇಳಿಕೆಯ ಹಿನ್ನೆಲೆಯಲ್ಲಿ ನಾವು ಕರಿಬೊಮ್ಮನ ಪಾತ್ರವನ್ನು ನೋಡಬೇಕಾಗಿದೆ. ಹೆಂಡತಿಯನ್ನು ತನ್ನ ಆಜ್ಞೆಯನ್ನು ಪಾಲಿಸಿಕೊಂಡು ಬರಬೇಕಾದ ಸ್ಥಿತಿಯಲ್ಲಿಟ್ಟು, ಮಕ್ಕಳನ್ನು ಅತಂತ್ರ ಸ್ಥಿತಿಗೆ ದೂಡಿದ ಸುಕ್ಕಲ ಮಲ್ಲಿನಾಯಕ ನಿರ್ಬಂಧಕ್ಕೆ ಸಂಕೇತವಾದರೆ ತನ್ನ ಸೊಸೆಗೆ, ಅಳಿಯಂದಿರಿಗೆ ಸಹಾಯ ಮಾಡುವ ಕರಿಬೊಮ್ಮ ಸಹಾನುಭೂತಿ ಹೊಂದಿರುವ ಸಂಸ್ಕೃತಿಯ ನಿರ್ಮಾಪಕನಾಗಿ ಕಂಡುಬರುತ್ತಾನೆ. ಅದಕ್ಕೆ ಇಲ್ಲಿ ಈತನ್ನು ಅಣಿಗೊಳಿಸಿದ ಶಕ್ತಿ ರಾಯಮ್ಮನೇ ಎಂಬುದನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ.

ಸೂರಿದ ಅಂದರೆ ಸುಕ್ಕಲು ಮಲ್ಲನಾಯಕ ಒಡ್ಡಿದ ಎಲ್ಲಾ ಪರೀಕ್ಷೆಗಳಲ್ಲೂ ಜಯಗಳಿಸುವ ಸಹೋದರರು ಆತನಿಂದ ಪಶುಸಂಪತ್ತನ್ನೂ, ಚಿನ್ನ, ವಜ್ರ ಮುಂತಾದ ಸಂಪತ್ತನ್ನೂ ಶಸ್ತ್ರಾಸ್ತ್ರಗಳನ್ನೂ ಲಿಂಗಗಳನ್ನೂ ಪಡೆದು ಹಿಂತಿರುಗುತ್ತಾರೆ. ಅಕ್ಕನ ಬಗ್ಗೆ ತಮಗಿದ್ದ ಗೌರವವೇ ಕಾರಣವಾಗಿ ಆಕೆಯ ಮುಂದಿಟ್ಟು ಹಂಚಿಕೊಂಡು ಎನ್ನುತ್ತಾರೆ. ಆಕೆಯೇ ಅವರಿಗೆ ಅವುಗಳನ್ನು ಹಂಚುತ್ತಾಳೆ. ಅವರು ಮುಂದಿನ ಬದುಕನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಡುತ್ತಾಳೆ. ಹೀಗೆ ತಮ್ಮಂದಿರನ್ನು

ಪೋಷಿಸಿ ಶಸ್ತ್ರವಿದ್ಯೆಯಲ್ಲಿ ಪರಿಣಿತರನ್ನಾಗಿಸಿ, ಆಯುಧಗಳನ್ನು ಕೊಟ್ಟು ತನ್ನ ತಂದೆಯ ಬಲಿ ಹಕ್ಕು ಬಾದ್ಯತೆಗಳನ್ನು ಪಡೆದು ಬರಲು ಕಳುಹಿಸಿ ಅದನ್ನು ಪಡೆದು ಬರುವಲ್ಲಿ ಅವರು ಯಶಸ್ಸನ್ನು ಗಳಿಸಲು ಕಾರಣಳಾಗುತ್ತಾಳೆ. ದಿಕ್ಕು ದೆಸೆ ಇಲ್ಲದವರು ತಂದೆ ತಾಯಿ ಯಾರೆಂದೇ ತಿಳಿಯದು ಎಂಬ ಸಾಮಾಜಿಕ ಅಪಮಾನದಿಂದ ಮುಕ್ತಗೊಳಿಸಿಕೊಂಡು ಸಾಮಾಜಿಕ ಮನ್ನಣೆ ಗಳಿಸಿಕೊಳ್ಳುವ ಹೋರಾಟದಲ್ಲಿ ಅವಳ ಪ್ರಯತ್ನವೇ ಮುಖ್ಯವಾಗುತ್ತದೆ. ಪುರುಷ ರಾಜಕಾರಣದ ಮಧ್ಯೆಯೂ ಇದನ್ನು ಸಾಧಿಸಿ ತೋರಿಸಿದ್ದಾಳೆ.

“ರಾಯಮ್ಮ ತನ್ನ ತಾಯಿ ದಾನಸಾಲಿಯದಾಗಿದ್ದು ಆದರೆ ತಂದೆಯ ಅದಿಪತ್ಯದಲ್ಲಿದ್ದ ಆಸ್ತಿಯನ್ನು ತಾವು ಪಡೆದುಕೊಳ್ಳಬೇಕಾದುದು ತಮ್ಮ ಹಕ್ಕಿನ ಪ್ರಶ್ನೆಯಾಗಿದ್ದು, ಅದಕ್ಕಾಗಿ ಈ ಹೋರಾಟ ಅನಿವಾರ್ಯವಾಗಿತ್ತು. ಇಲ್ಲಿ ರಾಯಮ್ಮ ನೇರವಾಗಿ ತಂದೆಯೊಂದಿಗೆ ಹೋರಾಟಕ್ಕಿಳಿಯುವುದಿಲ್ಲ. ಆದರೆ ಹೋರಾಟ ಮಾಡಿದ ತಮ್ಮಂದಿರಿಗೆ ಮೂಲಶಕ್ತಿಯಾಗಿದ್ದಾಳೆ ಈಕೆ. ಸ್ತ್ರೀತ್ವವನ್ನು ಪ್ರಕಟಪಡಿಸುವ ಅನೇಕ ಆಶಯಗಳು ಜನಪದ ಕಥೆಗಳಲ್ಲಿ ದೊರೆಯುತ್ತವೆ. ಇಲ್ಲಿ ಸಾಹಸದ ಕಾರ್ಯ ಸಾಧನೆ ಮಾಡುವವರು ಗಂಡು, ಆದರೆ ಇಡೀ ಕಥಾಹಂದರದೊಳಗೆ ಆತನ ಈ ಸಾಹಸದ ಚಲನಾಶಕ್ತಿಯಾಗಿ ಹೆಣ್ಣು ನಿರ್ವಹಿಸಲ್ಪಡುತ್ತಾಳೆ”[೮] ಇಲ್ಲಿ ಸೋದರರಿಗೆ ಪ್ರೇರಕ ಶಕ್ತಿಯೇ ರಾಯಮ್ಮ. ಮಾನವೀಯ ಗುಣಗಳಿಂದ ಕೂಡಿದ ಮಾತೃತ್ವದ ಸಾಕಾರ ಮೂರ್ತಿಯಾದವಳು. ಹೆಣ್ಣು ಈ ಅಂತಃಸತ್ವದೊಂದಿಗೇ ಅನಿವಾರ್ಯ ಸಂದರ್ಭವೊದಗಿದಾಗ ತನ್ನ ವೈಚಾರಿಕ ಚಿಂತನೆಗಳ ಮೂಲಕವಾಗಿ ಕ್ರಿಯಾಚಾಲಕ ಶಕ್ತಿಯಾಗಿ ನಿಲ್ಲುತ್ತಾಳೆ. ತಮ್ಮಂದಿರ ಕಾರ್ಯಸಾಧನೆಗಿಂತಲೂ ಇಲ್ಲಿ ಮುಖ್ಯವಾಗಬೇಕಾದದ್ದು, ಅದರ ಹಿಂದಿನ ಪ್ರೇರಕ ಶಕ್ತಿಯಾಗಿದ್ದ, ರೂವರಿಯಾಗಿದ್ದ ರಾಯಮ್ಮನ ಯೋಜನಾ ಚಾತುರ್ಯ. ಅದರ ಹಿಂದೆ ಕೆಲಸ ಮಾಡುತ್ತಿದ್ದುದು ಅವಳ ಪ್ರಕಾರ ವೈಚಾರಿಕ ಶಕ್ತಿ. ಮುಂದೆ ತನ್ನ ತಮ್ಮಂದಿರಲ್ಲಿ ಒಬ್ಬರ ಮಗನಾದ ಕಾಲನಾಯಕನ ಮಲ್ಲಯ್ಯ ತನ್ನ ಪಶುಸಂಪತ್ತು ಮತ್ತು ಬೆಡಗುಗಳೊಂದಿಗೆ ಶ್ರೀಶೈಲ ಪ್ರಾಂತ್ಯದಿಂದ ಮಧ್ಯ ಕರ್ನಾಟಕದ ಕಡೆ ಬರುತ್ತಿರುವಾಗ ಆನೆಗುಂದಿಯ ದೊರೆ ಇವರ ಪಶುಸಂಪತ್ತನ್ನು ತನ್ನದಾಗಿಸಿಕೊಳ್ಳಬೇಕು. ಎಂದು ಆಶಿಸಿ ಸೆರೆಹಿಡಿದಾಗ ಮೂಲನೆಲೆಯಲ್ಲಿಯೇ ಉಳಿದಿದ್ದ ರಾಯಮ್ಮ ಈ ಸಂಗತಿಯನ್ನು ತಿಳಿದು ತಕ್ಷಣವೇ ಬಂದು ಮಂತ್ರವಿದ್ಯೆಯನ್ನು ಬಳಸಿಕೊಂಡು ತನ್ನ ಬೇಡ ಗಂಪಳವನ್ನು ಆಪತ್ತಿನಿಂದ ಪಾರುಮಾಡುತ್ತಾಳೆ.

ಬುಡಕಟ್ಟು ಸಮಾಜಗಳಲ್ಲಿ ಮಾಟದಂತಹ ವಿದ್ಯೆಯೂ ಇರುತ್ತದೆ. ತಮಗೆ ಕೇಡು ಬಗೆದವರಿಂದ ತಮ್ಮನ್ನು ರಕ್ಷಿಸಿಕೊಳ್ಳಲೋ ಅಥವಾ ಪ್ರತಿಕೇಡು ಬಗೆಯಲು ಈ ಮಂತ್ರವಿದ್ಯೆಯನ್ನು ಬಳಸಿಕೊಳ್ಳುತ್ತಾರೆ. ಸಾಧಾರಣ ಮಾನವರ ಕೈಯಿಂದಾಗದ ವಿಷಯಗಳಿಗೆ ಬೇರೆ ಜಗತ್ತಿನ ಸಹಾಯ ಪಡೆದುಕೊಳ್ಳಲು ಮಾಟವು ನೆರವಾಗುತ್ತಿತ್ತು. ‘ಮಾಟ’ ಇದೊಂದು ಬೌದ್ಧಿಕ ಶಕ್ತಿಯಾಗಿದ್ದು, ಇದನ್ನು ಸಮುದಾಯ ಒಪ್ಪಿಕೊಂಡಿತ್ತು. ಇದನ್ನು ಕಲಿತವರಿಗೆ ಗೌರವವೂ ಇತ್ತು. ಈ ತಂತ್ರದ ಮೂಲಕ ರಾಯಮ್ಮ

ತನ್ನವರಿಗೆ ಎದುರಾಗಿದ್ದ ವಿಪತ್ತನ್ನು ಪರಿಹರಿಸುವಲ್ಲಿ ಅವಳ ಚಾಣಾಕ್ಷತನವನ್ನು ತೋರಿಸುತ್ತಾಳೆ. ನಾಯಕನ ಹಟ್ಟಿ ಪ್ರಾಂತ್ಯದಲ್ಲಿ ತನ್ನ ಬೇಡಗಂಪಳ ನೆಲೆಸಿದ್ದಾಗ ಪಶುಸಂಪತ್ತನ್ನು ವಶಪಡಿಸಿಕೊಳ್ಳಲು ನಿಡುಗಲ್ಲಿನ ಹೊಟ್ಟೆಣ್ಣನಾಯಕ ಆಕ್ರಮಣ ಮಾಡಿ ೧೪ ದಿನಗಳ ಕಾಲ ದನಕರು ಸಹ ಮೇಯಲು ಹೊರಗಡೆ ಹೋಗದಂತೆ ದಿಗ್ಬಂಧನ ಹಾಕಿದಾಗ ನಾಯಕರ ಪ್ರತಿಹೋರಾಟ ಫಲಪ್ರದವಾಗಿರುವುದಿಲ್ಲ. ಆಗ ವೃದ್ಧಾಪ್ಯದಲ್ಲಿದ್ದರೂ ರಾಯಮ್ಮನೇ ಕಾರ್ಯತಂತ್ರವನ್ನು ರೂಪಿಸಿ ಪ್ರತಿದಾಳಿ ನಡೆಸಲು ಹೊಟ್ಟೆಣ್ಣನಾಯಕ ಹೆದರಿ ಹಿಮ್ಮೆಟ್ಟುತ್ತಾನೆ. ಆ ಸ್ಥಳದಲ್ಲಿ ಅದರ ಸಂಕೇತವಾಗಿ ರಣಕಂಬಗಳನ್ನು ನೆಟ್ಟಿದ್ದಾರೆ. "ಮಹಿಳೆಯ ಸಾಮರ್ಥ್ಯ ಪ್ರಕಟಗೊಳ್ಳುವುದು ಅತ್ಯಂತ ಅವಶ್ಯಕ ಸಂದರ್ಭದಲ್ಲಿ ಮಾತ್ರ."[೯]

ಹೀಗೆಯೆ ಅವಶ್ಯಕ ಸಂದರ್ಭಗಳಲೆಲ್ಲಾ ಪ್ರಕಟಗೊಂಡಿದ್ದು ರಾಯಮ್ಮನ ಸಾಮರ್ಥ್ಯ. ಹೀಗೆ ತನ್ನಲ್ಲಿದ್ದ ಯುಕ್ತಿ ಮತ್ತು ಶಕ್ತಿಗಳ ಮೂಲಕ ಸಮುದಾಯದ ಆಂತರಿಕ ಸಮಸ್ಯೆಗಳನ್ನು ಮತ್ತು ಹೊರಗಿನಿಂದ ಬಂದ ಸಮಸ್ಯೆಗಳನ್ನು ಮುಖ್ಯವಾಗಿ ಆಕ್ರಮಣಕಾರಿ ಪ್ರಭುತ್ವವನ್ನು ಹಿಮ್ಮೆಟ್ಟಿಸುತ್ತಾಳೆ. ಆಕ್ರಮಣಕಾರಿ, ದಮನಕಾರಿ ಶತ್ರುಗಳನ್ನು ಹಿಮ್ಮೆಟ್ಟಿಸುವುದು ಸುಲಭದ ಮಾತೇನಲ್ಲ. ಅಂದರೆ ಹಿಮ್ಮೆಟ್ಟಿಸಿ ತನ್ನ ಸಂಸ್ಕೃತಿಯ ರಕ್ಷಣೆ ಮಾಡುತ್ತಾಳೆ. ಹೀಗೆ ಭಾರತೀಯ ಮಹಿಳೆಯರಲ್ಲಿ ಅಂತರ್ಗತವಾಗಿರುವ ಸಾಮರ್ಥ್ಯಕ್ಕೆ ಇವಳು ಉದಾಹರಣೆಯಾಗುತ್ತಾಳೆ.

ಸಾಮಾನ್ಯವಾಗಿ ಹೆಣ್ಣು ತಾನು ಕಳೆದುಕೊಂಡ ಸ್ಥಾನಮಾನಗಳನ್ನು ಪಡೆಯಲು ತನ್ನ ಹಕ್ಕಿನ ಹೋರಾಟವನ್ನು ಮಾಡುವುದು ಒಂದು ವಿಶಿಷ್ಟ ಸಂಗತಿಯಾಗುತ್ತದೆ. ಆದರೆ ಇಲ್ಲಿ ತನಗೆ ಮತ್ತು ತನ್ನ ತಮ್ಮಂದಿರಿಗೆ ಆಗುತ್ತಿರುವ ಅಪಮಾನದಿಂದ ಹೊರಬರಲು ತಂದೆ ತನ್ನ ಪಿತೃತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿ ಅವರ ಮುಂದಿನ ಬದುಕಿಗೆ ಬೇಕದ ದಾರಿಯನ್ನು ನಿರ್ಮಿಸಿಕೊಡುವ ಹೊಣೆಗಾರಿಕೆಯನ್ನು ಆತನಿಗೆ ಉಂಟುಮಾಡಿಸುವ ಮೂಲಕ ಪುರುಷರಿಗೆ ಸಹಾಯ ಮಾಡಿದ ಸಬಲೆಯಾಗುತ್ತಾಳೆ. ಒಟ್ಟಾರೆ ಅಕ್ಕರಾಯಮ್ಮನ ಬದುಕಿನ ಒಟ್ಟು ನಡೆಯನ್ನು ಗಮನಿಸಿದಾಗ ಕಥನದಲ್ಲಿಯೇ ಹೇಳಿರುವಂತೆ ಆಕೆ ಕಡು ಜಾಣೆ, ಆಕೆಯ ಶಕ್ತಿ, ಕುಶಲತೆಯಂತೂ ಆಕೆಯ ಸಹಜ ಜ್ಞಾನ ಎಂಬುದರಲ್ಲಿ ಎರಡು ಮಾತಿಲ್ಲ. ಸಿಮಾನ್ ದಿ ಬೋವಾ ಅವರು "ಹೆಣ್ಣು ನಿರ್ದಿಷ್ಟ ಸಾಮಾಜಿಕ ಪ್ರಕ್ರಿಯೆಗಳಿಂದ ಆಗುತ್ತಾಳೆಯೇ ಹೊರತೂ ಯಾರೂ ಹೆಣ್ಣಾಗಿಯೇ ಹುಟ್ಟುವುದಿಲ್ಲ. ಹೆಣ್ಣು ರೂಪಿಸಲ್ಪಟ್ಟವಳು ಎಂದು ಹೇಳುತ್ತಾರೆ."[೧೦] ಅಂದರೆ ಹೆಣ್ಣುತನ, ಅಬಲೆ, ಪರಾವಲಂಬಿ ಎನ್ನುವುದು ಆಕೆಯ ಸಹಜ ಗುಣವಲ್ಲ ಎಂಬುದನ್ನು ರಾಯಮ್ಮನ ಬದುಕಿನ ಮೂಲಕ ಇದು ಸ್ಪಷ್ಟಪಡಿಸುತ್ತದೆ. ಮುಖ್ಯವಾಗಿ ಹೆಣ್ಣಿಗೆ ತನ್ನ ಸಾಮರ್ಥ್ಯದಲ್ಲಿ ವಿಶ್ವಾಸವಿರಬೇಕಷ್ಟೆ. ಆಗ ಎಲ್ಲವೂ ಸಾಧ್ಯವಾಗುತ್ತದೆ. ರಾಯಮ್ಮನಲ್ಲಿದ್ದ ಪ್ರಕಾರ ವೈಚಾರಿಕ ಶಕ್ತಿ ಇವೆಲ್ಲದಕ್ಕೂ ಅವಳಿಗೆ ಸಾಧ್ಯ ಮಾಡಿಕೊಳ್ಳುವ ಹಾಗೆ ಮಾಡುತ್ತದೆ. ದಾಸ್ಯದ ಸಂಕಲೆಯಿಂದ ಹೆಣ್ಣು ಬಿಡುಗಡೆಯನ್ನು ಪಡೆಯಬೇಕಾದರೆ ದಿಟ್ಟತನ, ಸ್ಥೈರ್ಯ, ಧೈರ್ಯಗಳೆಲ್ಲವನ್ನೂ ತನ್ನಲ್ಲಿ ಅಳವಡಿಸಿಕೊಳ್ಳಬೇಕಾದರೆ ಪಾಶ್ಚಿಮಾತ್ಯ ಲೋಕದ

ಸ್ತ್ರೀಶಕ್ತಿಗಳನ್ನು ನೋಡಿ ಕಲಿಯಬೇಕೆಂಬ ತಿಳಿವಳಿಕೆ ಇರುವಂತಹ ಸನ್ನಿವೇಶಗಳಲ್ಲಿ ತಮ್ಮ ದೇಸೀಯ ನೆಲೆಯಲ್ಲಿರುವ ಸ್ತ್ರೀವಾದಿ ಧೋರಣೆಗಳನ್ನು ಕಟ್ಟಿಕೊಂಡು ಹೋರಾಟಕ್ಕೆ ಅಣಿಯಾಗಬೇಕಾದುದನ್ನು ರಾಯಮ್ಮನ ಅಂತಃಸತ್ವವನ್ನು ಮಾದರಿಯಾಗಿಟ್ಟುಕೊಂಡು ರೂಪಿಸಿಕೊಳ್ಳಬೇಕಾಗಿದೆ. ಮಾನವ ಸಮೂಹಕ್ಕಾಗಲೀ, ಒಂದು ನಿರ್ದಿಷ್ಟ ಜನಾಂಗಕ್ಕಾಗಲೀ ಅಥವಾ ತನ್ನ ಸಮುದಾಯಕ್ಕಾಗಲೀ ತನ್ನ ಕ್ರಿಯಾಶೀಲವಾದ ಹೋರಾಟದ ಮೂಲಕ ಅಗತ್ಯವಾದ ಸೌಲಭ್ಯಗಳನ್ನು ಅಥವಾ ನೀತಿ ಸಂಹಿತೆಗಳನ್ನು ಕಟ್ಟಿಕೊಟ್ಟವನ್ನು ಸಾಮಾನ್ಯವಾಗಿ ಆ ಗುಂಪಿನ ನಾಯಕ ಎಂದು ಪರಿಗಣಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪರಿಭಾವಿಸಿದಾಗ ರಾಯಮ್ಮ ಇಲ್ಲಿ ಹೋರಾಟದ ಮೂಲಕ ಅದಕ್ಕೆ ಬೇಕಾದ ನೀತಿ ನಿಯಮಗಳನ್ನು ರೂಪಿಸುವ ಮೂಲಕ, ತನ್ನ ಧೀಮಂತಿಕೆ ಹಾಗೂ ಕ್ರಿಯಾತ್ಮಕತೆಯ ಮೂಲಕ ಒಟ್ಟು ಸಮುದಾಯದ 'ಸಾಂಸ್ಕೃತಿಕ ನಾಯಕಿ' ಎನಿಸುವ ಎಲ್ಲಾ ಅರ್ಹತೆಗಳನ್ನು ಆಕೆ ಪಡೆಯುತ್ತಾಳೆ. ಹೀಗಾಗಿಯೇ ಈ ಸಮುದಾಯ ಈಕೆಯನ್ನು ಸ್ಮರಣೆಯಲ್ಲಿರಿಸಿಕೊಂಡು ಆರಾಧಿಸುತ್ತಾ ಬರುತ್ತಿದೆ. ಎಪ್ಪತ್ತೇಳು ಹಟ್ಟಿಗಳಿಗೆ ಈಕೆ ಅಕ್ಕ, ಹಿರಿಯಾಳು ಎಂದು ಗೌರವಿಸಲ್ಪಟ್ಟಿದ್ದಾಳೆ.

ವೇದಾವತಿ ನದಿಯ ಉಪನದಿಯ ಬಯಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಪ್ರಾಂತ್ಯದಲ್ಲಿ ಕಾಟಮಲ್ಲಿನಾಯಕನ ನೇತೃತ್ವದಲ್ಲಿ ಪಶುಸಂಪತ್ತಿನೊಂದಿಗೆ ಬಂದು ಬೇಡಗಂಪಳ ನೆಲೆಸಿತ್ತು. ಈ ಬೇಡಗಂಪಳಕ್ಕೂ ಮತ್ತು ನಿಡುಗಲ್ಲು ಪ್ರಾಂತ್ಯದಲ್ಲಿದ್ದ ಹೊಟ್ಟಣ್ಣನಾಯಕನಿಗೂ ಘರ್ಷಣೆಯಾಗುತ್ತದೆ. ಮ್ಯಾಸಬೇಡರ ಪಶುಸಂಪತ್ತನ್ನು ಹೊಟ್ಟಣ್ಣನಾಯಕ ಸೆರೆಹಿಡಿದು ಕೊಂಡೊಯ್ಯಲು ಬಂದಿರುತ್ತಾನೆ. ಆಗ ಈ ಅಕ್ಕರಾಯಮ್ಮನ ನೇತೃತ್ವದಲ್ಲಿ ಕಾಳಗ ನಡೆದು ಮ್ಯಾಸರು ವಿಜಯ ಸಾಧಿಸುತ್ತಾರೆ. ಸ್ವಲ್ಪ ಸಮಯದಲ್ಲಿಯೇ ಈ ಬೇಡಗಂಪಳದ ಮಧ್ಯೆ ಬಿನ್ನಾಭಿಪ್ರಾಯಗಳು ತಲೆದೂರಿ ಒಡಕುಂಟಾಗುತ್ತದೆ. ತಮ್ಮ ಪಶುಸಂಪತ್ತನ್ನೂ ಪೆಟ್ಟಿಗೆ ದೇವರುಗಳನ್ನೂ ಇನ್ನುಳಿದ ಸ್ವತ್ತುಗಳನ್ನು ಹಂಚಿ ಮಾಡಿಕೊಳ್ಳಬೇಕೆಂದೂ ಬಯಸುತ್ತಾರೆ. ಆಗ ಅಕ್ಕರಾಯಮ್ಮನ ನಿರ್ದೇಶನದಂತೆಯೇ ಇವೆಲ್ಲವೂ ಹಂಚಿಕೆಯಾಗುತ್ತವೆ. ಎಲ್ಲರಿಗಿಂತ ಹಿರಿಯವಳು ಅಕ್ಕರಾಯಮ್ಮ ಎಂದು ಆಕೆಯ ಹೆಸರಿನಲ್ಲೂ ಒಂದು ಪೆಟ್ಟಿಗೆಯನ್ನು ಮಾಡಿಸಿ ಆಕೆಗೆ ಸಂಬಂಧಿಸಿದ ಸ್ವತ್ತುಗಳನ್ನು ಅದರಲ್ಲಿಡುತ್ತಾರೆ. ಒಟ್ಟಿಗೆ ದೇವರುಗಳನ್ನೂ ಹಂಚಿಕೆಮಾಡಿಕೊಳ್ಳುತ್ತಾರೆ. ಹೀಗೆ ಹಂಚಲ್ಪಟ್ಟ ಪೆಟ್ಟಿಗೆಗಳಲ್ಲಿ ಅಕ್ಕರಾಯಮ್ಮನ ಪೆಟ್ಟಿಗೆ ಎನಮಲವರ ಗುಂಪಿಗೆ ಸೇರಿದ 'ಮಂಡೇನವರ' ಬೆಡಗಿನವರ ಉಸ್ತುವಾರಿಕೆಗೆ ಬರುತ್ತದೆ. ಎನುಮಲರು ಅಕ್ಕರಾಯಮ್ಮನಿಗೆ ತವರಿನವರಾಗಬೇಕು. ಆಗ ಅದೇ ನಾಯಕನ ಹಟ್ಟಿ ಪ್ರಾಂತ್ಯದಲ್ಲಿರುವ ದೇವರಹಳ್ಳಿಯಲ್ಲಿ ಈ ಪೆಟ್ಟಿಗೆ ಇದ್ದು, ಮುಂಡೇನವರು ಅದನ್ನು ಪೂಜೆ ಮಾಡುತ್ತಾರೆ. ಇದುವರೆಗೂ ಇದನ್ನು ದಡ್ಡಲು ಮಾರಮ್ಮನ ಪೆಟ್ಟಿಗೆ ಎಂದು ಕರೆಯಲಾಗುತ್ತದೆ. ಅಕ್ಕರಾಯಮ್ಮ ಉಪಯೋಗಿಸಲ್ಪಡುತ್ತಿದ್ದ ಗುಂಡುಗೊಡಲಿ, ತ್ರಿಶೂಲ, ಕತ್ತಿ, ಚಾಕು ಈ ದೇವಸ್ಥಾನದಲ್ಲಿದೆ ಎಂದು ಹೇಳುತ್ತಾರೆ. ಅವುಗಳನ್ನು ರೇಷ್ಮೆಬಟ್ಟೆಯಲ್ಲಿ ಕಟ್ಟಿಡಲಾಗಿದ್ದು, ವಿಶೇಷ ಸಂದರ್ಭಗಳಲ್ಲಿ ಮಾತ್ರ ಅವುಗಳನ್ನು ಹೊರತೆಗೆದು ಪೂಜಿಸಲಾಗುತ್ತದೆ ಎಂದು ಅಲ್ಲಿಯ ಹಿರಿಯ ಪೂಜಾರಿಗಳ ಹೇಳಿಕೆಯಾಗಿದೆ. ಹಿರೇಹಳ್ಳಿ, ಗುಡಿಕಟ್ಟಿಗೆ ಸೇರಿದವರು ರಣಗಂಬಗಳ ಬಳಿ 'ಪಾಸ' ಕೊಯ್ಯುವ ಸಂಪ್ರದಾಯವಿದೆ. ಮುಖ್ಯವಾಗಿ

ಇಲ್ಲಿ ಪಾಲ್ಗೊಳ್ಳುವವರು ಎತ್ತುಗಳವರು ಎಂಬ ಬೆಡಗಿಗೆ ಸೇರಿದವರು. ಆಗ ಮಾತ್ರ ಈ ಆಯುಧಗಳ ಗಂಟನ್ನು ಬಿಚ್ಚಿ ಪೂಜೆ ಮಾಡಲಾಗುತ್ತದೆ. ದಿನಾಂಕ ೦೬.೦೩.೨೦೦೬ರಂದು ಇತ್ತೀಚೆಗೆ ರಣಗಂಬಗಳ ಬಳಿ 'ವಾಸೆ' ಕೊಯ್ದು ನೇಮವನ್ನು ಮಾಡಿದರು. ಆ ಆಯುಧಗಳ ಗಂಟನ್ನು ಗಂಗೆಪೂಜೆಗೆ ತೆಗೆದುಕೊಂಡು ಹೋಗಲಾಗಿತ್ತು. ದಡ್ಲು ಮಾರಮ್ಮನ ಪೂಜಾರಿ ದೇವರೆತ್ತುಗಳ ಕಿಲಾರಿಗಳ ಕೈಗೆ ರೇಷ್ಮೆಯ ಬಟ್ಟೆಯಲ್ಲಿ ಸುತ್ತಿದ್ದ ಆಯುಧಗಳನ್ನು ಕೊಟ್ಟನು. ಗಂಗೆಪೂಜೆ ಮಾಡಿತಂದು ಅಕ್ಕರಾಯಮ್ಮನ ನೋಮು ಎಂದು ಆಯುಧಗಳ ಗಂಟು ಮತ್ತು ದಡ್ಲುಮಾರಮ್ಮನ ಪೆಟ್ಟಿಗೆ ಮುಂದೆ ವಾಸು ಕೊಯ್ದನು. ಗಂಟನ್ನು ಬಿಚ್ಚಿ ಆಯುಧಗಳನ್ನು ಯಾರೂ ನೋಡಲಿಲ್ಲ ಕಾರಣ ನೋಡಬಾರದು ಎಂಬ ಪ್ರತೀತಿ ಇದೆ.

ಪರಸೆ (ಜಾತ್ರೆ):

ದೇವರಹಳ್ಳಿಯ ದಡ್ಡಲು ಮಾರಮ್ಮನಿಗೆ ಇಲ್ಲಿ ಆಚರಿಸುವ ವಿಶೇಷವಾದ ಆಚರಣೆಯಿದು. ಯುಗಾದಿ ಹಬ್ಬದ ದಿನ ಮಂಗಳವಾರ ಬಂದರೆ ಅದೇದಿನ ಹಬ್ಬ ಇಲ್ಲದಿದ್ದರೆ ಯುಗಾದಿಯ ನಂತರ ಬರುವ ಮೊದಲ ಮಂಗಳವಾರ ಜಾತ್ರೆನಡೆಸಲಾಗುತ್ತದೆ. ಒಟ್ಟು ಆ ಊರಿನ ಜನತೆಗೆ ಅಂದೇ ಯುಗಾದಿ ಹಬ್ಬ. ಅದುವರೆಗೂ ಅವರು ಬೇವು-ಬೆಲ್ಲ ತಿನ್ನುವುದಿಲ್ಲ. ಜಾತ್ರೆಗೆ ಒಂದುವಾರ ಮೊದಲು ಎಲ್ಲರೂ ದೇವಸ್ಥಾನದ ಬಳಿ ಕಲೆತು ಮಾತನಾಡುತ್ತಾರೆ. ಮ್ಯಾಸರಷ್ಟೇ ಅಲ್ಲದೆ ಹಳ್ಳಿಯ ಲಿಂಗಾಯತ ಜಾತಿಯವರಾದ ಗೊಂಚಿಗಾರರು, ಗೊಲ್ಲರ ಸಮುದಾಯದ ಗೌಡರು ಎಲ್ಲರೂ ಇಲ್ಲಿ ನೆರೆದಿರುತ್ತಾರೆ. ಮುಂದಿನ ಮಂಗಳವಾರ ಜಾತ್ರೆ ಎಂದು ಮಾದಿಗ ಜಾತಿಗೆ ಸೇರಿದ ವ್ಯಕ್ತಿ ಸಾರುತ್ತಾ ಬರುತ್ತಾನೆ. ಅಂದಿನಿಂದ ಊರಿನಲ್ಲಿ ಹೊಸಬಟ್ಟೆ ಉಡುವಂತಿಲ್ಲ. ತಲೆಗೆ ಸ್ನಾನ ಮಾಡುವಂತಿಲ್ಲ. ಪೊರಕೆಯಿಂದ ಕಸಗುಡಿಸುವಂತಿಲ್ಲ. ಬದಲಾಗಿ ಬಟ್ಟೆಯಿಂದಲೇ ಗುಡಿಸಬೇಕು. ಈ ನಿಯಮಗಳನ್ನು ಈಗಲೂ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಮರು ಮಂಗಳವಾರದ ವೇಳೆಗೆ ಊರಲ್ಲಿ ಪ್ರತಿಮನೆಗೂ ಸುಣ್ಣ ಬಣ್ಣ ಬಳಿದು, ದೇವಾಲಯವನ್ನು ಶುಚಿಗೊಳಿಸಿ ಊರಿಗೆ ಊರೇ ಜಾತ್ರೆಗೆ ಅಣಿಯಾಗುತ್ತದೆ. ಮಾರಮ್ಮನ ಗುಡಿಯ ಬಳ್ಳಿ ಹಳ್ಳಿಯವರು, ಸುತ್ತಮುತ್ತಲ ಹಳ್ಳಿಯ ಜನರು ಬಹುಪಾಲು ಮ್ಯಾಸನಾಯಕರು ಬಂದು ಸೇರುತ್ತಾರೆ. ಚಿಗಳಿ, ತಂಬಿಟ್ಟು, ಹಣ್ಣು ಕಾಯಿ, ಹೂವು, ಎಲೆ-ಅಡಿಕೆಯನ್ನು ಒಂದು ಬುಟ್ಟಿಗೆ ತುಂಬಿಕೊಂಡು ಮಾರಮ್ಮನ ಪೆಟ್ಟಿಗೆಯನ್ನು ಪೂಜಾರಿ ತಲೆಯ ಮೇಲೆ ಹೊತ್ತಿರಲು ಹೆಂಗಳೆಯರು ಕಳಸ, ಆರತಿ ಹಿಡಿದಿರಲು ಈ ವಿಜೃಂಭಣೆಯ ಮಧ್ಯೆ ಉರುಮೆ, ತಮಟೆ, ಕಹಳೆ ಮುಂತಾದ ವಾದ್ಯಗಳ ಧ್ವನಿಯೊಂದಿಗೆ ಹೊಳೆಗೆ ಗಂಗಾಪೂಜೆಗೆ ಬಂದು ಸೇರುತ್ತಾರೆ. ಅಲ್ಲಿ ಪೆಟ್ಟಿಗೆಯಲ್ಲಿರುವ ಮಾರಮ್ಮ ಅರ್ಥಾತ್ ರಾಯಮ್ಮನಿಗೆ ಸಂಬಂಧಿಸಿದ ವಸ್ತುಗಳನ್ನು, ಸಾಲಿಗ್ರಾಮಗಳನ್ನು ತೊಳೆದು ಅದರಲ್ಲಿಯೇ ಇಡುತ್ತಾರೆ. ಇದನ್ನು ಪೂಜಾರಿ ಮಾತ್ರ ಮಾಡುತ್ತಾನೆ. ಬೇರೆ ಯಾರೂ ಇದನ್ನು ನೋಡುವಂತಿಲ್ಲ. ನಂತರ ಗಂಗೆಪೂಜೆ ಮಾಡುತ್ತಾರೆ. ಆ ಸಂದರ್ಭದಲ್ಲಿ ಗೌಡರು ಹೆಗಲ ಮೇಲೆ ಕಂಬಳಿ ಹಾಕಿಕೊಂಡು ಒಂದು ಕುರಿಮರಿಯನ್ನು ಹಿಡಿದು

ತಂದಿರುತ್ತಾರೆ. 'ದೊಳುಮರಿ' ಎಂದು ಇಲ್ಲಿ ಅದನ್ನು ಕಡಿಯುತ್ತಾರೆ. ನಂತರ ಪೆಟ್ಟಿಗೆಯನ್ನು ಅಲಂಕರಿಸಿಕೊಂಡು ಹೊಸಬಟ್ಟೆ, ಹೂವು, ಆಭರಣಗಳಿಂದ ಕಂಗೊಳಿಸುತ್ತಿರಲು ಪೂಜಾರಿ ಹೊತ್ತಿರಲು ಮೆರವಣಿಗೆಯಲ್ಲಿ ವೈಭವದಿಂದ ಊರಿಗೆ ಮರಳುತ್ತಾರೆ.

ಊರಿನಲ್ಲೆಲ್ಲಾ ಆ ರಾತ್ರಿ ಮೆರವಣಿಗೆ ಮಾಡುತ್ತಾರೆ. ಮಧ್ಯರಾತ್ರಿ ಒಂದು ಗಂಟೆಯ ವೇಳೆಗೆ ಅಮ್ಮನನ್ನು ಗುಡಿ ತುಂಬಿಸುತ್ತಾರೆ. ನಂತರ ಹುತ್ತಕ್ಕೆ ಹೋಗಿ ಮಣ್ಣನ್ನು ತಂದು ಮಾರಮ್ಮನ ಪ್ರತಿಮೆಯನ್ನು ಮಾಡಿ ದಡ್ಡಲು ಮಾರಮ್ಮನ ಗುಡಿಯ ಮುಂಭಾಗದಲ್ಲಿ ಸ್ವಲ್ಪ ಅಂತರದಲ್ಲಿ ಒಂದು ಹಸಿರು ಸೊಪ್ಪಿನ ಗುಡಿಸಲನ್ನು ಹಾಕಿ ಅದನ್ನು ಇಡುತ್ತಾರೆ. ಹೂವು, ಕುಂಕುಮ, ಅರಿಶಿಣ ಹಾಕಿ ಪೂಜೆ ಮಾಡುತ್ತಾರೆ. ಲಿಂಗಾಯತರಾದ ಗೊಂಚಿಗಾರರು(ಊರ ಜಮೀನ್ದಾರರು) ಮನೆಯಿಂದ ಅನ್ನದ ಕರಬಾನ(ಮಣ್ಣಿನ ಸೊರೆ)ವನ್ನು ಹೊತ್ತು ತರುತ್ತಾರೆ. ಸೊಪ್ಪಿನ ಗುಡಿಸಲಿನಲ್ಲಿರುವ ಮಾರಮ್ಮನ ಮೂರ್ತಿಯ ಮುಂದೆ ಸರಗದ ಕೋಣವನ್ನು ಕಡಿದು ಸೊಪ್ಪಿನ ಗುಡಿಸಲಿನಲ್ಲಿರುವ ಗೊಂಚಿಗಾರರು ತಂದಿಡುವ ಕರಬಾನಕ್ಕೆ ರಕ್ತ ಮತ್ತು ಕರಸನ್ನು ಬೆರೆಸುತ್ತಾರೆ. ಅಲ್ಲಿಯೇ ಉಲುವಿನ ಕುಣಿ ಎಂದು ಒಂದು ತಗ್ಗು ತೆಗೆದಿರುತ್ತಾರೆ. ಆ ತಗ್ಗಿಗೆ ಈ ಅನ್ನವನ್ನು ಸ್ವಲ್ಪಭಾಗ ಹಾಕುತ್ತಾರೆ. ಆ ತಗ್ಗನ್ನು ಮುಚ್ಚುತ್ತಾರೆ. ನಂತರ ಆ ಸರಗದ ಕರಬಾನವನ್ನು ಗೊಂಚಿಗಾರರೇ ಹೊತ್ತುಕೊಳ್ಳುತ್ತಾರೆ.

ಇವರು ಸೋಮವಾರ ರಾತ್ರಿ ಉಪವಾಸ ವ್ರತ ಹಿಡಿದವರು ಬುಧವಾರ ಅಮ್ಮನನ್ನು ಕಳುಹಿಸುವವರೆಗೂ ಊಟ ಮಾಡುವುದಿಲ್ಲ. ಅಷ್ಟು ನಿಷ್ಠೆಯಿಂದ ಆತ ಸರಗದ ಸೋರೆ ಮಾಡುತ್ತಾನೆ. ಊರ ಸುತ್ತ ಇದನ್ನು ಹೊತ್ತು ಬರುತ್ತಿರುವಾಗ ಮಣೆಗಾರರು ಆ ಸೊರೆಯಿಂದ ಅನ್ನವನ್ನು ತೆಗೆದುಕೊಂಡು ಚೆಲ್ಲುತ್ತಾ ಬರುತ್ತಾರೆ. ಆ ರಾತ್ರಿ ಇದು ಮುಖ್ಯವಾದ ಕಾರ್ಯಕ್ರಮ. ಬೆಳಗಿನ ಜಾವದ ವೇಳೆಗೆ ಇದು ಮುಗಿಯುತ್ತದೆ. ಮರುದಿನ ಅಂದರೆ ಬುಧವಾರ ಬೆಳಗ್ಗೆ ಪೂಜಾರಿಯೇ ಬೇವುಬೆಲ್ಲ ಕಲಸಿ ಮಾರಮ್ಮನಿಗೆ ನೈವೇಧ್ಯ ಮಾಡುತ್ತಾರೆ. ಊರಿನಲ್ಲಿರುವ ಪ್ರತಿ ಮನೆಯವರೂ ಅವರವರ ಆಹಾರ ಪದ್ದತಿಗೆ ಅನುಗುಣವಾಗಿ ನೈವೇಧ್ಯ ತರುತ್ತಾರೆ. ನಾಯಕರಲ್ಲಿ ಕುರಿಯನ್ನು ಕಡಿದು, ಬೇವಿನ ಸೊಪ್ಪನ್ನು ಹಿಡಿದು, ಗುಡಿಯ ಸುತ್ತ ಪ್ರದಕ್ಷಿಣೆ ಹಾಕಿ, ನಮಸ್ಕರಿಸಿ ಹರಕೆ ತೀರಿಸುತ್ತಾರೆ. ಇವರನ್ನು ಬಿಟ್ಟರೆ ಊರಿನ ಮತ್ತೊಂದು ಪ್ರಮುಖ ಗುಂಪು ಲಿಂಗಾಯತರದು. ಅವರೆಲ್ಲಾ ಪಾಯಸ, ಹೋಳಿಗೆ, ಬೇವು-ಬೆಲ್ಲ ತಂದು ಹಣ್ಣುಕಾಯಿಯೊಂದಿಗೆ ನೈವೇಧ್ಯ ಮಾಡಿಸಿ ಬೇವಿನ ಸೀರೆ ಎಂದು ಸಾಂಕೇತಿಕವಾಗಿ ಕೈಯ್ಯಲ್ಲಿ ಬವೇವಿನ ಸೊಪ್ಪನ್ನು ಹಿಡಿದು ದೇವಸ್ಥಾನವನ್ನು ಪ್ರದಕ್ಷಿಣೆ ಮಾಡಿ ಭಯ ಭಕ್ತಿಯಿಂದ ನಮಸ್ಕರಿಸುತ್ತಾರೆ. ಸುತ್ತಮುತ್ತಲ ಹಳ್ಳಿ ಹಟ್ಟಿಗಳಿಂದ ಸಾಕಷ್ಟು ಮಂದಿ ಬಂದು ಹೀಗೆಯೇ ಹರಕೆ ತೀರಿಸುತ್ತಾರೆ. ಲಂಬಾಣಿ ಸಮುದಾಯದವರು ಸುತ್ತಮುತ್ತಲ ಹಟ್ಟಿಗಳಲ್ಲಿದ್ದು ಅವರೂ ಕುರಿಕೋಳಿಯ ಬಲಿ, ಬೇವಿನ ಸೀರೆಯು ಬಾಯಿ ಬೀಗದ ಸೇವೆ ಸಮರ್ಪಿಸುತ್ತಾರೆ. ಮುಖ್ಯವಾಗಿ ಇಲ್ಲಿ ಅರ್ಜುನ ಜೋಗಿಗಳ ಸಮುದಾಯದವರೂ ಮತ್ತು ಲಂಬಾಣಿಗಳೂ ಇಲ್ಲಿ ಬಂದು ತಮ್ಮ ಹರಕೆಗಳನ್ನು ಭಕ್ತಿಪೂರ್ವಕವಾಗಿ ಸಮರ್ಪಿಸುತ್ತಾರೆ.

ಸುಮಾರು ಮಧ್ಯಾಹ್ನ ಒಂದು ಗಂಟೆಯ ವೇಳೆಗೆ ಈ ಸೇವೆಗಳೆಲ್ಲಾ ಸಲ್ಲುತ್ತವೆ. ಜಾತ್ರೆಗೆ ಬಂದ ಗಾಡಿಗೆ ಹೂಡಿದ ಎತ್ತುಗಳಲ್ಲದೆ ಆ ಊರಿನ ಮತ್ತು ಸುತ್ತಮುತ್ತಲ ಹಳ್ಳಿಗಳ ದನ, ಆಕಳು, ಕುರಿ, ಮೇಕೆಗಳನ್ನು ಹೊಡೆದುಕೊಂಡು ಬಂದು ಇಲ್ಲಿ ಬೇವಿನ ಸೀರೆ ಎಂದು ಸಾಂಕೇತಿಕವಾಗಿ ಬೇವಿನಸೊಪ್ಪನ್ನು ಸಿಕ್ಕಿಸಿ ಮಾರಮ್ಮನ ಗುಡಿಯ ಸುತ್ತ ಪ್ರದಕ್ಷಿಣೆ ಹಾಕಿಸುತ್ತಾರೆ. ತಮ್ಮನ್ನೂ, ತಮ್ಮ ದನ, ಕರು, ಕುರಿ, ಮೇಕೆಗಳನ್ನು ಕಾಯುವ ದೇವತೆ ಈಕೆ ಎಂಬುದೇ ಇವರ ನಂಬಿಕೆ. ಮಧ್ಯಾಹ್ನ ಸುಮಾರು ಒಂದು ಗಂಟೆಯ ವೇಳೆಗೆ ಅಮ್ಮನನ್ನು ಸಾಗಹಾಕುವುದು ಎಂಬ ಕಾರ್ಯಕ್ರಮ ಮಾಡುತ್ತಾರೆ. ಊರ ಪ್ರಮುಖರು ಮತ್ತು ಪೂಜಾರಿ, ಗಟ್ಟಿ ಮುತ್ತಿನಾಯಕ ಇವರಲ್ಲಿ ಇಲ್ಲಿ ಇರಲೇಬೇಕು. ಸೊಪ್ಪಿನ ಗುಡಿಸಲಿನಲ್ಲಿ ಇಟ್ಟಿದ್ದ ಮಣ್ಣಿನ ಮಾರಮ್ಮನ ಮೂರ್ತಿಯನ್ನು ತೆಗೆದುಕೊಂಡು ಹೋಗಿ ತಮ್ಮ ಹಳ್ಳಿಯ ಗಡಿಭಾಗದಲ್ಲಿನ ಒಂದು ಮರದ ಕೆಳಗೆ ಇಟ್ಟು ಬರುತ್ತಾರೆ. ಅಲ್ಲಿಗೆ ಜಾತ್ರೆಯ ವಿಧಿಗಳು ಮುಗಿಯುತ್ತವೆ.

ಅಕ್ಕರಾಯಮ್ಮ ಎಪ್ಪತ್ತೇಳು ಹಟ್ಟಿಗಳಿಗೆ ಅಕ್ಕನಾಗಿದ್ದವಳು. ಎಪ್ಪತ್ತೇಳು ಬೆಡಗು ಎಂದರೆ ಛತ್ರಿ ಚಾಮರಗಳಿಗೆ ಅಕ್ಕ ಎಂದಲ್ಲಾ ಈಕೆಯನ್ನು ಹೊಗಳುತ್ತಾರೆ. ಹೀಗೆ ಸಮಸ್ತ ಮ್ಯಾಸಮಂಡಲಕ್ಕೆ ಶ್ರೇಷ್ಠ ಶಕ್ತಿಯೆನಿಸಿ ಹಿರಿತನದ ಸ್ಥಾನವನ್ನು ಪಡೆದಿರುವವಳು ಈಕೆಯಾದ್ದರಿಂದ ಎಲ್ಲರೂ ಈಕೆಯನ್ನು ಭಕ್ತಿಯಿಂದ ಪೂಜಿಸುತ್ತಾರೆ. ಕೆಲವು ಹಳ್ಳಿ, ಹಟ್ಟಿಗಳವರು ದೇವರಹಳ್ಳಿಗೆ ಬಂದು ಈಕೆಯನ್ನು ತಮ್ಮಲ್ಲಿಗೆ ಕರೆದೊಯ್ಯುತ್ತಾರೆ. ಊರ ಅಥವಾ ಹಟ್ಟಿಯ ಯಜಮಾನರು ಬಂದು ಮೊದಲು ಆಹ್ವಾನವಿತ್ತು, ಇಂತಹ ದಿನ ತಮ್ಮಲ್ಲಿಗೆ ಬರಬೇಕು ಎಂದು ತಿಳಿಸಿ ಹೋಗುತ್ತಾರೆ. ಒಮ್ಮೊಮ್ಮೆ ಇಡೀ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗುವುದೂ ಉಂಟು. ಕೆಲವೊಮ್ಮೆ ಭಂಡಾರ ಭರಣಿಯನ್ನು ಮಾತ್ರ ಸಾಂಕೇತಿಕವಾಗಿ ಹೊತ್ತೊಯ್ಯುತ್ತಾರೆ. ವಿಜೃಂಭಣೆಯಿಂದ ಹೀಗೆ ಹೊರಟ ಅಕ್ಕರಾಯಮ್ಮ ಹಳ್ಳಿಗಳ ಮೇಲೆ ಹೋಗಿ ಆಕೆಯನ್ನು ಕೂರಿಸಲು ಒಂದು ಸೂಕ್ತವಾದ ಸ್ಥಳವನ್ನು ಗುರುತಿಸಿರುತ್ತಾರೆ. ಅಲ್ಲಿ ದೇವರಹಳ್ಳಿಯಲ್ಲಿ ಜಾತ್ರೆಯ ದಿನದ ಆಚರಣೆಗಳೆನಿಸಿವೆ. ಅವೆಲ್ಲಾ ವಿಧಿವಿಧಾನಗಳನ್ನು ಇಲ್ಲಿ ನೆರವೇರಿಸಲಾಗುತ್ತದೆ. ಕಬ್ಬಿಣದ ಬಲಿ, ಸರಗ ಚೆಲ್ಲುವುದು, ಅಮ್ಮನನ್ನು ಸಾಗ ಹಾಕುವುದು, ಬಾಯಿಬೀಗ, ಬೇವಿನಸೀರೆ ಸೇವೆ ಇವೆಲ್ಲಾ ಅಲ್ಲಿ ಮುಖ್ಯವಾಗಿ ನಡೆಯುವ ಆಚರಣೆಗಳು. ಹೀಗೆ ಈಕೆ ದೇವರಹಳ್ಳಿಗೆ ಮಾತ್ರ ಮಾರಮ್ಮನಲ್ಲ. ಸಮಸ್ತ ಮ್ಯಾಸಮಂಡಲಗಳ ಹಟ್ಟಿಗಳಿಗೆಲ್ಲಾ ಅದಿದೇವತೆಯಾಗಿ ಪೂಜಿಸಲ್ಪಡುತ್ತಿದ್ದಾಳೆ. ಅನೇಕ ನೆಲೆಗಳಲ್ಲಿ ಈಕೆಯನ್ನು ಆರಾಧಿಸುತ್ತಾ ಈ ಸಮುದಾಯ ಸ್ಮರಣೆಯಲ್ಲಿರಿಸಿಕೊಂಡಿದೆ. ಹೀಗೆ ಅನನ್ಯತೆಗೆ ಏರಿದ ಈ ಮಹಿಳೆ ನಂತರದ ಪೀಳಿಗೆಯಲ್ಲಿ ಧ್ರುವೀಕರಣಗೊಂಡಿದ್ದಾಳೆ. ಹಾಗಾಗಿಯೇ ಈಕೆಯನ್ನು ಸಂಚುಲಕ್ಷ್ಮಿ ಎಂದು ಕರೆದು ಅಹೋಬಲ ನರಸಿಂಹಸ್ವಾಮಿಗೆ ಪ್ರಿಯಳಾದ ಇವಳು ಅವನೊಂದಿಗೆ ಗುರುತಿಸಲ್ಪಡುತ್ತಿದ್ದಾಳೆ. ನರಸಿಂಹಸ್ವಾಮಿ ಮತ್ತು ಸಂಚುಲಕ್ಷ್ಮಿ ಗಂಡ ಹೆಂಡತಿಯರು. ಈಕೆಯೇ ಕಾಳಿಂಗರಂಗನ ಪತ್ನಿ ಭಾಗ್ಯದ ಲಕ್ಷ್ಮಮ್ಮ ಎಂದೆಲ್ಲಾ ಹೇಳಲಾಗುತ್ತದೆ.

ಮಲಿಯಮ್ಮ

"ಆಹಾರ ಸಂಗ್ರಹಣೆಯನ್ನಾಧರಿಸಿದ ಸಮುದಾಯಗಳು ಸಾಧಾರಣವಾಗಿ ಮಾತೃದೇವತೆಗಳನ್ನು ಆರಾಧಿಸುವ ಪದ್ದತಿಯನ್ನು ಹೊಂದಿರುತ್ತವೆ. ಅಲ್ಲಿಯ ವ್ಯವಸ್ಥೆಯು ಕೂಡ ಮಾತೃಕುಟುಂಬದ ವ್ಯವಸ್ಥೆಯೇ ಆಗಿರುತ್ತದೆ. ಅಲ್ಲಿಂದ ಎರಡನೆಯ ಹಂತವಾದ ಪಶುಪಾಲಕತನಕ್ಕೆ ಬಂದಾಗ ಇಲ್ಲಿ ಕಾಣಿಸಿಕೊಳ್ಳುವುದೇ ಪಿತೃಪ್ರಾಧನ್ಯತೆ ಮತ್ತು ಅದರೊಂದಿಗೆ ಪುರುಷ ದೇವತೆಗಳ ಆರಾಧನೆ. ಈ ಪುರುಷ ದೇವರುಗಳು ಸಾಮಾನ್ಯವಾಗಿ ಆಯಾ ಸಮುದಾಯಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ನಾಯಕರೇ ಆಗಿರುತ್ತಾರೆ. ಚರಿತ್ರೆಯ ಪರಿಕ್ರಮದಲ್ಲಿ ಮಾತೃದೇವತೆಗಳನ್ನು ಆರಾಧಿಸುವ ಪಶುಪಾಲಕರೂ ಕಂಡುಬರುತ್ತಾರೆ ಎನ್ನುತ್ತಾರೆ. ಡಿ. ಡಿ ಕೋಸಾಂಬಿಯವರು ಪಶುಪಾಲಕರಲ್ಲಿ ಗಂಡುದೇವರುಗಳು ಮಾತ್ರವೇ ಇರಲು ಸಾಧ್ಯ ಎನ್ನುವುದು ಒಂದು ವಿತಂಡವಾದ ಎನ್ನುತ್ತಾರೆ."[೧೧]

ಪಶುಪಾಲಕರಾದ ಮ್ಯಾಸಬೇಡರ ಸಂಸ್ಕೃತಿಯನ್ನು ಅವಲೋಕಿಸಿದಾಗ ಕೋಸಂಬಿಯವರ ಅಭಿಪ್ರಾಯದಂತೆಯೇ ಈ ಪಶುಪಾಲಕರಲ್ಲಿ ಅನೇಕ ಮಾತೃದೇವತೆಗಳನ್ನು ಆರಾಧಿಸುವ ಪರಂಪರೆಯಿದೆ. ಅಂದರೆ ಪುರುಷ ರಾಜಕಾರಣ ವಿಜೃಂಭಿಸುವ ವ್ಯವಸ್ಥೆಯ ಮಧ್ಯೆಯೂ ಇವರು ಪೂಜಿಸಿಕೊಳ್ಳುತ್ತಿರುವವರೆಂದರೆ ಇದಕ್ಕೆ ಇವರ ಸತ್ಯ, ಅನನ್ಯತೆ, ಸಮುದಾಯಕ್ಕೆ ಇವರಿಂದ ಸಂದ ಕೊಡುಗೆ ಕಾರಣವೇ ಹೊರತು ಬೇರೆ ಏನೂ ಅಲ್ಲ. ಹೀಗೆ ಆರಾಧಿಸಲ್ಪಡುತ್ತಿರುವ ನಾಯಕಿಯರಲ್ಲಿ ಮಲೆಯಮ್ಮನೂ ಒಬ್ಬಳು. ಈ ಹಿಂದೆ ಈಕೆಯ ಬಗ್ಗೆ ಮ್ಯಾಸಮಂಡಲದಲ್ಲಿ ಪ್ರಚಲಿತವಾಗಿರುವ ಪುರಾಣಗಳನ್ನು ವಿವರವಾಗಿ ಕೊಡಲಾಗಿದ್ದು ಈ ಮೂಲಕ ಬಹುಶಃ ಮಲೆಯಮ್ಮನನ್ನು ಹೀಗೆ ಗ್ರಹಿಸಬಹುದು.

ಪಶುಪಾಲಕತನದಲ್ಲಿ ಬರೀ ಪುರುಷನಷ್ಟೇ ಪಶುಪಾಲಕನಲ್ಲ. ಅವನೊಂದಿಗೆ ಆಕೆಯೂ ಅಂದರೆ ಮಹಿಳೆಯೂ ಪಾಲ್ಗೊಳ್ಳುವುದು ಅನಿವಾರ್ಯವಾಗುತ್ತದೆ. ಕೃಷಿಗೆ ಹಾಗೂ ಇತರೆ ಕಸುಬುಗಳಿಗೆ ಇದು ಅನ್ವಯಿಸುತ್ತದೆ. ದನ ಮೇಯಿಸಲು ಪುರುಷ ಕಾಡಿಗೆ ಹೋದರೆ ಹಟ್ಟಿಯ ಬಳಿಯ ಗೂಡಿನ ಕರು-ಮರಿಗಳನ್ನು ಪೋಷಿಸುವುದು ಹೈನುಗಾರಿಕೆ ಮಾಡುವುದು ಮಹಿಳೆಯ ಹೊಣೆಗಾರಿಕೆಯಾಗಿರುತ್ತದೆ. ಹೀಗೆ ಮಹಿಳೆಯರೂ ಇಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಅಷ್ಟಲ್ಲದೆ ಈ ಸಮುದಾಯದ ಕೆಲವು ಮಹಿಳೆಯರು ತಮ್ಮ ಜಾಣ್ಮೆ, ಸಾಹಸಗಳಿಂದ ಸಮುದಾಯದ ರಕ್ಷಣೆಯನ್ನು ಮಾಡಿರುವುದು ವಿಶೇಷ. ಇಲ್ಲಿ ಶ್ರೀಶೈಲ ಪ್ರಾಂತ್ಯದಿಂದ ಮಧ್ಯ ಕರ್ನಾಟಕಕ್ಕೆ ಬಂದ ಎರಡನೆಯ ತಂಡ ಒಟ್ಟು ಹನ್ನೆರಡು ಗುಡಿಸಲು ಮ್ಯಾಸ ಗಂಪಳದೊಂದಿಗೆ ಇದ್ದವಳು ಮಲಿಯಮ್ಮ ಎಂದು ಹೇಳಲಾಗುತ್ತದೆ. ಈಕೆಯನ್ನೂ ಅಕ್ಕರಾಯಮ್ಮನ ಮಗಳೆಂದೂ ಕಿರಿಯ ಸಮಕಾಲೀನಳು ಎಂದು ಕರೆಯುತ್ತಾರೆ. ಗೆದ್ದಮಲ್ಲಿಯ ದೊರೆ ಈಕೆ ಇದ್ದ ಮ್ಯಾಸಗಂಪಳದ ಮೇಲೆ ಆಕ್ರಮಣ ಮಾಡಲು ಬಂದಾಗ ಈಕೆ ರೂಪಿಸಿದ ಯೋಜನೆ ವಿಶಿಷ್ಟವಾದುದು. ಅರಸನಲ್ಲಿರುವಷ್ಟು ಆಯುಧಗಳು ತನ್ನಲ್ಲಿಲ್ಲ ಎಂಬುದು ಈಕೆಗೆ ತಿಳಿದಿತ್ತು. ಕೋಲು, ಕಟ್ಟಿಗೆ, ಕೊಡಲಿ, ಬಿಲ್ಲು ಬಾಣಗಳಿಂದ ರಾಜನ

ಸೇನೆಯನ್ನು ನಿಯಂತ್ರಿಸಲು ಸಾಧ್ಯವಿರಲಿಲ್ಲ. ಆಗ ಎತ್ತುಗಳನ್ನು ಕಾಯುತ್ತಿದ್ದ ಕಿಲಾರಿಗಳೊಂದಿಗೆ ಕಂಪಳ ಕಂಗಾಲಾದಾಗ ಮಲೆಯಮ್ಮ ರೂಪಿಸಿದ ಯೋಜನೆ ಅತ್ಯಂತ ಪರಿಣಾಮಕಾರಿಯಾದುದಾಗಿತ್ತು. ತಮ್ಮಲ್ಲಿ ಪ್ರಬಲವಾಗಿರುವ ಅಸ್ತ್ರವೆಂದರೆ ತಮ್ಮ ಪಶುಸಂಪತ್ತು ಅವುಗಳನ್ನು ಬಳಸಿಕೊಂಡು ಎದುರಾಳಿಗಳನ್ನು ಮಣಿಸಬೇಕು ಎಂದು ತೀರ್ಮಾನಿಸಿದ್ದ ಆಕೆಯ ಜಾಣ್ಮೆ ಗಮನಿಸುವಂತಹದು. ಸೂರ್ಯ ಪರಮಾತ್ಮನನ್ನೂ ಮಾರಮ್ಮನನೂ ಧ್ಯಾನಿಸುತ್ತಾ ಎತ್ತುಗಳ ಸುತ್ತ ಮೂರು ಬಾರಿ ತಿರುಗುತ್ತಾಳೆ. ತಿರುಗುತ್ತಾ ಕೇಕೆ ಹಾಕಿ ಎತ್ತುಗಳಿಗೆ ಗೊಂದಲ ಉಂಟು ಮಾಡುವಂತೆ ಮಾಡುತ್ತಾಳೆ. ಆಕೆಯ ಉಪಾಯ ಫಲಿಸುತ್ತದೆ. ಆಕೆ ಅಂದುಕೊಂಡಂತೆಯೇ ಆ ಧ್ವನಿಗೆ ಗಾಬರಿಗೊಂಡ ಎತ್ತುಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಲು ಪ್ರಾರಂಭಿಸುತ್ತವೆ. ಓಟದ ರಭಸಕ್ಕೆ ಕೆಂದೂಳು ಏಳುತ್ತದೆ. ಆ ದೂಳಿಗೆ ಗೆದ್ದವಲ್ಲಿ ರಾಜನ ಸೇನೆ ತಬ್ಬಿಬ್ಬಾಗುತ್ತದೆ.

ದಾರಿ ಕಾಣದಂತಾಗಿ ಅವರೇ ಪರಸ್ಪರ ಒಬ್ಬರನ್ನೊಬ್ಬರು ತಿವಿದುಕೊಳ್ಳುವಂತಾಗುತ್ತದೆ. ಎತ್ತು, ಹಸುಗಳೆಲ್ಲಾ ಗಾಬರಿಗೊಂಡು ಓಡುತ್ತಿರುವಾಗ ಅವುಗಳ ಕೊಂಬು ಕಾಲುಗಳೇ ಆಯುಧದೋಪಾದಿಯಲ್ಲಿ ಶತ್ರುಗಳನ್ನು ಇರಿದು ನೆಲಕ್ಕೆ ಬೀಳಿಸಲು ಕಾಲ್ತುಳಿತಕ್ಕೆ ಸಿಕ್ಕ ಅನೇಕ ಮಂದಿ ಶತ್ರುಗಳು ಸಾಯುತ್ತಾರೆ. ಕಂಗಾಲಾದ ರಾಜನ ಸೇನೆ ಸೋತು ಹಿಮ್ಮೆಟ್ಟುತ್ತದೆ. ಇದು ಮಲೆಯಮ್ಮನ ಕಾರ್ಯತಂತ್ರ. ಶಸ್ತ್ರಾಸ್ತ್ರಗಳಿಲ್ಲದೆ ಜನಬಲವಿಲ್ಲದೆ ಸೇನೆಯನ್ನು ಮಣಿಸಿದ ಈ ಕಾರ್ಯವೈಖರಿ ಅಸಾಧಾರಣವಾದ ಅವಳ ಬುದ್ಧಿಶಕ್ತಿಯನ್ನು ಸ್ಪಷ್ಟಪಡಿಸುತ್ತದೆ. ನಂತರ ದೊರೆ ಕೇವಲ ಒಂದು ಹೆಣ್ಣನ್ನು ಮಾತ್ರ ಕಿಲಾರಿ ಕರೆದೊಯ್ದಿದ್ದಾನೆ. ಏನು ನಮ್ಮ ರಾಜ್ಯದ ಹದ್ದು ಕಾಗೆಗಳನ್ನು ಕರೆದೊಯ್ದಿದ್ದಾನೆಯೋ ಎಂದು ಅಪಹಾಸ್ಯ ಮಾಡಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ನುಡಿದಾಗ ಮತ್ತೆ ಮಲೆಯಮ್ಮ ಆತನಿಗೆ ಬುದ್ಧಿ ಕಲಿಸದಿದ್ದರೆ ನಾನು ಬೇಡರ ಮಹಿಳೆಯೇ ಅಲ್ಲ ಎಂದು ಪ್ರತಿಜ್ಞೆ ಮಾಡಿ ಅನ್ನದೊಂದಿಗೆ ಮಾಂಸ, ರಕ್ತ ಬೆರೆಸಿ ಊರಲ್ಲೆಲ್ಲಾ ಚೆಲ್ಲಿ ದಾರಿಯುದ್ದಕ್ಕೂ ಚೆಲ್ಲುತ್ತಾ ಬರಲು ಕಾಗೆ, ಹದ್ದುಗಳು ಹಿಂಬಾಲಿಸಿಕೊಂಡು ಬಂದು ರಾಜನ ರಾಜ್ಯವೇ ಬರಿದಾಯಿತು. ಎಂಬ ಸಾಂಕೇತಿಕ ಅರ್ಥ ಇಲ್ಲಿ ಕಂಡುಬರುತ್ತಿದೆ. ಹೀಗೆ ರಾಜನಿಗೆ ಪಾಠ ಕಲಿಸುತ್ತಾಳೆ.

'ದಂಡಿಗೋಗುತೀನಯ್ಯ ಬಡಗೀ ಬಂಡಿ ವೋಜು ಮಾಡು' ಹೀಗೆ ದಿಟ್ಟತನದಿಂದ ತಾನೂ ಕೈಲಿ ಆಯುಧ ಹಿಡಿದು ಹೋರಾಟದಲ್ಲಿ ಪಾಲ್ಗೊಳ್ಳುತ್ತಾಳೆ. ಶಕ್ತಿ ಮತ್ತು ಯುಕ್ತಿ ಎರಡನ್ನೂ ಮೇಳೈಸಿಕೊಂಡಾಗ ಮಾತ್ರ ಜಯಶೀಲರಾಗಲು ಸಾಧ್ಯ ಎಂಬುದೇ ಆಕೆಯ ಧ್ಯೇಯವಾಗಿತ್ತು. ಬುಡಕಟ್ಟಿನ ಮಹಿಳೆಯರು ಬದುಕಿನ ಸಹಜತನವನ್ನು ಮೈಗೂಡಿಸಿಕೊಂಡವರು. ಸ್ವಭಾವತಃ ಶ್ರಮಜೀವಿಗಳು. ಮಲೆಯಮ್ಮನಂತಹವರಿಗೆ ಅವಳಿಗಿಂತಲೂ ಹಿರಿಯವಳಾದ ಅಕ್ಕರಾಯಮ್ಮ ಆದರ್ಶಪ್ರಾಯಳಾಗಿದ್ದಳು. ಆಕೆಯ ಹೋರಾಟದ ಬಿಸುಪು, ಕ್ರಿಯಾಶೀಲತೆ ಮನದಲ್ಲಿತ್ತು. ಹಾಗಾಗಿ ಈ ಬಗೆಯ ತಂತ್ರಗಾರಿಕೆಯಿಂದ ಎದುರಾಳಿಗಳನ್ನು ಮಣಿಸಿ ತನ್ನ ಬೇಡ ಗಂಪಳವನ್ನು ರಕ್ಷಿಸಿಕೊಳ್ಳುತ್ತಾಳೆ. "ಪುರಾಣ ಅನಾಗರಿಕ ಜನರಲ್ಲಿ ಕೇವಲ ಹೇಳಿದ ಕಥೆಯಲ್ಲ. ಅತ್ಯಂತ

ಕ್ರಿಯಾಶಾಲಿಯಾದ ಸಾಂಸ್ಕೃತಿಕ ಶಕ್ತಿ."[೧೨] ಎನ್ನುತ್ತಾನೆ ಮ್ಯಾಲಿನೋವಸ್ಕಿ. ಈ ಹಿನ್ನೆಲೆಯಲ್ಲಿ ಪರಿಭಾವಿಸಿದಾಗ ಮಲೆಯಮ್ಮನ ಬಗ್ಗೆ ಪ್ರಚಲಿತವಿರುವ ಕಥೆಯೂ ಕೂಡ ಕೇವಲ ಮನರಂಜಿಸುವ ಕಥೆಯಲ್ಲ. ಬದಲಾಗಿ ಅದೊಂದು ಸಾಂಸ್ಕೃತಿಕ ಶಕ್ತಿ. ಮ್ಯಾಸಬೇಡರ ಸಮುದಾಯದಲ್ಲಿದ್ದ ಮಲೆಯಮ್ಮನಂತಹ ಸಾಂಸ್ಕೃತಿಕ ಶಕ್ತಿಯನ್ನು ತನ್ನ ಮೂಲಕ ಉಳಿಸಿಕೊಂಡು ಬಂದ ಒಂದು ವಿಧಾನ ಮಾನವೀಯ ಗುಣಗಳಿಂದ ಕೂಡಿದ ಮಹತ್ವದ ಸಾಕಾರ ಮೂರ್ತಿಯಾದವಳು ಹೆಣ್ಣು. ಇದೊಂದೇ ಆಕೆಯ ವಿಶೇಷತೆ ಎಂದು ಭಾವಿಸುವ ಸಾಮಾಜಿಕ ಸಂದರ್ಭದಲ್ಲಿ ಆ ಅಂತಃಸತ್ವದೊಂದಿಗೇ ಅನಿವಾರ್ಯ ಸಂದರ್ಭವೊದಗಿದಾಗ ತನ್ನ ವೈಚಾರಿಕ ಚಿಂತನೆಗಳ ಮೂಲಕವಾಗಿ ಕ್ರಿಯಾಚಾಲಕ ಶಕ್ತಿಯಾಗಿ ನಿಲ್ಲುತ್ತಾಳೆ. ಮಲೆಯಮ್ಮ ಬೌದ್ಧಿಕ ಶಕ್ತಿ ಮತ್ತು ದೈಹಿಕ ಕಸರತ್ತು ಇವೆರಡನ್ನೂ ಬಳಸಿಕೊಂಡು ಯೋಜನಾ ಚಾತುರ್ಯದಿಂದ ಪ್ರತಿನಾಯಕನನ್ನು ಮಣಿಸುವ ಚಾತುರ್ಯ ಪುರುಷನದು ಮಾತ್ರ ಎಂದು ಭಾವಿಸುತ್ತಾ ಬಂದಿರುವ ನಮ್ಮ ವ್ಯವಸ್ಥೆಯಲ್ಲಿ ಈ ಎಲ್ಲಾ ಗುಣಗಳ ಕೊರತೆಯಿಂದ ಕೂಡಿರುವವಳೇ ಹೆಣ್ಣು ಎಂದು ಹೇಳಲಾಗುತ್ತದೆ. ಈ ಸಂದರ್ಭದಲ್ಲಿ ಮೇಲ್ಕಾಣಿಸಿದ ಎಲ್ಲಾ ಗುಣಗಳನ್ನು ಹೊಂದಿದ್ದು, ಆ ಮೂಲಕ ಸಮರ್ಥವಾಗಿ ತನ್ನ ಸಮುದಾಯವನ್ನು ರಕ್ಷಿಸಿದ ಮಲೆಯಮ್ಮ ಇಲ್ಲಿ ಅನನ್ಯತೆಯನ್ನು ಪಡೆಯುತ್ತಾಳೆ.

ಮರ್ಲಹಳ್ಳಿ ಮೊಳಕಾಲ್ಮೂರು ತಾಲೂಕಿನಲ್ಲಿಯೂ ಮಲೆಯಮ್ಮನನ್ನು ಆರಾಧಿಸುವ ನೆಲೆಯೊಂದಿದೆ. ಅವನ ಪ್ರಕಾರ ಮಜ್ಜಿಗೆ ಮಾಡುವ ಕಂಬದಲ್ಲಿ ಉದ್ಭವಿಸುವವಳೇ ಮಲೆಯಮ್ಮ ಪಶುಸಂಗೋಪನೆಯ ನೆಲೆಯಲ್ಲಿ ತಮ್ಮ ಆರಾಧ್ಯ ದೇವತೆಯನ್ನು ಗ್ರಹಿಸಿಕೊಂಡಿರುವ ಪರಿ ಅಷ್ಟೆ ಇದು. ಎತ್ತಿನ ಗೂಡುಗಳ ಬಳಿಯಲ್ಲಿಯೇ ಆಲದ ಮರದ ಕೊಂಬೆಯೊಂದನ್ನು ಹೂಳಿ ಅದನ್ನೇ ಮಜ್ಜಿಗೆ ಕಡೆಯುವ ಕಂಬವನ್ನಾಗಿ ಮಾಡಿಕೊಂಡಿದ್ದರಂತೆ. ದಡ್ಡಿ ಸೂರನಾಯಕನ ಎತ್ತುಗಳ ಗೂಡದು. ಕ್ರಮೇಣ ಆ ಕೊನೆಯೇ ಚಿಗುರಿದಂತೆ ಅದರ ಬುಡದಲ್ಲಿ ಒಂದು ಕಪ್ಪು ಬಣ್ಣಕ್ಕೆ ತಿರುಗಿರುವ ಮೂರ್ತಿ ಇದೆ. ಬಹಳ ಹಿಂದೆ ಮಾಡಿಟ್ಟಿದ್ದ ಮಣ್ಣಿನ ಮೂರ್ತಿ ಹಾಲು ಮೊಸರುಗಳ ಲೇಪನದಿಂದ ಜಿಡ್ಡುಗಟ್ಟಿ ಹೀಗೆ ಕಪ್ಪಾಗಿರಬಹುದು. ತಮ್ಮ ಮನದಾಳದಲ್ಲಿ ನೆಲೆಯಾಗಿದ್ದ ಮಲೆಯಮ್ಮ ನಮ್ಮೊಂದಿಗೆ ಇದ್ದಾಳೆ ಎಂದು ಭಾವಿಸಿ ಆ ಮರ ಮತ್ತು ಆ ಮೂರ್ತಿಯನ್ನೇ ಮಲೆಯಮ್ಮ ಎಂದು ಇಲ್ಲಿ ಪೂಜಿಸಲಾಗುತ್ತದೆ.

ಗೌರಸಮುದ್ರದ ಮಾರಮ್ಮ

ನೆರೆಯ ಆಂಧ್ರದಿಂದ ಕೆಲವು ತಂಡಗಳಾಗಿ ಮ್ಯಾಸಬೇಡರು ಮಧ್ಯಕರ್ನಾಟಕದ ಕಡೆ ಬಂದರು ಎಂಬುದು ನಮಗೆ ಈಗಾಗಲೇ ಸ್ಪಷ್ಟವಾಗಿರುವ ಸಂಗತಿ. ಹೀಗೆ ಬಂದ ಒಂದು ತಂಡ ಕ್ರಮೇಣ ಹುಲ್ಲು, ನೀರನ್ನು ಅರಸುತ್ತಾ ತಮ್ಮ ಪಶು ಸಂಪತ್ತಿನೊಂದಿಗೆ ಮಾಪಲ್ಲಿ, ರೇಪಲ್ಲಿ, ಎನ್ನಮುದ್ದಲ ಪಲ್ಲಿ ಪ್ರಾಂತ್ಯದಲ್ಲಿ ಅಲೆದು ನಂತರ ನಿಡುಗಲ್ಲು ಬೆಟ್ಟದ ಕಡೆ ಹೋಗಿ ಸುಮಾರು ಕಾಲ ಅಲ್ಲಿ ನೆಲೆಸಿತು. ನರಪತಿರಾಜನ ಸೆರೆಯಲ್ಲಿದ್ದ ಮ್ಯಾಸಗಂಪಳನ್ನು ಬಿಡುಗಡೆಮಾಡಿ ತನ್ನ

ಸಮುದಾಯವನ್ನು ರಕ್ಷಿಸಿದ. ಕೊಳುಗುಳದ ಬೊಮ್ಮ ನಂತರ ತನ್ನ ಸಮುದಾಯಕ್ಕೆ ಕಿರಿಕಿರಿಯಾಗುವಂತೆ ಮಾಡುತ್ತಾನೆ. ಅವನ ಅಸಹಜವಾದ ಬೇಡಿಕೆಗಳನ್ನು ಪೂರೈಸಿ ರೋಸಿಹೋದ ಈ ಮ್ಯಾಸಬೇಡರು ಅವನಿಗೆ ತಿಳಿಯದಂತೆ ಯರಮಂಚಿನಾಯಕನ ನೇತೃತ್ವದಲ್ಲಿ ತಮ್ಮ ಪಶುಸಂಪತ್ತು ಮತ್ತು ಪೆಟ್ಟಿಗೆ ದೇವರುಗಳೊಂದಿಗೆ ಇಂದಿನ ನಾಯಕನ ಹಟ್ಟಿ ಪ್ರಾಂತ್ಯಕ್ಕೆ ಬರುತ್ತಾರೆ. ಎಲ್ಲರೂ ಸೇರಿ ಬೇರೆ ದೇವರಿಗೆ ಹರಕೆ ಮಾಡಿಕೊಳ್ಳುತ್ತಾರೆ. ತಮಗೆ ಕಾಟ ಕೊಡುತ್ತಿರುವ ಬೊಮ್ಮನ ಸಂಹಾರವಾದರೆ ನಿನಗೆ ‘ವಾಸೆ’[೧೩] ಕೊಯ್ಯುತ್ತೇವೆ. ಎಂದು ಇವರು ಬಯಸಿದಂತೆಯೇ ಕೊಳುಗುಳದ ಬೊಮ್ಮನ ಸಂಹಾರವಾಗುತ್ತದೆ.

ಮ್ಯಾಸಮಂಡಲಕ್ಕೆ ಆವರಿಸಿದ್ದ ಕತ್ತಲು ನಿವಾರಣೆಯಾದಂತಾಗಿ ಬರುವ ಸೋಮವಾರ ಹರಕೆ ತೀರಿಸಬೇಕು ದೊರೆಯಾದ ಯರಮಂಚಿನಾಯಕ ಇದನ್ನು ನೆರವೇರಿಸಬೇಕು. ಎಂದು ತೀರ್ಮಾನಿಸುತ್ತಾರೆ. ಮರುವಾರ ನಿಗದಿತ ದಿನದಂದು ಎಲ್ಲರೂ ಈ ಹರಕೆ ತೀರಿಸಲು ದೇವಾಲಯದಲ್ಲಿ ಸೇರುತ್ತಾರೆ. ಸೂರ್ಯೋದಯದ ಒಳಗೆ ಹರಕೆ ತೀರಿಸಬೇಕು. ನಿಗದಿತ ವೇಳೆಗೆ ದೊರೆ ಬರಲಿಲ್ಲ ಕಾದು ಸಾಕಾದ ಮ್ಯಾಸನಾಯಕರಿಗೆ ದೇವರ ಸೇವೆಯ ಸಂದರ್ಭದಲ್ಲಿ ದೊರೆಯ ವರ್ತನೆ ಉದ್ಧಟತನವೆನಿಸಿ ದೊರೆಗಿಂತ ದೇವರು ದೊಡ್ಡವನು ಎಂದು ನೆಲಮಂಚಿನಾಯಕನನ್ನು ದೊರೆಸ್ಥಾನದಲ್ಲಿ ನಿಲ್ಲಿಸಿ ವಾಸೆ ಕೊಯ್ಯುತ್ತಾರೆ. ತಮ್ಮ ಹರಕೆ ತೀರಿಸುತ್ತಾರೆ. ಈ ನೆಲಮಂಚಿನಾಯಕ ಯರಮಂಚಿನಾಯಕನ ತಮ್ಮನೇ ಆಗಿರುತ್ತಾನೆ. ಇದೆಲ್ಲಾ ಮುಗಿದ ಮೇಲೆ ಯರಮಂಚಿನಾಯಕ ಬರುತ್ತಾನೆ. ದೊರೆಯಾಗಿದ್ದ ತನ್ನನ್ನು ತನ್ನ ಸಮುದಾಯ ನಿರ್ಲಕ್ಷಿಸಿತು ಎಂದು ಬೇಸರಪಟ್ಟುಕೊಳ್ಳುತ್ತಾನೆ. ನನಗೂ ದೇವರ ಮೇಲೆ ಭಕ್ತಿ ಇದೆ. ಕಾರಣಾಂತರಗಳಿಂದ ತಡವಾಯಿತು. ನೀವು ಕುರಿಯನ್ನು ವಾಸು ಕೊಯ್ದಿರಬಹುದು. ನಾನು ನನ್ನ ಮಗನನ್ನೇ ಬಲಿ ಕೊಡುತ್ತೇನೆ ಎಂದು ಮಗನ ಬಲಿಯನ್ನೇ ಕೊಡುತ್ತಾನೆ. ದೇವರೇ ಈತನ ಸತ್ಯಕ್ಕೆ ಮೆಚ್ಚಿ ಮಗನನ್ನು ಬಲಿ ಕೊಡುತ್ತಾನೆ. ನಂತರ ಈತ ಮತ್ತು ಈತನನ್ನು ದೊರೆಯೆಂದು ತಿರಸ್ಕರಿಸಿದ ನೆಲಕುಲ ಎಂದು ಈಗ ಕರೆಯಲ್ಪಡುತ್ತಿರುವ ಅಲ್ಲಿಯ ಮ್ಯಾಸಮಂಡಲದ ಮಧ್ಯೆ ಘರ್ಷಣೆಯುಂಟಾಗುತ್ತದೆ. ಈತನ ಕಡೆ ಬಲವಿಲ್ಲದಂತಾಗುತ್ತದೆ. ಕೊನೆಗೆ ತಾನು ಬದುಕಿ ಉಳಿದರೆ ಸಾಕೆಂದು ಅಲ್ಲಿಂದ ಆತ ಓಡುತ್ತಾನೆ. ಮಾರ್ಗದಲ್ಲಿ ಒಂದು ಕಡೆ ಮಾದಿಗ ಸಮುದಾಯದವರು ಒಟ್ಟಾಗಿ ಕೂತು ಒಂದೇ ಎಲೆಯಲ್ಲಿ ‘ಭೂಮದ ಊಟ’ವನ್ನು ಮಾಡುತ್ತಿರುತ್ತಾರೆ. ಈತ ಅವರ ಮದ್ಯದಲ್ಲಿ ಹೋಗಿ ಕುಳಿತು ಎಲೆಯಲ್ಲಿ ಕೈಯಿಡುತ್ತಾನೆ. ಅಟ್ಟಿಸಿಕೊಂಡು ಬಂದ ನೆಲಕುಲದವರು ಮಾದಿಗರನ್ನು ಇಲ್ಲಿ ಯಾರಾದರೂ ಬಂದರೇ ಎಂದು ಕೇಳಲು ನಾವು ಕಾಣೆವು. ಇಲ್ಲಿರುವವರೆಲ್ಲರೂ ನಾವೇ. ನಮ್ಮ ಮಕ್ಕಳು ಕೂಡಿ ಊಟ ಮಾಡುತ್ತಿದ್ದೇವೆ ಎಂದು ಹಿರಿಯ ಯಜಮಾನ ಹೇಳುತ್ತಾನೆ. ಹೀಗೆ ನಮ್ಮ ದೊರೆ ಹೊಕ್ಕ ಯರಮಂಚಿನಾಯಕನನ್ನು ನೆಲಕುಲದವರು ಗುರುತಿಸುತ್ತಾರಾದರೂ ಮಾದಿಗರ ಮಧ್ಯೆ ಬೆರೆತಿದ್ದಾನೆ ಇನ್ನು ಆತ ನಮಗೆ ಸಂಪೂರ್ಣ ದೂರವಾದಂತೆಯೇ ಎಂದು ಅಲ್ಲಿಗೇ ಬಿಟ್ಟು ಹೋಗುತ್ತಾರೆ. ಈಗಲೂ ರೆಡ್ಡಿಹಳ್ಳಿ (ಚಿತ್ರದುರ್ಗ ಜಿಲ್ಲೆ)ಯಲ್ಲಿ ನಡೆಯುವ ಯರಮಂಚಿನಾಯಕನಿಗೆ ಸಂಬಂಧಿಸಿದ ಆರಾಧನೆಯಲ್ಲಿ ನಾಯಕರಿಗೆ

ಸಂಬಂಧಿಸಿದ ಆರಾಧನೆಯಲ್ಲಿ ಇದನ್ನು ಒಂದು ಆಚರಣೆಯನ್ನಾಗಿ ಉಳಿಸಿಕೊಂಡು ಬಂದಿದ್ದಾರೆ. ತನ್ನನ್ನು ಅಂದು ರಕ್ಷಣೆ ಮಾಡುದ 'ಮಾದಿಗ' ಸಮುದಾಯದ ಬಗ್ಗೆ ತನಗಿದ್ದ ಗೌರವ, ಅಭಿಮಾನ ಕಾರಣವಾಗಿ ಅವರಿಗೆ ಸ್ಥಾನಮಾನ ಕೊಟ್ಟಿದ್ದಾನೆ. ಈ ಹಬ್ಬದ ಆಚರಣೆಯ ದಿನ ಇಂದಿಗೂ ಸಂಬಂಧಿಸಿದ ಸಮುದಾಯದೊಳಗೆ ಸ್ವೀಕರಿಸಲಾಗುತ್ತದೆ. ಅಷ್ಟೇ ಅಲ್ಲ, ಪೂಜೆಯ ಪ್ರಸಾದವನ್ನು ಒಂದು ಎಲೆಯಲ್ಲಿ ಬಡಿಸಿರಲು ನಾಯಕನ ಪರಂಪರೆಯವರು ಮತ್ತು ಸಂಬಂಧಿಸಿದ 'ಮಾದಿಗ' ಸಮುದಾಯದ ವ್ಯಕ್ತಿ ಆ ಎಲೆಯಲ್ಲಿ ಕೈಯೊಟ್ಟು ಊಟ ಮಾಡುವ ನೇಮವಿದೆ ಇದರಿಂದ ಯರಮಂಚಿನಾಯಕ ಅಸ್ಪೃಶ್ಯತಾ ವಿರೋಧಿ ಮನಸ್ಸು, ಜಾತ್ಯಾತೀತತನ, ತನಗೆ ಸಹಾಯ ಮಾಡಿದವರನ್ನು ತನ್ನ ತಂದೆ ಸಹೋದರರು ಎಂದು ಭಾವಿಸಿದ ದೊಡ್ಡತನ ಸೃಷ್ಟಿಯಾಗುತ್ತದೆ. ತನ್ನ ನೆಲಕುಲದಿಂದ ಪ್ರತ್ಯೇಕಗೊಂಡ ಯರಮಂಚಿನಾಯಕ ಮುಂದೆ ನೆಲಕುಲ ಪ್ರಾಂತ್ಯಕ್ಕೆ ಹೋಗಿ ಕಾಲಕಳೆಯುತ್ತಾ ಇರುತ್ತಾನೆ. ಆ ವೇಳೆಗೆ ನಿಡುಗಲ್ಲು ಪ್ರಾಂತ್ಯದ ಚಲಿಸಿಹೋಗಿದ್ದ ಮ್ಯಾಸರ ಗುಂಪು. ಇಂದಿನ ಗೌರಸಮುದ್ರ ಅಂದಿನ ಐವೋದ್ದಿಹಳ್ಳಿ ಪ್ರಾಂತ್ಯಕ್ಕೆ ಬರುತ್ತದೆ. ಆ ತಂಡದಲ್ಲಿ ಇಂದು 'ಮಾರಮ್ಮ' ಎಂದು ಪೂಜಿಸಲ್ಪಡುತ್ತಿರುವ ಮಹಿಳೆ ಇರುತ್ತಾಳೆ. ಬುಟ್ಟುಗೆಲವರು ಅಂದರೆ ಕೊಳುಗುಳದ ಬೊಮ್ಮನ ಬೆಡಗಿಗೆ ಸೇರಿದವರೂ ಈ ಗುಂಪಿನಲ್ಲಿ ಇರುತ್ತಾರೆ. ಇವರಿಗೆಲ್ಲಾ ಮಾರಮ್ಮ ಹೆಣ್ಣುಮಗಳು.

ಯರಮಂಚಿನಾಯಕನ ಮಗಳು ಯರಮಂಚಿಪಾಲಮ್ಮ ಈಕೆ ಅತ್ಯಂತ ಸಾಹಸೀ ಮತ್ತು ಬೇಟೆಗಾರಿಕೆಯಲ್ಲಿ ನಿಪುಣೆ. ಈಕೆಯನ್ನು ವಿವಾಹವಾಗುವ ಧೈರ್ಯವೇ ಅಂದು ಯಾರಿಗೂ ಇರಲಿಲ್ಲವಂತೆ. ಹಿಂದೆ ಯರಮಂಚಿನಾಯಕ ಮತ್ತು ಕೊಳುಗುಳದ ಬೊಮ್ಮನ ಬಾಂಧವ್ಯ ಉತ್ತಮವಾಗಿದ್ದ ಸಂದರ್ಭದಲ್ಲಿ ದೊರೆ ತನ್ನ ಮಗಳನ್ನು ಇವಳಿಗೆ ವಿವಾಹ ಮಾಡಿಕೊಟ್ಟಿದ್ದನ್ನು ಕಾಲಾಂತರದಲ್ಲಿ ಬೊಮ್ಮನ ಉಪಟಳ ಹೆಚ್ಚಿದಾಗ ತನ್ನ ಅಳಿಯನ ಉಳಿವಿಗಿಂತ, ಮಗಳ ಭವಿಷ್ಯಕ್ಕಿಂತ ಸಮುದಾಯದ ಏಳಿಗೆ ಮುಖ್ಯ ಎಂದು ಆತನನ್ನು ಅಂತ್ಯಗೊಳಿಸಿದ್ದ. ತನ್ನ ಮಗಳನು ಈ ಬೊಮ್ಮನಿಗೆ ಮದುವೆ ಮಾಡಿಕೊಟ್ಟಿದ್ದ ಕಾರಣದಿಂದಾಗಿ ಬೊಮ್ಮನ ಪರಂಪರೆಯವರೆಲ್ಲಾ ಈತನಿಗೆ ನೆಂಟರಾಗಬೇಕು.

ಬೊಮ್ಮನ ಉಪಟಳದಿಂದ ರೋಸಿದ್ದ ಅವರಿಗೂ ಅವನನ್ನು ಕೊನೆಗಾಣಿಸಿದ ಯರಮಂಚಿನಾಯಕನ ಮೇಲೆ ಸ್ವಲ್ಪ ಕೋಪ ಇದ್ದೇ ಇತ್ತು. ಮಾರಮ್ಮ ಅವರಿಗೆ ಯರಮಂಚಿನಾಯಕನ ಸದುದ್ದೇಶ ಹಿಂದೆ ಮ್ಯಾಸ ಮಂಡಳ ರಕ್ಷಿಸಿದ್ದು, ಬೊಮ್ಮನನ್ನು ಕೊಂದ ಕಾರಣ ಎಲ್ಲವನ್ನೂ ಇವರೊಂದಿಗೆ ಚರ್ಚಿಸಿ ಜನಪರ ವ್ಯಕ್ತಿಯಾಗಿದ್ದ ಈತನನ್ನು ಈಗ ನೀವೆ ಕರೆತಂದು ರಕ್ಷಣೆ ಮಾಡಿ ಆತ ಅನಾಥಿ ಸ್ಥಿತಿಯಲ್ಲಿದ್ದಾನೆ ಎಂದು ಹೇಳುತ್ತಾಳೆ. ಈಕೆಯ ಮಾರ್ಗದರ್ಶನದ ಮೇರೆಗೆ ಇವರೆಲ್ಲಾ ಹೋಗಿ ಈತನನ್ನು ಐವೋದಿಗೆ ಹತ್ತಿರದಲ್ಲಿರುವ ಮಲಸಮುದ್ರ ಪ್ರಸಕ್ತ ಸ್ಥಳ ಎಂದು ಮಾರಮ್ಮ ನಿರ್ದೇಶಿಸಲು ಅಲ್ಲಿಯೇ ಗೂಡುಗಳನ್ನಿಟ್ಟುಕೊಂಡಿರುತ್ತಾರೆ. ಈ ಮ್ಯಾಸನು ಇದನ್ನೇ ಈ ಸಮುದಾಯ ಮಾರಮ್ಮ ಗಟ್ಟಿಭೂಮಿ ಎಲ್ಲಿದೆ ಎಂದು ತುಳಿಯುತ್ತಾ ಬಂದಳು. ಮಲಸಮುದ್ರ.

ತುಮ್ಮಲು ಪ್ರಾಂತ್ಯ ಗಟ್ಟಿಯಾಗಿದೆ. ಎನಿಸಿ ಅಲ್ಲಿ ತನ್ನ ಕಂಪಳದೊಂದಿಗೆ ನೆಲೆಸಿದಳು ಎಂದು ಹೇಳುತ್ತಾರೆ. ಯರಮಂಚಿನಾಯಕನನ್ನು ತನ್ನ ಬಂಧುಗಳು ಅಲ್ಲಿಗೆ ಕರೆತಂದಾಗ ಆತನಿಗೆ ಧೈರ್ಯ ತುಂಬಿ ನೀನು ನಿನ್ನದೇ ಆದ ಮ್ಯಾಸಗಂಪಳವನ್ನು ಕಟ್ಟು, ಕುಲ ಇಲ್ಲದವರಿಗೆ ಕುಲಕೊಡು, ಎಲ್ಲರೂ ಸಮಾನರು ಎಂದು ಹೇಳಿ ಐವೋದಿ ಸಿದ್ದಿಹಳ್ಳಿಯನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಳಲು ತಿಳಿಸುತ್ತಾಳೆ. ನಿಡುಗಲ್ಲು ಕಡೆಯ ಹೊಟ್ಟಣ್ಣ ನಾಯಕ ಕಾಟ ಕೊಟ್ಟಾಗ ತಾನೇ ಆಸರೆಯಾಗಿ ನಿಂತು ರಕ್ಷಣೆ ಮಾಡುತ್ತಾಳೆ. ಹೀಗೆ ನೆಲೆ ಕಳೆದುಕೊಂಡಿದ್ದ ಯರಮಂಚಿನಾಯಕನಿಗೆ ನೆಲೆಯನ್ನು ಕಲ್ಪಿಸಿಕೊಟ್ಟವಳೇ ಈ ಮಾರಮ್ಮ. ಬುಡಕಟ್ಟಿನ ಮಹಿಳೆಯಲ್ಲಿ ಇಂತಹ ಜಾತ್ಯಾತೀತತನ ವಿಶೇಷವೆನಿಸುತ್ತದೆ.

ಗೌರಸಮುದ್ರಕ್ಕೆ ಸುಮಾರು ಒಂದು ಕಿ.ಮೀ ದೂರದಲ್ಲಿ 'ತುಮ್ಮಲು' ಎಂಬ ಪ್ರದೇಶವಿದೆ. ಮಲಸಮುದ್ರ ಮತ್ತು ಗೌರಸಮುದ್ರದ ಮಧ್ಯೆ ಬರುವ ಪ್ರದೇಶವಿದು. ತುಮ್ಮ ಜಾತಿಯ ಮರಗಳು ಹೆಚ್ಚಾಗಿರುವುದರಿಂದ ಇದನ್ನು ತುಮ್ಮಲು ಎಂದು ಕರೆಯುತ್ತಾರೆ. 'ಬನ್ನಿ' ಮರವನ್ನು ಹೋಲುವ ಮರವಿದು. ಇಲ್ಲಿ ಒಂದು ಆವರಣವಿದ್ದು ಒಳಗಡೆ ಎರಡು ಪಟ್ಟಿಗಳಿವೆ. ಸುಮಾರು ೨೫-೩೦ ಅಡಿಗಳಷ್ಟು ಎತ್ತರವಾದ ಕಲ್ಲುಕಂಬವಿದ್ದು, ಇದರ ಮೇಲೆ ಜಾತ್ರೆಯಲ್ಲಿ ದೀಪ ಹಚ್ಚುತ್ತಾರೆ. ಇಲ್ಲಿ ಮಾರಮ್ಮನ ಸಮಾಧಿ ಇದೆ ಎಂದು ಪ್ರತೀತಿ. ಕೊ. ಆ. ವಿಶ್ವನಾಥರವರು ಇಲ್ಲಿ ಮಾರಮ್ಮನ ಸಮಾಧಿ ಇದೆ ಎಂದು ಮಾರಿ ಮಾಹೇಶ್ವರಿ ಕೃತಿಯಲ್ಲಿ ಹೇಳುತ್ತಾರಾದರೂ ಈಗ ಅದರ ಕುರುಹುಗಳು ಸ್ಪಷ್ಟವಾಗಿ ಇಲ್ಲ. ಇದೆಲ್ಲಾ ಈ ಬೇಡಗಂಪಳ ಹೋರಾಡಿದ್ದು, ನೆಲೆಯೂರಿದ್ದ ಸ್ಥಳ. ಇಲ್ಲಿಂದ ಸುಮಾರು ೧.ಕಿ.ಮೀ ಅಂತರದಲ್ಲಿ 'ಲಿಂಗದ ಗುಡಿ' ಇದೆ. ೧೦೦ ಲಿಂಗಗಳು ಇಲ್ಲಿವೆ. ಎಂಬುದು ಪ್ರತೀತಿ. ಯರಮಂಚಿನಾಯಕನೇ ಮಾರಮ್ಮನ ಸೂಚನೆಯ ಮೇರೆಗೆ ಇದನ್ನು ಪ್ರತಿಷ್ಠಾಪಿಸಿದ ಎಂದು ಹೇಳುತ್ತಾರೆ.

ನಾಯಕನಹಟ್ಟಿ ಬಳಿ ಇರುವ ಖುದಾಪುರ ಗ್ರಾಮದಲ್ಲಿ ಬೋರೆದೇವರ ದೇವಸ್ಥಾನವಿದೆ. ಇದನ್ನು ಚಿಂತಗುಟ್ಲು ಬೋರುವ ಎಂದು ಕರೆಯುತ್ತಾರೆ. ಇಲ್ಲಿಂದಲೇ ಯರಮಂಚಿನಾಯಕ ತನ್ನ ಬಂಧುಗಳಿಂದ ಪ್ರತ್ಯೇಕಗೊಂಡದ್ದು. ಪ್ರತ್ಯೇಕಗೊಂಡ ಮೇಲೆ ತಾನಿನ್ನೆಂತೂ ಅಲ್ಲಿಗೆ ಹೋಗುವಂತಿಲ್ಲ ಎಂದು ಪ್ರತಿಜ್ಞೆ ಮಾಡುತ್ತಾನೆ. ಹೀಗಾಗಿ ತಾನೂ ಮೂಲತಃ ಶೈವಾರಾಧಕನಾದ್ದರಿಂದ ತಾನು ಮತ್ತೆ ಜವೋರಿಯಿಂದ ಮರು ಅದಿಪತ್ಯ ಸ್ಥಾಪಿಸಿದಾಗ ತನ್ನ ಶೈವಾರಾಧನೆಗಾಗಿ ಲಿಂಗದ ಗುಡಿಯನ್ನು ಮಾರಮ್ಮನ ಸೂಚನೆಯ ಮೇರೆಗೆ ಸ್ಥಾಪಿಸುತ್ತಾನೆ. ಇದೇ ಪರಿಸರದಲ್ಲಿ ಮಾರಮ್ಮ ಮತ್ತು ಆಕೆಯ ತಮ್ಮನಾದ ಬೊಮ್ಮ ವಾಸವಾಗಿರುತ್ತಾರೆ. ಅಂದು ಗುಡಿಸಲು ವಾಸಿಗಳಾಗಿದ್ದ ಅವರಿಗೆ ಮನೆಯ ಕಲ್ಪನೆಯೇ ವಿಶೇಷವಾದುದು. ಇಂತಹ ಸಂದರ್ಭದಲ್ಲಿ ಎಕ್ಕ ಗಿಡದಿಂದ ಕಂಬ, ತೊಲೆ ಮಾಡಿಕೊಂಡು ಈ ಅಕ್ಕ ತಮ್ಮ ಮನೆಯೊಂದನ್ನು ಕಟ್ಟಿಕೊಂಡಿರುತ್ತಾರೆ. ಮಾರಮ್ಮ ಬೇಟೆಯಾಡಲು ಹೋಗಿರುತ್ತಾಳೆ. ಬೊಮ್ಮ ಮನೆಯಲ್ಲಿರುತ್ತಾನೆ. ಹತ್ತಿರದ ರಾಯದುರ್ಗವನ್ನು ಆಳುತ್ತಿದ್ದ ಯರಬೊಮ್ಮಳ ನಾಯಕ ಒಮ್ಮೆ ಈ ಮಾರ್ಗವಾಗಿ ಬರುತ್ತಾನೆ. ಬೊಮ್ಮನ ಮನೆಯನ್ನು ನೋಡಿ ಈ

ಯರಬೊಮ್ಮನಾಯಕ ಕೊಳುಗೊಳದ ಬೊಮ್ಮನ ವಂಶದವನು ಹಾಗಾಗಿ ತನ್ನ ಪೂರ್ವಿಕರನ್ನು ಕೊನೆಗಾಣಿಸಿದ ಯರಗಂಚಿನಾಯಕನ ಅಧಿಪತ್ಯವನ್ನು ನಾಶಮಾಡುವುದು ಆತನ ಉದ್ದೇಶವಾಗಿತ್ತು. ಅವನಿಗೇಕೆ ಇಂಥ ಮನೆ ಎಂದು ಕಿತ್ತು ತೊಲೆ ಕಂಬ ತೆಗೆದುಕೊಂಡು ಹೋಗುತ್ತಾನೆ. ಲಿಂಗದ ಗುಡಿಯನ್ನು ನಾಶ ಮಾಡುತ್ತಾನೆ. ಬೊಮ್ಮನಿಗೆ ಈತನನ್ನು ಪ್ರತಿಭಟಿಸಲು ಸಾಧ್ಯವಾಗುವುದಿಲ್ಲ ಸೋಲೊಪ್ಪಿಕೊಳ್ಳುತ್ತಾನೆ. ತನ್ನ ಅಕ್ಕ ಮಾದಮ್ಮ ಹಿಂತಿರುಗಿದಾಗ ಆಕೆಯ ಬಳಿ ನಡೆದ ಸಂಗತಿಯನ್ನು ತಿಳಿಸುತ್ತಾನೆ. ಆಕೆ ಅಯ್ಯೋ ಪೆಟ್ಟ ಬೊಮ್ಮ ನೀನೆಂಥ ಹೇಡಿ ಎಂದು ಬೈಯುತ್ತಾಳೆ. (ಪೆಟ್ಟ ಬೊಮ್ಮ: ಹೆಂಗಸಿನಂತೆ ಕೈಲಾಗದೆ ಅಳುತ್ತೀಯಲ್ಲಾ ಎಂದರ್ಥ) ಸೇಡು ತೀರಿಸಿಕೊಳ್ಳಲು ಹೊರಟ ಯರಮಂಚಿನಾಯಕನನ್ನು ತಡೆದು ತಾನೇ ಆ ದೊರೆಯ ಮೇಲೆ ಸೇಡು ತೀರಿಸಿಕೊಳ್ಳಲು, ರಾಯದುರ್ಗದ ಕಡೆ ಹೊರಡುತ್ತಾಳೆ. ಅಡಗುಪ್ತ ಮಾರ್ಗವಾಗಿ ಹೋಗುತ್ತಾಳೆ. ಹೋಗುವಾಗ ದಾರಿಯಲ್ಲಿ ದನಕಾಯುವ ಹುಡುಗರಿಂದ ಹುಣಸೆಕಾಯಿ ಕೀಳಿಸಿಕೊಂಡು ಪುಟಿಯ್ಲಿ ತುಂಬಿಕೊಂಡು ರಾಯದುರ್ಗದ ಸಂತೆ ಬಜಾರದ ಬಳಿ ಕುಳಿತುಕೊಳ್ಳುತ್ತಾಳೆ. (ಹುಣಸೆಕಾಯಿ ಕಿತ್ತುಕೊಟ್ಟ ಹುಡುಗನಿಗೆ ನಿಮ್ಮೂರಿಗೆ ಯಾವುದೇ ಸಾಂಕ್ರಮಿಕ ಕಾಯಿಲೆ ಬರದಿರಲಿ ಎಂದು ಹರಸುತ್ತಾಳೆ.) ದೊರೆ ಮತ್ತು ದೊರೆ ಹೆಂಡತಿ ಸಂತೆಗೆ ಬರುತ್ತಾರೆ. ಆಕೆಯ ಬಳಿಯೇ ಹುಣಸೆಹಣ್ಣು ಕೊಂಡುಕೊಳ್ಳುತ್ತಾರೆ. ಅವರನ್ನು ನೋಡಿ ಮನಸ್ಸಿನಲ್ಲಿಯೇ ಗುರುತಿಸಿಕೊಳ್ಳುತ್ತಾ, ಕತ್ತಲಾಗುತ್ತಿದ್ದಂತೆ ದೊರೆಯ ಮನೆಯ ಬಳಿ ಹೋಗಿ ಇನ್ನೂ ಸ್ವಲ್ಪ ಹಣ್ಣು ಉಳಿದಿದೆ ನಾಳೆ ಮಾರಿಕೊಂಡು ನಮ್ಮೂರಿಗೆ ಹಿಂತಿರುಗುತ್ತೇನೆ. ಈ ದಿನ ರಾತ್ರಿ ಉಳಿಯಲು ಸ್ವಲ್ಪ ಜಾಗಕೊಡಿ ಎಂದು ಬೇಡಿಕೊಳ್ಳುತ್ತಾಳೆ. ಜಾಗಕೊಟ್ಟು ಅಲ್ಲಿಯೇ ಉಂಡು ಮಲಗಿದಳು. ಮಧ್ಯರಾತ್ರಿ ವೇಳೆಗೆ ದೊರೆಯ ಮಂಚದ ಬಳಿ ಹೋಗಿ, ಆತನನ್ನು ಕೊಂದು, ಕರುಳನ್ನು ಕಿತ್ತು ಮಾಲೆಯನ್ನಾಗಿ ಹಾಕಿಕೊಂಡು ಬೆಟ್ಟದ ಮೇಲಿನ ಅರಮನೆಯಿಂದ ಕೆಳಗಿಳಿದು ಬರುತ್ತಾಳೆ. ಕೋಟೆಯ ಬಾಗಿಲಲ್ಲಿ ಬಂದು ಗುಂಡಿನ ಮೇಲೆ ನಿಂತು ತನ್ನ ಮನೆಯನ್ನು, ಲಿಂಗದ ಗುಡಿಯನ್ನು ನಾಶ ಮಾಡಿದ್ದಕ್ಕಾಗಿ ಸೇಡು ತೀರಿಸಿಕೊಂಡಿದ್ದೇನೆ. ನಾನೆ ಮಾರಮ್ಮ ಈ ಕೆಲಸ ಮಾಡಿಟ್ಟವಳು ಬೇರೆ ಯಾರ ಮೇಲೂ ಅಪವಾದ ಹೊರಿಸಬೇಡಿ ಎಂದು ಮೂರು ಬಾರಿ ಕೂಗಿ ಲಿಂಗದ ಗುಡಿ ಒಳಗೆ ತಮ್ಮ ಹಟ್ಟಿಗಳಿದ್ದ ಕಡೆ ಬರುತ್ತಾಳೆ.

ಹೀಗೆ ಯರಮಂಚನಾಯಕನಿಗೆ ಧೈರ್ಯ ತುಂಬಿ ಕಲ್ಪಿಸಿಕೊಟ್ಟು ತನ್ನ ನೆಲೆಯನ್ನು ನಾಶ ಮಾಡಿದ ದೊರೆಯನ್ನು ಕೊಲ್ಲುವುದರ ಮೂಲಕ ಆತನ ದೌರ್ಜನ್ಯವನ್ನು ಪ್ರತಿಭಟಿಸಿದ ಈ ಸಾಹಸೀ ಮಹಿಳೆಯು ಮ್ಯಾಸರ ನೆನಪಿನಲ್ಲಿ ಉಳಿಯುತ್ತಾಳೆ. ಆಕೆಯ ಕಾಲಾನಂತರ ಆಕೆಯನ್ನು ತುಮ್ಮಲು ಪ್ರಾಂತ್ಯದಲ್ಲಿ ಸಮಾಧಿ ಮಾಡಿದರು ಎಂಬುದು ಪ್ರತೀತಿ. ನಂತರ ಹೀಗೆ ತಮಗೆ ಸಹಕಾರ ನೀಡಿ ಅಸ್ತಿತ್ವ ದೊರಕಿಸಿಕೊಟ್ಟ ಮಾರಮ್ಮನನ್ನು ಯರಮಂಚಿನಾಯಕ ಮರೆಯುವುದಿಲ್ಲ. ಐವೋಬಿ ಮಠದಲ್ಲಿ ಈಕೆಯನ್ನು ಸ್ಥಾಪನೆ ಮಾಡುತ್ತಾನೆ. ನೆಲಕುದವರಿಗೆ ಅಕ್ಕರಾಯಮ್ಮ ಮನೆದೇವತೆಯಾಗುತ್ತಾಳೆ. ತನಗೂ ಆಕೆ ಮನೆದೇವತೆಯೇ, ಆಕೆಯೇ ಈ ಮಾರಮ್ಮನ ರೂಪದಲ್ಲಿ ತನಗೆ ಆಸರೆಯಾಗಿ ನಿಂತಳು ನಮ್ಮ ಮ್ಯಾಸಗಂಪಳವನ್ನು ಯಾವತ್ತು ಕಾಪಾಡಿಕೊಂಡು ಬಂದವರು ಮಹಿಳೆಯರೇ.

ಹಾಗಾಗಿ ಈಕೆ ಶಕ್ತಿ ಸ್ವರೂಪಿಣಿಯಾಗಿ ನೆಲೆಗೊಳ್ಳಲಿ ಎಂದು ಬಯಸಿ ನೆಲೆಗೊಳಿಸಿ ಪೂಜಾ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರಬೇಕೆಂದು ಆದೇಶಿಸುತ್ತಾನೆ. ವರ್ಷಕ್ಕೊಮ್ಮೆ ಗುಗ್ಗರಿ ಹಬ್ಬ, ತುಮ್ಮಲು ಪ್ರಾಂತ್ಯದಲ್ಲಿ ಜಾತ್ರೆ ಮಾಡಬೇಕೆಂದು ಹೇಳುತ್ತಾನೆ. ಆಕೆಗೆ ಗೌರವಪೂರ್ವಕವಾಗಿ ಛತ್ರಿ, ಚಾಮರ, ಭೇರಿ, ಕೋರಿ ನಿಶಾನೆ' ಅರ್ಪಿಸುತ್ತಾನೆ. ವಾಸೆ ಕೊಯ್ದು ಬಂದು ಪ್ರಜೆಗಳನ್ನು ಕಾಪಾಡುವ ಹೊಣೆಗಾರಿಕೆ ಇನ್ನು ನಿನ್ನದೆ ತಾಯಿ ಎಂದು ನಮಸ್ಕರಿಸಿ ತನ್ನ ಇಡೀ ಸಮುದಾಯದ ಜೊತೆ ಸೂರ್ಯನ ಮಾಕ್ಕು ಮುಗಿಯುತ್ತಾನೆ. ಮ್ಯಾಸರು ಸದಾ ಹೆಗಲ ಮೇಲೆ ಕಂಬಳಿಯನ್ನು ಮಡಚಿ ಹಾಕಿಕೊಳ್ಳುತ್ತಿದ್ದರು. ಈಗಲೂ ಮದುವೆಯಾದಾಗಿನ ಮದುಮಗ ಹೀಗೆ ಹಾಕಿಕೊಳ್ಳುತ್ತಾನೆ. ಸಾಂಸ್ಕೃತಿಕ ನಾಯಕನ ಆರಾಧನೆ, ಆಚರಣೆಗಳಲ್ಲಿ ಸಂಪ್ರದಾಯಸ್ತರು ಹಾಕಿಕೊಳ್ಳುತ್ತಾರೆ. ಒಂದು ಆಚರಣೆಯ ರೂಪದಲ್ಲಿ ಇದು ಉಳಿದಿದೆ. ಹಾಗಾಗಿ ಇವರ ಲಾಂಛನವೇ ಇದು. ಕಂಬಳಿಯ ತುಂಡೊಂದನ್ನು ಕಟ್ಟಿದ ಎತ್ತರವಾದ ಧ್ವಜವೇ ಕೋರಿ ನಿಶಾನೆ. ಇಂದಿಗೂ ಅತ್ಯಂತ ಶ್ರದ್ಧೆಯಿಂದ ಯರಮಂಚಿನಾಯಕನ ವಂಶಸ್ಥರು ಈಕೆಯ ಆರಾಧನೆಯಲ್ಲಿ ಪಾಲ್ಗೊಳ್ಳುತ್ತಾರೆ.

ಮ್ಯಾಸರ ಹಟ್ಟಿಗಳ ಬಳಿಯೇ ಹಿಂದೆ ಉಪ್ಪು ತಯಾರಿಸುತ್ತಿದ್ದು, ಈ ಎರಡೂ ಸಮುದಾಯಗಳ ಮಧ್ಯೆ ಆಪ್ತತೆ ಬೆಳೆಯುತ್ತದೆ. ಹೀಗಾಗಿ ತಮ್ಮೊಂದಿಗೆ ಸಾಗಿಬಂದ ತಮ್ಮ ಈ ಸ್ನೇಹ ಬಂಧುಗಳಿಗೆ ತಮ್ಮ ಧಾರ್ಮಿಕ ನೆಲೆಗಳಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂದು ಉಪ್ಪಾರರಿಗೆ ಪೂಜೆಯ ಮತ್ತು ಮಾರಮ್ಮನನ್ನು ಹೊರುವ ಹೊಣೆಗಾರಿಕೆಯನ್ನು ಅಂದು ವಹಿಸಿಕೊಟ್ಟಿದ್ದು. ಇಂದಿಗೂ ಅದೇ ಸಂಪ್ರದಾಯ ಉಳಿದುಬಂದಿದೆ. ಮ್ಯಾಸಬೇಡರ ಅನೇಕ ಆರಾಧನೆಯ ನೆಲೆಗಳಲ್ಲಿ ಇಂತಹ ಸ್ನೇಹ ಸೌಹಾರ್ದಯುತವಾದ ಬಾಂಧವ್ಯಗಳಿದ್ದು, ಅವರ ಜಾತ್ಯಾತೀತ ಮನೋಭಾವನೆಯನ್ನು ಇದು ಸೂಚಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳು ಅಲ್ಲಿ ನಡೆಯುವ ಆರಾಧನೆ, ಆಚರಣೆಗಳು ಬಹಳ ವಿಶಿಷ್ಟವಾದವುಗಳು. ಅದರ ಸುತ್ತ ಹೆಣೆಯಲ್ಪಟ್ಟಿರುವ ಕಥೆಗಳೂ ವಿಶಿಷ್ಟವಾದವುಗಲೇ ಈ ಮೂಲಕವಾಗಿ ಅಲ್ಲಿದ್ದಿರಬಹುದಾದ ಐತಿಹಾಸಿಕ ಸಂಗತಿಯನ್ನು ಗುರುತಿಸಲು ಸಾಧ್ಯವಿಲ್ಲ. ಯರಮಂಚಿನಾಯಕ ಐವೋರಿ ಮಠದಲ್ಲಿ ತನ್ನ ಸಮುದಾಯಕ್ಕೆ ರಕ್ಷಕಳಾಗಿದ್ದು, ತನಗೂ ಒಂದು ಅಸ್ತಿತ್ವ ದೊರೆಯುವಂತೆ ಮಾಡಿದ ಮಾರಮ್ಮನನ್ನು ಸ್ಥಾಪನೆ ಮಾಡಿದ ನಂತರ ಆಕೆಯನ್ನು ಪವಾಡ ಸದೃಶ ದೇವಿಯನ್ನಾಗಿ ಜನತೆ ಆರಾಧಿಸುವ ಮನಸ್ಸನ್ನು ಬೆಳೆಸಿಕೊಂಡಿರಬಹುದು. ಇಂತಹ ಈಕೆಯ ಮಹಿಮೆಯನ್ನು ತೋರುವ ಒಂದು ಕಥೆಯೇ ಕೆಂಚಮ್ಮನಿಗೆ ಮಾರಮ್ಮ ಒಲಿದ ಕಥೆಯಲ್ಲಿದೆ. ಬೇರೇನೂ ಅಲ್ಲ. ಡಾ. ಮೀರಾಸಾಬಿಹಳ್ಳಿ ಶಿವಣ್ಣನವರು ಉಪ್ಪಾರರ ಮೂಲದ ಮೂಲಕ ಪ್ರಚಲಿತವಾಗಿರುವ ಮಾರಮ್ಮನ ಕಥೆಯನ್ನು ಪ್ರಸ್ತಾಪಿಸುತ್ತಾ "ಹಿಂದೆ ಸಿಡುಬು, ಅಮ್ಮ ಎದ್ದವರನ್ನು ಉಪ್ಪಿನ ಹಾಸಿಗೆಯ ಮೇಲೆ ಮಲಗಿಸಿ ಬೇವಿನ ಸೊಪ್ಪಿನಿಂದ ಮುಚ್ಚುತ್ತಿದ್ದರಂತೆ. ಹೀಗೆ ಉಪ್ಪು ತಯಾರಿಸುವವರೇ ಬಹಳಷ್ಟು ಕಡೆ ಮಾರಿಯ ಪೂಜಾರಿಗಳೂ ಆಗಿರುವುದು ಆಕಸ್ಮಿಕವಲ್ಲ.

ಅವರ ಉದ್ಯೋಗದ ಸಂಕೇತವಾದ ಸನಿಕೆ ಮತ್ತು ಕುರ್ಪಿ ಮಾರಮ್ಮನ ಮಾರಮ್ಮನ ಪುಟ್ಟಿಯಲ್ಲಿವೆ ಎಂದು ಹೇಳುತ್ತಾರೆ."[೧೪] ಆದರೆ ಮ್ಯಾಸಬೇಡ ಸಮುದಾಯದಲ್ಲಿ ಪ್ರಚಲಿತವಾಗಿರುವ ವಿವರಗಳ ಪ್ರಕಾರ ಉಪ್ಪಾರರಿಗೂ ಮತ್ತು ಮ್ಯಾಸಬೇಡರಿಗೂ ಆ ಪರಿಸರದಲ್ಲಿ ಇದ್ದ ಅನ್ಯೋನ್ಯತೆಯೇ ಕಾರಣವಾಗಿ ಅವರು ಪೂಜಾರಿಗಳಾದರು. ಇದು ಎಂದಿಗೂ ತಪ್ಪದಿರಲಿ ಎಂದು ಸಾಂಕೇತಿಕವಾಗಿ ಚಿನ್ನದ ಕುರ್ಪಿ ಮತ್ತು ಸನಿಕೆಯನ್ನು ಮಾರಮ್ಮನ ಪುಟ್ಟಿಯಲ್ಲಿ ಸಂರಕ್ಷಿಸಿ ಇಡಲಾಗುತ್ತದೆ ಎನ್ನುತ್ತಾರೆ. ಈ ಎರಡೂ ಸಮುದಾಯಗಳ ಮಧ್ಯೆ ಇದ್ದ ಅನ್ಯೋನ್ಯತೆ ಯಾವುದು ಎಂದಾಗ ಹಾಗೆಲ್ಲಾ 'ಹೊಟ್ಟೆ ಬಗೆಯಬೇಡಿ' ಅವೆಲ್ಲಾ ಗುಟ್ಟಿನ ಸಂಗತಿಗಳು ಎನ್ನುತ್ತಾರೆ. ಮ್ಯಾಸಬೇಡರ ಅನೇಕ ಸಾಂಸ್ಕೃತಿಕ ನಾಯಕರ ಆರಾಧನಾ ನೆಲೆಗಳಲ್ಲಿ ಆಚರಣೆಗಳಲ್ಲಿ ಈ ಬಗೆಯ ಜಾತಿ ಸಂಕರವನ್ನು ಗುರುತಿಸಲು ಸಾಧ್ಯವಿದೆ. ಹಾಗಾಗಿ ಮಾರಮ್ಮ ಐವೋದಿ ಮಠದಲ್ಲಿ ಸ್ಥಾಪನೆಗೊಂಡನಂತರ ಉಪ್ಪಾರರ ಕಥೆ ಸೇರ್ಪಡೆಯಾಗಿದೆಯೇ ಹೊರತು ಮೂಲವೇ ಅವರಿಂದಾದುದಲ್ಲ.

ಮಾತೃರೂಪಿ ಸಂಸ್ಕೃತಿಯಲ್ಲಿ ಹುತ್ತದ ಆರಾಧನೆ ಚಾಲ್ತಿಯಲ್ಲಿ ಇದ್ದ ಯಾವುದೇ ಮಾರಮ್ಮನ ಪೂಜೆ ಎಂದಾಗ ಹುತ್ತದ ಪೂಜೆಯನ್ನು ಇವರೊಂದಿಗೆ ಸಮೀಕರಿಸುವ ಸಂಪ್ರದಾಯಗಳು ನಮ್ಮಲ್ಲಿವೆ. ಹೀಗಾಗಿ ಮಾರಮ್ಮ ನಾಗಮ್ಮನಿಗೆ ಒಲಿದಿದ್ದ ಕಥೆಯಿದು. ನಾಗಮ್ಮನಿಂದಲೇ ಮಾರಮ್ಮನಾಗಿಲ್ಲ. ಇನ್ನೂ ಕಾಡುಗೊಲ್ಲರಲ್ಲಿ ಗೌರಸಮುದ್ರದ ಮಾರಮ್ಮನನ್ನು ಆರಾಧಿಸುವ ವಿವರಗಳಿವೆ. ಸಮುದಾಯದ ಕಾವ್ಯ ಜುಂಜಪ್ಪನನ್ನು ಕುರಿತದ್ದೇ ಆಗಿದೆ. ಈತ ಈ ಸಮುದಾಯದ ಸಾಂಸ್ಕೃತಿಕ ನಾಯಕ. ಈತನ ಜನನ ಗೌರಸಮುದ್ರದ ಮಾರಿ ಈಶ್ವರನನ್ನು ಬೇಡಿ ಆತನ ಮಗ ವೀರಭದ್ರನ ಅಂಶದಿಂದಲೇ ಆಗಿದ್ದು ಮತ್ತು ಈ ಜುಂಜಪ್ಪನಿಗೆ ಅನೇಕ ಬಗೆಯ ಕಷ್ಟಗಳು ಬಂದಾಗ ಕಾಪಾಡಿದವಳೇ ಈಕೆ ಎಂಬುದು ಅಲ್ಲಿಯ ನಂಬಿಕೆಯಾಗಿದೆ. 'ದ್ರಾವಿಡರಲ್ಲಿ ವಲಸೆಗಾರ ಗಂಡುದೇವರುಗಳಿಗೆ ಸಹಾಯ ಮಾಡುವವಳು ಮಾರಮ್ಮ' ಎಂದು ಶ್ರೀ ಎಸ್.ಎಸ್.ಹಿರೇಮಠ್ ತಮ್ಮ 'ಜಾತ್ರೆಗಳು' ಕರತಿಯಲ್ಲಿ ಅಭಿಪ್ರಾಯಪಡುತ್ತಾರೆ. ಇಲ್ಲಿ ಜುಂಜಪಪ್ಪ ಪಶುಪಾಲಕನಾಗಿದ್ದು, ವಲಸೆಗಾರನಾಗಿರುತ್ತಾನೆ. ಮಾರಿಯ ಆರಾಧನೆ ಈ ಸಮುದಾಯದಲ್ಲಿ ಉಂಟು. ಹಾಗಾಗಿ ಗೌರಸಮುದ್ರದ ಮಾರಿ ಈತನಿಗೆ ಸಹಾಯ ಮಾಡಿದಳು ಎಂಬ ಕಥೆ ಇಲ್ಲಿ ಸೇರಿರಬಹುದು.

ಜನಪದ ಕಥನಗಳ ಪುನರ್‌ಸೃಷ್ಟಿಗೊಳ್ಳುವ ಬೇರೆ ಬೇರೆ ಸಮುದಾಯಗಳಲ್ಲಿ ಕಥನದ ನಾಯಕ ಅಥವಾ ನಾಯಕಿ ತಿರುಗಾಡಿ ಬರುತ್ತಾರೆ. ಹಾಗಾಗಿ ಇಲ್ಲಿ "ಮ್ಯಾಸಬೇಡರ ನಾಯಕಿಯಾದ ಮಾರಮ್ಮ ಉಪಾರರಿಗೂ, ಕಾಡುಗೊಲ್ಲರಿಗೂಈ ಊರುಗೊಲ್ಲರಿಗೂ ನಾಯಕಿಯಾಗುತ್ತಾಳೆ. ಅಷ್ಟೇ ಅಲ್ಲ ಜನಪ್ರಿಯ ಮಾರಿ ಪುರಾಣದ ಮಾರಿಯೂ ಆಗುತ್ತಾಳೆ. ಈಕೆ ಮಾರಿ ಎಂಬ ವಿವರ ಇದೆಯೇ ಹೊರತಾಗಿ ನಿಗದಿತ ಸಮುದಾಯಕ್ಕೆ ಸೇರಿದವಳು ಎಂಬ ವಿವರ ಸಿಗುವುದಿಲ್ಲ. ಅಂಬೆರಾಯ, ತುಂಬೆರಾಯ ತಮಗೆ ಮಾರಿ ಗೌರಸಮುದ್ರದ ಎತ್ತು ಕಾಯಲು ಎತ್ತಪ್ಪನನ್ನು ಕೈಲಾಸದಿಂದ ಕರೆತಂದು ಕೊಟ್ಟಿದ್ದಕ್ಕೆ ಏಳು ದಿನದ ತನಕ ಕುರಿ, ಕ್ವಾಣ ಕಡಿಸಿ ಆಕೆಗೆ ಜಾತ್ರೆ

ಮಾಡುತ್ತಾರೆ. ಎಂದು ಡಾ. ಮೀರಾಸಾಬಿಹಳ್ಳಿ ಶಿವಣ್ಣನವರು ತಮ್ಮ 'ಕಾಡುಗೊಲ್ಲ ಬುಡಕಟ್ಟು ವೀರರು' ಕೃತಿಯಲ್ಲಿ ಹೇಳುತ್ತಾರೆ."[೧೫] ಕಾಲಾನಂತರ ಮ್ಯಾಸಬೇಡರ ಮಾರಮ್ಮ ದೈವಿಕ ಸ್ಥಾನವನ್ನು ಪಡೆದಿದ್ದು, ಈ ಕಾಡುಗೊಲ್ಲರು ಈಕೆಗೆ ಕುರಿಕೋಣ ಬಲಿಕೊಟ್ಟು ಆರಾಧಿಸುತ್ತಾರೆ. ಜೊತೆಗೆ ಕಾಡುಗೊಲ್ಲರ ಪ್ರಕಾರ ಮಾರಮ್ಮ ಕೈಲಾಸಕ್ಕೆಹೋಗಿಬರುವ ದೇವತೆ. ಆದರೆ ಮ್ಯಾಸಬೇಡರಲ್ಲಿ ನೆಲದ ಮೇಲೆ ನಡೆದಾಡಿದ ಮಾನವಿ ಈಕೆ. ಕಥನದಲ್ಲಿ ಈಕೆ ಹೆಣಗಳ ತಿಂಬೊಳಲ್ಲ ರಣಚಂಡಿ ಇವಳಲ್ಲ "ರಣರಣಗುಟ್ಟುವ ಹದ್ದಲ್ಲ ಮಾರಮ್ಮ, ಮುದ್ದಿನ ತಾಯಿ ಭಕ್ತರಿಗೆ"[೧೬] ಎಂಬ ವರ್ಣನೆಯು ಬರುತ್ತದೆ. ತಮ್ಮ ಮಾರಿ ಮಹೇಶ್ವರಿ ಕೃತಿಯಲ್ಲಿಯೂ ಕೋ.ಶ.ವಿಶ್ವನಾಥರು ಇದನ್ನು ಉಲ್ಲೇಖಿಸಿದ್ದಾರೆ. ಈ ವಿವರಗಳ ಮೂಲತಃ ಮ್ಯಾಸಬೇಡರ ನಾಯಕಿ ನಂತರ ಕಾಡುಗೊಲ್ಲರಲ್ಲಿ ದೈವಿಕ ನೆಲೆಯಲ್ಲಿ ಭಾವಿಸಲ್ಪಟ್ಟಿದ್ದಾಳೆ. ಎನ್ನುವುದನ್ನು ಸ್ಪಷ್ಟೀಕರಿಸುತ್ತದೆ. ಆದರೆ ಈಕೆ ಮ್ಯಾಸಬೇಡ ಸಮುದಾಯಕ್ಕೆ ಸೇರಿದ ಐತಿಹಾಸಿಕ ಮಹಿಳೆ ಎಂದು ಹೇಳಹೊರಟಾಗ ಈಕೆ ಯರಮಂಚಿನಾಯಕನಿಗೆ ಸಹಾಯ, ಸಹಕಾರ ನೀಡಿದ್ದು ಇದೇ ಬಗೆಯ ಕಥೆಯಾಗಿರಬಹುದು ಎಂಬ ಅನುಮಾನ ಬರುತ್ತದೆ. ಆದರೆ ಈ ಅನುಮಾನ ಬಗೆಹರಿಸಿಕೊಳ್ಳಲು ಅಲ್ಲಿರುವ ಆರಾಧನೆ, ಆಚರಣೆಗಳು ಸಹಕರಿಸುತ್ತವೆ. ಪೂಜೆ ಮಾಡುವವರು ಉಪ್ಪಾರರು ಎಂಬುದನ್ನು ಬಿಟ್ಟರೆ, ಇತರೆ ಆರಾಧನೆ, ಆಚರಣೆಗಳನ್ನು ನಡೆಸುವವರು ಇಲ್ಲಿ ಮ್ಯಾಸಬೇಡರಾಗಿದ್ದಾರೆ. ಅಲ್ಲಿ ದೇವರ ಎತ್ತುಗಳು ಇದ್ದು, ಇಲ್ಲಿ ಮಾರಮ್ಮನವು ಬೊಮ್ಮದೇವರದು ಎಂಬ ಬೇಧ ಇಲ್ಲ. ಇವರಿಬ್ಬರಿಗೂ ಇವು ಸಲ್ಲುತ್ತವೆ. ಹಾಗಾಗಿ ಈಕೆ ಮ್ಯಾಸಬೇಡರ ಸಾಂಸ್ಕೃತಿಕ ನಾಯಕಿ ಎಂದು ಹೇಳಲು ಸಾಧ್ಯವಾಗುತ್ತದೆ.

ಕೋ.ಶ.ವಿಶ್ವನಾಥ ಮತ್ತು ರಂಗಪ್ಪನವರು ಬಹಳ ಹಿಂದೆಯೇ ಈ ಮಾರಿಯ ಕಥೆಯನ್ನು ಕುರಿತು ಕೃತಿ ರಚನೆ ಮಾಡಿದ್ದಾರೆ. "ನಾಗಮ್ಮ ಕೆಂಚಮ್ಮನ ವಿವರಗಳನ್ನು ಕೊಡುತ್ತಾ ದಾನಸಾಲಮ್ಮ ಮತ್ತು ಸುಕ್ಕಲು ಮಲ್ಲಿನಾಯಕನ ಮಗಳೇ ಈ ಮಾರಮ್ಮ. ಈಕೆ ಯರಮಂಚಿನಾಯಕನಿಗೆ ಸಹಕಾರ ನೀಡಿದಳು ಎನ್ನುತ್ತಾರೆ. ದಾನಸಾಲಿಯಮ್ಮನ ಮಗಳು ಅಕ್ಕರಾಯಮ್ಮನೇ ಹೊರತು ಮಾರಮ್ಮನಲ್ಲ. ಈಕೆ ದಾನಸಾಲಿಯ ಮಗಳಾದ ಅಕ್ಕರಾಯಮ್ಮನಲ್ಲಿ ನಂತರದ ಪೀಳಿಗೆಗೆ ಸೇರುವ ಈಕೆ, ಶ್ರೀಶೈಲ ಪ್ರಾಂತ್ಯದಿಂದ ತಂಡಗಳಾಗಿ ಇವರು ಮಧ್ಯಕರ್ನಾಟಕದ ಕಡೆ ಬಂದವರೆಂಬುದು ಐತಿಹಾಸಿಕ ಸತ್ಯ. ಹೀಗೆ ಬಂದ ಎರಡನೆಯ ತಂಡದಲಿದ್ದವಳೇ ಈಕೆ. ಮುತ್ತಿಗಾರರ ಮೇಲೆ ಈಕೆ ಮುನಿಸಿಕೊಂಡು ಹೋದಳು. ನಿಡುಗಲ್ಲಿನ ಕಡೆ ಹೋದವಳು ತಿರುಗಿ ಇಲ್ಲಿಗೆ ಬರದೆ ಆ ಪ್ರಾಂತ್ಯದಲ್ಲಿಯೇ ನೆಲೆಸಿದಳು ಎಂದು ಅಭಿಪ್ರಾಯಪಡುತ್ತಾರೆ. ಈಕೆ ಕಾಟಮಲ್ಲಿನಾಯಕನ ಸೋದರಿಯರಲ್ಲಿ ಒಬ್ಬಳು ಎಂಬ ಅಭಿಪ್ರಾಯವೂ ಈ ಸಮುದಾಯದಲ್ಲಿದೆ. ರಾಯದುರ್ಗದ ದೊರೆ ತಮ್ಮ ಮನೆಯನ್ನು ನಾಶ ಮಾಡುವುದರ ಮೂಲಕ ತಮ್ಮನ್ನು ಅಧೀನರಾಗಿಸಿಕೊಳ್ಳುವ ಪ್ರಯತ್ನ ಮಾಡಿದಾಗ ಈಕೆ ಮಾರುವೇಷದಲ್ಲಿ ಹೋಗಿ ಆತನನ್ನು ಕೊಂದು ಬಂದಳೆಂಬುದಕ್ಕೆ ಸಾಕ್ಷಿಯಾಗಿ ಆ ಕೋಟೆಯ ಬಾಗಿಲಲ್ಲಿ ಇಂದಿಗೂ ಗೌರಸಮುದ್ರದ ಮಾರಮ್ಮನ ದೇವಾಲಯವನ್ನು ಕಟ್ಟಿ ಆರಾಧನೆ ಮಾಡಲಾಗುತ್ತದೆ. ಅಡಗುಪ್ಪೆಯ ಮಾರ್ಗದಲ್ಲಿ ಈಕೆ ಪ್ರಯಾಣ ಮಾಡಿದಳು ಎನ್ನುವುದಕ್ಕೆ ಐತಿಹ್ಯವಿದೆ. ಅಡಗುಪ್ಪೆಯ ಅರಣ್ಯದಲ್ಲಿ

ಒಂದು ಬಂಡೆಯ ಮೇಲೆ ಕೆಂಪು ಕಲೆಗಳಿದ್ದು, ಮಾರಮ್ಮ ಯರಬೊಮ್ಮಳ ನಾಯಕನನ್ನು ಕೊಲ್ಲಲು ಹೋಗುವಾಗ ದಾರಿಯಲ್ಲಿ ಎಲೆ ಅಡಿಕೆ ಹಾಕಿಕೊಂಡು ಉಗುಳಿದ ಗುರುತು ಎನ್ನುತ್ತಾರೆ."[೧೭]

ಈಕೆಯನ್ನು ಕುರಿತಾದ ಐತಿಹ್ಯಗಳು; ತುಮ್ಮಲೂ ಪ್ರಾಂತ್ಯದಲ್ಲಿಯೂ ಇದ್ದು ಸಮಾಧಿ ಅದರಲ್ಲಿ ಒಂದು ಹೇಳಲಾಗುತ್ತದೆ. ಆದರೆ ಈಗ ಅದರ ಕುರುಹುಗಳು ಉಳಿದಿಲ್ಲ. ಬದಲಾಗಿ ಮಾರಮ್ಮನ ಪುಟ್ಟಿಯನ್ನಿರಿಸಲು ಕಟ್ಟೆಯನ್ನು ಕಟ್ಟಿದ್ದಾರೆ. ಬಂಡೆಯ ಮೇಲೆ ಒಂದು ಚಿತ್ರವನ್ನು ಕೆತ್ತಿದ್ದ, ಮಹಿಳೆ ಪುರುಷನ ಕರುಳನ್ನು ಬಗೆಯುವ ಹಾಗೆ ಆ ಚಿತ್ರವಿದೆ. ರಾಯದುರ್ಗದ ದೊರೆಯ ಹೊಟ್ಟೆಯನ್ನು ಬಿಗಿದ ಸಂಕೇತ ಈ ಚಿತ್ರ ಎಂದು ಹೇಳುತ್ತಾರೆ. ಆದರೆ ಯರಮಂಚಿನಾಯಕ ಈಕೆಯ ಮಾರ್ಗದರ್ಶನದ ಮೇರೆಗೆ ಅಲ್ಲಿಯ ಒಂದು ಕಿ.ಮೀ ದೂರದಲ್ಲಿ ಲಿಂಗದ ಗುಡಿಯನ್ನು ಕಟ್ಟಿಸಿ ನೂರೊಂದು ಲಿಂಗಗಳನ್ನು ಪ್ರತಿಷ್ಠಾಪಿಸಿದ ಎಂಬುದು ಐತಿಹಾಸಿಕ ಸತ್ಯವಾಗಿದ್ದು ಈಗಲೂ ಆಗುಡಿ ಅಲ್ಲಿದೆ. ಮತ್ತು ಸಂಬಂಧಿಸಿದ ವಿಧಿ ಆರಾಧನೆಗಳೂ ಪ್ರತಿವರ್ಷ ನಡೆಯುತ್ತವೆ. ಈ ಮೂಲಗಳ ಮೂಲಕ ಈಕೆ ಮ್ಯಾಸಬೇಡರ ಸಾಂಸ್ಕೃತಿಕ ನಾಯಕಿ ಎಂದು ಸ್ಪಷ್ಟೀಕರಿಸಲು ಸಾಧ್ಯವಾಗುತ್ತದೆ. ಮತ್ತು ಮಾರಿಯ ಪುರಾಣದ ಕಥೆಗಿಂತ ಈಕೆಯ ಕಥೆ ಭಿನ್ನವಾಗುತ್ತದೆ.

ಇದೇ ಗ್ರಾಮದಲ್ಲಿ ಊರು ಮಾರಮ್ಮನ ದೇವಾಲಯ ಬೇರೆ ಇದ್ದು ಅಪರೂಪಕ್ಕೆ ಅಲ್ಲಿ ಊರು ಮಾರಮ್ಮನ ಜಾತ್ರೆಯನ್ನು ಹಮ್ಮಿಕೊಳ್ಳಲಾಗುತ್ತದೆ. 'ಊರು ಮಾರಮ್ಮನ ಕೋಣ' ಎಂದು ನಿರ್ದಿಷ್ಟವಾಗಿ ಹೆಸರಿಸಿ ಅದನ್ನು ತಂದು ಮೇಯಲು ಬಿಟ್ಟು ಅದನ್ನು ಬಲಿಕೊಟ್ಟು ಪೂಜೆ ಮಾಡಲಾಗುತ್ತದೆ. ಈ ಮಾರಮ್ಮನನ್ನು ಪೂಜಿಸುವವರು ಅಕ್ಕಸಾಲಿಗರು ಹಾಗಾಗಿ ಗೌರಸಮುದ್ರದ ಮಾರಿ ಊರಮಾರಿ ಅಲ್ಲ ಬದಲಾಗಿ ಮ್ಯಾಸಬೇಡರ ಸಾಂಸ್ಕೃತಿಕ ನಾಯಕಿ ಈಕೆ ಎಂದು ಹೇಳಲು ಸಾಧ್ಯವಾಗುತ್ತದೆ. ತುಮ್ಮಲಯ್ಯ ಮಾರಮ್ಮನಿಗೆ ಕೋಣ ಮತ್ತು ಮಗನನ್ನು ಬಲಿಕೊಟ್ಟ ಪ್ರಸಂಗ ಈ ಪ್ರಾಂತ್ಯದಲ್ಲಿ ವಿಶೇಷವಾಗಿ ಪ್ರಚಾರದಲ್ಲಿರುವ ಕಥೆಯಾಗಿದೆ. ಇದೂ ಸಹ ಮಾರಮ್ಮನ ವಿಶೇಷತೆಯನ್ನು ಹೇಳಲು ಹುಟ್ಟಿಕೊಂಡ ಕಥೆ. ಹಸಿದ ಮಗನಿಗೆ ಅರಣ್ಯದಲ್ಲಿ ಪವಾಡ ಸದೃಶವಾಗಿ ಬನ್ನಿಯ ಎಲೆಯ ಮೇಲೆ ಪಂಚಭಕ್ಷ್ಯ, ಪರಮಾನ್ನಗಳನ್ನು ಬಡಿಸಿ ಹಸಿವು ನೀಗಿಸಿದ್ದಾಗಲೀ, ನಂತರ ತಂದೆ ಮತ್ತು ಮಗ ಇಬ್ಬರನ್ನೂ ಬಲಿ ತೆಗೆದುಕೊಂಡು ಮತ್ತೆ ಬದುಕಿಸಿಕೊಂಡದ್ದಾಗಲೀ ಆಕೆಯ ಶಕ್ತಿ, ಸಾಮರ್ಥ್ಯಗಳನ್ನು ಹೊಗಳಲು ಹುಟ್ಟಿಕೊಂಡ ಕಥೆಯೇ ಹೊರತು ಬೇರೇನೂ ಅಲ್ಲ. ಇಲ್ಲಿ ಮತ್ತೊಂದು ವಿಚಾರವನ್ನು ನಾವು ಗಮನಿಸಲು ಸಾಧ್ಯವಿದೆ.

ಸಾಮಾನ್ಯವಾಗಿ 'ಮಾರಿಯ ಪುರಾಣ'ವೆಂದರೆ ಬಲಿಯಾಗುವ ಕೋಣ ಮಾರಮ್ಮನಿಗೆ ಗಂಡನಾಗಬೇಕು. ಬ್ರಾಹ್ಮಣರ ಮಹಿಳೆ ದಲಿತನನ್ನು ಮದುವೆಯಾಗಿ ನಂತರ ವಿಷಯ ತಿಳಿದು ಆತನ ಮೋಸಕ್ಕೆ ಪ್ರತಿಯಾಗಿ ಆತನನ್ನು ಅಂತ್ಯಗೊಳಿಸಿದಳು. ಅದರ ಪ್ರತೀಕವೇ ಈ ಕೋಣನ ಬಲಿ ಎಂಬ ಅಭಿಪ್ರಾಯವಿದೆ. ಆದರೆ ಇಲ್ಲಿ ಆ ಬಗೆಯ ಮಾರಿಯ ಪುರಾಣ ಪ್ರಚಲಿತವಿಲ್ಲ. ಬದಲಾಗಿ ಆ ದಿನ ಮಾರಮ್ಮ ತುಮ್ಮಲ್ಲಯ್ಯನಿಗೆ ಹೇಳಿದ್ದು, ಈ ಕಾಡು ಬೆಟ್ಟದಲ್ಲಿ ಭಯಂಕರವಾದ

ಕೋಣವೊಂದಿದೆ. ಅದನ್ನು ಯಾರಿಗೂ ನಿಗ್ರಹಿಸಲು ಸಾಧ್ಯವಾಗುತ್ತಿಲ್ಲ. ನೀನು ಹಿಡಿದು ತಾ ಎಂದು ಹೇಳುತ್ತಾಳೆ. ಅಂದರೆ ಇದು ನಂತರದಲ್ಲಿ ಹುಟ್ಟಿದ ಕಥೆ ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ "ಕೋಣ ಇಲ್ಲಿ ರೈತಾಪಿ ಸಮುದಾಯಕ್ಕೆ ಹೊಲ ಗದ್ದೆಗಳನ್ನು ಹಾಳುಮಾಡುತ್ತಾ ತೊಂದರೆ ಕೊಡುತ್ತಿದ್ದ ಕಾರಣ ಅದನ್ನು ಹಿಡಿದುತಂದು ಕೊಲ್ಲಬೇಕಾಗಿತ್ತು. ಕೊಲ್ಲುವ ಧೈರ್ಯ ಯಾರಿಗೂ ಇರಲಿಲ್ಲ. ಕಾರಣ ತಾವೇ ಅದರಿಂದ ಕೊಲ್ಲಲ್ಪಟ್ಟರೆ ಎಂಬ ಭಯ. ಹಾಗಾಗಿ ತಮ್ಮ ಅಂಕೆಯಲ್ಲಿ ಬಾಳುತ್ತಿರುವ ಶೋಷಿತ ಸಮುದಾಯವನ್ನು ಇಂತಹ ಅಪಾಯಕ್ಕೆ ತಳ್ಳಲು ಸದಾ ಸಿದ್ಧರಾಗಿರುವ ಬಲಿಷ್ಠರು ಈತನಿಂದ ಈ ಕೆಲಸ ಮಾಡಿದ್ದಾರೆ ಮಾಡದಿದ್ದರೆ ನಿನ್ನ ಮಗನನ್ನು ಮಾರಮ್ಮನಿಗೆ ಬಲಿಕೊಡಬೇಕಾಗುತ್ತದೆ ಎಂಬ ಎಚ್ಚರಿಕೆಯ ಪ್ರತೀಕವೇ ಆತ ಮಗನನ್ನು ಬಲಿಕೊಟ್ಟ ಪ್ರಸಂಗ ಎನ್ನಿಸುತ್ತದೆ."[೧೮] ಗೌರಸಮುದ್ರಕ್ಕೆ ಸಮೀಪದ ಹೊಸಹಳ್ಳಿಯ ಬಳಿ ಪೆಂಡೆಂಡು ಹಳ್ಳಿದ ಬಂಡೆ ಎಂಬ ಪ್ರದೇಶದಲ್ಲಿ ಬಂಡೆಯ ಮೇಲೆ ಕೋಣದ ಹೆಜ್ಜೆಗಳನ್ನು ಕೆತ್ತಲಾಗಿದೆ. ಅಲ್ಲಿ ಪಾದಗಳ ಗುರುತಿದ್ದು ಇದನ್ನು ಮಾರಮ್ಮ ಹೆಜ್ಜೆಗಳು ಎಂದು ಹೇಳಲಾಗುತ್ತದೆ. ಜನಪದರು ಹೀಗೆ ಪುರಾಣ ಮತ್ತು ಐತಿಹ್ಯಗಳ ಮೂಲಕ ಗತವನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಇವುಗಳೊಂದಿಗೆ ಆಚರಣೆಯೂ ಸೇರಿಕೊಂಡು ಒಟ್ಟು ನಂಬಿಕೆ ಇಲ್ಲಿ ಕೆಲಸ ಮಾಡುತ್ತದೆ.

ವರವು ತುಮ್ಮಲಯ್ಯ ಮತ್ತು ಮಾರಮ್ಮ

ವರವು ತುಮ್ಮಲಯ್ಯ ಚಲವಾದಿ ವಂಶದವನು. ಇವನು ಮತ್ತು ಇವನ ಮಗ ಬಟ್ಟೆ ನೆಯ್ದು, ಮಾರಾಟ ಮಾಡಿ ಜೀವನ ಮಾಡುತ್ತಿದ್ದರು. ದೇವರಹಳ್ಳಿ (ಗೌರಸಮುದ್ರಕ್ಕೆ ಎರಡು ಮೈಲಿ ಅಂತರದಲ್ಲಿದೆ) ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಬಟ್ಟೆ ಮಾರಾಟ ಮಾಡಿಕೊಂಡು ಜೀವಿಸುತ್ತಿದ್ದರು. ಬಟ್ಟೆ ವ್ಯಾಪಾರ ಮಾಡಿಕೊಂಡು ಈತ ಒಮ್ಮೆ ತನ್ನ ಮಗನ ಜೊತೆ ಬರುತ್ತಿದ್ದ. ಮಗ ಹಸಿದು ಊಟಕ್ಕಾಗಿ ತುಂಬಾ ಅಳುತ್ತಿದ್ದ. ಮಾರಮ್ಮ ತುಮ್ಮಲನಲ್ಲಿ ಎದುರಾಗುತ್ತಾಳೆ. ಏಕೆ ಹೀಗೆ ಅಳುತ್ತಿದ್ದಾನೆ ಎಂದು ಕೇಳುತ್ತಾಳೆ. ಹಸಿವಿನ ಕಾರಣದಿಂದಾಗಿ ಅಳುತ್ತಿದ್ದಾನೆ. ಈ ಕಾಡಿನಲ್ಲಿ ನಾನೆಲ್ಲಿ ಊಟ ತರಲಿ ಎನ್ನುತ್ತಾನೆ. 'ಬನ್ನಿ' ಮರದ ಎಲೆ ತೆಗೆದುಕೊಂಡು ಬಾ ಎನ್ನುತ್ತಾಳೆ, ತರುತ್ತಾನೆ. ತನ್ನ ಮಹಿಮೆಯಿಂದ ಅದನ್ನೇ ಅಗಲವಾದ ಎಲೆಗಳನ್ನಾಗಿ ಮಾಡಿ ಹಾಸಿ, ಪಂಚಾಮೃತ, ಪಂಚಭಕ್ಷ್ಯಗಳೇ ಎಲೆತುಂಬಾ ತುಂಬಿಕೊಳ್ಳುವಂತೆ ಮಾಡುತ್ತಾಳೆ. ಬಹು ರುಚಿಯಾದ ಆಹಾರವನ್ನು ಈ ಹಸಿದ ಮಗ ಊಟ ಮಾಡಿದ. ಉಳಿದದ್ದನ್ನು ತಂದೆಯೂ ಊಟಮಾಡಿ ಸಂತೋಷಪಟ್ಟ. ನಿನ್ನ ಮಹಿಮೆ ಅಪಾರವಾದುದು ತಾಯಿ, ನಾನು ನಿನಗೆ ಪ್ರತಿಯಾಗಿ ಯಾವ ಸೇವೆ ಸಲ್ಲಿಸಲಿ ಎಂದು ತುಮ್ಮಲಯ್ಯ ಕೇಳುತ್ತಾನೆ. ಈ ಪ್ರಾಂತ್ಯದಲ್ಲಿ ಒಂದು ಅಸಾಧಾರಣವಾದ ಕೋಣವಿದೆ. ಅದನ್ನು ನೀನು ಹಿಡಿದು ತಂದು ಅದನ್ನು ಒಪ್ಪಿಸಬೇಕು. ಅದನ್ನು ನಾನು ನಿಗ್ರಹಿಸುತ್ತೇನೆ, ನಂತರ ನನ್ನ ಹೆಸರಲ್ಲಿ ಜಾತ್ರೆ ಮಾಡಬೇಕೆಂದು ಊರಲ್ಲಿ ಡಂಗುರ ಹೊಡೆಯಬೇಕು ಎನ್ನುತ್ತಾಳೆ. ತುಮ್ಮಲಯ್ಯ ಈ ಮಾತನ್ನು ಊರಿನಲ್ಲಿ ಹೇಳುತ್ತಾಳೆ. ಜಾತ್ರೆ ಮಾಡಲು ಊರಿನವರೆಲ್ಲ ಒಪ್ಪುತ್ತಾರೆ.

ತುಮ್ಮಲುವಿನಲ್ಲಿಯೇ ಜಾತ್ರೆಯ ಏರ್ಪಾಡು ಮಾಡುತ್ತಾರೆ. ಸುತ್ತಲ ಮೂಲೆಗಳಲ್ಲಿ ಕಾಡಿನಲ್ಲಿ ಮೇಯ್ದು ಕೊಬ್ಬಿದ್ದ ಕೋಣವೊಂದು ಜನರಿಗೆ ತುಂಬಾ ತೊಂದರೆ ಕೊಡುತ್ತಿತ್ತು. ಆ ಕೋಣವನ್ನು ಯಾರಿಗೂ ನಿಗ್ರಹಿಸಲು ಸಾಧ್ಯವಾಗಿರಲಿಲ್ಲ. ಆ ಕೆಲಸ ಈಗ ತುಮ್ಮಲಯ್ಯನ ಪಾಲಿಗೆ ಬಂದಿದೆ. ಅದನ್ನು ಹಿಡಿದು ತರಲು ನನಗೆ ಮಾರ್ಗದರ್ಶನ ಮಾಡು ಎಂದು ಹೇಳುತ್ತಾನೆ. ಒಂದು ತಾಳೆಮರವನ್ನು ಕಡಿದು ಅದನ್ನು ಕೊರೆದು ಬಾಳೆಯ ಎಲೆಯಿಂದ ಅದರ ಎರಡೂ ಭಾಗ ಮುಚ್ಚಿ, 'ಉರುಮೆ' ಎಂಬ ವಾದ್ಯ ಮಾಡಿಕೋ, ಈ ಉರುಮೆಯನ್ನು ಬಾರಿಸುತ್ತಾ ಹೋಗು ಅದರ ಕತ್ತಿಗೆ ಒಂದು ಅಂಗು ನೂಲನ್ನು ಹಾಕು ಎಂದು ಹೇಳುತ್ತಾಳೆ. ಅದೇ ಪ್ರಕಾರ ತುಮ್ಮಲಯ್ಯ ಉರುಮೆ ಮಾಡಿಕೊಂಡು ತನ್ನ ಮಗನೊಂದಿಗೆ ಕಾಡಿನಲ್ಲಿ ಮೇಯುತ್ತಿದ್ದ ಕೋಣದ ಬಳಿ ಹೋಗುತ್ತಾನೆ.

ಮಾರಮ್ಮನ ಸೂಚನೆಯಂತೆ ಉರುಮೆ ಬಡಿಯುತ್ತಾ ಹೋಗಲು ಆರ್ಭಟಿಸಿಕೊಂಡು ಇವನನ್ನು ಇರಿಯಲು ಬಂದ ಕೋಣ ಉರುಮೆ ಶಬ್ದವನ್ನು ಕೇಳಿ ನಿಧಾನವಾಗಿ ತಲೆದೂಗುತ್ತಾ ಇರಿಯುವುದನ್ನೇ ಮರೆತು ಉರುಮೆ ಮೇಲೆ ತಲೆಯನ್ನಿಟ್ಟು ಸುಮ್ಮನಾಯಿತು. ಆಗ ಉರುಮೆಗೆ ಕಟ್ಟಿಕೊಂಡಿದ್ದ ಅಂಗುನೂಲನ್ನು ಕೋಣನ ಕುತ್ತಿಗೆಗೆ ಹಾಕುತ್ತಾನೆ. ಅದು ತಲೆದೂಗಿದಂತೆಲ್ಲಾ ಉರುಮೆಯನ್ನು ನಿಧಾನಗತಿಯಲ್ಲಿ ಭಾರಿಸುತ್ತಾ ಭಾರಿಸುತ್ತಾ ಹಿಂದಕ್ಕೆ ಸರಿಯುತ್ತಾ ಬಂದಂತೆಲ್ಲಾ ಕೋಣ ಹಾಗೆಯೇ ಬರುತ್ತದೆ. ಜನರ ಬಳಿ ಬರಲು ಅಲ್ಲಿ ಸೇರಿದ ಜನ ಕೋಣನನ್ನು ಹಿಡಿದು, ಮಚ್ಚು, ಕೊಡಲಿಗಳಿಂದ ಕಡಿಯಲು ಮುನ್ನುಗ್ಗುತ್ತಾರೆ. ಆದರೆ ಮಾರಮ್ಮ ನೀನೇ ಕಡಿ ಎಂದು ತುಮ್ಮಲಯ್ಯನಿಗೆ ಆದೇಶಿಸುತ್ತಾಳೆ ಹಿಂಜರಿಯುತ್ತಾನೆ, ನಾನಿದ್ದೇನೆ ಕಡಿ ಎನ್ನುತ್ತಾಳೆ. ಒಂದೇ ಕೋಣ ಆಯಿತಲ್ಲ ಜೊತೆ ಬೇಕಲ್ಲ ಎನ್ನುತ್ತಾಳೆ. ನಾನೇನು ಮಾಡಲಿ ಎಂದ ತುಮ್ಮಲಯ್ಯನಿಗೆ ನಿನ್ನ ಮಗನನ್ನೇ ಕೋಣದ ಜೊತೆಯಲ್ಲಿ ಬಲಿಕೊಡು ಎನ್ನುತ್ತಾಳೆ. ನೀನು ಕೊಡಲೇಬೇಕು ನಿನ್ನ ಕೈಯ್ಯಿಂದಲೇ ಈ ಎರಡು ಬಲಿ ನಡೆಯಬೇಕು ಎನ್ನುತ್ತಾಳೆ. ಕೊನೆಗೆ ಧೈರ್ಯ ಮಾಡಿದ ತುಮ್ಮಲಯ್ಯ ತನ್ನ ಮಗನನ್ನು ಮತ್ತು ಕೋಣವನ್ನು ಕಡಿಯುತ್ತಾನೆ. ಸಂಪ್ರೀತಳಾದ ಮಾರಮ್ಮ ನಿನ್ನ ಭಕ್ತಿಗೆ ಮೆಚ್ಚಿದೆ. ನಿನಗಾಗಿ ನಾನೇನು ಮಾಡಲಿ, ಏನನ್ನು ಕೊಡಲಿ, ಏನು ವರಬೇಕು ಎಂದು ಕೇಳುತ್ತಾಳೆ. ಮೊದಲ ಪೂಜೆ, ಘಟ, ಗಂಗಾದೀಪ ನನಗೆ ಕೊಡು ಎನ್ನುತ್ತಾನೆ. ವರ ಕೇಳಿದರೂ ನನ್ನ ಸೇವೆಯನ್ನೇ ಬಯಸಿದೆ ಹೊರತು ಯಾವ ಸುಖ ಸಂಪತ್ತನ್ನೂ ಬೇಡಲಿಲ್ಲ. ಹೀಗಾಗಿ ನೀನು ನನಗಿಂತ ಎತ್ತರವಾಗಿಬಿಟ್ಟೆ. ನಾನೇಗೆ ನಿನಗೆ ಆಶೀರ್ವದಿಸಲಿ ಎನ್ನುತ್ತಾಳೆ. ನನ್ನ ತಲೆಮೇಲೆ ನಿನ್ನ ಪಾದ ಇಟ್ಟು ಅನುಗ್ರಹಿಸು ಎಂದು ಬಾಗಲು ತಲೆಯ ಮೇಲೆ ಕಾಲಿಟ್ಟು ಆಕೆ ಆತನನ್ನು ಭೂಮಿಗೆ ತುಳಿದುಬಿಡುತ್ತಾಳೆ. ಮಗನನ್ನು ಕಡಿದ ಸ್ಥಳದಲ್ಲಿಯೇ ಆತನೂ ಸಮಾದಿಯಾಗುತ್ತಾನೆ. ಇನ್ನು ನನ್ನ ಸೇವೆ ಮಾಡುವವರಾರು ಎಂದು ಯೋಚಿಸಿ ಆತನ ಸತ್ಯಕ್ಕೆ ಮೆಚ್ಚಿ ತನ್ನ ಬೆವರನ್ನು ಆ ಸ್ಥಳಕ್ಕೆ ಹಾಕುತ್ತಾಳೆ. ಆಕೆಯ ಮಹಿಮೆಯಿಂದ ತಂದೆ ಮಗ ಇಬ್ಬರಿಗೂ ಪುನಃ ಜೀವನ ಬರುತ್ತದೆ. ಈ ಕಾರಣದಿಂದಾಗಿಯೇ ಈಗಲೂ ಮೊದಲು ಪೂಜೆ ಆ ಜಾಗಕ್ಕೆ ಸಲ್ಲುತ್ತದೆ.

ನಿಡುಗಲ್ಲಿನಿಂದ ಮೀಸಲು ಕೊಡುವ ಬಗ್ಗೆ:

ಕ್ರಿ.ಶ. ೧೯೭೦ ದಶಕದಲ್ಲಿಯೇ ಶ್ರೀ ಕೋ.ಶ.ವಿಶ್ವನಾಥ ಮತ್ತು ಶ್ರೀ ಕೆ.ಎಸ್.ಲಿಂಗಣ್ಣನವರು "ಗೌರಸಮುದ್ರದ ಮಾರಮ್ಮನ ಬಗೆಗೆ ಅಲ್ಲಿಯ ಜನಪದರು ಹಾಡುವ ಗೀತೆಗಳನ್ನು ಸಂಗ್ರಹಿಸಿ, ಐತಿಹ್ಯಗಳನ್ನು ಉಲ್ಲೇಖಿಸುತ್ತಾ ಮ್ಯಾಸನಾಯಕರ ಮತ್ತು ಇತರ ಸಮುದಾಯದವರ ಸ್ಮರಣೆಯಲ್ಲಿ ಮಾರಮ್ಮ ಹೇಗೆ ಉಳಿದುಬಂದಿದ್ದಾಳೆ ಎಂಬುದನ್ನು ತಮ್ಮ 'ಮಾರಿಕತೆ' ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಉಪ್ಪಾರ ಕೆಂಚಮ್ಮ ಮತ್ತು ನಾಗಮ್ಮನಿಗೆ ಮಾರಮ್ಮ ಒಲಿದ ಕತೆ, ಬಳಿಗಾರ ಮತ್ತು ಮಾರಮ್ಮನಿಗೆ ಸಂಬಂಧಿಸಿದ ಕತೆ ಇವೆಲ್ಲವುಗಳನ್ನು ವಿವರಿಸಿದ್ದಾರೆ."

ಮ್ಯಾಸ ಮಂಡಲದಲ್ಲಿ ನಾಯಕಿ ಸ್ಥಾನದಲ್ಲಿರುವ ಮಹಿಳೆ ಅಕ್ಕರಾಯಮ್ಮ ದಾನಸಾಲಿಯಮ್ಮ ಮತ್ತು ಸಂಚುಶಿಕಾನಾಯಕನ ಮಗಳೀಕೆ. ಸಹೋದರರನ್ನು ಸಲಹಿ ಅವರಿಗೆ ಸ್ಥಾನಮಾನ ದೊರಕಿಸಿಕೊಟ್ಟವಳು. ಈಕೆಯೇ ಮಾರಮ್ಮ ಎಂದು ಹೇಳಿ ಈಕೆ ಮಾಡಿದ ಸಾಹಸ, ಸಾಧನೆಗಳನ್ನು ತಿಳಿಸುತ್ತಾ ಯರಮಂಚಿನಾಯಕನನ್ನು ಹೊಟ್ಟಣ್ಣನಾಯಕನಿಂದ ರಕ್ಷಿಸಿದವಳು. ಇವಳೇ ಲಂಕಿಣಿ ಬಳಿ ಹೊಟ್ಟಣ್ಣ ನಾಯಕ ಇವರಿಗೆ ಮೋಸದಿಂದ ಇವರಿಗೆ ನಿಶೇಧವಾಗಿರುವ ಕೋಳಿಯನ್ನು ತಿನ್ನಿಸಲು ಪ್ರಯತ್ನಿಸಿ ತೊಂದರೆ ಕೊಟ್ಟಾಗ ಅವಳನ್ನು ಕಾಪಾಡಿದ್ದವಳೇ ಮಾರಮ್ಮ ಎಂದು ಹೇಳುತ್ತಾರೆ. ಸೇಡು ತೀರಿಸಿಕೊಳ್ಳಲೆಂದು ಮ್ಯಾಸರೆಲ್ಲಾ ನಿಡುಗಲ್ಲಿಗೆ ಹೋಗಿ ಹುಟ್ಟಣ್ಣನಾಯಕನಿಗೆ ತಿಳಿಯದಂತೆ ಆತನಿಗೆ ಸೇರಿದ ಎಮ್ಮೆಗಳನ್ನು ಹೊಡೆದುಕೊಂಡು ಬಂದು 'ಎನಮಲುದೊಡ್ಡಿ' ಎಂದು ಹೆಸರಿಟ್ಟು ಅದರಲ್ಲಿ ಅವುಗಳನ್ನು ಕೂಡಿ ಒಂದು ಎಮ್ಮೆಯನ್ನು ಕೊಯ್ದು ಬೇಯಿಸಲು ಇಟ್ಟಿರುವಾಗ ಹೊಟ್ಟಣ್ಣನಾಯಕ ಬಂದು ಹೀಗೆ ಕಳ್ಳತನ ಮಾಡಬಹುದೇ? ನನ್ನ ಎಮ್ಮೆಯನ್ನು ಕೊಲ್ಲುವುದು ಸರಿಯೇ ಎಂದು ಕೇಳಲು ನಾವು ಎಮ್ಮೆಯನ್ನು ಕೊಯ್ದಿಲ್ಲ ಬೇಯಿಸುತ್ತಿಲ್ಲ, ಬೇಯಿಸುತ್ತಿರುವುದು ಕುಂಬಳದ ಹೋಳುಗಳನ್ನು ಎಂದು ಹೇಳಿ ತೋರಿಸುತ್ತಾರೆ.

ಮಾರಮ್ಮನ ಪವಾಡವೇ ಕಾರಣವಾಗಿ ಆ ಮಾಂಸದ ಚೂರುಗಳು ಕುಂಬಳದ ಹಣ್ಣಿನ ಚೂರುಗಳಾಗಿ ಮಾರ್ಪಾಡಾಗಿರುತ್ತವೆ. ಆಗ ಹೊಟ್ಟಣ್ಣನಾಯಕ ಮಾರಮ್ಮನಿಗೂ, ಯರಮಂಚಿನಾಯಕನಿಗೂ ಶರಣಾಗಿ ಇನ್ನು ನನ್ನ ವಂಶವಿರುವ ತನಕ ನಿಡುಗಲ್ಲಿನಿಂದ ನಿನಗೆ ಮೀಸಲು ತೆಗೆದುಕೊಂಡು ಬಂದು ಒಪ್ಪಿಸುತ್ತೇವೆ ಎಂದು ತನ್ನ ಎಮ್ಮೆಗಳನ್ನು ಬಿಡಿಸಿಕೊಂಡು ಹರಕೆ ಮಾಡಿಕೊಂಡು ಹೋಗುತ್ತಾನೆ. ತುಮ್ಮಲುವಿನಲ್ಲಿ ಮಾರಮ್ಮ ನೆಲೆಸಿದ್ದ ಪ್ರಾಂತ್ಯ, ಗೌರಸಮುದ್ರಕ್ಕೆ ಒಂದು ಕಿ.ಮೀ ದೂರದಲ್ಲಿದೆ. ಇಲ್ಲಿ ಒಂದು ಆವರಣವಿದ್ದು ಅದರ ಒಳಗೆ ಮಾರಮ್ಮನ ಸಮಾಧಿ ಇತ್ತು ಎಂದು ಹೇಳುತ್ತಾರೆ. ಕುರುಹುಗಳಿಲ್ಲ. ಬದಲಾಗಿ ಎರಡು ಕಟ್ಟೆಗಳಿವೆ. ಈ ಕಟ್ಟೆಯ ಮೇಲೆ ಮಾರಮ್ಮನ ಪುಟ್ಟಿಯನ್ನು ಇಡಲಾಗುತ್ತದೆ. ಇಲ್ಲಿ ಒಂದು ಬಂಡೆಯ ಮೇಲೆ ಮಹಿಳೆ ಪುರುಷನ ಹೊಟ್ಟೆಯನ್ನು ಬಗೆಯುತ್ತಿರುವ ಚಿತ್ರವಿದೆ. ರಾಯದುರ್ಗದ ದೊರೆಯ ಹೊಟ್ಟೆಯನ್ನು ಬಗೆದ ದೃಶ್ಯವಿದು ಎಂದು ಹೇಳಲಾಗುತ್ತದೆ.

ತುಮ್ಮಲುವಿನಲ್ಲಿ ರಾತ್ರಿಯಾದಮೇಲೆ ಉಳಿಯಬಾರದು ಎಂದು ಇಂದಿಗೂ ಪ್ರತೀತಿ ಇದೆ. ಹಿಂದೆ ದಟ್ಟವಾದ ಕಾಡಿದ್ದು, ಕುರಿ, ಕೋಣ, ಕೋಳಿ ಬಲಿಕೊಟ್ಟ ಸ್ಥಳದಲ್ಲಿ ಜಾತ್ರೆಯ ದಿನ ಕ್ರೂರಪ್ರಾಣಿಗಳು ರಾತ್ರಿಯ ವೇಳೆ ಬರುತ್ತಿದ್ದಿರಬಹುದು. ಆದರೆ ಅಲ್ಲಿ ರಾಕ್ಷಸಿಯ ಅವತಾರದಲ್ಲಿ ಮಾರಮ್ಮ ತಿರುಗಾಡುತ್ತಾಳೆ. ಎಂಬ ನಂಬಿಕೆ ಇದೆ. ಒಬ್ಬ ಬಳೆಗಾರ ಸಂಜೆಯಾದರೆ ಅಲ್ಲಿಯೇ ಇದ್ದ. ಮಾರಮ್ಮನೇ ಮತ್ತೆ ಬಳೆ ತೊಟ್ಟುಕೊಳ್ಳುವವಳಂತೆ ಬಂದು ಇಲ್ಲಿರಬೇಡ ಹೋಗು ಎಂದಳಂತೆ. ಹೊರಟ ಆತ ಕುತೂಹಲ ತಾಳಲಾರದೆ ಮಾರ್ಗಮಧ್ಯ ಹಿಂತಿರುಗಿ ನೋಡಲು ಅಲ್ಲಿಯೇ ರಕ್ತಕಾರಿ ಪ್ರಾಣಬಿಟ್ಟು ಅದೇ ಸ್ಥಳದಲ್ಲಿ ಆತನನ್ನು ಸಮಾಧಿ ಮಾಡಿದರು ಎನ್ನುತ್ತಾರೆ. ಕಾವ್ಯ, ಆಚರಣೆ, ಐತಿಹ್ಯ, ನಂಬಿಕೆಗಳು ಒಟ್ಟಾರೆ ಈಕೆ ಮೂಲತಃ ಒಬ್ಬ ಮನವಿ ಜೀವಿತಕಾಲ ನಂತರ ಜನಮನದಲ್ಲಿ ದೈವಿಕ ಸ್ಥಾನವನ್ನು ಪಡೆದಳು ಎಂಬುದನ್ನು ಸಮರ್ಥಿಸುತ್ತದೆ.

ತಮ್ಮಲುವಿಗೆ ಒಂದು ಕಿ.ಮೀ ವ್ಯಾಪ್ತಿಯ ಒಳಗೆ ಹೊಸಹಳ್ಳಿ ಎಂಬ ಗ್ರಾಮವಿದೆ. ಇದರ ಬಳಿ ಸ್ವಲ್ಪ ಎತ್ತರವಾದ ವಿಶಾಲವಾದ ಒಂದು ಬಂಡೆ ಅಲ್ಲಿದ್ದು ಅದರ ಮೇಲೆ ಕೋಣನ ಹೆಜ್ಜೆಯ ಗುರುತುಗಳಿದ್ದು ಅವು ಪಕ್ಕದಲ್ಲಿರುವ ದೊಣೆ (ಚಿಕ್ಕ ಸರೋವರ)ದ ಕಡೆ ಚಲಿಸುತ್ತಿರುವಂತಿದೆ. ಇವು ಮಾರಮ್ಮನಿಗೆ ವರವು ತಮ್ಮಯ್ಯ ಬಲಿಕೊಟ್ಟ ಕೋಣನ ಹೆಜ್ಜೆ ಗುರುತುಗಳು ಎಂದು ಹೇಳುತ್ತಾರೆ. ಕೆಲವರ ಪ್ರಕಾರ ಹೊಟ್ಟಣ್ಣನಾಯಕ ಯರಮಂಚಿನಾಯಕನ ಗುಂಪಿನವರಿಗೆ ಮೋಸದಿಂದ ಕೋಳಿಸಾರಿನ ಊಟ ಹಾಕಿದ ಲಂಕಣಿ ದೋಣಿ ಇದೆ. ಮತ್ತೆ ಅಲ್ಲಿಂದ ಮ್ಯಾಸಬೇಡರು ಎಮ್ಮೆಗಳನ್ನು ತಂದು ಅದರಲ್ಲಿ ಒಂದು ಎಮ್ಮೆಯನ್ನು ಕೊಯ್ದು ಸೇಡು ತೀರಿಸಿಕೊಂಡು ಪ್ರಸಂಗ ಇಲ್ಲಿಯೇ ನಡೆದಿದ್ದು ಎಂಬುದಾಗಿದೆ.

ಕಂಚವ್ವ – ಕಾಮವ್ವ

ಚಿತ್ರದುರ್ಗ ಜಿಲ್ಲೆಯ ಸಿರಿಗೆರೆ ಬಳಿ ಇರುವ ಮಿಂಚೇರಿ ಅರಣ್ಯದಲ್ಲಿ ಗೋವುಗಳನ್ನು ಕಾಯುವಂಥ ತುರುಮರಗಾರನಾಗಿದ್ದವನೇ ಗಾದ್ರಿಪಾಲನಾಯಕ. ಅವನು ನನ್ನಿವಾಳದಲ್ಲಿ ಗೋವಿನ ಗೂಡು ತಿರುವಿಕೊಂಡಿದ್ದ. ಅಲ್ಲಿ ಬರಗಾಲ ಬಂದು ನೀರು ಆಹಾರವಿಲ್ಲದೆ ಪರಿತಪಿಸುವಂತಾಗಿದ್ದ ಅಲ್ಲಿ ಬರಗಾಲ ಬಂದು ನೀರು ಆಹಾರವಿಲ್ಲದೆ ಪರಿತಪಿಸುವಂತಾಗಿತ್ತು. ಮೂರು ವರ್ಷ ಮೂರು ಹನಿ ಮಳೆ ಬರದೆ ಇದ್ದುದರಿಂದ ಪಕ್ಷಿಗಳು ಕುಡಿಯಲು ನೀರಿಲ್ಲದೆ ದೇಶಬಿಟ್ಟವು. ಪಾಲಯ್ಯನ ದನಕರುಗಾಳದರೂ ಆಹಾರ ನೀರು ಇಲ್ಲದೆ ನೆಲಕಚ್ಚಿ ಮಲಗಿಬಿಟ್ಟವು. ಅವುಗಳ ಸಂಕಟವನ್ನು ನೋಡಲಾಗದೆ ಪರಿಹಾರಕ್ಕಾಗಿ ದೇವರನ್ನು ಪ್ರಾರ್ಥಿಸುತ್ತಾ ಅಹೋಬಲ ನರಸಿಂಹ ಸಾಲಿಗ್ರಾಮವನ್ನು ಹಾಸಿದ ಕಂಬಳಿ ಗದ್ದಿಗೆಯ ಮೇಲಿಟ್ಟು ನೂರೊಂದು ದೀವಗೆ ಹಚ್ಚಿಟ್ಟು ದೇವರೆತ್ತುಗಳನ್ನು ಕರೆಸಿ ದೂಪವಿಟ್ಟು, ಪೂಜೆಮಾಡಿ ಭಕ್ತಿಯಿಂದ ಬೇಡಿಕೊಂಡು ಮಲಗಿಕೊಂಡನು. ಆಗ ಸ್ವಾಮಿಯು ಕನಸಿನಲ್ಲಿ ಬಂದು ಆಜ್ಞೆಯನ್ನು ದಯಪಾಲಿಸುತ್ತಾ ಬಿಳಿಮಲೆ, ಕರಿಮಲೆ, ಒಳಮಲೆ, ಹೊರಮಲೆ ಎಂಬುದುಂಟು. ಅಲ್ಲಿ ನಿನ್ನ ಕುಟುಂಬ ವರ್ಗಕ್ಕೂ, ಜೇಡಗಂಪಳಕ್ಕೂ ಅಲ್ಲದೆ ಲಕ್ಷ ದನಕರುಗಳಿಗೂ

ಆಹಾರ, ನೀರು, ವಾಸಕ್ಕೆ ಅನುಕೂಲವಾಗುವುದು ಅಲ್ಲಿಗೆ ಹೋಗಿ ನೆಮ್ಮದಿಯ ಜೀವನ ನಡೆಸು ಎಂಬುದಾಗಿ ನುಡಿದಂತಾಯಿತು. ಎಚ್ಚರಗೊಂಡ ಪಾಲಯ್ಯನು ನೆಲಕಚ್ಚಿ ಬಿದ್ದಿದ್ದ ದನಕರುಗಳನ್ನು ನೋಡುತ್ತಾನೆ ಅವುಗಳೆಲ್ಲಾ ಮೇವು, ನೀರು ಕಂಡಂತೆ, ಯಾವುದೇ ಕೊರತೆಯಿಲ್ಲದಂತೆ ದಷ್ಟಪುಷ್ಟವಾಗಿ ಎದ್ದು, ಮಿಂಚೇರಿ ಗಾದ್ರಿಗುಡ್ಡದ ಕಡೆಗೆ ಮುಖಮಾಡಿ ನಿಂತಿವೆ. ಆಗಿಂದಾಗಲೇ ಪಾಲಯ್ಯನು ಬೇಡಗಂಪಳವನ್ನು ಕಟ್ಟಿಕೊಂಡು ಲಕ್ಷ ಗೋವುಗಳನ್ನು ಬಿಟ್ಟುಕೊಂಡು ಗಂಜಿಕಟ್ಟೆ ಮುಂದಿನ ಮಿಂಚೇರಿ ಅರಣ್ಯಕ್ಕೆ ಬಂದು ನೆಲೆಸಿದರು. 'ಮಿಂಚೇರಿ' ಎಂಬ ಹಳ್ಳವು ಹರಿಯುತ್ತಿರುವ ಮಿಂಚೇರಿ ಎಂಬ ಕಾಡಿನಲ್ಲಿ ತಿಳಿನೀರು ಎಂದಿಗೂ ಇರುತ್ತಿತ್ತು. ಕಾಡಿನೊಳಗೆ ದನಕರುಗಳು ಎಷ್ಟು ಮೇಯ್ದರೂ ಇನ್ನೂ ಉಳಿಯುವಷ್ಟು ಹಸಿರು ಮೇವು ನಳನಳಿಸುತ್ತಿತ್ತು.

ಪಾಲಯ್ಯ ಇದೇ ನಮಗೆ ಸರಿಯಾದ ಸ್ಥಳವೆಂದು ಭಾವಿಸಿ ಆ ಅರಣ್ಯದಲ್ಲಿ ಗೂಡು ತಿರುವಿಕೊಂಡು ಪತಿಯರಾದ ಕೆಂಚವ್ವ, ಕಾಮವ್ವರೊಂದಿಗೆ ವಾಸಿಸತೊಡಗಿದನು. ಅಲ್ಲಿಯೇ ಮೊದಲು ವಾಸವಾಗಿದ್ದ ಗಂಡುಹುಲಿ ಮತ್ತು ಹೆಣ್ಣು ಹುಲಿಗೆ ಎರಡು ಮರಿಗಳಾದವು. ಆ ಎರಡು ಹುಲಿಗಳೂ ಬಂದು ಪಾಲಯ್ಯನು ಗೂಡು ತಿರುವಿದ್ದನ್ನು ಕಂಡವು. ಗಂಡು ಹುಲಿ ಪಾಲನಾಯಕನನ್ನು ಕಂಡು ಹೇಳಿತು. 'ನಾವು ವಾಸಮಾಡುವಂತ ಅರಣ್ಯದಲ್ಲಿ ನೀನು ದನಕರುಗಳನ್ನು ಬಿಟ್ಟು ವಾಸಿಸುವುದು ಸರಿಯಲ್ಲ' ಎಂದು ಆಜ್ಞೆ ಮಾಡಿತು. ಪಾಲನಾಯಕನು ಅದಕ್ಕೆ ನಮಗೆ ಆಹಾರವಾಗಿ ಎರಡು ಹೋರಿಕರುಗಳನ್ನು ಹೊಡೆಸಿಕೊಡಬೇಕೆಂದು ಕೇಳಿತು. ಆಗ ಹೆಣ್ಣುಲಿಯು ಗಂಡುಲಿಗೆ ಅಯ್ಯೋ ನಮಗೂ ಮಕ್ಕಳು ಮರಿಗಳುಂಟು, ಈ ದನಕರುಗಳಿಗೂ ಸಂತಾನವುಂಟು, ಆದ್ದರಿಂದ ನಾವು ದನಕರುಗಳನ್ನು ಆಹಾರವಾಗಿ ಭಕ್ಷಿಸುವುದು ನ್ಯಾಯಯುತವಲ್ಲ, ಅವರೂ ನಾವು ಒಂದೇ ಎಂಬಂತೆ ಹೊಂದಿಕೊಂಡು ಹೋಗೋಣ ಎಂದು ತನ್ನ ಗಂಡುಹುಲಿಗೆ ಹೇಳಿತು. ಗಂಡುಹುಲಿಯು ನೀನು ಹೇಳಿದಂತೆ ದನಕರುಗಳನ್ನು ಬೇಟೆಯಾಡುವುದು ಬೇಡ ಪಾಲಯ್ಯನು ತಿರುವಿಕೊಂಡಿದ್ದ ಕರುಗಳ ಗೂಡಿನಲ್ಲಿ ನೀಡಿತು. ಆಗ ಪಾಲಯ್ಯನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅತ್ಯಂತ ಹರ್ಷಚಿತ್ತನಾಗಿ ತಾನು ಕೂಡ ಹಾಗೇ ಆಗಲಿ ಎಂದು ತಲೆಯಾಡಿಸಿದನು. ತಮ್ಮ ಒಪ್ಪಂದದಂತೆ ಹೆಣ್ಣುಹುಲಿಯು ಪ್ರತಿದಿನ ತನ್ನ ಮರಿಗಳಿಗೆ ಹಾಲುಣಿಸಿ ಗಂಡುಹುಲಿ ಜೊತೆಯಲ್ಲಿ ಬೇಟೆಗಾಗಿ ಕಾಡಿಗೆ ಹೋಗುತ್ತಿತ್ತು. ಪಾಲಯ್ಯನು ಹುಲಿಮರಿಗಳಿಗೆ ರಕ್ಷಣೆ ಕೊಡುವುದರ ಜೊತೆಗೆ ಎಂದಿನಂತೆ ಹಾಲು ಕರೆದ ನಂತರ ತನ್ನ ಕರುಗಳನ್ನು ಆ ಗೂಡಿನಲ್ಲಿಯೇ ಬಿಟ್ಟು, ಎತ್ತುಕರುಗಳನ್ನು ಮೇವಿಗಾಗಿ ಕಾಡಿಗೆ ಹೋಗುತ್ತಿದ್ದ. ಇತ್ತಕಡೆ ಮನೆಯಲ್ಲಿದ್ದ ಗಾದ್ರಿಪಾಲನಾಯಕನ ಹೆಂಡತಿಯರಾದ ಕಂಚವ್ವ ಮತ್ತು ಕಾಮವ್ವ ಇಬ್ಬರೂ ತಾವು ಕರೆದ ಹಾಲನ್ನು ಒಂದಿಷ್ಟು ಹೆಪ್ಪು ಹಾಕಿ ಒಂದಿಷ್ಟು ಮೊಸರು ಕಡೆದುಕೊಂಡು ಬಂದ ಬೆಣ್ಣೆಯನ್ನು ತೆಗೆದುಕೊಂಡು ಗಂಜಿಗಟ್ಟೆ ಮುತ್ತಗದೂರು, ಕೋಗಲೂರು ಕಡೆ ಮಾರಿಕೊಂಡು ಬರಲು ಹೋಗುತ್ತಿದ್ದರು.

ಕೆಂಚವ್ವ ಕಾಮವ್ವರ ತಮ್ಮಂದಿರಾದ ಚಿತ್ತಯ್ಯ ಕಾಟಯ್ಯ ಎಂಬುವವರು ತನ್ನ ಮತ್ತು ಭಾವ ಪಾಲಯ್ಯನನ್ನು ನೋಡಲು ಕರಿಮಲೆ, ಜಿಳಮಲೆಯ ಮಿಂಚೇರಿ ಕಡೆ ಬಂದರು. ಬರುವ ದಾರಿ

ಮಧ್ಯದಲ್ಲಿ 'ತಿದಿಗಿನ ಕೋಟೆ' ಒಳಗಡೆ ಒಂದು ಬಲವಾದ ಬೆಳಕು ಕಾಣಿಸಿತು. ಆ ಬೆಳಕು ಏನೆಂದು ನೋಡಲು ಕುತೂಹಲದಿಂದ ಮುನ್ನುಗ್ಗಿದರು. ಅದರೊಳಗೆ ಹೊಳೆಯುವ ಭೂಚಕ್ರದ ಕೊಡಗು ಆಗಿತ್ತು. ಇದನ್ನು ವಶಪಡಿಸಿಕೊಂಡ ನಂತರ ತನ್ನ ಭಾವ ಗಾದ್ರಿಪಾಲನಾಯಕನನ್ನು ನೋಡಲು ಹೋದರೆ ಚನ್ನಾಗಿರುತ್ತದೆ ಎಂದು ಯೋಚಿಸಿದರು. ಆದರೆ ಆ ಭೂಚಕ್ರದ ಕೊಡಗು ಮುಟ್ಟಿ ಎತ್ತಿಕೊಂಡು ಹೋಗಲು ಒಂದಿಷ್ಟು ಶ್ರಮಹಾಕಬೇಕಾಗಿತ್ತು. ಆದರೆ ಅವರು ನೂರೊಂದು ಪೂಜೆ, ಪುನಸ್ಕಾರ, ಹೋಮ ಮಾಡಿಸಿ ಬಲಿಕೊಟ್ಟು ಭೂಚಕ್ರದ ಕೊಡಗು ತೆಗೆದು, ಮಿಂಚೇರಿ ಕಾಡಿಗೆ ಬಂದರು. ಆದರೆ ಅಲ್ಲಿ ಪಾಲಯ್ಯ ಎತ್ತು ಕರುಗಳನ್ನು ಆಡಿಸಲು ಹೋಗಿದ್ದನು. ಎಂದಿನಂತೆ ಕೆಂಚವ್ವ ಮತ್ತು ಕಾಮವ್ವ ಹಾಲು ಬೆಣ್ಣೆಮಾರಲು ಹೋಗಿದ್ದರು.

ದನದ ಗೂಡೊಳಗೆ ಕರುಗಳ ಜೊತೆಯಲ್ಲಿ ಹುಲಿಮರಿಗಳು ಆಟ ಆಡುತ್ತಿದ್ದುದನ್ನು ಕಂಡ ಕಾಟಣ್ಣ ಮತ್ತು ಚಿತ್ತಣ್ಣನಿಗೆ ಆಶ್ಚರ್ಯ. ಜೊತೆಗೆ ಗಾಬರಿಯು ಆಯ್ತು. ಆಗ ಕಾಟಣ್ಣ, ಚಿತ್ತಯ್ಯ ನೋಡು, ಹುಲಿಮರಿಗಳು ಕರುಗಳ ಜೊತೆ ಆಡುತ್ತಾ ಇವೆ. ಚಿತ್ತಯ್ಯ 'ಅಯ್ಯೋ ಎಲ್ಲಾದರೂ ಉಂಟೇ, ಹುಲಿ ಇವತ್ತು ಮರಿಯಾಗಿದ್ದಾಗ ಕರುಗಳ ಜೊತೆ ಆಡುವುದುಂಟು. ಅವು ಬೆಳೆದ ಮೇಲೆ ಬಿಟ್ಟಾವೆ ಅಂದು ಹೇಳಿದ. ಕಾಟಣ್ಣನಿದ್ದು, 'ಹಾಗಾದರೆ ಸರಿ ಈ ಹುಲಿಮರಿಗಳನ್ನು ಹೊಡೆದುಹಾಕಿ ಬಿಡೋಣ' ಅಂದು ಬಂದೂಕ ತೆಗೆದು ಬಾರು ಮಾಡಿಟ್ಟು ಕರುಗಳ ಜೊತೆಯಲ್ಲಿ ಆಡುತ್ತಿದ್ದ ಹುಲಿಮರಿಗಳು ರಕ್ತಕಾರಿ ಸತ್ತವು. ಸಂಜೆಯಾಗುತ್ತಿದ್ದಂತೆ ಪಾಲಯ್ಯ ದನಕರುಗಳನ್ನು ತಿರುವಿಕೊಂಡು ಗೂಡಿನಿಂದ ಕಾಡಿನ ಕಡೆಗೆ ಬಂದು ನೋಡಿದ, ಹುಲಿಮರಿಗಳು ಸತ್ತುಬಿದ್ದಿವೆ. ಗಾಬರಿಗೊಂಡ. 'ಅಯ್ಯೋ ಇನ್ನೇನು ಗತಿ ಹುಲಿಗಳಿಗೆ ನಾನು ಕೊಟ್ಟ ಮಾತು ತಪ್ಪಿಹೋಯಿತು. ಅವು ಬೇಟೆಯಿಂದ ತಿರುಗಿ ಬಂದರೆ ನಾನೇನು ಹೇಳಲಿ, ಮಕ್ಕಳನ್ನು ಕಳೆದುಕೊಂಡ ಅವ ನಮ್ಮನ್ನು ಸುಮ್ಮನೆ ಬಿಡುವುದುಂಟೆ, ಇಂತಹ ಕೆಲಸವನ್ನು ಮಾಡಿದವರು ಯಾರು ಎಂದು ದುಃಖದಿಂದ ತಡವರಿಸತೊಡಗಿದ. ಅತ್ತಕಡೆ ಮಿಂಚೇರಿ ಹಳ್ಳದಿಂದ ಕೈಕಾಲು ಮುಖ ತೊಳೆದುಕೊಂಡು ಭಾವಮೈದುನರಾದ ಚಿತ್ತಣ್ಣ ಕಾಟಣ್ಣ ಬರುತ್ತಿದ್ದುದನ್ನು ಕಂಡು 'ನೋಡಪ್ಪ ಗೂಡಿನೊಳಗೆ ಹುಲಿಮರಿ ಸತ್ತುಹೋಗಿವೆ ಯಾರೋ ಕೊಂದು ಹಾಕಿಬಿಟ್ಟಿದ್ದಾರೆ ಎಂದು ಕರುಣೆ ಮಮತೆಯಿಂದ ಉದ್ಗರಿಸತೊಡಗಿದ. ಜೊತೆಗೆ ದುಃಖತಪ್ತನಾದನು.

ಆಗ ಚಿತ್ತಯ್ಯ 'ಅಯ್ಯೋ ನಾವೇ ಅವನ್ನು ಹೊಡೆದು ಹಾಕಿದ್ದು ಎಲ್ಲಾದರೂ ದನಕರುವಿನೊಡನೆ ಕ್ರೂರಪ್ರಾಣಿಯಾದ ಹುಲಿಮರಿ ಬೆಳೆಯುವುದುಂಟೆ, ತನ್ನ ಬುದ್ಧಿ ಬಿಡುವುದುಂಟೆ ಬೆಳೆದ ಮೇಲೆ ಹುಲಿಗಳು ನಮ್ಮ ದನಕರುಗಳನ್ನು ಬಿಡುವುದುಂಟೆ ಆದ್ದರಿಂದ ನಿನಗೆ ಒಳ್ಳೆಯದಾಗಲೀ, ನಮ್ಮ ದನಕರುಗಳಿಗೆ ಏನೂ ತೊಂದರೆಯಾಗದಿರಲಿ ಎಂದು ನಾವೇ ಹೊಡೆದು ಹಾಕಿದೆವು. ಇಗೋ ನಾವು ಹೊಡೆದ ಬಂದೂಕು ಇಲ್ಲಿಯೇ ಇದೆ ನೋಡು ಎಂದು ತೋರಿದರು. ಹೃದಯವಿದ್ರಾವಕ ಸನ್ನಿವೇಶವನ್ನು ಕಂಡು ಪಾಲನಾಯಕ ಗರಬಡಿದಂತವನಾಗಿ 'ಎಂಥಾ ಕೆಲಸ ಮಾಡಿದಿರಪ್ಪ ನಾನು

ಹುಲಿಮರಿಗಳನ್ನು ಕಾಯುವೆನೆಂದು ಹುಲಿಗಳಿಗೆ ಭಾಷೆ ಕೊಟ್ಟಿದ್ದೆ, ಈಗ ಭಾಷೆ ತಪ್ಪಿದಂತೆ ಆಯಿತು. ಅವು ಈಗ ಬೇಟೆಯಿಂದ ಬಂದರೆ ನಾನು ಏನು ಹೇಳಲಿ, ಪಶುಗಳಿಗೆ ಅಪಾಯ ತಪ್ಪಿದ್ದಲ್ಲ ಎಂದು ಸಂಕಟಪಡಲಾರಂಭಿಸಿದನು.

ಕಾಟಣ್ಣನು ಅಯ್ಯೋ ಭಾವ ಹೆದರಬೇಡ, ಈಗಲೂ ನನ್ನ ಕೈಯ್ಯಲ್ಲಿ ಬಾರಾದ ಬಂದೂಕವಿದೆ. ನಾನು ನಿಮಗೆ ರಕ್ಷಣೆ ಕೊಡುತ್ತೇನೆ ಎಂದು ಧೈರ್ಯ ತುಂಬಿದ. ಆದರೆ ಪಾಲಯ್ಯ ಏನಾದರೂ ಆಯಿತು ನನ್ನ ಸತ್ಯದ ಮಾತು ತಪ್ಪಿಹೋಯಿತು, ನುಡಿದಂತೆ ನಡೆಯಲಿಲ್ಲ, ನನ್ನಿಂದ ಮಹಾಪರಾಧವಾಯಿತು. ನನಗೆ ಕ್ಷಮೆ ಇಲ್ಲ ಎಂದು ಗೂಡು ಬಿಟ್ಟು ಹೊರಡಲು ಸಿದ್ಧನಾದ. ಕಾಡಿನಿಂದ ಬರುವ ತಂದೆತಾಯಿಗೆ ಹುಲಿಗೆ ಸಮಾಧಾನವಾಗಲಿ ಎಂದು ಕೆಂಗುರಿ ಮಾಂಸ, ಕೆಂಬಕ್ಕಿ ಅನ್ನ ಎಡೆ ಮಾಡಿಸಿ ಇಟ್ಟು ತಪ್ಪಾಯಿತು ಎಂದು ಕ್ಷಮೆಯಾಚಿಸಿ, ಸೂರ್ಯದೇವನಿಗೆ ಕೈಮುಗಿದು ಅವರಿಗೆ ಶಾಂತಿಯನಗನು ಕರುಣಿಸು ಮಕ್ಕಳ ಅಗಲಿಕೆಯ ನೋವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕೊಡು ಎಂದು ಬೆಡುತ್ತಾ ಗೂಡುಬಿಟ್ಟು ಮಿಂಚೇರಿ ಹಳ್ಳ ಹಿಡಿದು ಹೊರಟುಬಿಟ್ಟ. ಇತ್ತಕಡೆಯಿಂದ ಗಂಡುಹುಲಿ ಸಾರಗ ಬೇಟೆ ಆಡಿಕೊಂಡು ಸತ್ತ ಮಿಕ ಕಚ್ಚಿಕೊಂಡ ತನ್ನ ರಾಣಿ ಹೆಣ್ಣುಹುಲಿಯನ್ನು ಹುಡುಕುತ್ತಾ ಬಂತು. ಅಲ್ಲಿ ಹೆಣ್ಣು ಹುಲಿ ಪಾಲನಾಯಕನ ಹಸು ಕರು ಹಾಕಿದ್ದ ಆಕಳು ಮತ್ತು ಕರುವನ್ನು ಕಾಯ್ದುಕೊಂಡು ಅವುಗಳ ರಕ್ಷಣೆಗಾಗಿ ಕಾಯ್ದು ಕೂತಿತ್ತು. ಆಗ ಹೆಣ್ಣುಲಿ ಹೇಳಿತು, 'ಸಾರಗ ತೆಗೆದುಕೊಂಡು ಹೋಗಿ ನೀನು ಗೂಡಿನಲ್ಲಿರುವ ಮರಿಗಳಿಒಗೆ ಊಟ ಮಾಡಿಸು ಹಾಗೆಯೇ ಪಾಲಯ್ಯನಿಗೆ ಹೇಳು ಇಲ್ಲಿ ಕರು ಹಾಕಿದ ಹಸುವೊಂದನ್ನು ಜ್ಞಾಪನ ಮಾಡಿದ್ದೇನೆ. ಗೂಡಿನ ಕಡೆ ಹೊಡೆದುಕೊಂಡು ಹೋಗದೆ ಇವುಗಳನ್ನು ಇಲ್ಲಿಯೇ ಬಿಟ್ಟಿರುವವನು ಅವನು ತಿರುಗಿ ಬಂದು ಕರುಹೊತ್ತು ಹಸು ಹೊಡೆದುಕೊಂಡು ಹೋಗುವವರೆಗೆ ನಾನು ಇವುಗಳನ್ನು ಕಾಯುತ್ತಿರುತ್ತೇನೆ ಎಂದು ಹೇಳಿ ಕಳುಹಿಸಿತು.

ಗಂಡು ಹುಲಿಯು 'ಸರಿ ಹಾಗೆಯೇ ಆಗಲಿ ಎಂದು ಸಾರಗದ ಬೇಟೆ ಹೊತ್ತುಕೊಂಡು ಪಾಲಯ್ಯನ ಗೂಡಿನ ಕಡೆ ಬಂತು. ನೋಡನೋಡುತ್ತಿದ್ದಂತೆಯೇ ಹುಲಿಯು ವಿದ್ರಾವ ಸನ್ನಿವೇಶವನ್ನು ಕಂಡು ದುಃಖತಪ್ತವಾಗಿ ಅತ್ಯಂತ ಸಂತೋಷದಿಂದ ಒಂದಕ್ಕೊಂದು ಮೈ ತಾಗಿಸಿಕೊಂಡು ಆಡುತ್ತಿದ್ದ ತನ್ನೆರಡು ಮಕ್ಕಳ ಜೋಡಿಯು ಇಂದು ಬೇಡನೊಬ್ಬನು ಹೂಡಿದ ಬಂದೂಕಿಗೆ ತುತ್ತಾಗಿವೆ. ಆ ಬಂದೂಕಿನೇಟಿನಿಂದ ಹುಲಿಗಳು ತಟ್ಟನೆ ನೆಲಕ್ಕೆ ಬಿದ್ದು ಚೀರುತ್ತಾ ರಕ್ತದಲ್ಲಿ ವಿಲವಿಲನೆ ಒದ್ದಾಡಿವೆ. ಹೆತ್ತ ಮಕ್ಕಳ ಈ ಸ್ಥಿತಿಯನ್ನು ಕಂಡು ಗಂಡುಹುಲಿಯು ಧೀನ ಸ್ವರದಿಂದ ಗೋಳಿಟ್ಟು ಕೂಗುತ್ತಾ ಅತೀವ ಸಂಕಟದಿಂದ ರೋಧಿಸಲಾರಂಭಿಸಿತು. ನೆಲಕ್ಕುರುಳಿದ ತನ್ನ ಮರಿಗಳ ಸುತ್ತಮುತ್ತ ಅತೀವ ದುಃಖದಿಂದ ಅತ್ತಿಂದಿತ್ತ ಓಡಾಡತೊಡಗಿತು.

ಗಂಡುಹುಲಿಯು ಈ ಹೃದಯ ವಿದ್ರಾವಕ ಸನ್ನಿವೇಶದ ವಿಷಯವನ್ನು ತನ್ನ ಹೆಂಡತಿ ಹೆಣ್ಣು ಹುಲಿಗೆ ತಿಳಿಸಲು ಹೊರಟಿತು. ಅಲ್ಲಿಯೇ ಸೀಗೆಮೆಳೆಯ ಕಡೆ ಅವಿತು ಕೂತಿದ್ದ ಚಿತ್ತಯ್ಯ, ಕಾಟಣ್ಣ

ಬಂದೂಕು ಬಾರು ಮಾಡಿದರು. ಗಂಡುಹುಲಿ ಅದರಿಂದ ತಪ್ಪಿಸಿಕೊಂಡಿತು. ಆಗ ಅರಿವಾಯಿತು, ಓಹೋ ಇಲ್ಲೇನೋ ಅಪಾಯವಿದೆ. ಏನಾದರೂ ಆಗಲಿ ಈ ನರಮ,ನುಷ್ಯರನ್ನು ನಂಬಬಾರದಾಗಿತ್ತು, ಎಂದು ತನ್ನನ್ನೇ ಶಪಿಸತೊಡಗಿತು. ಮಕ್ಕಳಿಗಾಗಿ ತಂದಿದ್ದ ಸರಗದ ಬೇಟೆಯನ್ನು ಅಲ್ಲಿಯೇ ಬಿಸಡಿ ಹೆಂಡತಿ ಇದ್ದ ಕಡೆ ಓಡಿತು. ಹೆಣ್ಣುಲಿ ತನ್ನ ಗಂಡನನ್ನು ನೋಡಿ, 'ಏನಿದು ಅಯ್ಯೋ ಪಾಲಯ್ಯನನ್ನು ಕರೆತನ್ನಿ ಈ ಹಸುಕರುಗಳನ್ನು ಕರೆದೊಯ್ಯಲಿ ಅಂದರೆ ನೀನೊಬ್ಬನೆ ಬಂದಿರುವೆಯಲ್ಲ ಅಂದಿತು. ಮಕ್ಕಳನ್ನು ಕಳೆದುಕೊಂಡ ಗಂಡು ಹುಲಿಗೆ ಒಟ್ಟೊಟ್ಟಿಗೆ ದುಃಖ, ಕೋಪ ಉಕ್ಕಿ ಬರುತ್ತಿದೆ. ಸಾವರಿಸಿಕೊಂಡು ಹೆಣ್ಣು ಹುಲಿಯ ಕಡೆ ತಿರುಗಿ ನಾನು ಹಿಂದೆ ಹೇಳಿದರೆ ನೀನು ಕೇಳಲಿಲ್ಲ. ಈಗ ನೋಡು ಗಾದ್ರಿಪಾಲಯ್ಯ ಬಂದೂಕು ಬಾರು ಮಾಡಿ ನಮ್ಮ ಮಕ್ಕಳನ್ನು ಇಬ್ಬರನ್ನೂ ಒಂದಿಷ್ಟೂ ಯೋಚಿಸದೆ ಕರುಣಿಸದೆ ನಿರ್ದಾಕ್ಷಿಣ್ಯವಾಗಿ ಕೊಂದಿದ್ದಾನೆ.

ಹೆಣ್ಣು ಹುಲಿಗೆ ಈ ಮಾತು ನಂಬಲಾಗಲಿಲ್ಲ. ಆದರೂ ತನ್ನ ಮಕ್ಕಳಿಗಾಗಿ ಗೂಡಿಗೆ ಓಡೋಡಿ ಬಂದು ನೋಡಿತು, ಅಯ್ಯೋ ನಾನು ಕರು ಹಾಕಿದ ಆಕಳುಗಳನ್ನು ನೋಡಿಕೊಂಡು ಅವುಗಳ ರಕ್ಷಣೆಗಾಗಿ ಕಾಯುತ್ತಿದ್ದರೆ, ಇತ್ತಕಡೆ ಇವನು ನನ್ನ ಮಕ್ಕಳನ್ನು ಕೊಂದುಹಾಕಿ ಸತ್ಯವನ್ನು ಮರಿದನಲ್ಲ ಎಂಬ ಸಿಟ್ಟಿನಿಂದ ರುದ್ರಾವತಾರ ತಾಳಿತು. ತಾಯಿ ಹೃದಯ ಕಲಕಿತು. ಒಟ್ಟೊಟ್ಟಿಗೆ ಕರುಣೆ, ದುಃಖ, ಕೋಪದಿಂದ ಮನಸ್ಸು ದುಃಖದ ಮಡಿಲಿಗಿಳಿಯಿತು. ಅತೀವ ದುಃಖತಪ್ತಳಾದ ಹೆಣ್ಣು ಹುಲಿಯು ಪಾಲಯ್ಯನನ್ನು ಹುಡುಕಲು ಕಾಡಿನೆಡೆಗೆ ಹೊರಟವು. ಆ ಕಡೆ ಪಾಲಯ್ಯ ತನ್ನ ಭಾವಮೈದುನರು ಮಾಡಿದ ಮಹಾಪರಾಧಕ್ಕೆ ಕ್ಷಮೆಯಾಚಿಸಿ, ಪರಮಾತ್ಮನನ್ನಾದರೂ ಬೇಡಿ ಹುಲಿಯ ಮಕ್ಕಳ ಆತ್ಮವನ್ನು ಪಡೆಯುವೆವೆನೆಂದು ಜರಿಮಲೆ ಕಡೆ ಬರುತ್ತಿದ್ದನು. ಹಿಂದುಗಡೆಯೇ ಪಾಲಯಯ್ಯನ್ನು ಹುಡುಕಿಕೊಂಡು ಬಂದ ಹುಲಿಗಳು 'ಎಲೇ ವಚನಭೃಷ್ಟ ನಿಂತುಕೋ' ಎಂದು ತಡೆದವು. ಪಾಲಯ್ಯ ತಿರುಗಿ ನಿಂತು ನೋಡಿದ. ಮಕ್ಕಳನ್ನು ಕಳೆದುಕೊಂಡು ದುಃಖತಪ್ತವಾದ ಆ ತಂದೆತಾಯಿಗಳನ್ನು ನೋಡಿ ಕರುಣೆ ಉಕ್ಕಿತು. ತನ್ನಿಂದಾದ ತಪ್ಪಿಗೆ ನಾಚುವಂತಾಯಿತು. ತಪ್ಪು ನನ್ನದಲ್ಲ ಯಾರದೇ ಆಗಿರಲಿ ನಾನು ಜರಿಮಲೆಯಲ್ಲಿ ತಪಸ್ಸಿಗೆ ಕೂತು ನಿಮ್ಮ ಮಕ್ಕಳ ಪ್ರಾಣ ಪಡೆದು ಬರುತ್ತೇನೆ. ಎಂದು ಧೈರ್ಯ ತುಂಬುತ್ತಾ ಭರವಸೆಯನ್ನು ನೀಡಲು ಮುಂದಾದನು. ಅತೀವ ಸಂಕಷ್ಟಕ್ಕೊಳಗಾಗಿದ್ದ ಹುಲಿಗಳು ಕೇಳಲಿಲ್ಲ. ನರಮನುಷ್ಯನನ್ನು ನಾವು ನಂಬಿದ್ದೇ ದೊಡ್ಡ ತಪ್ಪು. ನೀನು ಇಲ್ಲಿಂದ ಪಾರಾಗಲು ಸುಳ್ಳು ಹೇಳುತ್ತಿರುವೆ ಎಂದು ದುಃಖದಿಂದಲೇ ನುಡಿದವು. ಪಾಲಯ್ಯನನ್ನು ಅನುಮಾನಿಸಿದವು. ಆಗ ಪಾಲನಾಯಕನಿಗೆ ಕೋಪ ಹತ್ತಿತು. ತಪ್ಪಿಸಿಕೊಂಡು ಹೋಗಲಿಕ್ಕೆ ನಾನು ಹೇಡಿಯಲ್ಲ. ಅಂದಿತು. ತಕ್ಷಣ ಹುಲಿಗಳು ಸರಿ ಹಾಗಾದರೆ ಕೊಟ್ಟ ಮಾತಿಗೆ ತಪ್ಪಿದ್ದಕ್ಕೆ ಸಾವು ನಿನ್ನನ್ನು ಕೊಲ್ಲುತ್ತೇವೆ. ಎಂದು ಬೆದರಿಸಿದವು. ಧೈರ್ಯವಂತನೂ, ಶೂರನೂ ಆದ ಪಾಲಯ್ಯನು ಹೆದರದೆ ಹುಲಿಗಳ ಜೊತೆಯಲ್ಲಿ ಕದಾಡಲು ಸಿದ್ಧವದನು. ಇಲ್ಲಿ ಇಬ್ಬರೂ ಬಲಾಢ್ಯರೆ, ಹಾಗಾಗಿ ಮೂರು ದಿನಗಳ ಕಾಲ ಪಾಲನಾಯಕ ಮತ್ತು ಹುಲಿಗಳು ಆಹಾರ ನೀರು ತೊರೆದು ಯುದ್ಧ ಮಾಡಿದರು. ಗಂಡುಹುಲಿ ಸೋತು ನೆಲಕ್ಕುರುಳಿತು. ಕೆಲವು ದಿನಗಳ ನಂತರದಲ್ಲಿ

ಪ್ರಾಣಬಿಟ್ಟಿತು. ಹೆಣ್ಣುಹುಲಿ ಮಾತ್ರ ಜೀವಂತವಾಗಿದ್ದು, ಸೇಡು ತೀರಿಸಿಕೊಳ್ಳಲು ಕಾಯುತ್ತಿತ್ತು. ಒಂದು ದಿನ ಗಾದ್ರಿಪಾಲನಯಕನು ತಾನು ಬಿಟ್ಟುಹೋದ ಕಂಬಳಿ ತರಲು ಬಂದ. ನೋಡಿದ ಹೆಣ್ಣುಹುಲಿ ಅವನ ಮೇಲೆರಗಿತು, ಅವರಿಬ್ಬರ ಯುದ್ಧ ಮಿಂಚೇರಿ ಹಳ್ಳದವರೆಗೂ ನಡೆಯಿತು. ಮಾರನೆಯ ದಿನ ಪಾಲಯ್ಯನು ಮಿಂಚೇರಿ ಹಳ್ಳದ ಬಳಿ ಬಿದ್ದಿದ್ದಾನೆ. ಹುಲಿಯೂ ಅಲ್ಲಿಯೇ ರಕ್ತಕಾರಿ ಸತ್ತುಹೋಗಿವೆ.

ಇತ್ತಕಡೆ ಚಿತ್ತಯ್ಯ ಕಾಟಯ್ಯ ತನ್ನ ಭಾವನನ್ನು ಹುಡುಕಿಕೊಂಡು ಬಂದರು. ಮಿಂಚೇರಿ ಹಳ್ಳದ ದಂಡೆಯಲ್ಲಿ ಪಾಲಯ್ಯ ಬಿದ್ದಿರುವುದನ್ನೂ, ಮತ್ತೊಂದೆಡೆ ಹುಲಿಗಳೂ ಸತ್ತುಬಿದ್ದಿರುವ ದೃಶ್ಯವನ್ನು ಕಂಡು ದುಃಖಿತಪ್ತರಾದರು. ಪಾಲಯ್ಯನ ಬಾಯಿಗೆ ಗಟ್ಟಿಯಾದ ಹಸುವಿನ ಹಾಲನ್ನು ಕರೆದುತಂದುಬಿಟ್ಟರು. ಒಂದು ಗುಟುಕು ಬಾಯಿಯ ಒಳಗೆ ಹೋಗುತ್ತಿದ್ದಂತೆಯೇ ಇನ್ನೊಂದು ಗುಟುಕು ಈಚೆ ಬಂದು ತನ್ನ ಪ್ರಾಣಬಿಟ್ಟನು ಪಾಲಯ್ಯ. ಗಂಜಿಕಟ್ಟೆ, ಕೋಗಲೂರು ಮುತ್ತಗದೂರಿನಲ್ಲೆಲ್ಲಾ ಹಾಲು ಬೆಣ್ಣೆ ಮಾರಲು ಹೋದ ಕೆಂಚವ್ವ, ಕಾಮವ್ವ ತಮ್ಮ ಕಾಡಿನೊಳಗಿನ ಗೂಡಿನ ಕಡೆಗೆ ತಿರುಗಿ ಅಲ್ಲಿಯೇ ಇದ್ದ ಒಂದು ಸಣ್ಣ ಹಳ್ಳದಲ್ಲಿ ಇಳಿದು, ಕೈಕಾಲು ಮುಖ ತೊಳೆದು ನೀರು ಕುಡಿದು ದಣಿವು ತೀರಿಸಿಕೊಂಡು ಮುಂದೆ ಹೋಗಬೇಕೆಂದು ಒಂದು ಚಿಲುಮೆ ತೋಡಿದರು. ಆ ಚಿಲುಮೆಯೊಳಗೆ ನೀರು ಬರಲಿಲ್ಲ ಆದರೆ ರಕ್ತ ಚಿಮ್ಮಿತು. ಅದನ್ನು ಕಂಡು ಅಕ್ಕತಂಗಿಯರು ಏನೋ ಅಪಶಕುನ ಕಾದಿದೆ ಎಂದು ಭಾವಿಸಿ ದನಕರುಗಳಿರುವ ಗೂಡಿಗೆ ಆಗಮಿಸಿದರು. ಅಲ್ಲಿ ಹುಲಿಮರಿ ರಕ್ತಕಾರಿಕೊಂಡು ಬಿದ್ದಿವೆ. ಮತ್ತೊಂದೆಡೆ ಅಪಶಕುನ ನುಡಿಯುತ್ತಿದೆ. ದನಕರುಗಳೆಲ್ಲ ಕಿವಿ ಇಳಿಬಿಟ್ಟುಕೊಂಡು ಸಪ್ಪೆ ಮೋರೆ ಹಾಕಿಕೊಂಡು ರೋಗಬಡಿದಂತೆ ಸುಮ್ಮನೆ ನಿಂತಿವೆ. ಅಷ್ಟೊತ್ತಿಗೆ ಮಿಂಚೇರಿ ಹಳ್ಳದ ಕಡೆಯಿಂದ ಬಂದ ಚಿತ್ತಯ್ಯ, ಕಾಟಯ್ಯರು ಪಾಲಯ್ಯನು ಮರಣ ಹೊಂದಿದ ಸುದ್ದಿ ತಂದರು. ಕೆಂಚವ್ವ ಕಾಮವ್ವರು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿ ಹೊಂದಿದ್ದ ತನ್ನ ಪತಿಯೇ ಇಲ್ಲದ ಮೇಲೆ ನಾವು ಬದುಕಿದ್ದು ಏನು ಸಾರ್ಥಕ ಎಂದು ತೀರ್ಮಾನಿಸಿ ಮಾರನೆಯ ದಿನ ಅದೇ ಮಿಂಚೇರಿ ಹಳ್ಳದಲ್ಲಿ ಸತ್ತ ಗಂಡನ ಸಮಾಧಿಗೆ ಪೂಜೆ ಮಾಡಿ ಗಂಜಿಗಟ್ಟಿಯ ಕಾಡಿಗೆ ಹೋದರು. ಊರ ಗೌಡರ ಕೈಯ್ಯಲ್ಲಿ ಅರಿಶಿಣ, ಕುಂಕುಮ, ಗಂಧದ ಚಕ್ಕೆ ಹಿಡಿದು, ಗಂಜಿಗಟ್ಟಿಯಲ್ಲಿಯೇ ಕೆಂಡಕೊಂಡವಾಗಲು ಸಿದ್ದವಾದರು. ಸಿದ್ದೇಶ್ವರ ದೇವರ ಆದೇಶದಂತೆ ಅನ್ನವನ್ನು ಮಾಡಿ ಗಂಜಿಯನ್ನು ಬಸಿದರು. ಅದು ಹರಿದು ಬಂದು ನಿಂತಿರುವ ಜಾಗದಲ್ಲಿ ಕೊಂಡವನ್ನು(ಅಗ್ನಿಕುಂಡ) ಮಾಡಿಸಿಕೊಂಡು ಅಗ್ನಿಗೆ ಆಹುತಿಯಾದರು. ಜನ ಕೆಂಚವ್ವ, ಕಾಮವ್ವನ ಕಲ್ಲುಗೇಯಿಸಿ, ಪೂಜೆ ಮಾಡಿ ಕೆರೆಯ ದಂಡೆಯಲ್ಲೇ ನಿಲ್ಲಿಸಿ ಮಣ್ಣು ಮುಚ್ಚಿದರು. (ಈಗ ಮುಚ್ಚಿದ ಮಂಟಪವನ್ನು ಈಚೆಗೆ ಅಗೆದು ತೆಗೆಯಲಾಗಿದ್ದು ಕೆಂಚವ್ವ, ಕಾಮವ್ವರ ಗುಡಿಗೆ ಪೂಜೆ ನಡೆಯುತ್ತದೆ.)

ಹೀಗೆ ಪ್ರಸ್ತುತ ಸಂದರ್ಭದಲ್ಲಿ ಮಿಂಚೇರಿ ಹಳ್ಳದಲ್ಲಿ ಹುಲಿಯ ಸಮಾಧಿ (ಮಡಿದ ಸ್ಥಳ), ಗಾದ್ರಿನಾಯಕನ ಸಮಾಧಿ, ಕಾಮದೇನು ಹಸುವಿನ ಸಮಾಧಿಗಳಿವೆ. ಇಂದಿಗೂ ಪೂಜಿಸಲ್ಪಟ್ಟಿವೆ.

ಜತೆಗೆ ಪ್ರತಿವರ್ಷ ಪೂಜಾಕಾರ್ಯ, ಜಾತ್ರೆಗಳಲ್ಲಿಯೂ ನಡೆದುಕೊಂಡು ಬರುತ್ತಿದೆ. ಈ ಧಾರ್ಮಿಕ ಹೋರಾಟಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದ್ದು ಪಾರ್ವತಿ ಪರಮೇಶ್ವರರು ಗುಡ್ಡದಲ್ಲಿ 'ಉಮಾಮಹೇಶ್ವರ' (ವಿಗ್ರಹ ಮಾತ್ರ ಲಿಂಗ ಅಲ್ಲ) ರೂಪದಲ್ಲಿ ನೆಲೆಗೊಂಡಿದ್ದಾರೆ. ಅಲ್ಲಿ ಪ್ರತಿನಿತ್ಯ ಪೂಜೆ, ಪುನಸ್ಕಾರಗಳು ನಡೆಯುತ್ತವೆ.

ಗಾದ್ರಿಪಾಲನಾಯಕನು ನನ್ನ ತಮ್ಮಂದಿರಾದ ಚೆನ್ನಪಾಲನಾಯಕ, ಕೋರಿಪಾಲನಾಯಕ ಮತ್ತು ಹೆಂಡತಿಯಾದ ಕೆಂಚವ್ವ, ಕಾಮವ್ವ ಇವರುಗಳೊಂದಿಗೆ ಮತ್ತು ಕುಟುಂಬ ಪರಿವಾರದೊಂದಿಗೆ ಸಾವಿರಾರು ಹಸುಗಳನ್ನು ಕಾಪಾಡಿಕೊಂಡು ಮತ್ತು ಮೇಯಿಸಿಕೊಂಡು ಹೋಗುತ್ತಿದ್ದಾನೆಂಬುದಕ್ಕೆ ಅನೇಕ ಐತಿಹಾಸಿಕ ಆಧಾರಗಳಲ್ಲಿ ಈ ಮಿಂಚೇರು ಅಡವಿಯಲ್ಲಿ ಗಾದ್ರಿಪಾಲನಾಯಕನ ಹಳ್ಳವೆಂದು ಕರೆಯುತ್ತಾರೆ. ಈ ಹಳ್ಳದ ದಂಡೆಯಲ್ಲಿಯೇ ಅವರು ಮೊಸರು ಕಡೆಯುತ್ತಿದ್ದ ಕಡಗೋಲಿನ ಕಂಬವೆಂದು ಕರೆಯುತ್ತಿರುವ ಒಂದು ದೊಡ್ಡದಾದ ಮರವಿದೆ. ಜನರು ಈಗಲೂ ಅದು 'ಕಡ ಕಂಬದ ಮರ' ಎಂದು ಗುರುತಿಸಿಕೊಂಡಿದ್ದಾರೆ.

ದೇವರುಗಳನ್ನು ಗಾದ್ರಿಪಾಲನಾಯಕನ ಹಳ್ಳದ ದಡದಲ್ಲಿರುವ ಹುಲಿ ಮತ್ತು ಗಾದ್ರಿಪಾಲನಾಯಕನ ಸಮಾಧಿಗೆ ಪೂಜಿಸಲು ಹೊತ್ತು ತಂದಾಗ ಇಲ್ಲಿ ಕಂಬದ ಮರಕ್ಕೂ ಸಹ ಪೂಜೆ ಸಲ್ಲಿಸುವ ಪದ್ಧತಿ ಇದೆ. ಮರದ ಜಾತಿ ಹೆಸರು ಯಾವುದೆಂದು ಇದುವರೆಗೂ ತಿಳಿದಿಲ್ಲ. ಮಿಂಚೇರು ಅಡವಿಯಲ್ಲಿ ಅಕ್ಕಪಕ್ಕದಲ್ಲಿ ಅಡಗಿಕೊಂಡಿರುವ ಹಳ್ಳದ ಪೂರ್ವದಲ್ಲಿ ಹುಲಿಸಮಾಧಿ ಪಶ್ಚಿಮದಲ್ಲಿ ಗಾದ್ರಿಪಾಲನಾಯಕ ಮತ್ತು ಹಸುವಿನ ಸಮಾಧಿ ಅವರ ಹತ್ತಿರದಲ್ಲಿಯೇ ಮೊಸರು ಕಡೆಯುತ್ತಿದ್ದ ಕಡಕಂಬದ ಮರ. ಇವರು ತಮ್ಮ ಸಾವಿರಾರು ಹಸುಗಳನ್ನು ಕಟ್ಟಿಹಾಕುತ್ತಿದ್ದ ಸ್ಥಳವೆಂದು ಗುರುತಿಸುತ್ತಿರುವ ಸ್ಥಳ(ಜಾಗ) ಇದೇ ಹರವಿನಲ್ಲಿಯೇ ಕಂಡುಬರುತ್ತದೆ. ನೂರು ಮೀಟರ್ ದೂರದವರೆಗೆ ಸಾಲಾಗಿ ಕಲ್ಲುಗಳನ್ನು ಗೂಟದ ಹಾಗೆ ಬಿಗಿಯಾಗಿ ಹೀಗೆ ದನಗಳನ್ನು ರಕ್ಷಣೆಗಾಗಿ ಕಟ್ಟಿಹಾಕುತ್ತಿದ್ದ ಜಾಗದಲ್ಲಿ ಬೇಕಾದಷ್ಟು ದನಗಳ ಗಂಜಲ ಸುರಿದು ನೆಲವೆಲ್ಲ ಗಂಜಲದಿಂದಲೇ ತೋಯ್ದಂತಾಗಿ ಇಂತಹ ಹಸುಗಳ ಗಂಜುವಿನ ಹರವಿನಲ್ಲಿಯೇ 'ದೇವರ ಲಿಂಗಗಳು' ದೊರೆತವೆಂದು ನಂಬಿಕೆ ಇದೆ. ಹೀಗೆ ಹಸುವಿನ ಗಂಜಲವಿನಲ್ಲಿ ದೊರಕಿದ ಲಿಂಗಗಳನ್ನು ತಂದು ಗಂಜಿಗಟ್ಟೆ ಗ್ರಾಮದಲ್ಲಿ ದೇವರನ್ನು ಪ್ರತಿಷ್ಠಾಪನೆ ಮಾಡಿರುತ್ತಾರೆ. ಆದ್ದರಿಂದ ಈ ಗ್ರಾಮಕ್ಕೆ ಗಂಜಿಗಟ್ಟೆ ಎಂಬ ಹೆಸರು ಬಂದಿದೆಯೆಂದು ಭಾವಿಸಲಾಗಿದೆ. ಮಿಂಚೇರು ಅಡವಿಯಲ್ಲಿರುವ 'ಕಡುಕಂಬದ ಮರ'ದಲ್ಲಿ ಮೊಸರು ಕಡೆದುಕೊಂಡು ಬಂದು ಸುತ್ತಮುತ್ತಲ ಹಳ್ಳಿಯಲ್ಲಿ ಮಾರಿಕೊಂಡು ಹೋಗುತ್ತಿದ್ದರೆಂದು ಪ್ರತೀತಿ ಇದೆ. ಗಂಜಿಗಟ್ಟೆಯುಲ್ಲಿ ಶ್ರೀ ಗಾದ್ರಿಪಾಲನಾಯಕನ ದೇವಸ್ಥಾನದಲ್ಲಿ ಈಗಲೂ ಹಾಲು ಮೊಸರು ಕಡೆಯುತ್ತಿದ್ದು ಕಡಗೋಲಿನ ಕಂಬವೆಂದು ಶಿಲಾಕಂಬಗಳನ್ನು ನಿರ್ಮಾಣ ಮಾಡಿರುತ್ತಾರೆ.

ಈ ಮಹಿಳೆಯರ ಗಂಡಸಾದ ಗಾದ್ರಿಪಾಲನಾಯಕನನ್ನು ಸಮುದಾಯದಾದ್ಯಂತ ಗುಡಿಕಟ್ಟಿ ಸಂಭ್ರಮದಿಂದ ಪೂಜಿಸುವ ಪದ್ಧತಿ ಇದೆ. ಈ ಮಹಿಳೆಯರು ಸಹಗಮನ ಮಾಡಿದ ಸ್ಥಳವಾದ

ಗಂಜಿಗಟ್ಟೆಯಲ್ಲಿ ಸತಿಕಲ್ಲುಗಳಿವೆ. ಇವು ಮುಚ್ಚಿಹೋಗಿದ್ದಾಗ ತಾಳ್ಯದ ಕರಿಯಪ್ಪ ನಾಯಕನೆಂಬ ಪಾಳೆಯಗಾರ ತನ್ನ ಬಂಧುವಾದ ಚಿತ್ರದುರ್ಗದ ಅರಸ ಕ್ರೂರಿ ರಂಗಪ್ಪನಾಯಕನಿಗೆ ಕಷ್ಟಬಂದ ಸಮಯದಲ್ಲಿ ಹರಕೆ ಮಾಡಿಕೊಂಡು ಕಷ್ಟ ನಿವಾರಣೆಯಾದಕಾರಣ ಈ ಕೆಂಚವ್ವ ಕಾಮವ್ವ ಪೂಜೆಗೆ ದೇಣಿಗೆಯಾಗಿ ಜಮೀನು ಕೊಟ್ಟು ಶಾಸನ ಬರೆಸಿ ಈ ಸತಿಕಲ್ಲುಗಳಿಗೆ ಪೂಜೆ ಮಾಡುವ ವ್ಯವಸ್ಥೆ ಮಾಡುತ್ತಾನೆ. ಈ ಮಹಿಳೆಯರ ತವರಿನವರ ಬೆಡಗು ಕಾಮಗೇತಿ, ಚಿತ್ರದುರ್ಗದ ಪಾಳೆಯಗಾರರು ಇದೇ ಬೆಡಗಿಗೆ ಸೇರಿದವರು. ಬಹುಶಃ ಈ ಕಾರಣದಿಂದಾಗಿ ತನ್ನ ತವರನ್ನು ರಕ್ಷಿಸಲಿ ಎಂಬ ಆಸೆಯಿಂದ ತಾನು ಹರಕೆ ಮಾಡಿಕೊಳ್ಳುತ್ತಾನೆ. ಪೂಜಾರಿಗಳು ಕಾಮಗೇತಿಗಳೇ, ಕೆಂಚವ್ವ, ಕಾಮವ್ವರಿಗೆಂದೇ ವಿಶೇಷ ಪೂಜೆ ಇಲ್ಲ. ಪ್ರತಿ ಐದು ವರ್ಷಗಳಿಗೊಮ್ಮೆ ಈ ಸತಿಕಲ್ಲುಗಳಿರುವ ಗುಡಿಯಲ್ಲಿ ದೊಡ್ಡಹಟ್ಟಿ ಎಂದು ಆಚರಿಸುತ್ತಾರೆ. ಇದನ್ನು ಹುಲಿ ಹೋತದ ಹಟ್ಟಿ ಎಂದು ಕರೆಯಲಾಗುತ್ತದೆ.

ಗುಡಿಯ ಮುಂದೆ ರಂಗದ ಗುಂಡಿ ತೆರೆಯುತ್ತಾರೆ. ಇದರ ಆಸುಪಾಸಿನಲ್ಲಿಯೇ ಎನುಮಲವರು, ಪೂವಲವರು, ಮಳೇಲವರು, ಲಕ್ಕಿಮಿಲರು ಬೆಡಗಿನವರು ಒಂದೊಂದು ಪಾಳೆಯ ಹಾಕಿಕೊಂಡಿರುತ್ತಾರೆ. ತಮ್ಮ ಪಾಳೆಯದಿಂದ ಕೆಳಗೆ ಕಂಕಣದೊಂದಿಗೆ ಹೋತವನ್ನು ವಾದ್ಯ ಸಮೇತ ಗುಡಿಗೆ ತರುತ್ತಾರೆ. ಕಾಮಗೇತಲವರು ಹುಲಿವೇಷ ಹಾಕಿಕೊಳ್ಳುತ್ತಾರೆ. ಮೊದಲು ಎನುಮಲವರು ತಂದಿರುವ ಲಿಬ್ಬೆ ಬಳಿ ಹೋತದ ಎದೆಗೆ ಕಾಮಗೇತಲ ಪೂಜಾರಿ ಚಾಕು ಹಾಕುತ್ತಾರೆ. ರಕ್ತ ಸುರಿಸುತ್ತಾರೆ. ಪ್ರತಿ ಬೆಡಗಿನವರ ಹೋತಿಗೂ ಇದೇ ರೀತಿ ಮಾಡುತ್ತಾರೆ. ಹುಲಿ ಮತ್ತು ಗಾದ್ರಿಪಾಲನಾಯಕನ ನಡುವೆ ನಡೆದ ಹೋರಾಟದ ಸಾಂಕೇತಿಕವಾದ ಆಚರಣೆ ಇದು. ಆ ರಾತ್ರಿಯೇ ಆಯಾ ಗುಂಪಿನವರು ತಮ್ಮ ತಮ್ಮ ಪಾಲಿನ ಹೋತದ ಮಾಂಸದ ಅಡಿಗೆ ಮಾಡಿ ಊಟಮಾಡಿ ಹೋಗುತ್ತಾರೆ. ಈ ಹಬ್ಬ ಮಾಡಲಾಗದ ಉಳಿದ ನಾಲ್ಕು ವರ್ಷ ಮಿಂಚೇರಿ ಗುಡ್ಡಕ್ಕೆ ಹೋಗಿ ಗಾದ್ರಿಪಾಲನಾಯಕನ ಸಮಾಧಿಗೆ ಪೂಜೆ ಸಲ್ಲಿಸಿ ಬರುತ್ತಾರೆ. ಕೆಂಚವ್ವ, ಕಾಮವ್ವನ ಸತಿಕಲ್ಲುಗಳ ಮುಂದೆ ನಡೆಯುವ ಈ ಆಚರಣೆ ಅಷ್ಟೇ ಗಾದ್ರಿಪಾಲನಾಯಕನಿಗೆ ಸಂಬಂಧಿಸಿದುದಾಗಿದೆ. ಈತ ಇವರ ಗಂಡನಾಗಿದ್ದರೂ ಇಲ್ಲಿ ಸಹಗಮಿಸಿದ ಇವರನ್ನು ಕುರಿತು ಯಾವ ಆಚರಣೆಯೂ ಇಲ್ಲದಿರುವುದು ಅಚ್ಚರಿಯಾದರೂ ವಾಸ್ತವ ಸತ್ಯ. ಜೊತೆಗೆ ಸಮುದಾಯ ನಿರ್ಲಕ್ಷಿಸಿರುವುದು ಕಾರಣವಾಗಿದೆ.

ಮಿಂಚೇರು ಬಂಡೆಕಲ್ಲಿನ ಪರಿಸರದಲ್ಲಿ ಕಲ್ಲಿನ ಬಣ್ಣವು ಅತ್ಯಂತ ಸೂರ್ಯನ ಬಿಸಿಲಿಗೆ ನೋಡುವವರ ಕಣ್ಣಿಗೆ ಮಿಂಚಿದ ಹಾಗೆ ಕಂಡುಬರುತ್ತದೆ. ಹೀಗೆ ಸದಾ ಮಿಂಚುತ್ತಿರುವ ಕಲ್ಲುಬಂಡೆಯ ವಿಶಾಲವಾದ ಪ್ರದೇಶವೇ ಮಿಂಚೇರು ಎಂದು ಪ್ರಸಿದ್ಧಿಯಾಗಿದೆ. ಮಿಂಚೇರು ಬಂಡೆಕಲ್ಲಿನ ಪ್ರದೇಶದ ಪೂರ್ವಭಾಗದಲ್ಲಿ ಪ್ರಕರತಿಯಿಂದ ನಿರ್ಮಿತವಾದ ಸುಮಾರು ಆಳದವರೆಗೆ ಸುರುಳಿ ಸುರುಳಿಯಾಕಾರದಲ್ಲಿ ಕಲ್ಲಿನಲ್ಲಿ ನೀರಿನ ವರತೆ ಇರುವುದು ಅತ್ಯಂತ ವಿಶಿಷ್ಟವಾದುದಾಗಿದೆ. ಮಿಂಚೇರು ಬಂಡೆಕಲ್ಲಿನಲ್ಲಿರುವ ಸುರುಳಿಯಾಕಾರದ ನೀರಿನ ಒರತೆಯಲ್ಲಿ ಸದಾ ಮರಳಿನಿಂದ ಮುಚ್ಚಿರುತ್ತದೆ. ಮಳೆಗಾಲದಲ್ಲಿ ಪೂರ್ಣಪ್ರಮಾಣದಲ್ಲಿ ಕಲ್ಲುಬಂಡೆಗಳನ್ನು ಮುಚ್ಚಿರುವ ಹಾಗೆ ನೀರು ತುಂಬಿಕೊಂಡಿರುತ್ತದೆ.

ಬೇಸಿಗೇ ಕಾಲದಲ್ಲಿ ನೀರು ಬತ್ತಿಹೋಗುತ್ತಿರುತ್ತದೆ. ಮಿಂಚೇರು ಬಂಡೆಕಲ್ಲಿನ ವಿಶಾಲ ಪ್ರದೇಶದ ಸುರುಳಿಯಾಕಾರದ ನೀರಿನ ಒರತೆಯಲ್ಲಿನ ಮುಚ್ಚಿಕೊಂಡಿಹ ಮರಳನ್ನು ಮೇಲಕ್ಕೆ ಎತ್ತಿ ನೀರಿನ ಒರತೆ ನೋಡಿದಾಗ ಅಲ್ಲಿ ಪೂಜೆಗೆ ಸಾಕಾಗುವಷ್ಟು ನೀರು ಸದಾಕಾಲದಲ್ಲಿ ಪೂಜೆಗೆ ದೊರೆಯುತ್ತಲೇ ಇರುತ್ತದೆ. ಸುತ್ತಮುತ್ತಲಿನ ಎಲ್ಲಾಗ್ರಾಮದ ಜನರು ಪ್ರತಿವರ್ಷ ಶ್ರಾವಣ ಮಾಸದಲ್ಲಿ ಮಿಂಚೇರು ಕ್ಷೇತ್ರಕ್ಕೆ ಹೋಗಿ 'ಗಂಗಾದೇವತೆ' ಪೂಜೆಯನ್ನು ಮಾಡಿಕೊಂಡು ಬರುತ್ತಿದ್ದಾರೆ.

ಪುರುಷ ಯಜಮಾನ್ಯದ ಕಡೆ ಸ್ಥಿತ್ಯಂತರಗೊಳ್ಳುತ್ತಿದ್ದ ಸ್ಥಿತಿಗೆ ಮತ್ತೊಂದು ಉದಾಹರಣೆಯೆಂದರೆ ಗಾದ್ರಿಪಾಲನಾಯಕನ ಹೆಂಡತಿಯರಾದ ಕೆಂಚವ್ವ, ಕಾಮವ್ವ. ಸಮುದಾಯ ಗ್ರಹಿಸುತ್ತಿರುವ ರೀತಿ, ಹುಲಿಯೊಂದಿಗೆ ಹೋರಾಡಿ ಮಡಿದ ಪಾಲನಾಯಕನಿಗೆ ಸಿಕ್ಕಷ್ಟು ಪ್ರಾಶಸ್ತ್ಯ ಇವರಿಗೆ ಸಿಕ್ಕಿಲ್ಲ, ಆತನೊಂದಿಗೆ ಪ್ರತಿಹೆಜ್ಜೆಯನ್ನು ಇಡುತ್ತಾ ಪೇಟೆಯಲ್ಲಿ ಹಾಲು ಹೈನು ಮಾಡಿ, ಸಮುದಾಯದ ಅಂತ್ಯಗಳನ್ನು ಪೂರೈಸುತ್ತಿದ್ದ ಈ ಮಹಿಳೆಯರು ಕೊನೆಗೆ ಗಂಡನೊಂದಿಗೆ ಅನುಗಮನ ಮಾಡುತ್ತಾರೆ. ಸಂಬಂಧಿಸಿದ ಸತೀಕಲ್ಲು ಇದೆಯಾದರೂ ಅಲ್ಲಿ ನಡೆಯುತ್ತಿರುವ ಪೂಜೆ, ಜಾತ್ರೆ ಎಲ್ಲಾ ಗಾದ್ರಿಪಾಲನಾಯಕನ ಹೆಸರಿನಲ್ಲಿ ನಡೆಯುತ್ತಿವೆ. ಈ ಮಹಿಳೆಯರ ಸ್ಮರಣೆ ಇಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಹೀಗೆ ಸ್ಥಿತ್ಯಂತರಗೊಂಡಿರುವ ಸಮುದಾಯದ ಮನಸ್ಸಿನ ಸ್ಥಿತಿಯನ್ನು ಇದು ಸೂಚಿಸುತ್ತದೆ. ಹೀಗೆ ಈ ಎಲ್ಲಾ ಸ್ತ್ರೀರೂಪಿ ನೆಲೆಗಳ ಮೂಲಕ ಮೂಲತಃ ಮಾತೃಮೂಲೀಯವಾಗಿದ್ದ, ಮಹಿಳೆಯರನ್ನು ಮಾನ್ಯಮಾಡುತ್ತಿದ್ದ ಸಮುದಾಯವಿದು. ಅದರೊಂದಿಗೆ ಮಾತೃಮೂಲೀಯವಾಗಿದ್ದ ಮಹಿಳೆಗೆ ಗೌರವ ಆದರಗಳನ್ನು ನೀಡಿ ಸಮಾನ ನೆಲೆಯಲ್ಲಿ ಕಂಡ ಸಮುದಾಯದಲ್ಲಿ ಸ್ಥಿತ್ಯಂತರಗಳೇ ಕಾರಣವಾಗಿ ಪುರುಷರಾಳ್ವಿಕೆಯೊಂದಿಗೆ ಮಹಿಳೆಯರನ್ನು ಅಲ್ಲಲ್ಲಿ ಆಲಕ್ಷ್ಯದಿಂದ ನಡೆಸಿಕೊಳ್ಳುವ ಮಾದರಿಗಳೂ ಕಂಡುಬರುತ್ತಿರುವುದೂ ವಿಷಾದದ ಸಂಗತಿಯಾಗಿದೆ.

ಮುಂಗಲು ದೇವಮ್ಮ

ಈಕೆ ಬುಟ್ಟುಗಲವರ ಹೆಣ್ಣು ಮಗಳು. ಕೊಳುಗೊಳದ ಬೊಮ್ಮ ಬುಟ್ಟುಗುಲದ ಬೆಡಗಿಗೆ ಸೇರಿದ ವ್ಯಕ್ತಿ ಈಕೆ ಸುರದ್ರೂಪಿ. ಉತ್ತಮ ಗುರಿಕಾರಳು, ಬೇಟೆಗಾರ್ತಿ, ಕೊಳುಗುಳದ ಬೊಮ್ಮನಂತಹ ವ್ಯಕ್ತಿಯ ಹಿಂದೆ ಪ್ರೇರಕ ಶಕ್ತಿಯಾಗಿದ್ದ ಆತನ ಅಕ್ಕನೀಕೆ. ಮ್ಯಾಸಬೇಡ ಸಮುದಾಯಕ್ಕೆ ನರಪತಿ ರಾಜನಿಂದ ತೊಂದರೆ ಉಂಟಾದಾಗ ಅದನ್ನು ನಿವಾರಿಸಲು ತಮ್ಮನನ್ನು ಹುರಿದುಂಬಿಸಿ ಸ್ಥೈರ್ಯವನ್ನು ತುಂಬಿ ಅಣಿಗೊಳಿಸಿದ ಶಕ್ತಿಯೇ ಈಕೆ. ಈ ಕಾರ್ಯದಲ್ಲಿ ತನ್ನನ್ನು ತನ್ನ ತಮ್ಮನನ್ನ ತೊಡಗಿಸಿಕೊಳ್ಳುವಾಗ ಈಕೆಗೆ ಮುಖ್ಯವಾದದ್ದು ಸಮಷ್ಠಿಯೇ ಹೊರತು ಕೇವಲ ತನ್ನ ತಮ್ಮ ಅಥವಾ ತನ್ನ ಉಳಿಯುವಿಕೆ ಅಲ್ಲ. ಸಾಮಾನ್ಯವಾಗಿ ಬುಡಕಟ್ಟು ಸಮುದಾಯದ ಜನರಿಗೆ ಎಂದಿಗೂ ತಮ್ಮ ಮೇಲ್ಮೈಗಿಂತ ತಮ್ಮ ಒಟ್ಟು ಸಮುದಾಯದ ಉಳಿವು, ಉನ್ನತಿ ಮುಖ್ಯವಾಗುತ್ತದೆ. ಹೀಗೆ ತನ್ನ ಸಮುದಾಯ ಸಂಕಷ್ಟಕ್ಕೆ ಸಿಲುಕಿದಾಗ ಅದನ್ನು ಪರಿಹರಿಸಲು ಪ್ರಯತ್ನಿಸುವ ಈಕೆಇದು ಒಂದು ಹಂತವಾದರೆ ಆಕೆಯ ಬಗೆಗೆ ಪ್ರಚಲಿತವಿರುವ ಮೇಲೆ ತಿಳಿಸಿರುವ ಕಥೆಗಳ ಮೂಲಕ ಆಕೆ ಗಲಿಗಲ್ಲಿನ ಗಾದಿನಾಯಕನ

ಪತ್ನಿಯಾಗಿದ್ದು, ಕಾಟನಾಯಕನೆಂಬ ಪರಪುರುಷನನ್ನು ಮೋಹಿಸಿದ್ದು ನಂತರ ಸಾವಿಗೀಡಾದದ್ದು, ಈಕೆಯ ಅಂತ್ಯದ ಬಗೆಗೆ ಮೂರು ವಿಧದ ವಿವರಗಳು ದೊರೆಯುವುದರಿಂದ ಈ ಸಾವೇ ಒಂದು ನಿಗೂಢವೆನ್ನಿಸುತ್ತದೆ. ಒಂದು ತನ್ನ ತಮ್ಮನಿಂದ ಅಂತ್ಯವಾದಳು ಎಂಬ ಹೇಳಿಕೆಯಾದರೆ, ಮತ್ತೊಂದೆಡೆಯಲ್ಲಿ ಗಂಡನಿಂದ, ಪ್ರಿಯಕರನಿಂದ ಎಂಬ ಹೇಳಿಕೆಗಳೇ ಈಕೆಯ ಸಾವನ್ನು ನಿಗೂಢಗೊಳಿಸುತ್ತಾ ಹೋಗುತ್ತವೆ. ಇಂದಿಗೂ ಈ ಸಮುದಾಯದಲ್ಲಿ ಈ ಮುಂಗಲು ದೇವಮ್ಮ ಯಾರು ಎಂದು ಪ್ರಶ್ನಿಸಿದರೆ ತಟ್ಟನೆ ಉತ್ತರ ದೊರೆಯುವುದಿಲ್ಲ. ಒಂದು ಬಗೆಯ ಮೌನ ಅಲ್ಲಿ ಆವರಿಸಿಕೊಳ್ಳುತ್ತದೆ. ವಿಷಾದ ಇಲ್ಲಿ ಎದ್ದುಕಾಣುತ್ತದೆ. ತನ್ನ ಪತ್ನಿ ತನ್ನ ಅಂಕೆಯನ್ನು ಮೀರಿ ತನ್ನ ಪ್ರಿಯತಮನಲ್ಲಿಗೆ ಹೋಗಿ ಬರುವುದನ್ನು ಸಹಿಸಲಾರದೆ ತನಗೆ ಇದೊಂದು ಅವಮಾನದ ಸಂಗತಿ ಎಂದು ಭಾವಿಸಿದ ಆತನೇ ಈಕೆಯನ್ನು ಅಂತ್ಯಗೊಳಿಸಿದ ಎಂಬ ಅನುಮಾನ ಇಲ್ಲಿ ಉಂಟಾಗುತ್ತದೆ. ಆದರೆ ಆತ ಅಂದು ಅಧಿಕಾರ ಸ್ಥಾನದಲ್ಲಿದ್ದುದರಿಂದ ಅದನ್ನು ತನ್ನ ಮೇಲೆ ಹಾಕಿಕೊಳ್ಳದೆ ಆಕೆಯ ಪ್ರಿಯಕರನನ್ನೇ ಆರೋಪಿಯನ್ನಾಗಿ ಮಾಡಿದ. ಆ ಪ್ರಿಯಕರನ ಗುಂಪಿನವರೋ ಇದನ್ನು ಪ್ರತಿಭಟಿಸುವ ಸ್ಥಿತಿಯಲ್ಲೂ ಇರಲಿಲ್ಲ. ಕಾರಣ ಇಷ್ಟಾದರೂ ಆತ ದೊರೆಯೇ ಎಂಬುದಾಗಿತ್ತು. ಇನ್ನು ಕೊಳುಗುಳದ ಬೊಮ್ಮನೇ ತನ್ನ ಅಕ್ಕನನ್ನು ಕಾಣದೆ ಪ್ರಾಣಿಯೆಂದು ಬಗೆದು ಬಾಣ ಬಿಡಲು ಬಾಣ ನಾಟಿದ ಆಕೆ ಸತ್ತಳು. ಇದು ಅನಿರೀಕ್ಷಿತ ಮತ್ತು ಅಚಾತುರ್ಯದಿಂದ ಆದುದು ಎಂದು ಹೇಳುವಲ್ಲಿ ಮಾನವನ್ನು ಸಂರಕ್ಷಿಸುವ ಉದ್ದೇಶ ಕಂಡುಬರುತ್ತದೆ. ವೀರ ಮಹಿಳೆಯಾಗಿದ್ದ, ದಿಟ್ಟೆಯಾಗಿದ್ದ, ಎಲ್ಲಕ್ಕಿಂತಲೂ ತಮಗೆ ಪ್ರೀತಿಯ ಸಹೋದರಿಯಾಗಿದ್ದ ಆಕೆಯ ಬದುಕನ್ನು ಆಕೆಯ ಸಾವಿನ ಮೂಲಕ ಆಕೆಯೊಬ್ಬಳು ಅನೈತಿಕ ಮಹಿಳೆ ಎಂಬುದು ಜನತ್ತಿನಲ್ಲಿ ಹರಡದೇ ಇರಲಿ, ಸಮಾಜ ಆಕೆಯನ್ನು ಅಗೌರವದಿಂದ ಕಾಣುವುದು ಬೇಡ ಎಂಬ ಆಲೋಚನೆಯಿಂದ ಕಟ್ಟಿದ ಕತೆ ಎಂಬುದರಲ್ಲಿ ಸಂಶಯವಿಲ್ಲ. ಆಕೆಯ ಸಾವಿಗೆ ತಾವೇ ಕಾರಣ ಎಂದು ತವರಿನವರು ತಮ್ಮ ಮೇಲೆ ಹಾಕಿಕೊಳ್ಳುವಲ್ಲಿ ಆಕೆಯ ಬಗ್ಗೆ ಅವರಿಗಿರುವ ಅಭಿಮಾನ ಎದ್ದು ಕಾಣುತ್ತದೆ.

ಮೂಲತಃ ಎಲ್ಲಾ ಬುಡಕಟ್ಟು ಸಮುದಾಯಗಳಲ್ಲಿಯೂ ಇದ್ದದ್ದು ಮುಕ್ತ ಸಂಬಂಧಗಳು. ಇಲ್ಲಿ ಸ್ತ್ರೀ ಪುರುಷ ಎಂಬ ಭೇದವಿರಲಿಲ್ಲ. ವ್ಯಕ್ತಿಗೌರವ ಎಂಬುದು ಇಲ್ಲಿ ಸ್ತ್ರೀ ಮತ್ತು ಪುರುಷ ಸಮುದಾಯಕ್ಕೆ ಸಹಜವಾಗಿಯೇ ಸಮಾನವಾಗಿಯೇ ಸಲ್ಲುತ್ತಿತ್ತು. ಸಮುದಾಯದಲ್ಲಿ ಮಹಿಳೆಯೇ ಸರ್ವಸ್ವ, ಆಕೆಯೇ ನಾಯಕಲಿ ಎಂಬ ವಾತಾವರಣವೂ ಇದ್ದು ಇದನ್ನೇ ಮಾತೃರೂಪೀ ಕುಟುಂಬ ವ್ಯವಸ್ಥೆ ಎಂದು ಕರೆಯಲ್ಪಡುತ್ತಿತ್ತು. ಹೆಣ್ಣು ಎಂದರೆ ಭೂಮಿ ಇದ್ದಂತೆಯೇ ಸಮೃದ್ಧಿ ಮತ್ತು ಫಲವಂತಿಕೆ ಆಕೆಯ ಮೂಲಕವೇ ಎಂದು ಹೆಚ್ಚಿನ ಮರ್ಯಾದೆ ಇತ್ತು. ಆರ್ಯರ ಪ್ರವೇಶಾನಂತರ ಇಲ್ಲಿಯ ದ್ರಾವಿಡ ಬುಡಕಟ್ಟುಗಳಲ್ಲಿದ್ದ ಈ ವ್ಯವಸ್ಥೆಯಲ್ಲಿ ಬದಲಾವಣೆ ಪ್ರಾರಂಭವಾಯಿತು. ಆರ್ಯ ಧರ್ಮ ಮಹಿಳೆಯ ಪಾತಿವ್ರತ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿತು. ಪಾತಿವ್ರತ್ಯವೇ ಹೆಣ್ಣಿನ ಅತಿ ಮುಖ್ಯವಾದ, ಉತ್ತಮವಾದ ಮೌಲ್ಯ ಎಂದು ಸಾರುತ್ತಾ ಬಂದಿತ್ತು. ಆರ್ಯರು ಮನು ಧರ್ಮಶಾಸ್ತ್ರ ಏಕಸಂಗಾತಿ ವಿವಾಹ ಪದ್ಧತಿಯನ್ನು ನೆಲೆಗೊಳಿಸಲು ಪ್ರಯತ್ನಿಸಿತು. ಕುಟುಂಬದ ಸ್ವಾಸ್ಥ್ಯದ

ದೃಷ್ಟಿಯಿಂದ ಇದು ಅತ್ಯುತ್ತಮ ನೀತಿಯಾದರೂ ಇದು ಇಬ್ಬರಿಗೂ ಅನ್ವಯವಾದಾಗ ಮಾತ್ರ ಯಶಸ್ವಿ ಸೂತ್ರ ಎನಿಸುತ್ತದೆ. ಇದು ಹೆಣ್ಣಿಗೆ ಮಾತ್ರ ಅನ್ವಯವಾಯಿತೇ ಹೊರತು ಗಂಡು ಈ ನಿಯಮದೊಳಗೆ ಬರಲೇ ಇಲ್ಲ. ಹೆಣ್ಣಿಗೆ ವಿವಾಹ ಪವಿತ್ರವಾದ ಬಂಧನವಾಯಿತೇ ಹೊರತು ಪುರುಷ ಪ್ರಶ್ನಾತೀತನಾಗಿಯೇ ಮುಂದುವರಿದ. ಕೊನೆಗೆ ಜನಪದ ಮಹಿಳೆ ತನ್ನ ಗಂಡ ಪರಸ್ತ್ರೀಯ ಸಹವಾಸ ಮಾಡಿದಾಗ 'ನಾ ಮೆಚ್ಚಿ ಮುಡಿದ ಪರಿಮಳದಾ ಹೂವ ಅವಳೊಂದು ಗಳಿಗೆ ಮುಡಿಯಲಿ' ಎಂದು ಸಮಾಧಾನಪಡುವಂತೆ ಮಾಡಿತು. ಆದರೆ ಹೆಣ್ಣಿನ ಮನಸ್ಸಿನ ಮತ್ತು ಭಾವನೆಗಳ ಮೇಲೆ ಅತಿಯಾದ ನಿರ್ಬಂಧವನ್ನು ಹೇರಲಾಯಿತು. ಈ ನಿಯಮಗಳೇ ಇಲ್ಲಿನ ಸ್ಥಳೀಯ ಸಂಸ್ಕೃತಿಯ ಪುರುಷರಿಗೂ ಆದರ್ಶವೆನಿಸಿದವು. ಗಂಡು ಹೇಳಿದ ನಿಯಮಗಳನ್ನು ಪಾಲಿಸಿದ ಸೀತೆ, ಸಾವಿತ್ರಿ, ಆರುಂಧತಿ ಇಲ್ಲಿ ಶ್ರೇಷ್ಠ ಸ್ಥಾನಕ್ಕೇರಿದರು. ಮ್ಯಾಸಬೇಡ ಬುಡಕಟ್ಟಿನಲ್ಲಿಯೂ ಮಾತೃಮೂಲೀಯವಾಗಿ ಮುಕ್ತವಾಗಿದ್ದ ಸಾಮಾಜಿಕ ವ್ಯವಸ್ಥೆಯು ಪಶುಪಾಲಕತನದೊಂದಿಗೇ ಪುರುಷಪ್ರಧಾನತೆಯ ಕಡೆ ತಿರುಗಿದಾಗ ಸ್ತ್ರೀ ಕಡೆಗಣಿಸಲ್ಪಟ್ಟಳು.

ಪುರುಷ ಪ್ರಶ್ನಾತೀತನಾದ ಇಂತಹ ಒಂದು ಪ್ರಸಂಗವೇ ಇಲ್ಲಿ ಮುಂಗಲು ದೇವಮ್ಮನ ಸ್ಥಿತಿ. ಈಕೆ ವಿವಾಹವಾಗಿದ್ದು, ಒಬ್ಬ ಸ್ಥಳೀಯ ದೊರೆ ನಾಯಕನನ್ನು, ತಾನೆಷ್ಟೇ ಸಬಲಳಾಗಿದ್ದರೂ ಪರಾಧೀನೆ, ತನ್ನಿಚ್ಛೆಯಂತೆ ಆಕೆ ನಡೆದುಕೊಂಡಾಗ ಆಕೆಯ ಗಂಡನಿಗೆ. ಅದು ಮುಜುಗರ ಉಂಟುಮಾಡುತ್ತದೆ. ತನ್ನ ಪ್ರತಿಷ್ಠೆಗೆ ಇದು ಧಕ್ಕೆಯುಂಟುಮಾಡುತ್ತದೆ. ಎಂದು ಭಾವಿಸುತ್ತಾನೆ. ಪ್ರತಿಯೊಬ್ಬ ವ್ಯಕ್ತಿಗೂ ಕನಿಷ್ಠ ಬದುಕುವ ಹಕ್ಕಾದರೂ ಇರುತ್ತದೆ. ಆದರೆ ಈ ಬದುಕನ್ನು ಕಸಿಯುವಲ್ಲಿ ಈತ ಯಶಸ್ವಿಯಾಗುತ್ತಾನೆ. ಮಾನವ ಹಕ್ಕಿನ ಉಲ್ಲಂಘನೆಯಾಗುತ್ತದೆ. ಆದರೆ ಆಕೆಯನ್ನು ಕೊನೆಗಾಣಿಸುತ್ತಾನೆ. ಆಕೆಯನ್ನು ಗಾದಿಪಾಲನಾಯಕನ ಪರಂಪರೆಯವರ್‍ಯಾರೂ ಇಂದು ಸ್ಮರಿಸುವುದಿಲ್ಲ. ಅದೊಂದು ಕೆಟ್ಟ ಕನಸಿನಂತೆ ಭಾವಿಸುತ್ತಾರೆ. 'ಲಂಜ' ಎಂಬುದು ತೆಲುಗು ಪದ. ಇದಕ್ಕೆ ಕನ್ನಡದಲ್ಲಿ 'ಸೂಳೆ', ನಡತೆ ತಪ್ಪಿದವಳು ಎಂದಾಗುತ್ತದೆ. ಆಕೆ ಓಡಾಡಿದ ಸ್ಥಳ ಎಂದರೆ ಕಾಟನಾಯಕ ದನಗಳ ಗೂಡನ್ನು ಹಾಕಿಕೊಂಡಿದ್ದು ಅಲ್ಲಿ ಆಕೆ ಹೋಗಿ ಬರುತ್ತಿದ್ದ ಸ್ಥಳವನ್ನು ಹಾಗೆ ಕರೆಯಲಾಗುತ್ತದೆ. ಹೀಗೆಯೇ ಮ್ಯಾಸಬೇಡ ಬುಡಕಟ್ಟಿನಲ್ಲಿ ಇಂದು ವೈಭವೀಕರಣಗೊಂಡು ಸ್ಮರಣೆಯಲ್ಲಿ ಉಳಿದಿರುವ ಸಾಂಸ್ಕೃತಿಕ ನಾಯಕರು ಎಂದು ಕರೆಸಿಕೊಳ್ಳುವ ವೀರರು ಹೀಗೆಯೇ ಅಡ್ಡಾಡಿದ ದಾರಿಗಳು ಹೆದ್ದಾರಿಗಳೇ ಆಗಿವೆಯಲ್ಲ. ಈ ಸ್ಥಳಗಳಿಗೆ ವೀರಪುರುಷರ ಕಣಿವೆ ಎಂದು ಕರೆಯಬೇಕಾಗುತ್ತದೆಯೇ? ಇದೇ ಒಂದು ಸಮುದಾಯ ಅಥವಾ ಒಟ್ಟು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿರುವ ವೈರುಧ್ಯವಲ್ಲವೇ, ಇಸ್ಲಾಂ ಧರ್ಮಕ್ಕೆ ಸೇರಿದ ನನ್ನಿಯಮ್ಮನನ್ನು ಮೋಹಿಸಿದ ದಡ್ಡಿಯವರ ಪಾಲನಾಯಕ ಆಕೆಯ ಹೆಸರಿನಲ್ಲಿ ಊರೊಂದನ್ನು ಕಟ್ಟುತ್ತಾನೆ. ಈತ ಮೊದಲು ವಿವಾಹಿತನೆಂಬುದಲ್ಲಿ ಸಂಶಯವಿಲ್ಲ. ತನ್ನ ಅಧಿಕಾರ ಬಲದಿಂದ ಪುರುಷ ವರ್ತಿಸುವ ಮತ್ತು ಅದನ್ನು ಒಪ್ಪಿಕೊಳ್ಳುವ ಸಾಮಾಜಿಕ ವ್ಯವಸ್ಥೆಡಯೊಂದು ಮಹಿಳೆಯನ್ನು ಮಾತ್ರ ಇಲ್ಲಿ ನಿರಾಕರಿಸುತ್ತದೆ. ಅಲ್ಲದೆ ಅಪಮಾನಿಸುತ್ತದೆ. ವೀರಶೈವ ಧರ್ಮದಲ್ಲಿ ತನ್ನ ಮನದ ಭಾವನೆಗಳನ್ನು ಪುರಸ್ಕರಿಸಿದ

ಗಂಡ ಮಹಾದೇವನಿಗೆ ಒಲಿದ ಗಂಡನಾಗುತ್ತಾನೆ. ಈಕೆ ಶರಣ ಸಮುದಾಯದಲ್ಲಿ 'ಅಕ್ಕ ಮಹಾದೇವಿ'ಯಾಗುತ್ತಾಳೆ. ತನ್ನ ಮನಸ್ಸನ್ನು ತೆರೆದಿಟ್ಟು ಆಕೆ ಮಾತಾಡಿದ ಮಾತುಗಳ ಹಿಂದೆ ಆಕೆಯ ನೋವಿದೆ, ತಲ್ಲಣವಿದೆ. ಪ್ರಕರವಾದ ವೈಚಾರಿಕ ಶಕ್ತಿಯಿದೆ. ಇಂತಹ ಅಕ್ಕನನ್ನು ಶರಣ ಸಮಾಜ ಪುರಸ್ಕರಿಸಿತು ವ್ಯತಿರಿಕ್ತವಾಗಿ ಸಮಾಜದಲ್ಲಿ ನಿಕೃಷ್ಟ ಸ್ಥಿತಿಯಲ್ಲಿರಬೇಕಾದ ಆಕೆಗೆ ಈ ಮೂಲಕ ಸ್ಥಾನಮಾನ ಲಭ್ಯವಾಯಿತು. ಇದು ಲಭ್ಯವಾಗಬೇಕಾದುದೇ ಆಕೆ ಗಂಡನನ್ನು ಇಷ್ಟ ಪಡದವಳು ಎಂದಾಕ್ಷಣ ಆಕೆಯನ್ನು ಅಪರಾಧಿ ಸ್ಥಾನದಲ್ಲಿರಿಸಿ ನೋಡಬೇಕಾಗಿಲ್ಲ. ಎಂಬುದನ್ನು ಶರಣ ಸಂಕುಲ ಜಗತ್ತಿಗೆ ತೋರಿಸಿಕೊಟ್ಟಿತು. ಹಾಗೆಯೇ ಸೂಳೆ ಸಂಕವ್ವೆಯೂ ಸಹ ಅನುಭವ ಮಂಟಪವೆಂಬ ಅಂದಿನ ವಿಚಾರವಂತರ ಸಭೆಯಲ್ಲಿ ಗುರುತಿಸಲ್ಪಟ್ಟಳು. ವಿಮಲ, ಪದ್ಮಾವತಿ, ಅಂಬಸಾಲಿ ಮುಂತಾದವರು ಬೌದ್ಧ ಧರ್ಮವನ್ನು ಸೇರಿ 'ಅರ್ಹತ್' ಎಂಬ ಪದವಿಯನ್ನು ಪಡೆದರು.

ಸಮಾಜದಲ್ಲಿ ಹೀಗೆ ನೀಚ ಸ್ಥಾನದಲ್ಲಿದ್ದ ವೇಶ್ಯೆಯರು ಕಜೂಡ ಬೌದ್ಧ ಧರ್ಮ ಸೇರಿ ಮುಕ್ತಿ ಪಡೆಯಬಹುದೆಂಬ ಉದಾರ ಧೋರಣೆಯನ್ನು ಬೌದ್ಧ ಧರ್ಮ ಅನುಸರಿಸಿದ್ದು ಒಂದು ಪ್ರಗತಿಪರ ಹೆಜ್ಜೆಯೆನಿಸುತ್ತದೆ. ಆದರೆ ಸಹಜವಾಗಿಯೇ ಸ್ತ್ರೀಪುರುಷ ಎಂದು ಭಿನ್ನತೆಯಿಂದ ಪರಿಗಣಿಸುವ ಸಂಸ್ಕೃತಿಯೊಂದರಲ್ಲಿ ಒಡೆತನ, ಪಾಳೆಯಗಾರಿಕೆಗಳು ಕ್ರಮೇಣ ಭಿನ್ನವಾಗಿ ಆಲೋಚಿಸುವಂತೆ ಮಾಡಿದವು. ಹೀಗಾಗಿ ಗಾದಿಪಾಲನಾಯಕನನ್ನು ಒಲಿದ ಮುಂಗಲು ದೇವಮ್ಮ ತಾನೊಲಿದ ಪುರುಷನ ಕಡೆ ಹೋಗಿರುವುದೆ ಕಾರಣವಾಗಿ ಅಮಾನುಷವಾಗಿ ಹತ್ಯೆಗೊಳಗಾದಳು. ಆಕೆಯ ಸ್ಮರಣೆಗಾಗಿ ಆಕೆಯ ಕೆಲವು ವಸ್ತುಗಳು, ಆಯುಧಗಳನ್ನು ಆಕೆಯ ತವರಿನವರು ಮಾತ್ರ ಪೂಜಿಸುತ್ತಿದ್ದಾರೆ. ಅವರಿಗೆ ಮಾತ್ರ ಅಭಿಮಾನವಿದೆ ಅವಳ ಬಗೆಗೆ. ಆದರೆ ಒಟ್ಟು ಸಮುದಾಯದಲ್ಲಿ ಆಕೆ ಸ್ಮರಣೆಯಲ್ಲಿ ಉಳಿದಿರುವುದು 'ಲಂಜಿ' ಎಂಬುದಾಗಿ ಈ ಬಗೆಯ ಆಲೋಚನೆಯಿಂದ ಹೊರಬಂದು ಆಕೆ ಸಮೃದ್ದಿಯ ಉಳಿವಿಗಾಗಿ ಕಾರ್ಯತಂತ್ರವನ್ನು ರೂಪಿಸಿ ತಮ್ಮನಾದ ಕೊಳುಗುಳದ ಬೊಮ್ಮನನ್ನು ಹುರಿದುಂಬಿಸಿ ಶಸ್ತ್ರಾಸ್ತ್ರಗಳನ್ನು ಅಣಿಗೊಳಿಸಿ ಹೋರಾಟವನ್ನು ಆಯೋಜಿಸಿದವಳು. ನರಪತಿಯ ಕೋಟೆಯನ್ನು ಕೊಳುಗುಳದ ಬೊಮ್ಮ ಪ್ರವೇಶಿಸಿ ಮ್ಯಾಸಮಂಡಲದ ಪೆಟ್ಟಿಗೆಗಳನ್ನು, ಪಶುಸಂಪತ್ತನ್ನು, ೯ ಅಜ್ಜನವರನ್ನು ಬಿಡುಗಡೆಗೊಳಿಸುವಲ್ಲಿ ಸಹಾಯ ಸಹಕಾರ ನೀಡಿದವಳು ಎಂದು ಸ್ಮರಿಸಬೇಕಾಗಿದೆ. ಆಕೆಯನ್ನು ಒಟ್ಟು ಸಮುದಾಯದಲ್ಲಿ ಗೌರವಿಸಬೇಕಾಗಿದೆ. ಇಂದಿನ ಸಂದರ್ಭದಲ್ಲಿ ಇಲ್ಲಿ ಪರಿಚಯಿಸಲಾಗದ ಹಿಂದೆ ಮೂರ್ತಿ ಕೆಲಸಕಾರ್ಯಗಳನ್ನು ಗಮನಿಸಿದಾಗ ಅವು ಅತೀ ಮಹತ್ವಪೂರ್ಣವಾದ ಕಾರ್ಯಗಳೇನಲ್ಲ ಎನ್ನಬಹುದು. ಆದರೆ ಅವರ ಅಂದಿನ ಪರಿಸರದಲ್ಲಿ ಅಷ್ಟೇ ಮಹತ್ವ ಅವರ ಕೆಲಸಕಾರ್ಯಗಳಿಗೆ ಇತ್ತು. ಬಹುಶಃ ಈ ಹಿನ್ನೆಲೆಯಿಂದಲೇ ಇವರನ್ನು ಗತಕ್ಕೆ ತಳ್ಳದೇ ವರ್ತಮಾನದಲ್ಲೂ ಸ್ಮರಣೆ ಆರಾಧನೆಗಳ ಮೂಲಕ ಉಳಿಸಿಕೊಂಡು ಬಂದಿರುವಲ್ಲಿ ಅವರ ಅನನ್ಯತೆ ಮತ್ತು ಮಹಿಳೆಗೆ ಸಮುದಾಯ ತೋರುತ್ತಿದ್ದ ಗೌರವ, ಪ್ರಾಧಾನ್ಯತೆಯನ್ನು ಗುರುತಿಸಬಹುದಾಗಿದೆ.

ತಮ್ಮಟಕಲ್ಲಿನ ಓಬವ್ವ

ಅಕ್ಕರಾಯಮ್ಮನ ಸಹೋರದ ಸಂತತಿಯಲ್ಲಿ ಬರುವ ಒಬ್ಬ ವ್ಯಕ್ತಿ ಯರಗಾಟನಾಯಕ ಈತ ಗೋಣೂರು ಕಟ್ಟೆಮನೆಗೆ ದೊರೆಯೆಂದು ಪರಿಗಣಿಸಲ್ಪಟ್ಟಿದ್ದ ಈತನ ಸಾವಿನ ಹಿಂದೆ ಒಂದು ಸೇನೆ ಇದ್ದು ಅದು ತಮ್ಮಟಗಲ್ಲಿನ ಓಬವ್ವನಿಗೆ ಸಂಬಂಧಿಸಿದುದಾಗಿದೆ. ಈಕೆ ಅಪ್ರತಿಮ ಚೆಲುವೆಯಾಗಿದ್ದಳು. ಮ್ಯಾಸಮಂಡಲದಾದ್ಯಂತ ಈಕೆಯ ಸೌಂದರ್ಯದ ಪ್ರಶಂಸೆ ನಡೆಯುತ್ತಿತ್ತು. ಈಕೆಯನ್ನು ವಿವಾಹವಾಗಲು ಅನೇಕ ಜನ ಬಯಸಿದ್ದರು. ಹೀಗಿರುವಾಗ ನಿಡುಗಲ್ಲಿನ ಪಾಳೆಯಗಾರನಾದ ಹೊಟ್ಟಣ್ಣ ನಾಯಕನ ಸ್ನೇಹಿತ ಬಾಗೇನಾಳು ಕಾಮನಾಯಕ ಈಕೆಯನ್ನು ವರಿಸಲು ಬಂದು ಅವಳು ಇಷ್ಟಪಡದಿರಲು ಅವಮಾನಿತನಾಗಿ ಹಿಂತಿರುಗುತ್ತಾನೆ. ಆಕೆ ಅವನನ್ನು ನಿರಾಕರಿಸಲು ಕಾರಣವೂ ಇರುತ್ತದೆ. ಮ್ಯಾಸಮಂಡಲದ ಪಶುಗಂಪಳವನ್ನು ಹೇಗಾದರೂ ಮಾಡಿ ತನ್ನದಾಗಿಸಿಕೊಳ್ಳಬೇಕೆಂದು ಪದೇಪದೇ ಕಾಟ ಕೊಡುತ್ತಿದ್ದ. ಹೊಟ್ಟಣ್ಣನಾಯಕನಿಗೆ ಈ ಕಾಮನಾಯಕ ಸಹಾಯಕನಾಗಿದ್ದ ಹಿಂದೆ 'ರಣಗಂಬ'ಗಳ ಬಳಿ ಅಕ್ಕರಾಯಮ್ಮನ ಮಾರ್ಗದರ್ಶನದಲ್ಲಿಯೇ ಮ್ಯಾಸಬೇಡರು ಹೊಟ್ಟಣ್ಣನಾಯಕನನ್ನು ಹಿಮ್ಮೆಟ್ಟಿಸಿದರು. ಇಂತಹವನ ಸ್ನೇಹಿತನನ್ನು ವಿವಾಹವಾಗಲು ಇವಳ ಮನಸ್ಸು ಒಪ್ಪುವುದಿಲ್ಲ. ಈ ಕಾಮನಾಯಕನ ಬಳಿ 'ಗೊಡ್ಡುಗಾಳಿ' ಎಂಬ ಕೊಬ್ಬಿದ ಹಸುವಿರುತ್ತದೆ. ಇದರ ಕತ್ತಿಗೆ ಅವನು ಚಿನ್ನದ ಬೃಹತ್ ಗಂಟೆಯನು ಕಟ್ಟಿದ್ದ ಇದು ಆತನ ಪ್ರತಿಜ್ಞೆಯನ್ನು ಹೆಚ್ಚಿಸಿದ ಹಸುವಾಗಿತ್ತು. ತನ್ನಲ್ಲಿರುವ ವಿಶೇಷವಾದ ಹಸು, ಎತ್ತುಗಳ ಮೂಲಕವೇ ಸಮುದಾಯಗಳು ಪ್ರತಿಷ್ಠೆ ಪಡೆಯುತ್ತಿದ್ದುದೂ ಉಂಟು. ಈ ಹಸುವಿನ ಮಾಂಸವನ್ನು ಸುಟ್ಟು ನನಗೆ ತಂದುಕೊಟ್ಟರೆ ಅವನನ್ನು ಮದುವೆಯಾಗುತ್ತೇನೆ, ಎಂದು ಓಬವ್ವ ತನ್ನನ್ನು ಬಯಸಿ ಬಂದವರಿಗೆ ಸವಾಲು ಹಾಕುತ್ತಾಳೆ. ಅಂದರೆ ಆತನ ಹಸುವನ್ನು ಹಿಡಿದು ತಂದು ಕೊಂದು ತಿನ್ನುವುದು ಆತನಿಗೆ ಮಾಡುವ ಅವಮಾನದ ಒಂದು ವಿಧ ಎಂದು ಆಕೆ ತೀರ್ಮಾನಿಸಿದ್ದಳು. ಗೋಣೂರಿನ ದೊರೆಯಾದ ಶೂರ ಯರಗಂಟನಾಯಕ ಈ ಷರತ್ತಿಗೆ ಒಪ್ಪಿಕೊಂಡು ಬಾಗೇನಾಳಿಗೆ ಹೋಗುತ್ತಾನೆ.

ಒಂದು ದೊಡ್ಡ ಬುಟ್ಟಿಯ ಗಂಟನ್ನು ಹಸುವಿಗೆ ಕಟ್ಟಿದ್ದ ಗಂಟೆಯ ಬಾಯಿಗೆ ತುರುಕಿ, ಅದನ್ನು ಹಿಡಿದು ಹೊರಗೆ ತರುತ್ತಿರುವಾಗ ಅದರ ಗೊರಸು ಬಾಗಿಲಿಗೆ ತಗುಲಿ ಶಬ್ದವಾಗುತ್ತದೆ. ಅಲ್ಲಿಗೂ ಬಿಡದೆ ಧೈರ್ಯದಿಂದ ಓಡಿಬಂದು ಒಂದು ಬಂಡೆಯ ಮೇಲೆ ಹಸುವನ್ನು ಕೊಯ್ದು, ಅದರ ಸತುವಿನ ಭಾಗ ಸುಟ್ಟು ಒಂದು ಕಡ್ಡಿಗೇರಿಸಿ ತಂದು ಓಬವ್ವನಿಗೆ ಕೊಡುವುದರ ಮೂಲಕ ಆಕೆಯ ವಿಶ್ವಾಸಕ್ಕೆ ಪಾತ್ರನಾಗಿ ಆಕೆಯೊಂದಿಗೆ ಸಂಬಂಧ ಬೆಳೆಸುತ್ತಾನೆ. ನಿದ್ದೆಗಣ್ಣಿನಲ್ಲಿದ್ದ ಕಾಮನಾಯಕ ಗಂಟೆಯ ಶಬ್ಧ ಕೇಳಿ ಏನು ಅನಾಹುತವಾಯಿತು ಎಂದು ಹಿಂಬಾಲಿಸಿಕೊಂಡು ಬಂದು ಬರುವ ವೇಳೆಗೆ ಯರಗಂಟನಾಯಕ ಆಗಲೇ ಓಬವ್ವನ ಬಳಿ ಇರುತ್ತಾನೆ. ಯರಗಂಟನಾಯಕ ಈಕೆಯನ್ನು ಪಡೆಯಲೇಬೇಕೆಂಬ ಆಸೆಯಿಂದ ಈ ಸಾಹಸಕ್ಕೆ ಕೈಹಾಕಿ ಯಶಸ್ವಿಯಾಗುತ್ತಾನೆ. ಒಮ್ಮೆ ಯರಗಂಟ ನಾಯಕ ಈಕೆಯ ಮನೆಗೆ ಬಂದು ಹಿಂತಿರುಗುತ್ತಿರುವಾಗ ಹೊಂಚುಹಾಕಿ ಕಾದುಕುಳಿತಿದ್ದ

ಗಜಗುತ್ತಲ ಕ್ವಾಸಯ್ಯ ಎಂಬಾತ(ಈತನೂ ಓಬವ್ವನಿಗೆ ಆಸೆಪಟ್ಟು ಪಡೆಯಲಾರದೆ ನಿರಾಸನಾಗಿದ್ದ.) ಬಾಣ ಬಿಡಲು ಇದೇ ಕಾರಣದಿಂದ ಯರಗಂಟನಾಯಕ ಪ್ರಾಣಬಿಡುತ್ತಾನೆ. ತನ್ನ ಸೌಂದರ್ಯವನ್ನು ಒಂದು ಅಸ್ತ್ರವಾಗಿ ಬಳಸಿಕೊಂಡು ತನ್ನ ಸಮುದಾಯಕ್ಕೆ ಕಂಟಕನಾಗಿದ್ದ ಹೊಟ್ಟಣ್ಣನಾಯಕನಿಗೆ ಸಹಾಯ ಮಾಡುತ್ತಿದ್ದ ಮತ್ತೊಬ್ಬ ಪಾಳೆಯಗಾರ ಕಾಮನಾಯಕನನ್ನು ಹಿಮ್ಮೆಟ್ಟಿಸಲು ಪ್ರಯತ್ನ ಮಾಡಿದವಳೀಕೆ. ಸೋಮಾರಿತನ ಮೈಗೂಡಿಸಿಕೊಳ್ಳುತ್ತಿದ್ದ ಮ್ಯಾಸದ ಯುವಶಕ್ತಿಯ ಮನಸ್ಸಿನಲ್ಲಿ ಛಲವನ್ನು ತುಂಬಿದ ಅವಳಿಗೆ ಸಮುದಾಯದ ಮೇಲಿದ್ದ ಅಭಿಮಾನ, ಅದರ ಪ್ರತಿಷ್ಠೆಯನು ಉಳಿಸಬೇಕೆಂಬ ಆಸೆಯೇ ಕಾರಣವಾಗಿ ನಿಬಂಧನೆ ಒಪ್ಪಿದಳೇ ಹೊರತು ಮಾಂಸ ತಿನ್ನುವ ಆಸೆಯಿಂದಲ್ಲ. ಹಿಂದೆ ಅಕ್ಕರಾಯಮ್ಮ ಈ ಹೊಟ್ಟಣ್ಣನಾಯಕನನ್ನು ರಣಗಂಬಗಳ ಬಳಿ ನಡೆದ ಹೋರಾಟದಲ್ಲಿ ಹಿಮೆಟ್ಟಿಸಿದ್ದಳು. ಈ ಹಿರಿಯಳನ್ನೇ ಮಾದರಿಯನ್ನಾಗಿಸಿಕೊಂಡು ತನ್ನ ಸಮುದಾಯದ ಘನತೆಯನ್ನು ಉಳಿಸಲು ಪ್ರಯತ್ನಿಸುತ್ತಿದ್ದ ಈಕೆ ಈ ಮೂಲಕ ಹೊಟ್ಟಣ್ಣ ನಾಯಕನಿಗೂ ಅವಮಾನ ಮಾಡುತ್ತಾಳೆ. ಹಿಂದೆ ಪಶುಸಂಪತ್ತೇ ತಮ್ಮ ಪ್ರತಿಷ್ಠೆಗೆ ಕಾರಣವಾಗಿದ್ದ ಸಂದರ್ಭದಲ್ಲಿ ತಮ್ಮ ವೈರಿಗಳು ದನಕರು ವಶಪಡಿಸಿಕೊಂಡರೆ, ಕೊಂದರೆ ದೊಡ್ಡ ಅವಮಾನ ಎಂದು ಭಾವಿಸುತ್ತಿದ್ದ ಸಂದರ್ಭವದು. ಹೀಗೆ ಶತ್ರುವಿಗೆ ಅವಮಾನ ಮಾಡಿ ತನ್ನ ಸಮುದಾಯದ ಘನತೆ ಕಾಪಾಡಲು ಪ್ರಯತ್ನಿಸಿದ ಮಹಿಳೆ ಈ ಓಬವ್ವ

ಅರವಜ್ಜಿ

ಮ್ಯಾಸಬೇಡರಲ್ಲಿ ವಿಶೇಷವಾಗಿ ಪೂಜೆಯನ್ನು ಪಡೆಯುತ್ತಿರುವ ಮಹಿಳೆ ಈಕೆ. ನನ್ನಿವಾಳ (ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಬಳಿ)ದ ಹತ್ತಿರ ಈಕೆಯ ಸಮಾಧಿ ಇದ್ದು, ಇದನ್ನೇ ಪೂಜಿಸುತ್ತಾರೆ. ಈ ಸಮಾಧಿ ಇರುವ ಸ್ಥಳವನ್ನು ಅರವಟ್ಟಿ ಏಣು ಎನ್ನುತ್ತಾರೆ. 'ಏಣು' ಎಂದರೆ ದಿನ ಎಂದರ್ಥ. ಇದರ ಪಕ್ಕದಲ್ಲೆ ಮದ್ದಕ್ಕರಾಯಲ ಬಂಡೆ ಇದೆ. ನಾಯಕರ ಹಟ್ಟಿಯ ಬಳಿ ಇರುವ ಹೊಸಗುಡ್ಡದ ಆಸುಪಾಸಿನ ಪ್ರದೇಶವನ್ನು 'ಪೆದ್ದ ತಿಪ್ಪಲು' ಅಂದರೆ ಹಿರಿತಿಪ್ಪೆ ತಿಪ್ಪೆ ಎಂದರೆ ಇಲ್ಲಿ ಮಟ್ಟಿ ಎಂದರ್ಥ. ಕಾವಲಿನಲ್ಲಿ ಅಕ್ಕರಾಯಮ್ಮನೊಂದಿಗೆ ಮ್ಯಾಸಗಂಪಳ ನೆಲೆಸಿರುತ್ತದೆ. ನಂತರ ಇದೇ ಸಮುದಾಯದ ಉಳಿದ ಗುಂಪುಗಳೂ ಬಂದು ಸುತ್ತಮುತ್ತ ನೆಲೆಸುತ್ತವೆ. ರಾಯಮ್ಮನ ತಂಡದವರು ಬೇಟೆಗೆ ಹೋದಾಗ ಅರವಜ್ಜಿಯ ಪರಿಚಯವಾಗುತ್ತದೆ. ಒಮ್ಮೆ ಅನಾಥ ಹುಡುಗನೊಬ್ಬ ಅವರಿಗೆ ಸಿಕ್ಕುತ್ತಾನೆ. ತಮ್ಮದೇ ಹೋಲಿಕೆ ಇದ್ದ ಆತ ಅರವಜ್ಜಿ ಸಿಕ್ಕಿದ್ದಾಳೆ ಎಂದು ಹೇಳುತ್ತಾನೆ. ಭೈಗೊಂಡರಾಜ ಸೂರ್ಯನ ದಾಳಿಗೆ ಹೋಗಿ ಅಂದ ನಂತರ ಕಾಣೆಯಾಗಿರುತ್ತಾನೆ. ರಾಯಮ್ಮ ಈ ಹುಡುಗನನ್ನು ನೋಡಿ ತನ್ನ ತಮ್ಮನಾದ ಬೈಗೊಂಡ ರಾಜನ ಹಾಗೆಯೇ ಇದ್ದಾನೆ ಈ ಅರವಜ್ಜಿ ತಮ್ಮವಳೇ ಎಂದು ಗುರುತಿಸುತ್ತಾಳೆ. ಆ ಹುಡುಗನೆ ಮುಂದೆ ಹಟ್ಟಿಯ ದೊರೆಯಾಗುತ್ತಾನೆ. ಈಕೆ ತುಂಬಾ ಜಾಣೆಯಾಗಿದ್ದಳು ಮತ್ತು ಗಾದರಿಪಾಲನಾಯಕನ ಸೋದರತ್ತೆ ಈಕೆ ಎಂಬ ಅಭಿಪ್ರಾಯವು ಸಮುದಾಯದಲ್ಲಿದೆ. ಈಕೆಯೊಬ್ಬ ಪ್ರಭಾವಿ ಹೆಂಗಸಾಗಿದ್ದು, ಅಕ್ಕರಾಯಮ್ಮನ ಜೊತೆ ಪ್ರಮುಖ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದಳು ಎಂದು ಹೇಳಲಾಗುತ್ತದೆ.

‘ಅರ’[೨೦] ಎಂದರೆ ತೆಲುಗು ಪದಕೋಶದ ಪ್ರಕಾರ ಪೂಜಾರಿ, ಶಿಕ್ಷಕಿ, ಅಡಿಗೆ ಮಾಡುವವರು, ಹಸುಗಳಿಗೆ ಆಹಾರ ಪೂರೈಸುವ ಕೆಲಸದ ಮೇಲ್ವಿಚಾರಣೆಯನ್ನು ತಾನೇ ಸ್ವತಃ ಮಾಡುವವಳು ಎಂದು ಅರ್ಥವಿದೆ. ಪಶುಪಾಲಕತನದ ಹಿನ್ನೆಲೆಯಲ್ಲಿ ನೋಡಿದಾಗ ಈ ಕೊನೆಯ ಅರ್ಥವೇ ಸಮಂಜಸವಾದುದಾಗಿರುತ್ತದೆ. ಹೀಗೆ ಸ್ವತಃ ಪಶುಪಾಲನೆಯ ಕಡೆ ಶ್ರದ್ಧೆಯಿಂದ ಗಮನಹರಿಸಿದ್ದ ಮಹಿಳೆ ಎಂಬುದಂತೂ ಸ್ಪಷ್ಟವಾಗುತ್ತದೆ. ನನ್ನಿವಾಳ ಒಂದು ಕಟ್ಟೆಮನೆಯಾಗಿದ್ದು, ಇಲ್ಲೊಬ್ಬ ದೊರೆಯೂ ಇರುತ್ತಾನೆ. ಈ ಊರಿನ ಸುತ್ತಮುತ್ತ ಅನೇಕ ಮ್ಯಾಸಬೇಡರ ಹಟ್ಟಿಗಳಿದ್ದು ಇವರೆಲ್ಲಾ ಸೇರಿ ಅರವಜ್ಜಿ ಜಾತ್ರೆ ಮಾಡುತ್ತಾರೆ.

ನನ್ನಿವಾಳದ ಸುತ್ತಮುತ್ತಲ ಹಟ್ಟಿಗಳವರು ತಮ್ಮತಮ್ಮ ದೇವರುಗಳನ್ನು ಹಟ್ಟಿಯಲ್ಲಿ ಅಲಂಕರಿಸಿ ಪೂಜಿಸುತ್ತಾರೆ. ಎರಡನೆಯ ದಿನ ನನ್ನಿವಾಳದ ಕಟ್ಟೆಮನೆ ದೇವರಿಗೆ ಅಂದರೆ ಕಟ್ಟೆಮನೆಯ ಒಳಗೆ ಗುಡಿಸಲಿನಲ್ಲಿರುವ ಮುತ್ತಿಗಾರರ ದೇವರಿಗೆ ಪೂಜೆ ಸಲ್ಲುತ್ತದೆ. ಮಾರನೆಯ ದಿನ ಸುತ್ತಲಿನ ಹಟ್ಟಿಗಳ ಜನ ತಮ್ಮ ದೇವರುಗಳೊಂದಿಗೆ ಕಟ್ಟೆಮನೆಯ ಬಳಿಬಂದು ಉದಿಪದಿ (ಸೊಪ್ಪಿನ ಗುಡಿಸಲು– ಸುತ್ತ ಆವರಣ) ಕಟ್ಟಿಕೊಂಡು ಅದರಲ್ಲಿ ತಮ್ಮ ದೇವರನ್ನಿಟ್ಟು ಪೂಜೆ ಸಲ್ಲಿಸುತ್ತಾರೆ. ಒಬ್ಬರು ಮತ್ತೊಬ್ಬರ ಪದಿಗೆ ಹೋಗುವುದಿಲ್ಲ. ಆ ದಿನ ಸಾಯಂಕಾಲ ಕಾಸು ಮೀಸಲು ಅರ್ಪಿಸಿ ಪಂಜು ಹಂಚುವ ಕಾರ್ಯಕ್ರಮ ಮರುದಿನ ಬೆಳಗಿನ ಜಾವದ ವೇಳೆಗೆ ಮುಗಿಸುತ್ತಾರೆ. ನಂತರ ಈ ಪಂಜಿನ ದಾಸಯ್ಯಗಳು ಕುಣಿಯುತ್ತಾರೆ. ನಂತರ ಪಂಜು ನುಂಗುವ ಕಾರ್ಯಕ್ರಮ ನಡೆಯುತ್ತದೆ. ನಾಲ್ಕನೇಯ ದಿನ ಜಾತ್ರೆಗೆ ಬಂದ ದನಕರುಗಳಿಗೆ ಪೂಜೆ ಮಾಡಿ ದೇವರ ಪ್ರಸಾದ ಎಂದು ಮಜ್ಜಿಗೆ ಅಂಬಲಿ ಹಂಚುತ್ತಾರೆ. ಇಲ್ಲಿಂದ ಹೊರಟ ದೊರೆ ಛತ್ರಿ ಚಾಮರಗಳ ಸೇವೆಯ ಮಧ್ಯೆ ಕಟ್ಟೆಮನೆಗೆ ಬಂದ ಎಲ್ಲಾ ದೇವರುಗಳಿಗೂ ಪೂಜೆ ಸಲ್ಲಿಸಿ ತನ್ನ ಸಿಂಹಾಸನದ ಮೇಲೆ ಒಂದು ಕಟ್ಟೆ ಕುಳಿತುಕೊಳ್ಳುತ್ತಾನೆ. ಕಟ್ಟೆಮನೆಗೆ ಸೇರಿದವರೆಲ್ಲಾ ನಮಸ್ಕರಿಸುತ್ತಾರೆ. ದೊರೆ ಎಲ್ಲರ ಸಮಸ್ಯೆ, ಪರಿಹಾರ ಕಾಣುವ ಸಮಸ್ಯೆಗಳಿಗೆ ಪರಿಹಾರ ಹೇಳಿ ಆ ವರ್ಷ ನಡೆಸಬೇಕಾದ ಕಾರ್ಯಕ್ರಮಗಳ ಬಗ್ಗೆ ತಿಳಿಸುತ್ತಾನೆ. ನಂತರ ಜಾತ್ರೆಗೆ ಸೇರಿದ ಎಲ್ಲರೂ ಎದ್ದುನಿಂತು, ತಲೆ ಬಾಗಿಸಿ ಕೈಯ್ಯನ್ನು ಮೂದೆ ಚಾಚಿ ಬಗ್ಗಿ ದೊರೆಗೆ ನಮಸ್ಕರಿಸುತ್ತಾರೆ. ಈ ದೊರೆಯ ತಾಯಿ ಹಿಂದೆ ಇಸ್ಲಾಂ ಧರ್ಮದ ಮಹಿಳೆಯಾದ ಕಾರಣ ಈ ಆಚರಣೆ ಇದೆ. ನಂತರ ಎತ್ತುಗಳನ್ನು ಹಾಯಿಸಿ ಆದ ಮೇಲೆ ಎತ್ತುಗಳು ಗೂಡು ಸೇರುತ್ತವೆ. ಮರುದಿನ ದೇವರುಗಳು ತಮ್ಮ ಹಟ್ಟಿ ಸೇರಿಕೊಳ್ಳುತ್ತವೆ. ಆರನೆಯ ದಿನ ನನ್ನಿವಾಳದಿಂದ ಗಾದ್ರಿಪಾಲನಾಯಕ ದೇವರನ್ನು ಹೊರಡಿಸಿಕೊಂಡು ಛತ್ರಿ ಚಾಮರಗಳ ಮಧ್ಯೆ ದೊರೆ ನಿಲುವಂಗಿ ಧರಿಸಿ ಜನ ಸಮುದಾಯಗಳೊಂದಿಗೆ ಅರವಜ್ಜಿಯ ಸಮಾಧಿಯ ಬಳಿ ಬರುತ್ತಾನೆ. ಇದಕ್ಕೆ ಹತ್ತಿರದಲ್ಲಿರುವ ಸೂರೇ ಯರಗಂಟನಾಯಕನ ಗುಡಿ. ಹತ್ತಿರ ಆ ರಾತ್ರಿ ಮುತ್ತಿಗಾರರ ಏಳು ಮಂದಿ ಓರಿಯರು ಯಾರಿಗೂ ಕಾಣದಂತೆ ಎಣ್ಣೆ ಕುಡಿಯುತ್ತಾರೆ. ಇದೊಂದು ಬಗೆಯ ಶಿಕ್ಷೆ ಅರವಜ್ಜಿಗೆ ವಿರೋಧವಾಗಿ ನಡೆದುಕೊಂಡದ್ದು ಕಾರಣವಾಗಿ ಶಿಕ್ಷೆ ರೂಪದಲ್ಲಿ ಈ ಆಚರಣೆ ಬಂದಿರಬಹುದು. ನಂತರ ಎಲ್ಲರೂ ಸಮಾಧಿಗೆ ಕಾಸು ಮೀಸಲು ಅರ್ಪಿಸುತ್ತಾರೆ. ಪೂಜೆ ಪ್ರಾರಂಭವಾಗಿ ರಾತ್ರಿಯೆಲ್ಲಾ

ನಡೆದು ಬೆಳಗಿನ ಜಾವ ಅರವಜ್ಜಿ ಸಮಾಧಿಗೆ ವಾಸೆ ಕೊಯ್ಯುತ್ತಾರೆ. ಸುಮಾರು ಹತ್ತು ಕುರಿ ಬಲಿಕೊಡುತ್ತಾರೆ.

ದೊಮದಮಲವರು– ಎಂಬ ಬೆಡಗಿನವರು ಕುರಿಯ ಗುಂಡಿಗೆಗೆ ತಿವಿಯುತ್ತಾನೆ.

ಇರುವೆ– ಶ್ವಾಸಕೋಶಕ್ಕೆ ತಿವಿಯುತ್ತಾನೆ.

ಚರ್ಮ– ಚರ್ಮ ಸುಲಿಯುತ್ತಾನೆ.

ಪಚ್ಚಿ– ಪಚ್ಚಿಲರು, ಕರುಳು ಪಟ್ಟಿ ಬಗೆಯುತ್ತಾರೆ.

ಇದೇ ವಿಧಾನದಲ್ಲಿ ಆಯಾ ಭಾಗ ತಿವಿದವರಿಗೆ ಅದನ್ನು ಹಂಚಲಾಗುತ್ತದೆ. ಉಳಿದದ್ದನ್ನು ಅಡಿಗೆ ಮಾಡಿ ಅರವಜ್ಜಿಗೆ ಎಡೆ ಹಾಕುತ್ತಾರೆ. ಮರುದಿನ ದೇವರ ಎತ್ತುಗಳನ್ನು ಓಡಿಸಿ ಭಕ್ತಾದಿಗಳು ಕಾಸು ಮೀಸಲು ಅರ್ಪಿಸುತ್ತಾರೆ. ಮಾಡಿದ ಮಾಂಸದ ಅಡುಗೆಯನ್ನು ಎಲ್ಲರಿಗೂ ಬಡಿಸುತ್ತಾರೆ. ಹೀಗೆ ಇದು ಒಟ್ಟು ಏಳು ದಿನಗಳ ಆಚರಣೆಯಾಗಿದೆ. ಆಕ್ರಮಣ ಮಾಡಿದ ಹುಲಿಗೆ ಹಿಂದೆ ಗಾದ್ರಿಪಾಲನಾಯಕನೇ ಹೆದರಿ ಬೇರೆ ದಾರಿ ಹುಡುಕಿ ಹೊರಗೆ ಹೊರಟ. ಆಗ ಈತನ ಜೊತೆಯಲ್ಲಿ ಈತನ ಸೋದರತ್ತೆಯಾದ ಅರವಜ್ಜಿ ಇದ್ದಳು, ಜೊತೆಗೆ ಜಜ್ಜಿಲಬ್ಬ, ಯರದಾಯಬ್ಬ, ಗುಡ್ಡಬ್ಬ, ಕಡುಸಲಟ್ಟಿ ಗಟ್ಟಿಮೀದಟ್ಟಿ ಎಂಬ ಮಹಿಳೆಯರಿದ್ದು ವಯಸ್ಸಾದ ಮಹಿಳೆಯರಾಗಿದ್ದ ಕಾರಣ ಮಾರ್ಗಮಧ್ಯದಲ್ಲಿ ಒಬ್ಬೊಬ್ಬರಾಗಿ ಅಸುನೀಗುತ್ತಾರೆ. ಇವರನ್ನೆಲ್ಲಾ ಅಲ್ಲಲ್ಲಿಯೇ ಸಮಾಧಿ ಮಾಡಿ ಮುಂದೆ ಹೋಗುತ್ತಾನೆ. ಅರವಜ್ಜಿ ಸತ್ತಾಗ ಸಮಾಧಿ ಮಾಡಿ ಸ್ವತಃ ತಾನೇ ಪೂಜೆಮಾಡಿ ತನ್ನ ಪ್ರಯಾಣ ಮುಂದುವರೆಸುತ್ತಾನೆ. ಆತನೇ ಪೂಜೆ ಸಲ್ಲಿಸಿದ್ದ ಕಾರಣವಾಗಿ ಮತ್ತು ಆಕೆ ಈ ಗಾದರಿಪಾಲನಾಯಕನಿಗೆ ಸೋದರತ್ತೆಯಾದ ಕಾರಣ ಆತನ ಪರಂಪರೆಯವರು ಶ್ರದ್ಧೆಯಿಂದ ಪೂಜಿಸುತ್ತಾ ಬರುತ್ತಿದ್ದಾರೆ. ಉಳಿದ ಮಹಿಳೆಯರಿಗೆ ವಿಶೇಷವಾದ ಆರಾಧನಾ ವಿಧಿಗಳಿಲ್ಲದಿದ್ದರೂ ಸುತ್ತಮುತ್ತಲ ಹಟ್ಟಿಗಳವರು ಬಿತ್ತನೆ ಕೊಯ್ದು ಯುಗಾದಿ, ಶ್ರಾವಣದಲ್ಲಿ ಪೂಜೆಮಾಡಿಕೊಂಡು ಹೋಗುತ್ತಾರೆ.

ಕೊನೆ ಟಿಪ್ಪಣಿ

೦೧ Devi Prasad Chattopadyaya; Lokayatha, page no:266.

೦೨ ಹೆಚ್.ವಿ.ನಾಗೇಶ್., ಗ್ರಾಮ ವ್ಯಾಸಂಗ, ಪುಟ–೧೪, ೧೫

೦೩ Digital Dictionary of South Asia a Telugu English Dictionary by J.P.L.Gwynn (www.r.chicwago.colu)

೦೪ ಈಜಿಪ್ಟಿನ ಸಂಸ್ಕೃತಿಯಲ್ಲಿ ಕ್ಲಿಯೋಪಾತ್ರ ಮದುವೆಯಾಗಿದ್ದು ಯುವರಾಜನಾಗಿದ್ದು ತನ್ನ ತಮ್ಮನನ್ನು (ಎ) ಅವಧೇಶ್ವರಿಯ ಸಹೋದರನೊಂದಿಗೆ ವಿವಾಹ "ಅವಧೇಶ್ವರಿ ಕಾದಂಬರಿ"ಮ, ಶಂಕರ

ಮೊಕಾಶಿ ಪುಣೇಕರ್:(ಬಿ); ಮ್ಯಾಸಬೇಡರಲ್ಲಿ ಮಂದನಾನ ಮಂದ ತಿರುಗಮಂದ ಎಂದರೆ ಸಗೋತ್ರ ವಿವಾಹವಾಗಿತ್ತು.

೦೫ ಧರ್ಮಶಾಸ್ತ್ರಗಳು ಸ್ತ್ರೀ ಹಾಗೂ ಶೋಷಣೆ, ನಿರುಪಮಾ, ಪುಟ–೧೩

೦೬ ವಿಠ್ಠಲರಾವ್ ಗಾಯಕ್‌ವಾಡ್, ಸ್ತ್ರೀವಾದಿ ವಿಮರ್ಶೆ

೦೭ ಅನು. ಎಲ್.ಈ.ವೀರ., ಮಾನುಷಿಯ ಮಾತು, ಮೂಲ:ಸ್ತ್ರೀವಾದ ಚಿಂತಕ ಮಧುಕೇಶ್ವರ ಅವರ ಬರಹಗಳು

೦೮ ಗಾಯತ್ರಿ ನಾವಡ, ಭಾರತೀಯ ಸ್ತ್ರೀವಾದ ಒಂದು ಸಂಕಥನ, ಪುಟ–೧೬

೦೯ Abigail Abans-First Lady of The United States 1774-1818

೧೦ Simonedo Behauvior, The Second Sex, Random House, New york

೧೧ Piligrins Progress, page no-138

೧೨ Bramishaw Maliniowaski Magic; science and religiom and other essays. page no-101

೧೩ 'ವಾಸೆ' ಸಂಸ್ಕೃತದಲ್ಲಿ 'ವಾಸೆ' ಎಂದರೆ ಕೊಲ್ಲು, ಕತ್ತರಿಸು ಎಂಬರ್ಥವಿದೆ. ಮ್ಯಾಸದಲ್ಲಿ ಅಂಬು ವಾಸು ಕೊಯ್ಯುವುದು ಎಂಬ ಪದ್ಧತಿ ಇದೆ ಚೂಪಾದ ಆಯುಧವೇ ಅಂಬು, ಇದರಿಂದ ಇಲ್ಲಿನ ಮೇಲೆ ಕುರಿಯ ಕತ್ತರಿಸಿ ಕೊಯ್ಯುತ್ತಾ

೧೪ ಮೀರಾಸಾಬಿಹಳ್ಳಿ ಶಿವಣ್ಣ, ಮ್ಯಾಸಮಂಡಲ, ಚಳ್ಳಕೆರೆ ತಾಲ್ಲೂಕಿನ ಸಾಂಸ್ಕೃತಿಕ ಮಹತ್ವದ ತಾಣಗಳು

೧೫ ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲ ಬುಡಕಟ್ಟು ವೀರರು

೧೬ ಕೋಶ ವಿಶ್ವನಾಥ, ಮಾರಿಮಹೇಶ್ವರಿ

೧೭ ಕೋಶ ವಿಶ್ವನಾಥ ಮತ್ತು ರಂಗಪ್ಪ, ಮಾರಿ ಕಥೆಯಲ್ಲಿ ಹೇಳಿದ್ದಾರೆ

೧೮ ಹಿರೇಮಠರು ನರಬಲಿ ಇರುವ ಪ್ರಚಲಿತ ಕತೆಗಳ ಬಗ್ಗೆ ಉಲ್ಲೇಖ ಮಾಡುತ್ತಾರೆ. ಪುಟ–೨೩೪, ೨೩೫, ಕೃತಿ–ಜಾತ್ರೆಗಳು

೧೯ ಕೋ.ಸ.ವಿಶ್ವನಾಥ, ಶ್ರೀ ಕೆ.ಎಸ್.ಲಿಂಗಣ್ಣನವರು–'ಮಾರಿಕತೆ'

೨೦ Digital Dictionary of South Asia a Telugu English Dictionary by J.P.L.Gwynn (www.r.chicwago.colu)

* * * *

ಅಧ್ಯಾಯ : ಐದು

ಮ್ಯಾಸಬೇಡ ಮಹಿಳೆ ಮತ್ತು ಸಮಾಜ

೫.೧ ಸಾಮಾಜಿಕ ಸ್ಥಿತಿಗತಿ

೫.೨ ರಾಜಕೀಯ ಸ್ಥಿತಿಗತಿ

೫.೩ ಕೌಟುಂಬಿಕ ಸ್ಥಿತಿಗತಿ

೫.೪ ಆರ್ಥಿಕ ಸ್ಥಿತಿಗತಿ

ಅಧ್ಯಾಯ : ಐದು

ಮ್ಯಾಸಬೇಡ ಮಹಿಳೆ ಮತ್ತು ಸಮಾಜ

ಸಮಾಜವು ನಿಂತ ನೀರಲ್ಲ. ಅದು ನಿತ್ಯ ಪರಿವರ್ತನಶೀಲವಾದದು. ತನ್ನೊಳಗೆ ಹಲವಾರು ಅಂಶಗಳಲ್ಲಿ ಬದಲಾವಣೆಯನ್ನು ಕಂಡುಕೊಂಡಿದೆ. ಮಾನವ ಹಾಗೂ ಸಮಾಜ ಇವು ಒಂದನ್ನು ಬಿಟ್ಟು ಇನ್ನೊಂದಿಲ್ಲ. ಮಾನವ ಸಮಾಜದ ಚರಿತ್ರೆ ತುಂಬಾ ದೀರ್ಘವಾದದ್ದು. ಒಂದು ಕಾಲದ ಅನಾಗರಿಕ ಮಾನವ ಸಮುದಾಯವು ಬೆಳೆದು ಇಂದು ಆಧುನೀಕರಣಗೊಂಡಿದೆ. ಅಂದರೆ ನಾಗರಿಕತೆ ಹೊಂದಿದೆ ಎಂದು ಹೇಳಬಹುದು. ಮಾನವನು ಹುಟ್ಟಿನಿಂದ ಹಂತ ಹಂತವಾಗಿ ವಿಕಾಸ ಹೊಂದಿದ್ದಾನೆ. ಅದೇ ರೀತಿ ಸಮಾಜ ಹಾಗೂ ಸಮುದಾಯಗಳು ಸಹ ಕಾಲದಿಂದ ಕಾಲಕ್ಕೆ ವಿಕಾಸ ಹೊಂದುತ್ತಲೆ ಬಂದಿವೆ.

೫.೧ ಸಾಮಾಜಿಕ ಸ್ಥಿತಿಗತಿ

ನಿಸರ್ಗದ ಬದಲಾವಣೆಯೊಂದಿಗೆ ಮ್ಯಾಸಬೇಡ ಸಮುದಾಯವು ಸಹ ವಿಕಾಸದ ಹಾದಿಯಲ್ಲಿ ಪರಿವರ್ತನೆಯನ್ನು ಪಡೆದುಕೊಂಡು ಬಂದಿದೆ. ದೇಶದ ವಿವಿಧೆಡೆ ನೆಲೆಸಿರುವ ಬುಡಕಟ್ಟು ಜನರ ಬದುಕು ವಿವಿಧ ಕಾರಣಗಳಿಂದ ಸ್ಥಿತ್ಯಂತರಗೊಳ್ಳುತ್ತಿದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಬೇಡ ಸಮುದಾಯದವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಶಗಳಲ್ಲಿ ಇಂದು ಬದಲಾವಣೆಯಾಗಿರುವುದನ್ನು ಕಾಣಬಹುದು. ಸಾಮಾಜಿಕ ಬದಲಾವಣೆ ಹಾದಿಯಲ್ಲಿ ಸಾಕಷ್ಟು ಬುಡಕಟ್ಟು ಸಮುದಾಯಗಳು ಸಾಗುತ್ತಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಪ್ರಾಚೀನ ಬುಡಕಟ್ಟುಗಳಲ್ಲಿ ಒಂದಾದ ಬೇಡ ಸಮುದಾಯವು ಸಹ ಸೇರಿಕೊಂಡಿದೆ. ಇಂದಿನ ದಿನಗಳಲ್ಲಿ ಸಮಾಜದ ಮೇಲೆ ಹಿಡಿತ ಸಾಧಿಸಿರುವ ಮುಖ್ಯ ಅಂಶಗಳಿಂದ ಆಧುನೀಕರಣ, ನಗರೀಕರಣ, ಪಾಶ್ಚಾತ್ಯೀಕರಣ, ಔದ್ಯೋಗಿಕರಣ ಮುಂತಾದವುಗಳ ಪ್ರಭಾವಕ್ಕೆ ಒಳಗಾಗಿ ಬದಲಾವಣೆಗೊಳ್ಳತೊಡಗಿದ್ದಾರೆ. ಬೇಡ ಸಮುದಾಯದ ಮೇಲೆ ಇತರೆ ಜಾತಿ ಸಮುದಾಯಗಳ ಪ್ರಭಾವ ಬೀರಿ ಇಂದು ತನ್ನಲ್ಲಿರುವ ಕೆಲವು ಆಚರಣಾಕ್ರಮ ಹಾಗೂ ಜೀವನದ ವಿಧಾನದಲ್ಲಿ ಬದಲಾವಣೆಯಾಗಿರುವುದು ಸೂಕ್ಷ್ಮವಾಗಿ ಕಂಡುಬರುವ ವಿಚಾರಗಳಾಗಿವೆ. ಜೊತೆಗೆ ಇವರ ಸಾಮಾಜಿಕ ಸಂಸ್ಥೆ, ಸಾಮಾಜಿಕ, ಆರ್ಥಿಕ, ರಾಜಕೀಯ, ಶಿಕ್ಷಣ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇಂದು ಪರಿವರ್ತನೆಗೊಂಡಿದ್ದಾರೆ ಹಾಗೂ ಪರಿವರ್ತನೆಗೊಳ್ಳುವ ಹವಣಿಕೆಯಲ್ಲಿದ್ದಾರೆ.

“ಇತಿಹಾಸದುದ್ದಕ್ಕೂ ಮಾನವನ ಜೀವನವು ಬದಲಾವಣೆಗಳನ್ನು ಕಂಡಿದೆ. ಒಂದು ಕಾಲದಲ್ಲಿ ಮಾನವ ಆಹಾರಕ್ಕೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆಯುತ್ತಿದ್ದ. ಪ್ರಾಣಿಗಳನ್ನು ಪಳಗಿಸಿ ಪಶುಸಂಗೋಪನೆಯಿಂದ ಜೀವನ ಸಾಗಿಸಿ ಮುಂದೆ ವ್ಯವಸಾಯಗಾರನಾಗಿ ಇಂದು ಕೈಗಾರಿಕೋದ್ಯಮಿಯಾಗಿದ್ದಾನೆ. ಅಂದು ಎತ್ತಿನಗಾಡಿಯಲ್ಲಿ ಗಂಟೆಗೆ ೬ ಕಿ.ಮೀ. ವೇಗದಲ್ಲಿ ಚಲಿಸುತ್ತಿದ್ದ ಮಾನವ ಇಂದು ಜಂಬೋ ಜೆಟ್‌ನಲ್ಲಿ ಶರವೇಗದಲ್ಲಿ ಚಲಿಸುತ್ತಿದ್ದಾನೆ. ಬದಲಾವಣೆ ಪ್ರಕೃತಿ ನಿಯಮ ಹಾಗೂ ಸರ್ವವ್ಯಾಪಕವಾದ ಪ್ರಕ್ರಿಯೆ. “Change of it a perenament charecterstike to all object ಸಮಾಜದ ಜೀವನದಲ್ಲಿ ಈ ಹಿಂದೆ ಇದ್ದ ರೀತಿ-ನೀತಿಗಳನ್ನು ಬದಲಿಸುವ ಅಥವಾ ಮಾರ್ಪಡಿಸುವ ಹೊಸ ಶೋಭಾಚಾರ ಅಥವಾ ವಿಧಾನಕ್ಕೆ ಸಾಮಾಜಿಕ ಬದಲಾವಣೆ ಎಂದು ಹೇಳಬಹುದು.”[೧] ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಜನ ಜೀವನದಲ್ಲಿ ಅಥವಾ ಸಮಾಜದ ವ್ಯವಸ್ಥೆಯಲ್ಲಿ ಹಳೆಯ ರೀತಿ ನೀತಿಗಳನ್ನು ಬದಲಿಸುವ ಅಥವಾ ಮಾರ್ಪಡಿಸುವ ಹೊಸ ಬಗೆಯನ್ನು ಸಾಮಾಜಿಕ ಬದಲಾವಣೆ ಎಂದು ಹೇಳಬಹುದಾಗಿದೆ.

ಸಾಮಾಜಿಕ ಬದಲಾವಣೆಗೆ ನಾವು ಸಾಕಷ್ಟು ಕಾರಣಗಳನ್ನು ಕೊಡಬಹುದಾಗಿದೆ. ಸಾಂಸ್ಕೃತಿಕ ಅಂಶಗಳು, ಪರಿಸರ, ತಾಂತ್ರಿಕ, ಜೈವಿಕ, ಜನಸಂಖ್ಯಾ ಅಂಶಗಳು ಕಾರಣಗಳಿಂದಾಗಿ ಸಮಾಜದಲ್ಲಿ ಹಾಗೂ ಸಮಾಜದಲ್ಲಿನ ಸಮುದಾಯಗಳಲ್ಲಿ ಬದಲಾವಣೆಗಳಾಗುವುದು ಖಚಿತವಾಗಿದೆ. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಒಮ್ಮೆ ನಮ್ಮ ಜನಾಂಗದತ್ತ ದೃಷ್ಟಿ ಹಾಯಿಸಿದಾಗ ಸಾಕಷ್ಟು ವಿಷಯಗಳಲ್ಲಿ ಪರಿವರ್ತನೆಯಾಗಿರುವುದು ನಮಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗೋಚರಿಸುತ್ತದೆ. ಇಂತಹ ಸೂಕ್ಷ್ಮವಾದ ಅಂಶಗಳ ಬಗ್ಗೆ ಇಂದು ನಾವು ಅಧ್ಯಯನ ಮತ್ತು ಸಂಶೋಧನೆ ಮಾಡಬೇಕಾಗಿದೆ. ಇಂದು ಬೇಡ ಸಮುದಾಯದ ಸಾಮಾಜಿಕ ಪರಿಸ್ಥಿತಿಗಳನ್ನು ಪರಿಶೀಲಿಸಿ ನೋಡಿದಾಗ ಹತ್ತು ಹಲವಾರು ಸಂಗತಿಗಳು ನಮಗೆ ತಿಳಿಯುತ್ತವೆ. ಒಟ್ಟಾರೆ ಹೇಳುವುದಾದರೆ ಒಂದು ರೀತಿಯ ಪರಿವರ್ತನೆ ಅಥವಾ ಬದಲಾವಣೆ ಎಂದೇ ಹೇಳಬಹುದು ಇಂತಹ ವಿಷಯಗಳನ್ನು ಹೀಗೆ ಅವಲೋಕಿಸಲಾಗಿದೆ. ಮ್ಯಾಸಬ್ಯಾಡರು ಬದಲಾದ ಸಾಮಾಜಿಕ ಸಂದರ್ಭದಲ್ಲಿ ಪರಿವರ್ತನೆಯ ಹಾದಿಯಲ್ಲಿದ್ದಾರೆ. ಶಿಕ್ಷಣ ಮತ್ತು ಮತದಾನದ ಹಕ್ಕುಗಳು ಇವರನ್ನು ಬದಲಾವಣೆಯ ಕಡೆಗೆ ಕೊಂಡೊಯ್ಯುತ್ತಿವೆ. ಶಿಕ್ಷಣ ಪಡೆದ ಗ್ರಾಮೀಣ ಜನರ ನಗರ ಪ್ರದೇಶಗಳ ಸಂಪರ್ಕ ಪಡೆದುದಲ್ಲದೇ ಆಧುನಿಕ ವಿದ್ಯಮಾನಗಳು ಇಂದು ಹಳ್ಳಿಗಳಿಗೂ ವಿಸ್ತರಿಸಿ ಕುಟುಂಬ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುತ್ತಿದ್ದು ಆಧುನಿಕತೆಯ ಗಾಳಿ ಬೀಸುತ್ತಿದೆ. ಜೊತೆಗೆ ಮನೋರಂಜನೆಯ ಪರಿಕರಗಳಾದ ಪ್ರಚಾರ ಮಾಧ್ಯಮದ ರೇಡಿಯೋ, ಟಿ.ವಿ. ವಿಡಿಯೋ, ಸಿನಿಮಾ ಮುಂತಾದ ಮಾಧ್ಯಮಗಳು ಹಟ್ಟಿಗಳನ್ನು ಪ್ರವೇಶಿಸಿ ಇಲ್ಲಿನ ಜನರ ಜಾನಪದ ಕಲೆಗಳಾದ ಸೋಬಾನೆ ಪದ, ಕೋಲಾಟ, ಭಜನೆ, ಸಂಗೀತ, ಬಯಲಾಟಗಳ ವಿಧಾನಗಳು ಬದಲಾಗುತ್ತಿದ್ದು, ಜೀವನದ ರೀತಿ ನೀತಿಗಳ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡಿದೆ. ಹೀಗೆ ಇವರ ಜೀವನ ಪದ್ಧತಿ ಬದಲಾಗುತ್ತಿದ್ದು, ನಿಧಾನವಾಗಿ ನಾಗರಿಕತೆಗೆ ತಮ್ಮನ್ನೆ ತೆರೆದುಕೊಳ್ಳುವುದು ಕಂಡುಬರುತ್ತಿದೆ. ಶಿಕ್ಷಣದಿಂದ ಇವರು

ನಾಗರಿಕತೆಯ ಜನರ ಜೊತೆಗೆ ಬೆರೆಯುವುದರಿಂದ ತಮ್ಮ ಮೂಲ ಸಂಸ್ಕೃತಿಯಲ್ಲಿನ ಆಚಾರಗಳು ನಿಧಾನವಾಗಿ ತನ್ನ ಸತ್ವ ಕಳೆದುಕೊಳ್ಳುತ್ತಿದ್ದು, ಶಿಷ್ಟ ಸಂಸ್ಕೃತಿಯ ಪ್ರಭಾವ ದೃಢವಾಗುತ್ತಿದ್ದು ಅನೇಕ ಸಂಪ್ರದಾಯ ಆಚರಣೆ, ಪದ್ಧತಿಗಳು ಕಣ್ಮರೆಯಾಗುತ್ತಿವೆ.

ಮ್ಯಾಸಬೇಡರಲ್ಲಿ ೫–೬ ದಿನಗಳ ಕಾಲ ನಡೆಯುತ್ತಿದ್ದ ಮದುವೆಯ ಸಂಪ್ರದಾಯ ಪದ್ಧತಿಗಳನ್ನು ಇಂದು ಕಲ್ಯಾಣ ಮಂಟಪಗಳಲ್ಲಿ ಒಂದೆರಡು ದಿನಗಳಲ್ಲಿ ನಡೆಸಿ ಮುಗಿಸುವ ಮೂಲಕ ತಮ್ಮ ಸಂಸ್ಕೃತಿಗೆ ವಿರುದ್ದ ಹಾಗೂ ನಿಷೇಧಿತ ಬ್ರಾಹ್ಮಣ ಪೌರೋಹಿತ್ಯಕ್ಕೆ ಆಸ್ಪದ ನೀಡಿದ್ದು, ಆ ಮೂಲಕ ತಮ್ಮ ನಾಗರಿಕ ಜನರಂತೆ ತಮ್ಮ ಮದುವೆಗಳನ್ನು ನಡೆಸುವುದನ್ನು ಕಾಣಬಹುದು. ಹಾಗೇ ತಮ್ಮ ಹಿಂದಿನ ಕಾಲದ ಮದುವೆ ಪದ್ದತಿಯ ವಧುದಕ್ಷಿಣೆ, ಬೆಸಗೆ ಬುಟ್ಟಿಕೊಡುವುದು, ಸುಖ ಮಂಚಕೆಯಂತಹ ಪದ್ಧತಿಗಳನ್ನು ಬಿಟ್ಟು ವರದಕ್ಷಿಣೆಯನ್ನು ತೆಗೆದುಕೊಂಡು ಮದುವೆಯಾಗುವುದು ರೂಢಿಯಲ್ಲಿದೆ. ಹಾಗೆಯೇ ಮದುವೆಯ ಊಟಕ್ಕೆ ಸಂಬಂಧಿಸಿದಂತೆ ಮುಳ್ಳಕ್ಕಿ ಪಾಯಸ, ಸಜ್ಜೆ ಅಂಬಲಿ, ಹುರುಳಿಕಾಳಿನ ಸಾರನ್ನು ಮಾಡಿ ಬಡಿಸುತ್ತಿದ್ದ ಇವರು ಇಂದು ನಾಗರಿಕ ಜನರಂತೆ ಪಲಾವು, ಲಾಡು, ಪಲ್ಯ, ಮೊಸರನ್ನ, ಕೊಸಂಬರಿ, ಹಪ್ಪಳಗಳಂತಹ ಅಡುಗೆಯನ್ನು ಮಾಡಿ ಬಡಿಸುವುದು ಕಂಡುಬರುತ್ತದೆ.

ಮ್ಯಾಸಬೇಡರಲ್ಲಿದ್ದ ಸಾಮಾಜಿಕ ನ್ಯಾಯ ಪದ್ದತಿಯಾದ ಕಟ್ಟೆಮನೆಯು ಇಂದಿನ ಜನರಲ್ಲಿ ಮಹತ್ವ ಕಳೆದುಕೊಳ್ಳುತ್ತಿದೆ. ಈ ನ್ಯಾಯ ವ್ಯವಸ್ಥೆಯಲ್ಲಿನ ಭದ್ರತೆ ಕೂಡ ಇಂದು ಅಭದ್ರವಾಗುತ್ತಿದೆ. ಕಟ್ಟೆಮನೆಗಳಲ್ಲಿದ್ದ ಸ್ಥಾನಮಾನಗಳು ಕಾಲ ಕ್ರಮೇಣ ಕ್ಷೀಣಿಸುತ್ತಿದೆ. ಮೂಲದಲ್ಲಿ ಕಟ್ಟೆಮನೆಯ ನ್ಯಾಯ ತೀರ್ಮಾನದಲ್ಲಿ ಹಾಗೂ ಹೊರಗೆ ಅಧೀನರಾಗಿ ನಡೆದುಕೊಳ್ಳುತ್ತಿದ್ದ ಜನರು ದುಸ್ಸಾಹಸಕ್ಕೆ ಕೈ ಹಾಕಲು ಹೆದರುತ್ತಿದ್ದರು. ಕಾರಣ ಕುಲದಿಂದ ಬಹಿಷ್ಕಾರ ಹಾಕುವವರೆಗೂ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಆದರೆ ಇಂದು ಶಿಕ್ಷಣ ಮತ್ತು ನಗರೀಕರಣದ ಪ್ರಭಾವದಿಂದ ಜನರು ಕಟ್ಟೆಮನೆಯ ತೀರ್ಮಾನಗಳಿಗೆ ಸೊಪ್ಪು ಹಾಕದೆ ನಡೆದುಕೊಳ್ಳುತ್ತಿದ್ದು, ಕಟ್ಟೆಮನೆಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತಿವೆ. ಇಂದಿನ ಜನರು ತಮ್ಮ ತಂಟೆ ತಕರಾರುಗಳನ್ನು ಕೋರ್ಟ್ ಕಛೇರಿಯವರೆಗೂ ತೆಗೆದುಕೊಂಡು ಹೋಗುವ ಮೂಲಕ ಕುಲ ಪಂಚಾಯಿತಿಯ ಕಟ್ಟೆಮನೆಗಳು ತಮ್ಮ ಹಿಡಿತ ಕಳೆದುಕೊಂಡಿದ್ದು ಅವನತಿಯ ಅಂಚಿನಲ್ಲಿವೆ. ಉದಾಹರಣೆಗೆ ಗೋನೂರು ಮತ್ತು ನಾಯಕನಹಟ್ಟಿ ಕಟ್ಟೆಮನೆಗಳು ಇಂದು ನಿಷ್ಕ್ರಿಯೆಗೊಂಡಿರುವುದನ್ನು ನಾವು ಕಾಣಬಹುದು.

ಇಷ್ಟೆಲ್ಲ ಬದಲಾವಣೆಗೊಂಡಿದ್ದರೂ ಸಾಕಷ್ಟು ಜನ ಮ್ಯಾಸಬೇಡರು ಹಿಂದುಳಿದವರಾಗಿದ್ದು, ತಮ್ಮ ಮೂಲ ಸಂಸ್ಕೃತಿಯನ್ನು ಬಿಟ್ಟುಕೊಡದೆ ನಾಗರಿಕ ಪ್ರಪಂಚಕ್ಕೆ ತೆರೆದುಕೊಳ್ಳದೆ ತಮ್ಮ ಹಳೆಯ ಕಾಲದ ಜೀವನ ವೃತ್ತಿಯನ್ನು ಅನುಸರಿಸಿಕೊಂಡು ಬಡತನದಲ್ಲಿಯೇ ಬದುಕುತ್ತಿರುವುದನ್ನು ಕಾಣಬಹುದು. ಕಾರಣ ವಿದ್ಯಾಭ್ಯಾಸದ ಕೊರತೆ, ಸಾರಿಗೆ ಸಂಪರ್ಕದ ಕೊರತೆಯಿಂದ ನಗರ ಪ್ರದೇಶಗಳ ನಂಟಿನಿಂದ ಪ್ರತ್ಯೇಕವಾಗಿ ಉಳಿದಿರುವುದು. ಹಾಗೆಯೇ ಹೊರಗಿನ ಜನರನ್ನು

ಅನುಮಾನದ ದೃಷ್ಟಿಯಿಂದ ನೋಡುವ ಇವರು ಬೇರೆ ಸಂಸ್ಕೃತಿಯವರೊಂದಿಗೆ ಬೆರೆಯುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇವರು ಸುಶಿಕ್ಷಿತರಾಗುತ್ತಿದ್ದು. ನಾಗರಿಕತೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ನಾಗರಿಕತೆಯ ಮುಖ್ಯವಾಹಿನಿಯಲ್ಲಿ ಸೇರಿ ತಮ್ಮ ಮೌಢ್ಯಗಳನ್ನು ತೊರೆದು ಸುಶಿಕ್ಷಿತರಾಗಿ ನಾಗರಿಕರಂತೆ ಬದುಕುತ್ತಿರುವುದು ಕಂಡುಬರುತ್ತಿದೆ.

ಇಷ್ಟೆಲ್ಲಾ ಬದಲಾವಣೆಯ ಗಾಳಿ ಬೀಸುತ್ತಿದ್ದು, ಕೆಲವೇ ಕೆಲವು ಜನರು ಮಾತ್ರ ನಾಗರಿಕ ಜೀವನ ನಡೆಸುತ್ತಿದ್ದಾರೆ. ಬಹುತೇಕರು ಬಡತನದಿಂದ ಚೇತರಿಸಿಕೊಂಡಿದ್ದು ಉಳಿದಂತೆ ಮುಕ್ಕಾಲು ಪಾಲು ಜನರ ಸ್ಥಿತಿ ಮೂರಕ್ಕಿಳಿಯದೇ ಆರಕ್ಕೇರದೆ ಬಡತನದಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ಹೊಲಗಳಲ್ಲಿ ಕೂಲಿ ಮಾಡುತ್ತ ಕೃಷಿಯನ್ನು ಅವಲಂಬಿಸಿ ಕೆಲವು ಜೀವನ ನಡೆಸುತ್ತಿದ್ದಾರೆ. ಮತ್ತೆ ಕೆಲವರು ಕುರಿ ಸಾಕಾಣಿಕೆ, ಪಶು ಸಂಗೋಪನೆ ವೃತ್ತಿಯನ್ನು ಕೈಗೊಂಡಿದ್ದಾರೆ. ಉಳಿದಂತೆ ಕೆಲವರು ಕಾಡಿನಲ್ಲಿರುವ ಕಟ್ಟಿಗೆ ಕಡಿದು ಸೀಳಿ ನಗರ ಪ್ರದೇಶಗಳಿಗೆ ಸಾಗಿಸಿ ಮಾರಾಟ ಮಾಡಿ ಜೀವನ ನಡೆಸುವುದನ್ನು ಕಾಣಬಹುದು. ಸರ್ಕಾರದಿಂದ ಇವರ ಹೆಸರಿನಲ್ಲಿ ಮಂಜೂರಾದ ಯಾವುದೇ ಯೋಜನೆಗಳು ನೇರವಾಗಿ ಇವರಿಗೆ ಸಿಗದೆ ಮಧ್ಯವರ್ತಿಗಳ ಪಾಲಾಗುತ್ತಿದೆ. ಇವರಿಗೆ ಯಾವುದೇ ರೀತಿಯ ಪ್ರಯೋಜನ ಮತ್ತು ಫಲಗಳು ಸಿಗುತ್ತಿಲ್ಲ. ಬುಡಕಟ್ಟು ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿದ್ದು, ಅವುಗಳನ್ನು ಕಾರ್ಯ ರೂಪದಲ್ಲಿ ತರಲು ಯಶಸ್ವಿಯಾಗಿರುವುದು ಹಾಗೆಯೇ ರಾಜಕೀಯದ ಒತ್ತಡದಿಂದ ಅನುದಾನಗಳು ತಲುಪಬೇಕಾದವರಿಗೆ ತಲುಪದೆ ಅನ್ಯರ ಪಾಲಾಗುತ್ತಿದ್ದು. ಈ ಎಲ್ಲಾ ಲೋಪದೋಷಗಳನ್ನು ಮೇಲಾಧಿಕಾರಿಗಳಾದವರು ಸರಿಪಡಿಸಿ ಸರಿಯಾದ ಫಲಾನುಭವಿಗಳನ್ನು ಗುರುತಿಸಿ ಅವರ ಬೇಡಿಕೆ ಹಾಗೂ ಸಮಸ್ಯೆಗಳನ್ನು ಕೇಳಿ ತಿಳಿದುಕೊಂಡು ಯೋಜನೆಯನ್ನು ಅನುಷ್ಠಾನಕ್ಕೆ ತಂದರೆ ಈ ಯೋಜನೆಗಳು ಯಶಸ್ವಿಯಾಗುತ್ತವೆ.

ಮ್ಯಾಸಬೇಡರು ಇಂದು ಪ್ರಜಾಪ್ರಭುತ್ವದಲ್ಲಿ ತಮ್ಮನ್ನು ಅಧುನಿಕ ಜಗತ್ತಿಗೆ ತೆರೆದುಕೊಂಡು, ನಾಗರಿಕ ತೆಕ್ಕೆಯಲ್ಲಿ ಸೇರಿ ಬುಡಕಟ್ಟು ಸಂಸ್ಕೃತಿಯಿಂದ ನಿಧಾನವಾಗಿ ಹೊರಬಂದು ಮುಖ್ಯವಾಹಿನಿಯಲ್ಲಿ ಸೇರಿ ಶಿಕ್ಷಣ ಮತ್ತು ಮತದಾನದ ಹಕ್ಕು ಪಡೆದ ಈ ಜನತೆ ನಿಧಾನವಾಗಿ ತಮ್ಮ ರಾಜಕೀಯದಲ್ಲಿ ತೊಡಗಿಸಿಕೊಂಡು ತಮಗೆ ಸೂಕ್ತವಾದ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ತಮ್ಮ ಸಮಸ್ಯೆಗಳನ್ನು ಅವರ ಮುಖಾಂತರ ಸರಕಾರಕ್ಕೆ ತಿಳಿಸಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಮೂಲಕ ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಹೊಂದಿ ಬದುಕುತ್ತಿದ್ದಾರೆ. ಮ್ಯಾಸಬೇಡರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲೂಕಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ.

ವಸತಿ ವ್ಯವಸ್ಥೆ:

ಕೃಷ್ಣಮೂರ್ತಿ ಹನೂರವರು ಉಲ್ಲೇಖಿಸಿರುವಂತೆ ಬೇಡದಲ್ಲಿ ಎರಡು ಮುಖ್ಯವಾದ ಪಂಗಡಗಳಿವೆ. ೧. ಊರ ನಾಯಕ ೨.ಮ್ಯಾಸ ನಾಯಕರು. ನಂತರ ಅವರೆ ಹೇಳಿರುವಂತೆ ಊರ ನಾಯಕರು

ಈಗಾಗಲೇ ಗ್ರಾಮಾಂತರ ಪ್ರದೇಶ, ನಗರ ಪಟ್ಟಣಗಳನ್ನು ಸೇರಿ ತಕ್ಕಷ್ಟು ವಿದ್ಯೆ, ಉದ್ಯೋಗ ಗಳಿಸಿ ನಾಗರಿಕರಾಗಿದ್ದಾರೆ. ಮ್ಯಾಸ ಬೇಡರು ಇನ್ನೂ ಕೊಂಚ ಮಟ್ಟಿಗೆ ಪ್ರತ್ಯೇಕವಾಗಿಯೇ ಉಳಿದಿದ್ದಾರೆ. ಊರಾಚೆ ಹಟ್ಟಿ ಕಟ್ಟಿಕೊಂಡು ವಾಸಿಸುವ ದೃಶ್ಯ ಇಂದಿಗೂ ಜಗಳೂರು, ಮೊಳಕಾಲ್ಮೂರು, ಚಳ್ಳಕೆರೆ ತಾಲ್ಲೂಕುಗಳಲ್ಲಿ ಕಾಣಬಹುದು. ಆದರೆ ಇವತ್ತು ಇಂಥಹ ದೃಶ್ಯಗಳನ್ನು ನೋಡುವುದು ಸಾಕಷ್ಟು ಸಾಧ್ಯವಾಗಿದೆ. ಹಿಂದೆ ಬೇಡರು ತಮ್ಮ ಮನೆಗಳನ್ನು ಅಂಚೆಹುಲ್ಲು, ಲಕ್ಕಿಬರಲುಗಳಿಂದ ನಿರ್ಮಿಸಿಕೊಳ್ಳುತ್ತಿದ್ದರು. ಹಾಗೆಯೇ ತಮ್ಮ ಹಟ್ಟಿಗಳಲ್ಲಿ ಇತರರ ಪ್ರವೇಶವಾಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ಕ್ರಮೇಣ ಬದಲಾವಣೆಯ ಅಲೆಗೆ ಸಿಲುಕಿ ಈ ವ್ಯವಸ್ಥೆ ವ್ಯತ್ಯಾಸವಾಗಿರುವುದು ನೋಡಬಹುದು. ಕೇವಲ ವಸತಿ ಮನೆಗಳನ್ನು ನೋಡಿಯೇ ಇವರು ಬೇಡರು ಎಂದು ಗುರುತಿಸುವುದು ಕಷ್ಟಸಾಧ್ಯ. ಹಿಂದೆ ಇವರು ತಮಗೆ ಬೇಕಾದ ವಿನ್ಯಾಸದಲ್ಲಿ ಮನೆಗಳನ್ನು ಅಂಚೆಹುಲ್ಲಿನಿಂದ ನಿರ್ಮಿಸಿಕೊಳ್ಳುತ್ತಿದ್ದರು. ಈಗ ಇವುಗಳ ಬದಲಾಗಿ ಸಿಮೆಂಟು, ಇಟ್ಟಿಗೆ ವಿನ್ಯಾಸಗಳಲ್ಲಿ ತಮ್ಮ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಆ ಮೂಲಕವಾಗಿ ನಾಗರಿಕ ಬದುಕಿನೆಡೆಗೆ ಮುಖ ಮಾಡಿದ್ದಾರೆ. ಹಿಂದೆ ಮ್ಯಾಸಬೇಡ ಸಮುದಾಯದಲ್ಲಿ ವಸತಿಯ ನಿರ್ವಹಣೆ ಮತ್ತು ರಚನೆಯ ಹಂತದಲ್ಲಿ ತನ್ನದೆ ಆದ ಪಾತ್ರವನ್ನು ನಿರ್ವಹಿಸಿಕೊಂಡು ಬಂದಿದ್ದಾರೆ.

ದೈವದ ಮನೆ:

ಬೇಡರ ಒಳಾಡಳಿತ ವ್ಯವಸ್ಥೆಯಲ್ಲಿ ಸಮುದಾಯದ ಜನರು ಕೋಳಿ ತಿಂದರೆ, ಮದ್ಯಪಾನ ಮಾಡಿದರೆ, ಕೊನೆಗೆ ಈಚಲು ಹಣ್ಣು ತಿಂದರೂ ದಂಡ ಹಾಕುವ ಪದ್ಧತಿ ಇತ್ತು. ಹಿಂದೆ ಬೇಡರ ಹಟ್ಟಿಗಳಲ್ಲಿ ಇತರರ ಪ್ರವೇಶ ನಿಷೇಧವಾಗಿತ್ತು. ಇಂದಿಗೂ ಚಿತ್ರದುರ್ಗ ಹಾಗೂ ಚಳ್ಳಕೆರೆ ಸುತ್ತಲಿನ ಕೆಲವು ಕಡೆ ಇಂತಹ ಪರಿಸ್ಥಿತಿ ಇದೆ. ಒಂದು ಕಾಲದಲ್ಲಿ ಮನೆ ಅಂಗಳದಲ್ಲಿ ಕೋಳಿ ಕಂಡರೆ ಸೀಳಿದೆಳುತ್ತಿದ್ದರು. ಆ ದೇವರಿಗೆ ಕೋಳಿ ಮಾಂಸ ತಿಂದರೆ ಆಗುತ್ತಿರಲಿಲ್ಲ. ಆದರೆ ಕಾಲ ಕಳೆದಂತೆ ದಿನಗಳು ಉರುಳಿದಂತೆ ಇತ್ತೀಚಿನ ದಿನಗಳು ಕೋಳಿಯನ್ನು ಮನೆಯಲ್ಲಿ ತಿನ್ನದ್ದಿದ್ದರೂ ಆ ಸಮುದಾಯದ ನವ ಪೀಳಿಗೆಯು ಪ್ರತ್ಯೇಕವಾದ ಸ್ಥಳ ಹಾಗೂ ಹೋಟೆಲುಗಳಲ್ಲಿ ಕೋಳಿ ಮಾಂಸವನ್ನು ತಿನ್ನುತ್ತಾರೆ. ಇನ್ನೂ ಕೆಲವರು ಕೋಳಿಯನ್ನು ಒಳಗಡೆ ಬಿಡದೆ, ಕೋಳಿಯನ್ನು ಈಗಲೂ ಸಹ ತಿನ್ನದೇ ಇರುವವರು ಇದ್ದಾರೆ. ಪ್ರಸ್ತುತ ಸಮಾಜದಲ್ಲಿರುವ ಶಿಕ್ಷಣ, ನಗರೀಕರಣ ಆಧುನೀಕರಣ ಪ್ರಭಾವಗಳಿಂದ ಮತ್ತು ವ್ಯವಸ್ಥೆಯಲ್ಲಿ ಬದಲಾವಣೆ ಆಗಿರುವುದನ್ನು ಗಮನಿಸಬಹುದಾಗಿದೆ. ಮ್ಯಾಸಬೇಡ ಸಮುದಾಯದ ದೈವ ಕಾರ್ಯಗಳಲ್ಲಿ ಮಹಿಳೆಯರು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾರೆ. ಇವರ ಕುಲ ದೈವಗಳ ಪೂಜಾ ಹಾಗೂ ವಿಶೇಷ ಆಚರಣೆಗಳಲ್ಲಿ ಪ್ರಮುಖವಾದ ಮೀಸಲನ್ನು ತಯಾರಿಸುವ ಕಾರ್ಯವು ಮಹಿಳೆಯರದ್ದೆ ಆಗಿರುತ್ತದೆ.

ಉಡಿಗೆ ತೊಡಿಗೆ:

ಬುಡಕಟ್ಟು ಸಮುದಾಯವಾದ ಮ್ಯಾಸಬೇಡರು ಮೂಲದಲ್ಲಿ ಪಶುಸಂಗೋಪನೆ ಮಾಡಿಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸುತ್ತಾ ಕಾಲ ಕಳೆಯುವ ಸಂದರ್ಭದಲ್ಲಿ, ಇವರು

ಕಾಡಿನಲ್ಲಿ ಸಿಕ್ಕುವ ಮರದ ತೊಗಟೆ ಮತ್ತು ತಾವುಗಳು ಭೇಟೆಯಾಡಿ ಕೊಂದ ಪ್ರಾಣಿಗಳ ದೇಹದ ಚರ್ಮವನ್ನು ಬಳಸಿ ತಮ್ಮ ದೇಹವನ್ನು ಮಳೆ ಗಾಳಿ ಬಿಸಿಲಿನಿಂದ ಕಾಪಾಡಿಕೊಳ್ಳುತ್ತಿದ್ದರು. ನಂತರ ದಿನಗಳಲ್ಲಿ ಬಟ್ಟೆ ಉಡುವುದನ್ನು ಕಲಿತುಕೊಂಡರು. ಇವರ ಉಡುಗೆ ತೊಡುಗೆ ಕುರಿತಂತೆ ಅನಂತ ಕೃಷ್ಣ ಅಯ್ಯರ್ ಅವರು ಈ ರೀತಿಯಾಗಿ ವಿವರಿಸುತ್ತಾರೆ. "The males weara lain cloth and terban, very ofter they caver their bodias wih a course blonked, Myasa Beda women wear a sari witch covers their whale badies they do and toe rings"[೨] ಅರಣ್ಯ ವಾಸಿಗಳಾದ ಮ್ಯಾಸಬೇಡರು ಆರ್ಥಿಕವಾಗಿ ತೀರ ಹಿಂದುಳಿದ ಸಮುದಾಯವಾಗಿದ್ದು, ಇವರ ತೊಡುವ ಉಡುಪು ತೀರ ಸರಳವಾಗಿರುತ್ತಿತ್ತು. ಸಾಮಾನ್ಯವಾಗಿ ಇಂದು ಕೆಲವು ಹಟ್ಟಿಗಳಲ್ಲಿ ಅರೆನಗ್ನರಾಗಿ ಇರುವ ವಯಸ್ಸಾದ ಜನರನ್ನು ನಾವು ಕಾಣಬಹುದು. ಹಿಂದಿನ ಕಾಲದ ಮ್ಯಾಸಬೇಡರ ಗಂಡಸರು ಚಿಲ್ಲಣ(ಸಲ್ಲಡ) ಮತ್ತು ತಲೆಗೆ ರುಮಾಲು(ಪೇಟ) ಧರಿಸಿ ಬರಿ ಮೈಯಲ್ಲಿರುತ್ತಿದ್ದರು. ಮಹಿಳೆಯರು ಮಾತ್ರ ಸೀರೆಯನ್ನು ಧರಿಸಿ ರವಿಕೆಯನ್ನು ಧರಿಸದೆ ಸೀರೆಯನ್ನೆ ಮೈತುಂಬ ಹೊದ್ದುಕೊಳ್ಳುವುದನ್ನು ನಾವು ಇಂದಿಗೂ ಕೆಲವು ಹಟ್ಟಿಗಳಲ್ಲಿ ಕಾಣಬಹುದು. ಗಂಡಸರು ತಾವು ಚಲ್ಲಣ ಮತ್ತು ಪೇಟಕ್ಕೆ ಧರಿಸುತ್ತಿದ್ದ ಬಟ್ಟೆ ತೀರ ಸಾಧಾರಣ ಮಟ್ಟದಾಗಿದ್ದು, ಹತ್ತಿಯಿಂದ ನೇಯ್ದ ಬಟ್ಟೆಯನ್ನು ಮಾರುಕಟ್ಟೆಯಿಂದ ತಂದು ತಮ್ಮ ಅಳತೆಗೆ ತಕ್ಕಂತೆ ತಾವೇ ಕೈ ಹೊಲಿಗೆಯಿಂದ ತಯಾರಿಸಿಕೊಳ್ಳುತ್ತಾರೆ.

ಹಿಂದಿನ ಕಾಲದ ಮ್ಯಾಸಬೇಡ ಹೆಂಗಸರು ಗಂಡಸರು ಎಂಬ ಭೇದ-ಭಾವವಿಲ್ಲದೆ ಕಿವಿಗಳನ್ನು ಚುಚ್ಚಿಸಿಕೊಂಡು ಹಿತ್ತಾಳೆಯ ಮುರುವುಗಳನ್ನು ಧರಿಸಿರುವುದನ್ನು ಕಾಣಬಹುದು. ಹಾಗೆಯೇ ಇವರು ಉದ್ದದ ತಲೆ ಕೂದಲುಗಳನ್ನು ಬಿಟ್ಟಿರುತ್ತಾರೆ. ವಯಸ್ಸಾದ ಮುದುಕಿಯರು ಕಾಲಿಗೆ ಬೆಳ್ಳಿಯ ಕಡಗಗಳನ್ನು ಧರಿಸುತ್ತಾರೆ. ಹಾಗೆಯೆ ಹೆಂಗಸರು ಕಾಲುಂಗುರ ಧರಿಸುತ್ತಿರಲಿಲ್ಲ. ಹೆಂಗಸರು ರವಿಕೆ ತೊಡದಿರುವುದರ ಕುರಿತು ವಕ್ತೃ ಈ ರೀತಿಯಾಗಿ ತಿಳಿಸುತ್ತಾರೆ. "ರವಿಕೆ ತೊಟ್ಟರೆ ನಮಗೆ ದೇವರು ಒಳ್ಳೆಯದು ಮಾಡುವುದಿಲ್ಲ ಎಂಬ ನಂಬಿಕೆ. ರವಿಕೆ ತೊಡುವುದರಿಂದ ಮುಂದೆ ಮನೇಲಿ ಹುಟ್ಟಲಿರುವ ಮಕ್ಕಳಿಗೆ ಮೊಲೆಯಲ್ಲಿ ಹಾಲು ಬತ್ತಿ ಹೋಗಿ ಹುಟ್ಟಿದ ಮಕ್ಕಳಿಗೆ ಉಣಿಸಲಿಕ್ಕೆ ಹಾಲು ಸಾಕಾಗುವುದಿಲ್ಲ ಎಂಬುದಾಗಿ ನಂಬಿದ್ದರು. ದೇವರ ಪೂಜಾರಿಯ ಹೆಂಡತಿಯರು ರವಿಕೆ ತೊಡುತ್ತಿರಲಿಲ್ಲ. ಇವರು ದೇವರ ವಾರದ ದಿನದಂದು ಮಡಿವಂತಿಕೆಯಿಂದ ಪೂಜಾರಿಗೆ ದೇವತಾ ಕಾರ್ಯದಲ್ಲಿ ಸಹಕರಿಸುತ್ತಿದ್ದರು. ಇವರನ್ನು 'ಪೂಜಾರಿ ಅಜ್ಜ' ಎಂದು ಕರೆಯಲಾಗುತ್ತಿತ್ತು. ಮದುವೆಗೆ ಹೆಣ್ಣು ನಿಶ್ಚಯ ಮಾಡುವ ಸಂದರ್ಭದಲ್ಲಿ ಮದುವೆಯ ಹೆಣ್ಣು ಕುಲದ ಹಿರಿಯರ ಮುಂದೆ ರವಿಕೆ ತೊಡದೆ ಸೀರೆಯನ್ನು ತೊಟ್ಟುಕೊಂಡು ಅವರ ಮುಂದೆ ಮೂರು ಹೆಜ್ಜೆ ದೇಕುವ(ಕುಳಿತಂತೆ ನಡೆಯುವುದು) ಪದ್ದತಿಯನ್ನು ನಡೆಸುತ್ತಿದ್ದರು ಎಂದು ತಿಳಿಸುತ್ತಾರೆ. ಮ್ಯಾಸಬೇಡರು ಕೆಲವು ಹಟ್ಟಿಗಳಲ್ಲಿ ವಯಸ್ಸಾದ ಮುದುಕಿಯರು ರವಿಕೆ ತೊಡದೆ ಅರೆನಗ್ನರಾಗಿರುವುದನ್ನು ಕಾಣಬಹುದು.

ಮ್ಯಾಸಬೇಡರಲ್ಲಿ ಹೆಣ್ಣು ಗಂಡು ಎಂಬ ಭೇಧವಿಲ್ಲದೆ ಇವರು ಮೈತುಂಬ ಹಚ್ಚೆಗಳನ್ನು ಹಾಕಿಸಿಕೊಳ್ಳುತ್ತಿದ್ದರು. ಗಂಡಸರು ತಮಗೆ ಪ್ರೀತಿ ಪಾತ್ರರಾದ ಅಪ್ಪ, ಅಮ್ಮ, ಅಕ್ಕ, ಅಣ್ಣ, ತಂಗಿ, ತಮ್ಮ, ದೇವರ ಹೆಸರುಗಳನ್ನು ತಮ್ಮ ಮೈಮೇಲೆ ಹಾಕಿಸಿಕೊಳ್ಳುತ್ತಾರೆ. ಹಳೆಯ ತಲೆಮಾರಿನ ಜನ ತಮ್ಮ ದೇಹದ ಮೇಲೆ ದೇವರ ಚಿತ್ರಗಳು, ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ ಮತ್ತು ರಂಗೋಲಿಯಂತಹ ಚಿತ್ರಗಳನ್ನು ತಮ್ಮ ಕೈಗಳ ಮೇಲೆ ಹಾಕಿಸಿಕೊಳ್ಳುತ್ತಿದ್ದರು. ಅಲ್ಲದೇ ಮುಖ ಭಾಗದ ಹಣೆಯ ಮೇಲೆ, ಕೆನ್ನೆಯ ಮೇಲೆ ಹಾಗೂ ಗಲ್ಲದ ಮೇಲೆಲ್ಲ ಹೆಂಗಸರು ಹಚ್ಚೆ ಹಾಕಿಸಿಕೊಂಡಿರುವುದನ್ನು ನಾವು ಕಾಣಬಹುದು. ಹಚ್ಚೆಯನ್ನು ಕುರಿತಂತೆ ರಂಗಾಚಾರಿ ಅವರು ಈ ರೀತಿಯಾಗಿ ವಿವರಿಸುತ್ತಾರೆ. "urv and myasa women are tattooed on the face, and on the upper extremities with elabarate designs of cars, scorpions, centi pedas, sitas jade,(plaited hair) hanuman, parrats, etc. men are branded by the priest of a hanuman shreene on the showdery with the emblem of the chank shell (Terbinell arapa) and chakram(wheel of the law) the bilief that it erables them to go to swarga(heaven)"[೩]

ಹೀಗೆ ಹಚ್ಚೆ ಹಾಕಿಸಿಕೊಳ್ಳುವುದರಿಂದ ಸತ್ತ ಮೇಲೆ ಸ್ವರ್ಗ ಪ್ರಾಪ್ತವಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಈ ರೀತಿ ಮ್ಯಾಸಬೇಡರ ಉಡುಗೆ ತೊಡುಗೆ ಕಂಡುಬರುತ್ತದೆ. ಪ್ರಸ್ತುತ ಮ್ಯಾಸಬೇಡರ ಬದುಕಿನ ಕ್ರಮ ಬದಲಾಗಿದ್ದು, ಆಧುನೀಕರಣದ ಗಾಳಿ ಬೀಸುತ್ತಿದ್ದು. ಇವರು ನಾಗರಿಕತೆಗೆ ತಮ್ಮನ್ನು ನಿಧಾನವಾಗಿ ತೆರೆದುಕೊಳ್ಳುತ್ತಿದ್ದಾರೆ. ಅಧುನಿಕ ಜನರಂತೆ ಮೈತುಂಬ ಬಟ್ಟೆಹಾಕುವುದನ್ನು ಕಲಿತುಕೊಂಡಿದ್ದಾರೆ. ಬೇಡರಲ್ಲಿ ಹಿಂದೆ ಒಂದು ಚಲ್ಲಾಣ ಹೆಗಲ ಮೇಲೆ ಕರಿಯ ಕಂಬಳಿ, ತಲೆಗೆ ರೂಮಾಲು ಉಡುಗೆ ನೋಡಿ ಇವರು ಬೇಡರು ಎಂದು ಗುರುತಿಸುವ ಕಾಲ ಅದಾಗಿತ್ತು. ಇವರಲ್ಲಿ ಆಗಿರುವ ಬದಲಾಣೆಗಳ ಜೊತೆಗೆ ಸಾಕಷ್ಟು ಸ್ತ್ರೀಯರು ಸಾಧಾರಣ ರೀತಿ ಉಡುಪು ಕಿವಿಗೆ ಹಿತ್ತಾಳಿ ಓಲೆ, ಕೈಗೆ ಗಾಜಿನ ಬಳೆ ಇತ್ತೀಚಿನ ದಿನಗಳಲ್ಲಿ ದಿನ ಕಳೆದಂತೆ ತನ್ನ ಸಂಪ್ರದಾಯಿಕ ಆಚರಣೆಗಳು ಸಡಿಲವಾಗುತ್ತಿವೆ. ಇತ್ತೀಚಿನ ದಿನಮಾನಗಳಲ್ಲಿ ಪಂಚೆ, ಟವಲು, ಪ್ಯಾಂಟ್ ಶರ್ಟ್, ಮದುವೆಯಲ್ಲಿ ಸೂಟುಗಳನ್ನು ಬಳಸುತ್ತಿದ್ದಾರೆ. ಮಹಿಳೆಯರು ತಮ್ಮ ದೈನಂದಿನ ಬದುಕನ್ನು ನಡೆಸುತ್ತಾ ತಮ್ಮ ಉಡುಪು ಸೀರೆಯನ್ನು ಉಡುತ್ತಾ ಹದಿಹರೆಯದವರು ಚೂಡಿದಾರ, ಲಂಗ ಬ್ಲೌಸ್, ಲಂಗಾದಾವಣಿ, ಸೀರೆ ಪ್ಯಾಂಟ್ ಶರ್ಟ್ ಇತ್ಯಾದಿಯಾಗಿ ಬದಲಾಗುತ್ತಿದ್ದಾರೆ. ಹಳೆಯ ಉಡುಪುಗಳು ಮಾಯವಾಗಿ ನವೀನ ಮಾದರಿಯನ್ನು ಜಾರಿ ತಂದಿದ್ದಾನೆ.

ಊಟೋಪಚಾರ:

ಮ್ಯಾಸಬೇಡರು ಮೂಲತಃ ಮಾಂಸಹಾರಿಗಳಾಗಿದ್ದು, ಮಾಂಸ ಮತ್ತು ಸಸ್ಯಹಾರಗಳೆರಡನ್ನು ಬಳಸುವುದನ್ನು ಕಾಣಬಹುದು. ಮ್ಯಾಸಬೇಡರು ಮೂಲತಃ ಕಾಡುವಾಸಿಗಳಾಗಿದ್ದು, ಆದಿವಾಸಿ ಜೀವನ ನಡೆಸುವ ಇವರು ಕಾಡಿನಲ್ಲಿ ಸಿಕ್ಕುವ ಗಡ್ಡೆ ಗೆಣಸು, ಸೊಪ್ಪುಗಳನ್ನು ತಮ್ಮ ದಿನನಿತ್ಯದ

ಆಹಾರವನ್ನಾಗಿ ಬಳಸುತ್ತಾರೆ. ಕಾಡಿನಲ್ಲಿರುವ ಕೆಲವು ಪ್ರಾಣಿಗಳನ್ನು ಭೇಟೆಯಾಡಿ ಅವುಗಳ ಮಾಂಸವನ್ನು ಆಹಾರಕ್ಕಾಗಿ ಬಳಸುತ್ತಾರೆ. ಚಿತ್ರದುರ್ಗ ಸೀಮೆಯ ಮ್ಯಾಸಬೇಡರು ಸಂಪೂರ್ಣ ಮಾಂಸಹಾರಿಗಳಾಗಿರದೆ, ಇವರು ಹೆಚ್ಚಾಗಿ ಸಸ್ಯಹಾರವನ್ನೇ ತಮ್ಮ ದಿನನಿತ್ಯ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಕಾರಣ ಇವರು ತಾವು ಪೂಜಿಸುವ ಪೆಟ್ಟಿಗೆ ದೇವರಗಳು ಶೈವ ಮತ್ತು ವಿಷ್ಣುಗಣಗಳ ದೈವಗಳಾಗಿರುವುದರಿಂದ ವೈಷ್ಣವ ಪಂಥದ ರೀತಿ ರಿವಾಜುಗಳನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಇವರು ಮುಖ್ಯವಾಗಿ ರಾಗಿ, ಜೋಳ, ಸಜ್ಜೆ, ಭತ್ತ, ಹುರುಳಿಕಾಳು, ಹಲಸಂಧೆ, ತೊಗರಿಕಾಳುಗಳನ್ನು ತಮ್ಮ ದಿನದ ಆಹಾರವನ್ನಾಗಿ ಬಳಸುತ್ತಾರೆ.

ಅನ್ನದೂಟವನ್ನು ಕೆಲವು ವಿಶೇಷ ಸಂದರ್ಭದಲ್ಲಿ ಹಬ್ಬ-ಹರಿದಿನಗಳಲ್ಲಿ ಮಾತ್ರ ಬಳಸುತ್ತಾರೆ. ಹಿಂದಿನ ಕಾಲದಲ್ಲಿ ಹಬ್ಬ ಹರಿದಿನಗಳಲ್ಲಿ ಮುಳ್ಳು ಅಕ್ಕಿಯಿಂದ ಪಾಯಸ ಮತ್ತು ಸಜ್ಜೆಯಿಂದ ಅಂಬಲಿ(ಅನ್ನ) ಯನ್ನು ತಯಾರಿಸಿ ಹುರುಳಿ ಸಾರನ್ನು ಮಾಡಿ ಬಡಿಸುತ್ತಿದ್ದರು. ಇದು ಅವರಿಗೆ ವಿಶೇಷ ಮತು ಹಬ್ಬದ ಅಡುಗೆಯಾಗಿತ್ತು. ಇವರ ಆಹಾರ ಪದ್ದತಿ ಕುರಿತಂತೆ. "They are meat eaters and eat the flesh of cow and buffaloes but avpid fowls whitch they never touch, avpid all kinds of drinks cholam (millet) is their cheief arkicle of food'"[೪] ಮಾಂಸಹಾರಿಗಳಾದ ಅವರು ಕೋಳಿಯನ್ನು ತಿನ್ನುವುದಿಲ್ಲ. ಹಾಗಯೇ ಈಚಲು ಮರದಿಂದ ತಯಾರಿಸಿದ ಹೆಂಡ ಹಾಗೂ ಈಚಲು ಚಾಪೆಯನ್ನು ಬಳಸುವುದಿಲ್ಲ. ಮ್ಯಾಸಬೇಡರು ಕಾಡಿನಲ್ಲಿ ಸಿಕ್ಕುವ ಪ್ರಾಣಿಗಳನ್ನು ಬೇಟೆಯಾಡಿ ಅವುಗಳನ್ನು ತಮ್ಮ ಆಹಾರಕ್ಕಾಗಿ ಬಳಸುತ್ತಾರೆ. ಮೊಲ, ಜಿಂಕೆಗಳನ್ನು ಬೇಟೆಯಾಡಿ ತಂದು ಅವುಗಳ ಮಾಂಸವನ್ನು ಹಟ್ಟಿಯ ಎಲ್ಲರೂ ಸಮಾನವಾಗಿ ಹಂಚಿಕೊಳ್ಳುತ್ತಾರೆ. ಕಾಡಿನಲ್ಲಿ ಸಿಕ್ಕುವ ಸೊಪ್ಪುಗಳನ್ನು ಹುಡುಕಿ ತಂದು ಅಡುಗೆ ಮಾಡಿ ತಿನ್ನುತ್ತಾರೆ. ಇವರು ಬಳಸುವ ಸೊಪ್ಪುಗಳೆಂದರೆ ಬಡ್ಡಿ ಸೊಪ್ಪು, ಮೀನಾ ಗಾಂಧಿ ಸೊಪ್ಪು, ಜಣಿಬೆ ಸೊಪ್ಪು, ಮುಂಗರೊಳ್ಳ ಸೊಪ್ಪು, ಬೆದಕಿ ಸೊಪ್ಪು, ಹಾಲೇ ಸೊಪ್ಪು, ದಂಟು ಸೊಪ್ಪು, ಸೊಪ್ಪುಗಳನ್ನು ದಿನನಿತ್ಯದ ಆಹಾರದಲ್ಲಿ ಬಳಸುತ್ತಾರೆ. ಹಾಗೆಯೇ ಕಾಡಿನಲ್ಲಿ ಸಿಕ್ಕುವ ಹೂವಿನ ಹಣ್ಣು, ಆಲದ ಹಣ್ಣು, ಕಾರೇ ಹಣ್ಣು, ಚಳ್ಳೆ ಹಣ್ಣು, ನೇರಳೆ ಹಣ್ಣು, ಬೆಳವಿನ ಹಣ್ಣು, ಕಾಡು ಸೀತಾಫಲ, ಬಾರೇ ಹಣ್ಣು, ಬಿಲ್ಪಪತ್ರೆ ಹಣ್ಣು, ರಾಗಿಮರದ ಹಣ್ಣು ಇನ್ನೂ ಮುಂತಾದ ಹಣ್ಣುಗಳನ್ನು ಬಳಸುತ್ತಾರೆ.

ಮಾಂಸಹಾರವಾಗಿ ಕೆಲವು ಪ್ರಾಣಿ ಪಕ್ಷಿಗಳ ಮಾಂಸವನ್ನು ಬಳಸುತ್ತಿದ್ದರು. ಅವುಗಳೆಂದರೆ ಮೊಲ, ಜಿಂಕೆ, ಕುರಿ, ಮೇಕೆ, ಬಾತುಕೋಳಿ, ಮೀನು, ಕಾಡುಬೆಕ್ಕು, ಉಡ, ನೀರುಕೋಳಿ, ಬೆಳವಾಟ ಹಕ್ಕಿ, ಪಾರಿವಾಳ, ಊರು ಗುಬ್ಬಚ್ಚಿ, ಸಾಂಬರ ಪಕ್ಷಿ, ಗುಡ್ಡಿ ಪುರುಡಿ, ಎರ್ರಲಾವುಕ, ಬೆಳ್ಳಕ್ಕಿ ಟಿವುಟಿ ಪಕ್ಷಿ, ಇನ್ನೂ ಮುಂತಾದವುಗಳನ್ನು ಮಾಂಸಹಾರವಾಗಿ ಬಳಸುತ್ತಾರೆ. ದಿನನಿತ್ಯದ ದವಸ ಧಾನ್ಯಗಳಾಗಿ ರಾಗಿ, ಜೋಳ, ಭತ್ತ, ಸಜ್ಜೆ, ಗೋದಿ, ನವಣೆ, ಚಾವೆ, ತೊಗರಿಕಾಳು, ಹೆಸರು, ಕಡಲೆ, ಹಲಸಂಧೆ, ಬಟಾಣಿ, ಉದ್ದಿನ ಕಾಳು ಮುಂತಾದವುಗಳನ್ನು ಬಳಸುತ್ತಾರೆ. ಮಾಂಸಹಾರಿಗಳಾಗಿ

ಕಂಡುಬರುವ ಪ್ರಸ್ತುತ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ದಿನನಿತ್ಯದ ಆಹಾರದಲ್ಲಿ ರಾಗಿ, ಜೋ, ಸಜ್ಜೆ, ಇನ್ನೂ ಮುಂತಾದ ಸಸ್ಯಹಾರಗಳನ್ನು ಬಳಸುತ್ತಾರೆ.

೫.೨ ರಾಜಕೀಯ ಸ್ಥಿತಿಗತಿ

ಬೇಡರ ಮಹಿಳೆಯರು ಇಂದು ಶಿಕ್ಷಣ ಕ್ಷೇತ್ರದಲ್ಲಿ ಅಸ್ತಿತ್ವ ಸ್ಥಾಪಿಸಿಕೊಂಡಿದ್ದಾಳೆ. ಮೂಲಭೂತವಾಗಿ ಸಾಕ್ಷರತೆ ಪ್ರಮಾಣದಲ್ಲಿ ಬೇಡರ ಮಹಿಳೆ ತುಂಬಾ ಹಿಂದೆ ಇದ್ದಾಳೆ. ಆದರೆ ತೀರಾ ಇತ್ತೀಚೆಗೆ ಸರ್ಕಾರದ ಮಹಿಳಾ ಮೀಸಲಾತಿಯ ಪ್ರಭಾವದಿಂದ ಸ್ವಲ್ಪ ಮಟ್ಟಿಗಾದರೂ ಅನುಕೂಲ ಪಡೆಯುತ್ತಿದ್ದಾಳೆ. ಪ್ರಾಥಮಿಕ ಶಿಕ್ಷಣದಲ್ಲಿ ಬೇಡರ ಹುಡುಗಿಯರು ತುಂಬಾ ಸಿಗುತ್ತಾರೆ. ಕ್ರಮೇಣ ಮಾಧ್ಯಮಿಕ, ಪ್ರೌಢಶಾಲೆ, ಕಾಲೇಜು ಇಂತಹ ಕಡೆ ಇನ್ನೂ ಸುಧಾರಣೆಯಾಗಬೇಕಿದೆ. ಹೆಣ್ಣು ಶಿಕ್ಷಣ ಪಡೆಯುವುದರಿಂದ ಕುಟುಂಬ ಸಮಾಜ ಸುಧಾರಣೆಯಾಗುತ್ತದೆ. ಮುಂದಿನ ಪೀಳಿಗೆ ಹೊಸ ಹೊಸ ಆಲೋಚನೆಗಳು ಮಾಡಲು ತಾಯಿಯ ಶಿಕ್ಷಣ ಸಹಕಾರಿಯಾಗುತ್ತದೆ. ಹಾಗಾಗಿ ಬೇಡರ ಮಹಿಳೆಯರಿಗೆ ಶಿಕ್ಷಣ ತುಂಬಾ ಅವಶ್ಯಕತೆಯಿದೆ. ಅದೇ ರೀತಿ ರಾಜಕೀಯ ಕ್ಷೇತ್ರದಲ್ಲಿ ಇಂದಿನ ಬೇಡ ಮಹಿಳೆಯರು ಪ್ರವೇಶ ಮಾಡುತ್ತಿದ್ದಾಳೆ. ಗ್ರಾಮ ಪಂಚಾಯತ್, ತಾಲೂಕ ಪಂಚಾಯತ್, ಜಿಲ್ಲಾ ಪಂಚಾಯತ್ ಇಂತಹ ಕಡೆ ಮೀಸಲಾತಿ ಅನ್ವಯ ಅನೇಕ ಬೇಡರ ಮಹಿಳೆಯರು ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಅವಕಾಶಗಳನ್ನು ಪಡೆದುಕೊಂಡಿದ್ದಾಳೆ. ಹಾಗೆಯೇ ಸ್ತ್ರೀ ಶಕ್ತಿ ಸಂಘಗಳು, ಸ್ವ ಸಹಾಯ ಸಂಘಗಳು ಕರ್ನಾಟಕ ಬೇಡರ ಮಹಿಳೆಯ ಆರ್ಥಿಕವಾಗಿ ಸಬಲೀಕರಣಗೊಳ್ಳಲು ತುಂಬಾ ಸಹಕಾರಿಯಾಗಿದೆ. ಬೇಡರ ಮಹಿಳೆ ಜನಪದ ಸಾಹಿತ್ಯದಲ್ಲಿಯೂ ತೊಡಗಿಕೊಂಡಿದ್ದಾಳೆ. ಮಹಿಳೆಯು ರಾಜಕೀಯ ಪ್ರವೇಶಿಸಿದಾಗ ಗ್ರಾಮ ಪಂಚಾಯತಿ, ತಾಲೂಕ ಪಂಚಾಯತಿ, ಜಿಲ್ಲಾ ಪಂಚಾಯತಿ ಎಂದಾಕ್ಷಣ ಅಭ್ಯರ್ಥಿಗಳು ಮಹಿಳೆಯರೆ ಆದರೆ ಅಧಿಕಾರ ನಡೆಸುವವರು ಪುರುಷರು ಮತ್ತು ಸಭೆ ಸಮಾರಂಭಗಳಿಗೆ ಹೋಗುವವರು ಕೂಡಾ ಪುರುಷರೇ ಆಗಿರುತ್ತಾರೆ. ಜೊತೆಗೆ ಕೆಲವು ನಿರ್ಧಾರಗಳನ್ನೂ ತೆಗೆದುಕೊಳ್ಳುವವರು ಪುರುಷರೇ ಆಗಿರುತ್ತಾರೆ. ಅದು ಪ್ರಸ್ತುತ ದಿನಮಾನಗಳಲ್ಲಿಯೂ ಇದೆ.

ಜಾತಿ ಪಂಚಾಯಿತಿ ಹೊಂದಿರುವುದು ವಿಶೇಷವಾದ ಸಂಗತಿ ಹಾಗೂ ಸರ್ವೆ ಸಾಮಾನ್ಯ. ಸಮುದಾಯದ ಒಳಗಡೆ ಬರುವಂತಹ ಯಾವುದೇ ವ್ಯಾಜ್ಯ ಸಮಸ್ಯೆಗಳನ್ನು ಅವರೇ ತೀರ್ಮಾನಿಸಿಕೊಳ್ಳುವರು. ಈಗಲೂ ನಿದರ್ಶನವಾಗಿರುವಂತೆ ಚಿತ್ರದುರ್ಗ ಜಿಲ್ಲೆಗಳಲ್ಲಿ ಕಟ್ಟೆಮನೆಗಳಿವೆ. ಇಂದು ಈ ವ್ಯವಸ್ಥೆ ಪರಿವರ್ತನೆ ಕಡೆ ಸಾಗಿ ಚಿಕ್ಕ ಪುಟ್ಟ ಕೇಸುಗಳು ವ್ಯಾಜ್ಯಗಳ ಮೇಲೆ ಪಂಚಾಯಿತಿ ಅಂದರೆ ನ್ಯಾಯ ತೀರ್ಮಾನಗಳ ನಡೆಯುತ್ತಿದ್ದವು. ಇದನ್ನು ದೇವರ ಕಟ್ಟೆಗಳು ಎಂದು ಸಹ ಕರೆಯುತ್ತಾರೆ. ಇಂದು ಈ ಕಟ್ಟೆಗಳ ಮೇಲೆ ನ್ಯಾಯ ತೀರ್ಮಾನಗಳು ನಡೆಯುತ್ತಿಲ್ಲ. ಅವರೇ ಅವರೇ ತೀರ್ಮಾನಗಳು ತೆಗೆದುಕೊಂಡು ಕೋರ್ಟ್‌ಗೆ ಹೋಗುವುದು ಈಗ ಸರ್ವೆಸಾಮನ್ಯ. ಪೋಲೀಸ್ ಠಾಣೆ ಮೆಟ್ಟಿಲು ಹೇರಿ ನ್ಯಾಯ ತೀರ್ಮಾನಗಳನ್ನು ನಿರ್ಧರಿಸುವ ಪರಿಸ್ಥಿತಿ ಇಂದಿನ ವಾಸ್ತವ ಪರಿಸ್ಥಿ ಆಗಿದೆ. ಮೊದಲು ಪೋಲೀಸ್ ಠಾಣೆ ಕೋರ್ಟ್ ಅಂದರೆ ಸಾಕು ಭಯ

ಅನ್ನುವಂತಹ ಪರಿಸ್ಥಿತಿ ಇತ್ತು. ಆದರೆ ಈಗ ಅದು ಹೋಗಿ ಅದು ಏನು ಮಹಾ ಎನ್ನುವ ರೀತಿಯಾಗಿದೆ.

ಕೌಟುಂಬಿಕ ರಾಜಕೀಯ:

ಬುಡಕಟ್ಟು ಅಧ್ಯಯನ ಸರಿ ಸುಮಾರು ೧೦೦ ವರ್ಷಗಳ ಇತಿಹಾಸ ಭಾರತದಲ್ಲಿದೆ. ಜಾಗತಿಕ ಮಟ್ಟದಲ್ಲಿ ರೂಪಗೊಂಡು ಮಾನವ ಶಾಸ್ತ್ರ ಮತ್ತು ಸಾಮಾಜಿಕ ಮಾನವಶಾಸ್ತ್ರದ ಭಾಗವಾಗಿ ಬುಡಕಟ್ಟುಗಳ ಅಧ್ಯಯನ ಬೆಳೆದು ಬಂದುದು ಕಂಡು ಬರುತ್ತದೆ. ಆಚಾರ ವಿಚಾರ, ಸಂಸ್ಕೃತಿ ಸಂಪ್ರದಾಯ, ವರ್ಣ ಜನಾಂಗದಲ್ಲಿ ಸಮ್ಮಿಲನಗೊಂಡಂತೆ ನೋಡುಗರಿಗೆ ಕಂಡುಬಂದರೂ ಅದರ ಅಂತರಾತ್ಮದಲ್ಲಿ, ಅಂತಸ್ತು, ಅಧಿಕಾರ ಏಣಿಶ್ರೇಣಿ ಕೃತ ಸಮಾಜ ವ್ಯವಸ್ಥೆಯಿದೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಮಕ್ಕಳನ್ನು ಹೆರುವ ಸಲಹುವ ಸ್ವಾಭಾವಿಕ ಕೇಂದ್ರವಾದ ಸ್ತ್ರೀಮಾತ್ರ ಅದೇ ಸ್ಥಾನದಲ್ಲಿದ್ದಾಳೆ. ಪುರುಷನ ಕಾರ್ಯ ಸಾಧನೆಯಲ್ಲಿ ಭಾಗಿಯಾಗಿದ್ದಾಳೆ. ಆದರೆ ಅವಳನ್ನು ಕಾಣುವ ದೃಷ್ಟಿಕೋನ ಮಾತ್ರ ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿದೆ. ವಿವಿಧ ಧರ್ಮಗಳು ಮಹಿಳೆಗೆ ಪೂಜ್ಯ ಸ್ಥಾನ ನೀಡುತ್ತಿದೆ. ಆದರೆ ಧರ್ಮಗಳು ಇಲ್ಲಸಲ್ಲದ ನಿರ್ಬಂಧಗಳನ್ನು ಹೇರುವುದು ಬೌದ್ಧಿಕ ವಿಕಾಸಕ್ಕೆ ಮಾರಕವಾಗಿದೆ.

ಕರ್ನಾಟಕದಲ್ಲಿ ಒಟ್ಟು ನಲವತ್ತೊಂಭತ್ತು ಪರಿಶಿಷ್ಟ ಬುಡಕಟ್ಟುಗಳಿವೆ. ಸಂವಿಧಾನ ಬದ್ಧವಾಗಿ ಉಳಿದ ಕೆಲವು ಬುಡಕಟ್ಟುಗಳು ಅಲೆಮಾರಿ ಬುಡಕಟ್ಟುಗಳೆಂದು ಇನ್ನೂ ಕೆಲವು ಬುಡಕಟ್ಟುಗಳನ್ನು ಅದೇ ಅಲೆಮಾಡಿ ಬುಡಕಟ್ಟುಗಳೆಂದು ಪರಿಗಣಿಸಿ ಮೀಸಲಾತಿಯ ಪಟ್ಟಿಗೆ ಅಂದರೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಗೆ ಮತ್ತು ಜಾತಿಗೆ ಸೇರಿಸಲಾಗಿದೆ. ಒಂದು ದೇಶದಲ್ಲಿಯ ಮಹಿಳೆಯರ ಸ್ಥಾನಮಾನ ಅಧುನಿಕತೆಯ ಅಳತೆಗೋಲು ಎನ್ನಬಹುದು. ಸಮುದಾಯದಲ್ಲಿ ಮಹಿಳೆಯ ಸ್ಥಾನ ನಿರ್ಧಾರವಾಗುವುದು ಆ ಸಮುದಾಯದಲ್ಲಿ ತನ್ನನ್ನು ತಾನೂ ನಿರ್ಧರಿಸಿಕೊಳ್ಳಲು ಅವಳಿಗಿರುವ ಸಮಾನ ಅಂಶಗಳಿಂದ ಶೈಕ್ಷಣಿಕ ಅವಕಾಶಗಳು ಬಹಳ ಪ್ರಮುಖವಾದದು ಜಗತ್ತಿನಾದ್ಯಂತ ಎಲ್ಲ ಸಮಾಜದಲ್ಲಿ ಮತ್ತು ಸಂಸ್ಕೃತಿಯಲ್ಲಿ ಮಹಿಳೆಯರು ಅನ್ಯಾಯಕ್ಕೆ ಮತ್ತು ತುಳಿತಕ್ಕೆ ಹಾಗೂ ಪುರುಷರ ದಬ್ಬಾಳಿಕೆಗೆ ಒಳಗಾಗುತ್ತಲೆ ಇದ್ದಾರೆ. ಇದನ್ನು ಯಾರು ಅಲ್ಲಗಳೆಯಲಾರರು ಸಾಮಾಜಿಕವಾಗಿ ಆರ್ಥಿಕವಾಗಿ ಅವಳೇ ಪುರುಷರ ಮೇಲೆ ಅವಲಂಭಿಯಾಗಿದ್ದಾಳೆ. ಈ ಕಾರಣದಿಂದಾಗಿಯೇ ಭಾರತವು ಸ್ವಾತಂತ್ರ್ಯವು ಪಡೆದ ಐದು ದಶಕಗಳಿಂದಲೂ ಯಾವುದೇ ಒಂದು ಮಾರ್ಪಾಡು ಬುಡಕಟ್ಟು ಸಮುದಾಯಗಳಲ್ಲಿ ಆದಿವಾಸಿ ಸಮುದಾಯಗಳಲ್ಲಿ ಕಂಡುಬರುವುದೇ.

ಮಹಿಳೆಯ ಜೀವನ ಎಲ್ಲಾ ಹಂತಗಳಲ್ಲಿ ಪುರುಷಾಧೀನಗಳು ಮಹಿಳೆಯರ ಸ್ಥಾನಮಾನ ಸಮಾಜದಲ್ಲಿ ಪ್ರತ್ಯಕ ವ್ಯಕ್ತಿತ್ವವನ್ನು ಮತ್ತು ಸ್ಥಾನಮಾನಗಳನ್ನು ಕಳೆದುಕೊಂಡಿದ್ದಳು. ಅವಳ ಅಸ್ತಿತ್ವ ಮತ್ತು ಸಂತೋಷ ಅವಳ ಪತಿಯನ್ನು ಅವಲಂಬಿಸಿತ್ತು. ಪತಿ ಕುರುಡನಾಗಿರಲಿ, ಕುಂಟನಾಗಿರಲಿ, ಕ್ರೂರಿಯಾಗಿರಲಿ ಪತ್ನಿ ಮಾತ್ರ ಅವನಿಗೆ ನಿಷ್ಠೆಯಿಂದ ವಿಧೇಯ ಪೂರಕವಾಗಿ ಗಂಡನಿಗಾಗಿ

ಮಕ್ಕಳಿಗಾಗಿ ತನ್ನ ಸುಖ ಸಂತೋಷಗಳನ್ನು ತ್ಯಾಗ ಮಾಡಬೇಕು ಎನ್ನುವಂತಹದ್ದು ನಾವು ತಿಳಿಯಬಹುದಾದ ವಿಷಯವಾಗಿದೆ. ಹಿಂದು ಸಮಾಜದ ಮನೋಭಾವ ದೃಷ್ಟಿಕೋನ, ಜೀವನ ಶೈಲಿ, ಎಲ್ಲವೂ ಭಾರತೀಯ ಮಹಿಳೆಯರ ಮೇಲೆ ವರ್ತನೆ ಮಾಡಿದ್ದರು. ದಬ್ಬಾಳಿಕೆ ಸಮಾಜಿಕ ಹಿಂಸೆ ಅವಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವಂತೆ ಮಾಡಿದರು. ಮನಬಂದಂತೆ ಲೈಂಗಿಕ ದಾಹ ಮತ್ತು ಅತ್ಯಾಚಾರಗಳ ಮಹಿಳೆಯರ ಮೇಲೆ ದೌರ್ಜನ್ಯ ಪೂರಕವಾಗಿ ಮಾಡಿರುವಂತಹದ್ದು ಸಹಿಸಿಕೊಳ್ಳಲಾರಳು.

ಮಹಿಳೆ ಮತ್ತು ಸಮುದಾಯದ ನಡುವಿನ ಸಂಬಂಧ ಅವಳು ಅಭಿವೃದ್ಧಿ ಹೊಂದದೇ ಸೈದ್ಧಾಂತಿಕ ಸಂಬಂಧವೇನೆಯಿದ್ದರೂ ಪರಿಸರ ಸಂರಕ್ಷಣೆಗೆ ಸಮಾಜದ ಸಂರಕ್ಷಣೆಗೆ, ಬುಡಕಟ್ಟುಗಳ ಸಂರಕ್ಷಣೆಗೆ ಮುಂತಾದವುಗಳನ್ನು ಮಾಡುತ್ತ ಬಂದಿರುವುದು ಸದಸ್ಯರ ಸಂಪೂರ್ಣ ಒಡೆತನ ಹೊಂದಿರುವ ನಿರ್ವಹಣೆ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದು ಸ್ವಾವಲಂಬಿ ಆರ್ಥಿಕ ಬದುಕನ್ನು ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ ಇದಕ್ಕಾಗಿ ತಮ್ಮ ಪ್ರಾಣವನ್ನು ಒತ್ತೆ ಇಡಬೇಕಾದ ಪ್ರಸಂಗಗಳು ಸಮುದಾಯಗಳಲ್ಲಿ ಸೃಷ್ಟಿಮಾಡಿರುವಂತಹ ಅನೇಕ ಕಾರ್ಯದ ವಿಷಯಗಳು ಕೂಲಂಕುಷವಾಗಿ ನೋಡಬಹುದಾಗಿದೆ. ಒಟ್ಟಿನಲ್ಲಿ ಮಹಿಳೆಯನ್ನು ಕುರಿತು ದ್ವಿಮುಖ ಹೊರಗೆ ಹೊಂದಿರುವುದನ್ನು ಕಂಡುಬರುತ್ತದೆ. ಭಾಷಣ, ಹೇಳಿಕೆಗಳಲ್ಲಿ ಆಶ್ವಾಸನೆ ಭರವಸೆಗಳು ಕಂಡುಬಂದರು ಕಾರ್ಯರೂಪಕ್ಕೆ ಬರುವುದರಲ್ಲಿ ಅಳಿಸಿ ಹೋಗಿರುತ್ತದೆ. ಅವರ ಜೀವನಾಂಶಗಳು ಮಾರ್ಪಡುಲ್ಲಿ ಕೌಟುಂಬಿಕ ಜೀವನದ ಬದುಕು ಬೇಸರ ಹೊಂದಿ ವರ್ಗಾವಣೆ ಹೊಂದಿದಾಗ ಅಭಿವೃದ್ಧಿ ಹೊಂದುತ್ತ ಉತ್ತಮ ಜೀವನ ಸಾಗಿಸುವುದು ಅಂದರೆ ಮೊದಲು ಅವಳು ಅಕ್ಷರಸ್ಥಳಾಗಿರಬೇಕು ಅಂದರೆ ಸಾಕ್ಷರತೆ, ವಿದ್ಯಾಭ್ಯಾಸ, ಕೌಟುಂಬಿಕ ಆರ್ಥಿಕ ಪರಸ್ಥಿತಿ ಇವೆಲ್ಲವೂ ಮಹಿಳೆಯರ ಪರವಾದ ರಾಜಕೀಯ ಕನಸನ್ನೂ ಮಹಿಳಾ ಸಮುದಾಯಗಳಲ್ಲಿ ಕಂಡುಬರುವಂತಹದ್ದು ಹಿಂದು ಸಮುದಾಯಗಳಲ್ಲಿ ಗೋಚರಿಸುತ್ತದೆ.

ಬೇಡ ಹೆಣ್ಣು ಪುರುಷ ಕೇಂದ್ರಿತ ಸಮಾಜದಲ್ಲಿದ್ದರೂ ಅವಳಿಗೆ ಸ್ವತಂತ್ರ್ಯ ಇದೆ. ಅವಳು ಆ ಸಮುದಾಯದಲ್ಲಿ ಜೀವನ ಪೂರ್ತಿ ದುಡಿಯುತ್ತಾಳೆ. ಅವಳಿಗೆ ಜ್ಞಾನ ಇಲ್ಲದಿದ್ದರು ತಿಳುವಳಿಕೆ ಇದೆ. ಜೀವನ ವಾತ್ಸಲ್ಯಗಳು ಅವಳ ರಕ್ತದ ಕಣಕಣಗಳಲ್ಲಿಯೂ ಭದ್ರವಾಗಿ ನೆಲೆಯೂರಿವೆ. ಅವಳಿಗೆ ಸ್ತ್ರೀವಾದ, ನಿರೂಪ ಚಿಂತನೆ ಇಂತಹ ಯಾವ ಸಿದ್ಧಾಂತಗಳ ಅರಿವು ಇಲ್ಲ. ಇವು ಶಿಷ್ಟ ಸಮಾಜದ ಅಕ್ಷರಸ್ಥ ಸಮುದಾಯದಲ್ಲಿ ಹುಟ್ಟಿಕೊಂಡ ಸಿದ್ಧಾಂತಗಳು ಆದರೆ ಅನಕ್ಷರಸ್ಥರು ಸಮುದಾಯದ ಹೆಣ್ಣು ಜಾನಪದ ಸಂಸ್ಕೃತಿಯಲ್ಲಿ ಇದ್ದರೂ ಅವಳು ತನ್ನ ನೈಜತೆಯನ್ನು ಉಳಿಸಿಕೊಂಡಿದ್ದಾಳೆ. ಬೇಡರ ಕೆಲವು ಹೆಣ್ಣು ಮಕ್ಕಳು ಪುರುಷನಷ್ಟೇ ಸಮರ್ಥವಾಗಿ ಕುಟುಂಬಿಕವಾಗಿ ಜವಬ್ದಾರಿಯನ್ನು ಹೊಂದಿದ್ದಾರೆ. ಹೆಣ್ಣು-ಗಂಡು ಜೈವಿಕ ಕ್ರಿಯೆಯಲ್ಲಿ ಪ್ರಕೃತಿದತ್ತವಾಗಿ ಬದಲಾವಣೆ ಹೊಂದಿರಬಹುದು.

ಆದರೆ ಶಕ್ತಿ ವ್ಯಕ್ತಿ ಚಿಂತನೆಯಲ್ಲಿ ಮಹಿಳೆಗೆ ಪುರುಷನನ್ನು ಮೀರಿ ನಿಲ್ಲುವ ಶಕ್ತಿ ಇದೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಬಂಧಿಯಾಗಿ ಅವನು ಕೊಟ್ಟಂತಹ ಸ್ಥಾನಮಾನಗಳನ್ನು ಸ್ವೀಕರಿಸುತ್ತಾ ಬಂದಿದ್ದಾಳೆ. ಇಂದು ಈ ಎಲ್ಲಾ ಸ್ಥಿತಿಯನ್ನು ಮೀರಿ ಗಂಡು ಹೆಣ್ಣು ಸಮಾನರು ಎಂಬುದನ್ನು ಸೃಷ್ಟಿ ಮಾಡಬೇಕಾದ ಅನಿವಾರ್ಯತೆ ಇಂದಿನ ಸಮಾಜದಲ್ಲಿ ಸೃಷ್ಟಿಯಾಗಬೇಕಾಗಿದೆ.

ಬೇಡರ ಮಹಿಳೆ ಕುಟುಂಬದಲ್ಲಿ ಪ್ರಮುಖ ಸ್ಥಾನವಿದೆ. ಮನೆಯ ಯಜಮಾನ ಪುರುಷನೇ ಆಗಿರುತ್ತಾನೆ. ಆದರೆ ಅವನ ವ್ಯಕ್ತಿತ್ವದ ಹಿಂದೆ ಹೆಣ್ಣಿನ ಸಹಕಾರ ತುಂಬಾನೆ ಇದೆ. ಕೌಟುಂಬಿಕ ಜೀವನದಲ್ಲಿ ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ಅಕ್ಕನಾಗಿ, ಮಗಳಾಗಿ, ಅತ್ತೆಯಾಗಿ, ಅತ್ತಿಗೆ, ನಾದಿನಿ, ಸೊಸೆ, ವಾರಗಿತ್ತಿ, ಹೀಗೆ ಇನ್ನೂ ಅನೇಕ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾಳೆ. ಈ ಎಲ್ಲಾ ಪಾತ್ರಗಳಿಗೂ ಬೇಡರ ಕುಟುಂಬದಲ್ಲಿ ಅವುಗಳದೇ ಆದ ಸ್ಥಾನಮಾನವಿದೆ. ಕುಟುಂದೊಳಗೆ ಮಹಿಳೆ ಕಷ್ಟ–ಸುಖ, ನೋವು–ನಲಿವು, ಪ್ರೀತಿ–ದ್ವೇಷ ಅಸೂಯೇ ಹಾಗೂ ಇನ್ನಿತರ ಅನೇಕ ಸಂದಿಗ್ದ ಸ್ಥಿತಿಗೆ ಒಳಗಾಗುತ್ತಾಳೆ. ಇಂತಹ ಸ್ಥಿತಿಯಲ್ಲಿ ಮಹಿಳೇ ಶಾಂತ ರೀತಿಯಿಂದ ಈ ಎಲ್ಲ ಸನ್ನಿವೇಷಗಳನ್ನು ಸಹಿಸಿಕೊಳ್ಳುವ ಗುಣ ಇದೆ. ಹಾಗೆಯೇ ಬಂಜೆಯಾದ ಮಹಿಳೆಗೆ ಬೇಡ ಸಮುದಾಯದಲ್ಲಿ ಗೌರವ ಕೊಡುವುದು ಕಡಿಮೆ. ಜೊತೆಗೆ ಗಂಡು ಮಗುವಿನ ಜನನವಾದಾಗ ಅಷ್ಟು ಸಂತೋಷ ಪಡುವುದಿಲ್ಲ. ಈ ಮಗುವನ್ನು ಸಹಜ ರೀತಿಯಲ್ಲೇ ಸ್ವೀಕರಿಸುತ್ತಾರೆ. ಇದು ಇದೊಂದೆ ಜನಾಂಗ ಸ್ಥಿತಿಯಲ್ಲ ಇಡೀ ಭಾರತೀಯ ಸಮಾಜದ ಸ್ಥಿತಿಯೂ ಆಗಿರುತ್ತದೆ. ಆದರೆ ಇಂದು ನಾವು ಈ ಸ್ಥಿತಿಯನ್ನು ಮೀರಿ ನಿಂತುಕೊಳ್ಳಬೇಕು. ಇದು ಸಿನಿಕತನದ ಮಾತಾಗಿದೆ ಏಕೆಂದರೆ 'ಹೆಣ್ಣು' ಸಮಾಜದ ಕಣ್ಣು ಕುಟುಂಬದ ಕಣ್ಣು ಅಂತ ಮಾತನಾಡುತ್ತೇವೆ. ಪ್ರಾಯೋಗಿಕವಾಗಿ ನಿಭಾಯಿಸುವಂತಹ ಸಂದರ್ಭ ಬಂದಾಗ ನಾವುಗಳು ಸರಿ ತಪ್ಪುಗಳನ್ನು ಹುಡುಕುವ ಕೆಲಸ ಮಾಡಬೇಕಾಗಿದೆ.

ಮಹಿಳೆ ತನ್ನ ಕುಟುಂಬದ ಶ್ರೇಯಸ್ಸಿಗೆ ಹೆಚ್ಚು ದುಡಿಯುತ್ತಾಳೆ. ಗ್ರಾಮೀಣ ಸಮಾಜದ ಬೇಡರ ಮಹಿಳೆ ಹೊಲ ಮನೆ ಎನ್ನದೆ ನಿರಂತರವಾಗಿ ತನ್ನನ್ನು ತೊಡಗಿಸಿಕೊಂಡಿರುತ್ತಾಳೆ. ಅವಳು ಅಡುಗೆ ಮಾಡುವ ಕೆಲಸದಿಂದ ಹಿಡಿದು ಮಕ್ಕಳ ಹಾರೈಕೆ ಪಾಲನೆ ನೋಡಿಕೊಳ್ಳುತ್ತಾಳೆ. ಜೊತೆಗೆ ಪುರುಷನ ಸರಿಸಮಾನವಾಗಿ ಕೃಷಿ ಕ್ಷೇತ್ರದಲ್ಲಿಯೂ ದುಡಿಯುತ್ತಾಳೆ. ಅಷ್ಟೇ ಅಲ್ಲ ತೋಟಗಾರಿಕೆ ಪಶುಪಾಲನೆ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ ಹೈನುಗಾರಿಕೆ, ಕುರಿ ಸಾಕಾಣಿಕೆ, ಕೆಲವು ಕೈಗಾರಿಕೆಗಳಲ್ಲಿಯೂ ನಿರಂತರವಾಗಿ ಕೆಲಸ ಮಾಡುತ್ತಾ ಇದ್ದಾಳೆ. ವ್ಯವಹಾರ ಮತ್ತು ಮತ್ತು ಶ್ರಮದ ಬದುಕು ಪ್ರಾದೇಶಿಕವಾಗಿ ತುಂಬಾ ವಿಶಿಷ್ಟವಾಗಿರುತ್ತದೆ. ಆಯಾ ಪರಿಸರಕ್ಕೆ ತಕ್ಕನಾದ ವ್ಯಕ್ತಿತ್ವವನ್ನು ಬೇಡರ ಮಹಿಳೆ ಸ್ಥಾಪಿಸಿಕೊಳ್ಳುತ್ತಾಳೆ. ಒಟ್ಟಿನಲ್ಲಿ ಕೌಟುಂಬಿಕ ತುಂಬಾ ಶ್ರಮದಾಯಕವಾದ ಕೆಲಸವನ್ನು ಅಲ್ಲಿನ ಮಹಿಳೆ ಮಾಡ್ತಾ ಹೋಗ್ತಾಳೆ.

ಬೇಡರ ಕುಟುಂಬದಲ್ಲಿ ಗಂಡ ಅತಿ ಕುಡುಕನಾಗಿದ್ದರೆ. ಜೂಜು ಕೋರನಾಗಿದ್ದರೆ, ವ್ಯಭಿಚಾರಿಯಾಗಿದ್ದರೆ. ಅಂತಹ ಸಂದರ್ಭದಲ್ಲಿ ಮನೆಯ ಒಡೆತನವನ್ನು ಮಹಿಳೆ ವಹಿಸಿಕೊಂಡಿರುವುದನ್ನು

ನಾವು ನೋಡುತ್ತೇವೆ. ಇದು ಇತ್ತೀಚೀನ ಬೆಳವಣಿಗೆಯಾಗಿದೆ. ಇಲ್ಲಿನ ಮಹಿಳೆ ತನ್ನ ಕುಟುಂದ ಅಳಿವು ಮತ್ತು ಉಳಿವಿನ ಬಗ್ಗೆ ಸದಾ ಯೋಚನೆ ಇರುತ್ತದೆ. ಹಾಗಾಗಿ ಇಲ್ಲಿನ ಬಹುಪಾಲು ಮಹಿಳೆಯರು ಅನಕ್ಷರಸ್ಥರು. ಆದರೆ ಅವರಿಗೆ ನೈತಿಕ ಹಕ್ಕಿನ ಬಗ್ಗೆ ಅರಿವಿದೆ. ದಿವಾಳಿತನಕ್ಕೆ ತಮ್ಮ ತಮ್ಮ ಕುಟುಂಬಗಳನ್ನು ಬಾಗಿಯಾಗಲು ಬಿಡುವುದಿಲ್ಲ ಅಂತಹ ಕಡೆ ಮಹಿಳೆಯರು ಜಾಗ್ರತರಾಗಿರುತ್ತಾರೆ. ಅವಳು ಇಡೀ ಸಮಾಜವನ್ನು ತನ್ನ ಅರಿವಿಗೆ ತೆಗೆದುಕೊಂಡು ಕುಟುಂಬದ ಪಾತ್ರ ಹೀಗೆ ಇದೆ? ಅಂತ ಪ್ರಶ್ನೆ ಮಾಡಿಕೊಳ್ಳುತ್ತಲೇ ಸಾಮಾಜಿಕ ಸಂರಚನಾ ಸಿದ್ದಾಂತಕ್ಕೊಳಗಾಗುತ್ತಾರೆ. ಬೇಡರ ಮಹಿಳೆಯರಲ್ಲಿ ದೇವರು ಮತ್ತು ಧರ್ಮಗಳು ಜೀವನದ ಉಸಿರಾಗಿವೆ. ಇವರು ತಮ್ಮ ಕುಲದೇವರ ಬಗ್ಗೆ ಅಪಾರವಾದ ನಂಬಿಕೆ ಇಟ್ಟುಕೊಂಡಿದ್ದಾರೆ. ಹಾಗೆಯೇ ಮೂಢನಂಬಿಕೆ, ಸಂಪ್ರದಾಯ, ಆಚರಣೆ, ನಿಯಮಗಳು ಹಬ್ಬ ಹರಿದಿನಗಳು ಜಾತ್ರೆ ಇನ್ನೂ ಮುಂತಾದ ಸಾಂಸ್ಕೃತಿಕ ಸಂದರ್ಭದಲ್ಲಿ ಮಹಿಳೆ ಪಾಲ್ಗೊಳ್ಳುತ್ತಾಳೆ. ಇಲ್ಲಿನ ಅನಕ್ಷರಸ್ಥ ಮುಗ್ದ ಹೆಂಗಸರು ದೇವರ ಹೆಸರಿನಲ್ಲಿಯೇ ನೆಮ್ಮದಿ ಕಾಣುತ್ತಾರೆ. ಬೇಡರ ಮಹಿಳೆಗೂ ದೇವರು ಮತ್ತು ಧರ್ಮಕ್ಕೂ ತುಂಬಾ ಹತ್ತಿರದ ಸಂಬಂಧವಿದೆ.

೫.೩ ಕೌಟುಂಬಿಕ ಸ್ಥಿತಿಗತಿ

ಬುಡಕಟ್ಟು ಜನರು ಹೆಚ್ಚಾಗಿ ಅವಿಭಕ್ತ ಕುಟುಂಬಗಳಿಗೆ ಆದ್ಯತೆ ನೀಡಿದಂತೆ, ಬೇಡರು ಸಹ ಅವಿಭಕ್ತ ಕುಟುಂಬಗಳಿಗೆ ಆದ್ಯತೆ ನೀಡುತ್ತಿದ್ದರು. ಪ್ರಸ್ತುತ ಸಮಾಜದಲ್ಲಿ ಈ ವ್ಯವಸ್ಥೆ ಮಾಯವಾಗಿದೆ. ಈಗ ಎಲ್ಲರೂ ಒಗ್ಗಟ್ಟಿಗೆ ವಾಸವಾಗುವುದನ್ನು ಆಶಿಸದೇ ಸ್ವತಂತ್ರ್ಯ ಜೀವನ ನಡೆಸುವಲ್ಲಿ ಮುಂದಾಗಿದ್ದಾರೆ. ಲಿಂಗ ಪ್ರಧಾನ ಕುಟುಂಬ ವ್ಯವಸ್ಥೆ ಒಮ್ಮೆ ಗಮನಿಸಿದಾಗ ಸಮಾಜವು ಪುರುಷ ಪ್ರಧಾನವಾದ ಸಮಾಜವಾಗಿದೆ. ಅದೇ ರೀತಿ ಕುಟುಂಬಗಳಲ್ಲಿ ಪುರುಷ ಪಿತೃ ಪ್ರಧಾನವಾಗಿದ್ದಾನೆ. ಆದರೆ ಮನುಷ್ಯ ನಾಗರಿಕತೆಯ ಕಡೆ ಸಾಗಿದಂತೆಲ್ಲ ಈ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆಯಾಗಿರುವುದನ್ನು ಕಾಣಬಹುದು. ಹೇಗೆಂದರೆ ಇಂದು ನಮ್ಮ ಸಮುದಾಯ ಜನರು ದುಶ್ಚಟಗಳಿಗೆ ಬಲಿಯಾಗಿ ತನ್ನ ಕುಟುಂಬವನ್ನು ಸರಿಯಾಗಿ ಪೋಷಿಸುವ ಜವಾಬ್ದಾರಿಯಿಂದ ನುಣಿಚಿಕೊಳ್ಳುತ್ತಿದ್ದಾರೆ. ಅಂತಹ ಕುಟುಂಬಗಳನ್ನು ಸ್ತ್ರೀ ಅಥವಾ ತಾಯಿ ಪೋಷಿಸಿಕೊಂಡು ಹೋಗುತ್ತಿರುವುದನ್ನು ನೋಡಬಹುದು. ಕುಟುಂಬ ವ್ಯವಸ್ಥೆಯನ್ನು ಅತಿ ಹೆಚ್ಚಿನದಾಗಿ ಮಹಿಳೆಯೇ ಗಂಡಸಿನಂತೆ ದುಡಿದು ಮನೆಯ ಜವಾಬ್ದಾರಿಯನ್ನು ನಿಭಾಯಿಸುವ ಶಕ್ತಿಯನ್ನು ಹೊಂದಿರುತ್ತಾರೆ. ಸಂಸಾರವನ್ನು ನಿಭಾಯಿಸುವುದರ ಜೊತೆಗೆ ಅವರು ಹೊಲಮನೆ ಕೆಲಸಗಳನ್ನು ನಿಭಾಯಿಸುತ್ತಾರೆ. ಆದರೆ ಒಂದು ದುರಂತವೆಂದರೆ ಕಷ್ಟಪಟ್ಟು ದುಡಿದು ಮನೆಗೆ ಬೇಕಾದದ್ದನ್ನು ಕೂಡಿಸುತ್ತಾರೆ. ಆದರೆ ಕೊನೆಯದಾಗಿ ವ್ಯಾಪಾರ ವಹಿವಾಟು ಹಣಕಾಸಿನ ಜವಬ್ದಾರಿ ಗಂಡಸಿನದೇ ಆಗಿರುತ್ತದೆ. ಇದೇ ರೀತಿ ರಾಜಕೀಯ ಪ್ರವೇಶ ಮಾಡಿದಾಗ ಕೂಡ ಮಹಿಳೆಯು ಅಭ್ಯರ್ಥಿ ಅಷ್ಟೆ ನಾಮಕ ಅವಸ್ಥೆ ಅಷ್ಟೆ. ಆದರೆ ಪ್ರತಿಯೊಂದು ತೀರ್ಮಾನವನ್ನು ಗಂಡನೇ ತೆಗೆದುಕೊಳ್ಳುತ್ತಾರೆ.

೫.೪ ಆರ್ಥಿಕ ಸ್ಥಿತಿಗತಿ

"ಮಹಿಳೆಯರಿಗೆ ಜಾತಿ-ಬುಡಕಟ್ಟು ಎಂಬ ಪ್ರಾಮುಖ್ಯತೆ ಇಲ್ಲ. ಏಕೆಂದರೆ ಸಮಾಜದಲ್ಲಿ ಇವಳನ್ನು ದ್ವಿತೀಯ ದರ್ಜೆಯವರೆಂದೇ ಗುರುತಿಸಿರುವಾಗ ಅದರಲ್ಲಿ ಭೇದ ಕಾಣುವುದಿಲ್ಲ. ಆಗಾಗಿ ಮಹಿಳೆಯರ ಶೋಷಣೆ ಒಂದೇ ತೆರನಾಗಿದೆ. ಭಾರತೀಯ ಒಂದೇ ನಿರ್ದಿಷ್ಟ ಗುಂಪಾದದ್ದರಿಂದ ಮತ್ತು ಲಿಂಗ ತಾರತಮ್ಯಕ್ಕೆ ಒಳಗೊಂಡಿದ್ದರಿಂದ ಇವರು ಸಹ ಒಂದು ದಲಿತ ಗುಂಪಾಗಿದ್ದಾರೆ. ಈ ರೀತಿ ಹಿಂದುಳಿದ ಗುಂಪಾಗಿರುವುದರಿಂದಲೇ ಇವರು ಸಹ ಅಧಿಕೃತ ಗುಂಪಾಗಿ ಮಾರ್ಪಾಟಾಗಿದ್ದಾರೆ. ಭಾರತೀಯ ಮಹಿಳೆಯರು ಅಂಚಿಕೃತ ಪ್ರಕ್ರಿಯೆಗೆ ಒಳಗಾಗಿ ಸಾಮಾಜಿಕ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಇದಕ್ಕೆ ಪುರುಷ ಪ್ರಧಾನ ಸಮಾಜ ಕಾರಣವಾಗಿದ್ದರೂ. ಒಟ್ಟಾರೆ ಸಮಾಜದ ಸ್ವರೂಪ ಮತ್ತು ಸಂಸ್ಕೃತಿ ಕಾರಣೀಭೂತ ಅಂಶಗಳಾಗಿವೆ."[೫]

ಮಹಿಳೆಯರೆಂದರೆ ಪರಾವಲಂಬಿಗಳೆಂದೇ ಬಿಂಬಿಸಿದ್ದಾರೆ. ಜೈವಿಕ ಹಾಗೂ ದೈಹಿಕ ಕಾರಣಗಳಿಂದ ಇವರ ಆರ್ಥಿಕ ಬಲಹೀನತೆ ಪ್ರಾಮುಖ್ಯವಾದದ್ದು. ಇದರಿಂದ ಅವರ ಪಾಲನೆ, ಪೋಷಣೆ ಮತ್ತು ರಕ್ಷಣೆಯಂತಹ ಜವಾಬ್ದಾರಿ ಪುರುಷನ ಮೇಲಿದೆ ಎಂಬ ಮನೋಭಾವ ಸಮಾಜದಲ್ಲಿ ಬೇರೂರಿದೆ. ಇಂತಹ ಮನೋಭಾವಕ್ಕೆ ಕಾರಣ ಆರ್ಥಿಕತೆಯ ಕೊರತೆ ನಮ್ಮಲ್ಲಿ ಅಸ್ತಿತ್ವದಲ್ಲಿರುವ ಸಂಪ್ರದಾಯ, ಆಚಾರ ವಿಚಾರ ರೂಢಿ ಪದ್ಧತಿಗಳನ್ನು ಮಹಿಳೆಯರನ್ನು ಪುರುಷನ ಅಧೀನಳಾದಂತಹ ಭಾವನೆಗಳು ಜಾಗೃತಗೊಂಡು ಅವಳ ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಗೆ ಕಂಟಕ ಪ್ರಾಯವಾಗಿದೆ. ಈ ದೃಷ್ಟಿಯಿಂದ ಮಹಿಳೆಯರ ಸ್ಥಿತಿಗತಿಗಳನ್ನು ವಿವಿದ ಆಯಾಮಗಳಲ್ಲಿ ಅಭ್ಯಾಸಮಾಡುವ ಈ ಹೊತ್ತಿನ ತುರ್ತಾಗಿದೆ.

ಮ್ಯಾಸಬೇಡ ಮಹಿಳೆಯರ ಆರ್ಥಿಕ ಸ್ಥಾನಮಾನಗಳು. ಸಮಾಜದಲ್ಲಿ ಲಿಂಗಭೇದದ ನೆಲೆ ಅಥವಾ ಜೈವಿಕ ಅಂಶದ ಎರಡು ಸಮೂಹಗಳಿದ್ದು. ಈ ಎರಡು ಸಮೂಹಗಳ ಮಧ್ಯ ಪ್ರಕೃತಿ ದತ್ತವಾಗಿ ಕೆಲ ಭಿನ್ನತೆಗಳಿವೆ. ಈ ಭಿನ್ನತೆಯಿಂದಾಗಿಯೇ ಮಾನವನ ಹುಟ್ಟು ಸಮಾಜದ ಉಳಿವು, ನಿರಂತರತೆಗೆ ಕಾರಣವಾಗಿದೆ. ಸ್ತ್ರೀ-ಪುರುಷರಿಬ್ಬರು ಸಮಾಜದ ಎರಡು ಕಣ್ಣುಗಳು, ಒಂದೇ ನಾಣ್ಯದ ಎರಡು ಮುಖಗಳು ಅಥವಾ ಸಮಾಜವೆಂಬ ರಥದ ಎರಡು ಗಾಲಿಗಳಿದ್ದಂತೆ. ಹೆಣ್ಣಿಗೆ ಗಂಡಿನ ಅಗತ್ಯತೆ ಎಷ್ಟಿದೆಯೋ, ಹಣ್ಣು ಗಂಡಿಗೆ ಅಷ್ಟೆ ಅವಶ್ಯವಾಗಿದೆ. ಈ ರೀತಿ ಇವರಿಬ್ಬರ ಮಧ್ಯ ಅಗತ್ಯತೆ, ಅವಶ್ಯಕತೆ, ಸಮಾನತೆ ಇದ್ದರೂ ವಾಸ್ತವಿಕವಾಗಿ ಕೆಲ ಅನುಭವ, ಸತ್ಯ ಹಾಗೂ ಸಂಗತಿ ಸಂಶೋಧನೆಗಳ ಆಧಾರದ ಮೇಲೆ ಸ್ತ್ರೀಯೇ ಪುರುಷರಿಗಿಂತ ಹೆಚ್ಚು ಶ್ರೇಷ್ಠತೆ ಹೊಂದಿದ್ದಾಳೆನ್ನನಹುದು. ನಮ್ಮ ಸಮಾಜವು ಬಹು ಧರ್ಮ, ಜಾತಿ, ಸಂಸ್ಕೃತಿಯನ್ನು ಹೊಂದಿದ್ದು. ಇಲ್ಲಿನ ಮಹಿಳೆಯರನ್ನು ಸಮಾನ ರೂಪದಲ್ಲಿ ಒಚಿದೇ ವರ್ಗವಾಗಿ ಚಿತ್ರಿಸಿರುವುದು ಅಥವಾ ನೋಡುವುದು ಸರಿಯಲ್ಲ. ಕಾಲದಿಂದ ಕಾಲಕ್ಕೆ, ವರ್ಗದಿಂದ ವರ್ಗಕ್ಕೆ, ಧರ್ಮದಿಂದ ಧರ್ಮಕ್ಕೆ ಭಿನ್ನವಾದ ಮಹಿಳೆಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಬೇಡ ಬುಡುಕಟ್ಟು ಮಹಿಳೆಯರ ಸ್ಥಿತಿಗತಿಗಳನ್ನು

ವಿಶ್ಲೇಷಿಸಬಹುದಾಗಿದ್ದು. ಇವರ ಇತಿಹಾಸವೆಂದರೆ ಅವರಿಗಿದ್ದ ಗೌರವ ಮತ್ತು ಸ್ವಾತಂತ್ರ್ಯ ಗತಿಸಿ ಹೋದ ಇತಿಹಾಸವೇ ಆಗಿದ್ದು. ವೇದಗಳ ಕಾಲದವರೆಗೂ ಭಾರತೀಯ ಆದಿವಾಸಿಗಳು ಸ್ತ್ರೀಯರನ್ನು ದೈವ ಸೃಷ್ಟಿಯಲ್ಲಿ ಒಂದು ಅಸಂಗತ ಪವಾಡವೆಂದು ನಂಬಿ, ವಿಶೇಷ ಸ್ಥಾನನೀಡಿ ದೈವಿ ಸ್ವರೂಪದಲ್ಲಿ ಪೂಜ್ಯತೆಯಿಂದ ಕಾಣಲಾಗುತ್ತಿತ್ತು. ಈಕೆ ಮನೆಯ ಒಡತಿಯಾಗಿದ್ದು ಆಸ್ತಿಯ ಮಾಲೀಕಳಾಗಿ ಹಿಂದಿನ ಸಮಾಜವು ಮಾತೃ ಪ್ರಧಾನತೆಯ ವ್ಯವಸ್ಥೆಯಿಂದ ಕೂಡಿತ್ತು.

ಸ್ತ್ರೀಯು ಬಲೆ ಬೀಸಿ ಭೇಟೆಯಾಡುವ ಗುಂಪು ಸ್ತ್ರೀಯಲ್ಲಿ ಗಂಡಸಿನ ಜೊತೆ ಸೇರಿ ದುಡಿಯುತ್ತಿದ್ದ ಕೆಲವೊಮ್ಮೆ ತಾವೇ ಬೇಟೆಯಾಡಿ ಕುಟುಂಬ ಸಾಕುತ್ತಿದ್ದದಕ್ಕೆ ಸಾಕ್ಷಿಗಳಿವೆ. ಯುದ್ದ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದದಕ್ಕೆ ನಿದರ್ಶನಗಳಿವೆ. ಕುಟುಂಬದ ಪೋಷಣೆಯ ಜವಾಬ್ದಾರಿ ಹೊತ್ತ ಈಕೆ ಸೃಷ್ಟಿಯನ್ನು ಕಂಡುಹಿಡಿದ ಮೊದಲಿಗಳಾಗಿ ಆಹಾರೋತ್ಪಾದನೆಯ ಅನ್ವೇಷಕಿ ಎಂಬ ವಾದವೂ ಇದೆ. ತನ್ನ ವಿಶಿಷ್ಟ ಗುಣಗಳಾದ ತಾಳ್ಮೆ, ಜಾಣ್ಮೆ, ಸಹಿಷ್ಣತೆ, ದೈಹಿಕ ದಣಿವನ್ನು ಗೌಣವಾಗಿಸಿ ಮುನ್ನಡೆಯುವ ವಿಬ್ಬಸೇನವಿದ್ದು. ಜನ್ಮತಾ ಕ್ರಿಯಾಶೀಲ ವ್ಯಕ್ತಿತ್ವ ಹೊಂದಿದ್ದಾಳೆ. ಕುಟುಂಬವನ್ನು ಪೋಷಿಸುವ, ಪಾಲಿಸುವ ಸದಸ್ಯರನ್ನು ಕ್ಷೇಮಿಸುವ, ಪ್ರೀತಿಸುವ, ತಿದ್ದುವ ಭಾವ ಸಂಪತ್ತನ್ನು ಸಮೃದ್ಧವಾಗಿ ಹೊರಹೊಮ್ಮಿಸುವ ಈಕೆಯೇ ಸತ್ಯವಾಗಿ, ಮೊಲೆಯುಣಿಸುವ ಕ್ರಿಯೆ ಸರಳವಾದುದಲ್ಲ. ಈ ಕ್ರಿಯೆಗೆ ಆಕೆ ಕನಿಷ್ಠ ದಿನವೊಂದಕ್ಕೆ ೫೦೦ ಕ್ಯಾಲರಿಗಳನ್ನು ವ್ಯಯ ಮಾಡಬೇಕು. ಇದು ಹೆಚ್ಚು ಕಡಿಮೆ ೮ ಕಿ.ಮೀ. ನಡಿಗೆಗೆ ತಿನ್ನುವ ಹದ್ದುಗಳ ಸಂಕೇತ ಎನ್ನುವುದು ಮಹಿಳೆಯರ ಪಾಲನೆ ಅಕ್ಷರಶಃ ನಿಜವಾಯಿತು. ವಿದ್ಯೆಯ ಅಧೀದೇವತೆ ಶಾರದೆ ಎನಿಸಿಕೊಂಡಿರುವ ಈಕೆಯನ್ನು ಅಕ್ಷರಸ್ಥಳನ್ನಾಗಿ ಮಾಡಲಾಯಿತು. ಐಶ್ವರ್ಯ ಸಂಪತ್ತಿನ ಅಧೀದೇವತೆ ಲಕ್ಷ್ಮೀಗೆ ಹೋಲಿಸಿಕೊಂಡ ಈಕೆ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಪರಾವಲಂಬಿ ಜೀವಿಯಾಗಬೇಕಾಯಿತು. ಶಕ್ತಿ ಸ್ವರೂಪಿಣಿ ಎಂದು ಹೆಸರು ಪಡೆದ ಈಕೆ ನಿಶ್ಯಕ್ತಿಗೆ ದೂಡಿ ಶೋಷಣೆ, ದೌರ್ಜನ್ಯ ತುಳಿತದಲ್ಲಿ ಒಳಗಾಗುವ ಪರಿಸ್ಥಿತಿಯನ್ನು ತಂದು, ವಿಧವೆಯಾಗಿ, ಮಹಾಸತಿಯಾಗಿ, ದೇವದಾಸಿಯಾಗಿ, ದಾಸಿ, ಗುಲಾಮಳಾಗಿ ಅನುಭವಿಸಿದ ಹಿಂಸೆ, ನೋವು, ನರಳಾಟಗಳಿಗೆ ಎಣೆಯೇ ಇಲ್ಲದಂತಾಗಿ, ಗಂಡನ ಭೋಗದ ಸಾಧನವಾಗಿ ಅವನಿಗಾಗಿ ಮಕ್ಕಳನ್ನು ಹೆರುವ ಯಂತ್ರವಾಗಿ ವೈದಿಕರು ಧರ್ಮ ಸ್ತ್ರೀ ಪರಾಧೀನತೆ ಎತ್ತಿ ಹಿಡಿದು, ಸಂಸಾರದ ಆಶಾಜ್ಯೋತಿ ತಂದೆ-ತಾಯಿಯರನ್ನು ಪೋಷಿಸುವುದು ಎಂದು ಗಂಡು ಮಕ್ಕಳಿಗೆ ಹಂಬಲಿಸಿ, ದೇವರಿಗೆ ಹರಕೆ ಹೊತ್ತ ನಿದರ್ಶನಗಳು ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ಗಾದೆಯೊಂದು ಹೀಗಿದೆ 'ಮಗ ಸತ್ತರೆ ಮನೆ ಹಾಳು, ಸೊಸೆ ಸತ್ತರೆ ಶೋಭಾ' ಎನ್ನುವಂತೆ ಸ್ತ್ರೀ ಸತ್ತರೆ ಮರುಕ ಪಡದೆ ಪುರ್ನವಿವಾಹ ಮಾಡುವರು.

ಸ್ತ್ರೀಯ ಈ ಸ್ಥಿತಿಯನ್ನು ಕಂಡು ಕವಿಯತ್ರಿ ಒಬ್ಬರು ತನ್ನ ಅಳಲನ್ನು ಈ ರೀತಿಯಾಗಿ ತೋಡಿಕೊಂಡಿದ್ದಾರೆ. "ನಾವು ಅಪ್ಪಟ ನಾರಿಯರ ತತ್ವಗಳಲ್ಲಿ ದೇವಿಯಾದವರು,

ಭ್ರೂಣವಿರುವಾಗಲೇ ಬೇಡವಾದವರು,

ಬೆಳೆಯುತ್ತ ಹೊರೆಯಾದವರು.

ಮದುವೆ ಮಾರುಕಟ್ಟೆಯಲ್ಲಿ ಸರಕಾದವರು,

ಬದುಕಿಡಿ ಯಾರದೋ ದಯೆಗೆ ಕೈಯೊಡ್ಡಿ ಒಗ್ಗಿ ಹೋದವರು,

ನಾವು ಮಗಳಾದೇವು, ತಾಯಿಯಾದೆವು,

ಹೆಂಡತಿಯಾದೆವು ಬದುಕಿ ಯಾರದೊ ನೆರಳಾದೆವು,

ಕೊನೆಗೆ ನಾವು ನಾವಾಗಲೇ ಇಲ್ಲ"

ಎಂಬ ಪಾಪ ಜೀವನಕ್ಕಾಗಿಯೇ ಹುಟ್ಟಿದವರು ನಾವೆಂಬ ನೋವನ್ನು ವ್ಯಕ್ತಪಡಿಸಿದ್ದಾರೆ. ಕುಟುಂಬಗಳ ಸ್ತ್ರೀಯರು ಸಾವಿರಾರು ಸಂಖ್ಯೆಯಲ್ಲಿದ್ದು. ತಮ್ಮ ಮನೆ ಮಕ್ಕಳ ಜವಾಬ್ದಾರಿಯನ್ನು ಹೊತ್ತು ತಮ್ಮ ಕುಟುಂಬ ಬೆಳಗುವ ಜ್ಯೋತಿಯಾಗಿ ಆ ಮೂಲಕ ಇಡೀ ಸಮಾಜವನ್ನು ಜಗಮಗಿಸುತ್ತಿದ್ದಾಳೆ. ಕುಟುಂಬದಲ್ಲಿ ಮೊದಲೇ ಎದ್ದು ದಿನವಿಡೀ ದುಡಿದು ಕೊನೆಯಲ್ಲಿ ಮಲಗುವವಳು ಇವಳು ಆಗಿದ್ದಾಳೆ. ಕುಟುಂಬ ವೃದ್ಧಿಯಾಗಲು ಮತ್ತು ಪತನವಾಗಲು ಹೆಣ್ಣು ಕಾರಣವಾಗುತ್ತಿದ್ದು ಕುಟುಂಬಗಳ ಆಧಾರ ಸ್ಥಂಭವಾಗಿ ಉಳಿತಾಯದ ರೂವಾರಿಯಾಗಿ ಸರ್ವತೋಮುಖ ಅಭಿವೃದ್ದಿಗೆ ಕಾರಣವಾಗುವ ಮೂಲಕ ಸ್ವಸ್ಥ ಸಮಾಜಕ್ಕೂ ಕಾರಣಳಾಗಿದ್ದಾಳೆ.

ನಮ್ಮ ಸಂವಿಧಾನವು ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ನೀತಿ ಆಚರಣೆಗೆ ತರುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸ್ತ್ರೀಯರ ಹಿತ ರಕ್ಷಣೆಗಾಗಿ ಸಮಸ್ಯೆಗಳ ಪರಿಹಾರಕ್ಕಾಗಿ ಅವರ ಕಲ್ಯಾಣಭಿವೃದ್ದಿಗಾಗಿ, ಅನೇಕ ಕಾರ್ಯಕ್ರಮಗಳನನು, ಯೋಜನೆಗಳನ್ನು ಜಾರಿಗೊಳಿಸಿದು, ಈಡಿ ಜಗತ್ತಿನ ಅತಿ ಹೆಚ್ಚಿನ ರಾಜಕೀಯ, ಆರ್ಥಿಕ, ಸಾಮಾಜಿಕ ಹಕ್ಕುಗಳನ್ನು ಹೊಂದಿದ್ದು ಜೊತೆಗೆ ಕಾನೂನು ಶಾಸನಗಳಿದ್ದರೂ. ರಾಜಕಾರಣಿಗಳ ಅಧಿಕಾರಿಗಳ ಅಸಡ್ಡೆ, ಅನಾಸಕ್ತಿಯಿಂದ ಅಂದುಕೊಂಡ ಮಟ್ಟಿಗೆ ಸುಧಾರಣೆ ತರಲಾಗುತ್ತಿಲ್ಲ. ಕೆಲವರಿಗೆ ಯೋಜನೆಗಳೂ ಪೂರ್ಣ ತಿಳಿದು, ಅವುಗಳಾವುವು ಎನ್ನುವುದು ತಿಳಿಯದಾಗಿದೆ. ಕಾರಣ ಇವರು ಸ್ತ್ರೀ ಸುಧಾರಣೆ ಹಾದಿಯಲ್ಲಿ ಮುಳ್ಳುಗಳಾಗಿದ್ದಾರೆ. ಆದರೆ ಕೆಲವು ನಗರ ಪಟ್ಟಣಗಳ ಬೇಡ ಬುಡಕಟ್ಟು ಮಹಿಳೆಯರು ಇತರ ಸಮುದಾಯ ಮಹಿಳೆಯರಿಗಿಂತ ಕಡಿಮೆ ಇಲ್ಲ. ಶಿಕ್ಷಣ ಪಡೆದು ಪ್ರಜ್ಞಾವಂತರಾಗುವವರು ಬಹಳ ಕಡಿಮೆ ಇದ್ದಾರೆ. ಆದರೂ ಪುರುಷ ಪ್ರಧಾನತೆಯ ಈ ಸಮಾಜದಲ್ಲಿ ಜೀವಿಸುವ ಈ ಸ್ತ್ರೀಯು ಬುದ್ದಿ ಮನಸ್ಸು, ಎಷ್ಟೆ ವೈಚಾರಿಕವಿದ್ದರೂ ಅನಿವಾರ್ಯವಾಗಿ ಪುರುಷ ಪ್ರಾಧಾನ್ಯತೆಯ ಮೌಲ್ಯ, ಕಟ್ಟುಪಾಡು ಮೊದಲಾದವುಗಳನ್ನು ಮೈಗೂಡಿಸಿಕೊಂಡು ಅವುಗಳಂತೆ ನಡೆದು ಪುರುಷರ ಪರವಾಗಿಯೇ ಕೆಲಸ ಮಾಡುತ್ತಾ, ಪುರುಷ ಪ್ರಾಧಾನ್ಯತೆಯ ವಿರುದ್ಧ ನಡೆದರೆ ಅಥವಾ ಭಯಾನಕ

ಪರಿಸ್ಥಿತಿಯನ್ನು ಅರಿತು ಸದಾ ತನ್ನ ಕೊರಳಿಗೆ ಎಚ್ಚರಿಕೆಯ ಕರೆಗಂಟೆ ತೂಗು ಹಾಕಿಕೊಂಡು ತಮ್ಮನ್ನು ತಾವೇ ಬಂಧಿಸಿಕೊಡು ಬಳಲುತ್ತಾ ಬಿಡುವಿಲ್ಲದೇ ನರಳುವ ಅವಸ್ಥೆಯನ್ನು ತಲುಪಿದ್ದಾರೆ.

ಸ್ತ್ರೀಯ ಲೈಂಗಿಕ ಸ್ವಾತಂತ್ರ್ಯದ ಹಕ್ಕನ್ನು ಕಿತ್ತುಕೊಂಡು ಆಕೆಯ ದೇಹ ಮತ್ತು ಮನಸ್ಸಿನ ಮೇಲೆ ಅತಿಯಾದ ನಿರ್ಬಂಧಗಳನ್ನು ಹೇರಿ ಆಕೆಯ ದೇಹ, ಭಯ ಆತಂಕಗಳ ಮೂಲವಾಗಿ ಮಾಡಿ, ಈ ಮೂಲಕ ಸ್ತ್ರೀಯ ದೇಹ ಸಂರಕ್ಷಿಸಲ್ಪಡುವ ವಸ್ತುವಾಗಿರುವ್ಯದರಿಂದ, ಅದು ಕೆಡುವ ಕಳೆದು ಹೋಗುವ ಭಯ ಒಡ್ಡಿದೆ. ಈ ಭಯದ ನೆಲೆಯಲ್ಲಿ ಹೆಣ್ಣಿನ ದೇಹ ಸಂಪತ್ತಾಯಿತು. ಈ ಸಂಪತ್ತು ಒಡೆಯನನ್ನು ಪಡೆಯಿತು. ಆ ಒಡೆತನ ಪಡೆದ ಪುರುಷ ಆಕೆಯನ್ನು ಆತನ ಸ್ವತ್ತಾಗಿ ಮಾಡಿಕೊಂಡು. ಆದರೂ ಸ್ತ್ರೀಯ ಯಾವುದೇ ಸ್ಥಳದಲ್ಲಾಗಲೀ ಸುರಕ್ಷಿತಳಲ್ಲ. ಭೀತಿಯ ನೆರಳು ಆಕೆ ಹೋದಂತೆಲ್ಲ ಆವರಿಸಿಕೊಂಡು ಬರುತ್ತದೆ. ಸಾರ್ವಜನಿಕ ಸ್ಥಳದಲ್ಲಾಗಲಿ ಕಾನೂನು ಮತ್ತು ವ್ಯವಸ್ಥೆಯ ರಕ್ಷಕರೆನಿಸಿಕೊಂಡವರ ಆಶ್ರಯದಲ್ಲಾಗಲೀ ಸುರಕ್ಷಿತವಲ್ಲ. ಸ್ತ್ರೀಯರ ಮೇಲೆ ದಾಖಲಾದ ಅಪರಾಧಗಳ ಸಂಖ್ಯೆಯು ಹೆಚ್ಚಾಗುತ್ತಿದೆ. ಮಹಿಳೆಯರು ತಮ್ಮ ಗಂಡಂದಿರೊಂದಿಗೆ ಸೃಷ್ಟಿ ಕಾರ್ಯದಲ್ಲಿ ತೊಡಗಿ ಚಲನವಲನಗಳ ಸ್ವಾತಂತ್ರ್ಯ ಸ್ವಲ್ಪಮಟ್ಟಿಗೆ ಅನುಭವಿಸುವುದು ಇದೆ. ಆದರು ರಾಜಕೀಯ, ಆರ್ಥಿಕ, ಸಾಮಾಜಿಕ ಸಾಹಿತ್ಯ ಕ್ಷೇತ್ರಗಳಲ್ಲೂ ಇವರನ್ನೆ ಅನುಕೂಲಕ್ಕೆ ಬಳಸಿಕೊಳ್ಳಲಾಗುತ್ತದೆ. ಕಾರಣ ಆರ್ಥಿಕ ದಮನಕ್ಕೂ ಒಳಗಾಗುತ್ತಿರುವುದು ಸಹಜವೆನಿಸಿದೆ. ಮೇಲಿನ ಎಲ್ಲಾ ಬಗೆಯ ಶೋಷಣೆಗಳು ಸಾಮಾನ್ಯವಾಗಿ ಬುಡಕಟ್ಟು ಸ್ತ್ರೀಯರ ಸಹಿತ ಅನುಭವಿಸುತ್ತಿರುವುದು. ದುರ್ದೈವದ ಸಂಗತಿ. ಈ ಸಾಮಾನ್ಯ ಶೋಷಣೆಯ ಜೊತೆಗೆ ಸಮಾಜದ ದ್ವಿಮುಖ ನೀತಿಯಿಂದಾಚೆಗೆ ಬೇಡ ಮಹಿಳೆಯರಿಗಾಗಿ ಕೆಲವು ವಿಶೇಷ, ಪ್ರತ್ಯಕ ಸಮಸ್ಯಗಳು ಇವೆ.

ನಗರೀಕರಣ, ವಿಭಕ್ತ ಕುಟುಂಬಗಳ ಹೆಚ್ಚಳ, ಶಿಕ್ಷಣ, ಉದ್ಯೋಗ ವಸಾಹತು ಪರಿಣಾಮದಿಂದ ಸ್ತ್ರೀಯರು ಮನೆಯಿಂದ ಹೊರ ಬಂದು ಕಾರ್ಖಾನೆ, ಕಚೇರಿ, ಕೈಗಾರಿಕೆಗಳಲ್ಲಿ, ವ್ಯಾಪಾರ, ಕೃಷಿ, ಹೈನುಗಾರಿಕೆ, ಹೊಲ ಮತ್ತು ಜೊತೆಗೆ ಮೀಸಲಾತಿ ವ್ಯವಸ್ಥೆಯಿಂದಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗಹಿಸುವ ಅಧಿಕಾರ ಪಡೆಯುವಲ್ಲಿಯೂ ಸಮರ್ಥಳಾಗಿ ಹಲವಾರು ಸಂಘ ಸಂಸ್ಥೆಗಳನ್ನು, ಸ್ತ್ರೀಶಕ್ತಿ, ಸ್ವ ಶಕ್ತಿಗಳನ್ನು ಸ್ಥಾಪಿಸಿಕೊಂಡು ಸ್ವಾವಲಂಬಿಯಾಗಿ ಬದುಕುತ್ತಿದ್ದಾರೆ. ತಮ್ಮ ಮನೆಯ ಕೆಲವು ಪುರುಷರು ಹಲವಾರು ದುಶ್ಚಟಗಳಿಗೆ ದಾಸರಾಗಿ, ಮನೆಯ ಜವಾಬ್ದಾರಿಯಿಂದ ಜಾರಿಕೊಂಡು ತಮ್ಮ ಸ್ತ್ರೀಯರನ್ನು ಪೀಡಿಸುತ್ತಾ, ಕಾಡಿಸುತ್ತಾ ಅಲೆದಾಡುವುದು ಕಂಡು ಬರುತ್ತದೆ. ಇಂಥ ಇದು ಭಾರತೀಯ ಮಹಿಳೆಯರ ರಾಷ್ಟ್ರೀಯ ಫೇಡರೇಷನ್ ಸ್ತ್ರೀಯರ ಸುಧಾರಣೆ ಮತ್ತು ಸ್ಥಿತಿಗತಿ ಉತ್ತರಿಸಲು ಪ್ರಯತ್ನಿಸುತ್ತಿದೆ. ಜೊತೆಗೆ ವಿಶ್ವಸಂಸ್ಥೆಯು ೧೯೭೫ರ ವರ್ಷವನ್ನು ಅಂತರ್ ರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸುವ ಮೂಲಕ ಮಹಿಳಾ ಶೋಷಣೆ, ಅಸಮಾನತೆ ದಬ್ಬಾಳಿಕೆ ವಿರುದ್ಧ ಸಿಡಿದೆದ್ದು, ಸಂಘಟಿತರಾಗಿ ಹೋರಾಡುವ ಮೂಲಕ ಎಲ್ಲಾ ವರ್ಗಗಳ ಸ್ತ್ರೀಯರ ಘನತೆ, ಗೌರವ ಹೆಚ್ಚಳಕ್ಕೆ ಕಾರಣವಾಗುವ ಮಂದಗತಿಯ ಸುಧಾರಣೆಯ ಮೆಟ್ಟಲು ಏರುತ್ತಿರುವುದು ಸಮಾಧಾನಕರ ವಿಷಯವಾಗಿದೆ.

ಶತಮಾನಗಳ ಕಾಲ ಬೇಡ ಸಮುದಾಯವು ನಾಡಿನಿಂದ ಹೊರ ಉಳಿದು, ಅರಣ್ಯ ಪ್ರದೇಶಗಳಲ್ಲಿ ತಮ್ಮದೆ ಆದ ಆಚಾರ ವಿಚಾರ ಸಂಪ್ರದಾಯಗಳನ್ನು ರೂಢಿಸಿಕೊಂಡು, ಜೀವನಾಧಾರಕ್ಕೆ ಪಶುಸಂಗೋಪನೆ, ಭೇಟೆಯನ್ನು ಅವಲಂಬಿಸಿ ವಲಸೆ ಜೀವನ ನಡೆಸಿರುವುದು, ಅರಣ್ಯಗಳು ನಾಶಹೊಂದಿದಂತೆಲ್ಲ ಬೇಡರು ನಾಡಿನೊಂದಿಗೆ ಸಂಪರ್ಕ ಬೆಳೆಸಿಕೊಂಡು ಬದುಕುವುದು ಅನಿವಾರ್ಯವಾಯಿತು. ತಮ್ಮದೇ ಆದ ಜೀವನ ಮೌಲ್ಯಗಳ ನೆಲೆಯಲ್ಲಿ ಸ್ವಾವಲಂಬಿ ಬದುಕನ್ನು ಬದುಕಿನ ಬೇಡರು ಶಿಕ್ಷಣ, ಬಂಡವಾಳ, ವ್ಯವಹಾರ ಜ್ಞಾನ ಮುಂತಾದವುಗಳಲ್ಲಿ ಹಿಂದುಳಿದುದರಿಂದ ನಾಡಿನಲ್ಲಿ ಪರಾವಲಂಬಿ ಬದುಕನ್ನು ಬದುಕಬೇಕಾಯಿತು.

ಆರ್ಥಿಕತೆಯ ಬಲವರ್ಧನೆಗೆ ಪೂರಕವಾದ ಕೃಷಿ, ಶಿಕ್ಷಣ, ವಾಣಿಜ್ಯ, ವ್ಯಾಪಾರ, ಉದ್ಯೋಗ ಮುಂತಾದವುಗಳಲ್ಲಿ ಬೇಡ ಸಮುದಾಯ ತುಂಬಾ ಹಿಂದುಳಿದಿದೆ. ಪರಿಣಾಮವಾಗಿ ಆಹಾರ, ಶಿಕ್ಷಣ, ಆರೋಗ್ಯ ಮುಂತಾದ ಮೂಲಭೂತ ಸೌಲಭ್ಯಗಳನ್ನು ಹೊಂದಿರದೆ ಕಡುಬಡತನವನ್ನು ಅನುಭವಿಸುತ್ತಿದೆ. ಜೀವನ ಕ್ರಮ ಮತ್ತು ಜೀವನಾಧಾರಕ್ಕೆ ಅವಲಂಬಿಸಿರುವ ವೃತ್ತಿಗಳನ್ನು, ರಾಜಕೀಯ, ಆರ್ಥಿಕ, ಸಾಮಾಜಿಕ ಶೈಕ್ಷಣಿಕವಾಗಿ ಆದಂತಹ ಏಳು-ಬೀಳುಗಳನ್ನು, ಅವಲೋಕಿಸಿದಾಗ ಆರ್ಥಿಕ ಸ್ಥಿತಿಗತಿಯನ್ನು ಸ್ಪಷ್ಟವಾಗಿ ತಿಳಿಯಬಹುದು. ಬುಡಕಟ್ಟಿನ ಬೇಡರು ತಾವು ವಾಸಿಸುವುದಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಬಹುತೇಕ ಪ್ರದೇಶಗಳು ಅತ್ಯಂತ ಕಡಿಮೆ ಮಳೆ ಬೀಳುವಂತಹ ಗುಡ್ಡಗಾಡಿನ ಬಂಜರು ಭೂಮಿ ಪ್ರದೇಶಗಳಾಗಿವೆ. ೪-೫ ಎಕರೆ ಭೂಮಿಯನ್ನು ಹೊಂದಿರುವ ಸಣ್ಣ ರೈತರೇ ಅಧಿಕವಾಗಿದ್ದು, ನೂರಾರು ಎಕರೆ ಭೂಮಿಯನ್ನು ದೊಡ್ಡ ರೈತರು ತುಂಬಾ ವಿರಳ. ಇವರು ರಾಗಿ, ಜೋಳ, ಸಜ್ಜೆ, ಹುರುಳಿ, ನವಣೆ ಮುಂತಾದ ಸಾಮಾನ್ಯ ದವಸ ಧಾನ್ಯಗಳನ್ನು ಬೆಳೆದರೂ ಇವರು ವಾಸಿಸುವ ಹಟ್ಟಿ ಹಳ್ಳಿಗಳಿಗೆ ಸಮೀಪವಾಗಿ ಮಾರುಕಟ್ಟೆ ಸೌಕರ್ಯವಿಲ್ಲದೆ ಸಾಲ ಪಡೆದ ಮುಲಾಜಿಗೆ ಸ್ಥಳೀಯ ಬಂಡವಾಳಗಾರರಿಗೆ ಅನಧಿಕೃತ ಸಂಚಾರಿ ದಲ್ಲಾಳಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಪರಿಶ್ರಮಕ್ಕೆ ತಕ್ಕ ಪ್ರತಿಫಲನ ದೊರೆಯುತ್ತಿಲ್ಲ. ಇವರ ಉಪಕಸುಬು ಕುರಿ-ಮೇಕೆಗಳ ಸಾಕಾಣಿಕೆ ಮಾರಕ ದೋಷಗಳಿಂದ ಅವನತಿಯ ಹಾದಿಯಲ್ಲಿದೆ. ಸಕಾಲಕ್ಕೆ ಬಾರದ ಮಳೆ, ಅವೈಜ್ಞಾನಿಕ ವ್ಯವಸಾಯ ಪದ್ದತಿ, ಸರಕಾರದ ಸವಲತ್ತುಗಳು ತಲುಪದೆ ಇರುವುದು, ಸಾಲದ ಬಾದೆ ಹಲವಾರು ಸಮಸ್ಯೆಗಳಿಂದ ಈ ಸಮುದಾಯದ ರೈತರ ಜೀವನ ಅತ್ಯಂತ ಶೋಚನೀಯವಾಗಿದೆ.

ಬೇಡರಲ್ಲಿ ಶಿಕ್ಷಣ ಮತ್ತು ಬಂಡವಾಳದ ಕೊರತೆಯಿಂದಾಗಿ ದೊಡ್ಡ ಪ್ರಮಾಣದ ವ್ಯವಹಾರ ನಡೆಸುವಂತಹ ವ್ಯಾಪಾರಗಾರರ ಸಂಖ್ಯೆ ಅತ್ಯಂತ ಕಡಿಮೆ ಬಹಳಷ್ಟು ಜನರು ದೈನಂದಿನ ಜೀವನಾಧಾರಕ್ಕೆ ತರಕಾರಿ, ಅರಣ್ಯದಲ್ಲಿ ಸಿಗುವ ಹಣ್ಣು ಹಂಪಲು, ಬೀಡಾಸ್ಟಾಲ್, ಚಿಕ್ಕ ಪುಟ್ಟ ಕಿರಾಣಿ ಅಂಗಡಿ ವ್ಯಾಪಾರಗಳಲ್ಲಿ ನಿರತರಾಗಿದ್ದಾರೆ. ಇತ್ತೀಚಿಗೆ ವಿದ್ಯಾವಂತ ಯುವಕರು ವ್ಯವಹಾರವುಳ್ಳವರಾಗಿದ್ದು, ದೊಡ್ಡ ಪ್ರಮಾಣದ ವ್ಯಾಪಾರ ವ್ಯವಹಾರ ಮಾಡಲು ಉತ್ಸುಕರಾಗಿದ್ದರೂ ಬಂಡವಾಳ ಕೊರತೆ ಅವರನ್ನು ಕುಗ್ಗಿಸಿ ನಿರಾಶೆಯುಂಟುಮಾಡಿದೆ. ಆಸ್ತಿ ವ್ಯವಹಾರ ಒಡವೆಗಳ

ಆಧಾರ ಅಥವಾ ಬಂಡವಾಳಗಾರರ ಜಾಮೀನು ಇಲ್ಲದೆ ಬ್ಯಾಂಕ್ ಮತ್ತು ಸರಕಾರಿ ಸರಕಾರೇತರ ಲೇವಾದೇವಿ ಹಣಕಾಸು ಸಂಸ್ಥೆಗಳು ಸಾಲವನ್ನು ನೀಡದಿರುವುದು ಈ ಸಮುದಾಯದ ವಿದ್ಯಾವಂತ ಯುವಕರಿಗೆ ಭ್ರಮನಿರಸವನ್ನುಂಟು ಮಾಡಿದೆ.

ಬೇಡ ಸಮುದಾಯವು ತನ್ನ ಆದರ್ಶ ಜೀವನ ಮೌಲ್ಯಗಳನ್ನು ಗಾಳಿಗೆ ತೂರಿ, ಆಧುನಿಕ ಮೋಜಿನ ಜೀವನಕ್ಕೆ ಮಾರುಹೋಗಿ, ದುಶ್ಚಟಗಳಿಗೆ ದಾಸರಾಗಿರುವುದೇ ಆರ್ಥಿಕ ದೀವಾಳಿ ತನಕ್ಕೆ ಕರಾಳ ಶಾಪವಾಗಿದೆ. ಇವರು ಶ್ರಮಜೀವಿಗಳು ಆದರೆ ದುಡಿದದ್ದನ್ನು ಸದುಪಯೋಗ ಮಾಡಿಕೊಳ್ಳುವ ಜೀವನದ ಜಾಣ್ಮೆ ಬಹಳಷ್ಟು ಜನಕ್ಕಿಲ್ಲ. ದುಡಿತದ ಬಹು ಭಾಗವನ್ನು ಮದ್ಯಪಾನಕ್ಕೆ ವ್ಯಯ ಮಾಡುತ್ತಾರೆ. ಅಲ್ಲದೆ ಕೌಟುಂಬಿಕ ಸಮಸ್ಯೆಗಳಿಗಿಂತ ಕುಡಿತ ಜೂಜು ಮುಂತಾದ ದುಶ್ಚಟಗಳಿಗೆ ಸಾಲ ಮಾಡಿರುವುದರಿಂದ ಬಡತನ ದಾರಿದ್ರ್ಯಗಳಿಂದ ಮೇಲೇಳಲಾಗುತ್ತಿಲ್ಲ. ಇದಕ್ಕೆ ಏಕೈಕ ಪರಿಹಾರವೆಂದರೆ ಮದ್ಯಪಾನ ನಿಷೇಧ ರಾಷ್ಟ್ರೀಯ ನೀತಿಯಾಗಬೇಕು ಆಗ ಒಂದು ಸಮುದಾಯ ಮಾತ್ರವಲ್ಲ ಸಮಸ್ತ ಸಮುದಾಯ ಏಳಿಗೆ ಹೊಂದಲು ಸಾಧ್ಯವಾಗತ್ತದೆ. ವರ್ಷದಲ್ಲಿ ಮೂರು ನಾಲ್ಕು ತಿಂಗಳು ವ್ಯವಹಾರದ ಕೆಲಸಗಳನ್ನು ಮುಗಿಸಿಕೊಂಡು ೬-೭ ತಿಂಗಳು ದುಡಿಮೆ ಇಲ್ಲದೆ ಕಾಲಕಳೆಯುತ್ತಾರೆ. ಅವರನ್ನು ದುಡಿಮೆಗೆ ತೊಡಗಿಸಿ ಆರ್ಥಿಕ ಪ್ರಗತಿಗೆ ಅನುವಾಗುವಂತಹ ಯೋಜನೆಗಳನ್ನು ಸರಕಾರ ಹಮ್ಮಿಕೊಳ್ಳಬೇಕಾಗಿದೆ. ಉದಾಹರಣೆಗೆ ಚಳ್ಳಕೆರೆಯ ಪ್ರಥಮ ದರ್ಜೆ ಕೃಷಿ ಮಾರುಕಟ್ಟೆಯ ನೇರ್ಲಗುಂಟೆ ಪಶುಸಂಗೋಪನೆ, ಉಳ್ಳಾರ್ಥಿ ಪಶುಸಂಗೋಪನೆ, ಮಹದೇವಪುರದ ತೋಟಗಾರರಿಗೆ ಇವು ಆ ಭಾಗದ ಬೇಡ ಬುಡಕಟ್ಟಿನ ಆರ್ಥಿಕ ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಅದೇ ರೀತಿ ಸರಕಾರ ಛಾಯಗ್ರಹಣ, ಹೊಲಿಗೆ, ಬಡಿಗೆ, ಹೈನುಗಾರಿಕೆ, ರೇಷ್ಮೆ, ಕಂಪ್ಯೂಟರ್ ಮುಂತಾದ ವೃತ್ತಿಪರ ತರಬೇತಿಗಳನ್ನು ಸರಕಾರ ಈ ಸಮುದಾಯ ವಿದ್ಯಾವಂತ ಯುವ ಜನರಿಗೆ ವಿನಾಯ್ತಿಯಲ್ಲಿ ಸಾಲ-ಸೌಲಭ್ಯ ಒದಗಿಸಿದೆ. ನಿರುದ್ಯೋಗ ಸಮಸ್ಯೆಗೆ ಪರಿಹಾರ ನೀಡಿದಂತಾಗಿದೆ. ನಾಯಕ ಬುಡಕಟ್ಟು ಇತ್ತೀಚೆಗೆ ಶೈಕ್ಷಣಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಸಾಧಿಸುವಂಥಹದ್ದು ನಿರಾಶಾದಾಯಕವೇನಲ್ಲ, ಬೇಡ ಸಮಾಜದ ಮುಖ್ಯ ವಾಹಿನಿಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಅಸ್ತಿತ್ವದ ಭದ್ರತೆಯನ್ನು ನೆಲೆಗೊಳಿಸಿಕೊಳ್ಳಬೇಕೆಂಬ ಕಾತುರತೆಯಿಂದ ಸಮುದಾಯದ ಸಮಸ್ತ ಸಂಘ ಸಂಸ್ಥೆಗಳು ಶ್ರಮಿಸುತ್ತಿವೆ. ಆದರೆ ನಿಶ್ಚಿತ ಗುರಿಯನ್ನು ಮುಟ್ಟಬೇಕಾದರೆ ರಾಜಕೀಯ ದೃಢಸಂಕಲ್ಪದಿಂದ ಮಾತ್ರ ಸಾಧ್ಯ. ಆದ್ದರಿಂದ ಸಮುದಾಯದ ಸಾರಥ್ಯವನ್ನು ವಹಿಸಿಕೊಂಡಿರುವಂತಹ ರಾಜಕೀಯ ಧುರೀಣರು ತಮ್ಮ ಪಕ್ಷ ಭೇದ ಮರೆತು ಸಮಾಜ ಸುಧಾರಕರನ್ನು, ಬುದ್ಧಿಜೀವಿಗಳನ್ನು ಜೊತೆಗೂಡಿಸಿಕೊಂಡು ಪ್ರಾಮಾಣಿಕವಾಗಿ ಹೋರಾಡಿದರೆ ಆರ್ಥಿಕ ಸಬಲೀಕರಣ ಖಂಡಿತ ಸಾಧ್ಯ. ಒಬ್ಬನಿಗಾಗಿ ಎಲ್ಲರೂ, ಎಲ್ಲರಿಗಾಗಿ ಒಬ್ಬನು ಎಂಬ ತತ್ವವೂ ಮಂತ್ರವಾಗಿ. ಸಹಕಾರ ತತ್ವ, ಕಾಯಕ ತತ್ವಗಳನ್ನು ಮೈಗೂಡಿಸಿಕೊಳ್ಳಬೇಕು.

ಬೇಡ ನಾಯಕರು ಕಳೆದ ಶತಮಾನಗಳಲ್ಲಿ ಕುರಿ ಸಾಕಿದ್ದಕಿಂತ, ವ್ಯವಸಾಯ ಮಾಡಿದ್ದಕ್ಕಿಂತ ಕೇವಲ ಪಶುಪಾಲನೆ ಮಾಡಿದ್ದೆ ಹೆಚ್ಚು ಎಂಬುದು ಈಗಲೂ ಸ್ಪಷ್ಟವಾಗುವ ಸಂಗತಿ. ಇತ್ತೀಚಿನ ದಿನಗಳಲ್ಲೂ ಕುರಿ ಸಾಕಾಣಿಕೆಯನ್ನು ಜೀವನ ನಿರ್ವಹಣೆಗೆ ಒಂದು ಲಾಭದಾಯಕ ವೃತ್ತಿಯನ್ನಾಗಿಸಿಕೊಂಡು ಕೈಗೊಂಡಿದ್ದರೆ. ಪಶುಸಂಗೋಪನೆಯನ್ನು ಧಾರ್ಮಿಕ ವೃತ್ತಿಯನ್ನಾಗಿಸಿಕೊಂಡು ಬಂದಿರುವುದನ್ನು ನೋಡಬಹುದಾಗಿದೆ. ಈಗಲೂ ಅರಣ್ಯದಲ್ಲಿ ಪಶುಸಂಗೋಪನೆ ಮಾಡುವವರನ್ನು ಕಿಲಾರಿಗಳೆಂದು. ಆ ಕಿಲಾರಿ ಪಶುಪಾಲಗೆ ಹೋಗುವ ಮುನ್ನ ಹಟ್ಟಿಯ ಗುಡಿ ಪೂಜಾರಿಯಿಂದ ಧೀಕ್ಷೆಪಡೆದಿರಬೇಕೆಂದು ನಿಯಮವಿದೆ. ಈ ಧೀಕ್ಷಾ ನಿಯಮವನ್ನು ತಪ್ಪದೇ ಪಾಲಿಸುವರು, ಕಿಲಾರಿಗಳು ಕಾಯುವ ಎತ್ತುಗಳನ್ನು ದೇವರೆತ್ತುಗಳೆಂದು ಕರೆಯುವರು. ಅವುಗಳ ನಡುವಣ ಹಸುಗಳಿಂದ ಕರೆದ ಹಾಲನ್ನು ಮಾರಾಟ ಮಾಡುವಂತಿಲ್ಲ. ಕೊನೆಗೆ ಅವುಗಳ ಗಂಜಲ, ಸಗಣಿಯನ್ನು ಗೊಬ್ಬರ ಬಳಸುವಂತಿಲ್ಲ.

ಈ ಹೊತ್ತಿನವರೆಗೂ ಚಳ್ಳಕೆರೆ, ಮೊಣಕಾಲ್ಮೂರು ಸುತ್ತಿನ ಅರಣ್ಯಗಳಲ್ಲಿ ಕಿಲಾರಿಗಳು ದೇವರೆತ್ತು ಮತ್ತು ಹಸುಗಳನ್ನು ಅಷ್ಟೇ ಗೌರವದಿಂದ ಕಂಡು ಆ ಸಂಬಂಧದ ನಿಯಮಗಳನ್ನು ಪಾಲಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಇದೇ ಪಶುಪಾಲನಾ ವೃತ್ತಿಯನ್ನು ಸರಕಾರ ನೂರು ವರ್ಷಗಳ ಹಿಂದೆಯೇ ಬೇರೆಯ ರೀತಿಯಲ್ಲಿ ಅಭಿವೃದ್ಧಿಗೊಳಿಸಿ ಇದನ್ನೊಂದು ಲಾಭದಾಯಕ ವೃತ್ತಿಯನ್ನಾಗಿ ಮಾಡಿಕೊಂಡು ಬರುವಂತೆ ಪ್ರಯತ್ನ ಮಾಡುವುದಾಗಿ ತಿಳಿದು ಬರುತ್ತದೆ. ಪಾಲನೆಯ ಕ್ರಮದಲ್ಲಿ ಯಾವುದೇ ವ್ಯತ್ಯಾಸ ಇಲ್ಲದಂತೆ ಬೇಡ ನಾಯಕರು ಅರಣ್ಯದಲ್ಲಿಯೇ ಬೀಡು ಬಿಟ್ಟು ಕಿಲಾರಿಗಳಂತೆಯೇ ಹಸು ಎತ್ತುಗಳನ್ನು ಕಾಯುತ್ತಾರೆ. ಆದರೆ ಹಾಗೆ ಎತ್ತು ಕಾಯುವವರು ಕಿಲಾರಿಗಳೆಂದೇ ಕರೆಸಿಕೊಳ್ಳಲ್ಪಟ್ಟು ದೀಕ್ಷೆ ಪಡೆದಿರುವುದಿಲ್ಲ. ಉಳಿದಂತೆ ಅರಣ್ಯದಲ್ಲೆ ಬೆಳೆಯು ಆ ಹಸುಗಳಿಗೆ ಹುಟ್ಟಿದ ಹೋರಿ ಕರುಗಳನ್ನು ವರ್ಷಕ್ಕೊಮ್ಮೆ ಸರಕಾರವೇ ಮಾರಾಟ ಮಾಡುತ್ತದೆ. ದನಕರು ಕೊಡುವ ದೊಪ್ಪದಿಂದ ಉತ್ಪನ್ನವಾದ ಗೊಬ್ಬರವನ್ನು ಮಾರಾಟ ಮಾಡುವುದುಂಟು. ಆದರೆ ಹಸುಗಳಿಂದ ಹಾಲುಗಳನ್ನು ಕರೆಯುವುದಿಲ್ಲ. ತಾಯಿಯ ಹಾಲನ್ನು ಸಂಪೂರ್ಣವಾಗಿ ಕರುಗಳೇ ಕುಡಿದು ಚೆನ್ನಾಗಿ ಬೆಳೆಯುತ್ತವೆ. ಇಂತಹ ಉತ್ಪನ್ನ ರಾಸುಗಳ ತಳಿಯನ್ನು ಅಮೃತ ಮಹಲ್ ತಳಿ ಎಂದು ಕರೆಯುತ್ತಾರೆ. ಈ ತಳಿಯಿಂದ ಬಂದ ಕರುಗಳು ವ್ಯವಸಾಯಕ್ಕೆ ಯೋಗ್ಯವಾದವುಗಳು. ಎಂಥ ಕೆಲಸಕ್ಕೂ ಬರುವವು. ಈ ಕ್ರಮದಲ್ಲೇ ಬೇಡ ನಾಯಕರು ಪಶುಪಾಲನೆ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ.

ಬೇಡ ನಾಯಕರು ಹಿಂದಿನಿಂದಲೂ ಪಶುಪಾಲನೆ, ಮಧ್ಯೆ ಮಧ್ಯೆ ಸೈನಿಕ ವೃತ್ತಿ, ತಳವಾರಿಕೆ ಮಾಡಿಕೊಂಡು ಬಂದಿದ್ದು ಈಗ ಆ ವೃತ್ತಿಗಳೆಲ್ಲವೂ ತಪ್ಪಿ ಅವರೆಲ್ಲರೂ ಬಹುಮಟ್ಟಿಗೆ ಸಣ್ಣ ಪ್ರಮಾಣದ ವ್ಯವಸಾಯದಲ್ಲಿ ತೊಡಗಿರುತ್ತಾರೆ. ಆದರೆ ಈಗೀಗ ಕರ್ನಾಟಕದ ಎಲ್ಲಾ ಕಡೆಯಂತೆ ಚಿತ್ರದುರ್ಗ ಪ್ರದೇಶದಲ್ಲಿಯೂ ಮಳೆ ಬೀಳುವುದು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರುವುದರಿಂದ

ಬೇಡ ನಾಯಕರು ಬೆದ್ದಲು ವ್ಯವಸಾಯ ಕಷ್ಟವಾಗಿ ಅವರ ಜೀವನ ಕ್ರಮ ಏರುಪೇರಾದಂತಿದೆ. ಇದರಿಂದ ಹಟ್ಟಿಗಳಲ್ಲಿ ವಾಸಿಸುವ ಸಾಮಾನ್ಯ ಜನ ತಾಲೂಕ ಕೇಂದ್ರಗಳನ್ನು ಸೇರಿ ಬೇರೆ ಬೇರೆ ವೃತ್ತಿಗಳನ್ನು ಹಿಡಿಯಲಾರಂಭಿಸಿದ್ದಾರೆ. ಇಂಥವರ ಜೀವನ ಹೊಟ್ಟೆ ಬಟ್ಟೆ ಮಟ್ಟಿಗಾದರು ಸುಧಾರಿಸಿದ್ದರೆ, ಇನ್ನೂ ಬುಡಕಟ್ಟು ಸಂಪ್ರದಾಯಗಳಿಗೆ ಅಂಟಿಕೊಂಡು ಹಟ್ಟಿ ಬಿಟ್ಟು ಹೊರಕ್ಕೆ ಬಾರದವರ ಸ್ಥಿತಿ ತೀರ ಶೋಚನೀಯ ಸ್ಥಿತಿಯಲ್ಲಿದೆ. ವಿರಳವಾಗಿ ಆರ್ಥಿಕ ಅನುಕೂಲವಿರುವವರು ತಮ್ಮಲ್ಲಿರುವಷ್ಟು ಭೂಮಿಯಲ್ಲಿ ನೀರಿನ ಸಂರಕ್ಷಣೆ ಮಾಡಿಕೊಂಡು ರಾಗಿ, ಹುರುಳಿ, ಜೋಳ, ಹತ್ತಿ, ಕುಸುಬೆ, ಹಲಸಂದೆ, ಶೇಂಗಾ, ಮೆಣಸಿನಕಾಯಿ, ಈರೆಕಾಯಿ, ಕಲ್ಲಂಗಡಿ, ಬೆಳೆಯುತ್ತಾರೆ. ಮಳೆ ಚೆನ್ನಾಗಿ ಆದರೆ ಬಾವಿನೀರಿನ ವ್ಯವಸಾಯದವರಲ್ಲದೇ ಬೆದ್ದಲಿನವರೂ ಮೇಲೆ ಹೆಸರಿಸಿದ ದವಸ ಧಾನ್ಯಗಳನ್ನು ಬೆಳೆಯುವರು. ಚಿತ್ರದುರ್ಗ ಪ್ರದೇಶದಲ್ಲಿ ಸಹಜವಾಗಿ ತೆಂಗು, ಅಡಿಕೆ, ಭತ್ತ, ಕಬ್ಬು ಇಂಥ ಬೆಳೆಗಳು ತುಂಬಾ ಕಡಿಮೆ. ದೊಡ್ಡ ಪ್ರಮಾಣದಲ್ಲಿ ವ್ಯವಸಾಯ ಮಾಡುವ ಬೇಡ ನಾಯಕರು ಚಿತ್ರದುರ್ಗದಲ್ಲಿ ಇದ್ದರೂ ಅವರ ಸಂಖ್ಯೆ ತೀರ ಕಡಿಮೆ. ಮಧ್ಯಮ ಮಟ್ಟದ ಬಾವಿನೀರಿನ ವ್ಯವಸಾಯಗಾರರು ಮತ್ತು ಬೆದ್ದಲು ವ್ಯವಸಾಯ ವೃತ್ತಿಯಿಲ್ಲದವರು ಕಟ್ಟಿಗೆ ಮಾರಿಕೊಂಡು ಕೂಲಿ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇದರ ಜೊತೆಗೆ ಚಳ್ಳಕರೆ ಸುತ್ತಲಿನಲ್ಲಿ ಬೇಡ ನಾಯಕರು ಸಣ್ಣ ಪ್ರಮಾಣದಿಂದ ಹಿಡಿದು ದೊಡ್ಡ ಪ್ರಮಾಣದವರೆಗೂ ಕುರಿ ಸಾಕುವ ವೃತ್ತಿಯಲ್ಲಿಯೂ ತೊಡಗಿದ್ದಾರೆ.

ಅತ್ತೆ ಮಾವಂದಿರ ಮನೆಯಲ್ಲಿ ಎಷ್ಟು ಜನರಿದ್ದರೂ ಅವರ ಅಕ್ಕ ತಂಗಿಯರಾಗಿರುತ್ತಾರೆ. ಯಾಕೆಂದರೆ ಅವರ ಅಣ್ಣ ತಮ್ಮಂದಿರ ಹೆಂಡತಿಯರು, ಅತ್ತಿಗೆ ಮೈದುನನಿಗೆ ತಾಯಿಯ ಸಮಾನ. ಅತ್ತೆಯನ್ನು ಬಿಟ್ಟರೆ ಈಕೆಗೆ ಮನೆಯೊಳಗೆ ಹೆಚ್ಚು ಮರ್ಯಾದೆ ದೊರೆಯುತ್ತದೆ. ಮನೆಯ ಅಳಿತನವು ಬೇಡ ನಾಯಕರಲ್ಲುಂಟು. ಗಂಡು ಮಕ್ಕಳಿದ್ದರೂ ಅತ್ತೆ ಮಾವಂದಿರು ತಮ್ಮ ಮಗಳ ಮೇಲಿನ ವ್ಯಾಮೋಹದಿಂದ ಆಕೆಗೂ ತಮ್ಮ ಆಸ್ತಿಯಲ್ಲಿ ಭಾಗ ಕೊಡುವುದಿದೆ. ಅದು ಅಳಿಯನ ಸ್ಥಿತಿಗತಿಗಳ ಮೇಲೂ ಮಾವಂದಿರ ಆರ್ಥಿಕ ಭದ್ರತೆಯ ಮೇಲು ಜರುಗುವಂತಹದ್ದು.

ಬೇಡ ನಾಯಕರು ಹೆಣ್ಣಿಗೆ ಕೊಟ್ಟಿರುವ ಅವಕಾಶ ಸ್ಥಾನಮಾನಗಳು ವಿಶೇಷವಾದುದಾಗಿದೆ. ಹುಟ್ಟಿದ ಮಗು ಸಹಜವಾಗಿ ತಂದೆಯ ಕುಲಕ್ಕೆ ಸೇರುತ್ತದೆ. ಒಂದು ವೇಳೆ ಮಕ್ಕಳಿರುವ ಹೆಂಗಸಿಗೆ ಗಂಡ ತೀರಿಕೊಂಡರೆ ತಂದೆಯಿಂದ ಆಕೆಗೆ ಆಸ್ತಿಯ ಭಾಗವು ವಿಧವೆಯಾದವಳಿಗೆ ಬರುತ್ತದೆ. ಆಕೆ ಅದನ್ನು ಪಡೆದು ತಂದೆಯ ಮನಗೆ ಬಂದು ಜೀವಿಸುವಂತಿಲ್ಲ. ಬಹುಮಟ್ಟಿಗೆ ಅತ್ತೆ ಮಾವನರ ಮನೆಯಲ್ಲಿಯೇ ಬದುಕಬೇಕಾಗುತ್ತದೆ. ಒಂದು ವೇಳೆ ಮಕ್ಕಳಿಲ್ಲದಿದ್ದರೆ ಆಸ್ತಿಯ ಭಾಗ ಬರುವುದಿಲ್ಲ. ಜೀವನಾಂಶ ಬರುತ್ತದಷ್ಟೆ. ವಿಧವೆಯಾದವಳು ಮತ್ತೆ ಸೀರುಡಿಕೆ ಲಗ್ನವಾಗಬಹುದು. ಆದರೆ ಆ ಸೀರುಡಿಕೆ ಸಂಬಂಧ ಹೊಂದಿ ಮಕ್ಕಳನ್ನು ಪಡೆದರೆ ಆ ಮಕ್ಕಳನ್ನು ಕುಲಸ್ಥರು ಲಗ್ನ ಮಾಡಿಕೊಳ್ಳುವುದಿಲ್ಲ, ಅಥವಾ ಗಂಡು ಮಕ್ಕಳಾದರೆ ಕುಲಸ್ಥರು ಹೆಣ್ಣು ಕೊಡುವಂತಿಲ್ಲ. ಅಂತಹ ಸೀರುಡಿಕೆಯವರಿಗೆ ಆದ

ಮಕ್ಕಳನ್ನು ಹುಡುಕಿ ಸಂಬಂಧ ಮಾಡಿಕೊಳ್ಳಬೇಕು. ಆದರೆ ಅದೇ ಸೀರುಡಿಕೆ ಹೆಂಗಸಿಗೆ ಸಂಪ್ರದಾಯಿಕ ವಿವಾಹ ಸಂದರ್ಭದಲ್ಲಿಯೇ ಗಂಡನಿಂದ ಮಕ್ಕಳಾಗಿದ್ದರೆ. ಕುಲಸ್ಥರು ಆ ಮಕ್ಕಳನ್ನು ಲಗ್ನ ಮಾಡಿಕೊಳ್ಳುವ ನಿಯಮವಿದೆ. ಸೀರುಡಿಕೆ ನಂತರ ಆದ ಮಕ್ಕಳಿಗೆ ಮಾತ್ರ ಕುಲಸ್ಥರ ಸಂಬಂಧವಿರುವುದಿಲ್ಲ. ಇಂತಹ ನಿಯಮಗಳಲ್ಲಿಯೂ ಬೇಡ ನಾಯಕರ ಕುಟುಂಬಗಳಿದ್ದು ಅವು ಈಗಲೂ ಪ್ರಚಲಿತವಿರುವುದಾಗಿ ತಿಳಿಸುತ್ತಾರೆ.

ಅಂತರ್ಜಾತಿ ವಿವಾಹ ಸಂದರ್ಭದಲ್ಲಿಯೂ ಕೂಡ ನಾಯಕ ಸಮುದಾಯ ಗಂಡು ಹೆಣ್ಣುಗಳಿಗೆ ಬಹಿಷ್ಕಾರ ಹಾಕುವುದುಂಟು. ಒಂದು ವೇಳೆ ಈ ಮಾದರಿಯ ವಿವಾಹ ಆದವರು ಮತ್ತೆ ಜನಾಂಗದೊಳಗೆ ಬರಬೇಕೆಂದರೆ ಕಟ್ಟಿಕೊಂಡ ಅನ್ಯ ಜಾತಿಯ ಹೆಣ್ಣನ್ನು ಬಿಟ್ಟು ಬರಬೇಕು. ಒಂದು ವೇಳೆ ಬೇಡ ನಾಯಕರ ಹೆಣ್ಣು ಬೇರೆ ಜಾತಿಯವರನ್ನು ವಿವಾಹವಾಗಿದ್ದು ಮತ್ತೆ ಜಾತಿಯನ್ನು ಸೇರಿಕೊಳ್ಳಬೇಕಾದರೆ ಆಕೆಯನ್ನ ಗಂಡಿನಂತೆ ಒಳಕ್ಕೆ ಸೇರಿಸಿಕೊಳ್ಳುವುದಿಲ್ಲ. ಕುಲಬಿಟ್ಟು ಹೋದ ಹೆಣ್ಣು ಹೊರಗೆ ಉಳಿಯಬೇಕು. ಒಂದು ವೇಳೆ ಕಟ್ಟಿಕೊಂಡವನು ಬಿಟ್ಟು ಆಕೆಯ ಜೀವನ ಸ್ಥಿತಿ ಕೆಟ್ಟಿದೆ ಅಂಥ ಸಮಯದಲ್ಲಿಯೂ ಕೆಟ್ಟ ಹೆಂಗಸನ್ನೂ ಸಮಾಜದೊಳಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದು ವಕ್ತೃಗಳು ತಿಳಿಸುತ್ತಾರೆ. ಆದರೆ ಗಂಡಿಗೆ ಮಾತ್ರ ಅನ್ಯ ಜಾತಿಯ ವಿವಾಹವಾಗುವ ಹೆಣ್ಣಿನ ಬಗ್ಗೆ ಕಟ್ಟುನಿಟ್ಟಿನಿಂದ ವರ್ತಿಸಿದಂತೆ ಕಾಣಿಸುತ್ತದೆ. ಈ ಸಂಬಂಧದ ಪ್ರಶ್ನೆಗಳಿಗೆ ಬೇಡ ನಾಯಕರು ಹೆಂಗಸರು ಎಷ್ಟಿದ್ದರೂ ಎರಡನೇ ಪ್ರಜ್ಞೆ, ಆಕೆ ಹಿರಿಯರು ಹೇಳಿದಂತೆ ಕೇಳಿಕೊಂಡು ಇರಿವುದೇ ಒಳ್ಳೆಯದು ಎನ್ನುತ್ತಾರೆ. ಆದರೆ ಪರಸ್ಥಿತಿ ಮತ್ತು ಕಾಲಕ್ಕನುಗುಣವಾಗಿ ಈ ನಿಯಮಗಳಲ್ಲಿ ಬದಲಾಗುತ್ತಿವೆ. ಎಂಬುದರ ತಿಳುವಳಿಕೆ ಇದ್ದು ಈಗೀಗ, ಜಾತಿ ಕುಲಮೀರಿ ಹೋದ ಹೆಣ್ಣು ಗಂಡುಗಳ ವಿಚಾರದಲ್ಲಿ ಕುಲಕಟ್ಟಳೆ ಏನು ಮಾಡುವಂತಿಲ್ಲ ಎಂತಲೂ ಹೇಳುತ್ತಾರೆ.

ಲಿಂಗ ಸಮಾನತೆ ಮಹಿಳೆಯರ ಸ್ವಾತಂತ್ರ್ಯ, ಅವರ ಧಾರಣ ಸಾಮರ್ಥ್ಯಗಳನ್ನು ವರ್ಧಿಸುವ ದೆಸೆಯಲ್ಲಿ ಕೂಲಿರಹಿತ ದುಡಿಮೆಯನ್ನು ಪುರುಷರು ಹಂಚಿಕೊಳ್ಳಬೇಕಾಗುತ್ತದೆ. ಇದರ ಮೂಲಕ ಮಹಿಳೆಯರ ಶ್ರಮ ಕಾಲವನ್ನು ಹೀಗೆ ಉಳಿಸಿಕೊಂಡಿರುವುದು ಒಂದು ಗುಣ. ಈ ಗುಣವನ್ನು ಪುರುಷರು ಮೈಗೂಡಿಸಿಕೊಳ್ಳಬೇಕಾಗಿದೆ. ಹೀಗೆ ಮೈಗೂಡಿಸಿಕೊಳ್ಳುವುದರ ಮೂಲಕ ಮಹಿಳೆಯರ ಸ್ವಾತಂತ್ರ್ಯದ ವ್ಯಾಪ್ತಿಯನ್ನು ವರ್ಧಿಸಬಹುದು ಮತ್ತು ಅವರ ಧಾರಣ ಶಕ್ತಿಯನ್ನು ಹೆಚ್ಚಿಸಬಹುದು. ಮಹಿಳೆಯರ ಸ್ವಾತಂತ್ರ್ಯದ ವ್ಯಾಪ್ತಿಯನ್ನು ವಿಸ್ತರಿಸುವುದರಿಂದ ಇಡೀ ಸಮಾಜಕ್ಕೆ ಆರ್ಥಿಕತೆಗೆ ಹಾಗೂ ಪುರುಷರ ವರ್ಗಕ್ಕೆ ಅನೇಕ ಅನುಕೂಲಗಳು ಲಭ್ಯವಾಗುತ್ತವೆ. ಮಹಿಳೆಯರನ್ನು ಕುರಿತಂತೆ ಸಮಾಜದಲ್ಲಿ ಮನೆ ಮಾಡಿಕೊಂಡಿರುವ ತಾರತಮ್ಯವಾದಿ ವಿಚಾರಗಳಿಂದ ಹೊರಬರಬೇಕಾಗಿದೆ. ಪುರುಷಸಾಹಿತ್ವವನ್ನು ರೂಪಿಸಿಕೊಳ್ಳಲು ಪುರುಷರಷ್ಟೆ ಸಮರ್ಥರು ಹಾಗೂ ಸ್ವಾತಂತ್ರ್ಯರು ಎಂಬುದನ್ನು ಎಲ್ಲರೂ ಮನಗಾಣಬೇಕಿದೆ. ಲಿಂಗ ಸಮಾನತೆ ಕುರಿತಂತೆ ನಮ್ಮ ಚಿಂತನೆಗಳಲ್ಲಿ ವೈಚಾರಿಕತೆಯಲ್ಲಿ,

ಆಚರಣೆಯಲ್ಲಿ ಪರಿವರ್ತನೆಯಾಗಬೇಕಿದೆ. ಲಿಂಗ ಸಂಬಂಧ, ಶ್ರಮ ವಿಭಜನೆ, ಜೈವಿಕ ನಿಯಮ, ಆಸ್ತಿ ಹಕ್ಕುಗಳು ಮುಂತಾದ ಸಂಗತಿಗಳಿಗೆ ಸಂಬಂಧಿಸಿದಂತೆ ಪರಿವರ್ತನೆಯಾಗಬೇಕು. ಸಮಾಜ ವಿಜ್ಞಾನಗಳು ಲಿಂಗಸಂಬಂಧಿ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ.

"ಮಹಿಳೆಯನ್ನು ಸಮಾಜ, ಸರಕಾರಗಳು ಸಂಪನ್ಮೂಲವೆಂದು ಪರಹಿತಕ್ಕಾಗಿ ಬದುಕುವ ಸಾಧನವೆಂದು ಸಂತಾನೋತ್ಪತ್ತಿಯಲ್ಲೂ ಆಕಾರವೆಂದೂ ಗೃಹವಾರ್ತೆ ಸಂಗೋಪನಾ ಚಟುವಟಿಕೆಗಳನ್ನು ನಿರ್ವಹಿಸುವ ಸೇವಾವೃತ್ತಿಯೆಂದು, ಪತಿವ್ರತೆಯೆಂದೂ ಪರಿಭಾವಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಮಹಿಳೆಯರ ಧೀನ ಅಧೀನ ಸ್ಥಿತಿಯ ಮೂಲದಲ್ಲಿ ಚಾಲಕ ಶಕ್ತಿಯಾಗಿ ಕೆಲಸ ಮಾಡುತ್ತಿರುವ ಸಂಗತಿ ಇದಾಗಿದೆ ಎಂದು ಸ್ತ್ರೀವಾದಿಗಳು ಪ್ರತಿಪಾಧಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಅವಳನ್ನು ಸಂವೇದನಾಶೀಲ ವ್ಯಕ್ತಿಯೆಂದು, ಬದುಕಿನ ಕರ್ತೃವೆಂದು, ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಳ್ಳಬಲ್ಲ ಶಕ್ತಿಯೆಂದು ಪರಿಭಾವಿಸಿಕೊಳ್ಳುವ ಸಂಗತಿಯನ್ನು ಸ್ತ್ರೀವಾದಿಗಳು ಒತ್ತಾಯಿಸುತ್ತಿದ್ದಾರೆ."[೬]

ಮಹಿಳೆಯರಿಗೆ ತನ್ನದೇ ಆದ ಹಿತಾಸಕ್ತಿಗಳಿರಲು ಸಾಧ್ಯವಿಲ್ಲದ ಕಾರಣ ಅವಳ ಸ್ಥಾನವೇನಿದ್ದರೂ ಪರರ ಹಿತಕ್ಕಾಗಿ ಬೆವರು, ಕಣ್ಣೀರು ಮತ್ತು ರಕ್ತಹರಿಸುವ ಸಾಧನವೆಂದು ಅವಳನ್ನು ಪರಿಗಣಿಸಿಕೊಂಡು ಬರಲಾಗಿದೆ. ಮಹಿಳೆಯ ಹಿತಾಸಕ್ತಿಗಳೇನಿದ್ದರೂ ಅವು ಕುಟುಂಬಕ್ಕೆ, ಗಂಡ ಮಕ್ಕಳಿಗೆ ಮೀಸಲು.

ಕನ್ನಡ ಖ್ಯಾತ ಕವಿ. ಪಿ.ಲಂಕೇಶ ಅವರ ಪ್ರಸಿದ್ದ 'ಅವ್ವ'ದಲ್ಲಿನ ಸಾಲುಗಳು ಇದನ್ನು ಚೆನ್ನಾಗಿ ಚಿತ್ರಿಸುತ್ತವೆ.

"ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ

\- - - - - - - - - - - -

\- - - - - - - - - - - -

ನನ್ನವ್ವ ಬದುಕಿದ್ದಳು ಕಾಳು ಕಡ್ಡಿಗೆ, ದುಡಿತಕ್ಕೆ ಮಕ್ಕಳಿಗೆ"[೭]

ಮಹಿಳೆಯು ದುಡಿಯುವುದು ಮನೆತನಕ್ಕಾಗಿ, ಮಕ್ಕಳಿಗಾಗಿ, ಗಂಡನಿಗಾಗಿ, ಕುಟುಂಬಕ್ಕಾಗಿ ಎಂಬುದಿಲ್ಲಿ ಸ್ಪಷ್ಟವಾಗಿದೆ.

ಹೀಗೆ ಮಹಿಳೆಯರನ್ನು ಪರಹಿತವಾದಿ, ಸಂತಾನೋತ್ಪತ್ತಿಯ ಆಕರವೆಂದೂ, ಫಲಾನುಭವಿಯೆಂದೂ, ಆಶ್ರಿತಳೆಂದು, ಗೃಹವಾರ್ತೆಗೆ ತನ್ನನ್ನೆ ತಾನು ಕೊಟ್ಟುಕೊಂಡ ಗೃಹಿಣಿಯೆಂದು ಪರಿಭಾವಿಸಿಕೊಳ್ಳುವ ಶ್ರಮದಿಂದ ಉಂಟಾಗಿರುವ ವಿಕೃತಗಳನ್ನು ನಾವು ಗುರುತಿಸಬೇಕಾಗಿದೆ. ಇದನ್ನು 'ಪುರುಷ ಪಕ್ಷಪಾತವಾದಿ' ದೃಷ್ಟಿಕೋನವೆಂದು ಕರೆಯಬಹುದು.

ಇದಕ್ಕೆ ಪ್ರತಿಯಾಗಿ ಮಹಿಳೆಯನ್ನು ಸಾಮಾಜಿಕ ಬದಲಾವಣೆಯ ನಿಯೋಗಯೊಂದೂ, ಬದುಕಿನ ಕರ್ತೃವೆಂದು, ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಳ್ಳಬಲ್ಲ ಸಂವೇದಶೀಲ 'ವ್ಯಕ್ತಿಯೆಂದು

ಪರಿಭಾವಿಸಿಕೊಳ್ಳುವ ಅಗತ್ಯವನ್ನು ನಾವು ಮನಗಾಣಬೇಕಾಗಿದೆ. ಮಹಿಳೆಯನ್ನು ವಸ್ತುವನ್ನಾಗಿ ನೋಡುವುದಕ್ಕೆ ಪ್ರತಿಯಾಗಿ ಕರ್ತೃವೆಂದು ನೋಡುವ ಅಗತ್ಯವಿದೆ.

ಹಬ್ಬ, ಜಾತ್ರೆ, ಉತ್ಸವ, ಸಂತೆ ಹೀಗೆ ಮೊದಲಾದ ಆಚರಣೆಗಳು ಸಡಗರ, ಸಂಭ್ರಮಗಳಿಂದ ಕೂಡಿರುತ್ತವೆ. ಇಲ್ಲಿ ಬಹುತೇಕವಾಗಿ ಜನರು ಒಂದೆಡೆ ಸೇರಿ, ಅದರಲ್ಲೂ ಮಹಿಳೆಯರು ಜಾತ್ರೆ, ಸಂತೆ ಉತ್ಸವಗಳಲ್ಲಿ ಭಾಗಿಯಾಗಿ, ತಮ್ಮ ಅಗತ್ಯಕ್ಕೆ ಬೇಕಾದಂತಹ ವಸ್ತುಗಳಾದ ಬಳೆ, ಸರ, ದಿನಸಿ ಸಾಮಗ್ರಿಗಳು, ಆಟಿಕೆಯ ವಸ್ತುಗಳನ್ನು ಕೊಂಡುಕೊಳ್ಳುವ ಸಡಗರದ ಬಗೆಯನ್ನು ಈ ಜಾನಪದ ಹಾಡು ಅನಾವರಣಗೊಳಿಸುತ್ತದೆ.

ಕೊನೆ ಟಿಪ್ಪಣಿಗಳು

೦೧ ಕೊಟ್ರೇಶ್, ಬೇಡರ ಸಾಮಾಜಿಕ ಪರಿಸ್ಥಿತಿ, ಪು-೧೬೪

೦೨ L.Hanumantha Krishna Lyar : The Mysore Tributes and Castes Vol- II, page no-237

೦೩ E Thustan and k.Rangachari: castes and tribes of southern India. Vol- I P.194

೦೪ L.Anantha Krishna Lyar : The Mysore Tribes and Castes Vol- II, page no-237

೦೫ ಗುರುಲಿಂಗಯ್ಯ.ಎಂ., ಕಿಲಾರಿಗಳು, ೨೦೦೨ ಪು-೪೫

೦೬ ಮಾರ್ಥ ಮಸಬಾಮ್-೨೦೦೦, ಅಮರ್ಥ್ಯಸೇನ್-೧೯೯೯

೦೭ ಲಂಕೇಶ್.ಪಿ., ಅವ್ವ-೦೧, ಕವಿತೆ

* * * *

ಅಧ್ಯಾಯ : ಆರು

ಆಧುನಿಕತೆ : ಮ್ಯಾಸಬೇಡ ಸಮುದಾಯದ ಮಹಿಳೆ

೬.೧ ಆಧುನಿಕತೆಯ ಪ್ರಭಾವ ಮತ್ತು ಮ್ಯಾಸಬೇಡ ಸಮುದಾಯದ ಮಹಿಳೆ

೬.೨ ಮ್ಯಾಸಬೇಡ ಸಮುದಾಯದ ಮಹಿಳೆ ಮತ್ತು ಶೈಕ್ಷಣಿಕ ಸ್ಥಿತಿಗತಿ

ಅಧ್ಯಾಯ : ಆರು

ಆಧುನಿಕತೆ : ಮ್ಯಾಸಬೇಡ ಸಮುದಾಯದ ಮಹಿಳೆ

ಭಾರತದಲ್ಲಿ ಕಂಡುಬರುವ ಬುಡಕಟ್ಟು ಸಮುದಾಯಗಳಲ್ಲಿ 'ಮ್ಯಾಸಬೇಡ' ಸಮುದಾಯವು ಒಂದಾಗಿದೆ. ಈ ಬುಡಕಟ್ಟು ಸಮುದಾಯವು ತನ್ನದೆ ಆದ ಸಂಸ್ಕೃತಿ, ಪರಂಪರೆಯನ್ನು ರೂಪಿಸಿಕೊಂಡು ಬಂದಿದೆ. ನಗರ ಸಂಸ್ಕೃತಿಯಿಂದ ದೂರವಿದ್ದು, ತನ್ನದೆ ಆದ ಜೀವನಕ್ರಮವನ್ನು ರೂಢಿಸಿಕೊಂಡು ಬಂದಿರುವ ಮ್ಯಾಸಬೇಡ ಸಮುದಾಯವು ಕರ್ನಾಟಕದಲ್ಲಿನ ಆಂಧ್ರ ಗಡಿಭಾಗದ ಬಳ್ಳಾರಿ, ಚಿತ್ರದುರ್ಗಗಳಲ್ಲಿ ಈ ಸಮುದಾಯವು ಹೆಚ್ಚಾಗಿ ಕಂಡುಬರುತ್ತದೆ. ನಂತರದ ದಿನಗಳಲ್ಲಿ ದಾವಣಗೆರೆ ಪ್ರಾಂತ್ಯದ ಕೆಲವು ಭಾಗಗಳಲ್ಲಿ ಈ ಸಮುದಾಯವು ಕಂಡುಬರುತ್ತದೆ. ಆಂಧ್ರದ ಶ್ರೀಶೈಲ ಪ್ರಾಂತ್ಯದಿಂದ ವಲಸೆ ಬಂದ ಈ ಸಮುದಾಯವು ಪಶುಪಾಲನೆಯನ್ನು ತನ್ನ ಪ್ರಧಾನ ವೃತ್ತಿಯನ್ನಾಗಿಸಿಕೊಂಡಿತ್ತು. ಈ ಕಾರಣದಿಂದಾಗಿಯೇ ಈ ಸಮುದಾಯವು ಅರಣ್ಯ ಭಾಗಗಳಲ್ಲಿ ವಾಸಿಸುವ ಮೂಲಕ ಅರಣ್ಯ ಪ್ರಾಂತ್ಯದಲ್ಲಿಯೇ ತಮ್ಮ ನೆಲೆಗಳನ್ನು ಕಂಡುಕೊಂಡಿದೆ. ಬಳ್ಳಾರಿ ಮತ್ತು ಚಿತ್ರದುರ್ಗ ಪ್ರಾಂತ್ಯದಲ್ಲಿನ ಕುರುಚಲು ಅರಣ್ಯದಲ್ಲಿ ಈ ಸಮುದಾಯದ ಪ್ರಮುಖ ನೆಲೆಗಳು ಕಂಡುಬರುತ್ತವೆ.

ಮ್ಯಾಸಬೇಡ ಸಮುದಾಯವು ನಗರ ಪರಿಸರದಿಂದ ಪ್ರತ್ಯೇಕವಾಗಿ ಬಾಳಿ ಬದುಕಿದೆ. ಇಂದಿಗೂ ಈ ಜನಾಂಗವು ತಮ್ಮ ಮೂಲದ ಹಟ್ಟಿ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಆಧುನಿಕ ಸಂದರ್ಭದಲ್ಲಿಯೂ ಈ ಹಟ್ಟಿ ಪರಂಪರೆಯ ಮೂಲಕ ತಮ್ಮ ಸಾಂಸ್ಕೃತಿಕ ಚಹರೆಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ಈ ಸಮುದಾಯವು ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಹಾಗೂ ತಮ್ಮ ರೂಢಿ, ಸಂಪ್ರದಾಯ, ಆಚರಣೆಗಳನ್ನು ಉಳಿಸಿಕೊಂಡು ಆಧುನಿಕ ಜೀವನಕ್ಕೆ ತಮ್ಮನ್ನು ತೆರೆದುಕೊಂಡಿರುವುದು ಕಂಡುಬರುತ್ತದೆ. ಇದಕ್ಕೆ ಪೂರಕವಾಗಿ ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಪ್ರಾಂತ್ಯದಲ್ಲಿರುವ ಮ್ಯಾಸಬೇಡರ ಸ್ಥಿತಿಗತಿಗಳನ್ನು ಅವಲೋಕಿಸಿದರೆ ಇದರ ವಾಸ್ತವ ನೆಲೆಗಳು ತಿಳಿದುಬರುತ್ತವೆ. ಆದರೆ ಆಧುನಿಕತೆಗೆ ತೆರೆದುಕೊಂಡಿರುವ ದಾವಣಗೆರೆ ಹಾಗೂ ಇತರೆ ಪ್ರಾಂತ್ಯಗಳು ಮೂಲ ಸ್ವರೂಪದಿಂದ ಕೆಲವು ಬದಲಾವಣೆಯನ್ನು ಮೈಗೂಡಿಸಿಕೊಂಡಿವೆ.

ಮ್ಯಾಸಬೇಡ ಸಮುದಾಯಗಳಲ್ಲಿ ಮಹಿಳೆಯು ತನ್ನದೆ ಆದ ಸ್ಥಾನಮಾನವನ್ನು ಹೊಂದಿದ್ದಾಳೆ. ಇಲ್ಲಿ ಮಹಿಳೆಯು ಕುಟುಂಬದ ಪ್ರಮುಖ ಜವಾಬ್ಧಾರಿಗಳನ್ನು ಸ್ವತಂತ್ರ್ಯವಾಗಿ ನಿರ್ವಹಿಸುವ

ಸಾಮರ್ಥ್ಯವನ್ನು ಹೊಂದಿದ್ದಾಳೆ. ಮ್ಯಾಸಬೇಡ ಸಮುದಾಯವು ಮೂಲತಃ ಪಶುಪಾಲನೆಯನ್ನು ತಮ್ಮ ವೃತ್ತಿಯಾಗಿಸಿಕೊಂಡು ಬಂದಿದೆ. ಇದರ ಜೊತೆಗೆ ಈ ಸಮುದಾಯವು ಬೇಟೆ ಸಂಸ್ಕೃತಿಯನ್ನು ತಮ್ಮ ಉಪಕುಲಕಸುಬಾಗಿ ರೂಢಿಸಿಕೊಂಡು ಬಂದಿದೆ. ಈ ಸಮುದಾಯದ ಮಹಿಳೆಯೂ ಪುರುಷನಂತೆ ಧೈರ್ಯಶಾಲಿಯಾಗಿದ್ದು ಮಹಿಳೆಯು ಕೂಡ ಪುರುಷನಂತೆ ತನ್ನನ್ನು ಬೇಟೆಗಾರಿಕೆಯಲ್ಲಿ ತೊಡಗಿಸಿಕೊಂಡಿರುವುದು ಹಲವಾರು ಕಡೆಗಳಲ್ಲಿ ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಈ ಸಮುದಾಯವು ತನ್ನ ಅಲೆಮಾರಿ ಜೀವನವನ್ನು ನಿಲ್ಲಿಸಿ ಒಂದು ಕಡೆ ಶಾಶ್ವತವಾದ ನೆಲೆಯನ್ನು ಕಂಡುಕೊಂಡ ಸಂದರ್ಭದಲ್ಲಿ ಪುರುಷನು ಪಶುಪಾಲನೆ ಇಲ್ಲವೇ ಬೇಟೆಗಾರಿಕೆಯಲ್ಲಿ ತೊಡಗಿಸಿಕೊಂಡಾಗ ಭೂಮಿಯನ್ನು ಉಳುಮೆ ಮಾಡಿ ವ್ಯವಸಾಯವನ್ನು ಅಭಿವೃದ್ಧಿಪಡಿಸಿದ ಕೀರ್ತಿಯು ಮ್ಯಾಸಬೇಡ ಮಹಿಳೆಯರಿಗೆ ಸಲ್ಲುತ್ತದೆ. ಹಿಂದಿನಿಂದಲೂ ಮ್ಯಾಸಬೇಡ ಸಮುದಾಯದ ಮಹಿಳೆಯು ಪುರುಷಂತೆ ತನ್ನ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸುತ್ತಾ ಬಂದಿರುವುದು ತಿಳಿದುಬರುತ್ತದೆ. ಇದಕ್ಕೆ ಚಾರಿತ್ರಿಕ ನಿದರ್ಶನಗಳು ವಿಜಯನಗರ ಕಾಲದಲ್ಲಿ ಹಲವಾರು ಕಂಡುಬರುತ್ತವೆ. "ಹಂಪೆಯ ಮಹಾನವಮಿ ದಿಬ್ಬದಲ್ಲಿ ಬೇಡ ಬೇಡತಿಯರಿಬ್ಬರೂ ಜಿಂಕೆಗಳನ್ನು ಬಿಲ್ಲುಬಾಣಗಳಿಂದ ಹೊಡೆಯುವ ಅಪೂರ್ವ ದೃಶ್ಯಗಳನ್ನು ಕಾಣಬಹುದು. ಬೇಟೆಯಲ್ಲಿ ಸತ್ತ ಪ್ರಾಣಿಯನ್ನು ಕೋಲಿಗೆ ಕಟ್ಟಿಕೊಂಡು ಹೆಗಲ ಮೇಲೆ ಹೊತ್ತು ಮನೆಗೊಯ್ಯುವರು."[೧] ಇದು ಬೇಡ ಸಮುದಾಯದ ಬೇಟೆ ಸಂಸ್ಕೃತಿಯಲ್ಲಿ ಮಹಿಳೆಯನ್ನು ಪ್ರತಿನಿಧಿಸುತ್ತದೆ. ಅಷ್ಟೆ ಅಲ್ಲದೆ ಪುರುಷನಂತೆ ಮಹಿಳೆಯು ಹೊಂದಿರಬಹುದಾದ ಸಾಮರ್ಥ್ಯಗಳನ್ನು ಪ್ರದರ್ಶಿಸುವುದನ್ನು ಚರಿತ್ರೆಯಿಂದ ತಿಳಿಯಬಹುದಾಗಿದೆ.

ಬೇಡ ಸಮುದಾಯದಲ್ಲಿ ಮಹಿಳೆಯು ಕೂಡ ಮುಕ್ತವಾದ ಜೀವನವನ್ನು ಹಾಗೂ ಸ್ಥಾನಮಾನಗಳನ್ನು ಪಡೆದಿರುವ ಬಗ್ಗೆ ಚಾರಿತ್ರಿಕವಾದ ಹಲವು ನಿದರ್ಶನಗಳು ಕಂಡುಬರುತ್ತವೆ. "ನಂಜುಂಡ ಕವಿ ವಿರಚಿತ 'ರಾಮನಾಥ ಚರಿತೆಯ' ಕಂಪಿಲನು ಬೇಟೆಗೆ ಹೊರಟ ಸಂದರ್ಭದಲ್ಲಿ ಬರುವ ಬೇಡ ಬೇಡತಿಯರ ವರ್ಣನೆಯು ಬೇಟೆಯಲ್ಲಿ ಬಳಸುವ ಅನೇಕ ರೀತಿಯಾದ ಬಲೆ ಮತ್ತು ಇತರ ಸಾಧನಗಳ ವಿವರವು ಕಂಡುಬರುತ್ತದೆ. ಬೇಡರಂತೆ ತಮಗೆ ಸಿಕ್ಕಂತೆ ತೊಡೆ ಚಲ್ಲಣ, ಮೊಲೆಕಟ್ಟು, ಹೆಣೆದ ಜಡೆ, ಕಲ್ಲಿ ಸುರಗಿಗಳಿಂದ ಕೂಡಿ ಬಂದರು, ಶಬರರು ಹೆಬ್ಬಲೆ, ತೆರೆಸೀರೆ ಕಾಲ್ಕಾಣ್ಗೆ, ಬೆಳ್ಳಾರ, ಹಬ್ಬುಗೆವಲೆ, ಕುಡುಗೋಲು, ಕತ್ತಿ, ಕೊಡಲಿ, ಹೇರಿಟಿತಿ, ಬಡಿಗೋಲು, ಇಡುಕೈದು, ಗುಡಿ, ಗುಡಾರ, ಸರಾತಿ ಪೆಟ್ಟಿಗೆ, ಗಿಂಡಿ ಪಡಿಗ, ಮಂಚ ಮುಂತಾದ ಸಕಲ ಸಾಮಾಗ್ರಿಗಳನ್ನು ಅಣಿ ಮಾಡಿಕೊಂಡು ಹೊರಡುವ ದೃಶ್ಯವಿದೆ. ಇಲ್ಲಿ ಬೇಡ ಬೇಡತಿಯರ ವೇಶ ಭೂಷಣಗಳೇ ಅಲ್ಲದೆ ರಕ್ಷಣೆಯ ಸಾಧನಗಳ ವಿವರಗಳೂ ಇವೆ."[೨]

ಬೇಡ ಮತ್ತು ಬೇಡತಿಯರ ಪ್ರಸ್ತಾಪವು ಹರಿಹರನ ಗಿರಿಜಾ ಕಲ್ಯಾಣದಲ್ಲಿಯೂ ಪ್ರಸ್ತಾಪವಾಗಿರುವುದು ಕಂಡುಬರುತ್ತದೆ.

"ಅಳ್ಳಿ ಪುಳಿಂದಂ ಕಾಣುತೆ
ತಳ್ಕೈಸಿಯೆಕೊಂಡು ಶುನಕನೆರಡುಂ ಕಡಿಯಂ
ಕಾಳ್ಕುರ್ಚು ತಗುಳ್ದ ತೆರದಂ
ನಿಳ್ಕೈಸದೆ ನೊಂದು ಬೆಂದು ಬಳಲುತಂದಂ"[೩]

ಇಲ್ಲಿ ಯೌವನಕ್ಕೆ ಬಂದ ಬೇಡ ಬೇಡತಿಯರ ಶೃಂಗಾರ ಪ್ರಣಯವು ಬೇಟೆಯ ನೆಪದಲ್ಲಿ ವ್ಯಕ್ತವಾಗಿದೆ. ಅವರು ಕೂಡುವುದಕ್ಕೆ ಕತ್ತಲೆ ಇರುವ ಏಕಾಂತ ಸ್ಥಳವನ್ನು ಹುಡುಕುತ್ತಾರೆ. ಕಾಡಿನಲ್ಲಿ ಅಂತಹ ಸ್ಥಳ ದೊರಕಿದರೂ ಯಾರಾದರೂ ನೋಡಬಹುದೆಂಬ ಹೆದರಿಕೆಯೂ ಇತ್ತು. ಪ್ರಣಯ ಕಲಹದ ಬೇಡ ಬೇಡತಿಯರು ಜಗಳವಾಡುವ ಅಪೂರ್ವ ಸಂದರ್ಭವಿದೆ. ಕಾರಣ ಬೇಟೆಯಾಡಿ ಬಂದ ಬೇಡರ ದೇಹದಲ್ಲಿ ಪ್ರಾಣಿಗಳಿಂದಾದ ಗಾಯಗಳನ್ನು ನೋಡಿ ಬೇಡತಿಯರು ಅವು ಪರಸ್ತ್ರೀಯಿಂದ ರತಿಸಮಯದಲ್ಲಿ ಆದ ಗಾಯಗಳೆಂದು ಸಂಶಯಪಟ್ಟು ಜಗಳವಾಡುತ್ತಾರೆ. ಹೀಗೆ ಗಿರಿಜಾಕಲ್ಯಾಣದಲ್ಲಿ ಬೇಟೆಯ ಚಿತ್ರಣ ಪ್ರಸ್ತಾಪವಾಗಿರುವುದು ಬೇಡ ಸಮುದಾಯದಲ್ಲಿ ಹೆಣ್ಣಿನ ಸ್ಥಾನಮಾನವನ್ನು ಪ್ರತಿನಿಧಿಸುತ್ತದೆ. ಅನಾದಿ ಕಾಲದಿಂದಲೂ ಬೇಡ ಸಮುದಾಯದ ಮಹಿಳೆಯು ಪುರುಷನಂತೆ ಸರಿ ಸಮಾನವಾದ ಸ್ಥಾನಮಾನಗಳನ್ನು ಹೊಂದಿದ್ದು, ತಪ್ಪು ಮಾಡಿದಲ್ಲಿ ಪುರುಷನನ್ನು ಪ್ರತಿರೋಧಕ್ಕೆ ಒಳಪಡಿಸುವ ಅಂಶಗಳನ್ನು ಇಲ್ಲಿನ ಮಹಿಳೆಯರಲ್ಲಿ ಗುರುತಿಸಬಹುದಾಗಿದೆ.

ಒಂದು ಕಾಲದಲ್ಲಿ ಬೇಟೆಯನ್ನು ತಮ್ಮ ಉಪಕಸುಬಾಗಿ ಜೀವನ ಸಾಗಿಸಿಕೊಂಡು ಬಂದಿದ್ದ ಈ ಜನಾಂಗವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಮಾರಿಯಾಗಿ ಅಲೆಯುತ್ತಿತ್ತು. ಇಲ್ಲಿ ಪುರುಷನೊಂದಿಗೆ ಮಹಿಳೆಯು ತನ್ನ ಜನಜೀವನವನ್ನು ನಡೆಸಿಕೊಂಡು ಬಂದಿದ್ದಾಳೆ. "ಒಂದು ಕಾಲಕ್ಕೆ ಬೇಟೆಯನ್ನೇ ನಂಬಿ ಕಾಡಿನಲ್ಲಿದ್ದ ಬೇಡರ ಜನಜೀವನ ಇಂದು ಸಂಸ್ಕೃತೀಕರಣ, ನಗರೀಕರಣ, ಜಾಗತೀಕರಣ ಹಾಗೂ ಪಾಶ್ಚಾತ್ಯೀಕರಣಗಳ ಪ್ರಭಾವದಿಂದ ಬದಲಾಗುತ್ತಿದೆ. ಹೀಗೆ ಬೇಡರ ಬದುಕು ಸ್ಥಿತ್ಯಂತರಗಳಿಂದ ವಿವಿಧ ರೀತಿಯಲ್ಲಿ ವಿಸ್ತರಣೆಗೊಂಡಿರುವುದು ಗಮನಾರ್ಹ."[೪] ಪ್ರಕೃತಿಯೊಂದಿಗೆ ಮ್ಯಾಸಬೇಡ ಸಮುದಾಯದ ಬದುಕು ವಿವಿಧ ಸನ್ನಿವೇಶಗಳಿಗೆ ತಕ್ಕಂತೆ ಬದಲಾವಣೆಯನ್ನು ಮೈಗೂಡಿಸಿಕೊಂಡು ಆಧುನಿಕ ಜೀವನವನ್ನು ನಡೆಸುತ್ತಾ ಬಂದಿದೆ. ಈ ಸಮುದಾಯದ ಮಹಿಳೆಯು ಬೇಟೆಯ ಜೀವನದಿಂದ ಹಿಡಿದು ಇಂದಿನ ಆಧುನಿಕ ದಿನಮಾನದ ವಿಜ್ಞಾನ– ತಂತ್ರಜ್ಞಾನ ಕ್ಷೇತ್ರಗಳವರೆಗೆ ತನ್ನ ಸಾಧನೆಗೈದಿರುವುದು ತಿಳಿದುಬರುತ್ತದೆ. ಮ್ಯಾಸಬೇಡ ಸಮುದಾಯವು ತನ್ನದೆ ಆದಂತಹ ವಿಶಿಷ್ಟ ಸಂಸ್ಕೃತಿಯನ್ನು ರೂಪಿಸಿಕೊಂಡು ಬಾಳುತ್ತಿದ್ದರೂ ಆಧುನಿಕತೆಯನ್ನು ವಿರೋಧಿಸಿದವರಲ್ಲ. ಬದಲಾದ ಕಾಲಕ್ಕೆ ತಕ್ಕಂತೆ ವಿವಿಧ ಬದಲಾವಣೆಯ ಬದುಕನ್ನು ಕಂಡುಕೊಂಡಿರುವುದು ಕಂಡುಬರುತ್ತದೆ.

೬.೧ ಆಧುನಿಕತೆಯ ಪ್ರಭಾವ ಮತ್ತು ಮ್ಯಾಸಬೇಡ ಸಮುದಾಯದ ಮಹಿಳೆ

ಆಧುನಿಕತೆಯ ಪ್ರಭಾವದಿಂದ ಮಾನವ ಜನಾಂಗವು ತನ್ನ ಜೀವನಕ್ರಮದಲ್ಲಿ ವಿಫುಲವಾದ ಬದಲಾವಣೆಯನ್ನು ಕಂಡುಕೊಂಡಿದೆ. ಈ ಬದಲಾವಣೆಯು ಮಾನವ ಸಮುದಾಯದ ಬೆಳವಣಿಗೆಗೆ ಸಹಕಾರಿಯಾಗಿದೆ. ಯಾವುದೋ ಒಂದು ಹಳ್ಳಿ ಅಥವಾ ಅರಣ್ಯ ಪ್ರದೇಶಗಳಲ್ಲಿ ಸೀಮಿತ ನೆಲೆಯನ್ನು ಕಂಡುಕೊಂಡಿರುವ ಮಾನವ ಇಂದು ಜಾಗತಿಕ ಮಟ್ಟದಲ್ಲಿ ತನ್ನ ಅನನ್ಯತೆಯನ್ನು ಕಂಡುಕೊಂಡಿದ್ದಾನೆ. ಇಂದು ಮಾನವನು ವಿಶ್ವದ ಪ್ರತಿಯೊಂದು ದೇಶದ ಜೀವನಕ್ರಮವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಮುಂದುವರಿದ ದೇಶದ ಜನರ ಜೀವನಶೈಲಿಯನ್ನು ಅನುಕರಣೆ ಮಾಡುವ ಮೂಲಕ ತನ್ನಲ್ಲಿ ವಿಪರೀತವಾದ ಬದಲಾವಣೆಯನ್ನು ಕಂಡುಕೊಂಡಿದ್ದಾನೆ.

ಜಗತ್ತಿನ ಹಲವಾರು ಬುಡಕಟ್ಟು ಸಮುದಾಯಗಳು ಇಂದು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ತನ್ನ ಜೀವನಶೈಲಿಯನ್ನು ಬದಲಾಯಿಸಿಕೊಂಡು ಜೀವನ ಸಾಗಿಸುತ್ತಿವೆ. ಇಂತಹ ಬುಡಕಟ್ಟು ಸಮುದಾಯಗಳಲ್ಲಿ ಮ್ಯಾಸಬೇಡ ಸಮುದಾಯವು ಒಂದಾಗಿದೆ. ಮೂಲತಃ ಮ್ಯಾಸಬೇಡ ಸಮುದಾಯವು ನಗರ ಜೀವನದಿಂದ ದೂರವಿದ್ದು, ತನ್ನದೆ ಆದ 'ಹಟ್ಟಿ ಸಂಸ್ಕೃತಿ'ಯನ್ನು ರೂಪಿಸಿಕೊಂಡು ಜೀವನ ಸಾಗಿಸಿಕೊಂಡು ಬಂದ ಸಮುದಾಯವಾಗಿದೆ. ಇಂದು ಈ ಸಮುದಾಯವು ಕೂಡ ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಕಾಪಾಡಿಕೊಂಡು ಆಧುನಿಕ ಜೀವನವನ್ನು ಮೈಗೂಡಿಸಿಕೊಂಡಿರುವುದು ತಿಳಿದುಬರುತ್ತದೆ. ಈ ಮ್ಯಾಸಬೇಡ ಸಮುದಾಯದಲ್ಲಿ ಮಹಿಳೆಯು ಕೂಡ ಅನಾದಿ ಕಾಲದಿಂದಲೂ ಪುರುಷನಷ್ಟೆ ಸರಿಸಮಾನವಾದ ಸ್ಥಾನಮಾನಗಳನ್ನು ಹೊಂದಿರುವುದು ಚರಿತ್ರೆಯ ಸಂಗತಿಗಳಿಂದ ತಿಳಿದುಬರುತ್ತದೆ. ವ್ಯವಸಾಯ, ಬೇಟೆ ಪ್ರವೃತ್ತಿ, ಕುಟುಂಬದ ನಿರ್ವಹಣೆಯಲ್ಲಿ ಪುರುಷನಷ್ಟೆ ಜವಾಬ್ದಾರಿಯುತ ಸ್ಥಾನವನ್ನು ಈ ಸಮುದಾಯದ ಮಹಿಳೆ ನಿರ್ವಹಿಸಿಕೊಂಡು ಬಂದಿದ್ದಾಳೆ. ಇಂದಿನ ಆಧುನಿಕ ಯುಗದಲ್ಲಿಯೂ ಮ್ಯಾಸಬೇಡ ಸಮುದಾಯದ ಮಹಿಳೆಯು ಆಧುನಿಕ ಜೀವನಕ್ರಮವನ್ನು ಮೈಗೂಡಿಸಿಕೊಂಡು ತಾನು ಕೂಡ ಯಾವುದರಲ್ಲಿಯೂ ಕಡಿಮೆ ಇಲ್ಲ ಎಂಬುದನ್ನು ಸಾಧಿಸಿ ತೋರಿಸಿದ್ದಾಳೆ. ಈ ಸಮುದಾಯದ ಮಹಿಳೆಗೆ ಕೆಲವು ಧಾರ್ಮಿಕ ಚೌಕಟ್ಟುಗಳನ್ನು ನಿಗಧಿಪಡಿಸಿದ್ದರೂ ಇವುಗಳು ಅವಳ ಪ್ರಗತಿಗೆ ಯಾವುದೇ ಅಡ್ಡಿ ಆತಂಕಗಳನ್ನು ಸೃಷ್ಟಿಸುತ್ತಿರುವುದು ಕಂಡುಬರುವುದಿಲ್ಲ. ಈ ಕಾರಣದಿಂದಾಗಿ ಮ್ಯಾಸಬೇಡ ಸಮುದಾಯದ ಮಹಿಳೆಯು ಬದಲಾದ ಕಾಲಕ್ಕೆ ತಕ್ಕಂತೆ ತನ್ನ ಆಧುನಿಕ ಜೀವನಕ್ರಮವನ್ನು ರೂಪಿಸಿಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ.

ಮ್ಯಾಸಬೇಡ ಸಮುದಾಯದ ಮಹಿಳೆಯ ಜೀವನದಲ್ಲಿ ಆಧುನಿಕತೆಯ ಪ್ರಭಾವವು ಸಾಕಷ್ಟು ಕಂಡುಬರುತ್ತದೆ. ಈ ಪ್ರಭಾವವನ್ನು ನಾವು ಈ ಮುಂದಿನಂತೆ ಗುರುತಿಸಬಹುದಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಮ್ಯಾಸಬೇಡ ಸಮುದಾಯದ ಮಹಿಳೆಯನ್ನು ಕೇಂದ್ರವಾಗಿಟ್ಟುಕೊಳ್ಳಲಾಗಿದೆ. ಈ

ಸಮುದಾಯ ಮಹಿಳೆಯ ಮೇಲೆ ಪ್ರಭಾವ ಬೀರಿದ ಪ್ರಮುಖವಾದ ಅಂಶಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಿಕೊಳ್ಳಲಾಗಿದೆ.

ಉಡುಗೆ ತೊಡುಗೆಯ ಮೇಲೆ ಆಧುನಿಕತೆಯ ಪ್ರಭಾವ

ಮ್ಯಾಸಬೇಡ ಸಮುದಾಯವು ಮೂಲತಃ ಅರಣ್ಯವಾಸಿ ಜನಾಂಗವಾಗಿದ್ದು, ನಾಗರಿಕ ಜೀವನಕ್ರಮದಿಂದ ಪ್ರತ್ಯೇಕವಾಗಿ ತಮ್ಮದೆ ಆದ ಜೀವನಕ್ರಮವನ್ನು ರೂಢಿಸಿಕೊಂಡಿದ್ದವರು. ಇವರ ಉಡುಗೆ ತೊಡುಗೆಗಳು ಇತರ ಸಮುದಾಯಗಳಿಗಿಂತ ತೀರ ಭಿನ್ನವಾಗಿರುವುದು ಒಂದೆರಡು ತಲೆಮಾರುಗಳ ಹಿಂದಿನ ಉಡುಗೆ ತೊಡುಗೆಗಳನ್ನು ನೋಡಿದರೆ ಸಂಪೂರ್ಣವಾಗಿ ಅರ್ಥವಾಗುತ್ತದೆ. ಈ ಸಮುದಾಯದಲ್ಲಿ ಮಹಿಳೆಯರು ಹಿಂದಿನ ಕಾಲದಲ್ಲಿ ಸೀರೆಯನ್ನು ಉಡುತ್ತಿದ್ದರು. ಆದರೆ ರವಕೆ(ಕುಪ್ಪಸ)ವನ್ನು ಧರಿಸುತ್ತಿರಲಿಲ್ಲ. ಈಗಲೂ ಚಿತ್ರದುರ್ಗ ಹಾಗೂ ಬಳ್ಳಾರಿ ಪ್ರಾಂತ್ಯದ ಹಿರಿಯ ತಲೆಮಾರಿನ ಮಹಿಳೆಯರು ಕುಪ್ಪಸವನ್ನು ಧರಿಸುವುದಿಲ್ಲ. ಆದರೆ ನಗರೀಕರಣ ಹಾಗೂ ಆಧುನೀಕರಣದ ಪ್ರಭಾವದಿಂದಾಗಿ ಆಧುನಿಕ ಶೈಲಿಗೆ ಅನುಗುಣವಾಗಿ ರವಿಕೆಯನ್ನು ಧರಿಸುವುದು ತೀರಾ ಸರ್ವೇ ಸಾಮಾನ್ಯವಾಗಿದೆ. ಅಷ್ಟೆ ಅಲ್ಲದೆ ಇಂದಿನ ಸಂದರ್ಭದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ಚೂಡಿದಾರ, ಮಿಡಿ, ಜೀನ್ಸ್, ಟೀ ಶರ್ಟ್‌ನಂತಹ ಉಡುಗೆಗಳು ಈ ಸಮುದಾಯದಲ್ಲಿಯೂ ಕಂಡುಬರುತ್ತಿವೆ.

ಈ ಸಮುದಾಯದ ಮಹಿಳೆಯು ಕೇವಲ ಉಡುಗೆಯಲ್ಲಿ ಮಾತ್ರವಲ್ಲದೆ. ಹಲವಾರು ವಿವಿಧ ಆಲಂಕಾರಿಕ ವಸ್ತುಗಳನ್ನು ಹಾಗೂ ಸೌಂದರ್ಯ ವರ್ಧಕಗಳನ್ನು ಬಳಸುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಈ ಉಡುಗೆ ತೊಡುಗೆಯು ಅವರಲ್ಲಿನ ಆಧುನಿಕ ಜೀವನ ಶೈಲಿಯನ್ನು ಪ್ರತಿನಿಧಿಸುತ್ತದೆ. ಈ ಕಾರಣದಿಂದಾಗಿ ಈ ಸಮುದಾಯವು ಕೂಡ ಉನ್ನತ ವರ್ಗ ಹಾಗೂ ಉನ್ನತ ವರ್ಣದವರಂತೆ ಸಾಮಾಜಿಕ ಜೀವನದಲ್ಲಿ ತಮ್ಮ ಉಡುಗೆ ತೊಡುಗೆಯ ಶೈಲಿಯಿಂದ ಪ್ರತಿನಿಧಿಸುವುದು ಕಂಡುಬರುತ್ತದೆ. ಇಂದು ನಗರ ಜೀವನದಿಂದ ಬಹುದೂರ ಇರುವ ಮ್ಯಾಸಬೇಡ ಸಮುದಾಯದ ಹಟ್ಟಿಯಲ್ಲಿ ಜೀವನ ನಿರ್ವಹಿಸುತ್ತಿರುವ ಮಹಿಳೆಯರು ಕೂಡ ಎಲ್ಲ ವಿಧವಾಗಿ ಆಧುನಿಕ ಶೈಲಿಗೆ ಪೂರಕವಾದ ವಸ್ತುಗಳನ್ನು ಬಳಸುತ್ತಿರುವುದು ಕಂಡುಬರುತ್ತದೆ. ಆಧುನಿಕತೆಯ ಪ್ರಭಾವದಿಂದಾಗಿ ಈ ಸಮುದಾಯದ ಮಹಿಳೆಯು ಕೂಡ ಸಾಮಾಜಿಕವಾಗಿ ಪ್ರಗತಿಯತ್ತ ಮುನ್ನಡೆಯುತ್ತಿರುವುದು ತಿಳಿದುಬರುತ್ತದೆ. ಉಡುಗೆ ತೊಡುಗೆಯಲ್ಲಿನ ಈ ಪ್ರಗತಿಯು ಕೂಡ ಆಧುನಿಕತೆಯ ಸಂಕೇತವಾಗಿ ಕಂಡುಬರುತ್ತದೆ.

ಆಹಾರ ಸಂಸ್ಕೃತಿ

ಮ್ಯಾಸಬೇಡ ಸಮುದಾಯವು ಅನಾದಿ ಕಾಲದಿಂದಲೂ ತನ್ನದೇ ಆದ ಆಹಾರ ಪದ್ಧತಿಯನ್ನು ರೂಢಿಸಿಕೊಂಡು ಬಂದಿರುವುದು ಇವರ ಸಾಂಸ್ಕೃತಿಕ ನೆಲೆಯಲ್ಲಿ ತಿಳಿದುಬರುತ್ತದೆ. ಬೇಟೆಯೊಂದಿಗೆ ತನ್ನ ಜೀವನವನ್ನು ಅವಲಂಬಿಸಿಕೊಂಡು ಬಂದಿರುವ ಈ ಸಮುದಾಯವು ಪ್ರತ್ಯೇಕವಾದ ಆಹಾರ

ಕ್ರಮವನ್ನು ಕಂಡುಕೊಂಡಿತ್ತು. ಒಂದು ಕಡೆ ನೆಲೆಯನ್ನು ಕಾಣದ ಈ ಸಮುದಾಯವು ಅಲೆಮಾರಿಯಾಗಿ ಜೀವನ ಸಾಗಿಸುತ್ತಿತ್ತು. ಆದರೆ ನಾಗರಿಕತೆಯ ವಿಕಾಸವಾದಂತೆ ಒಂದೆಡೆ ನೆಲೆಯೂರಲು ಪ್ರಾರಂಭಿಸಿದ ಈ ಸಮುದಾಯವು ಆಹಾರವನ್ನು ಸಂಗ್ರಹಿಸುವ ಮತ್ತು ಸಂಗ್ರಹಿಸಿದ ಆಹಾರವನ್ನು ಸಂರಕ್ಷಿಸಿಡುವ ತಂತ್ರಗಾರಿಕೆಯನ್ನು ಕಂಡುಕೊಂಡಿತು. ಈ ಆಹಾರ ಸಂಗ್ರಹಣೆಯಲ್ಲಿ ಮತ್ತು ಸಂರಕ್ಷಣೆಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾಗಿ ಕಂಡುಬರುತ್ತದೆ. ಬೇಟೆಯ ಪ್ರವೃತ್ತಿಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಈ ಸಮುದಾಯದ ಜನತೆಗೆ ಪ್ರತಿನಿತ್ಯವೂ ಬೇಟೆ ಸಿಗುವುದು ಕಷ್ಟವಾಗಿತ್ತು. ಈ ಸಂದರ್ಭದಲ್ಲಿ ಅವರು ಉಪವಾಸ ಬೀಳುವಂತಹ ಕ್ರಮವು ಅವರ ಜೀವನದಲ್ಲಿ ಸಂಭವಿಸುತ್ತಿತ್ತು. ಹಾಗೆಯೇ ಮಳೆಗಾಲದಲ್ಲಿ ಬೇಟೆಯು ದೊರೆಯುವುದು ಕಷ್ಟವಾಗಿ ಆಹಾರದ ಕೊರತೆಯು ಸಂಭವಿಸುತ್ತಿತ್ತು. ಈ ಎಲ್ಲಾ ಕಾರಣಗಳಿಂದ ಈ ಸಮುದಾಯವು ಆಹಾರ ಸಂಗ್ರಹಿಸಲು ಮುಂದಾಯಿತು. ಹೆಚ್ಚು ಪ್ರಮಾಣದಲ್ಲಿ ಬೇಟೆಯಿಂದ ಆಹಾರ ದೊರೆತ ಸಂದರ್ಭದಲ್ಲಿ ಅದನ್ನು ಕೆಟ್ಟು ಹೋಗದಂತೆ ಸಂರಕ್ಷಿಸಿಡುವ ಕ್ರಮವನ್ನು ಕಂಡುಕೊಂಡರು. ಇದರ ಪ್ರಯತ್ನವಾಗಿಯೇ ಮಾಂಸವನ್ನು ಒಣಗಿಸಿ (ಮುಗಿ ಪದ್ದತಿ) ಉಪಯೋಗಿಸುವ ಕ್ರಮವನ್ನು ಕಂಡುಕೊಳ್ಳಲಾಯಿತು. ಈ ಕ್ರಮವನ್ನು ಅಳವಡಿಸುವವರು ಬಹುತೇಕವಾಗಿ ಈ ಸಮುದಾಯದ ಮಹಿಳೆಯೇ ಆಗಿದ್ದಾಳೆ. ಇಲ್ಲಿ ಕುಟುಂಬದ ಜವಾಬ್ದಾರಿಯು ಮಹಿಳೆಯ ಮೇಲೆ ಹೆಚ್ಚು ಅವಲಂಬಿತವಾಗಿರುವಾಗ ಈ ರೀತಿಯ ಹೊಸ ಹೊಸ ಕ್ರಮಗಳನ್ನು ಹಾಗೂ ವಿವಿಧ ಆಹಾರ ಪದ್ಧತಿಗಳನ್ನು ಕಂಡುಕೊಂಡಿರುವುದು ತಿಳಿದುಬರುತ್ತದೆ.

ಮ್ಯಾಸಬೇಡ ಸಮುದಾಯವು ತನ್ನ ಬದುಕಿನ ಅವಿಭಾಜ್ಯ ಅಂಗವಾದ ಆಹಾರ ಪದ್ದತಿಯನ್ನು ಹಿಂದಿನಿಂದಲೂ ಅಳವಡಿಸಿಕೊಂಡು ಬಂದಿದೆ. ಇಂದಿಗೂ ಈ ಆಹಾರ ಕ್ರಮವು ಕರ್ನಾಟಕದ ಚಿತ್ರದುರ್ಗ ಹಾಗೂ ಬಳ್ಳಾರಿ ಪ್ರಾಂತ್ಯಗಳಲ್ಲಿ ಕಂಡುಬರುತ್ತದೆ. ಆಧುನಿಕ ಜೀವನಕ್ರಮವು ಬದಲಾದಂತೆ ಈ ಸಮುದಾಯದ ಮಹಿಳೆಯರು ತಮ್ಮನ್ನೂ ಆಧುನಿಕ ಜೀವನ ಶೈಲಿಗೆ ತೆರೆದುಕೊಳ್ಳುತ್ತಿದ್ದಾರೆ. ಆಧುನಿಕವಾಗಿ ಪ್ರಭಾವಶಾಲಿಗಳಾಗಿರುವ ನಗರೀಕರಣ, ಕೈಗಾರೀಕರಣ ಹಾಗೂ ಶಿಕ್ಷಣದ ಅವಕಾಶಗಳಿಂದಾಗಿ ಈ ಸಮುದಾಯವು ಸಾಮಾಜಿಕವಾಗಿ ಉನ್ನತ ಸ್ಥಾನಮಾನಗಳನ್ನು ಪಡೆಯುತ್ತಿದೆ. ಇದರ ಪ್ರೇರಣೆ ಹಾಗೂ ಪ್ರಭಾವದಿಂದಾಗಿ ಇವರ ಆಹಾರ ಕ್ರಮದಲ್ಲಿಯೂ ಗಣನೀಯವಾದ ಬದಲಾವಣೆಗಳು ಕಂಡುಬರುತ್ತಿವೆ. ಹಿಂದೆ ರೂಢಿಸಿಕೊಂಡು ಬಂದಂತಹ ಒಣಮಾಂಸವನ್ನು ಸೇವಿಸುವ ಕ್ರಮ ಇಂದು ಬಹುತೇಕ ಕಡೆಗಳಲ್ಲಿ ಕಂಡುಬರುವುದಿಲ್ಲ. ಈ ಸಮುದಾಯವು ಮಾಂಸಹಾರಿಗಳಾಗಿದ್ದು, ಆಧುನಿಕ ಶೈಲಿಯ ಅಡುಗೆಗಳನ್ನು ಕಂಡುಕೊಂಡು ತಮ್ಮ ಜೀವನವನ್ನು ಮುಂದುವರಿಸುತ್ತಿದೆ. ಸಂಸ್ಕೃತಿ ಮತ್ತು ನಾಗರೀಕತೆಯು ಬದಲಾದಂತೆ ಇವರ ಎಲ್ಲ ಸಾಂಸ್ಕೃತಿಕ ಆಹಾರ ಪದ್ದತಿಗಳಲ್ಲಿಯೂ ಬದಲಾವಣೆಗಳಾಗಿರುವುದು ಇಂದು ಕಂಡುಬರುತ್ತದೆ.

ಜೀವನಶೈಲಿಯ ಮೇಲೆ ಆಧುನಿಕತೆಯ ಪ್ರಭಾವ

ಬುಡಕಟ್ಟು ಆದಿವಾಸಿಗಳಾದ ಮ್ಯಾಸಬೇಡ ಸಮುದಾಯವು ಪ್ರಕೃತಿಯ ಮಡಿಲಿನಲ್ಲಿ ತನ್ನ ಜೀವನ ಕ್ರಮವನ್ನು ರೂಪಿಸಿಕೊಂಡು ಬಂದಿದೆ. ಆದರೆ ಇಂದು ಆಧುನಿಕತೆಯ ಪ್ರಭಾವದಿಂದಾಗಿ ಈ ಸಮುದಾಯವು ತನ್ನ ಜೀವನ ಕ್ರಮವನ್ನು ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡಿರುವುದು ತಿಳಿದುಬರುತ್ತದೆ. ಇಲ್ಲಿ ವಿಶೇಷವಾಗಿ ತನ್ನ ಜೀವನ ಶೈಲಿಯಲ್ಲಿ ಬದಲಾವಣೆಯನ್ನು ಕಂಡುಕೊಂಡಿರುವುದನ್ನು ಗಮನಿಸಬಹುದಾಗಿದೆ. ಹಿಂದೆ ಮ್ಯಾಸಬೇಡ ಸಮುದಾಯದ ಮಹಿಳೆಯರು ಒಂದು ಹಟ್ಟಿಯಲ್ಲಿಯೇ ಬೆಳೆದು ಜೀವನ ಸಾಗಿಸುತ್ತಿದ್ದರು. ಶಿಕ್ಷಣ ಹಾಗೂ ನಗರ ಜೀವನದಿಂದ ಬಹುದೂರ ಉಳಿದಿದ್ದರು. ಈ ಕಾರಣದಿಂದಾಗಿ ಈ ಸಮುದಾಯದ ಮಹಿಳೆಯು ಸಾಂಪ್ರದಾಯಿಕವಾದ ಜೀವನವನ್ನು ಅಳವಡಿಸಿಕೊಂಡು ತನ್ನ ಜೀವನವನ್ನು ನಿರ್ವಹಿಸುತ್ತಿದ್ದಳು. ಈ ಸಮುದಾಯದಲ್ಲಿ ಮಹಿಳೆ ಕೇವಲ ನಾಲ್ಕು ಗೋಡೆಗಳ ಮಧ್ಯೆ ಬೆಳೆದವಳಲ್ಲ. ಪುರುಷನಿಗೆ ಸರಿಸಮಾನವಾಗಿ ದುಡಿಮೆಯನ್ನು ಕೈಗೊಂಡಿರುವುದು ಕಂಡುಬರುತ್ತದೆ. ಇದಕ್ಕೆ ಚರಿತ್ರೆಯಲ್ಲಿಯೂ ಹಲವು ನಿದರ್ಶನಗಳನ್ನು ಒದಗಿಸುತ್ತದೆ. ಆದರೆ ಈ ಸಂದರ್ಭದಲ್ಲಿ ಆಧುನಿಕತೆಯ ಯಾವುದೇ ಪ್ರಭಾವಕ್ಕೆ ಒಳಗಾಗದೆ ಪಾರಂಪರಿಕ ನೆಲೆಯಲ್ಲಿ ತನ್ನ ಜೀವನವನ್ನು ಧೈರ್ಯದಿಂದ ನಿರ್ವಹಿಸಿರುವುದು ಕಂಡುಬರುತ್ತದೆ. ಇಲ್ಲಿನ ಬಹುತೇಕ ಮಹಿಳೆಯರು ವೈದಿಕಶಾಹಿಯ ನಿರ್ಬಂಧಗಳಿಗೆ ಒಳಗಾಗಿರುವುದು ಕಂಡುಬರುವುದಿಲ್ಲ. ಇದಕ್ಕೆ ಕಾರಣ ಇವರು ನಾಗರೀಕ ಬಂಧನದಿಂದ ಬಹುದೂರ ನಿಂತು ತಮ್ಮ ಬದುಕನ್ನು ರೂಪಿಸಿಕೊಂಡವರಾಗಿದ್ದಾರೆ. ಇಲ್ಲಿನ ಮಹಿಳೆಯು ಪ್ರಕೃತಿ ಸಹಜವಾದ ನೆಲೆಯಲ್ಲಿ ತನ್ನ ಜೀವನವನ್ನು ರೂಪಿಸಿಕೊಂಡಿದ್ದಾಳೆ.

"ಭಾರತದ ಆದಿಮ ಬುಡಕಟ್ಟು ಪರಂಪರೆಗಳು ಮಾತೃಪ್ರಧಾನತೆಯಿಂದ ಕೂಡಿವೆ. ಶೂರ್ಪನಖಿ ಒಬ್ಬ ಬುಡಕಟ್ಟು ಮಹಿಳೆ. ಅವಳ ಪರಂಪರೆಯಲ್ಲಿ ಸ್ತ್ರೀಗೆ ಮುಕ್ತ ಸ್ವಾತಂತ್ರ್ಯವಿದೆ. ರಾಮನನ್ನು ನೋಡಿದಾಗ ನಿಸರ್ಗ ಸಹಜವಾದ ಆಕರ್ಷಣೆಯಿಂದ ತನ್ನ ಮನದಾಳದ ವೇದನೆಯನ್ನು ಹಂಚಿಕೊಂಡಿರುವ ಸಾಧ್ಯತೆ ಇದೆ. ಇದನ್ನೇ ಅಪರಾಧವೆಂದು ಬಗೆದ ರಾಮ ಲಕ್ಷ್ಮಣರು ಅಸಹಾಯಕಳಾದ ಅವಳ ಕಿವಿ, ಮೂಗು ಕತ್ತರಿಸಿ ವಿರೂಪಗೊಳಿಸುತ್ತಾರೆ. ಎಲ್ಲಿ ಸ್ತ್ರೀಯನ್ನು ಪೂಜಿಸುತ್ತಾರೋ ಅಥವಾ ಗೌರವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬ ಡೋಂಗಿತನವನ್ನು ಮರೆಯುವಂತಹ ವೈದಿಕ ಮೂಲಭೂತವಾದಿ ವಕ್ತಾರರೇ ಅಸಹಾಯಕ ಹೆಣ್ಣಿನ ಮೇಲೆ ತಮ್ಮ ಪರಾಕ್ರಮವನ್ನು ಮೆರೆಯುತ್ತಾರೆ."[೫] ಬುಡಕಟ್ಟು ಮಹಿಳೆಯ ಈ ಸ್ವಾತಂತ್ರ್ಯ ಪ್ರವೃತ್ತಿಯು ಸನಾತನವಾದಿಗಳಿಗೆ ವಿರೋಧವಾಗಿ ಕಂಡುಬರುತ್ತದೆ. ಆದರೆ ಪ್ರಕೃತಿ ಮಡಿಲಿನಲ್ಲಿ ಬೆಳೆದು ಬಂದ ಈ ಸಮುದಾಯದಲ್ಲಿ ಸ್ತ್ರೀ ಪುರುಷರ ನಡುವೆ ಯಾವುದೇ ವೈರುಧ್ಯಗಳು ಕಂಡುಬರುವುದಿಲ್ಲ. ಅರಣ್ಯವಾಸಿಯಾಗಿ ಜೀವನ ನಡೆಸುತ್ತಿದ್ದ ಬೇಡ ಸಮುದಾಯವು ಯಾವುದೇ ಧರ್ಮದ ಬಂಧನಗಳಿಗೆ ಒಳಗಾಗದೆ ಮುಕ್ತವಾದ ಜೀವನ ಸಾಗಿಸುತ್ತ ಬಂದಿರುವುದು ಕಂಡುಬರುತ್ತದೆ.

ಆಧುನಿಕ ಸಂದರ್ಭದಲ್ಲಿ ಈ ಸಮುದಾಯವು ಕೂಡ ವೈದಿಕ ಧೋರಣೆಗಳಿಗೆ ಒಳಗಾಗಿರುವುದು ಕಂಡುಬರುತ್ತದೆ. ಆದರೆ ಸನಾತನವಾದಿಗಳಂತೆ ಇಲ್ಲಿ ಹೆಣ್ಣಿನ ಮೇಲೆ ಬಲವಾದ ಧೋರಣೆಗಳನ್ನು ಹೇರುವಂತ ಪ್ರಯತ್ನಗಳು ಕಂಡುಬರುವುದಿಲ್ಲ. ಬಡತನ ಹಾಗೂ ಸಾಮಾಜಿಕ ಸ್ಥಾನಮಾನಗಳ ಕೊರತೆಯಿಂದಾಗಿ ಈ ಸಮುದಾಯ ಹಾಗೂ ಇಲ್ಲಿನ ಮಹಿಳೆಯರು ಆಧುನಿಕತೆಯನ್ನು ಮೈಗೂಡಿಸಿಕೊಳ್ಳುವುದು ತಡವಾಗಿರಬಹುದು. ಆದರೆ ಪರಂಪರೆಯ ಸಾಂಸ್ಕೃತಿಕ ಮೌಲ್ಯಗಳನ್ನು ಧಿಕ್ಕರಿಸದೆ ಆಧುನಿಕ ಜೀವನ ಶೈಲಿಯನ್ನು ಆರೋಗ್ಯಕರವಾದ ರೀತಿಯಲ್ಲಿ ಮೈಗೂಡಿಸಿಕೊಂಡು ಪ್ರಗತಿಯತ್ತ ಮುನ್ನಡೆಯುತ್ತಿರುವುದನ್ನು ಈ ಸಮುದಾಯದ ಮಹಿಳೆಯ ಜೀವನ ಕ್ರಮದಲ್ಲಿ ಗುರುತಿಸಬಹುದಾಗಿದೆ. ಉನ್ನತ ವರ್ಗದವರಂತೆ ಸಾಮಾಜಿಕ ಜೀವನದಲ್ಲಿ ಪ್ರತಿನಿಧಿಸುತ್ತಿರುವುದು ಕಂಡುಬರುತ್ತದೆ. ಇಂದು ನಗರೀಕರಣದಿಂದ ಬಹುದೂರ ಇರುವ ಮ್ಯಾಸಬೇಡ ಸಮುದಾಯದ ಹಟ್ಟಿಯಲ್ಲಿ ತಮ್ಮ ಜೀವನವನ್ನು ಸಾಗಿಸುತ್ತಿರುವ ಮಹಿಳೆಯರು ಕೂಡ ಎಲ್ಲ ವಿಧವಾಗಿ ಆಧುನಿಕ ಜೀವನಶೈಲಿಗೆ ಪೂರಕವಾದ ವಸ್ತುಗಳನ್ನು ಬಳಸುತ್ತಿರುವುದು ಕಂಡುಬರುತ್ತದೆ. ಇಂತಹ ಆಧುನಿಕತೆಯ ಪ್ರಭಾವದಿಂದಾಗಿ ಮ್ಯಾಸಬೇಡ ಮಹಿಳೆಯರೂ ಕೂಡ ಆಧುನಿಕತೆಗೆ ತಮ್ಮನ್ನು ತೆರೆದುಕೊಳ್ಳುವಂತೆ ಪ್ರಭಾವ ಬೀರಿರುವುದು ಕಂಡುಬರುತ್ತದೆ.

ಧಾರ್ಮಿಕತೆ ಮತ್ತು ಮ್ಯಾಸಬೇಡ ಸಮುದಾಯದ ಮಹಿಳೆ

ಧರ್ಮವು ಮಾನವನ ಜೀವನದ ಅವಿಭಾಜ್ಯ ಅಂಗವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿಕೊಂಡು ಬಂದಿದೆ. ಇಲ್ಲಿ ಮನುಷ್ಯನು ತನ್ನ ರಕ್ಷಣೆಗಾಗಿ ತನ್ನದೆ ಆದ ಧರ್ಮದ ಮಾರ್ಗವನ್ನು ರೂಪಿಸಿಕೊಂಡಿರುತ್ತಾನೆ. "ವ್ಯಕ್ತಿ ಜನಿಸಿದ ಸಮುದಾಯದಲ್ಲಿ ಸಾಮರಸ್ಯವನ್ನು ಉಂಟುಮಾಡಲು ಕೆಲವೊಂದು ಸಾಮಾಜಿಕ, ಧಾರ್ಮಿಕ ಕರ್ತವ್ಯಗಳನ್ನು ಗೊತ್ತುಪಡಿಸಲಾಗಿದೆ. ಇದನ್ನು ಜಾತಿ, ಧರ್ಮ ಎಂದು ಕರೆಯಲಾಗುತ್ತದೆ. ಇವೆರಡು ಧರ್ಮಗಳ ಬಗ್ಗೆ ಧರ್ಮಗ್ರಂಥಗಳಲ್ಲಿ ಸಾಕಷ್ಟು ಚರ್ಚೆ, ವಿಶ್ಲೇಷಣೆ ನಡೆಸಲಾಗಿದೆ. ಆದರೆ ಸ್ತ್ರೀಯರು ತಪ್ಪದೆ ಅನುಸರಿಸಲೇಬೇಕಾದ ಧರ್ಮದ ಬಗ್ಗೆ ಯಾವ ವಿವಾದವೂ ಇಲ್ಲ. ಅದನ್ನು ಸ್ತ್ರೀ ಧರ್ಮ ಎನ್ನಲಾಗಿದೆ. ವಿವಾಹವಾಗಿರುವ ಸ್ತ್ರೀಯರಿಗೆ ಪತಿಯೇ ಪರದೈವ ಎಂಬಂಥ ಸತಿಧರ್ಮ, ಪತಿವ್ರತಾಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ. ಆದರೆ ಪುರುಷರಿಗೆ ಪೌರುಷಧರ್ಮವೊಂದೇ ಮುಖ್ಯವಲ್ಲದೆ ಸ್ತ್ರೀಯರಂತೆ ಕಟ್ಟುಕಟ್ಟಲೆ ವಿರೂಪ, ಸಾಮಾಜಿಕ ಬಹಿಷ್ಕಾರ ಯಾವುದೂ ಇಲ್ಲ. ಇಲ್ಲಿಂದಲೇ ಪ್ರಾರಂಭವಾಗುತ್ತವೆ ಪುರುಷ ಪ್ರಧಾನ ಚಿಂತನೆಗಳು."[5] ಪುರುಷ ಪ್ರಧಾನ ವ್ಯವಸ್ಥೆಯ ವೈದಿಕಶಾಹಿಯು ಸ್ತ್ರೀಯರನ್ನು ಬಂಧನದಲ್ಲಿ ಗುರಿಪಡಿಸುವ ಉದ್ದೇಶದಿಂದ ಕೆಲವು ಧಾರ್ಮಿಕ ನಿಯಮಗಳನ್ನು ಪ್ರಬಲವಾಗಿ ರೂಪಿಸಿಕೊಂಡು ಬಂದಿದೆ. ಆದ್ದರಿಂದ ಪಿತೃಪ್ರಾಧಾನ್ಯತೆಯ ಹಿಂದೂ ಮೂಲಭೂತವಾದವು ಹೆಣ್ಣನ್ನು ಬಂಧನದಲ್ಲಿ ಗುರಿಪಡಿಸಿದೆ. ಆದರೆ ಮಾತೃಪ್ರಧಾನ ವ್ಯವಸ್ಥೆಯು ಇಲ್ಲಿನ ಮೂಲ ನಿವಾಸಿಗಳಾದ ಆದಿಮ ಸಂಸ್ಕೃತಿ ಹಾಗೂ ಬುಡಕಟ್ಟು ಸಮುದಾಯಗಳಲ್ಲಿ ಹೆಣ್ಣಿಗೆ ಯಾವುದೇ ಪ್ರಬಲವಾದ ನಿರ್ಬಂಧಗಳು ಕಂಡುಬರುವುದಿಲ್ಲ.

ಮ್ಯಾಸಬೇಡ ಸಮುದಾಯದಲ್ಲಿ ಮಹಿಳೆಯು ಪುರುಷನಂತೆ ಸಮಾನತೆಯನ್ನು ಹೊಂದಿರುವುದನ್ನು ಹಿಂದಿನಿಂದಲೂ ಕಾಣಬಹುದಾಗಿದೆ. ಇಲ್ಲಿ ತಮ್ಮ ಆರಾಧನೆಯ ಸ್ವರೂಪದಲ್ಲಿಯೇ ಈ ಸಮುದಾಯವು ಹೆಣ್ಣಿಗೆ ವಿಶೇಷ ಸ್ಥಾನಮಾನಗಳನ್ನು ನೀಡಿರುವುದು ಕಂಡುಬರುತ್ತದೆ. ಈ ಸಮುದಾಯವು ಪ್ರಕೃತಿ ಆರಾಧಕರಾಗಿದ್ದು, ಪ್ರಕೃತಿಯಲ್ಲಿಯೇ ದೈವೀ ನಂಬಿಕೆಯನ್ನು ಹೊಂದಿರುವುದು ತಿಳಿದುಬರುತ್ತದೆ. ಇಲ್ಲಿ "ಬೇವಿನ ಮರವನ್ನು ದೇವಿ ಮರವೆಂದೂ ಮತ್ತು ಬನ್ನಿ ಮರವನ್ನು ಮಹಾಕಾಳಿಯ ಮರವೆಂದು ಸ್ವೀಕರಿಸಿ ಕೆಲವು ಬೇವಿನ ಮರದ ಮತ್ತು ಬನ್ನಿ ಮರದ ಬುಡಗಳ ಹತ್ತಿರ ಕಲ್ಲುಗಳನ್ನು ಪ್ರತಿಷ್ಠಾಪಿಸಿ, ಅವುಗಳನ್ನೇ ದೇವಿ ಮತ್ತು ಮಹಾಕಾಳಿ ಎಂದು ಪೂಜಿಸುತ್ತಾರೆ. ಮಾರಿ, ದೇವಿ, ಮಹಾಕಾಳಿ ಮುಂತಾದ ದೈವಗಳು ಕೆಲವು ನಿರ್ದಿಷ್ಟ ಜನರ ಮೈಯ್ಯಲ್ಲಿ ಆಗಾಗ್ಗೆ ಅವಾಹನೆಯಾಗಿ ಸೂಚನೆಯನ್ನು ನೀಡುತ್ತವೆಯೆಂದು ನಂಬಿ ಆ ಸೂಚನೆಗಳನ್ನು ಎಷ್ಟೇ ಅಡ್ಡಿ ಬರಲಿ ಪಾಲಿಸಿಯೇ ತೀರುತ್ತಾರೆ."[೬] ಹೀಗೆ ಈ ಸಮುದಾಯದಲ್ಲಿ ಹೆಣ್ಣಿಗೆ ಹಾಗೂ ಸ್ತ್ರೀ ದೈವಗಳಿಗೆ ವಿಶೇಷವಾದ ಸ್ಥಾನಮಾನಗಳು ಕಂಡುಬರುತ್ತವೆ. ಬಹುತೇಕವಾಗಿ ಈ ಸಮುದಾಯದ ಮಹಿಳೆಯ ಮೈಮೇಲೆ ಹೆಣ್ಣು ದೈವಗಳು ಆವಾಹನೆಯಾಗುವುದು ಕಂಡುಬರುತ್ತದೆ. ಪುರೋಹಿತಶಾಹಿ ಮಾದರಿಯಂತೆ ಇಲ್ಲಿ ಧಾರ್ಮಿಕ ಕಾರ್ಯ ವಿಧಾನಗಳಿಗೆ ಹೆಣ್ಣಿಗೆ ಯಾವುದೇ ರೀತಿಯ ನಿರ್ಬಂಧಗಳು ಕಂಡುಬರುವುದಿಲ್ಲ. ಸ್ತ್ರೀಯರು ಮುಕ್ತವಾಗಿ ಧರ್ಮ ಮತ್ತು ದೇವರ ಕಾರ್ಯಗಳಲ್ಲಿ ಸಮಾನ ನೆಲೆಯಲ್ಲಿ ಭಾಗಿಯಾಗುವುದು ಕಂಡುಬರುತ್ತದೆ.

೬.೨ ಮ್ಯಾಸಬೇಡ ಸಮುದಾಯದ ಮಹಿಳೆ ಮತ್ತು ಶೈಕ್ಷಣಿಕ ಸ್ಥಿತಿಗತಿ

ಮ್ಯಾಸಬೇಡ ಸಮುದಾಯವು ಅರಣ್ಯವಾಸಿಗಳಾಗಿದ್ದು, ಕಾಡಿನಲ್ಲಿಯೇ ಜೀವನ ಸಾಗಿಸುತ್ತ ಬಂದ ಪಂಗಡವಾಗಿದೆ. ಈ ಬೇಡ ಸಮುದಾಯವು ಬೇಟೆ ವೃತ್ತಿಯನ್ನು ತಮ್ಮ ಜೀವನಕ್ಕೆ ಆಸರೆಯಾಗಿ ಅವಲಂಬಿಸಿಕೊಂಡು ಬಂದಿದೆ. ಇಂತಹ ಬೇಡ ಸಮುದಾಯದಲ್ಲಿ ಶೈಕ್ಷಣಿಕ ಮಟ್ಟವನ್ನು ತಿಳಿಯಬೇಕಾದರೆ ಆಧುನಿಕ ಸಂದರ್ಭದಲ್ಲಿ ಮಾತ್ರ ಸಾಧ್ಯವಾಗಿದೆ. ಆಧುನಿಕ ಸಂದರ್ಭದಲ್ಲಿ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಪ್ರತಿಫಲವಾಗಿ ಈ ಸಮುದಾಯವು ಶಿಕ್ಷಣವನ್ನು ಪಡೆಯುತ್ತಿದೆ. ಇದಕ್ಕೂ ಮೊದಲು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದವರು ಮಾತ್ರ ಶಿಕ್ಷಣದ ಅವಕಾಶಗಳನ್ನು ಪಡೆದಿರುವುದು ತಿಳಿದುಬರುತ್ತದೆ. ಅದರಲ್ಲಿ ಮಹಿಳೆಯ ಪ್ರತಿನಿಧಿಕರಣ ತಡವಾಗಿದೆ ಎಂದರೆ ತಪ್ಪಾಗಲಾರದು. ಅಂದರೆ ಸುಮಾರು ೨೦ರಿಂದ ೩೦ ವರ್ಷಗಳ ಹಿಂದಿನಿಂದ ಮಾತ್ರ ಈ ಸಮುದಾಯದ ಮಹಿಳೆಯರು ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿರುವುದಾಗಿ ತಿಳಿದುಬರುತ್ತದೆ.

ಬೇಡ ಸಮುದಾಯದ ಮಹಿಳೆಯರ ಶೈಕ್ಷಣಿಕ ಇತಿಹಾಸವನ್ನು ಅಧ್ಯಯನಕ್ಕೆ ಒಳಪಡಿಸುವ ಈ ಸಂದರ್ಭದಲ್ಲಿ ಈ ಸಮುದಾಯದ ಇತಿಹಾಸವನ್ನು ಗಮನಿಸಿದಾಗ ತ್ರೇತಾಯುಗದಲ್ಲಿಯೇ ಬೇಡರ ಕನ್ಯೆಯಾದ ಶಬರಿಯು ಮದುವೆಯ ವಯಸ್ಸಿಗೆ ಬಂದಾಗ ಮದುವೆ ಕಾರ್ಯಕ್ಕೆ

ವಿರೋಧಪಡಿಸಿ 'ನನಗೆ ಈ ಜನ್ಮದಲ್ಲಿ ಲಗ್ನವೇ ಬೇಡ, ನನ್ನನ್ನು ಈ ಕರ್ಮದ ಹಾದಿಯಲ್ಲಿ ಸಿಲುಕಿಸಬೇಡಿ' ಎಂದು ತಂದೆ ತಾಯಿಗಳನ್ನು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಮಗಳ ಈ ಬೇಡಿಕೆಯನ್ನು ತಂದೆತಾಯಿಗಳು ಅನುಮೋದಿಸುತ್ತಾರೆ. "ಒಂದು ದಿನ ಮುನಿಶ್ರೇಷ್ಠನಾದ ಮಾತಂಗ ಮಹರ್ಷಿಯು ಇವರ ಪಾಳ್ಯಕ್ಕೆ ಬರಲು ಪಾಳ್ಯದ ಯಜಮಾನನಾದ ಶಬರಿಯ ತಂದೆಯು ಮುನಿಗಳನ್ನು ತನ್ನ ಕುಟೀರಕ್ಕೆ ಕರೆದೊಯ್ದು ಉಪಚರಿಸಿ ತನ್ನ ಮಗಳಿಂದ ಶುಶ್ರೂಷೆಯನ್ನು ಮಾಡಿಸಿದನು. ಮಗಳ ವೃತ್ತಾಂತವನ್ನು ಮತ್ತು ಅವಳ ಇಚ್ಛೆಯನ್ನು ತಿಳಿಸಲಾಗಿ ಮುನಿವರ್ಯನು ಇವಳ ತೇಜಸ್ಸು ಲಕ್ಷಣಗಳನ್ನು ನೋಡಿ, 'ಇವಳು ಸಾಮಾನ್ಯಳಲ್ಲ, ನಿನ್ನ ವಂಶಕ್ಕೆ ಕೀರ್ತಿ ತರುವಂತ ತೇಜಸ್ಸು ಇವಳ ಮುಖದಲ್ಲಿ ತುಂಬಿದೆ. ಇವಳನ್ನು ನನ್ನ ಆಶ್ರಮಕ್ಕೆ ಕಳುಹಿಸಿಕೊಡಿ ವಿದ್ಯೆಯನ್ನು ಕಲಿಸಿ ಬ್ರಹ್ಮೋಪದೇಶವನ್ನು ಮಾಡುತ್ತೇನೆ.' ಎಂದರು. ಇದಕ್ಕೆ ಅವರು ಒಪ್ಪಿ ಮಾತಂಗ ಮುನಿಯ ಆಶ್ರಮಕ್ಕೆ ಕಳುಹಿಸಿಕೊಟ್ಟರು. ಇವಳಿಗೆ ಮುನಿಗಳು ಒಳ್ಳೆಯ ಶುಭಮುಹೂರ್ತದಲ್ಲಿ ಬ್ರಹ್ಮೋಪದೇಶವನ್ನು, ವಿದ್ಯೆ ಕಲಿಸಿ ಪುನಿತೆಯನ್ನಾಗಿ ಮಾಡಿದರು. ಮಾತಂಗ ಮುನಿಯು 'ಎಲೈ ಶಬರಿಯೇ ಪೂರ್ವ ಜನ್ಮದ ಸಕೃತ ಫಲದಿಂದ ನೀನು ಧನ್ಯಳಾದೆ. ಮುಂದೆ ತಪಸ್ಸನ್ನು ಆಚರಿಸು. ಕಾಲಾಂತರದಲ್ಲಿ ಸಾಕ್ಷಾತ್ ಆದಿನಾರಾಯಣನ ಅವತಾರವಾದ ಶ್ರೀರಾಮನ ಆಗಮನವಾಗಲಿದೆ. ಶ್ರೀರಾಮಚಂದ್ರನ ದರ್ಶನ ಪಡೆದು ಈ ಜನ್ಮದಿಂದ ಧನ್ಯಳಾಗು' ಎಂದು ಆಶೀರ್ವದಿಸಿ, 'ಶ್ರೀಸಾಮಾನ್ಯರಲ್ಲಿ ಬ್ರಹ್ಮಜ್ಞಾನ ದೊರಕಿರುವ ನೀನೆ ಈ ಜಗತ್ತಿಗೆ ಮೊದಲನೆ ಕನ್ಯೆ' ಎಂದು ಶುಭಕೋರಿ ಕಳುಹಿಸಿಕೊಟ್ಟರು."[೮] ಹೀಗೆ ಬೇಡ ಬುಡಕಟ್ಟಿನ ಮಹಿಳೆಯೊಬ್ಬಳು ಶಿಕ್ಷಣವನ್ನು ಪಡೆದ ಪೌರಾಣಿಕ ನಿದರ್ಶನವೊಂದು ನಮ್ಮ ಮುಂದಿದೆ. ಪುರೋಹಿತಶಾಹಿ ಬ್ರಾಹ್ಮಣ ಧರ್ಮವು ಸಾಮಾನ್ಯ ಜನರನ್ನು ವಿದ್ಯೆಯಿಂದ ವಂಚಿಸಿದ ಕಾಲಕ್ಕಿಂತ ಹಿಂದೆಯೇ ಬುಡಕಟ್ಟು ಮಹಿಳೆಯೊಬ್ಬಳು ಬ್ರಹ್ಮಜ್ಞಾನವನ್ನು ಪಡೆದ ನಿದರ್ಶನವಿದೆ. ಈ ಬುಡಕಟ್ಟು ಪರಂಪರೆಯಲ್ಲಿ ಹೆಣ್ಣಿಗೆ ಮುಕ್ತ ಸ್ವಾತಂತ್ರ್ಯವಿದೆ ಎಂಬುದನ್ನು ಅರಿಯುವುದಕ್ಕೆ ಇದು ಸೂಕ್ತ ನಿದರ್ಶನವೆಂದು ಕಂಡುಬರುತ್ತದೆ. ಬೇಡ ಬುಡಕಟ್ಟಿನ ಮಹಿಳೆಯರ ಶೈಕ್ಷಣಿಕ ಇತಿಹಾಸವನ್ನು ಅಥವಾ ದಾಖಲೆಯನ್ನು ತೇತ್ರಾಯುಗದಿಂದ ಆಧುನಿಕ ಯುಗದವರೆಗೆ ಗುರುತಿಸಲು ಹಲವಾರು ಚಾರಿತ್ರಿಕ ದಾಖಲೆಗಳು ನಮಗೆ ಲಭ್ಯವಾಗಿವೆ.

ಕರ್ನಾಟಕದಲ್ಲಿ ಕಂಡುಬರುವ ಈ ಮ್ಯಾಸಬೇಡ ಸಮುದಾಯವು ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ಸಮುದಾಯಗಳಲ್ಲೊಂದಾಗಿದೆ. ಭಾರತದ ಶೈಕ್ಷಣಿಕ ವ್ಯವಸ್ಥೆಯ ಅಸಮಾನತೆಯಿಂದಾಗಿ ಶೂದ್ರ ಸಮುದಾಯವೆಂದು ತುಳಿತಕ್ಕೆ ಒಳಪಟ್ಟಿರುವ ಈ ಜನಾಂಗಗಳನ್ನು ಪುರೋಹಿತಶಾಹಿಯು ಹಲವಾರು ಧಾರ್ಮಿಕ ವಿಧಿವಿಧಾನಗಳ ನೆಲೆಯಲ್ಲಿ ಈ ಸಮುದಾಯವನ್ನು ತಿರಸ್ಕಾರಕ್ಕೆ ಗುರಿಪಡಿಸುತ್ತಾ ಬಂದಿದೆ. "ನಿರಕ್ಷರತೆ, ಬಡತನಗಳ ಫಲವಾಗಿ ನಾಡಿನ ಸ್ತ್ರೀಯರು ಲಿಂಗತಾರತಮ್ಯದ ಮೂಲಕ ಅಸಂಖ್ಯ ದುಃಖ, ನೋವುಗಳನ್ನೇ ಉಂಡು, ಹಾಸಿ, ಹೊದ್ದು ಬದುಕಲು ಅನಿವಾರ್ಯವಾಗಿ ಕಲಿತರು. ಅದರರ್ಥ, ಅವರ ಸ್ಥಿತಿಗತಿಗಳು ಪಶ್ಚಿಮದ ಸ್ತ್ರೀವಾದಿಗಳು ಹೇಳುವ ಸ್ತ್ರೀಶೋಷಣೆಯ ನೆಲೆಗಿಂತ ಉತ್ತಮವಾಗಿವೆ ಎಂದೇನೂ ಅಲ್ಲ. ತಮ್ಮ ನೋವಿನ ಅನುಭವಗಳ ಬಗ್ಗೆ ಅವರು

ಹೊಂದಿರುವ ಮನೋಧರ್ಮ ಎಚ್ಚೆತ್ತವರ ಪ್ರತಿಭಟನೆಯ ರೂಪದ್ದಲ್ಲ ಎಂದು ಅದರರ್ಥ. ಇಂಥ ಮಹಿಳೆಯರ ಬಗ್ಗೆ ಪುರುಷ ಪ್ರಧಾನ ಶಿಷ್ಠ ಸಾಹಿತ್ಯವು ಏನು ಹೇಳುತ್ತದೆ ಎಂಬುದನ್ನು ಈ ಪರಂಪರೆಗೆ ಪ್ರವೇಶವೇ ಇಲ್ಲದ ನಿರಕ್ಷರಿ ಗ್ರಾಮೀಣ ಹೆಣ್ಣು ಮಕ್ಕಳು ಜಾನಪದದ ಮೌಖಿಕ ಪರಂಪರೆಯಲ್ಲಿ ತಮ್ಮ ಬಗ್ಗೆ ತಾವೇ ಏನು ಹೇಳಿಕೊಳ್ಳುತ್ತಾರೆ ಎಂಬುದನ್ನು ತುಲನೆ ಮಾಡಿದರೆ ಕರ್ನಾಟಕದ ಪ್ರಾಚೀನ ಕಾಲದ ಹೆಣ್ಣು ಮಕ್ಕಳ ಅನುಭವದ ಸ್ವರೂಪ ಹೇಗಿತ್ತು ಎಂದು ಅರಿಯಲು ಸಾಧ್ಯ."[7] ಇದನ್ನು ಹಲವಾರು ಪ್ರಾಚೀನ ಕಾವ್ಯಗಳು, ವೀರಗೀತೆಗಳು ಹಾಗೂ ಜನಪದ ಪುರಾಣಗಳು ಈ ಕುರಿತು ಹಲವಾರು ಮಾಹಿತಿಗಳನ್ನು ಒದಗಿಸುತ್ತವೆ. ಇವುಗಳ ಆಧಾರದಲ್ಲಿ ತಳಸಮುದಾಯದ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಯುವುದಕ್ಕೆ ಸಹಕಾರಿಯಾಗುತ್ತದೆ.

ವ್ಯಕ್ತಿತ್ವ ವಿಕಾಸಕ್ಕೆ ಮಾನವ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಗೌರವಿಸುವುದಕ್ಕೆ ಶಿಕ್ಷಣ ಅಗತ್ಯವಾದುದು. ಶಿಕ್ಷಣ ಎನ್ನುವುದು ನಮ್ಮನ್ನು ನಾವು ಗೌರವಿಸಿಕೊಳ್ಳುವುದಕ್ಕೆ ಹಾಗೆಯೇ ಇತರರು ನಮ್ಮನ್ನು ಗೌರವಿಸುವುದಕ್ಕೆ. ನಮ್ಮ ಸಮಾಜದ ಏಳ್ಗೆಗೆ ಇರುವ ಸಾಧನ. ಅದಕ್ಕಾಗಿಯೇ ಶಿಕ್ಷಣ ಎನ್ನುವುದು ಮೂಲಭೂತ ಹಕ್ಕು. ಈ ಹಕ್ಕು ಎಲ್ಲರಿಗೂ ಸಮಾನವಾಗಿ ಸಿಗುವಂತಾಗಬೇಕು. ಶಿಕ್ಷಣ ಉಚಿತವಾಗಿ ಸಿಗಬೇಕು. ಕೊನೆಪಕ್ಷ ಪ್ರಾಥಮಿಕ ಹಂತದಲ್ಲಾದರೂ ಸಿಗಲೇಬೇಕು. ತಾಂತ್ರಿಕ ಮತ್ತು ಶಿಕ್ಷಣಗಳು ಉಚಿತವಾಗಿ ಸಿಗುವಂತಾಗಬೇಕು. ಆಗಲಾದರೂ ಶಿಕ್ಷಣದ ಅರ್ಥ ಮತ್ತು ಅಗತ್ಯ ತಿಳಿದೀತು. ಇನ್ನೂ ಬೇಡರು ನಾಗರೀಕತೆಯಿಂದ ದೂರವಾಗಿ ಪ್ರತ್ಯೇಕವಾಗಿ ಬದುಕಿ ತಮ್ಮ ಸಾಂಸ್ಕೃತಿಕ ಅಪೂರ್ವತೆಯನ್ನು ಉಳಿಸಿಕೊಂಡು ಬಂದವರು. ನಾಯಕ ಸಮುದಾಯವು ಎಪ್ಪತ್ತು ಲಕ್ಷದಷ್ಟು ಇದ್ದರೂ ಆದಿ ಮಾನವನಂತೆ ಬಹುಕೀಳು ಮಟ್ಟದವರಂತೆ ವರ್ತಿಸುತ್ತಿದ್ದೇವೆ. ಇನ್ನು ನಮಗೆ ಸಿಗಬೇಕಾದ ಸೌಲಭ್ಯಗಳು ಸಿಗುತ್ತಿಲ್ಲ. ಕೇವಲ ಕೆಲ ಒಬ್ಬರಿಗೆ ಮಾತ್ರ ಸಿಗುತ್ತಿದ್ದು ನಾವು ಅರ್ಹತೆ ಹೊಂದಿದ್ದರೂ ಅವುಗಳಿಂದ ವಂಚಿತರಾಗಿದ್ದೇವೆ. ಇದಕ್ಕೆ ಪ್ರಮುಖ ಕಾರಣ ಈ ಸಮುದಾಯವು ಶೈಕ್ಷಣಿಕವಾಗಿ ತೀರಾ ಹಿಂದುಳಿದಿರುವುದಾಗಿ ಕಂಡುಬರುತ್ತದೆ. ಕೇವಲ ಬೆರಳೆಣಿಕೆಯಷ್ಟು ಜನ ಮಾತ್ರ ವಿದ್ಯಾವಂತರಾಗಿದ್ದಾರೆ. ಈ ಜನಾಂಗದಲ್ಲಿ ಇವತ್ತಿಗೂ ಪುರಾಣೇತಿಹಾಸದ ಏಕಲವ್ಯನ ಸ್ಥಿತಿ ಬಂದೊದಗಿದೆ. ನಾಯಕ ಜನಾಂಗದಲ್ಲಿ ಅವಿದ್ಯಾವಂತರು ಹೆಚ್ಚಾಗಿದ್ದಾರೆ. ಓದಿ ಏನು ಸಾಧನೆ ಮಾಡಬೇಕಾಗಿದೆ ಎಂಬ ಕೀಳರಿಮೆಯಿಂದ ಮಕ್ಕಳಿಗೆ ಶಿಕ್ಷಣ ಕೊಡಿಸದೆ ಕೂಲಿಗೆ ಕಳುಹಿಸುತ್ತಾರೆ. ಬೆಳೆಯುವ ಸಿರಿಗಳನ್ನು ಮೊಳಕೆಯಲ್ಲಿಯೇ ಕಿವುಚಿಹಾಕುತ್ತಾರೆ. ದನ ಕಾಯಲೋ, ಮೇಕೆ ಕಾಯಲೋ, ಉಳ್ಳವರ ಚಾಕರಿ ಮಾಡಲೋ ಕಳುಹಿಸುತ್ತಾರೆ. ಇದು ಸರಿಯಲ್ಲ. ಮೊದಲು ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ಕೊಡಿಸುವಂತಾಗಬೇಕು. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಮಕ್ಕಳಿಗೆ ಪ್ರೋತ್ಸಾಹ ನೀಡಬೇಕು. ಮಕ್ಕಳಿಗೆ ಸರಿಯಾದ ಕ್ರಮದಲ್ಲಿ ಶಿಕ್ಷಣ ಕೊಡಿಸುವುದಾಗಬೇಕು. ಮಕ್ಕಳನ್ನು ಪ್ರಜ್ಞಾವಂತರನ್ನಾಗಿ ಮಾಡಿದಾಗ ಮಾತ್ರ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಶೈಕ್ಷಣಿಕ ವಿಚಾರವಾಗಿ ಮೊದಲು ತಂದೆ ತಾಯಿಗಳಿಗೆ ಶಿಕ್ಷಣದ ಮಹತ್ವ ಕುರಿತು ಅರಿವು ಮೂಡಿಸಬೇಕಾಗಿದೆ. ಅಜ್ಞಾನ ತಂದೆ ತಾಯಿಗಳು ಮಕ್ಕಳನ್ನು ಓದಿಸುವುದಾದರೂ ಹೇಗೆ? ಅದಕ್ಕಾಗಿ

ಸಮುದಾಯದ ಹಿರಿಯ ಮುಖಂಡರು, ರಾಜಕೀಯ ಮುಖಂಡರು ಧರ್ಮಗುರುಗಳು ಜನಾಂಗದ ಶೈಕ್ಷಣಿಕ ಏಳಿಗೆಯಲ್ಲಿ ಸಹಕಾರವನ್ನು ನೀಡಬೇಕಾಗಿದೆ. ಸರಕಾರದ ಸೌಲಭ್ಯವನ್ನು ಸದುಪಯೋಗ ಪಡೆಯುವಂತೆ ತಿಳಿವಳಿಕೆ ನೀಡಬೇಕಾಗಿದೆ. ಪ್ರಸ್ತುತಿ ಸರಕಾರ ಪರಿಶಿಷ್ಟ ಪಂಗಡದವರಿಗಾಗಿಯೇ ಸಾಕಷ್ಟು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದರ ಸದುಪಯೋಗ ಇನ್ನೂ ಆಗುತ್ತಿಲ್ಲ. ನಾಯಕ ಸಮುದಾಯದಲ್ಲಿ ಓದಿದವರು ಬೆರಳೆಣಿಕೆಯಷ್ಟು ಮಾತ್ರ ಉನ್ನತ ಹುದ್ದೆಗಳನ್ನು ಪಡೆದಿದ್ದಾರೆ. ಈ ಉನ್ನತ ಹುದೆಗಳಿಗಾಗಿ ತರಬೇತಿ ಕೇಂದ್ರಗಳನ್ನು ತೆರೆದಿದ್ದರೂ ಸಮರ್ಪಕವಾಗಿ ಮಾರ್ಗದರ್ಶನ ಪಡೆಯುತ್ತಿಲ್ಲ. ಕೇವಲ ಗೌರವ ಧನಕ್ಕಾಗಿ ಮಾತ್ರ ಸೇರಿಕೊಳ್ಳುವ ಜನರಿದ್ದಾರೆ. ಕಾಯಾ ವಾಚಾ ಮನಸ್ಸಿನಿಂದ ಪ್ರಯತ್ನ ಮಾಡುತ್ತಿಲ್ಲ. ಉನ್ನತ ಹುದ್ದೆ ಅಲಂಕರಿಸಿರುವ ಕುಲಬಾಂಧವರ ಸಹಾಯ ಸಹಕಾರ ಪಡೆಯಬೇಕು. ಪಡೆದಾಗ ಮಾತ್ರ ನಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗಲು ಸಾಧ್ಯ ಎಂಬುದು ಬೇಡ ಸಮುದಾಯದ ಯುವಜನತೆಯ ಆಶಯವಾಗಿದೆ.

ನಾಯಕ ಸಮುದಾಯದ ಪ್ರತಿಯೊಂದು ಕುಟುಂಬ ತಮ್ಮ ಮಕ್ಕಳ ಶಿಕ್ಷಣದ ಕುರಿತು ಚಿಂತಿಸಬೇಕು. ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ದಿಶೆಯಲ್ಲಿ ಸ್ತ್ರೀ ಶಿಕ್ಷಣ ಅವಶ್ಯಕತೆ ಏಕೆಂದರೆ? ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ಉಕ್ತಿಯಂತೆ ಸ್ತ್ರೀಯರು ಮೊದಲು ವಿದ್ಯಾವಂತರಾಗಬೇಕು. ಈ ಜನಾಂಗದ ಸ್ತ್ರೀ ಶಿಕ್ಷಣದ ಕೊರತೆಯೆಂದರೆ, ೧೨-೧೩ ವಯಸ್ಸಿಗೆಲ್ಲಾ ಶಾಲೆ ಬಿಡಿಸಿ ಮದುವೆ ಮಾಡಿ ಬಿಡುವುದು, ಇಲ್ಲವೆ ದೇವರ ಹೆಸರಿನಲ್ಲಿ ಬಿಡುವ ಗೊಡ್ಡು ಸಂಪ್ರದಾಯವನ್ನು ಕಾಣುತ್ತೇವೆ. ಈಗಾಗಲೇ ಮುಂದುವರಿದ ಜನಾಂಗಗಳಲ್ಲಿ ಈ ಸಂಪ್ರದಾಯ ಇಲ್ಲ. ಕೇವಲ ಕೆಳವರ್ಗದ ಜನರಲ್ಲಿ ಮಾತ್ರ ಇಂತಹ ನಂಬಿಕೆ ಇರುವುದು ನಮ್ಮ ಮೌಢ್ಯತೆಗೆ ಸಾಕ್ಷಿಯಾಗಿದೆ. ಈ ಎಲ್ಲ ಮೂಢನಂಬಿಕೆಗಳನ್ನು ಬಿಟ್ಟು ಶಿಕ್ಷಣವನ್ನು ಸ್ತ್ರೀಯರು ಪಡೆದು ವಿದ್ಯಾವಂತರಾದರೆ ಉಳಿದ ಕ್ಷೇತ್ರಗಳಾದ ಆರ್ಥಿಕ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯ.

ಈ ಸಮುದಾಯದ ಇನ್ನೊಂದು ಕೊರತೆಯೆಂದರೆ, ಆರ್ಥಿಕವಾಗಿ ದುರ್ಬಲರಾಗಿರುವುದು ಕಂಡುಬರುತ್ತದೆ. ಇವತ್ತಿಗೂ ಈ ಸಮುದಾಯ ಕೂಲಿ ಕಾರ್ಮಿಕರಾಗಿ, ಅದೇ ಉದ್ಯೋಗಗಳಿಗಾಗಿ ದೊಡ್ಡ ದೊಡ್ಡ ಪಟ್ಟಣಗಳಿಗೆ ವಲಸೆ ಹೋಗಿ ತಮ್ಮ ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದಾರೆ. ಸಾಕಷ್ಟು ಕುಟುಂಬಗಳು ಕಡುಬಡತನದಲ್ಲಿರುವುದು ಸ್ಪಷ್ಟವಾಗಿದೆ. ದುಡಿದ ಹಣದಲ್ಲಿ ವ್ಯರ್ಥ ಖರ್ಚು ಮಾಡಿ ಕುಡಿತದ ದಾಸರಾಗಿದ್ದಾರೆ. ಇನ್ನು ಕೆಲವರು ದುಡಿಯದೆ ಸೋಮಾರಿಗಳಾಗಿ ಅಗಸೆ ಕಟ್ಟೆಯ ಅತಿಥಿಗಳಾಗಿರುವ ದೃಶ್ಯ ಹಳ್ಳಿಗಳಲ್ಲಿ ಕಂಡುಬರುತ್ತದೆ. ಸರ್ಕಾರದ ಸೌಲಭ್ಯಗಳ ಸದುಪಯೋಗ ಸರಿಯಾಗಿ ಆಗುತ್ತಿಲ್ಲ. ಬ್ಯಾಂಕಿನಲ್ಲಿ ಸಾಲ ಪಡೆದು ಮರುಪಾವತಿಸದೆ ಬರಿ ಬಡ್ಡಿಯಲ್ಲಿಯೇ ಕಾಲ ಕಳೆಯುವಂತಾಗಿದೆ. ಇವತ್ತು ಆರ್ಥಿಕ ಸೌಲಭ್ಯಗಳು ಮನೆ ಬಾಗಿಲು ತಟ್ಟಿದರು ಅವುಗಳನ್ನು ಪಡೆಯುವಲ್ಲಿ ವಿಫಲವಾಗಿವೆ. ರಿಯಾಯಿತಿ ದರದಲ್ಲಿ ಕೃಷಿಗೆ ಸಂಬಂಧಿಸಿದಂತೆ ಸಾಕಷ್ಟು ಸಲಕರಣೆ

ಬೀಜ ಇನ್ನಿತರ ಸೌಲಭ್ಯಗಳು ಕೆಲವರ ಮನೆ ಸೇರುತ್ತವೆ. ಬಡವರಿಗೆ ಸಿಗದಂತೆ ಆಕಾಶದೆತ್ತರಕ್ಕೆ ಏರುತ್ತಾರೆ. ಸ್ಥಿತಿವಂತರು ಮಾತ್ರ ಇವರುಗಳ ಉಪಯೋಗ ಪಡೆಯುತ್ತಾರೆಯೇ ವಿನಃ ಬಡವರಿಗೆ ಸಿಗುತ್ತಿಲ್ಲ. ಈ ದಿಶೆಯಲ್ಲಿ ಆರ್ಥಿಕ ಸುಧಾರಣೆಯು ಕೇವಲ ಕನಸಿನ ಮಾತಾಗಿದೆ. ಆರ್ಥಿಕ ಸುಧಾರಣಾ ಕಾರ್ಯಕ್ರಮಗಳನ್ನು ಬಡವರಿಗೆ ಸಿಗುವಂತೆ ಸಂಘಟನೆಗಳು ಸರ್ವಪ್ರಯತ್ನ ಮಾಡಬೇಕು.

ಬೇಡ ಮಹಿಳೆಗೆ ಕುಟುಂಬದಲ್ಲಿ ಪ್ರಮುಖ ಸ್ಥಾನ ಇದೆ. ಮನೆಯ ಯಜಮಾನ ಪುರುಷನೇ ಆಗಿರುತ್ತಾನೆ. ಆದರೆ ಅವರ ವ್ಯಕ್ತಿತ್ವದ ಹಿಂದೆ ಹೆಣ್ಣಿನ ಸಹಕಾರ ತುಂಬಾ ಇದೆ. ಕೌಟುಂಬಿಕ ಜೀವನದಲ್ಲಿ ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಅತ್ತೆಯಾಗಿ, ಅತ್ತಿಗೆ, ನಾದಿನಿ, ವಾರಗಿತ್ತಿ, ಸೊಸೆ ಹೀಗೆ ಇನ್ನು ಅನೇಕ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಈ ಎಲ್ಲಾ ಪಾತ್ರಗಳಿಗೂ ಬೇಡರ ಕುಟುಂಬಗಳಲ್ಲಿ ಅದರದ್ದೇ ಆದ ಸ್ಥಾನಮಾನವಿದೆ. ಕುಟುಂಬದೊಳಗೆ ಮಹಿಳೆ ಕಷ್ಟ, ಸುಖ, ನೋವು, ನಲಿವು, ಪ್ರೀತಿ, ಪ್ರೇಮ, ದ್ವೇಷ, ಅಸೂಯೆ ಹಾಗೂ ಇನ್ನಿತರ ಅನೇಕ ಸಂದಿಗ್ಧ ಸ್ಥಿತಿಗೆ ಒಳಗಾಗುತ್ತಾಳೆ. ಇಂತಹ ಸ್ಥಿತಿಯಲ್ಲಿನ ಮಹಿಳೆ ಶಾಂತ ಮನಸ್ಥಿತಿಯಿಂದ ಈ ಎಲ್ಲಾ ಸನ್ನಿವೇಶಗಳನ್ನು ಸಹಿಸಿಕೊಳ್ಳುವ ಗುಣ ಇದೆ. ಹಾಗೆಯೇ ಬಂಜೆಯಾದ ಬೇಡರ ಮಹಿಳೆಗೆ ಈ ಸಮುದಾಯಗಳಲ್ಲಿ ಗೌರವ ಕೊಡುವುದು ಕಡಿಮೆ. ಜೊತೆಗೆ ಗಂಡು ಮಗುವಿನ ಜನನ ಕುಟುಂಬದಲ್ಲಿ ಆದರೆ ತುಂಬ ಸಂತೋಷಪಡುತ್ತಾರೆ. ಅದೇ ಹೆಣ್ಣುಮಗುವಿನ ಜನನವಾದಾಗ ಅಷ್ಟು ಸಂತೋಷವಾಗುವುದಿಲ್ಲ. ಆ ಮಗುವನ್ನು ಸಹಜವಾಗಿಯೇ ಸ್ವೀಕರಿಸುತ್ತಾರೆ. ಇದು ಇದೊಂದೆ ಸಮುದಾಯದ ಸ್ಥಿತಿಯಲ್ಲ. ಇಡೀ ಭಾರತೀಯ ಜನಾಂಗದ ಸ್ಥಿತಿಯಾಗಿರುತ್ತದೆ. ಆದರೆ ಇಂದು ನಾವು ಈ ಸ್ಥಿತಿಯನ್ನು ಮೀರಿ ನಿಂತುಕೊಳ್ಳಬೇಕು. ಇದು ಸಿನಿಕತನದ ಮಾತಾಗಿದೆ. ಏಕೆಂದರೆ ಹೆಣ್ಣು ಸಮಾಜದ ಕಣ್ಣು, ಕುಟುಂಬದ ಕಣ್ಣು ಎಂದು ಮಾತನಾಡುತ್ತೇವೆ. ಪ್ರಾಯೋಗಿಕವಾಗಿ ನಿಭಾಯಿಸುವಂತಹ ಸಂದರ್ಭ ಬಂದಾಗ ನಾವುಗಳು ಸರಿ ತಪ್ಪುಗಳನ್ನು ಹುಡುಕುವ ಕೆಲಸ ಮಾಡಬೇಕಾಗಿದೆ. ಹೆಣ್ಣಿಗೆ ಶಿಕ್ಷಣ ನೀಡಿದರೆ ಕೊಟ್ಟ ಮನೆಗೆ ಹೋಗುವವಳಿಗೆ ಶಿಕ್ಷಣವನ್ನು ಜಾಸ್ತಿ ಕೊಡಿಸಬಾರದು, ಶಿಕ್ಷಣವನ್ನು ಜಾಸ್ತಿ ಕೊಡಿಸಿದರೆ ಅದು ಗಂಡನಿಗೆ ಲಾಭ ಎಂಬ ಕಾರಣವೂ ಹೌದು. ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಪ್ರಜ್ಞೆ ಹೊಂದಲು ಪ್ರಜಾಪ್ರಭುತ್ವವನ್ನು ಬಲಪಡಿಸಲು ಪ್ರತಿಯೊಬ್ಬರಿಗೂ ಅಕ್ಷರ ಜ್ಞಾನ ಅವಶ್ಯಕ ಎಷ್ಟಿದೆ ಎಂಬುದು ಸ್ಪಷ್ಟವಾದ ವಿಷಯವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಎಲ್ಲರಿಗೂ ದೊರಕಬೇಕು ಎಂಬ ಉದಾರವಾದ ವಾಕ್ಯ. ಆದರೆ ಈ ವಿಷಯದಲ್ಲಿ ಅಂಕಿ ಸಂಖ್ಯೆಗಳನ್ನು ಗಮನಿಸಿದರೆ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳಲ್ಲಿ ಅನಕ್ಷರತೆ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಅದರಲ್ಲಿ ತೀರಾ ಹಿಂದುಳಿದಿರುವ ಪರಿಶಿಷ್ಟ ಸಮುದಾಯದವರು. ಕರ್ನಾಟಕದಲ್ಲಿನ ಸಾಕ್ಷರತೆಯ ಪ್ರಮಾಣವನ್ನು ಅವಲೋಕಿಸುವುದು ಪ್ರಸ್ತುತವೆನಿಸುತ್ತದೆ. ವಿಶೇಷವಾಗಿ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ನಾಯಕ, ಬೇಡರು, ವಾಲ್ಮೀಕಿ ಮುಂತಾದ ಜನರ ಶಿಕ್ಷಣ ಮಟ್ಟವನ್ನು ಅರ್ಥೈಸಿಕೊಳ್ಳಲು ಅವರನ್ನು ಪ್ರಗತಿಯತ್ತ

ಕೊಂಡೊಯ್ಯಲು ಅವರಲ್ಲಿರುವ ಸಾಕ್ಷರತೆಯ ಬಗೆಗಿನ ಪ್ರಜ್ಞೆ, ಪ್ರಮಾಣದ ಬಗ್ಗೆ ತಿಳಿದುಕೊಳ್ಳುವುದು, ಪ್ರಮಾಣ ಕಂದಕಾರ ಬಗ್ಗೆ ತಿಳಿದುಕೊಳ್ಳುವುದು ತೀರಾ ಅವಶ್ಯತಕವಾಗಿರುವುದು.

ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿ ಹೇಳಬಹುದಾದರೆ ತೀರ ಹಿಂದುಳಿಯದೆ ಪ್ರಗತಿಯನ್ನು ಕಾಣದೆ ಮಂದಗತಿಯಲ್ಲಿ ಸಾಗುತ್ತಿದೆ. "೨೦೦೧ರ ಜನಗಣತಿ ಪ್ರಕಾರ ಒಟ್ಟು ಪ.ಪ ೩,೪೬೩,೯೮೬ ಜನಸಂಖ್ಯೆಯಲ್ಲಿ ಮಹಿಳೆಯರ ಜನಸಂಖ್ಯೆ ೧,೭೦೭,೭೪೮ ೧೦೦೦ ಗಂಡಸರಿಗೆ ೯೭೨ಜನ ಮಹಿಳೆಯರು ಕರ್ನಾಟಕದಲ್ಲಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ೨೩೬,೨೩೫ ಮಹಿಳೆಯರು ೧೩೦,೦೪೧ ಅಂದರೆ ೧೦೦೦ ಪುರುಷರಿಗೆ ೯೫೫ ಮಹಿಳೆಯರಿದ್ದಾರೆ. ಗ್ರಾಮೀಣದಲ್ಲಿ ೯೫೬, ನಗರದಲ್ಲಿ ೯೪೩ ಜನಸಂಖ್ಯೆ ಇದೆ."[೧೦]

"ಸಾಕ್ಷರತೆಯ ಪ್ರಮಾಣ	ಒಟ್ಟು	ಮಹಿಳೆಯರು
ಕರ್ನಾಟಕದಲ್ಲಿ	೪೮.೩	೩೬.೬
ಗ್ರಾಮೀಣ	೪೫.೩	೩೩.೩
ನಗರ೬೪.೬	೫೪.೩	

ಸಾಕ್ಷರತೆಯ ಪ್ರಮಾಣ	ಒಟ್ಟು	ಮಹಿಳೆಯರು
ಚಿತ್ರದುರ್ಗದಲ್ಲಿ	೫೩.೯	೪೧.೫
ಗ್ರಾಮೀಣ	೫೧.೬	೨೮.೯
ನಗರ೭೧.೯	೬೧.೯	

ಹೀಗೆ ಕರ್ನಾಟಕದಲ್ಲಿನ ಹಾಗೂ ಚಿತ್ರದುರ್ಗದಲ್ಲಿಯ ಬೇಡ ಮಹಿಳೆಯರ ಸಾಕ್ಷರತೆಯ ಪ್ರಮಾಣವನ್ನು ಕಾಣಬಹುದಾಗಿದೆ"[೧೧]

"೧೯೯೧ರ ಜನಗಣತಿ ಪ್ರಕಾರ ಸಾಕ್ಷರತಾ ಪ್ರಮಾಣ

ಸಾಕ್ಷರತೆಯ ಪ್ರಮಾಣ	ಒಟ್ಟು	ಮಹಿಳೆಯರು
ಕರ್ನಾಟಕದಲ್ಲಿ	೩೬.೦೧	೨೩.೫೭
ಗ್ರಾಮೀಣ	೩೨.೫೭	೨೮.೧೧
ನಗರ	೫೫.೦೮	೪೩.೮೩
ಚಿತ್ರದುರ್ಗದಲ್ಲಿ	೩೮.೭೪	೨೪.೭೩
ಗ್ರಾಮೀಣ	೩೫.೨೭	೨೧.೧೭
ನಗರ೬೦.೧೨	೪೭.೨೯	

ಹೀಗೆ ೧೯೯೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿನ ಹಾಗೂ ಚಿತ್ರದುರ್ಗದಲ್ಲಿಯ ಬೇಡ ಮಹಿಳೆಯರ ಸಾಕ್ಷರತೆಯ ಪ್ರಮಾಣವನ್ನು ಕಾಣಬಹುದಾಗಿದೆ"[೧೨]

ಜಿಲ್ಲಾವಾರು "ಸಾಕ್ಷರತೆಯ ಪ್ರಮಾಣವನ್ನು ಗಮನಿಸಿದರೆ ಶೈಕ್ಷಣಿಕ ಸ್ಥಿತಿಗತಿಯ ಚಿತ್ರಣ ದೊರಕೀತು. ಜನಸಂಖ್ಯೆಯಲ್ಲಿ ಕಡಿಮೆಯಿದ್ದರೂ ಶೇಕಡಾವಾರು ಸಾಕ್ಷರತೆಯ ಪ್ರಮಾಣದಲ್ಲಿ ಮುಂದಿರುವುದು ದಕ್ಷಿಣ ಕನ್ನಡ ಜಿಲ್ಲೆ. ಶೇಕಡ ೭೩ರಷ್ಟಿರುವ ಸಾಕ್ಷರತೆಯಲ್ಲಿ

- **ಪುರುಷರು ಶೇ.೮೦.೨**
- **ಮಹಿಳೆಯರು ಶೇ.೬೫.೭**

ಇದರಲ್ಲಿ ಗ್ರಾಮೀಣ ಸಾಕ್ಷರತೆ **ಶೇ.೭೧.೭,** ನಗರ ಸಾಕ್ಷರತೆ **ಶೇ.೮೦.೭**ರಷ್ಟಿದೆ."[೧೩]

"ಮೂರು ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ರಾಯಚೂರು ಜಿಲ್ಲೆ ಅತಿ ಕಡಿಮೆ ಅಂದರೆ ಶೇ.೨೯ರಷ್ಟು ಸಾಕ್ಷರತೆ ಪಡೆದಿದೆ. ಅದರಲ್ಲಿ ಪುರುಷರು ಶೇ.೪೧.೧, ಮಹಿಳೆಯರು ಶೇ.೧೬.೯ ಇದರಲ್ಲಿ ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ.೨೭.೮ರಷ್ಟು ನಗರ ಪ್ರದೇಶದ ಸಾಕ್ಷರತೆ ಶೇ.೪೧.೮ರಷ್ಟು ಇದೆ."[೧೪]

"ರಾಜ್ಯದಲ್ಲೇ ಅತಿಹೆಚ್ಚು ಪರಿಶಿಷ್ಟ ವರ್ಗದ ಜನಸಂಖ್ಯೆಯನ್ನು ಹೊಂದಿರುವ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ಮೂರು ಲಕ್ಷದ ಎಪ್ಪತ್ತು ಸಾವಿರ ಜನಸಂಖ್ಯೆಯಿದೆ. ಸಾಕ್ಷರತೆಯ ಪ್ರಮಾಣ ಶೇ.೪೧ರಿಂದ ೪೨ ಮಾತ್ರ ಇದರಲ್ಲಿ ಪುರುಷರು ಶೇ.೫೪, ಮಹಿಳೆಯರು ಶೇ.೨೯, ಗ್ರಾಮೀಣ ಪ್ರದೇಶದಲ್ಲಿ ಶೇ.೩೭.೯ ಮತ್ತು ನಗರ ಪ್ರದೇಶದಲ್ಲಿ ಶೇ.೫೧.೭ರಷ್ಟಿದೆ."[೧೫]

ಇನ್ನು "ಜನಸಂಖ್ಯೆಯ ದೃಷ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ಎರಡು ಲಕ್ಷದ ಎಪ್ಪತ್ತು ಸಾವಿರ ಜನಸಂಖ್ಯೆಯನ್ನು ಸಾಕ್ಷರತೆಯ ಪ್ರಮಾಣ ಶೇ.೫೩.೯ ಮಹಿಳೆಯರ ಸಾಕ್ಷರತೆ ಶೇ.೪೧.೫, ಪುರುಷರ ಸಾಕ್ಷರತೆ ಶೇ.೬೫.೮, ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ.೫೧.೬ ನಗರ ಪ್ರದೇಶದ ಸಾಕ್ಷರತೆ ಶೇ.೭೧.೯ರಷ್ಟಿದೆ."[೧೬]

ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಪರಿಶಿಷ್ಟ ಪಂಗಡದ ಜನಸಂಖ್ಯೆಯನ್ನು ಹೊಂದಿರುವ ದಾವಣಗೆರೆಯಲ್ಲಿನ "ಸಾಕ್ಷರತೆಯ ಪ್ರಮಾಣ ಶೇ.೫೪.೧ ಪುರುಷರ ಸಾಕ್ಷರತೆ ಶೇ.೬೪.೮, ಮಹಿಳೆಯರ ಸಾಕ್ಷರತೆ ಶೇ.೪೩ ಮತ್ತು ಗ್ರಾಮೀಣ ಪ್ರದೇಶದ ಸಾಕ್ಷರತೆ ಶೇ.೫೨.೨"[೧೭]

ಕಳೆದ ಹತ್ತು ವರ್ಷಕ್ಕೆ ಹೋಲಿಸಿದರೆ ಶೇ.೩೬.೧ರಿಂದ ಶೇ.೪೮.೩ರಷ್ಟು ಏರಿಕೆಯಾಗಿದ್ದರೂ ಮಹಿಳೆಯರ ಸಾಕ್ಷರತೆಯ ಪ್ರಮಾಣ ತೀರಾ ಕಡಿಮೆ ಇದೆ. ಹೀಗೆ ಕೆಲ ಜಿಲ್ಲೆಗಳ ಸಾಕ್ಷರತೆಯ ಪ್ರಮಾಣ ನೋಡಿದರೆ ಇನ್ನೂ ಶಿಕ್ಷಣದಿಂದ ವಂಚಿತ ಜನಸಂಖ್ಯೆ ಹೆಚ್ಚು. ಇದನ್ನು ಮನಗಂಡ ಸರ್ಕಾರ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಘಟಕಗಳನ್ನು ಮೈಸೂರು, ಕೊಡಗು,

ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಚಾಮರಾಜನಗರ ಸ್ಥಳಗಳಲ್ಲಿ ಸ್ಥಾಪಿಸಿದೆ. ಇನ್ನೂ ಮುಖ್ಯವಾಗಿ ೨೦೧೦-೧೨ರಲ್ಲಿ ಹೊಸದಾಗಿ ಚಾಮರಾಜನಗರ, ಚಿತ್ರದುರ್ಗ, ಬೆಳಗಾವಿ, ರಾಯಚೂರು ಜಿಲ್ಲೆಗಳಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಕಛೇರಿಗಳನ್ನು ಆರಂಭಿಸಿದರೆ ಅದರಲ್ಲೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ ಬಳ್ಳಾರಿ ಜಿಲ್ಲೆಯಲ್ಲಿ ಆಗಬೇಕಿದೆ.

ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದೆ. ಆದರೆ ಇತ್ತೀಚಿಗೆ ಪದವಿ ವರೆಗಿನ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಹಾಸ್ಟೆಲ್ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ. ಎಲ್ಲಾ ತಾಲೂಕುಗಳಲ್ಲಿಯೂ ಈ ವರ್ಗದ ಮಹಿಳೆಯರಿಗೆ ಹಾಸ್ಟೆಲ್ ಸೌಲಭ್ಯ ದೊರೆಯುವಂತಾದರೆ ಮಹಿಳಾ ಸಾಕ್ಷರತೆಯ ಪ್ರಮಾಣ ಹೆಚ್ಚಾಗಬಹುದು.

ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಈ ಇಲಾಖೆಗಳಿಂದ ಆರ್ಥಿಕ ಸಹಾಯವಿದೆ. ರಾಜ್ಯದ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಎಂ.ಫಿಲ್, ಪಿಎಚ್.ಡಿ ಅಧ್ಯಯನ ಮಾಡುವವರಿಗೆ ವಿಶೇಷ ಆರ್ಥಿಕ ಸೌಲಭ್ಯವಿದೆ. ಸಿಇಟಿ ಪರೀಕ್ಷೆಗೆ ಕುಳಿತುಕೊಳ್ಳಬಯಸುವ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಮುಂಚಿತವಾಗಿ ಕೋಚಿಂಗ್ ಕಳುಹಿಸುವ ವ್ಯವಸ್ಥೆಯೂ ಇದೆ. ಇದರಿಂದ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣವನ್ನು ಈ ವರ್ಗದವರು ಪಡೆಯಬಹುದಾಗಿದೆ. ಸುಮಾರು ೪೧ ವಿವಿಧ ವೃತ್ತಿಪರ ಟ್ರೇಡ್‌ಗಳಲ್ಲಿ ತರಬೇತಿಯನ್ನು ನವಚೇತನ ಯೋಜನೆಯಡಿಯಲ್ಲಿ ನೀಡಲಾಗುತ್ತದೆ. ನಿರುದ್ಯೋಗಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಜೊತೆಗೆ ಶಿಷ್ಯವೇತನವೂ ಸಹ ದೊರೆಯುತ್ತದೆ. ಹಾಗೆಯೇ ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರೆ ಅಂತಹ ವಿದ್ಯಾರ್ಥಿಗಳಿಗೆ ನಗದು ಬಹುಮಾನದ ಯೋಜನೆಯಿದೆ. ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿರುವ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರು ಹಿಂದುಳಿದ ಪ್ರದೇಶಗಳಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಬೇಕಾಗಿದೆ. ಇನ್ನೂ ಉತ್ತಮ ಸ್ಥಿತಿಯಲ್ಲಿರುವವರು ಈ ಕ್ಷೇತ್ರದತ್ತ ಗಮನಹರಿಸಬೇಕಾಗಿದೆ.

ಬೇಡ ಸಮುದಾಯ ಹಿರಿ ತಲೆಮಾರಿನ ಶಿಕ್ಷಣ ಕ್ಷೇತ್ರದಲ್ಲಿ ಛಾಪು ಮೂಡಿಸಿರುವ ಕಮಲಾ ಹಂಪನಾ, ಮಂಜಮ್ಮ, ಜಯಲಕ್ಷ್ಮಿ, ಸಣ್ಣಪಾಪಮ್ಮ ಪ್ರಾಥಮಿಕ, ಪ್ರೌಢ, ತಾಂತ್ರಿಕ, ವೃತ್ತಿಪರ ಕೋರ್ಸ್‌ಗಳ ಬಗ್ಗೆ ಇವರಿಗೆ ಮಾಹಿತಿ ನೀಡಬೇಕಿದೆ. ವಿದ್ಯಾರ್ಥಿಗಳ ಸಮಸ್ಯೆಗಳತ್ತ ಕೊಂಚ ಗಮನಹರಿಸಿ ಸಾಧ್ಯವಾದಷ್ಟು ಮಾಹಿತಿ ನೀಡಬೇಕಿದೆ. ಅಧಿಕಾರ ವರ್ಗದಲ್ಲಿರುವ ಶಿಕ್ಷಣ, ಕಾನೂನು ಕ್ಷೇತ್ರದಲ್ಲಿ ಉನ್ನತ ಸ್ಥಿತಿಯಲ್ಲಿರುವವರು ಈ ಸಮುದಾಯದ ಶೈಕ್ಷಣಿಕ ಸ್ಥಿತಿಗತಿಯ ಕಡೆ ಗಮನಹರಿಸದಿದ್ದರೆ ಈ ಸಮುದಾಯಕ್ಕೆ ಮೀಸಲಿರುವ ಸೌಲಭ್ಯಗಳು ಹಾಗೆ ಉಳಿದಿವೆ. ಸದುಪಯೋಗ ಪಡಿಸಿಕೊಳ್ಳಬೇಕಾಗಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿರುವ ವಾಲ್ಮೀಕಿ ಅಧ್ಯಯನ ಪೀಠದ ವತಿಯಿಂದ ರಾಜ್ಯದ

ಎಲ್ಲಾ ಜಿಲ್ಲೆಗಳಲ್ಲಿ ಮತ್ತು ತಾಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಜನಾಂಗದ ಶೈಕ್ಷಣಿಕ ಸ್ಥಿತಿಗತಿಯ ಬಗ್ಗೆ ವಿಚಾರಗೋಷ್ಠಿ ಮತ್ತು ಸರ್ಕಾರದಿಂದ ಸಿಗುವ ಸೌಲಭ್ಯ ಮತ್ತು ಇನ್ನೂ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಈಗಿರುವ ವಾಲ್ಮೀಕಿ ಒಂದು ವಾಲ್ಮೀಕಿ ಕರ್ನಾಟಕ ಜೊತೆಗೆ ಶೈಕ್ಷಣಿಕ ಮಾರ್ಗದರ್ಶನದ ಪತ್ರಿಕೆಗಳು ಅಗತ್ಯವಿದೆ. ಈ ನಿಟ್ಟಿನಲ್ಲಿ ಸಮಾಜದ ಉತ್ತಮ ಸ್ಥಿತಿಯಲ್ಲಿರುವವರು ಆಸಕ್ತಿ ವಹಿಸಬೇಕಿದೆ.

ಈ ಸಮುದಾಯದ ಅನೇಕರು ಸೇವಾ ಭದ್ರತೆಯಿಲ್ಲದೆ ಅನೇಕ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಪಡೆದ ಕೆಲವರು ಸರ್ಕಾರಿ ಉದ್ಯೋಗ ಸೇರಿ ಪ್ರಗತಿಯಾಗಿರುವುದನ್ನು ನೋಡಿದ ಜನರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಲು ಪ್ರಯತ್ನಿಸುತ್ತಿದ್ದಾರೆ. ವಿದ್ಯಾವಂತ ಯುವಕರಲ್ಲಿ ಜನಾಂಗ ಪ್ರಜ್ಞೆ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ "ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಧರ್ಮ ಪೀಠವು ಮುಖ್ಯಪಾತ್ರ ವಹಿಸುತ್ತಿದೆ. ಮಹರ್ಷಿ ವಾಲ್ಮೀಕಿಯ ಹೆಸರಿನಲ್ಲಿ ಯುವಕ ಸಂಘಟನೆಗಳು ಹುಟ್ಟಿಕೊಳ್ಳುತ್ತಿವೆ. ಜೊತೆಗೆ ಆರ್ಥಿಕ ಚಟುವಟಿಕೆಗಳನ್ನು ನಡೆಸುತ್ತಿವೆ. ಸಂಘಟನೆಗಳನ್ನು, ಬ್ಯಾಂಕ್‌ಗಳನ್ನು ಸ್ಥಾಪಿಸಿಕೊಂಡು ಬೇಡ ಜನಾಂಗಕ್ಕೆ ಆಸರೆಯಾದ ಕೆಲವು ಉದಾಹರಣೆಗಳನ್ನು ನೋಡಬಹುದು. ಗೋಕಾಕ್ ವಾಲ್ಮೀಕಿ ಮಹರ್ಷಿ ಕ್ರಿಕೆಟ್ ಸೊಸೈಟಿ, ತುಮಕೂರು ಏಕಲವ್ಯ ಗಿರಿಜನ ಪತ್ತಿನ ಸಹಕಾರ ಸಂಘ, ವಾಲ್ಮೀಕಿ ಮಹಿಳಾ ಪತ್ತಿನ ಸಹಕಾರಿ ಸಂಘ, ದಾವಣಗೆರೆ ಮತ್ತು ಚಿತ್ರದುರ್ಗಗಳಲ್ಲಿರುವ ವಾಲ್ಮೀಕಿ ಸಹಕಾರಿ ಕ್ರೆಡಿಟ್ ಸೊಸೈಟಿ, ಚಿತ್ರದುರ್ಗ, ಬೆಂಗಳೂರಿನಲ್ಲಿಯ ಮಹರ್ಷಿ ವಾಲ್ಮೀಕಿ ಗಿರಿಜನ ಕೋ ಅಪರೇಟಿವ್ ಕ್ರೆಡಿಟ್ ಸೊಸೈಟಿ, ಧಾರವಾಡದ ವಾಲ್ಮೀಕಿ ಮಹರ್ಷಿ ಬ್ಯಾಂಕ್, ಚಿತ್ರದುರ್ಗ ಜಿಲ್ಲಾ ವಾಲ್ಮೀಕಿ ಗಿರಿಜನ ಪತ್ತಿನ ಬ್ಯಾಂಕ್, ಈಶಾನ್ಯ ಕರ್ನಾಟಕ ವಾಲ್ಮೀಕಿ ನಾಯಕ ಪತ್ತಿನ ಸಹಕಾರ ಸಂಘ, ಗುಲಬರ್ಗಾ,"[೧೮] ಹೀಗೆ ರಾಜ್ಯಾದ್ಯಂತ ಬೇಡ ಸಮುದಾಯವು ಹೆಚ್ಚಾಗಿ ಇರುವ ಕಡೆ ಆರ್ಥಿಕವಾಗಿ ಜನಾಂಗ ಮತ್ತು ಸಮಾಜದ ಇತರ ವರ್ಗಗಳಿಗೂ ಆಸರೆಯಾಗಲು ಇಂತಹ ಸೊಸೈಟಿಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದು.

ಶಿಕ್ಷಣದಲ್ಲಿ ಬೇಡರು ತೀರಾ ಹಿಂದುಳಿದಿರುವುದನ್ನು ಕಾಣಬಹುದು. ಉನ್ನತ ಶಿಕ್ಷಣವಂತೂ ಕೆಲವೇ ಕೆಲವರು ಪಡೆದಿರುವುದನ್ನು ಹಾಗೂ ಕೆಲವು ವಿಷಯಗಳಲ್ಲಿ ಮಾತ್ರ ಉನ್ನತ ಶಿಕ್ಷಣ ಪಡೆದಿರುವುದು ಕಂಡುಬರುತ್ತದೆ. ವೈದ್ಯಕೀಯ, ತಾಂತ್ರಿಕ, ವಿಜ್ಞಾನ ವಿಷಯಗಳಲ್ಲಿ ಉನ್ನತ ಶಿಕ್ಷಣ ಪಡೆದ ಅರ್ಹ ಅಭ್ಯರ್ಥಿಗಳು ಸಿಗದೇ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಸಂಶೋಧನಾ ಕ್ಷೇತ್ರಗಳಲ್ಲಿ ಅನೇಕ ಹುದ್ದೆಗಳು ಹಾಗೆ ಉಳಿದುಕೊಂಡು ಬರುತ್ತಲಿವೆ. ಉನ್ನತ ಹಂತದವರೆಗೆ ಓದಿಸುವಷ್ಟು ತಾಳ್ಮೆ, ಖರ್ಚು ಮಾಡುವ ಆರ್ಥಿಕ ಸಾಮರ್ಥ್ಯ ಬೇಡರಲ್ಲಿ ಇಲ್ಲದಿರುವುದೇ ಇದಕ್ಕೆ ಕಾರಣ. ಬಡತನ, ಅಜ್ಞಾನವೂ ಇನ್ನೊಂದು ಮುಖ್ಯ ಕಾರಣ. ವಿದ್ಯಾವಂತ ಕುಟುಂಬಗಳಲ್ಲಿ ಮುಂದುವರಿದ ಕುಟುಂಬದವರು ಮಾತ್ರ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಇತ್ತೀಚಿನ ಪ್ರಸಾರ ಮಾಧ್ಯಮಗಳ ಪ್ರಭಾವದಿಂದ ರೈತರು ತಮ್ಮ ಮಕ್ಕಳಿಗೆ ಶಿಕ್ಷಣ

ನೀಡುವಲ್ಲಿ ಉತ್ಸಾಹ ತೋರುತ್ತಾರಾದರೂ ಹೈಸ್ಕೂಲ್ ಹಂತಕ್ಕೆ ಅವರ ಉತ್ಸಾಹ ನಿಂತು ಹೋಗುವುದನ್ನು ಕಾಣಬಹುದು. "೧೯೬೧ರಲ್ಲಿ ನಾಗನಗೌಡ ಸಮಿತಿಯ ವರದಿ ಪ್ರಕಾರ ಹೈಸ್ಕೂಲಿನಲ್ಲಿ ಕೊನೆಯ ಮೂರು ವರ್ಗಗಳನ್ನು ಪರಿಶೀಲಿಸಿದಾಗ ಹೈಸ್ಕೂಲಿನಲ್ಲಿ ಕಲಿಯುವ ಈ ಜನಾಂಗದವರ ಮಕ್ಕಳ ಸಂಖ್ಯೆ ಅತಿ ಕಡಿಮೆ ಇದ್ದಿತು. ಗಿರಿಜನರು ಪ್ರತಿ ಸಾವಿರಕ್ಕೆ ೧.೪ರಷ್ಟು ಇದ್ದಾರೆ. ಬೇಡ ಸಮುದಾಯದದ ಬಾಲಕರ ಸಂಖ್ಯೆ ಪ್ರತಿ ಸಾವಿರಕ್ಕೆ ೧.೨ರಷ್ಟು ಮಾತ್ರ ಇದ್ದುದು ಕಂಡುಬಂದಿವೆ. ೧೯೭೨ರಲ್ಲಿ ರಾಜ್ಯದ ಬೇಡ ಸಮುದಾಯದಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದವರ ಒಟ್ಟು ಸಂಖ್ಯೆ ೭೧೦ ಮಾತ್ರ. ಹಾಗೆಯೇ ೧೯೮೮ರಲ್ಲಿ ಈ ಪರೀಕ್ಷೆಗೆ ಕುಳಿತವರು ೨೫೭೪. ಇದರಲ್ಲಿ ಪಾಸಾದವರು ೧೧೯ ಮಾತ್ರ.

ವರ್ಷ	ಹುಡುಗಿಯರು	ಹುಡುಗರು
೨೦೦೧	೪೦.೪೭	೩೮.೨೪
೨೦೦೨	೩೦.೪೭	೩೪.೯೧
೨೦೦೩	೪೩.೪೭	೩೯.೮೪
೨೦೦೪	೫೫.೮೦	೫೪.೦೧
೨೦೦೫	೫೫.೧೮	೪೯.೫೫"[೧೯]

ಜಾತಿ, ಶಿಕ್ಷಣ ಮತ್ತು ಆರ್ಥಿಕ ಮುಂತಾದ ಅಂಶಗಳನ್ನು ಗುರುತಿಸುವ ನಿಟ್ಟಿನಲ್ಲಿ ಭಾರತದಲ್ಲಿ ನೇಮಕಗೊಂಡ ಹಿಂದುಳಿದ ಆಯೋಗಗಳ ಶಿಫಾರಸ್ಸುಗಳಿಂದಾಗಿ ಕೆಲವು ಜಾತಿಗಳಿಗೆ ಭವಿಷ್ಯದಲ್ಲಿ ಆಶಾಕಿರಣ ಮೂಡಿತು. ೧೯೭೨ರಲ್ಲಿ ಡಾ.ಎಲ್.ಜಿ.ಹಾವನೂರರನ್ನು ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿತು. ಇದನ್ನು ಮೊದಲ ಕರ್ನಾಟಕ ಹಿಂದುಳಿದ ವರ್ಗಗಳ ಅಯೋಗವೆಂದು ಕರೆಯಲಾಗಿದೆ. ಹಾವನೂರರು "೧.ಹಿಂದುಳಿದ ಸಮುದಾಯ, ೨.ಹಿಂದುಳಿದ ಬುಡಕಟ್ಟುಗಳು ಎಂದು ವಿಂಗಡಿಸಿ ೧೯೭೫ರಲ್ಲಿ ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು. ಬೇಡ ಮತ್ತು ಅನೇಕ ಕೆಳವರ್ಗಗಳ ಬದುಕನ್ನು ಈ ವರದಿಯು ಬದಲಾಯಿಸಿತು. ಇಲ್ಲಿಯವರೆಗೆ ಕಡೆಗಣಿಸಲ್ಪಟ್ಟ ವರ್ಗಗಳೆಲ್ಲವೂ ವರದಿಯ ವ್ಯಾಪ್ತಿಗೆ ಬಂದವು. ಹೀಗಾಗಿ ಈ ವರದಿಯನ್ನು 'ಹಿಂದುಳಿದವರ ಮ್ಯಾಗ್ನಾಕಾರ್ಟ', 'ಹಿಂದುಳಿದ ವರ್ಗಗಳ ಭಗವದ್ಗೀತೆ' ಎಂದೆಲ್ಲಾ ಕರೆಯಲಾಯಿತು. ಈ ವರದಿಯಿಂದ ಆಗ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸ ಅವರು ಕರ್ನಾಟಕದ ತುಂಬ ಪ್ರಸಿದ್ದಿಗೆ ಬಂದರಲ್ಲದೆ ಭಾರತದ ರಾಜಕೀಯ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಹಿತರಕ್ಷಕ ಎಂದು ಕರೆಸಿಕೊಂಡರು. ಈ ಸೌಲಭ್ಯದಿಂದ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯದಲ್ಲಿ ಸ್ವಲ್ಪ ಸುಧಾರಿಸಿಕೊಳ್ಳಲು ಸಾಧ್ಯವಾಯಿತು. ೧೯೮೩ರ ಟಿ. ವೆಂಕಟಸ್ವಾಮಿ ಆಯೋಗ ಮತ್ತು ೧೯೮೮ರ ಓ ಚೆನ್ನಬಸಪ್ಪ ಆಯೋಗಗಳು"[೨೦] ಬೇಡ ಜನಾಂಗದ

ಹಿಂದುಳಿಯುವಿಕೆಯನ್ನು ಗುರುತಿಸಿ ಸೂಕ್ತ ನ್ಯಾಯವನ್ನು ಒದಗಿಸಿಕೊಡುವಲ್ಲಿ ಸಫಲವಾದವು ಎನ್ನಬಹುದು.

"೧೯೭೬ರಲ್ಲಿ ಕೇಂದ್ರ ಸರ್ಕಾರವು ನಾಯಕ, ವಾಲ್ಮೀಕಿ, ಬೇಡ ಇವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿತು. ಆದರೆ ಕರ್ನಾಟಕ ಸರ್ಕಾರ ಈ ಸವಲತ್ತನ್ನು ತಡವಾಗಿ ಈ ವರ್ಗದವರಿಗೆ ನೀಡಿತು. ಕರ್ನಾಟಕದಲ್ಲಿ ೧೯.೦೪.೧೯೯೩ರಿಂದ ಬೇಡರು ಈ ಮೀಸಲಾತಿಯ ಸೌಲಭ್ಯ ಪಡೆದರು. ಹಾಸ್ಟೆಲ್ ಸೌಲಭ್ಯ, ಶಾಲಾ ಕಾಲೇಜಿನ ಫೀಸು ರಿಯಾಯಿತಿ, ಸಾಲ ಸೌಲಭ್ಯ, ಬಡ್ಡಿ ರಿಯಾಯಿತಿ, ಉದ್ಯೋಗ ಮೀಸಲಾತಿ ಮುಂತಾದವುಗಳ ಉಪಯೋಗವನ್ನು ಈ ವರ್ಗವು ಪಡೆಯುವಂತಾಯಿತು. ೧೯೫೦ರಲ್ಲಿ ಅಸ್ತಿತ್ವಕ್ಕೆ ಬಂದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ರಾಷ್ಟ್ರೀಯ ಆಯೋಗವು ತನ್ನ ಉದ್ದೇಶಕ್ಕನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಿತಾಸಕ್ತಿಯನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊತ್ತಿದೆ. ೧೯೯೯ ಅಕ್ಟೋಬರ್‌ನಲ್ಲಿ ಭಾರತ ಸರ್ಕಾರ ಬುಡಕಟ್ಟುಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಬುಡಕಟ್ಟು ವ್ಯವಹಾರಗಳ ಖಾತೆಯನ್ನು ಆರಂಭಿಸಿದೆ."[೨೧] ಸಂವಿಧಾನ ಬದ್ಧ ಸವಲತ್ತುಗಳನ್ನು ಈ ವರ್ಗಗಳಿಗೆ ನೀಡಲಾಗಿದ್ದರೂ ಸಾಮಾಜಿಕ, ಆರ್ಥಿಕ ಮತ್ತು ಮೀಸಲಾತಿ ವಲಯಗಳಲ್ಲಿ ಈ ವರ್ಗಗಳಿಗೆ ನ್ಯಾಯಯುತ ಸ್ಥಾನಮಾನ ಮತ್ತು ಸಮಾನ ಆದ್ಯತೆಗಳು ದೊರಕದಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಕ್ಕೆ ನಿಗದಿಪಡಿಸಿದ ಮೀಸಲಾತಿ ಪ್ರಮಾಣ ಕೇವಲ ಶೇ.೩ರಷ್ಟು ಮಾತ್ರ ಅದರಲ್ಲೂ ಬೇಡ ಸಮುದಾಯದ ಜೊತೆಯಲ್ಲಿ ಇತರ ಕೆಲವು ಬುಡಕಟ್ಟು ಸಮುದಾಯ ಸಮುದಾಯಗಳು ಈ ಸೌಲಭ್ಯವನ್ನು ಪಡೆಯುತ್ತಲಿವೆ.

ಬೇಡ ಬುಡಕಟ್ಟು ಸಮುದಾಯದಲ್ಲಿ ಅನಕ್ಷರಸ್ಥರ ಸಂಖ್ಯೆಯು ಬಹು ಸಂಖ್ಯಾತವಾಗಿರುವುದರಿಂದ ಸಣ್ಣ ವಯಸ್ಸಿನಲ್ಲಿಯೇ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವುದು ಒಂದು ಸಂಪ್ರದಾಯವಾಗಿದೆ. ಇದರಿಂದ ಶಾಲಾ ಕಾಲೇಜುಗಳ ದಾಖಲಾತಿ, ಹಾಜರಾತಿಗಳು ಇಂದಿಗೂ ಕಡಿಮೆ ಮಟ್ಟದಲ್ಲಿರುವುದಕ್ಕೆ ಮತ್ತೊಂದು ಪ್ರಮುಖ ಕಾರಣ, ವಿವಾಹ ಸಂದರ್ಭದಲ್ಲಿ ಪ್ರವೇಶಿಸಲು ಕನಿಷ್ಠ ೧೮ ವಯಸ್ಸಾದರೂ ಆಗಿರಬೇಕು ಎಂಬ ಕಾನೂನು ಜಾರಿಯಲ್ಲಿದ್ದರೂ ವಾಸ್ತವದಲ್ಲಿ ಎಲ್ಲಾ ಪರಿಸ್ಥಿತಿಗಳಲ್ಲಿ ಹಾಗಾಗುತ್ತಿಲ್ಲ. ಹೆಣ್ಣು ಮಗು ದೈಹಿಕವಾಗಿ, ಮಾನಸಿಕವಾಗಿ ವಿವಾಹ ಎನ್ನುವ ವ್ಯವಸ್ಥೆಯನ್ನು ಪ್ರವೇಶಿಸಲು ತಯಾರಾಗಿಲ್ಲದಿರುವಾಗಲೇ ಆಕೆಯ ಇಡೀ ಭವಿಷ್ಯವನ್ನು ಕುಂಠಿತಗೊಳಿಸುವಂತೆ "ಎಲ್ಲಿಯವರೆಗೆ ಹೆಣ್ಣು ಮಕ್ಕಳು ಶಾಲೆಯಲ್ಲಿ ಮುಂದುವರಿಯುತ್ತಾರೆಯೋ, ಅಲ್ಲಿ ವಿವಾಹದ ವಯಸ್ಸಯ ತಾನೇ ತಾನಾಗಿ ಏರುತ್ತದೆ."[೨೨] ಆದರೆ ಬಹುಸಂಖ್ಯಾತವಾಗಿ ಗ್ರಾಮೀಣ ಪ್ರದೇಶದಲ್ಲಿ ಸಂಪ್ರದಾಯಗಳ ಪ್ರಭಾವದಿಂದ ಹೆಣ್ಣು ಮಕ್ಕಳಿಗೆ ಶಾಲೆ ಬಿಡಿಸಿ ಮದುವೆ ಮಾಡುವ ಕ್ರಮವು ಪರಿಣಾಮಕಾರಿಯಾಗಿ ಕಂಡುಬರುತ್ತದೆ. ಅದು ವರದಕ್ಷಿಣೆ, ಕೌಟುಂಬಿಕ ಪ್ರತಿಷ್ಠೆ ಅಡ್ಡದಾರಿ ಹಿಡಿಯುವುದು, ಮತ್ತು ಮಹಿಳೆಯ ಕೌಮಾರ್ಯದ ದುರುಪಯೋಗ, ಬೇಡ ಬುಡಕಟ್ಟು ಸಮುದಾಯಗಳಲ್ಲಿ ಶಿಕ್ಷಣದ ಕೊರತೆ ಬಹಳಷ್ಟು ಇರುವುದು ಕಂಡುಬರುತ್ತದೆ. ಇದರಲ್ಲಿ ಹೆಚ್ಚಿನ ಜನರು ಅನಕ್ಷರಸ್ಥರ ಸಾಲಿಗೆ

ಇರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿರುವುದು. ಇದರಿಂದ ಹೆಚ್ಚಿನ ವಿಷಯಗಳಾಗಲಿ, ಮಾಹಿತಿಗಾಳಗಲಿ ಪೂರ್ವ ಐತಿಹ್ಯದ ಬಗ್ಗೆಯಾಗಲಿ ತಿಳಿದುಕೊಳ್ಳಲು ಬಹಳಷ್ಟು ಶ್ರಮಪಡಬೇಕಾಯಿತು. ಆದರೂ ಶಿಕ್ಷಣವು ಜ್ಞಾನ ಹಾಗೂ ವೈಚಾರಿಕತೆ ತಿಳಿವಳಿಕೆ ಒದಗಿಸಿ ಸಮಾಜದಲ್ಲಿ ತಾವೊಬ್ಬರು ಆದರ್ಶಪ್ರಾಯರಾಗಿ ಜೀವನ ನಡೆಸಲು, ಮೂಲಭೂತವಾದ ಕೌಶಲ್ಯವನ್ನು ಕೊಡುತ್ತದೆಂಬ ಕಲ್ಪನೆಯಿಂದ ಪುರುಷರಿಗಿಂತ ಮಹಿಳೆಯರು ಬಹುದೂರವಿರುವುದು ಈ ಮೂರು ಜಿಲ್ಲೆಗಳ ಪರಿಸರದಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಅದರ ಜೊತೆಗೆ ಎಲ್ಲಕ್ಕಿಂತ ಹೆಚ್ಚಾಗಿ ಕುಟುಂಬ ಹಾಗೂ ಸಮಾಜದಲ್ಲಿ ಪುರುಷರ ಸರಿಸಮಾನತೆ ಪಡೆದುಕೊಳ್ಳುವಂತಹ ಹಂಬಲವು ಕಡಿಮೆಯಿದೆ ಎಂದು ಹೇಳಬಹುದು. ಇದಕ್ಕೆ ಅನೇಕ ಕಾರಣಗಳು ಇರಬಹುದು. ಇದರಲ್ಲಿ ಪ್ರಮುಖವಾಗಿ ಕುಟುಂಬದಲ್ಲಿ ಇರುವಂತಹ ಬಡತನ ಇರುವುದೇ ಮಹಿಳೆಯರ ಪಾಲಿಗೆ ಶಾಪವಾಗಿದೆ. ಬೇಡ ಬುಡಕಟ್ಟು ಸಮುದಾಯದಲ್ಲಿ ತಮ್ಮ ಜೀವನಕ್ಕೆ ಮೂಲಭೂತ ಅವಶ್ಯಕತೆಗಳಾದ ಆಹಾರ, ವೃತ್ತಿ, ವಸತಿ ಇತರೆ ಅಂಶಗಳು ಸಮರ್ಪಕವಾಗಿ ಇರದ ಕಾರಣದಿಂದ ಶಿಕ್ಷಣದ ಬಗ್ಗೆ ಅಸಡ್ಡೆ ಮನಸ್ಸು ಮಾಡಿ ಇಡೀ ಜೀವನವೇ ದುಡಿಮೆಯೆಂದು ಭಾವಿಸಿಕೊಂಡಿರುವುದು ಅವರ ದಿನಚರಿಯನ್ನು ಗಮನಿಸಿದರೆ ಪ್ರತಿಯೊಬ್ಬ ಸಾಮಾನ್ಯನಿಗೂ ಅರಿವಾಗುತ್ತದೆ.

ಕೊನೆ ಟಿಪ್ಪಣಿ

೦೧. ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ಪು–೬೧

೦೨. ಅದೇ ಕೃತಿ, ಪುಟ–೬೫

೦೩. ಅದೇ ಕೃತಿ, ಪುಟ–೧೪೩

೦೪. ಅದೇ ಕೃತಿ, ಪುಟ–೦೬

೦೫. ಓಬಳೇಶ್.ಕೆ.ಎ., ಅಸ್ಮಿತೆ ಮತ್ತು ಆತ್ಮ ವಿಮರ್ಶೆ, ಪುಟ–೪೦

೦೬. ಜ್ಯೋತಿ ಶಶಿಕುಮಾರ್, ಮಹಿಳಾ ಸಾಮಾಜಿಕತೆ, ಪುಟ–೧೨೩

೦೭. ರಾಜಣ್ಣ.ಆರ್., ನಾಯಕ ಜನಾಂಗದ ಇತಿಹಾಸ, ಪುಟ–೩, ೪

೦೮. ಅದೇ ಕೃತಿ, ಪುಟ–೨೮, ೨೯

೦೯. ಚಂದ್ರಶೇಖರ್.ಟಿ.ಆರ್., ಸುಮಿತ್ರಾಬಾಯಿ.ಬಿ.ಎನ್., ಸ್ತ್ರೀವಾದ, ಪುಟ–೯೩

೧೦. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಗಣತಿ ವಿವರಗಳು, ಪುಟ–೧೦೯

೧೧. ಅದೇ ಕೃತಿ, ಪುಟ–೧೧೦

೧೨. ಅದೇ ಕೃತಿ, ಪುಟ–೧೨೧

೧೩. ಅದೇ ಕೃತಿ, ಪುಟ-೧೨೨

೧೪. ಅದೇ ಕೃತಿ, ಪುಟ-೧೨೫

೧೫. ಅದೇ ಕೃತಿ, ಪುಟ-೧೨೬

೧೬. ಅದೇ ಕೃತಿ, ಪುಟ-೧೨೭

೧೭. ಕರಿಯಪ್ಪ.ಜಿ.ಮಾಳಗಿ, ಬೇಡರ ಶೈಕ್ಷಣಿಕ ಸ್ಥಿತಿಗತಿ., ಪುಟ-೧೭೫, ೧೭೬

೧೮. ದುರುಗಪ್ಪ, ವಿಜಯನಗರೋತ್ತರಕಾಲೀನ ಬೇಡ ಜನಾಂಗ ಚಾರಿತ್ರಿಕ ಅಧ್ಯಯನ, ಪುಟ-೨೦೯

೧೯. ಅದೇ ಕೃತಿ, ಪುಟ-೨೧೮

೨೦. ಅದೇ ಕೃತಿ, ಪುಟ-೨೧೭

೨೧. ಅದೇ ಕೃತಿ, ಪುಟ-೨೧೮

೨೨. ಇಂದಿರಾ.ಆರ್., ಮಹಿಳಾ ಸಮಾಜ ಮತ್ತು ಸಂಸ್ಕೃತಿ, ೨೦೦೨, ಪುಟ-೮೩

* * * *

ಅಧ್ಯಾಯ : ಏಳು

ಮಹಿಳಾ ಜನಪದ ಸಾಹಿತ್ಯ

ಅಧ್ಯಾಯ : ಏಳು

ಮಹಿಳಾ ಜನಪದ ಸಾಹಿತ್ಯ

ಬಾಯಿಂದ ಬಾಯಿಗೆ ಬೆಳೆದುಬಂದ ಸಾಹಿತ್ಯ ಜನಪದ ಸಾಹಿತ್ಯ. ತಮ್ಮ ಹಿರಿಯರ ಮೂಲಕ ಕಲಿಕೆಯ ಅಂದರೆ ಆಡು ಮಾತಿನ ಮುಖಾಂತರ ಈ ಸಾಹಿತ್ಯವು ಮುಂದುವರೆದುಕೊಂಡು ಬಂದಿದೆ. ಅದನ್ನು ಒಬ್ಬರಿಂದ ಒಬ್ಬರಿಗೆ ಹರಡಲು ಸುಲಭವಾಗಿರುವುದೆ ಮಹಿಳೆಯರಿಂದ. ಮಹಿಳೆಯರು ಇಮ್ಮೇಳ–ಮುಮ್ಮೇಳಗಳ ಮೂಲಕ ಜನಪದವನ್ನು ತಮ್ಮದಾಗಿಸಿಕೊಂಡಿದ್ದಾರೆ. ಜಾನಪದ ಹಾಡುಗಳ ಉಗಮವನ್ನು ನೋಡುವುದಾದರೆ ಇದು ಮೌಖಿಕ ಪ್ರಕಾರವಾಗಿದ್ದು, ಬಾಯಿಯಿಂದ ಬಾಯಿಗೆ ಹರಿದುಬಂದ ಮಾಧ್ಯಮವಾಗಿದೆ. "ಜಾನಪದ ಸಾಹಿತ್ಯ ಸಮಷ್ಟಿ ಭಾವನೆಯ ಪ್ರತೀಕವೆನಿಸಿದರೂ ಮೂಲತಃ ಅದರ ಉಗಮವೂ ವ್ಯಕ್ತಿಗತವಾದ್ದೇ. ಯಾವುದೋ ಸನ್ನಿವೇಶದಲ್ಲಿ ಯಾವನೊ ಒಬ್ಬ ತನ್ನ ಅನುಭವಕ್ಕೆ ಬಂದ ಭಾವನೆಯನ್ನು ಧ್ವನಿ ಮಾಧ್ಯಮದ ಮೂಲಕ ಪ್ರಕಟಿಸಿ, ಅದು ಕೇಳಿದವರ ಮೆಚ್ಚುಗೆಗೆ ಪಾತ್ರವಾದಾಗ ಹಲವರ ಸೊತ್ತಾಗಿ ಹಲವರು ಆಗಲೇ ಅದಕ್ಕೆ ದನಿ ಕೂಡಿಸಬಹುದು, ತಮ್ಮದಾಗಿ ಸೊಲ್ಲುಗಳನ್ನು ಸೇರಿಸಬಹುದು. ಇದು ಬಾಯಿಂದ ಬಾಯಿಗೆ ಹರಿದು ಹರಡಿ ಹೋಗುತ್ತಾ ಹೆಚ್ಚು ಪ್ರತಿಭಾವಂತರ ಬಾಯಿಂದ ಹೊರ ಬರುವಾಗ ಸಂಸ್ಕಾರ ಹೊಂದಿ, ಕಡೆಗೆ ಉತ್ತಮ ರೂಪ ಪಡೆದು ಮಾದರಿಯಾಗಿ ನಿಲ್ಲುತ್ತದೆ. ಜಾನಪದ ಸಾಹಿತ್ಯ ರೂಪಗೊಳ್ಳುವುದೇ ಹೀಗೆ. ಒಂದು ಸೊಲ್ಲೊ, ಒಂದು ನುಡಿಯೊ, ಒಂದು ಪದಗುಚ್ಚವೊ ಒಂದು ಕಥಾ ಬೀಜವೊ ನಾಲಗೆಯಿಂದ ನಾಲಗೆಗೆ ಹರಿದಾಡಿದಾಗ ಹಲವು ರೂಪಗಳನ್ನು ಪಡೆಯಬಹುದು." (ವಿ. ಸೀತಾರಾಮಯ್ಯ, ಜನಪದ ಸಾಹಿತ್ಯ, ಪು–೭೮) ಹೀಗೆ ಜನ್ಮತಳೆದ ಸಾಹಿತ್ಯ ಮೌಖಿಕವಾಗಿ ವಿವಿಧ ನೆಲೆಯಲ್ಲಿ ಬೆಳೆದುಬಂದಿದೆ. ಈ ಜಾನಪದ ಹಾಡುಗಳು ಸಮಷ್ಟಿಯ ನೆಲೆಯಲ್ಲಿ ಜನ ಜೀವನದ ಆಗು ಹೋಗುಗಳನ್ನು ಸೆರೆಹಿಡಿಯುವ ಪ್ರಮುಖ ನೆಲೆಯಾಗಿ ಬೆಳೆದುಬಂದಿವೆ. ಈ ಜಾನಪದ ಹಾಡುಗಳಲ್ಲಿ ಅಡಗಿರುವ ಸತ್ವವೇ ಇದರ ಬೆಳವಣಿಗೆಗೆ ಮೂಲ ಕಾರಣವಾಗಿದೆ.

ಜಾನಪದ ಸಾಹಿತ್ಯಕ್ಕೆ ತನ್ನದೇ ಆದ ಕೆಲವು ದಾಟಿ, ರೀತಿ, ನೀತಿಗಳಿವೆ. ಇವುಗಳ ಅಡಿಯಲ್ಲಿಯೇ ಈ ಪ್ರಕಾರವು ಬೆಳೆದು ಬಂದಿದೆ. "ಜನಪದ ಸಾಹಿತ್ಯ ನೋಡಿ ಕಲಿಯುವಂಥದ್ದಲ್ಲ, ಕೇಳಿಯೇ ಕಲಿಯುವಂಥದ್ದು. ತೊಂಡಿತನ ಇದರ ಜೀವ. ಬರವಣಿಗೆಯ ಸ್ಪರ್ಶವಾದರೆ ಸಾಕು ಇದರ ಪರಂಪರೆ ಸತ್ತೇ ಹೋಗುವಂಥದ್ದು. ಒಬ್ಬ ಜಾನಪದ ಕಲಾವಿದ ಹಾಡುತ್ತಿದ್ದಾನೆಂದರೆ

ಏಕಕಾಲಕ್ಕೆ ಆತ ಎರಡು ಕೆಲಸ ಮಾಡುತ್ತಿರುತ್ತಾನೆ. ಒಂದು: ಹಾಡುತ್ತ ಹಾಡಿನ ಪರಂಪರೆಯನ್ನು ಉಳಿಸುವ ಕೆಲಸ. ಎರಡು: ಅದೇ ಕಾಲಕ್ಕೆ ಹಿಂದಿರದ ಹೊಸ ಅಂಶಗಳನ್ನು ಸೃಷ್ಟಿಸುವ ಕೆಲಸ. ಈ ಮಾತನ್ನು ಖಾತ್ರಿ ಮಾಡಿಕೊಳ್ಳಬೇಕಾದರೆ ಆತ ಹಾಡುವುದನ್ನು ಪ್ರತ್ಯೇಕವಾಗಿಯೇ ಕೇಳಬೇಕು. ಜನಪದ ಹಾಡು ಹಾಡುವುದಕ್ಕಾಗಿ ರಚಿಸಿದ ಗೀತೆಗಳಲ್ಲ. ಹಾಡುವಾಗಲೇ ಸೃಷ್ಟಿಸಿಕೊಳ್ಳುವ ಹಾಡು." (ವಿ. ಸೀತಾರಾಮಯ್ಯ, ಜನಪದ ಸಾಹಿತ್ಯ, ಪು-೧೫) ಹೀಗಾಗಿ ಈ ಹಾಡುಗಳು ತನ್ನದೇ ಆದ ವಿಶಿಷ್ಟ ಗುಣಗಳನ್ನು ಒಳಗೊಂಡಿವೆ. ಆದೆ ಅನಿವಾರ್ಯ ಕಾರಣ ಹಾಗೂ ಇವುಗಳ ಪರಂಪರೆ ಅವನತಿಯತ್ತ ಸಾಗುತ್ತರುವ ಕಾರಣದಿಂದಾಗಿ ಇಂತಹ ಹಾಡು ಪರಂಪರೆಯನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ.

ಮಹಿಳಾ ಜಾನಪದವನ್ನು ಕುರಿತು ನೋಡುವುದಾರೆ, ಜಾನಪದವನ್ನು ಪಾರಂಪರಿಕ ನೆಲೆಯಲ್ಲಿ ಬೆಳೆಸಿಕೊಂಡು ಬಂದಿರುವ ಕೀರ್ತಿ ನಮ್ಮ ಮಹಿಳೆಯರಿಗೆ ಸಲ್ಲುತ್ತದೆ. ಮಹಿಳೆಯರೇ ತಮ್ಮ ಬದುಕಿನ ನೋವು, ನಲಿವುಗಳು ಹಾಗೂ ತಾವು ಕಂಡುಂಡ ಸಾಮಾಜಿಕ ಸನ್ನಿವೇಶಗಳನ್ನು ತಮ್ಮ ಹಾಡುಗಳಲ್ಲಿ ಜೀವ ತುಂಬಿ ಸೆರೆಹಿಡಿದಿದ್ದಾರೆ. ಹೆಣ್ಣು ಶಕ್ತಿಯ ಸಂಕೇತವಾಗಿದು, ಸಮಾಜವನ್ನು ಹಾಗೂ ತನ್ನ ಕುಟುಂಬವನ್ನು ಸಮರ್ಥವಾಗಿ ನಿಭಾಯಿಸುವ ಶಕ್ತಿ ಹಾಗೂ ಜಾಣ್ಮೆಯನ್ನು ಹೊಂದಿದವಳಾಗಿದ್ದಾಳೆ. "ಇತಿಹಾಸದ ಉದ್ದಕ್ಕೂ ಜನಸಂಖ್ಯೆಯ ಅರ್ಧದಷ್ಟು ಹೆಂಗಸರು ಇದ್ದಾರೆ. ಆದರೂ ತತ್ವಜ್ಞಾನ, ಸಾಹಿತ್ಯ, ಕಲೆ, ಸಾಮಾಜಿಕ ಹಾಗೂ ಸಾರ್ವಕಾಲಿಕ ಮೌಲ್ಯಗಳು- ಎಲ್ಲವೂ ಗಂಡಸಿನ ಮೇಲುಗೈತನಕ್ಕೆ ಸಾಕ್ಷಿಯಾಗಿವೆ. ಹೆಣ್ಣು ಈ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ಕೇಳಿ ಪಡೆಯುವತನಕ ಈ ಭಾಗಗಳೆಲ್ಲ ಏಕಮುಖ ಹಾಗೂ ಅಪೂರ್ಣ. ಗಂಡಸಿನ ಸುಲಿಗೆಯ ಸಾಧನವಾಗಿ ಬಂದ ಹೆಣ್ಣು, ಗಂಡು ಹೇಳುವ ಮೌಲ್ಯಗಳನ್ನೇ, ವಿವೇಚನೆಯಿಲ್ಲದೆ ಗಿಳಿಪಾಠವನ್ನಾಗಿ ಒಪ್ಪಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ." (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂ-೭, ಕಾಳೇಗೌಡ ನಾಗವಾರ, ಪು-೫೨) ಇದಕ್ಕೆ ಆಯಾ ಕಾಲದಲ್ಲಿ ಮಹಿಳೆಯರ ಮೇಲೆ ಸಾಂಪ್ರದಾಯಿಕವಾಗಿ ಹೇರಿರುವ ನಿರ್ಭಂದಗಳು ಪ್ರಮುಖವಾಗಿವೆ. ಹೀಗೆ ಭಾರತೀಯ ಚರಿತ್ರೆಯುದ್ದಕ್ಕೂ ಒಂದೇ ಸಮನೆ ಮೂಲೆಗುಂಪಾಗಿದ್ದ ಮಹಿಳೆಯರು ಜಾನಪದದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿರುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಜಾನಪದ ಸಾಹಿತ್ಯಕ್ಕೆ ಮಹಿಳೆಯರು ತನ್ನದೆ ಆದ ಕಾಣಿಕೆಯನ್ನು ನೀಡಿರುವುದು ನಮಗೆ ಕಂಡುಬರುತ್ತದೆ. ಜಾನಪದ ಹಾಡುಗಳನ್ನು ಕುರಿತಾದ ಸಾಮಾನ್ಯ ಅರ್ಥವನ್ನು ಗಮನಿಸುವುದಾದರೆ ಇದು ಜನರಾಡುವ ಲಯಬದ್ಧ ಮತ್ತು ಪ್ರಾಸ ಬದ್ಧವಾದ ಮಾತುಗಳೇ ಜನಪದ ನೆಲೆಯಲ್ಲಿ ಹಾಡುಗಳಾಗಿ, ಪದಗಳಾಗಿ ಬೆಳೆದುಬಂದಿವೆ. ಈ ಜಾನಪದ ಹಾಡು ಅಥವಾ ಪದಗಳ ಉಗಮಕ್ಕೆ ಮೂಲ ಕಾರಣ ಹೆಣ್ಣು ಎಂಬುದರಲ್ಲಿ ಯಾವುದೇ ಅತಿಶಯೋಕ್ತಿ ಇರಲಾರದು. ಮೂಲತಃ ಹೆಣ್ಣು ಮೃದು ಸ್ವಭಾವದವಳಾಗಿದ್ದು, ಸಹನೆ ಮತ್ತು ಸಂಯಮಕ್ಕೆ ಹೆಸರಾದವಳು. ಈ ಮೃದು ಧೋರಣೆಯಿಂದ

ಹೊಡಮೂಡಿದ ಪ್ರಾಸಬದ್ಧವಾದ ಮಾತುಗಳೇ ಜಾನಪದ ಹಾಡುಗಳಾಗಿ ಬೆಳೆದುಬಂದಿರುವ ಸಾಧ್ಯತೆಗಳಿವೆ. ಹೀಗಾಗಿ ಜಾನಪದ ಹಾಡುಗಳಿಗೂ ಮತ್ತು ಹೆಣ್ಣಿಗೂ ನಿಕಟವಾದ ಬಾಂಧವ್ಯವು ಎದ್ದು ಕಾಣಿಸುತ್ತದೆ.

ಜಾನಪದ ಹಾಡುಗಳನ್ನು ಕುರಿತು ಹೇಳುವುದಾದರೆ, "ಸಾಮಾನ್ಯರಿಗೆ ಸಾಧ್ಯವಾಗುವ ಸರಳವಾದ ಭಾಷೆಯಲ್ಲಿ, ಯಾವುದೇ ವಿಶೇಷ ತಯಾರಿಯಿಲ್ಲದೆ ವಚನಗಳಂತಹ ಬಿಡಿ ರಚನೆಗಳನ್ನು, ಆಶುಕವಿತ್ವದ ರೀತಿಯಲ್ಲಿ ಮೌಖಿಕವಾಗಿ ರಚನೆಗೈಯಲು ಸಾಧ್ಯವೆಂಬ ತಿಳುವಳಿಕೆಯೇ ಇಂತಹ ಆಯ್ಕೆಗೆ ದಾರಿ ಮಾಡಿಕೊಟ್ಟಿರಬೇಕೆಂದೆನಿಸುತ್ತದೆ. ಕನಿಷ್ಟ ಶಿಕ್ಷಣ ಇಲ್ಲದವನೂ ಇಂತಹ ಬಿಡಿ ರಚನೆಗಳನ್ನು ಮೌಖಿಕವಾಗಿ ಸೃಷ್ಟಿಸಬಹುದು ಮತ್ತು ಅವುಗಳನ್ನು ಸ್ಮೃತಿಯಲ್ಲಿ ಸರಳವಾಗಿ ಉಳಿಸಿಕೊಳ್ಳಲೂಬಹುದು ಎಂಬ ಅರಿವೇ ವಚನದಂತಹ ಕಿರುರಚನೆಗಳ ಆಯ್ಕೆಯ ಹಿಂದಿನ ಉದ್ದೇಶವಾಗಿರಬೇಕೆನಿಸುತ್ತದೆ. ವಚನ ಮಾದರಿಗಳಾದ– ಒಗಟು, ಒಡಪು, ಶಿಶುಪ್ರಾಸ, ಆಣಿಪೀಣಿ, ತ್ರಿಪದಿ, ದ್ವಿಪದಿ, ಚೌಪದಿ, ಷಟ್ಪದಿ ಈ ಬಗೆಯ ಅನೇಕ ರೂಪಗಳು ಕನ್ನಡ ಪ್ರದೇಶ, ಭಾಷೆ, ಜನಗಳಲ್ಲಿ– ಮೌಖಿಕ ಪರಂಪರೆಯಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದು, ಅವು ಜನಸಾಮಾನ್ಯರ ಸಂಸ್ಕೃತಿಯನ್ನು ಪ್ರತಿನಿಧಿಸುವ ಉದಾಹರಣೆಗಳಾಗಿ ಶರಣರ ಮುಂದಿದ್ದವು." (ಜಾನಪದ ಕಾವ್ಯ ಮಿಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು, ವೀರಣ್ಣ ದಂಡೆ, ಪು–೫೯) ಹೀಗೆ ಜನಪದ ಹಾಡುಗಳು ಮಾತಿನ ರೂಪಗಳ ಮುಂದುವರಿದ ನೆಲೆಯಲ್ಲಿ ತಾತ್ವಿಕ ಧೋರಣೆಗಳನ್ನು ಹಾಡಿನ ರೂಪದಲ್ಲಿ ರಾಗಬದ್ಧವಾಗಿ ವ್ಯಕ್ತವಾಗಿ, ವಿವಿಧ ನೆಲೆಯಲ್ಲಿ ಬೆಳೆದುಬಂದಿರುವುದು ಕಂಡುಬರುತ್ತದೆ.

ಜಾನಪದ ಮೂಲತಃವಾಗಿ ಮಹಿಳೆಯರಿಂದ ರೂಪಗೊಂಡ ಪ್ರಕಾರವೇ ಆಗಿದೆ. ಭಾರತಕ್ಕೆ ವೈದಿಕತೆಯು ಆಕ್ರಮಣ ಮಾಡುವ ಪೂರ್ವದಲ್ಲಿ ಇಲ್ಲಿ ಮಾತೃ ಸಂಸ್ಕೃತಿಯು ಪ್ರಧಾನ ನೆಲೆಯಿಂದ ಕೂಡಿತ್ತು. ಇಲ್ಲಿ ಮಹಿಳೆಯೂ ಕೂಡ ಪುರುಷನಂತೆ ತನ್ನ ಅಭಿವ್ಯಕ್ತಿ ಸ್ವತಂತ್ರವನ್ನು ಹೊಂದಿದ್ದಳು. ಇಂತಹ ಸಂದರ್ಭದಲ್ಲಿ ಜಾನಪದಕ್ಕೆ ಬುನಾದಿಯನ್ನು ರೂಪಿಸಿದವಳು ಮಹಿಳೆಯೇ ಆಗಿರುತ್ತಾಳೆ. "ಜಾನಪದದ ಅನೇಕಾನೇಕ ಪದರುಗಳು ಅತ್ಯಂತ ನೂತನ ಸಂಗತಿಗಳನ್ನು ಹೊರಗೆ ಹಾಕುತ್ತವೆ: ತಾಯಿಯ ಅಗ್ಗಳಿಕೆಯನ್ನು ಒಪ್ಪುವ ಪದ್ಧತಿ, ಫಲಸಮೃದ್ಧಿ, ದೇವತೆಯ ಆರಾಧನೆ, ಬೆತ್ತಲೆ ಹೆಣ್ಣು ಪೂಜಿಸುವಿಕೆ– ಮೊದಲಾದ ಪದ್ದತಿಗಳಿವೆ. ಗಂಡನನ್ನು ಕಳೆದುಕೊಂಡ ಹೆಣ್ಣು ಆತನ ಅಣ್ಣ ಅಥವಾ ತಮ್ಮಂದಿರ ಹೆಂಡತಿಯಾಗಿ ನಿರಾಳವಾಗಿ ಬಾಳುವ ಪದ್ಧತಿ ಇದೆ. ವಿಧವಾ ವಿವಾಹ ಹಾಗೂ ಒಲ್ಲದ ಗಂಡನನ್ನು ಬಿಟ್ಟು ಒಲಿದವನ ಕೂಡೆ ದಿಟ್ಟತನದಿಂದ ಬಾಳ್ವೆ ನಡೆಸುವ ಪ್ರಸಂಗಗಳಿವೆ. ಅಷ್ಟೇಕೆ ಜಾನಪದದ ಗರ್ಭದಲ್ಲಿ ಅನೇಕ ಸಂಸ್ಕೃತಿಗಳು ಅಡಗಿವೆ. ಮಾನವ ಜನಾಂಗಕ್ಕೆ ಸಂಬಂಧಿಸಿದ ಹಲವಾರು ಮೂಲ ಆಧಾರಗಳ ಗಣಿ ಇದು." (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಸಂ–೭, ಪು–೬೧)

ಜನಪದ ಸಾಹಿತ್ಯ ಸಂಶೋಧನೆಯ ಅಲೆದಾಟದಲ್ಲಿ ಹಲ ಕೆಲವು ಮಹಿಳೆಯರ ಹಾಡುಗಳು ನಿದರ್ಶನಕ್ಕೆ ಬರಲು ಅವುಗಳನ್ನು ಸಂಕಲಿಸಲು ಪ್ರಯತ್ನ ಮಾಡಲಾಗಿದೆ. ಇಂಥ ಸಂಕಲಿತ

ಮಹಿಳಾ ಹಾಡುಗಳು ಅನೇಕ ರಾಗ ರಾಗಿಣಿಗಳನ್ನೊಳಗೊಂಡು ಹಾಡಲು ಸರಾಗವಾಗಿವೆ. ಕೇಳಲು ಇಂಪಿನೊಡನೆ ಬಲು ಮನರಂಜಕವಾಗಿವೆ. ಜಾನಪದ ಮಹಿಳೆಯರ (ಹಳ್ಳಿಗರ ಹಾಡು) ಹಾಡುಗಳು ವೈಶಿಷ್ಟ್ಯ ವೈವಿಧ್ಯ-ಔಚಿತ್ಯ ಪೂರಕವಾಗಿವೆ. ಅವುಗಳಲ್ಲಿಯ ವಿಷಯ ಒಂದಲ್ಲ, ಎರಡಲ್ಲ ಇಡೀ ಪ್ರಪಂಚ ದರ್ಶನದ ಕಥಾ ಸಾರವಾಗಿದೆ. ಅವುಗಳಲ್ಲಿಯ ಕಾವ್ಯ "ಕಿರಿದರೊಳ್ ಪಿರಿದರ್ಥಮಂ" ಪೇಳಿದ ಜಾಣ್ಮೆಯನ್ನು ಒಳಗೊಂಡಿವೆ. ನಿರರ್ಗಳವಾದ ಸರಳ ಶೈಲಿ, ಶಬ್ದದ ಹಿತಮಿತ ಬಳಕೆಯಿಂದಾಗಿ ಇವು ಅತ್ಯಂತ ಮಹತ್ವಪೂರ್ಣವಾಗಿವೆ.

ಚಿತ್ರದುರ್ಗ ಪ್ರದೇಶದಲ್ಲಿ ಬೇರೆಲ್ಲಾ ಜನಾಂಗಗಳಿಗಿಂತ ಜನಪದ ಸಾಹಿತ್ಯ ಮತ್ತು ಅದರ ಇನ್ನಿತರ ಪ್ರಕಾರಗಳನ್ನು ರಕ್ಷಿಸಿಕೊಂಡು ಬಂದಿರುವವರು ಕಾಡುಗೊಲ್ಲ ಬುಡಕಟ್ಟಿನವರು. ಬುಡಕಟ್ಟಿನ ಅನೇಕ ಆಚರಣೆಗಳು, ಹಬ್ಬ-ಹರಿದಿನಗಳು ಜತೆಗೆ ಜೀವನಕ್ರಮದಲ್ಲಿಯೂ ಬಹುಮಟ್ಟಿಗೆ ಹೊಂದಾಣಿಕೆಯನ್ನು ಮಾಡಿಕೊಂಡು ಬಂದಿರುವ ಮ್ಯಾಸಬೇಡನಾಯಕ ಬುಡಕಟ್ಟಿನವರು ಗೊಲ್ಲರಷ್ಟೇ ಆಸಕ್ತಿಯಿಂದ ಜನಪದ ಸಾಹಿತ್ಯ ಮತ್ತು ಅದರ ಇತರ ಕಲಾ ಪ್ರಕಾರವನ್ನು ಉಳಿಸಿಕೊಂಡು ಬಂದಿಲ್ಲವೆಂದು ಹೇಳಬೇಕಾಗಿದೆ. ಕಾಡುಗೊಲ್ಲರಲ್ಲಿ ಎತ್ತಪ್ಪ, ಕ್ಯಾತಪ್ಪ, ಸಿರಿಯಣ್ಣ, ಚಿತ್ರಲಿಂಗ ಇಂಥ ದೇವತೆಗಳ ಮೇಲೆಯೇ ಅಲ್ಲದೆ ಜುಂಜಪ್ಪನನ್ನು ಕುರಿತಂತೆ ಕನ್ನಡ ಜನಪದ ಸಾಹಿತ್ಯದಲ್ಲಿಯೇ ಅತ್ಯಂತ ಉತ್ಕೃಷ್ಟವೆನಿಸುವ ಕಥನ ಕಾವ್ಯವೊಂದು ಗದ್ಯಪದ್ಯ ಎರಡರಲ್ಲಿಯೂ ಪ್ರಚಾರದಲ್ಲಿದೆ. ಪದ್ಯ, ಕತೆಯನ್ನು ಹೆಂಗಸರೂ, ಗದ್ಯಕತೆಯನ್ನು ಗಂಡಸರೂ ಗಣಿವಾದ್ಯದ ಮೂಲಕ ಹಾಡುವರು. ಕಾಡುಗೊಲ್ಲರು ಉಳಿಸಿಕೊಂಡು ಬಂದಿರುವ ವಾಕ್ ಪರಂಪರೆಯ ಹಾಡುಗಾರಿಕೆ ಅವರಿಗೆ ಮಾತ್ರ ಮೀಸಲಾಗಿದ್ದು ಅವು ಬೇರೆ ಜನಾಂಗದಲ್ಲಿ ಕಂಡುಬರುವುದಿಲ್ಲವೆಂದು ಹೇಳಲಾಗದು. ಗೊಲ್ಲರಲ್ಲಿರಬಹುದಾದ ಒಂದೆರಡು ಕಥನ ಗೀತೆ, ಸೋಬಾನೆ ಹಾಡುಗಳು ಬೇಡ ನಾಯಕ ಸಮೂಹದಲ್ಲಿಯೂ ಪ್ರಚಲಿತದಲ್ಲಿರಬಹುದು. ಆದರೆ ಒಟ್ಟಾರೆ ಗೊಲ್ಲ ಬುಡಕಟ್ಟಿನವರ ನಡುವೆ ಉಳಿದುಕೊಂಡು ಬಂದಿರುವಷ್ಟು ಜನಪದ ಸಾಹಿತ್ಯದ ವಿವಿಧ ಪ್ರಕಾರಗಳು ಬೇಡ ನಾಯಕರ ಸಮೂಹದಲ್ಲಿ ಉಳಿದುಬಂದಿಲ್ಲವೆಂಬುದು ನಿಜ ಸಂಗತಿ. ಇದಕ್ಕೆ ಎರಡೂ ಬುಡಕಟ್ಟಿನವರ ವೃತ್ತಿ ಬದುಕಿನ ಮನೋಭಾವಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿರುವುದೇ ಕಾರಣವಿರಬಹುದು.

ಬೇಡನಾಯಕರಾದರೋ ಅರಣ್ಯಗಳಲ್ಲಿ ಪಶುಪಾಲನಾ ವೃತ್ತಿಯನ್ನು ಮಾಡಿಕೊಂಡಿದ್ದರೂ ಸಮಯವೇರ್ಪಟ್ಟಾಗ ಯುದ್ಧಗಳಲ್ಲಿ ಭಾಗವಹಿಸುತ್ತಾ ಬೇಟೆಯನ್ನು ಆಡುತ್ತಾ ದೈಹಿಕವಾಗಿ ಪರಾಕ್ರಮಿಗಳು, ಮಾನಸಿಕವಾಗಿ ಒರಟರೂ ಕಾಡುಪ್ರಾಣಿಗಳಿಗೆ ಮತ್ತು ಶತ್ರುಗಳಿಗೆ ಹೆದರದವರೂ ಆಗಿ ಬೆಳೆದರು. ಇದರಿಂದ ಈಗಲೂ ಚಿತ್ರದುರ್ಗದ ಗ್ರಾಮಗಳಿಂದ ಹೊರಗಿರುವ ತಮ್ಮದೇ ಹಳ್ಳಿಗಳಲ್ಲಿ ವಾಸಿಸುವ ಮ್ಯಾಸಬೇಡರ ಮೈಕಟ್ಟು ಕಪ್ಪು ಮಿಶ್ರಿತ ಕಂದು ಬಣ್ಣಕ್ಕೂ, ಎತ್ತರಕ್ಕೂ ದೃಢಕಾಯರಾಗಿಯೂ ಇರುವುದನ್ನು ಗಮನಿಸಬಹುದು. ಅಲ್ಲದೆ ಕರ್ನಾಟಕದಾದ್ಯಂತ ಬೇಡರು ಎನಿಸಿಕೊಂಡಿರುವವರು ದನಕರುಗಳ ಮೇಲೆ ಬಿದ್ದು ಅವನ್ನು ತುರುಬಿಕೊಂಡು ಹೋಗಿ ತಮ್ಮ ವಶಕ್ಕಿಟ್ಟುಕೊಳ್ಳುತ್ತಿದ್ದ

ಪ್ರಸಂಗಗಳು ಶಾಸನಗಳಲ್ಲಿಯೂ ಪ್ರಸ್ತಾಪಿತವಾಗಿರುತ್ತದೆ. ಗೊಲ್ಲರು ಬೇಡರಂತೆ ಪಶುಪಾಲಕರಾದರೂ ಅವರಿಗೂ ದನಕರುಗಳು ಐಶ್ವರ್ಯ, ಆಸ್ತಿ ಎನಿಸಿದರೂ ಇನ್ನೊಂದು ಗುಂಪಿನ ದನಕರುಗಳ ಮೇಲೆ ಬಿದ್ದು ಅವನ್ನು ತುರುಬಿಕೊಂಡು ಹೋದ ಉದಾಹರಣೆಗಳು ಹೆಚ್ಚು ಇಲ್ಲ. ಈ ಮನೋಭಾವವನ್ನು ಬೇಡರು ಮತ್ತು ಗೊಲ್ಲರ ಬುಡಕಟ್ಟಿನವರೇ ಆದ ಎರಡು ಕಥನಗೀತಗಳ ರಚನೆಗಳ ಹಿನ್ನೆಲೆಯಲ್ಲಿಯೇ ಕಾಣಬಹುದೆನಿಸುತ್ತದೆ.

ಚಿತ್ರದುರ್ಗ ಸುತ್ತಿನ ಬೇಡನಾಯಕರಲ್ಲಿ ಅತಿಹೆಚ್ಚು ಬೇಡನಾಯಕರಲ್ಲಿ ಅತಿಹೆಚ್ಚು ಪ್ರಚಲಿತದಲ್ಲಿರುವ ಒಂದು ಕಥನಗೀತೆ ಗಾದ್ರಿಪಾಲನಾಯಕನದು. ಪಾಲನಾಯಕನು ಸಿರಿಗೆರೆ ಬಳಿಯ ಮಿಂಚೇರಿ ಅರಣ್ಯದಲ್ಲಿ ದನಗಳ ಗೂಡು ತಿರುವಿಕೊಂಡು ಇರುತ್ತಾನೆ. ಅಂತೆಯೇ ಕಾಡುಗೊಲ್ಲರ ಕಾಳಿಂಗನು ದನಗಳ ಗೂಡು ಹಾಕಿಕೊಂಡು ದಕ್ಷಿಣಾದ್ರಿ ಗಿರಿಯಲ್ಲಿ ಇರುವನು. ಈ ಗೊಲ್ಲರ ಕಾಳಿಂಗ ಮತ್ತು ಅವನು ಸಾಕಿದ ಪುಣ್ಯಕೋಟಿ ಎಂಬ ಹಸುವಿನ ಕತೆ ಕರ್ನಾಟಕದಾದ್ಯಂತ ಪ್ರಚಾರದಲ್ಲಿರುವಂತದ್ದು. ಗಾದ್ರಿಪಾಲನಾಯಕನು ಮಿಂಚೇಲಿ ಅರಣ್ಯದಲ್ಲಿ ದನಗಳ ಗೂಡು ಹಾಕಿ ಅವನ್ನು ಪಾಲಿಸುತ್ತಿರುವಾಗ್ಗೆ ಅದೇ ಅರಣ್ಯದಲ್ಲಿ ಒಂದು ಗಂಡು ಮತ್ತು ಹೆಣ್ಣು ಹುಲಿ ತಮ್ಮ ಮಕ್ಕಳೊಡನೆ ವಾಸವಾಗಿರುತ್ತವೆ. ಈ ಹುಲಿಗಳೊಂದಿಗೆ ಪಾಲನಾಯಕ ಒಪ್ಪಂದವಾಗಿರುತ್ತದೆ.

ಆದರೆ ಗಾದ್ರಿಪಾಲನಾಯಕನ ಭಾವ-ಮೈದುನರಾದ ಚಿತ್ತಣ ಮತ್ತು ಕಾಟಣ್ಣ ಅವರ ಅಕೃತ್ಯದಿಂದಾಗಿ ಒಂದು ದಿನ ಕರುಗಳೊಂದಿಗೆ ಆಡುತ್ತಿದ್ದ ಹುಲಿಯ ಮಕ್ಕಳ ಸಾವಾಗುತ್ತದೆ. ಸಂಜೆ ಬೇಟೆಯಿಂದ ಬಂದ ತಾಯಿಹುಲಿ ಸತ್ತ ಮಕ್ಕಳನ್ನು ನೋಡುತ್ತದೆ. ಒಪ್ಪಂದ ಮುರಿದದ್ದಕ್ಕಾಗಿ ತಾಯಿಹುಲಿ ಗಾದ್ರಿಪಾಲನಾಯಕನ ಮೇಲೆ ಬೀಳ ಬರುತ್ತದೆ. ಅಷ್ಟು ಹೊತ್ತಿಗೆ ತಪ್ಪಿಸಿಕೊಂಡು ಓಡಿ ಹೋಗಲು ಪ್ರಯತ್ನಿಸುತ್ತಿದ್ದ ಪಾಲನಾಯಕನನ್ನು ಅದೇ ಮಿಂಚೇಲಿ ಅರಣ್ಯದ ಬಳಿ ಹಿಡಿಯುತ್ತದೆ. ಅಲ್ಲಿ ಇಬ್ಬರಿಗೂ ಮೂರು ದಿನಗಳ ಕಾಲ ಆಹಾರವಿಲ್ಲದೆ ಯುದ್ಧವಾಗಿ ಪರಸ್ಪರ ಸಾಯುತ್ತಾರೆ.

ಕಾಡುಗೊಲ್ಲರ ಪುಣ್ಯಕೋಟಿ ಕತೆ ಕೊಂಚ ಬೇರೆ ರೀತಿಯಲ್ಲಿ ಬರುತ್ತದೆ. ಕಾಡುಗೊಲ್ಲನು ತನ್ನ ದನಕರುಗಳನ್ನು ಮೇವಿಗಾಗಿ ಹೊಡೆದುಕೊಂಡು ಹೋಗಿ ವಾಪಸ್ಸು ಬರುವಾಗ ಪುಣ್ಯಕೋಟಿ ಹಸು ಹಸಿದ ಮರಿಹುಲಿಯ ಕೈಗೆ ಸಿಕ್ಕಿ ಬೀಳುತ್ತದೆ. ಹುಲಿಗೆ ಆಹಾರದ ಅಗತ್ಯ ಬಹಳವಿದ್ದುದರಿಂದ ಪುಣ್ಯಕೋಟಿಯನ್ನು ಆಗಿಂದಾಗಲೇ ಕೊಲ್ಲ ಬಯಸುತ್ತದೆ. ಆದರೆ ಪುಣ್ಯಕೋಟಿ ಗೂಡಿನಲ್ಲಿರುವ ತನ್ನ ಕರುವಿಗೆ ಹಾಲು ಕುಡಿಸಿ, ಬುದ್ಧಿವಾದ ಹೇಳಿ ಬರಲು ಅವಕಾಶ ಕೋರುತ್ತದೆ. ಹುಲಿ ಸಂದೇಹದ ಮೇಲೆಯೇ ಪುಣ್ಯಕೋಟಿಯ ಮಾತಿಗೆ ಒಪ್ಪುತ್ತದೆ. ಆದರೆ ಈ ಒಪ್ಪಂದವನ್ನು ಪುಣ್ಯಕೋಟಿ ಮುರಿಯುವುದಿಲ್ಲ. ಕರುವಿಗೆ ಹಾಲು ಕುಡಿಸಿ ವಾಪಾಸಾಗುವ ಹಸು ಹುಲಿಗೆ ಆಹಾರವಾಗಬಯಸುತ್ತದೆ. ಗೊಲ್ಲರ ಸಮುದಾಯದ ಈ ಕಥಾಪ್ರಸಂಗ ಸತ್ಯದ ಮಹತ್ವವನ್ನು ಕುರಿತ ವಸ್ತುವಿನಿಂದಾಗಿ, ತನ್ನ ಕಾವ್ಯಾತ್ಮಕ ಗುಣದಿಂದಾಗಿ ಕರ್ನಾಟಕದಾದ್ಯಂತ ಜನಪ್ರಿಯವಾಗಿ ಬಿಟ್ಟಿದೆ. ಗಾದ್ರಿಪಾಲನಾಯಕನಂತೆ ಮತ್ತು ಪುಣ್ಯಕೋಟಿಯ ಕತೆ ವಸ್ತುವಿನ ವ್ಯಾಪ್ತಿಯಲ್ಲಿ ಒಪ್ಪಂದದ

ಆಶಯದಲ್ಲಿ ಒಂದೇ ಆಗಿದ್ದರೂ ನಾಯಕ ಮತ್ತು ಪುಣ್ಯಕೋಟಿ ಹುಲಿಯ ಎದುರು ನಿಲ್ಲುವಾಗ ತೋರುವ ಗುಣ ಮಾತ್ರ ಬೇರೆ-ಬೇರೆಯಾಗಿ ಬಿಡುತ್ತದೆ. ಈ ಮೊದಲೇ ಹೇಳಿದಂತೆ ಕಾಡುಗೊಲ್ಲರು ಅರಣ್ಯದಲ್ಲಿ ತಮ್ಮ ಪಾಡಿಗೆ ತಾವು ಪಶುಪಾಲನೆಯೊಂದಿಗೆ ಜೀವನ ನಡೆಸಿದವರು. ಇನ್ನೊಂದು ಗುಂಪಿನೊಡನೆ ದನಕರುಗಳ ಆಸ್ತಿ ಸಂಪಾದನೆಗಾಗಿ (ಹಿಂದಿನ ಶತಮಾನಗಳಲ್ಲಿ ಹಣಕ್ಕಿಂತಲೂ ದನಕರುಗಳನ್ನೇ ಆಸ್ತಿ, ಐಶ್ವರ್ಯ ಎಂದು ಭಾವಿಸಲಾಗಿತ್ತು.) ನಡೆಸಿದವರಲ್ಲ.

ಆದರೆ ಬೇಡ ನಾಯಕರು ಪಶುಪಾಲನೆಗಿಂತ ಹೆಚ್ಚಾಗಿ ಬೇಟೆ, ಯುದ್ಧ, ಹೋರಾಟಗಳಲ್ಲಿ ಭಾಗವಹಿಸಿದವರು. ಹೀಗಾಗಿ ಗಾದ್ರಿಪಾಲನಾಯಕ ಕಥನಗೀತೆಗಳಲ್ಲಿ ಒಪ್ಪಂದ ಮುರಿದು ಹೋದದ್ದು ಅದರಿಂದ ಪಾಲನಾಯಕ ಹುಲಿಯೊಂದಿಗೆ ಹೋರಾಡಬೇಕಾಗಿ ಬಂದದ್ದು ಮುಖ್ಯ ಆಶಯವಾದರೆ, ಕಾಡುಗೊಲ್ಲರ ಬುಡಕಟ್ಟಿನ ಗೋವಿನ ಕತೆಯಲ್ಲಿ ಒಪ್ಪಂದ ನೆರವೇರಿ ಪುಣ್ಯಕೋಟಿಯ, ಸಾತ್ವಿಕತೆ, ಸತ್ಯಕ್ಕೆ ಹುಲಿಯೇ ತಲೆಬಾಗಿ ಸಾಯುವ ಕ್ರಿಯೆ ಜರುಗುತ್ತದೆ. ಬೇಡ ನಾಯಕ ಮತ್ತು ಗೊಲ್ಲರ ಜೀವನ ಕ್ರಮ ಮತ್ತು ಮನೋಭಾವನೆಗಳನನ್ನು ಎರಡು ಕತೆಗಳು ಸೂಕ್ಷ್ಮವಾಗಿ ಪ್ರತಿನಿಧಿಸುತ್ತವೆ. ಎಂದು ತಿಳಿಯಬಹುದಾಗಿದೆ.

ಮೇಲಿನ ಅಂಶವನ್ನೇ ಸಮರ್ಥಿಸುವಂತೆ ಇನ್ನೊಂದು ದಂತಕತೆ ಬೇಡರು ಮತ್ತು ಗೊಲ್ಲರ ನಡುವೆ ಚಾಲ್ತಿಯಲ್ಲಿದೆ. ಬಹು ಹಿಂದೆ ಬೇಡರು ಮತ್ತು ಗೊಲ್ಲರು ಒಂದೇ ತಾಯಿಯ ಮಕ್ಕಳಾಗಿ ಪಶುಪಾಲಕರಾಗಿದ್ದರು. (ಈಗಲೂ ಚಿತ್ರದುರ್ಗದ ಕಡೆಯಲ್ಲಿ ಬೇಡರಾಗಲೀ ಗೊಲ್ಲರಾಗಲೀ ಪರಸ್ಪರ ತಮ್ಮನ್ನು ಅಣ್ಣ ತಮ್ಮಂದಿರೆಂದು ಹೇಳಿಕೊಳ್ಳುವುದನ್ನು ಯಾರಾದರೂ ಗಮನಿಸಬಹುದು.) ಒಮ್ಮೆ ಬರಗಾಲ ಬಂತು ಎರಡು ಗುಂಪಿನವರು ತಂತಮ್ಮ ದನಕರುಗಳನ್ನು ಪಡುವಲ ಸೀಮೆಗೆ ತಿರುಗಿಸಿದರು. ಬಹಳಷ್ಟು ದಿನಗಳ ಕಾಲ ಆಹಾರವಿಲ್ಲದೆ ಹಸಿವಿನಿಂದ ಕಂಗೆಟ್ಟಿದ್ದ ಬೇಡರವನು ಆಗತಾನೆ ಹುಟ್ಟಿದ ಒಂದು ಕುಂಟು ಹಸುವಿನ ಕರುವಿನ ತೊಡೆಯನ್ನು ಕಿತ್ತು ತಿಂದ. ಇದನ್ನು ಕಂಡ ಗೊಲ್ಲರವನು 'ಅಯ್ಯೋ ಕಂಗಾ ಎಂಥ ಕೆಲ್ಸ ಮಾಡಿದೆಯೋ' ಎಂದು ಬಯ್ದ. ಅಂದಿನಿಂದ ಇಬ್ಬರೂ ಬೇರೆ-ಬೇರೆಯಾದರು. ಈ ಕತೆ ಬೇಡರು ಗೊಲ್ಲರ ನಡುವೆ ವ್ಯಾಪಕವಾಗಿಯೇ ಪ್ರಚಾರದಲ್ಲಿದ್ದು; ಒಂದು ಬುಡಕಟ್ಟಿನ ಸಂಯಮವನ್ನೂ ಇನ್ನೊಂದು ಗುಂಪಿನ ದುಡುಕುತನವನ್ನೂ ಪ್ರತಿನಿಧಿಸುತ್ತದೆ.

ಲೇಖನದ ಆರಂಭದಲ್ಲಿಯೇ ಹೇಳಿದಂತೆ ಬೇಡ ನಾಯಕರಿಗಿಂತ ಕಾಡುಗೊಲ್ಲರೇ ಅತಿಹೆಚ್ಚು ಸಂಖ್ಯೆಯಲ್ಲಿ ಜನ ಪದ ಸಾಹಿತ್ಯ ಮತ್ತು ಅದರ ಹಾಡುಗಾರಿಕೆಯನ್ನು ಉಳಿಸಿಕೊಂಡು ಬಂದಿದ್ದಾರೆಂಬುದಕ್ಕೆ ಮತ್ತೊಂದು ಉದಾಹರಣೆಯಾಗಿ ಮುಂದಿನ ಒಂದು ಒಗಟನ್ನು ಪ್ರಸ್ತಾಪಿಸಬಹುದೆನಿಸುತ್ತದೆ. ಹರತಿ ಕೋಟೆಯ ರಾಜನ ಮಕ್ಕಳಲ್ಲಿ ಒಬ್ಬಳಾದ ಕರಿಯೋಬಿಯನ್ನು ಬಸವಿ ಬಿಟ್ಟಿದ್ದರು. ಆಕೆ ಪ್ರತ್ಯೇಕವಾದ ಮನೆ ಕಟ್ಟಿಕೊಂಡು ಅರಮನೆಯ ಮುಂದೆ 'ಕಪ್ಪೆ ಕಲಕದ ನೀರು, ಬಿಸಿಲಿಗೆ ಬಾಡದ ಹೂ, ನಾಲ್ಕು ಏಣಿಸ ಹಸಿರು ಕಲ್ಲುಕಂಬ ತಲೆಗೆ ಮೆತ್ತನೆ ಕಲ್ಲು,

ಕಾಯಿಸದೆ ಆಗಿರೋ ತುಪ್ಪ ಒಂದು ಕೊಂಬಿನ ಮೇಕೆ ಹೋತ ತಂದು ಕೊಟ್ಟವರಿಗೆ ಭೋಗ ಕೊಡ್ತೀವಿ ಇದನ್ನು ತರದೇ ಸೋತವರು ಸಾವಿರ ವರಹ ದಂಡ ಕೊಡಬೇಕು.' ಎಂದು ಶಾಸನ ಹಾಕಿಸಿದ್ದಳು. ಹೀಗೆ ಒಡಪು ಬಿಡಿಸಲಾಗದೆ ಸೋತವರಿಂದ ಏಳು ಕೊಪ್ಪರಿಗೆ ವರಹ ಸಂಪಾದಿಸಿದ್ದಳು. ಒಗಟಿನ ಸುದ್ದಿ ಕೇಳಿದ ಹಟ್ಟಿ ಮಲ್ಲಪ್ಪ ನಾಯಕನು ಬಂದು ಆಕೆಯ ಒಡಪು ಬಿಡಿಸಿ ಉತ್ತರ ಹೇಳಿಕೊಟ್ಟ. 'ಎಳೆ ನೀರೆ ಕಪ್ಪೆಕಲಕದ ನೀರು, ನವಿಲುಗರಿಯೇ ಬಿಸಿಲಿಗೆ ಬಾಡದ ಹೂವು, ಮುಂಗುರಬಳ್ಳಿಯೇ ನಾಲ್ಕು ಏಣಿನ ಹಸಿರು ಕಲ್ಲುಗಂಬ, ಕೈಯ ತೋಳು ತಲೆಗೆ ಮೆತ್ತನೆಯ ಕಲ್ಲು, ಜೇನು ತುಪ್ಪವೇ ಕಾಯಿಸದೆ ಆಗುವ ತುಪ್ಪ, ಕೋಳಿಯೇ ಒಂದು ಕೋಡಿನ ಮೇಕೆ ಹೋತ' ಎಂದು ಬಿಡಿಸಿ ಹೇಳುತ್ತಾನೆ. ಕರಿಯೋಬಿಯಾದರೋ ಇವನು ಒಡಪು ಬಿಡಿಸಿದ್ದಕ್ಕೆ ಕಾರಣ ಬೇರೆ ಯಾರೋ ಹೇಳಿಕೊಟ್ಟದ್ದು ಕಾರಣವಿರಬೇಕು ಎಂದು ಊಹಿಸಿದಳು. ಅವಳ ಊಹೆಯಂತೆ ಅದು ಕಾಡುಗೊಲ್ಲರ ಕರಡಿ ಬುಳ್ಳಣ್ಣ ಎಂತಲೂ ಆಕೆಗೆ ತಿಳಿದುಹೋಯಿತು.

ಮೇಲಿನ ಮೂರು ಕತೆಗಳಲ್ಲಿ ಎರಡು ಬುಡಕಟ್ಟುಗಳ ಬಗೆಗೆ ಇರಬಹುದಾದ ಒಂದೊಂದು ವಿವರ ಸ್ಪಷ್ಟವಾಗುತ್ತದೆ. ಮೊದಲ ಕತೆಯಲ್ಲಿ ಬೇಡರ ಪಾಲನಾಯಕ ಹುಲಿಯ ಒಪ್ಪಂದವನ್ನು ಮುರಿದು ಅದರೊಡನೆ ಹೋರಾಟ ತಂದುಕೊಂಡು ಮೃತನಾದ. ಎರಡನೇ ಕತೆಯಲ್ಲಿ ಬರಗಾಲ ಬಂದಾಗಲೂ ಗೊಲ್ಲರವನು ಉಳಿಸಿಕೊಂಡ ಸಂಯಮವನ್ನು ಬೇಡರವನು ಉಳಿಸಿಕೊಳ್ಳಲಿಲ್ಲ. ಮೂರನೆಯ ಕತೆಯಲ್ಲಿ ಮಲ್ಲಪ್ಪನಾಯಕನಿಗೆ ಕರಿಯೋಬಿಯ ಬಗ್ಗೆ ವ್ಯಾಮೋಹವಿದೆ. ಆದರೆ ಆಕೆಯ ಚತುರ ಪ್ರಶ್ನೆಗೆ ಉತ್ತರ ತಿಳಿಯುವ ಆದರೆ ಅದನ್ನು ಬಿಡಿಸುವುದರಲ್ಲಿ ಆಸಕ್ತಿಯಿಲ್ಲ. ಅದೇ ಕರಡಿ ಬುಳ್ಳಪ್ಪನಿಗೆ ಆಕೆಯ ಒಡಪಿಗೆ ಉತ್ತರಿಸುವ ಚಾತುರ್ಯವಿದೆ. ಆದರೆ ಉತ್ತರ ಹೇಳಿ ಆಕೆಯನ್ನು ಒಲಿಸಿಕೊಳ್ಳಬೇಕೆಂಬ ಆತುರ ಅವನಿಗಿಲ್ಲ. ಬೇಟೆ, ಹೋರಾಟ, ಮಾಂಸ ಪ್ರಿಯತೆ (ಬೇಡರವನು ಹುಟ್ಟಿದ ಕರುವಿನ ಕಾಲನ್ನು ತಿಂದದ್ದು) ಇವುಗಳ ಮುಂದಿನ ಹಂತ ಹೆಣ್ಣಿನ ಬಯಕೆ, ಬೇಡನಾಯಕರ ಗುಣಕ್ಕೆ ಮೂರೂ ಕತೆಗಳನ್ನು ಕ್ರಮವಾಗಿ ಪ್ರಸ್ತಾಪಿತವಾಗಿರುವಂತೆ ಕಾಣಿಸುತ್ತದೆ. ಯುದ್ಧ, ಬೇಟೆ ಇಂಥ ಮೈಬೆಳೆಸುವ ಕ್ರಿಯೆಗಳು ಮತ್ತು ಮಾಂಸಾಹಾರ ಇವುಗಳ ತಮ್ಮ ಮುಂದಿನ ಕ್ಷಣದಲ್ಲಿಯೇ ಹೆಣ್ಣಿನ ಬಯಕೆಯನ್ನು ಹುಟ್ಟಿಸುತ್ತವೆಂಬುದಕ್ಕೆ ಇನ್ನಿತರ ಅನೇಕ ಕಾವ್ಯ, ಕತೆಗಳ ಸಂದರ್ಭದಲ್ಲಿ ನೋಡಬಹುದು.

೭.೧ ಋತುಮತಿಯ ಹಾಡುಗಳು

ಬೇಡನಾಯಕರಲ್ಲಿ ಹೆಣ್ಣು ಮಕ್ಕಳಿಗೆ ಮೈ ನೆರೆತರೆ ಮನೆ ಮುಂದೆಯೇ ಹೊಂಗೆ ಮತ್ತು ಬೇವಿನ ಸೊಪ್ಪು ಬೆರೆತ ಒಂದು ಚಿಕ್ಕ ಗುಡಿಸಲನ್ನು ಕಟ್ಟುವರು. ಯಥಾವಿಧಿಯಾಗಿ ಅದರಲ್ಲಿ ಋತುಮತಿಯಾದ ಹೆಣ್ಣು ಮಕ್ಕಳು ಹತ್ತು ದಿನಗಳ ಕಾಲ ಅದರಲ್ಲಿ ಕಾಲ ಕಳೆಯಬೇಕು. ಆ ಹತ್ತು ದಿನಗಳಲ್ಲಿ ಗುಡಿಸಲೊಳಗೆ ಆಕೆ ಸೂತಕದ ಹೆಂಗಸಾಗಿ ಇರುತ್ತಾಳೆ. ಅವಳಿಗೆ ಮಕ್ಕಳನ್ನು ಪಡೆಯುವ ಬಯಕೆಯನ್ನು ಪ್ರಚೋದಿಸುವ ಸಲುವಾಗಿ ಅವಳೊಡನೆ ಮಕ್ಕಳು ಆಟವಾಡುವಂತೆ ಅವಕಾಶ

ಮಾಡಿಕೊಡಲಾಗುತ್ತದೆ. ಅಲ್ಲದೆ ನೆಂಟರಿಷ್ಟರು ಅವಳಿಗೆ ಬೇಕಾಗುವ ಆಹಾರಪದಾರ್ಥಗಳನ್ನು ತಯಾರಿಸಿಕೊಡುವುದೂ ಉಂಟು. ಆ ಆಹಾರ ಪದಾರ್ಥಗಳನ್ನು ಕೂಡಾ ಬಹುಪಾಲು ಸಿಹಿ ಪದಾರ್ಥಗಳಿಟ್ಟು ಲಡ್ಡು ಬೆಲ್ಲದಿಂದ ಮಾಡಿದ್ದಾಗಿದ್ದು, ಅವು ಆಕೆಯ ವೈವಾಹಿಕ ಬಯಕೆಯನ್ನು ಪ್ರಚೋದಿಸುತ್ತಿರುತ್ತವೆ.

ಹನ್ನೊಂದನೇ ದಿನ ವಾದ್ಯ ಸಮೇತ ಊರ ಹೊರಗೆ ಕರೆದುಕೊಂಡು ಹೋಗಿ ತಂಗಟೆ ಗಿಡ ಮುಟ್ಟಿಸುತ್ತಾರೆ. ಮುಟ್ಟಿಸುವುದಷ್ಟೆ ಅಲ್ಲದೆ ಆ ಗಿಡವನ್ನು ಆಕೆಯಿಂದ ಅತ್ತಿಂದಿತ್ತ ಇತ್ತಿಂದತ್ತ ಮೂರು ಬಾರಿ ದಾಟಿಸುವರು. ಆ ತೆಂಗಟೆ ಗಿಡದ ಸ್ಥಳದಿಂದ ದೇವಸ್ಥಾನಕ್ಕೆ ಕರೆದುಕೊಂಡು ಬಂದು ಪೂಜೆ ಮಾಡಿಸುವುದುಂಟು. ಪೂಜೆಯಿಂದ ಆಕೆಯನ್ನು ಮನೆಗೆ ಕರೆದುಕೊಂಡು ಬರುತ್ತಾರೆ. ಮನೆಯ ಮುಂದೆ ಕುದಿಯುವ ಬಣವಕ್ಕಿಯೊಂದಿಗೆ ಸೌದಿಯಿಟ್ಟು ಬೆಂಕಿ ಹಾಕಲಾಗುತ್ತದೆ. ಈ ಬೆಂಕಿಯಲ್ಲಿಟ್ಟ ಬೇವಿನ ಕಡ್ಡಿಯನ್ನು ಹುಡುಗಿಯ ನಾಲಗೆಗಿಟ್ಟು ಸುಡುವರು. ನಾಲಗೆ ಸುಡುವುದು ಮೂರು ಬಾರಿ ಅಲ್ಲಿಗೆ ಹೆಣ್ಣನ್ನು ಸೂತಕ ಕಳೆದುಕೊಂಡು ಮನೆಯೊಳಕ್ಕೆ ಸೇರಿಸಿಕೊಂಡಂತಾಯಿತು. ಮನೆಯ ಒಳಗೆ ಬಂದ ಹೆಂಗಸು ಅಲ್ಲಿಂದ ಹಾಲು, ವೀಳ್ಯದೆಲೆಯನ್ನು, ಗಂಧದದ ಕಡ್ಡಿಯನ್ನು ಎಡೆಯಲ್ಲಿಟ್ಟುಕೊಂಡು ನೀರು ಇವುವ ಕಡೆ ಬರುವರು. ಅಲ್ಲಿ ಗಂಗಾದೇವತೆಗೆ ಪೂಜೆ ಮಾಡಿ ವೀಳ್ಯೆದೆಲೆಯನ್ನು ನೀರಿನಲ್ಲಿ ತೇಲಿ ಬಿಡಲಾಗುತ್ತದೆ. ಮೈನೆರೆದ ಹೆಣ್ಣುಮಗಳೊಂದಿಗೆ ಹೋದ ಐದು ಜನ ಮುತ್ತೈದೆಯರು ಕೊಡದಲ್ಲಿ ನೀರು ಹೊತ್ತುಕೊಂಡು ಬರುವರು.

ಬಹಳ ಹಿಂದೆ ಬೇಡ ನಾಯಕರು ಪೂರ್ಣವಾಗಿ ಅಡವಿ ಸಂಚಾರಿಗಳೇ ಆಗಿದ್ದಾಗ ಹೆಣ್ಣು ಮಗಳು ಮೈನೆರೆದಲ್ಲಿ ನೆರವೇರುತ್ತಿದ್ದ ಆಚರಣೆ ಬೇರೆ ಬಗೆಯಲ್ಲಿ ಇದ್ದುದಾಗಿ ಹಿರಿಯ ವಕ್ತೃಗಳು ತಿಳಿಸುತ್ತಾರೆ. ಋತುಮತಿಯಾದ ಹೆಣ್ಣನ್ನು ಮನೆಯಿಂದ ಹೊರಗೆ ಬೇವಿನ ಸೊಪ್ಪಿನ ಗುಡಿಸಿಲಿನಲ್ಲಿ ಕೂರಿಸಿ ಅವಳ ಮುಂದೆ ಒಂದು ಕಲ್ಲು ಮರಿಗೆಯನ್ನು ಇರಿಸುತಿದ್ದರು. ಈ ಕಲ್ಲು ಮರಿಗೆ ಊಟ ಮಾಡುವುದಕ್ಕಾಗಿ ಇರುತ್ತಿತ್ತು. ಮನೆಯ ಹಿರಿಯ ಹೆಂಗಸರು ಅನ್ನ ತಂದು ಆ ಕಲ್ಲು ಮರಿಗೆಯ ಮೇಲಿಟ್ಟರೆ ಆ ಋತುಮತಿಯಾದಾಕೆ ಮೊದಲನೆಯ ದಿನ ಕಿರುಬೆರಳಿನಿಂದ ಒಂದೊಂದೇ ಅಗುಳು ತೆಗೆದುಕೊಂಡು ಬಾಯಿಗೆ ಇಟ್ಟುಕೊಳ್ಳಬೇಕು. ಎರಡನೆಯ ದಿನ ಕಿರುಬೆರಳಿನೊಂದಿಗೆ ಇನ್ನೊಂದು ಬೆರಳು ಉಪಯೋಗಿಸಬಹುದು. ಮೂರನೆಯ ದಿನ ಮೂರು ಬೆರಳು, ನಾಲ್ಕನೆಯ ದಿನ ನಾಲ್ಕು ಬೆರಳು ಮತ್ತು ಐದನೆಯ ದಿನ ಇಡಿ ಕೈಯ್ಯನ್ನು ಬಳಸಿ ಊಟ ಮಾಡಬಹುದಾಗಿತ್ತು. ಹನ್ನೆರಡನೆಯ ದಿನ ಹುಡುಗಿಯ ಸೋದರಮಾವ ಆಕೆ ಕುಳಿತಿದ್ದ ಬೇವಿನ ಗುಡಿಸಲನ್ನು ಹಟ್ಟಿಯಾಚೆ ತೆಗೆದುಕೊಂಡು ಹೋಗಿ ಒಂದು ತೆಂಗಿನ ಗಿಡ ಸುತ್ತಿಸಿ ಮನೆಯೊಳಕ್ಕೆ ಕರೆದುಕೊಳ್ಳುತ್ತಿದ್ದರು. ಈ ಪದ್ಧತಿ ಈಗ ಇಲ್ಲ. ಊರು ಕೇರಿ, ಪಟ್ಟಣಗಳ ಜೀವನಕ್ರಮ ಪ್ರಭಾವ ಬೇಡ ನಾಯಕರ ಮೇಲಾಗುತ್ತಿರುವುದರಿಂದ ಈಅವರ ಆಚರಣೆಗಳು ಈ ರೀತಿ ಬದಲಾಗುತ್ತಿರುವುದನ್ನು ಗಮನಿಸಬಹುದು. ಮ್ಯಾಸ ನಾಯಕರ ಜನಾಂಗದಲ್ಲಿ ತುಂಬ ಕಟ್ಟುನಿಟ್ಟಾಗಿ ಆಚರಿಸುವ ವಿಶಿಷ್ಟಪೂರ್ಣ ಆಚರಣೆ ಇದಾಗಿದೆ.

"ಎಂದೇನೆ ಮೈಮರೆತ ಅತಿರಂಬೆ

ಯಾವಾಗ ಮೈನೆರೆತೆ ಅತಿರಂಬೆ – ಕ್ಯಾದಿಗಿ

ಗರಿ ಒಡೆದು ಕಾಡಿದಾಗ – ಸೋಬಾನವೆ

ನಿನ್ನೆಯವರೆಗೂ ಚಿಕ್ಕವಳಾಗಿದ್ದು, ಇಂದು ಹೇಗೆ ಮೈನೆರೆತೆ ಎಂದು ಅಚ್ಚರಿಯ ರೀತಿಯಲ್ಲಿ ಕೇಳುವ ಹಾಗೆ ಹಾಡುವರು.

ಅಣ್ಣನ ಮನಿಮುಂದ ಆಡುತ ಪುಟ್ಟಕ್ಕ

ಋತುವಾಗಿ ಅವರಕ್ಕ ಕಂಡಾಳ – ನಿಜಗುಂಪು

ತಂಗಿ ನೀನು ಪುಟ್ಟ ಸಾಲಿಗಳ ಇಳಿಯಮ್ಮ

ಅಣ್ಣನ ಮನೆಮುಂದೆ ಲಂಗದಾವಣಿ ತೊಟ್ಟು ಆಡುತಿದ್ದ ಅದೇನೆ ನನ್ನಕ್ಕ ನೀನು ಋತುಮತಿಯಾಗಿರುವುದನ್ನು ಗುರುತಿಸಿ ಆಟದ ಗೆಳತಿಯರನ್ನು ಬಿಡಬೇಕು ಎಂದು ಸೂಚಿಸುವಂತಿದೆ.

ನಿನ್ನವಳೇ ಅಕ್ಕ ನಿನ್ನ ದನಿ ಹಿಡಿದು

ಅಣ್ಣ ಹಿಡಿದಿದ್ದ ತನಿ ಹಣ್ಣ – ತಂಗಿ

ನನಗೇನೋ ಆಗಿದೆ ಎಂದು ಭಯಗೊಂಡು ಅಳುತ್ತಾ ಬಂದ ತಂಗಿ ಪುಟ್ಟಕ್ಕನ ಧ್ವನಿಯನ್ನು ಕೇಳಿ ವಿಷಯ ಹೇಳಿ ಸಂತೈಸುತ್ತಾಳೆ. ಅಣ್ಣನೂ ಗುರುತಿಸಿ ಧೈರ್ಯ ಹೇಳಲು ಹಣ್ಣನ್ನು ತಂದುಕೊಡಲು ನಿಲ್ಲುತ್ತಾನೆ.

ಸಲ್ಲದೆನ್ನ ಸೀರೆ ಮೇಲ್ಜನಗೆ ಉಡುವಾಗ

ಲಿಂಬಿ ಹಣ್ಣಿನಂಗ ಹಬ್ಬಿ ನಿನ್ನ ಮೈಬಣ್ಣ

ಮಾವನ ಮನಿಗೆ ಮುತ್ತೈದೆ ಸೊಸೆ ಆಗೋ"[೧]

ಹೀಗೆ ಋತುಮತಿಯಾದ ಹೆಣ್ಣನ್ನು ಕುಳ್ಳಿರಿಸಿ ಅವಳನ್ನು ಕುರಿತು ಗುಣಗಾನ ಮಾಡುವ ಭವಿಷ್ಯದಲ್ಲಿ ಮಾವನ ಮನೆಗೆ ಮುತ್ತೈದೆಯಾಗಿ ಹೋಗುವ, ಬಂಧುಗಳಲ್ಲಿ ಉಡುಗೆ ತೊಡುಗೆ ತರುವ ಮೊದಮೊದಲು ಋತುವಾದ ಹೆಣ್ಣು ಭಯದಿಂದ ಅಳುಕುವ ಸ್ವಭಾವವನ್ನು ಅವಳ ಅಕ್ಕ ಅಣ್ಣ ಮುಂತಾದವರು ಧೈರ್ಯ ಹೇಳುವ, ಆಕೆಯನ್ನು ಅನೇಕ ದೇವತೆಗಳಿಗೆ ಹೋಲಿಸುವ ಆಕೆಯನ್ನು ರಕ್ಷಿಸುವಂತೆ ದೈವೀಶಕ್ತಿಯಲ್ಲಿ ವಿನಂತಿಸುವ ವಿಷಯಗಳ ವರ್ಣನೆಗಳಿಂದ ಋತುಮತಿ ಶಾಸ್ತ್ರದ ಹಾಡುಗಳನ್ನು ಹಾಡುವರು.

೭.೨ ಸೋಬಾನೆ ಮತ್ತು ಮದುವೆ ಹಾಡುಗಳು

"ಮದುವೆ ಸಂದರ್ಭದಲ್ಲಿ ಮ್ಯಾಸನಾಯಕರು ಕನ್ನಡ ಹಾಗೂ ಮ್ಯಾಸ(ತೆಲುಗು) ಭಾಷೆಯಲ್ಲಿ ಸೋಬಾನೆ ಪದಗಳನ್ನು ಹಾಡುವುದುಂಟು. 'ಸುಖ', 'ಸೋಬಾನ' ಎಂಬ ಶಬ್ದಗಳು, ಮಾತುಗಳು

ಸಹಜವಾಗಿ ರೂಢಿಯಲ್ಲಿವೆ. 'ಸೋಬಾನೆ' ಎಂದರೆ ಮಂಗಳ ಹಾಗೂ ಶುದ್ಧಕಾರ್ಯ ಎಂದು ಅರ್ಥ. ಸೋಬಾನ ಎಂಬ ಪದವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸಲ್ಪಡುವುದುಂಟು. ಉದಾಹರಣೆಗೆ ಹೆಣ್ಣು ಋತುಮತಿ ಆದಾಗ 'ಅವಳು ಸೋಬನಾಗ್ಯವಳ' ಎಂದು ಅಥವಾ 'ಅವಳಿಗೆ ಸೋಬನಾಯ್ತು' ಎಂದು ಹೇಳುತ್ತಾರೆ. ಮತ್ತೊಂದು ಸಂದರ್ಭದಲ್ಲಿ 'ಸೋಬನ' ಅಂದರೆ 'ಸೋಬನ ಪ್ರಸ್ತ' ಎಂಬ ಮಾತೂ ಬಳಕೆಯಲ್ಲಿದೆ. ಒಟ್ಟಿನಲ್ಲಿ ಸೋಬನ ಎಂದರೆ ಶುಭ ಕಾರ್ಯ. ಅಂಥ ಸಂದರ್ಭಗಳಲ್ಲಿ ಹಾಡುವ ಹಾಡುಗಳಿಗೆ ಸೋಬಾನೆ ಪದಗಳು"೨ ಎಂದು ಕರೆಯುವುದುಂಟು.

ಮ್ಯಾಸನಾಯಕರಲ್ಲಿಯೂ ಸೋಬಾನೆ ಪದಗಳನ್ನು ಮದುವೆಯ ಅನೇಕ ಘಟ್ಟಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಹಾಡುತ್ತಾರೆ. ಮದುವೆಯು ಅನೇಕ ವಿಧಿವಿಧಾನಗಳಿಂದ ಕೂಡಿದ್ದ ಇವುಗಳನ್ನು ತಪ್ಪದೇ ಪಾಲಿಸುತ್ತಾರೆ. ಜನಪದಗಳಲ್ಲಿ ಈ ವಿಧಾನಗಳಿಂದ ಕೂಡಿದ್ದು ಇವುಗಳನ್ನು ತಪ್ಪದೇ ಪಾಲಿಸುತ್ತಾರೆ. ಜನಪದದಲ್ಲಿ ಈ ವಿಧಾನಗಳೆಲ್ಲವೂ ಹಾಡಿನ ರೂಪದಲ್ಲಿ ರೂಢಿಯಲ್ಲಿರುತ್ತವೆ. ಒಂದೊಂದು ಆಚರಣೆಗೂ ಒಂದೊಂದು ಹಾಡುಗಳಿವೆ. ಹಾಡಿನ ದಾಟಿಗಳು ಭಿನ್ನವಾಗಿ ಇರುತ್ತವೆ. ಮಾಡುವ ಎಲ್ಲಾ ಕಾರ್ಯಗಳು ಶಾಸ್ತ್ರೋಕ್ತವಾಗಿದ್ದರೆ ಗಂಡು-ಹೆಣ್ಣುಗಳಿಗೆ ಒಳ್ಳೆಯದಾಗುತ್ತದೆ. ಎಂಬ ನಂಬಿಕೆಯೂ ಅವರಲ್ಲಿರುತ್ತದೆ.

ಮದುವೆ ಕಾರ್ಯ ಒಂದು ಸಂಕೀರ್ಣ ಆಚರಣೆ. ಮದುವೆಯಲ್ಲಿ ನಡೆಯುವ ಯಾವುದೇ ಆಚರಣೆಯನ್ನು ಶಾಸ್ತ್ರ ಎಂದು ಕರೆಯುತ್ತಾರೆ. ನೀರು ತರುವುದು, ಭತ್ತ ಕುಟ್ಟುವುದು, ಅಡುಗೆ ಮಾಡುವುದು, ಬಳೆ ತೊಡಿಸುವುದು, ಅರಿಶಿನ ಹಚ್ಚುವುದು ಸ್ನಾನ ಮಾಡಿಸುವುದು ಇವೆಲ್ಲವೂ ಕ್ರಮವಾಗಿ ನಡೆಯುವ ಶಾಸ್ತ್ರಗಳಾಗಿವೆ. ಎಲ್ಲಾ ಆಚರಣೆಗಳಿಗೆ ಸಂಬಂಧಿಸಿದ ಪದಗಳಿವೆ. ಈ ಸೋಬಾನ ಪದಗಳು ಮದುವೆಯ ಆಚರಣೆಗಳು ಬದಲಾಗದಂತೆ ನೋಡಿಕೊಳ್ಳುತ್ತವೆ. ಅಷ್ಟೇ ಅಲ್ಲದೆ ಮದುಮಕ್ಕಳ ಮುಂದಿನ ಕೌಟುಂಬಿಕ ಬದುಕಿಗೆ ಸಹಾಯ ಮಾಡುವಂತಹ ಅಂಶಗಳನ್ನು ಒಳಗೊಂಡಿರುತ್ತವೆ.

ಸ್ತ್ರೀಯರೆ ಹೆಚ್ಚಾಗಿ ಈ ಪದಗಳನ್ನು ಹಾಡುತ್ತಾರೆ. ಕೆಲವು ಕಡೆ ಗಂಡಸರು ಹಾಡುತ್ತಿರುವುದು ತಿಳಿದುಬರುತ್ತದೆ. ಈ ಪದಗಳನ್ನು ಯಾರು ಕಟ್ಟಿದರು, ಯಾವಾಗ ರಚಿಸಿದರು ಇದೆಲ್ಲ ನಿಗೂಢವಾಗಿವೆ. ಇವರು ತಮ್ಮ ಆಡುಮಾತಿನಲ್ಲಿಯೇ ಹಾಡುಗಳನ್ನು ಕಟ್ಟಿ ಹಾಡಿ ಅವುಗಳನ್ನು ಪ್ರಸಾರಗೊಳಿಸಿದ್ದಾರೆ. ಅವು ನಾಡಿನ ತುಂಬೆಲ್ಲ ಪಸರಿಸಿ ಆಯಾ ಸ್ಥಳದ ಜನರ, ಆಚರಣೆಗಳ ವ್ಯಾಖ್ಯಾನಗಳಾಗಿ ರೂಪುಗೊಂಡಿವೆ. ಸೋಬಾನೆ ಪದಗಳನ್ನು ಮುಮ್ಮೇಳ ಮತ್ತು ಹಿಮ್ಮೇಳಗಳಾಗಿ ಹಾಡುತ್ತಾರೆ. ಸಾಮಾನ್ಯವಾಗಿ ಇಬ್ಬರು ಮುಮ್ಮೇಳದಲ್ಲಿ, ಮತ್ತಿಬ್ಬರು ಹಿಮ್ಮೇಳಗಳಲ್ಲಿ ಹಾಡುವರು. ಮ್ಯಾಸನಾಯಕರು, ಮದುವೆ ಸಂದರ್ಭದಲ್ಲಿ ಹಾಡುವ ಹಾಡುಗಳಲ್ಲಿ ಕೆಲವು ಕನ್ನಡ ಭಾಷೆಯಲ್ಲಿದ್ದು, ಮತ್ತೆ ಕೆಲವು ತೆಲುಗು ಭಾಷೆಯಲ್ಲಿವೆ. ಕನ್ನಡ ಹಾಡುಗಳಲ್ಲಿ ತೆಲುಗು ಭಾಷೆಯ ಕೆಲವು ವ್ಯವಹಾರಿಕ ಶಬ್ದಗಳನ್ನು ತಾವು ಹಾಡುವ ಹಾಡುಗಳಲ್ಲಿ ಬಳಸುತ್ತಾರೆ.

ವೀಳ್ಯ ಶಾಸ್ತ್ರದ ಹಾಡುಗಳು

ಹಟ್ಟಿಯ ಹಿರಿಯರು ದೊರೆಗಳು, ಯಜಮಾನರು, ಕಿಲಾರಿಗಳು ಮತ್ತು ಮ್ಯಾಸ ಮಂಡಲದ ಮುಖ್ಯಸ್ಥರು ಸೇರಿ ವೀಳಯ ಶಾಸ್ತ್ರವನ್ನು ನಡೆಸುತ್ತಾರೆ. ಈ ಸಂದರ್ಭದಲ್ಲಿ ಮಹಿಳೆಯರು ಒಂದು ಬದಿಯಲ್ಲಿ ಕುಳಿತು ಹಾಡು ಪ್ರಾರಂಭಿಸುವರು.

"ಮುಂಚಿನ ಶಾಸ್ತುರಕೆ ಇನ್ನೇನು ಬರಬೇಕು

ಎತ್ತುಗಳ ಹಟ್ಟಿಯಿಂದ ಮೀಸಲಿನ – ಆ ಗಡಿಗೆ

ಮೊದಲ ಶಾಸ್ತುರಕೆ ಬರಬೇಕು.

ಎಂದು ಈ ಸಮಯಕ್ಕೆ ಎತ್ತುಗಳ ಹಟ್ಟಿಯಿಂದ ಮೀಸಲು ಬರಬೇಕು. ಇಲ್ಲವೆ ಮನೆಯವರಾದರೂ ಹೋಗಿ ತರಬೇಕು. ಎಂಬುದನ್ನು ಜ್ಞಾಪಿಸುವ ರೀತಿಯಲ್ಲಿ ಹಾಡು ಮುಂದುವರಿಯುತ್ತದೆ.

ಹಿರಿಯರ ಕರಸೀರಿ ದೊರೆಗಳ ಕೇಳೀರಿ

ನೀವು ನೋಡಿರಿ ಬೆಡಗನ್ನ ಮನೆ ಮಠ

ಗಿಲಗಿಲನೆ ಬರುವೋ ಗಿಳಿಹಿಂಡ

ಹಿರಿಯರ, ದೊರೆಗಳ ಸಮ್ಮುಖದಲ್ಲಿ ಮಠದ ಬೆಡಗನ್ನು ನೋಡಿದ್ದೀರಾ, ಗಿಣಿ ಹಿಂಡಿನಂತೆ, ಸಂತೋಷವಾಗಿ ಕಾಯ್ದಿದ್ದಾರೆ. ವೀಳ್ಯ ಒಡೆಯಿರಿ ಎನ್ನುತ್ತಾ ಹಾಡುವರು.

ಮದ್ದಿಂಗಪ್ಪನ ಶಾಸ್ತ್ರದ ಹಾಡು

ಮದ್ದಿಂಗನನ್ನಾಗಿ ಮಾಡುವ ಕಾರ್ಯ ಪ್ರಾರಂಭವಾಗುತ್ತದೆ. ಆಗ ಇಲ್ಲಿ ಸೇರಿದ ಮುತ್ತೈದೆಯರು ಕ್ರಿಯೆಯಲ್ಲಿ ತೊಡಗಿದಾಗ,

ಹಸೆಯ ಬರೆಯೋರು ಹಸನಾಗಿ ಬರೀರಮ್ಮ

ಹೊಸಬೆರಳ ಕಡಗ ನಿಮ ಕೈಲಿ – ಆ ಬೆರಳು

ಹಸುನಾಗಿ ಬರಲಿ ಮುಡಿಮ್ಯಾಲ

ಎಂದು ಮದ್ದಿಂಗನಿಗೆ ಅರಿಶಿನ ಹಚ್ಚುವಾಗ ಹೇಗೆ ಹಚ್ಚಬೇಕು ಅದು ಹೇಗೆ ರೂಪು ತಾಳಬೇಕು ಎಂಬುದನ್ನು ವಿವರವಾಗಿ ಒಂದೊಂದು ನುಡಿಯಲ್ಲಿ ಹೇಳುತ್ತಾರೆ.

ಚೋಳದ ಹಸೆಯ ಕಡುಜಾಣೆ ಬರೆದಾಳೆ

ಮಲ್ಲೀಗಿ ಹೂವ ಕೊರೆದಾಂಗ – ಹಸೆಯ

ಬಲ್ಲಮ್ಮ ಜಾಣೆ ಬರೆದಾಳೆ

ಮಲ್ಲಿಗೆ ಹೂವಿನ ಆಕಾರದಂತೆ, ಹಸೆ ಬರೆಯಬೇಕೆಂದು ಸೂಚಿಸುತ್ತಾಳೆ. ಅದಕ್ಕನುಗುಣವಾಗಿ ಜೋಳದ ಹಸೆ ಪ್ರಾರಂಭವಾಗುತ್ತದೆ.

ಹಸೆಗೆದ್ದು ಬರುವಾಗ ಓಬಯ್ಯನ ನೆನೆಸಿಕೊಂಡು

ಎತ್ತೈಗಳ ಪಾದ ಗತಿಯೆಂದು – ದೊರೆಗಳ

ಶಿಶುವೆಂದು ಬಂಡೇರೋ ಮಣಿಮ್ಯಾಲ"[೩]

ಹಸೆಮಣೆ ಮೇಲೆ ಬರುವ ಮದ್ಲಿಂಗನಿಗೆ ಕುಲದೈವ ಓಬಯ್ಯನನ್ನು ಸ್ಮರಿಸುತ್ತಾ ಎತ್ತುಗಳ ಪಾದ ಮುಟ್ಟಿ ಕಾಪಾಡು ಎಂದು ವಿನಂತಿಸಿಕೊಳ್ಳಲು ನೆನಪಿಸುತ್ತಾರೆ. ಈ ಕ್ರಿಯೆಯಲ್ಲಿ ಮೊದಲು ಹಸೆ ಬರೆದು ನಂತರ ಎರಡು ಮಣೆಗಳನ್ನು ಹಾಕಿ ಪೂಜಿಸಿ ಮದ್ಲಿಂಗನನ್ನು ಕುಳ್ಳಿರಿಸಿ ಪೂಜಿಸುತ್ತಾರೆ. ಆರತಿ ಬೆಳಗುತ್ತಾರೆ. ನಂತರ ಹರಳೆಣ್ಣೆಯಲ್ಲಿ ಅರಿಶಿಣ ಬೆರೆಸಿಕೊಂಡು ಕೆನ್ನೆ, ತೋಳು ಕೈಕಾಲುಗಳಿಗೆ ಹಚ್ಚುತ್ತಾರೆ. ಹೀಗೆ ಈ ಸಂದರ್ಭಗಳನ್ನು ಹಾಡುಗಳಲ್ಲಿ ವರ್ಣಿಸುತ್ತಾ ಹೇಳುವರು.

ಬೀಗರನ್ನು ಎದುರುಗೊಳ್ಳುವ ಹಾಡು

ಹಟ್ಟಿಗೆ ಆಗಮಿಸಿದ ಬೀಗರನ್ನು ಸಂಭ್ರಮದಿಂದ ಎದುರುಗೊಂಡು ಮನೆಗೆ ಕರೆತರುತ್ತಾರೆ. ಇಲ್ಲಿ ಹಾಸ್ಯಮಯ ಸನ್ನಿವೇಶದ ಪ್ರಸಂಗಗಳೂ, ಗೌರವ ವಿಶೇಷ, ತೆಗಳಿಕೆ ಹೊಗಳಿಕೆಯ ಹಾಡುಗಳನ್ನು ಹಾಡುತ್ತಾ ಆಮಂತ್ರಿಸುತ್ತಾರೆ.

"ಬಾವಿ ನೀರಿಗೆ ಆರಚ್ಚು ಬೆಲ್ಲ ಹಾಕಿ

ಮ್ಯಾಲ ಯಾಲಕ್ಕಿ ಹಾಕಿ – ತಂದೀನಿ

ಬೆಲ್ಲದಾರೀನ ರುಚಿನೋಡ

ಎಂದು ಬೀಗರಿಗೆ ಆಹ್ವಾನ ನೀಡುತ್ತಾರೆ. ಬೀಗರ ಬಾಯಲ್ಲಿ ನೀರೊರುವ ಹಾಗೆ ಹಾಡುತ್ತಾರೆ. ಬೀಗರ ತಂಡ ಇವರ ಬಾಯಿ ಮಾತಿನ ಔತಣವನ್ನು ತಿರಸ್ಕರಿಸಿ ಪ್ರತಿಯಾಗಿ ಅವರೂ ತಾವೇ ಶ್ರೇಷ್ಠರು, ನೀವು, ನಿಮ್ಮ ಬಣ್ಣ ನಿಮ್ಮ ಕೂಸು ಕೊಟ್ಟ ಮೇಲೆ ತಿಳಿಯುತ್ತದೆಂದು ಹಾಡುವರು.

ಮಗಳ ಕೊಟ್ಟಮ್ಯಾಲ ತಿಳಿದೀತ ನಿಮ್ಮ ಗುಣ

ದೊಡ್ಡಸ್ಥನದವರ ಮಗಳಂತ – ಬಡುಮರ‍್ಯಾಕ

ಬಣ್ಣ ಬಣ್ಣದ ಮಾತು ಈಗ್ಯಾಕೆ

ಎಂದು ಅವರು ಹೇಳುವುದಕ್ಕೆ ಪ್ರತಿಯಾಗಿ ಇವರೂ ಹೇಳುತ್ತಾರೆ.

ಧಾರೆ ಶಾಸ್ತ್ರದ ಹಾಡು

ಮದ್ಲಿಂಗನಾದ ಗಂಡು, ಉಡಿಗೆ-ತೊಡಿಗೆಗಳನ್ನು ಧರಿಸಿ, ಕೈಯ್ಯಲ್ಲಿ ಸಣ್ಣ ಚಾಕು ಹಿಡಿದು ಅದಕ್ಕೆ ಲಿಂಬೇಹಣ್ಣು ಸಿಕ್ಕಿಸಿಕೊಂಡು ಮೆರವಣಿಗೆ ಮೂಲಕ ಬಂದ ಮೇಲೆ ಅನೇಕ ಶಾಸ್ತ್ರಗಳು ನಡೆಯುತ್ತವೆ. ಅನಂತರ ಧಾರೆ ಶಾಸ್ತ್ರ ಪ್ರಾರಂಭವಾಗುತ್ತದೆ.

"ಧಾರೆ ಹೊತ್ತಿಗೆ ಯಾರ್ಯಾರು ಬರಬೇಕು

ಧಾರದ ಕೊರಳ ಹಿರಿಯಣ್ಣ – ಸೋದರಮಾವ

ಧಾರೆ ಹೊತ್ತಿಗೆ ಬರಬೇಕು

ಬರಬೇಕಾದ ಪ್ರಮುಖ ಬಂಧುಗಳು ಯಾರು ಯಾರು ಎಂಬುದನ್ನು ಸೂಚಿಸುತ್ತಾ ಬರಬಹುದಾದ ಕೆಲವ್ಯಕ್ತಿಗಳನ್ನು ಗುರುತಿಸುತ್ತಾರೆ.

ಎಳ್ಳು ಜೀರಿಗೆ ಕೈತುಂಬ ಹಿಡಿದುಕೊಂಡು

ತೆಗೆದಿಟ್ಟಾಗ ಪುರುಷನ ಮಂಡೆಮ್ಯಾಲ – ಹೆಣ್ಣನ್ನು

ಇಷ್ಟೊಂದು ಭಾಗ್ಯ ಬರಲೆಂದು

ಇಲ್ಲಿ ಅವಶ್ಯಕವಾಗಿರುವ ಎಳ್ಳು ಜೀರಿಗೆ ತಟ್ಟೆಯನ್ನು ಹೆಣ್ಣಮ್ಮ ತೆಗೆದುಕೊಂಡು ಅಲ್ಲಿಡುತ್ತಾ ಭಾಗ್ಯವಂತರಾಗಿದೆಂದು ಹರಸುತ್ತಾಳೆ.

ಅಂದಲ ಹಟ್ಟೀಲಿ ನಿಂದಿರೊನಿದಾರೆ

ನಾಗೆಳ ಜಡೆ ತಲೆ ತುಂಬ – ಈಶ್ವರನ

ತಾಯೆ ಬಂದು ಧಾರೆ ಎರದಾಳೆ

ಮದುವಣಿಗನನ್ನು ಈಶ್ವರನಿಗೆ ಹೋಲಿಸುತ್ತಾ ಅವನ ತಾಯಿಯನ್ನು ಈಶ್ವರನ ತಾಯಿಗೆ ಹೋಲಿಸುತ್ತಾ ಆಕೆ ಬಂದು ಮೊದಲಿಗೆ ಧಾರೆಯ ಅಕ್ಷತೆ ಹಾಕುವುದನ್ನು ಅತ್ಯಂತ ಭಾವುಕಳಾಗಿ ತನ್ನ ಮಗನ ಸಿರಿ ನೋಡುವುದನ್ನು ಹಾಕಲಾಗುತ್ತದೆ. ಮುಹೂರ್ತದ ಕೊನೆಯಲ್ಲಿ

ಚಪ್ಪ ಚಪ್ಪರ ಸಾಕ್ಷಿ ಚಪ್ಪರದ ಕೊನಿ ಸಾಕ್ಷಿ

ಚಪ್ಪರದಲ್ಲಿರೊ ಜನಸಾಕ್ಷಿ – ಮದ್ಲಿಂಗ

ನೀ ಸಾಕ್ಷಿ ನಮ್ಮ ಮಗಳೀಗೆ

ಚಪ್ಪರ ಹಾಗೂ ಚಪ್ಪರದ ಕೊನೆ, ಚಪ್ಪರದಲ್ಲಿನ ಜನ ಇವರಲ್ಲಿ ಸಾಕ್ಷಿಯಾಗಿ ನಿಂತು ತಾಳಿ ಕಟ್ಟಿದ್ದೀಯಾ ಎನ್ನುವುದರೊಂದಿಗೆ ತಾಳಿ ಶಾಸ್ತ್ರದ ಹಾಡು ಮುಗಿಯುತ್ತದೆ. ಮದುವೆಯ ಕೊನೆಯಲ್ಲಿ, ಮಗಳನ್ನು ಒಪ್ಪಿಸುವ ಪ್ರಸಂಗ ಇಲ್ಲಿ ತಮ್ಮ ಮಗಳನ್ನು ಹೆತ್ತವರು ತಾವು ಹೇಗೆ ಸಾಕಿದ್ದೇವೆಂಬುದನ್ನು ನೆನಪಿಸಿಕೊಳ್ಳುತ್ತಾರೆ. ಅವಳ ಯೋಗಕ್ಷೇಮ ಚಿಂತಿಸುತ್ತಾ ಕಣ್ಣೀರಿಡುತ್ತಾರೆ. ಈ ಪ್ರಸಂಗದಲ್ಲಿನ ಹಾಡುಗಳು ಮನಕರಗುವ, ಕಳ್ಳು ಕಿತ್ತು ತಿನ್ನುವ ದುಃಖತಪ್ತ ವಾತಾವರಣ ಸೃಷ್ಟಿಸುವ ಹಾಡುಗಳಾಗಿವೆ. ಒಂದು ಮನೆಯಲ್ಲಿ ಹುಟ್ಟಿ ಬೆಳೆದ ಹೆಣ್ಣು ಮತ್ತೊಂದು ಮನೆಗೆ (ಊರಿಗೆ) ಹೋಗಲೇ ಬೇಕಾದ ಸಂದರ್ಭದಲ್ಲಿ ಹೀಗೆ ಹಾಡುತ್ತಾರೆ.

ಅತ್ತಲಾಗೆ ಅವರಾದರು ಇತ್ತಲಾಗೆ ನಾವಾದೊ

ಸುತ್ತೇಳು ಗುಡ್ಡ ಮರೆಯಾದೊ – ಕಂದಮ್ಮ

ಇಲ್ಲಿಗೆ ನನ ಕಂದ ಎರವಾದೆ

ಎಂದು ದುಃಖಿಸುತ್ತಾ ತನ್ನ ಮಗಳ ಮತ್ತು ತಮ್ಮ ಸಂಬಂಧ ಇಂದಿಗೆ ಕಡಿದು ಹೋಯಿತೆಂದು ಅದನ್ನು ತಡೆದುಕೊಳ್ಳಲಾರದೆ ಹೇಳುತ್ತಾ

ಬಾಳೆಯ ಹಣ್ಣ ಒಗೆದು ದಾನ ಮಾಡಿದ್ದಂಗೆ

ಬಾಲೆ ನಿಮಕೈಲಿ ಕೊಡತಿದೀನಿ – ಬೀಗರೆ

ನಿಂಬಾಲೆ ಕಂಡಂಗ ಕಾಣೀರಿ

ಎಂದು ಮೃದು ಸ್ವಭಾವದ ತಮ್ಮ ಮಗಳನ್ನು ನಿಮಗೆ ಒಪ್ಪಿಸುತ್ತಿದ್ದೇವೆ. ನಿಮ್ಮ ಮಗಳನ್ನು ಕಾಣುವ ಹಾಗೆ ಕಾಣಿರಿ ಎಂದು ಬೇಡಿಕೊಳ್ಳುತ್ತಾಳೆ.

ಹಾಲೀನ ಗಡುಗೆ ಅವರವ್ವ ಹಿಡಿಕಂಡು

ಇನ್ನೇನು ಮಗಳೆ ಎರವಾದೆ – ಆ ಹಟ್ಟಿ

ದೊರೆಗಳ ಮನಿ ಸೊಸೆಯಾದೆ

ಎಂದು ಹಂಬಲಿಸುತ್ತಾ ಕೊನೆ ಕೊನೆಗೆ ತಮ್ಮ ಮಗಳನ್ನು ಒಪ್ಪಿಸುತ್ತಾ ನೋವನ್ನು ನುಂಗಿಕೊಂಡು

ಮಲ್ಲಿಗೆ ಹೂವಿನಂಗ ಮಗಳ ಸಾಕೀವಯ್ಯ

ನಲ್ಲೆ ನಿಮಕೈಲಿ ಕೊಡುತೀವಿ – ಬೀಗರೆ

ನಿಮ್ಮ ಮಗಳ ಕಂಡಂಗ ಸಲಹಿರೋ

ಎಂದು ಪರಿಪರಿಯಾಗಿ ವಿನಂತಿಸಿಕೊಳ್ಳುತ್ತಾಳೆ. ಮ್ಯಾಸನಾಯಕ ಜನಾಂಗವು ಸಾಂದರ್ಭಿಕವಾಗಿ ಹೆಣ್ಣಿನವರು ಮತ್ತು ಗಂಡಿನವರು ತಮ್ಮದೇ ಧಾಟಿಯಲ್ಲಿ ಹಾಡುಗಳನ್ನು ಹಾಡುತ್ತಾರೆ. ಈ ಮೂಲಕ ಜನಪದ ಸಾಹಿತ್ಯ ಬಳಸಿಕೊಂಡಿದ್ದಾರೆ.

ಮದುವೆಯ ದಿನ ಗೊತ್ತಾದ ಮೇಲೆ ಒಂದು ದಿನ ಒಳ್ಳೆಯ ಮುಹೂರ್ತದಲ್ಲಿ ಮದುವೆ ಚಪ್ಪರವನ್ನು ಹಾಕುತ್ತಾರೆ. ಅಂದಿನಿಂದ ಮಹಿಳೆಯರು ಒಂದೊಂದು ಶಾಸ್ತ್ರಗಳ ಆಚರಣೆಯಲ್ಲಿ ತೊಡಗುತ್ತಾರೆ. ಪ್ರಾರಂಭದಲ್ಲಿ ಗಂಗೆಯ ಶಾಸ್ತ್ರ ನಡೆಯುತ್ತದೆ.

ಹಳ್ಳಕೊಳ್ಳವ ತಳ್ಳಿಕೊಂಡು ಹರಿಯೋಳೆ

ತೆಳ್ಳನೆ ಮಕದ ಸಿರಿನೀರೆ – ಗಂಗಮ್ಮ

ಬಾರಮ್ಮ ನಮ್ಮ ಅರಮನೀಗೆ

ಎಂದು ಗಂಗೆಯನ್ನು ಆಮಂತ್ರಿಸುತ್ತಾ ಅವಳ ಆಗಮನದಿಂದ ಮನ, ಮನೆ ಹಟ್ಟಿಯೆಲ್ಲ ಶುಭ್ರವಾಗುತ್ತದೆಂಬ ನಂಬಿಕೆಯಿಂದ ಪೂಜಿಸುತ್ತಾರೆ. ಇದು ಹಟ್ಟಿಯ ಬಳಿ ಇದ್ದ ಹಳ್ಳದಲ್ಲಿಯೂ, ಹೊಳೆಯಲ್ಲಿಯೂ, ಕೆರೆಯಲ್ಲಿಯೂ ನಡೆಯುತ್ತದೆ. ಕಳಸ ಸಮೇತವಾಗಿ ಹೋಗುತ್ತಾರೆ. ಒಬ್ಬ ಮುತ್ತೈದೆ ಗಂಗೆಯನ್ನು ಪೂಜಿಸುತ್ತಾರೆ. ನಂತರ ಎರಡು ಗಡಿಗೆ ಅಥವಾ ಕೊಡಗಳಲ್ಲಿ ನೀರು ತುಂಬಿಕೊಂಡು ಮದುವೆಯ ಮನೆಗೆ ಬರುತ್ತಾರೆ.

ಕೆಸರೊಳಗಂಗೆ ಕೆಸರೊಳಗೇನ ಮಾಡುತ್ತಿದ್ದಿ

ಕೆಸುರಲ್ಲಿ ಬಟವ ತಿರುಗೀರೆ – ಲಿಂಗಯ್ಯನಿಗೆ

ಎಡೆ ಮಾಡುತ್ತಿದ್ದೆ ತಡವಾದೆ"[೪]

ಎಂದು ಗಂಗೆಯನ್ನು ಕೇಳುತ್ತಾ ಗಂಗೆ ಅವರಿಗೆ ಉತ್ತರವನ್ನು ಕೊಡುತ್ತಾಳೆ.

೭.೩ ದೇವರ ಹಾಡುಗಳು

ಮನುಷ್ಯನು ಮಾತನ್ನು ರೂಢಿಸಿಕೊಂಡಾಗಲೇ ಆ ಮಾತಿನೊಂದಿಗೆ ಸಾಹಿತ್ಯವೂ ಜನ್ಮ ತಾಳಿತು. ನಿತ್ಯ ಜೀವನದ ವ್ಯವಹಾರಕ್ಕಾಗಿ ಬಳಸುವ ಭಾಷೆ ಕೇವಲ ಮಾತಾಗಿ ಉಳಿಯಿತು. ನಿತ್ಯ ಜೀವನದ ಅನುಭವಗಳನ್ನು ಮೀರಿದ ಸಂಗತಿಗಳನ್ನು ಮತ್ತು ಅಲೌಖಿಕ ಆಧ್ಯಾತ್ಮಿಕ ಅನುಭವಗಳನ್ನು ವ್ಯಕ್ತಪಡಿಸುವಾಗ ಮಾಮೂಲಿಯಾಗಿದ್ದ ಮಾತು ಸಾಹಿತ್ಯದ ಮಟ್ಟಕ್ಕೇರಿತು. ಮನುಷ್ಯನ ಅಂತರಂಗ ಜೀವನಕ್ಕೆ ಸಂಬಂಧಿಸಿದ ಸಾಹಿತ್ಯವು ಅವನು ಬೆಳೆದಂತೆಲ್ಲಾ ವಿಸ್ತೃತಗೊಳ್ಳುತ್ತಾ ಹೋಯಿತು. ಅನುಭವಗಳ ಪ್ರಮಾಣ ಹೆಚ್ಚಾದಂತೆ ಸಾಹಿತ್ಯದ ವ್ಯಾಪ್ತಿಯು ಹೆಚ್ಚಾಯಿತು. ಹೀಗೆ ಆರಂಭ ಕಾಲದಿಂದಲೂ ಒಂದು ಸಮುದಾಯವು ಬಾಯಿಂದ ಬಾಯಿಗೆ ತೋಂಡಿ ಸಂಪ್ರದಾಯದ ಮೂಲಕ ಬಳಸಿಕೊಂಡು ಬಂದಿರುವ ಸಾಹಿತ್ಯವನ್ನು ಜನಗಳ ಸಾಹಿತ್ಯವೆಂದು ಕರೆಯಲಾಗುತ್ತದೆ. ಈ ಜನಪದ ಸಾಹಿತ್ಯವು ಆಯಾ ಜನಸಮುದಾಯಗಳ ಸಂಸ್ಕೃತಿಯ ಪ್ರತಿಬಿಂಬವಾಗಿರುತ್ತದೆ. ಜನಸಮುದಾಯಗಳು ಪ್ರಯತ್ನಪೂರ್ವಕವಾಗಿ ನಾಗರೀಕತೆಯನ್ನು ಬೆಳೆಸಿಕೊಳ್ಳುತ್ತಾ ಹೋದಂತೆ ಗ್ರಾಂಥಿಕ ಭಾಷೆಯಲ್ಲಿ ಪ್ರೌಢ ಸಾಹಿತ್ಯ ನಿರ್ಮಾಣಗೊಂಡಿತು. ಆದರೂ ಈ ಪ್ರೌಢ ಗ್ರಾಂಥಿಕ ಸಾಹಿತ್ಯಕ್ಕೆ ಪರಂಪರೆಯಿಂದ ಬಂದಿರುವ ಜನಪದ ಸಾಹಿತ್ಯವು ಮೂಲಬೇರು ಎಂಬುದು ನಿರ್ವಿವಾದವಾದ ವಿಚಾರವಾಗಿದೆ.

ಬುಡಕಟ್ಟುಗಳು ನಿಸರ್ಗ ಶಕ್ತಿಯಲ್ಲಿಟ್ಟ ಅಪಾರ ನಂಬಿಕೆಯಿಂದ ಅವುಗಳ ಆರಾಧನೆಗೆ ಮೊದಲು ಮಾಡಿದವು. ದುಷ್ಟಶಕ್ತಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಮಾರಿ ಮಸಣಿ, ದೆವ್ವ, ಭೂತಗಳನ್ನು ಕಲ್ಪಿಸಿಕೊಳ್ಳಲಾಯಿತು. ಈ ಹಿನ್ನೆಲೆಯಲ್ಲಿ ದೈವಾರಾಧನೆ ಬದುಕಿನ ಒಂದು ಅವಿಭಾಜ್ಯ ಅಂಗವಾಗಿ ಬೆಳೆಯಿತು. ದೇವರನ್ನು ಒಲಿಸಿಕೊಳ್ಳಲು ದೇವರ ಪ್ರಾರ್ಥನೆ, ವರ್ಣನೆಗಳ ಸಾಹಿತ್ಯ ರಚನೆಗೊಂಡಿತು. ದೈವಾರಾಧನೆಗೆ ಸಂಬಂಧಿಸಿದ ಧಾರ್ಮಿಕ ಸಂಪ್ರದಾಯಗಳು ಸಾಮಾಜಿಕ

ಪರಂಪರೆಯಲ್ಲಿ ಭದ್ರವಾಗಿ ನೆಲೆಯೂರಿದವು. ತಾವು ನಂಬಿದ ದೇವತೆಗಳನ್ನು ಕುರಿತು ಕಟ್ಟಿದ ಹಾಡು, ಕಥೆಗಳು ಅದ್ಭುತ ಕಲ್ಪನಾ ವೈಖರಿಯಿಂದ ಜನಪದ ಸಾಹಿತ್ಯವನ್ನು ಸಮೃದ್ಧಗೊಳಿಸಿದವು.

ಮ್ಯಾಸನಾಯಕ ಸಮುದಾಯದಲ್ಲಿಯೂ ದೈವಾರಾಧನೆ ಕುರಿತಾದ ಬಹಳಷ್ಟು ಹಾಡುಗಳನ್ನು ಕಾಣುತ್ತೇವೆ. ಇವರಲ್ಲಿ ವಿಶಿಷ್ಟ ಬಗೆಯ (ಹನ್ನೆರಡು ಪೆಟ್ಟಿಗೆ) ದೇವರುಗಳಿವೆ. ಇಲ್ಲಿ ಮುಖ್ಯವಾಗಿ ಮಂದ್ಲಾರು ಮಲ್ಲಿನಾಯಕರು ಎಂಬ ಎರಡು ಪಂಗಡಗಳ ಅನೇಕ ಬೆಡಗುಗಳ ಚಂದ್ರ ಮತ್ತು ಸೂರ್ಯನಾರಾಧನೆಗೆ ಸಂಬಂಧಿಸಿದಂತೆ ವಿಂಗಡಿಸಿಕೊಂಡಿದ್ದಾರೆ. ದೇವತೆಗಳ ಅನುಗ್ರಹ ಪಡೆಯಲು ಸಂಬಂಧಿಸಿದ ಹಾಡುಗಳನ್ನು ಹೇರಳವಾಗಿ ಕಟ್ಟಿದ್ದಾರೆ.

ದೈವಾರಾಧನೆ ಕುರಿತಾದ ಹಾಡುಗಳಲ್ಲಿ ಕಾವ್ಯಾಂಶ ಅಷ್ಟಾಗಿ ಕಾಣುವುದಿಲ್ಲ. ದೇವನ ವರ್ಣನೆಯೇ ಪ್ರಮುಖವಾಗಿರುತ್ತದೆ. ಅಲ್ಲದೇ ಪುನರುಕ್ತಿಯೂ ಸರ್ವೇಸಾಮಾನ್ಯವಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಹಾಡುಗಳು ಬಹುಮಟ್ಟಿಗೆ ಸಾಮಾನ್ಯವಾಗಿ ಒಂದೇ ತೆರನಾಗಿರುತ್ತವೆ. ಸಾಂದರ್ಭಿಕವಾಗಿ ಹೆಸರುಗಳನ್ನು ಪ್ರದೇಶ ಸ್ಥಳಗಳನ್ನು ಬದಲಿಸಿ ಹಾಡುವ ಹಾಡುಗಳು ರೂಢಿಯಲ್ಲಿವೆ. ದೇವರ ಬಗೆಗಿನ ಆತ್ಮೀಯತೆ, ಭಯ, ವೈಭವ ಮತ್ತು ಭಕ್ತಿ ಅವರ್ಣನೀಯವಾಗಿರುತ್ತದೆ. ಬಹುತೇಕ ಹಾಡುಗಳಲ್ಲಿ ಮನುಷ್ಯನ ಎಲ್ಲಾ ಸ್ವಭಾವಗಳನ್ನು ದೇವರಿಗೆ ಅನ್ವಯಿಸಿ ಹಾಡುತ್ತಾ ಹೋಗುವುದು ಕಂಡುಬರುತ್ತದೆ. ದೇವರ ಹಾಡುಗಳನ್ನು ಸ್ತ್ರೀಯರೆ ಹೆಚ್ಚಾಗಿ ಹಾಡುತ್ತಾರೆ. ಹಬ್ಬ ಹರಿದಿನಗಳಲ್ಲಿ ಉತ್ಸವ ಹಾಗೂ ನಾಟಕ ಪ್ರಸಂಗಗಳಲ್ಲಿ, ಕುಟ್ಟುವ, ಬೀಸುವ ಸಂದರ್ಭಗಳಲ್ಲಿ ಈ ಹಾಡುಗಳನ್ನು ಹಾಡಲಾಗುತ್ತದೆ. ಇಂಥ ಕೆಲವು ದೇವರ ಹಾಡುಗಳು ಹೀಗಿವೆ.

ಮ್ಯಾಸನಾಯಕ ಸಮುದಾಯಕ್ಕೆ ಅಹೋಬಲ ನರಸಿಂಹಸ್ವಾಮಿ ಆರಾಧ್ಯ ದೈವವಾಗಿದ್ದಾನೆ. ಅನೇಕ ಸಂದರ್ಭಗಳಲ್ಲಿ ಈ ದೇವರ ಕುರಿತಾಗಿ ಹಾಡುಗಳನ್ನು ಹಾಡುತ್ತಾರೆ. ಆ ಹಾಡುಗಳಲ್ಲಿ ನರಸಿಂಹ ಸ್ವಾಮಿಯ ಲೀಲೆಗಳನ್ನು ಭಕ್ತಿಯಿಂದ ವಿವರಿಸಲಾಗಿದೆ. ನರಸಿಂಹನು ಬೇಡ ವೇಷವನ್ನು ಧರಿಸಿ ಅಡವಿಯಲ್ಲಿ ಸಂಚರಿಸುವ ಪ್ರಸಂಗದಿಂದ ಹಾಡು ಪ್ರಾರಂಭವಾಗುತ್ತದೆ. ನರಸಿಂಹಸ್ವಾಮಿಯು ದಾಸಯ್ಯನ ವೇಷಧರಿಸಿ ಬರುತ್ತಿರುವುದನ್ನು ಕಂಡು ಭಕ್ತಿಯಿಂದ ಪೂಜಿಸುವುದಕ್ಕೆ ಹೋಗುವ ತವಕದಿಂದ

"ಕಾಲ್ನಡಿಗೆ ಮಾಡತಿದ್ದ, ಸ್ವಾಮಿ ಓಬಯ್ಯನ

ಶನಿವಾರದ ಪೂಜೆಗೆ ನಾನ್ಹೋಗಿ ನೋಡತಿದ್ದೆ

ಎಂದು ಹಾಡು ಪ್ರಾರಂಭವಾಗುತ್ತದೆ. ನರಸಿಂಹನು ಬರುವಾಗ ನಾನಾ ಭಂಗಿಯಲ್ಲಿ ಬರುತ್ತಾನೆ.

ಹೊಕ್ಕುಳದ ಬವನಾಸಿ ತೆಕ್ಕೆಗವಚಿಕೊಂಡು

ಹೋಗೂತ ಮಣೇವು ತಿರುವೂತ (ಪ)

ಕೈಯ್ಯಲ್ಲಿ ಬವನಾಸಿ (ದಾಸಯ್ಯಗಳ ಭಿಕ್ಷಾಪಾತ್ರೆ) ಹಿಡಿದು ಒಂದು ಸಲ ಆಗಮಿಸಿದರೆ,

ಮತ್ತೊಂದು ಸಲ ಶಂಖ, ಜಾಗಟೆ, ಗರುಡ ಸ್ಥಂಭ ಹಿಡಿದು ಬರುತ್ತಾನೆ. ಮತ್ತೊಂದು ಸಲ ಮ್ಯಾಸ ಮಂಡಲದ ಆಚರಣೆಯ 'ಮಣೇವು' ಕುಣಿತದ ಪ್ರತೀಕವಾಗಿ ಕುಣಿಯುತ್ತಾ ಬರುತ್ತಾನೆ.

ಕುಂತಲ್ಲೇ ಮಣೇವು ತಿರುವೂತ ಸ್ವಾಮಿ ಬೊಮ್ಮಣ್ಣ

ಹೋದ ನಸುನಕ್ಕು ಮಣೇವು ತಿರುವೂತ

ಯಕ್ಕಿ ಹೂವಿನ ಆಕಾರದ ನಾಮಗಳನ್ನು ಹಚ್ಚಿಕೊಂಡು ದಾಸರ ಮಗನಾಗಿ ಬರುತ್ತಾನೆ. ಕುಳಿತುಕೊಂಡು ಮಣೇವು ತಿರುಗುತ್ತಾ, ನಸುನಗುತ್ತಾ ತನ್ನ ಲೀಲೆಗಳನ್ನು ಪ್ರಕಟಿಸುತ್ತಾ ಹೊರಡುತ್ತಾನೆ. ಹೀಗೆ ನರಸಿಂಹನ ಮನೆಯಲ್ಲಿಯೇ ಹಾಡು ಮುಂದುವರಿಯುತ್ತದೆ.

ಬೇಡನ ವೇಷವನ್ನು ಧರಿಸಿ ಅಡವಿಯಲ್ಲಿ ಸಂಚರಿಸುತ್ತಾ ಬರುತ್ತಾನೆ. ಅವನು ಸಂಚಲಕ್ಷ್ಮಿಯನ್ನು ವ್ಯಾಮೋಹಿಸಿ, ಅವಳೊಂದಿಗೆ ಕೆಲವು ದಿನ ಇದ್ದು ನಂತರ ಅವಳನ್ನು ಬಿಟ್ಟುಬಿಡುತ್ತಾನೆ. ಬೇಡನ ವೇಷದಲ್ಲಿ ಮರೆಮಾಚಿ ಹೋಗುವ ನರಸಿಂಹನನ್ನು ಸಂಚಲಕ್ಷ್ಮಿ ಬಿಡದೆ ಹಿಂಬಾಲಿಸಿ ಬರುತ್ತಾಳೆ. ಆಗ ನರಸಿಂಹನಿಗೂ ಸಂಚಲಕ್ಷ್ಮಿಗೂ ವಾಗ್ವಾದ ನಡೆಯುತ್ತದೆ. ಈ ವಾಗ್ವಾದವನ್ನು ತೆಲುಗು ಭಾಷೆಯಲ್ಲಿ ನೋಡಬಹುದು.

ಸಂಚಲಕ್ಷ್ಮಿ:

ಎವರು ಪಡುಚುಲು ಎಕ್ಕಡು ಸ್ವಾವಯ್ಯ

ಗರುಡಾ ಚಲಮು ಮಾರ್ತುಡು

ದೊರವ ಬಿಡ್ಲು ಮೇಮಿ ದೊರಕೀದು

ಫಲಮ್ಮನ ಅಡವಿ ಚಂಚಲು ಮಾತಂದ್ರಿ

ಗಿರಿಗಿರಿಲನು ದಾಂಟಿ ಲೋಲನು ದಾಂಟಿ

ಎಂದು ನಿಮ್ಮ ಕುಲವಾವುದು, ನೀವು ಯಾರು? ಎಂದು ಪ್ರಶ್ನಿಸುತ್ತಾಳೆ. ಅದಕ್ಕೆ ನರಸಿಂಹನು 'ನಮ್ಮವರು ನಿಮ್ಮವರು ಒಂದೇ' ಎಂದು ಹೇಳುತ್ತಾನೆ. ಹೀಗೆ ನರಸಿಂಹ ಮತ್ತು ಸಂಚಲಕ್ಷ್ಮಿಯ ನಡುವೆ ವಾಗ್ವಾದ ನಡೆದು ಕೊನೆಗೆ ಒಂದಾಗಿ ಕರೆದುಕೊಂಡು ಹೋಗುತ್ತಾನೆ. ನಂತರ ಮೊದಲ ಹೆಂಡ್ತಿಯಾದ ಭಾಗ್ಯಲಕ್ಷ್ಮಿ ಇರುವ ಮನೆಗೆ ಹೋದಾಗ ಅವಳು ಸಂಚಲಕ್ಷ್ಮಿಯನ್ನು ಕುರಿತು

ನೀನಾವಳೋ ನಾರಿ ಹೇಳು?

ಓಡೋಡಿ ಬಂದ ಸೂಳೆಯಾ?"[೫]

ಎಂದು ಪ್ರಶ್ನಿಸುತ್ತಾಳೆ. ಹೀಗೆ ಭಾಗ್ಯಲಕ್ಷ್ಮಿಗೂ ಸಂಚಲಕ್ಷ್ಮಿಗೂ ವಾಗ್ವಾದ ನಡೆಯುತ್ತದೆ. ನರಸಿಂಹನು ತಮ್ಮ ಗಂಡನೆಂದು ಸಾಧಿಸುವುದೇ ಅವರ ವಾಗ್ವಾದದ ವಸ್ತುವಾಗುತ್ತಾ ಕೊನೆಯಲ್ಲಿ ನರಸಿಂಹನು

ಇವರೀರ್ವರನ್ನು ಸಂತೈಸುತ್ತಾ ಅಕ್ಕ ತಂಗಿಯರಾಗಿ ಹೊಂದಿಕೊಂಡು ಬಾಳಿರಿ ಎಂದು ಹೇಳಿ ಅವರ ಕಲಹವನ್ನು ಬಗೆಹರಿಸುತ್ತಾನೆ. ಈ ತೆರನಾದ ನರಸಿಂಹಸ್ವಾಮಿಯ ಕುರಿತು ಹಾಡುವುದನ್ನು ಮ್ಯಾಸಬೇಡ ಸ್ತ್ರೀಯರ ನಾಲಗೆಯ ಮೇಲೆ ಇಂದೂ ಕಾಣುತ್ತೇವೆ.

ಮಾರಮ್ಮನ ಹಾಡು

ನಮ್ಮ ಜನರು ದೈನಂದಿನ ಬದುಕಿನ ಏಕತಾನತೆಯನ್ನು ನಿವಾರಿಸಿ ಸಂತೋಷವನ್ನು ಪಡೆಯಲು ಸಾಮೂಹಿಕವಾಗಿ ಭಾಗವಹಿಸಿ ಆಚರಿಸುತ್ತಿದ್ದ ಅನೇಕ ಕ್ರಿಯೆಗಳಲ್ಲಿ ಹಬ್ಬಗಳು, ಜಾತ್ರೆಗಳು, ಉತ್ಸವಗಳು ಸೇರುತ್ತವೆ. ಸಂಪ್ರದಾಯಿಕವಾದ ಆಚರಣೆಗಳಲ್ಲಿ ಹಬ್ಬಗಳು ಸೃಷ್ಠಿ ಸಮಸ್ಯೆಗಳನ್ನು ಕುರಿತವುಗಳು

ಸಾಮಾನ್ಯವಾಗಿ ಇಂಥ ಆಚರಣೆಯ ಹಿನ್ನೆಲೆಯಲ್ಲಿರುವ ಪೂಜಾಕ್ರಿಯೆಗಳೊಂದಿಗೆ ದೇವತೆಯ ಲೀಲೆ, ವಿರಾಟ ಕ್ರಿಯೆ, ಮಹಿಳೆ, ಅವತಾರಗಳನ್ನು ವಿವರ ವಿವರವಾಗಿ ಹೇಳುವ ಹಾಡುಗಳನ್ನು ಹೇಳುತ್ತಾ ಬಂದಿದ್ದಾರೆ. ನಾಲ್ಕು ನಾಲ್ಕು ಮಹಿಳೆಯರ ಎರಡು ತಂಡಗಳ ಮುಮ್ಮೇಳ ಹಿಮ್ಮೇಳದಲ್ಲಿ ಹಾಡುಗಳನ್ನು ಹೇಳುತ್ತಾರೆ. ಈ ತೆರನ ಹಾಡುಗಳಲ್ಲಿ ಕಥೆ, ದೇವತೆಯ ವರ್ಣನೆ, ಅವಳ ಭಕ್ತರ ಸಮರ್ಪಣ ಮನೋಭಾವ, ಆಕೆಯ ಪವಾಡಗಳು ಇಲ್ಲಿ ತುಂಬಿಕೊಂಡಿರುತ್ತವೆ. ಮ್ಯಾಸನಾಯಕರು ತಾವು ಆಚರಿಸುವ ಮಾರಮ್ಮನ ಜಾತ್ರೆಯಲ್ಲಿ ಹಾಡು ಹೇಳುವುದುಂಟು.

ಮಾರಿ ನಿನ ಗುಡಿಯ ಮುಂದೆ ಮಾತ ಬಿಟ್ಟವರ್ಯಾರ

ಮಾರಿ ನಿನ್ನ ತಮ್ಮ ಮರಿಯಣ್ಣ ಬಿಟ್ಟಮಾಲೆ

ಭೂಮಂಡಲವೆಲ್ಲ ಹೊಳೆದೈತ

ಹೀಗೆ ಪ್ರಾರಂಭವಾದ ಹಾಡಿನಲ್ಲಿ ಮಾರಿ ದೇವತೆಗಾಗಿ ಆಕೆಯ ತಮ್ಮ ಹೂಮಾಲೆಗಳನ್ನು ತಂದು ಗುಡಿ ತುಂಬ ಹಾಕುತ್ತಾನೆ. ಅದು ಗುಡಿಯನ್ನಷ್ಟೆ ಅಲ್ಲದೆ ಇಡೀ ಭೂಮಂಡಲವನ್ನೇ ವ್ಯಾಪಿಸುತ್ತದೆ. ಈ ತೆರನ ಆಕೆಯ ಮಹಿಮೆಯು ವಿಶ್ವವ್ಯಾಪಿಯಾಗುವುದನ್ನು ಕುಂಡು ಜನಪದರು ಮುಕ್ತಕಂಠದಿಂದ ಹೊಗಳುತ್ತಾ ಮುಂದುವರಿಯುತ್ತಾರೆ.

ಶ್ರೀ ಚೆನ್ನಕೇಶವನ ಹಾಡು

"ಎಂತಾ ಚೆಲುವಮ್ಮ ಚೆಲುವು

ಶ್ರೀ ಚೆನ್ನಕೇಶವನ ಚೆಲುವು

ಎಂತಾ ಚೆಲುವಮ್ಮ ಚೆಲುವು

ಶ್ರೀ ಚೆನ್ನಕೇಶವನ ಚೆಲುವು ॥ಪ॥

ಸುಂದರ ಬಂದುರ ಸೌಮ್ಯ ನಾಯಕೆ
ಮಾನಸ ಸೂರನ ಮೂರ್ತಿಯೇ ಚೆಲುವು ॥ಪ॥
ಗರುಡ ದೇವರ ಪೇಟದಿ ಮೆರೆವ
ದಿವ್ಯ ಆಭರಣಗಳಿಂದಲೇ ಹೊಳೆವ
ನಂಬಿದ ಭಕ್ತರ ನೆನಪನ ತರುವ
ಭುವನ ಮನೋಹರ ನೋಟವ ನೋಡು ॥ಪ॥
ದಶ ಅವತಾರಗಳ ಧರಿಸಿದ ಚೆಲುವು
ಧನುಜ ಮದನ ಅಳಿಸಿದ ಚೆಲುವು
ಭಸ್ಮಸೂರನ ಭೂತಿಯ ಮಾಡಲು
ಮೋಹಿನಿ ರೂಪವ ತಾಳಿದ ಚೆಲುವು ॥ಪ॥
ಶ್ರೀದೇವಿಯನು ಪ್ರೀತಿಸಿದವನು
ಭೂದೇವಿಯನು ರಕ್ಷಿಸಿದವನು
ವೇದೋದ್ಧಾರ ವೇದಲೋಲನು
ಮೈಲಾಪುರದಲ್ಲಿ ನೆಲೆಸಿದವನು ॥ಪ॥
ಸುಂದರ ಬಂದುರ ಸೌಮ್ಯ ನಾಯಕೆ
ಮಾನಸ ಸೂರನ ಮೂರ್ತಿಯೇ ಚೆಲುವು ॥ಪ॥

ಹನುಮಂತನ ಹಾಡು

ಹತ್ತಿ ಆಲದ ಮರನೇ
ಸೊಕ್ಕ ಬೇವಿನ ಮರನೇ
ಒತ್ತಿಲೊಂದೈತೇ ಪೆಲಿವಾಣ
ತಾನೆಂತಾ ಚೆಲುವಾ, ತಾನೆಂತಾ ಚೆಲುವಾ
ಚೆನ್ನದಾ ಬಾಗಲಾಗಿರುವ
ಹೊತ್ತಿಲೇ ಬಂದೈತೆ ಪೆಲಿವಾಣದ ಮರದಡಿಯ
ಅಕ್ಕ ಅಂಜಿನ ದೇವಿಯ ತ್ರಪಿಸಿದಳು

ತಾನೆಂತಾ ಚೆಲುವಾ, ಚಿನ್ನದಾ ಬಾಗಲಾಗಿರುವ

ಆಲದಾ ಮರನೇ ಸಾಲಬೇವಿನ ಮರನೇ

ವಾರಿತೊಂದೈತೆ ಪೆಲಿವಾಣ

ತಾನೆಂತಾ ಚೆಲುವಾ ಚಿನ್ನದಾ ಬಾಗಲಾಗಿರುವ

ವಾಲೇನೆ ಬಂದೈತೆ, ಪೆಲಿವಾಣದ ಮರದಡಿಯ

ತಾಯಿ ಅಂಜನಾದೇವಿ ತೃಪ್ತಿಸಿದಳು

ತಾನೆಂತಾ ಚೆಲುವಾ ಚಿನ್ನದಾ ಬಾಗಲಾಗಿರುವ

ಆರನೇ ತಿಂಗಳೀಗೇ ಬಾಡಿದ ತರುಳೇಲೆ

ಅಕ್ಕ ಅಂಜನದೇವಿ ಸಲಹಿದಳು

ತಾನೆಂತಾ ಚೆಲುವಾ ಚಿನ್ನದಾ ಬಾಗಲಾಗಿರುವ

ಅಕ್ಕ ಅಂಜನದೇವಿ ಸಲಹಿದ ಹೊಟ್ಟೇಲಿ

ಬಾಲಾ ಹುಟ್ಟಿದ ಹನುಮಯ್ಯ

ತಾನೆಂತಾ ಚೆಲುವಾ ಚಿನ್ನದಾ ಬಾಗಲಾಗಿರುವ

ಹತ್ತನೇ ತಿಂಗಳೀಗೆ ಒತ್ತಿದ ತರುಳಲೇ

ತಾಯಿ ಅಂಜನಾದೇವಿ ಸಲಸಿದಳು

ತಾನೆಂತಾ ಚೆಲುವ ಚಿನ್ನದಾ ಬಾಗಲಾಗಿರುವ

ತಾಯಿ ಅಂಜನಾದೇವಿ ಸಲುಹಿದ ವಟ್ಟೇಲಿ

ಪಾತ್ರ ಹುಟ್ಟಿದೇನು ಲಂಕೆ ಹನುಮಯ್ಯ

ತಾನೆಂತಾ ಚೆಲುವಾ ಚಿನ್ನದಾ ಬಾಗಲಾಗಿರುವ

ಅರನ್ನು ಆಡಿವಾಗ ಬಾಲನ್ನು ಪಡೆದಳು

ತೊಳಿಯಾಕ ನೀರು ಮೊದಲಿಲ್ಲಾ ॥ಪ॥

ತೊಡಿಯ ತೊಳಿಯಾಕ ನೀರು ಮೊದಲಿಲ್ಲಾ ಹನುಮಯ್ಯ

ಸುತ್ತೇಳು ಸಮುದ್ರ ತಿರುಗ್ಯಾನಾ ॥

ತಾನೆಂತಾ ಚೆಲುವಾ ಚಿನ್ನದಾ ಬಾಗಲಾಗಿರುವ

ಸುತ್ತೇಳು ಸಮುದ್ರ ತಿರುಗುಕಲ್ಲು ಮಾಡಿ

ಎತ್ತೆಮ್ಮೆ ಬಟ್ಟಿ ತೊಳೆಯಮ್ಮ

ತಾನೆಂತಾ ಚೆಲುವಾ ಚೆನ್ನದಾ ಬಾಗಲಾಗಿರುವ

ಅಬ್ಬಬ್ಬಾ ಅಡವಿಯಾಗಾ ಪುತ್ರನಾ ಪಡೆದಳು

ಬಟ್ಟು ತೊಳಿಯಾಕ ನೀರು ಮೊದಲಿಲ್ಲ ಹನುಮಯ್ಯ

ಸಾಳೀಳು ಸಮುದ್ರದ ತಿರುವಾನು ನೀರು

ತಾನೆಂತಾ ಚೆಲುವಾ ಚೆನ್ನದಾ ಬಾಗಲಾಗಿರುವ

ಸಾಳೀಳು ಸಮುದ್ರದ ತಿರುವಿಕಲ್ಲು ವರೆದು

ತಿರುವಮ್ಮ ಎತ್ತಮ್ಮ ಬಟ್ಟಿ ತೊಳೆಯಮ್ಮ

ತಾನೆಂತಾ ಚೆಲುವಾ ಚೆನ್ನದಾ ಬಾಗಲಾಗಿರುವ"[೬]

ಅಹೋಬಲ ನರಸಿಂಹಸ್ವಾಮಿ - ಸಂಚಲಕ್ಷ್ಮಿ ಹಾಡು

ಮ್ಯಾಸನಾಯಕ ಸಮುದಾಯಕ್ಕೆ ಅಹೋಬಲ ನರಸಿಂಹಸ್ವಾಮಿ ಆರಾಧ್ಯ ದೈವವಾಗಿದ್ದಾನೆ. ಅನೇಕ ಸಂದರ್ಭಗಳಲ್ಲಿ ಈ ದೇವರ ಕುರಿತಾಗಿ ಹಾಡುಗಳನ್ನು ಹಾಡುತ್ತಾರೆ. ಆ ಹಾಡುಗಳಲ್ಲಿ ನರಸಿಂಹಸ್ವಾಮಿಯ ಲೀಲೆಗಳನ್ನು ಭಕ್ತಿಯಿಂದ ವಿವರಿಸಲಾಗಿದೆ. ನರಸಿಂಹನು ಬೇಡ ವೇಷವನ್ನು ಧರಿಸಿ ಅಡವಿಯಲ್ಲಿ ಸಂಚರಿಸುವ ಪ್ರಸಂಗದಿಂದ ಹಾಡು ಪ್ರಾರಂಭವಾಗುತ್ತದೆ. ನರಸಿಂಹಸ್ವಾಮಿಯು ದಾಸಯ್ಯನ ವೇಷ ಧರಿಸಿ ಬರುತ್ತಿರುವುದನ್ನು ಕಂಡು ಭಕ್ತಿಯಿಂದ ಪೂಜಿಸುವುದಕ್ಕೆ ಹೋಗುವ ತವಕದಿಂದ

"ಹಾಲಡಿಗೆ ಮಾಡುತ್ತಿದ್ದೆ, ಸ್ವಾಮಿ ಓಬಯ್ಯನ

ಶನಿವಾರದ ಪೂಜೆಗೆ, ನಾನ್ಹೋಡಿ ಓಡುತ್ತಿದ್ದೆ,

ಎಂದು ಹಾಡು ಪ್ರಾರಂಭವಾಗುತ್ತದೆ. ನರಸಿಂಹನು ಬರುವಾಗ ನಾನಾ ಭಂಗಿಯಲ್ಲಿ ಬರುತ್ತಾನೆ,

ಹೊಕ್ಕುಳದ ಬವನಾಸಿ ತೆಕ್ಕೆಗವಚಿಕೊಂಡು,

ಹೋಗುತ ಮಣೇವು ತಿರುವೂತ ।ಪ।

ಕೈಯ್ಯಲ್ಲಿ ಬವನಾಸಿ (ದಾಸಯ್ಯಗಳ ಭಿಕ್ಷಾಪಾತ್ರೆ) ಹಿಡಿದು ಒಂದು ಸಲ ಆಗಮಿಸಿದರೆ, ಮತ್ತೊಂದು ಸಲ ಶಂಖ, ಜಾಗಟೆ, ಗರುಡಸ್ಥಂಭ ಹಿಡಿದು ಬರುತ್ತಾನೆ. ಮತ್ತೊಂದು ಸಲ ಮ್ಯಾಸ ಮಂಡಲದ ಆಚರಣೆಯ 'ಮಣೇವು' ಕುಣಿತದ ಪ್ರತೀಕವಾಗಿ ಕುಣಿಯುತ್ತಾ ಬರುತ್ತಾನೆ.

ಕುಂತಲ್ಲೆ ಮಣೇವು ತಿರುವೂತ ಸ್ವಾಮಿ ಬೊಮ್ಮಣ್ಣ

ಹೋದೆ ನಸುನಕ್ಕು ಮಣೇವು ತಿರುವೂತ ।ಪ।

ಯಕ್ಕಿ ಹೂವಿನ ಆಕಾರದ ನಾಮಗಳನ್ನು ಹಚ್ಚಿಕೊಂಡು ದಾಸರ ಮಗನಾಗಿ ಬರುತ್ತಾನೆ. ಕುಳಿತುಕೊಂಡು ಮಣೇವು ತಿರುಗುತ್ತಾ ನಸುನಗುತ್ತಾ, ತನ್ನ ಲೀಲೆಗಳನ್ನು ಪ್ರಕಟಿಸುತ್ತಾ ಹೋಗುತ್ತಾನೆ. ಹೀಗೆ ನರಸಿಂಹನ ವರ್ಣನೆಯಲ್ಲಿಯೇ ಹಾಡು ಮುಂದುವರಿಯುತ್ತದೆ.

'ಬೇಡನ' ವೇಷ ಧರಿಸಿ ಅಡವಿಯಲ್ಲಿ ಸಂಚರಿಸುತ್ತಾ ಬರುತ್ತಾನೆ. ಅವನು ಸಂಚಲಕ್ಷ್ಮಿಯನ್ನು ವ್ಯಾಮೋಹಿಸಿ ಅವಳೊಂದಿಗೆ ಕೆಲವು ದಿನ ಇದ್ದು ನಂತರ ಅವಳನ್ನು ಬಿಟ್ಟುಬಿಡುತ್ತಾನೆ. ಬೇಡನ ವೇಷದಲ್ಲಿ ಮರೆಮಾಚಿ ಹೋಗುವ ನರಸಿಂಹನನ್ನು ಸಂಚಲಕ್ಷ್ಮಿ ಬಿಡದೆ ಹಿಂಬಾಲಿಸುತ್ತಾಳೆ. ಆಗ ನರಸಿಂಹನಿಗೂ ಸಂಚಲಕ್ಷ್ಮಿಗೂ ವಾಗ್ವಾದ ನಡೆಯುತ್ತದೆ. ಈ ವಾಗ್ವಾದವನ್ನು ತೆಲುಗು ಭಾಷೆಯಲ್ಲಿ ನೋಡಬಹುದು.

ಎವರು ಪಡುಚುಲು ಎಕ್ಕಡುನ್ನಾವಯ್ಯ

ಗರುಡಾಚಲಮು ಮೂರ್ತುಡು

ದೊರವ ಬಿಡ್ಲು ಮೇಮಿ ದೊರಕೀದು ಫಲಮ್ಮೈನ

ಅಡವಿಂಚಲು ಮಾತಂದ್ರಿ

ಗಿರಿಗಿರಿಲನು ದಾಂಟಿ ಗಿರಿಲೋಕನು ದಾಂಟಿ

ಎಂದು ನಿಮ್ಮ ಕುಲವಾವುದು ನೀವು ಯಾರು? ಎಂದು ಪ್ರಶ್ನಿಸುತ್ತಾಳೆ. ಅದಕ್ಕೆ ನರಸಿಂಹನು, 'ನಮ್ಮವರು ನಿಮ್ಮವರು ಒಂದೇ' ಎಂದು ಹೇಳುತ್ತಾನೆ. ಹೀಗೆ ನರಸಿಂಹ ಮತ್ತು ಸಂಚಲಕ್ಷ್ಮಿಯ ನಡುವೆ ವಾಗ್ವಾದ ನಡೆದು ಕೊನೆಗೆ ಒಂದಾಗಿ ಕರೆದುಕೊಂಡು ಹೋಗುತ್ತಾನೆ. ನಂತರ ಮೊದಲ ಹೆಂಡ್ತಿಯಾದ ಭಾಗ್ಯಲಕ್ಷ್ಮಿಯ ಮನೆಗೆ ಹೊದಾಗ ಅವಳು ಸಂಚಲಕ್ಷ್ಮಿಯನ್ನು ಕುರಿತು,

ನೀನಾವಳೋ ನಾರಿ ಹೇಳು?

ಓಡೋಡಿ ಬಂದ ಸೂಳೆಯಾ?"[೭]

ಎಂದು ಪ್ರಶ್ನಿಸುತ್ತಾಳೆ. ಹೀಗೆ ಭಾಗ್ಯಲಕ್ಷ್ಮಿಗೂ ಸಂಚಲಕ್ಷ್ಮಿಗೂ ವಾಗ್ವಾದ ನಡೆಯುತ್ತದೆ. ನರಸಿಂಹನು ತಮ್ಮ ಗಂಡನೆಂದು ಸಾಧಿಸುವುದೇ ಅವರ ವಾಗ್ವಾದದ ವಸ್ತುವಾಗುತ್ತಾ ಕೊನೆಯಲ್ಲಿ ನರಸಿಂಹನು ಇವರೀರ್ವರನ್ನು ಸಂತೈಸುತ್ತಾ ಅಕ್ಕ ತಂಗಿಯರಾಗಿ ಹೊಂದಿಕೊಂಡು ಬಾಳಿರಿ ಎಂದು ಹೇಳಿ ಅವರ ಕಲಹವನ್ನು ಬಗೆಹರಿಸುತ್ತಾನೆ. ಈ ತೆರನಾದ ನರಸಿಂಹಸ್ವಾಮಿಯ ಕುರಿತು ಹಾಡುವುದನ್ನು ಮ್ಯಾಸಬೇಡ ಸ್ತ್ರೀಯರ ನಾಲಗೆಯ ಮೇಲೆ ಇಂದೂ ಕಾಣುತ್ತೇವೆ.

ದೇವತೆಯ ಅಲಂಕಾರ ಕುರಿತು ಹೇಳುವ ಹಾಡು

"ಮೂಗುತಿ ಮೂಂಭಾರ ಮುಡಿಗೆಂಟು ಹಿಂಭಾರ
ಎಂಟೆಳೆಗಂಡು ಎದೆಭಾರ – ಮಾರಿ ನಿನ
ಸಣ್ಣಂಚಿನ ಸೀರೆ ನೆರೆಭಾರ

ದೇವತೆ ಹೊಂದಿರುವ ಮೂಗುತಿ ತಲೆ ಆಭರಣ, ಕೊರಳ ಹಾರ, ಸಣ್ಣಂಚಿನ ಜರಿಸೀರೆ ಹೀಗೆ ಇನ್ನೂ ನಾನಾ ವಿಧದ ಉಡುಗೆ–ತೊಡುಗೆಗಳಿಂದ ವಿಶೇಷ ಅಲಂಕೃತಳಾಗಿ ಕಂಗೊಳಿಸುತ್ತಿದ್ದಾಳೆ. ಮೂಗುತಿಯ ಮುಂಭಾರದಿಂದ ಪ್ರಸನ್ನಳಾಗುವ ದೇವತೆಯ ವಾಸ ಬೀದಿಯ ಮನೆಯಾಗಿದೆ. ಬೀಸಣಿಕೆ, ಚಾಮರಗಳಿಲ್ಲದೆಯೇ ಆಕೆಗೆ ತಂಪಾದ ಗಾಳಿ ದೊರೆಯುತ್ತದೆ. ವಿಶೇಷ ಜಾತಿಯ ಜಾಜಿಯ ಹೂ ಧರಿಸಿ ಕಂಗೊಳಿಸುತ್ತಿರುವ ಆಕೆಯನ್ನು ಅತ್ಯಂತ ಭಕ್ತಿಯಿಂದ 'ನನ್ನ ಮೇಲೆ ದಯೆಯಿರಲಿ' ಎಂದು ಬೇಡಿಕೊಳ್ಳುತ್ತಾರೆ.

ಕ್ವಾಟೆಯ ಮನೆಯೊಳೆ ಕೋಗಿಲೆ ದನಿಯೊಳೆ
ರಾಟ ವಾಲೆಯ ಕಿವಿಯೊಳೆ – ಮಾರಿ ನಿನ
ದಾಟಿ ಬರಲಾರೆ ದನಿ ತೋರೆ

ಭದ್ರಕೋಟೆಯಲ್ಲಿ ನಿನ್ನ ವಾಸವಾಗಿದೆ. ನೀನು ತೋರುವ ದನಿ ಕೋಗಿಲೆ ಕಂಟದ್ದಾಗಿದೆ. ಕಿವಿಯಲ್ಲಿ ಧರಿಸಿದ ಓಲೆಯು (ಆಭರಣ) ವಿಶೇಷವಾಗಿದೆ. ನಿನ್ನೀ ವೈಭವದ ದರ್ಶನ, ಸನಿಹ ಬಿಟ್ಟು ನಾನು ಬೇರೆಡೆ ಹೋಗಲಾರೆ ಎಂದು ತನ್ನ ಆತಂಕವನ್ನು ವ್ಯಕ್ತಪಡಿಸುತ್ತಾಳೆ. ಯಾವುದೋ ಕಾರಣಕ್ಕೆ ದೇವತೆ ವ್ಯಾಕುಲಗೊಂಡವಳಂತೆ ಕಾಣುತ್ತಾಳೆ. ಅದನ್ನು ಕಂಡು ಸಹಿಸದಿಕೊಳ್ಳದ ಭಕ್ತಸಮೂಹ ಅವಳ ಮನಸ್ಸು ಪರಿವರ್ತನೆ ಮಾಡಲು ಪ್ರಯತ್ನಿಸುತ್ತಾ

ಯಾಕ ಮಾರಿ ನಿನ ಮುಖವೆಲ್ಲ ಸಪ್ಪಗೆ
ನೋಡ ಬಂದವರು ನಗತಾರ – ಮಾರಿ ನಿನ
ಕಾಲಿಗೆ ಬಿದ್ದೇನು ಕಲಿಯಾಗೆ

ಎಂದು ಮಾರಿಯ ಮುಖ ಬಾಡಿದುದನ್ನು ಕಂಡು ಚಿಂತಿಸುತ್ತಾರೆ. ನಿನ್ನ ವಿರಾಟ್ ಶಕ್ತಿಗೆ ಕುಂದು ಬರುತ್ತದೆ. ಆದ್ದರಿಂದ ನನಗೆ ನೋವಾಗುತ್ತದೆ. ದಯವಿಟ್ಟು ನೀನು ನಿಜರೂಪ ತಾಳು ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ತಮ್ಮ ದೇವತೆಯನ್ನು ಕ್ರಿಯಾಶೀಲಳನ್ನಾಗಿ ಮಾಡುವ ಪ್ರಯತ್ನ ಈ ಹಾಡುಗಳಲ್ಲಿ ಎದ್ದು ಕಾಣುತ್ತದೆ.

ಹಟ್ಟಿಯ ಕೆಳಗೊಂದು ಎಳೆಯ ತೆಂಗಿನ ಮರ
ತಾರು ತಾರಿಗೂ ಎಳೆಗಾಯಿ – ಮಾರಿನಿನ
ಹಬ್ಬದೊತ್ತಿಗೆ ಎಳೆಗಾಯಿ

ನಿನ್ನ ವಾಸದ ಹಟ್ಟಿಯಲ್ಲಿರುವ ಎಳೆ ತೆಂಗಿನಮರವೂ ಫಲ ಕೊಡುತ್ತದೆ. ನಿನ್ನ ಹಬ್ಬ ಸಮೀಪಿಸುತ್ತಿದೆ ಎಂದು ಹೇಳುತ್ತಾ, ಆ ಉತ್ಸವಕ್ಕೆ ಇಡುಗಾಯಿಗಾಗಿ ನಿನ್ನ ಪಾದಕಮಲಗಳಿಗೆ ಸಿದ್ದವಾಗುತ್ತಿದೆ. ಬೃಹದಾಕಾರವಾಗಿ ಬೆಳೆದು ನಿನ್ನ ಹಬ್ಬಕ್ಕೆ ಮೀಸಲಾಗಿದೆ ಎಂದೂ ಹೇಳುತ್ತಾಳೆ.

ಮಾರಿ ನಿನ ಹಬ್ಬಕ್ಕೆ ಮನೆಯೆಲ್ಲ ಸಿಂಗಾರ

. . . .

ಮಳೆ ಬಂದರೆಲ್ಲ ತಳಗೀತೆ – ಮಾರಿನಿನ

ಹಬ್ಬದ ಆಚರಣೆ ಮಾಡುವ ಅತ್ಯಾಶೆಯಾಗಿದೆ. ಹಬ್ಬದ ಸಡಗರಕ್ಕಾಗಿ ಹಳ್ಳಿ–ಹಳ್ಳಿಯೇ ಸುಣ್ಣ ಬಣ್ಣಗಳಿಂದ ಸಾರಣೆಗೊಂಡು ಸಿಂಗಾರವಾಗಿ, ಹಬ್ಬದಾಚರಣೆಗೆ ಸಿದ್ಧಾರಾಗಿದ್ಧೇವೆ. ನೀನು ಕೃಪೆಮಾಡು ಎಂದು ಬೇಡಿಕೊಳ್ಳುತ್ತಾಳೆ. ದೇವತೆಯಾದರೂ ಮಾನವ ಸಹಜ ಪ್ರವೃತ್ತಿ, ವ್ಯವಹಾರಗಳಲ್ಲಿ ಆಕೆಯನ್ನು ತಮ್ಮಂತೆ ಕಂಡುಕೊಳ್ಳುವುದು ಜನಪದರ ವೈಶಿಷ್ಟ್ಯವಾಗಿದೆ. ತಮ್ಮ ಸರಳ ಬದುಕಿನಲ್ಲಿ– ಕಾಯಕದಲ್ಲಿ ಕೈಲಾಸವನ್ನು, ಕೆಸರಲ್ಲಿ ಮೊಸರನ್ನು ಕಾಣುವ ಜೀವನ ದೃಷ್ಟಿಕೋನ ವ್ಯಕ್ತವಾಗುತ್ತಿದೆ. ಅಂತೆಯೇ ಮಾರಿಯೂ ಒಬ್ಬ ಸಾಮಾನ್ಯ ಹೆಣ್ಣಾಗಿ ಸಂತೆಗೆ ಹೋಗಿದ್ದಾಳೆ. ಆ ಸಮಯದಲ್ಲಿ ಮಳೆ ಬರುವುದು ಮಳೆ ಬಂದಲ್ಲಿ ಹೇಗಿರುವಿ? ಎಂಬ ಪ್ರಶ್ನೆಗಳು ಮೂಡುತ್ತವೆ. ತಕ್ಷಣ ನೀನೇ ಬೆಳೆಸಿದ ಹೊಂಬಾಳೆ ಗೊನೆಯ ಸುಳಿಯಲ್ಲಿ ರಕ್ಷಣೆ ಪಡೆಯಬೇಕೆಂದು ಹೇಳುತ್ತಾರೆ.

ಮಂಚೀನ ಮಳೆ ಉಯ್ದು ಹಟ್ಟಿಯ ಕೆರೆ ತುಂಬಿ

ದಡ್ಲು ಮಾರಮ್ಮ ಜಲನಾಡಿ – ಬರುವಾಗ

ಹಟ್ಟೀಯ ಬೀದಿ ಹೊಳೆದಾವೋ

ದೇವಿಯ ಕೃಪೆಯಿಂದ ಸಮೃದ್ದ ಮಳೆಯಾಗಿ ಹಟ್ಟಿಯ ಕೆರೆಗಳು ತುಂಬಿವೆ. ಹಟ್ಟಿ ಹಟ್ಟಿಯ ಹಾದಿ ಬೀದಿಗಳೆಲ್ಲ ಸುಂದರವಾಗಿ ಕಂಗೊಳಿಸುತ್ತಿವೆ. ತುಂಬಿದ ಕೆರೆಯಲ್ಲಿ 'ಜಲದ್ನಾವನಾಡಿ' ಬರುವಾಗ ಹೂವು ಬೆಳೆದ ತೋಟಗಳೇ ದೇವಿಯ ಪೂಜೆಗಾಗಿ ಹಾತೊರೆದು ಬರುತ್ತಿವೆ, ಎದುರಾಗುತ್ತಿವೆ. ಎತ್ತಿನ ಕಿಲಾರಿಗಳೂ ನಿನ್ನನ್ನು ಬೀದಿಯಲ್ಲಿ ಬರಮಾಡಿಕೊಳ್ಳುತ್ತಿದ್ದಾರೆ. ಆಗ,

. . . .

ರಂಭೆ ಆಗಿ ದೇವಿ ಮೆರೆದಳು

ವಿಶೇಷ ನಡೆಯಿಂದ ದಾರಿಯುದ್ದಕ್ಕೂ ಬರುತ್ತಿದ್ದಾಳೆ. ದಾರಿಯಲ್ಲಿ ಕಾಯಕದ ಕಿಲಾರಿಗಳು ಇದ್ದಾರೆ.

ಗಂಡು ಮಕ್ಕಳೀಯ ಗಂಧನ ಇಕ್ಕಳೀಯ

ಉಂಡು ಎರಡೇಲೆಯ ಇಡಕಳಿಯ – ಮಕ್ಕಳು

ದಡ್ಲು ಮಾರಮ್ಮನ ಕಣತಾಕೆ

ಹೀಗೆ ದೇವಿಯನ್ನು ಮೆರೆಸುತ್ತಾ ಬರುವಾಗ ಮೆರವಣಿಗೆಗೆ ಸಂಬಂಧಿಸಿದಂತೆ ಅನೇಕ ರೀತಿಯಲ್ಲಿ ದೇವಿಯ ಬರುವಿಕೆ, ದಾರಿಯ ಬದಿಗಳಲ್ಲಿ ಭಕ್ತರ ಸಮೂಹ ಅತ್ಯುತ್ಸಾಹದಿಂದ ಆಕೆಯನ್ನು ಮೆರವಣಿಗೆ ಮಾಡುತ್ತಾ ಭಕ್ತಿಯಿಂದ ಬರಮಾಡಿಕೊಳ್ಳುವುದನ್ನು ಅನೇಕ ನುಡಿಗಳಲ್ಲಿ ವರ್ಣಿಸಿದ್ದಾರೆ.

. . . .

ದಡ್ಲು ಮರಮ್ಮನ ಕಣುತಾಕೆ

ಕುಣಿಯಾಕೆ ಬತ್ತಾದೆಂದು ಕಾಲಿಗೆ ಗೆಜ್ಜೆಕಟ್ಟಿ

ಕುಣಿವಾಕೆ ಬರುವಲ್ಲೆ ಕಿಡಿಗಣಿ – ಮಾರಿನಿನ

ಕುಂತು ನೋಡವ್ವ ಕುಣಿತಾವ

ಭಕ್ತ ಜನತೆ ದೇವಿಯನ್ನು ಮೆರವಣಿಗೆ ಮಾಡುತ್ತಾ ಆನಂದಕ್ಕಾಗಿ ನಾನಾ ವಿಧವಾಗಿ ಕುಣಿಯುತ್ತಾ ಬರುತ್ತಾರೆ. ದೇವಿಯನ್ನು ತೃಪ್ತಿಗೊಳಿಸಬೇಕೆಂಬುದು ಅವರ ಆಸೆಯಾಗಿದೆ. ಭಕ್ತರ ಕುಣಿತದ ಆವೇಶಕ್ಕೆ ಮನಸೋತ ದೇವಿಯೂ ಅವರೊಡನೆ ಕುಣಿಯಲು ಪ್ರಯತ್ನಿಸುತ್ತಾಳೆ. ಆದರೆ ದೇವತೆ ಕುಣಿಯುವುದು ಭಕ್ತವೃಂದಕ್ಕೆ ಇಷ್ಟವಿಲ್ಲ. ಹಾಗಾಗಿಯೇ ಕುಣಿಯುತ್ತೇನೆಂದು ಹೊರಟ ದೇವಿಯ ಕುಣಿತದಲ್ಲಿ ಹೆಜ್ಜೆ ತಪ್ಪುತ್ತದೆ. ಅದಕ್ಕೆ ಭಕ್ತರು, 'ತಾಯಿ, ನೀನು ನಿನ್ನ ಆಸ್ಥಾನ ಬಿಟ್ಟು ಕದಲದೆ ಕುಳಿತೇ ಕುಣಿತವನ್ನು ನೋಡು' ಎಂದು ಬೇಡಿಕೊಳ್ಳುತ್ತಾರೆ.

ಕುಣಿತೀನಿ ಅಂತ ಕಾಲಿಗೆ ಗೆಜ್ಜೆಕಟ್ಟಿ

ಕುಣಿಯಾಕೆ ಕಾಲು ಬರುವಲ್ದೆ – ಮಾರಿನಿನ

ಕಾಲಿಗೆ ಮತಿಯ ಕೊಡಸವ್ವ

ಕೆರೆ ಬಾವಿಯುಂಟು ಕೆಳಗೆ ತೋಟಾನುಂಟು

. . . .

ಹೊನ್ನ ಬಿತ್ತವ್ವ ಹೊಲಕೆಲ್ಲ

ನಮ್ಮನ್ನು ತಾಳಕ್ಕೆ ತಕ್ಕಂತೆ ಕುಣಿಯುವ ಶಕ್ತಿಯನ್ನು ದಯಪಾಲಿಸು ಎಂದು ಬೇಡಿಕೊಳ್ಳುತ್ತಾ ಕುಣಿತದೊಂದಿಗೆ ಬದುಕಿನ ಕ್ರಿಯೆ ಪ್ರಾರಂಭವಾಗುವುದನ್ನು ಹೇಳುತ್ತಾರೆ. ಬದುಕಿನ ಚೈತನ್ಯಗಳಾದ ಕೆರೆ ಬಾವಿಗಳು ತುಂಬಿ ಹರಿಯಬೇಕು. ನೀರು ಹೊಲ ಗದ್ದೆಗಳಿಗೆ ಹರಿಯಬೇಕು. ಬಿತ್ತಿದ ಬೆಳೆಯೆಲ್ಲ ಫಲ ಕೊಡಬೇಕು ಇದಕ್ಕೆಲ್ಲ ನಿನ್ನ ದಯವಿರಬೇಕು ಎಂದು ವಿನಂತಿಸಿಕೊಳ್ಳುತ್ತಾರೆ.

ಮಾರಿನಿನ ಗುಡಿಸುತ್ತಾ ನೂರೊಂದು ಗಿಡಹುಟ್ಟಿ

ಕಳ್ಳಕೊಯ್ತಾನೆ ಕಸುಗಾಯಿ – ಮಾರಿನಿನ

ನಿನಗಂಡ ಕೊಯ್ತಾನೆ – ಗಜಲಿಂಗೆ"[೮]

ಬೆಳೆದ ಬೆಳೆಯನ್ನು ಕಳ್ಳನಿಂದ ರಕ್ಷಿಸು, ನಿನ್ನ ಗಂಡನ ಕಾವಲಿಟ್ಟು ಕಾಪಾಡು ಎಂದು ನಮ್ಮನ್ನು ರಕ್ಷಿಸಿದರೆ ನಿನ್ನನ್ನು ನಾವು ನಿರಂತರ ಆರಾಧಿಸುತ್ತೇವೆ. ಸದಾ ನಿನ್ನ ಜ್ಞಾನ ಮಾಡುತ್ತಾ ಸದ್ಭಕ್ತಾಗುತ್ತೇವೆ. ಹೀಗೆ ನಾನಾ ಬಗೆಯಿಂದ ದೇವಿಯನ್ನು, ಆಕೆಯ ಮಹಿಮೆಯನ್ನು ಹಾಡುತ್ತಾ ಹೊಗಳುತ್ತಾ ದೇವತೆಯನ್ನು ತಮ್ಮ ಲೌಕಿಕ ಜೀವನದಲ್ಲಿ ಸಮೀಪಿಸುವ ರೀತಿಯಲ್ಲಿ ಭಕ್ತಿಯಿಂದ ಹಾಡುತ್ತಾರೆ.

೭.೪ ಗಾದೆಗಳು

ಗಾದೆಗಳು ಜನಪದ ಸಾಹಿತ್ಯದ ಒಂದು ಮಹತ್ವದ ಪ್ರಕಾರ. ಜನ ಸಮೂಹಕ್ಕೆ ತಮ್ಮ ನಡುವಿನ ಶಿಷ್ಟ ಸಾಹಿತ್ಯ ಪರಂಪರೆಯ ಮಹತ್ವ ಅರಿವಿಗೆ ಬಂದಿಲ್ಲದಿರಬಹುದು. ಆದರೆ ಗಾದೆಗಳ ಅರಿವು ಇಲ್ಲದೆ ಇರುವ ಜನ ಸಾಮಾನ್ಯರು ವಿರಳ. ಹೀಗಾಗಿ ಗಾದೆಗಳ ಬಗ್ಗೆ ಜಗತ್ತಿನಾದ್ಯಂತ ಒಂದೇ ಬಗೆಯ ಅರ್ಥ ಕೊಡುವ ಅಭಿಪ್ರಾಯ ವ್ಯಕ್ತವಾಗುತ್ತದೆ. ಗಾದೆ ಎಂದೂ ಸುಳ್ಳು ಹೇಳುವುದಿಲ್ಲ. ಎಂಬುದು ಜನಪದ ಹೇಳಿಕೆ. ಈ ಸಣ್ಣ ಸೂಕ್ತಿ ಬ್ರಹ್ಮಾಂಡದಷ್ಟೆ ವಿವರವನ್ನು ಹೊತ್ತಿರುತ್ತದೆ. ಎಂಬುದು ಗ್ರೀಸ್ ದೇಶದವರ ಅನಿಸಿಕೆ. ಸ್ವೀಡನ್‌ನಲ್ಲಿರುವ ಪ್ರಸಿದ್ದ ಸೂಕ್ತಿ, ಮಾನವನ ಯೋಚನೆಯೆ ಗಾದೆಯಾಗಿ ಹೊಮ್ಮುತ್ತದೆ ಎಂಬುದಾಗುತ್ತದೆ. ಸ್ಪೆಯಿನ್‌ನವರ ಮಾತು ಹೀಗಿದೆ. ನಿಜವಲ್ಲದ ಗಾದೆಯಿಲ್ಲ. ಇಂಗ್ಲೇಂಡಿನಲ್ಲಿ ಪ್ರಚಲಿತದಲ್ಲಿರುವ ಮಾತು. ಎಲ್ಲರೂ ಹೇಳಿದ್ದು ನಿಜವಿರಲೇ ಬೇಕು ಎಂದಿದೆ. ಹಾಲೆಂಡ್‌ನಲ್ಲಿರುವ ಉಕ್ತಿಯಂತು ಗಾದೆಗೊಂದು ವ್ಯಕ್ತಿರೂಪವನ್ನೇ ಕೊಡಲಾಗಿದೆ. ಅದೆಂದರೆ ದೈನಂದಿನ ಅನುಭವಗಳ ಗಾದೆಗಳು. ಮಲೆಯಾಳ ಭಾಷೆಯಲ್ಲಿ ಗಾದೆ ಸುಳ್ಳಾದಂದು ಹಾಲು ಹುಳಿಯಾಗುತ್ತದೆಂಬ ಮಾತಿದೆ. ಗಾದೆ ಬಲ್ಲವ ಜಗಳ ಬಿಡಿಸಬಲ್ಲ ಎಂಬುದು ಆಫ್ರಿಕನ್ನರ ತಿಳಿವಳಿಕೆ.

ಪ್ರಪಂಚದಾದ್ಯಂತ ಗಾದೆಗಳ ಮಹತ್ವವನ್ನು ಮೆಚ್ಚಿಕೊಂಡಿರುವುದು ಸರ್ವವಿದಿತ ಗಾದೆ ಬದುಕಿನ ನಿತ್ಯ ವ್ಯವಹಾರದಲ್ಲಿ ಮಾತುಕತೆಯ ನಡುವೆ ಅನಿವಾರ್ಯವಾದ ಭಾಗವಾಗಿ ಉಳಿದುಕೊಂಡಿದೆ.ಈ ಅನಿವಾರ್ಯತೆ ಮತ್ತು ಗಾದೆಯ ಮಹತ್ವವು ಜನರ ಗಮನಕ್ಕೆ ಬಹಳವಾಗಿ ಬಂದಿದ್ದರಿಂದಲೇ ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ವೇದಕ್ಕೆ ಸಮ. ಗಾದೆಯೆಂಬುದು ಬೀದಿಯ ಜ್ಞಾನ ಎಂಬೆಲ್ಲಾ ದೊಡ್ಡ ಮಾತುಗಳು ಜನಜೀವನದಲ್ಲಿ, ವಿದ್ವಾಂಸರ ವಲಯದಲ್ಲಿ ಬಳಕೆಗೆ ಬಂದಿತುತ್ತದೆ.

ಭಾರತದಲ್ಲಿ ವೇದಗಳನ್ನು ಪವಿತ್ರ ಗ್ರಂಥಗಳೆಂದು ಕರೆಯಲಾಗಿದೆ. ಅವು ಭಾರತೀಯ ಪರಂಪರೆಯ ಮೂಲ ಮಾತೃಕೆಗಳು. ಅವು ಅಪರೋಕ್ಷಯವೆಂದು ತಿಳಿಯಲಾಗದು. ಅವು

ಮನುಷ್ಯ ಸ್ವಭಾವದ ಮೂಲಕ ಹುಟ್ಟಿದ ಸಣ್ಣಪುಟ್ಟ ಮಾತುಗಳನ್ನು ಅಥವಾ ವಾಕ್ಯ ಖಂಡಗಳನ್ನು ಭಾರತದ ಪುರಾತನವೂ ಅಪೌರುಷೇಯವೂ ಎನಿಸಿಕೊಂಡ ಗ್ರಂಥಗಳಿಗೆ ಹೋಲಿಸುವುದೆಂದರೆ ಅದು ಆಶ್ಚರ್ಯದ ಮಾತೆ ಸರಿ. ಗಾದೆ ಮತ್ತು ವೇದ ಎರಡೂ ವಿರುದ್ಧ ದಿಕ್ಕಿನ ಸೃಷ್ಟಿಗಳು. ಅವು ಒಂದರ ಸಮ ಇನ್ನೊಂದಾಗುವುದು ಕಷ್ಟವೇ. ಒಮ್ಮೊಮ್ಮೆ ಮನಸ್ಸಿಗೆ ನಿಲುಕದೆಯೇ, ಇನ್ನಾವುದೋ ಕಾರಣಕ್ಕೋ ಸುಳ್ಳು ಎನಿಸಿಬಿಡಬಹುದು. ಆದರೆ ಕಲ್ಪನೆಯ ಸೋಕೇ ಇಲ್ಲದೆ ನಿಜಜೀವನದ ಅನುಭವಗಳ ಹಿನ್ನೆಲೆಯಲ್ಲಿಯೇ ಸೃಷ್ಟಿಯಾದ ಗಾದೆ ಸುಳ್ಳಾಗಲು ಸಾಧ್ಯವೇ ಇಲ್ಲ. ಗಾದೆ ಸುಳ್ಳು ಕಲ್ಪನೆಯನ್ನು ಹೇಳುವುದಕ್ಕಿಂತ ಸತ್ಯವನ್ನೇ ವಿಸ್ತರಿಸುತ್ತಾ ಹೋಗುತ್ತದೆ ಎಂಬುದನ್ನು ಅರಿತವರು ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿನ ಮೂಲಕ ಗಾದೆಗಳ ಮಹತ್ವವನ್ನು ವೇದಗಳಿಗಿಂತಲೂ ಇನ್ನೂ ಒಂದು ಹೆಜ್ಜೆ ಮುಂದೆ ಕೊಂಡೊಯ್ದಿದ್ದಾರೆ. ಕಿವಿಯಿಂದ ಕೇಳುವಿಕೆಯ ಮೂಲಕವೇ ಕಾವ್ಯದ ಮೌಲ್ಯವನ್ನು ಸಾಮಾನ್ಯರು ಅರಿಯಬೇಕಿದ್ದಿತು. ಸಾಮಾನ್ಯರ ಜ್ಞಾನಾರ್ಜನೆಗೆ ಇದ್ದುದು ಇದೊಂದೇ ಮಾರ್ಗ. ಆದರೆ ಗಾದೆಗಳ ಮುಖ್ಯಾಂಶವೆಂದರೆ ಕೇವಲ ಗ್ರಂಥಗಳ ಸಾರಸರ್ವಸ್ವವನ್ನೇ ಅಲ್ಲದೆ ಬದುಕಿನ ಬವಣೆಯನ್ನು ಒಂದು ಹಿಡಿಯಲ್ಲಿ ಕೊಡುವಷ್ಟು ಸಾಮರ್ಥ್ಯವನ್ನು ಪಡೆದಿದ್ದು, ಅವು ಸಾಮಾನ್ಯರ ಬಾಯಿ ಮಾತಿನಲ್ಲೇ ಹುಟ್ಟಿ ಬೆಳೆದು ಬರಲು ಅವಕಾಶವಾಗಿರುತ್ತದೆ. ಗಾದೆಯ ಸೃಷ್ಟಿ ಹೇಗಾಯಿತು ಎಂದು ಹೇಳುವುದು ಸಾಧ್ಯವಿಲ್ಲದ ಮಾತು. ಬಹುಶಃ ಪ್ರಾಚೀನ ಮಾತುಕತೆಯ ಸಂದರ್ಭದಲ್ಲಿ ಮಾತಿಗೆ ಮಾತು, ಅನುಭವಕ್ಕೆ ಅನುಭವ ಮತಿಸುತ್ತಾ ಗಾದೆಗಳು ಮಿಂಚಿನಂತೆ ಸೃಷ್ಟಿಯಾಗಿ ಅವು ಅಲ್ಲೇ ಮಾಯವಾಗದೆ ಜನಗಳ ಬಾಯಲ್ಲಿ ಮತ್ತೆ ಮತ್ತೆ ಪ್ರಯೋಗಕ್ಕೆ ಒಳಪಟ್ಟು ಉಳಿದುಕೊಂಡಿರಬೇಕು. ಹೀಗೆ ಗಾದೆಗಳು ಬದುಕಿನ ಬವಣೆಗಳ ದಟ್ಟ ಮೋಡಗಳ ನಡುವೆ ಮಿಂಚಿನಂತೆ ಹುಟ್ಟಿ ಜ್ಞಾನದ ಬೆಳಕನ್ನು ನೀಡಿರುತ್ತವೆ. ಆ ಬೆಳಕಿನಡಿಯಲ್ಲಿ ಮನುಷ್ಯ ಸಮೂಹ ತನ್ನ ಬದುಕಿನ ಭರವಸೆಯನ್ನು ಪಡೆದುಕೊಂಡಿದೆ. ಆ ಹಿನ್ನೆಲೆಯಲ್ಲಿ ಒಮ್ಮೊಮ್ಮೆ ಗಾದೆಗಳು ಒಂದೊಂದು ಘಟನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುತ್ತವೆ. ಆ ಘಟನೆ ಕಾಲಕ್ರಮೇಣ ಮರೆತುಹೋಗಿ ಗಾದೆಗಳು ಉಳಿದುಕೊಂಡಿರುತ್ತವೆ. ಆ ಘಟನೆಗಳೇ ಅನುಭವಗಳ ಹಿನ್ನೆಲೆ ಎಂತಲೂ ಹೇಳಬಹುದು.

- "ಸೇರಂಟ ಪಾವು, ತಲ್ಲಂತೆ ಪಿಲ್ಲ – ಸೇರಿನಂತೆ ಪಾವು, ತಾಯಿಯಂತೆ ಮಗಳು
- ಅವ್ವ ಪಾವೈತೆ, ಕೂತುರು ಅಚ್ಚೆರು – ಅಮ್ಮ ಪಾವಾದರೆ ಮಗಳು ಅಚ್ಚೆರು ಪಾವು"
- ನೂಲಿನಂತೆ ಸೀರೆ ತಾಯಿಯಂತೆ ಮಗಳು

ಇಲ್ಲಿ ಅಮ್ಮ ಮಗಳ ಸಂಬಂಧವನ್ನು ಕುರಿತ ಗಾದೆಗಳಾಗಿವೆ. ಅಮ್ಮ ಹೇಗೆ ಮಾದರಿಯಾಗಿರಬೇಕೆಂಬುದಕ್ಕೆ ಮೇಲಿನ ಗಾದೆಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ತಾಯಿಯ ಮಹತ್ವ, ತಾಯಿಯ ಗುಣ ಹೇಗೆ ಮಕ್ಕಳಿಗೆ ಅನುಗುಣವಾಗಿ ಬರುತ್ತದೆ. ಆದ ಕಾರಣ

ತಾಯಿಯು ಎಲ್ಲಾ ರೀತಿಯ ಅಂದರೆ ಉತ್ತಮ ಗುಣವಂತೆಯಾಗಿ ಮಕ್ಕಳ ಲಾಲನೆ ಪಾಲನೆಯಲ್ಲಿ ಇರಬೇಕು ಅವಳ ಗುಣಗಳು ಸರಾಗವಾಗಿ ಮಕ್ಕಳಿಗೆ ಬರುವ ಕಾರಣ ತಾಯಂದಿರು ಮಕ್ಕಳಿಗೆ ಆದಷ್ಟು ಉತ್ತಮ ಗುಣಗಳನ್ನು, ಕೆಲಸ ಕಾರ್ಯಗಳನ್ನು ಹೇಳಿ ಕೊಡಬೇಕು ಇಲ್ಲವಾದರೆ ದೊಡ್ಡಕ್ಕನ ಚಾಳಿ ಮನೆಮಂದಿಗೆಲ್ಲಾ ಎನ್ನುವ ಹಾಗೆ ಒಬ್ಬರು ಮಾಡಿದ ತಪ್ಪಿಗೆ ಎಲ್ಲರೂ ಹೊಣೆಯಾಗಬೇಕಾಗುತ್ತದೆ. ತಾಯಿಯ ಗುಣ ಕಾಲು ಭಾಗಕ್ಕಿಂತ ಮುಕ್ಕಾಲು ಭಾಗ ಬಂದೇ ಬರುತ್ತದೆಂಬುದು ಆಶಯವಾಗಿದೆ.

ಸಂಕನಾನ ಪಿಲ್ಲತ ಪೆಲ್ವಿನಿ ಸಂತಂತ ತಿರಿಗಿನಟ್ಲ – ಕಂಕುಳಲ್ಲಿ ಮಗು ಇಟ್ಕೊಂಡು ಊರೆಲ್ಲಾ ಹುಡುಕಿದ್ರಂತೆ. ಮನೆಯಲ್ಲಿರುವುದನ್ನು ಜರಿದು ಅದನ್ನು ಬಿಟ್ಟು ಬೇರೆ ಕಡೆ ಹುಡುಕುವುದು. ಅರಿವಿದನ್ನು ಬಿಟ್ಟು ಇರದುದರ ಕಡೆಗೆ ಹೋಗುವುದು ಹಿತ್ತಲ ಗಿಡ ಮದ್ದಲ್ಲ ಎಂಬುದನ್ನು ಬಹುಬೇಗ ಮರೆಯುತ್ತಾರೆ. ನಮ್ಮ ತಾಯಿ ಹರಿದ ಸೀರೆಯನ್ನು ಉಟ್ಟಿದ್ದರೂ ಅದನ್ನು ನೋಡದೆ ಬೇರೆಯವರ ತಾಯಿಗೆ ರೇಷ್ಮೆ ಸೀರೆ ಉಡಲು ಹೇಳಿದಂತೆ ಆಗುತ್ತದೆ. ಆದ್ದರಿಂದ ನಮ್ಮ ಬಳಿ ನಮಗೆ ಏನು ಲಭ್ಯವಿದೆಯೋ ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು. ಡಿವಿಜಿ ಮಾತು : ಇರುವುದನ್ನು ಬಿಟ್ಟು ಇರದುದರೆಡೆಗೆ ತುಡಿಯುವುದೇ ಜೀವನ ಎಂದಿದ್ದಾರೆ.

ಪಾಲಿಕಿ ಒಚ್ಚಿಂದಿ ಪಂಚಾಮೃತಂ

ಪಾಲಿಗೆ ಬಂದಿದ್ದು ಪಂಚಾಮೃತ. ಅಂದರೆ ನಮ್ಮ ಪಾಲಿಗೆ ಒದಗಿ ಬಂದಿದ್ದನ್ನು ಸರಿಯಾಗಿ ಉಪಯೋಗಿಸಿಕೊಂಡು ಅದನ್ನು ಸದುಪಯೋಗ ಪಡೆದುಕೊಳ್ಳಬೇಕೆಂಬುದು. ಯಾವಾಗಲೂ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎಂಬ ಗಾದೆ ಮಾತು ಇದೆ. ಹಾಗಾದರೆ ಮುಂದಿನ ದಿನದ ಕನಸು ಕಾಣುವುದು ತಪ್ಪೇ? ಎಂಬ ಪ್ರಶ್ನೆ ಎದುರಾಗುತ್ತದೆ. ಆದ್ದರಿಂದ ತಮಗೆ ಒದಗಿ ಬಂದ ಸುವರ್ಣಾವಕಾಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕೆಂಬುದು ಇದರ ಆಶಯವಾಗಿದೆ.

"ಕಾಟುಡು ಕಟ್ಲುಕೆ ಪೋಯೆ ಬೋರುಡು ಬೊಗ್ಗುಲಕೆ ಪೋಯೆ

ಎತ್ತು ಏರಿಗಿಳಿದರೆ ಎಮ್ಮೆ ನೀರಿಗಿಳಿಯಿತು.

ಎದ್ದುಕು ಜ್ವರ ಮಾಸ್ತೆ ಎನುಮಕು ಬರೆ

ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ"[೧೦]

ಜೀವನಶೈಲಿಯನ್ನು ಏನು ಮಾಡಬೇಕು, ಏನು ಮಾಡಬಾರದೆಂಬುದನ್ನು ಮೊದಲನೆ ಆಲೋಚನೆ ಮಾಡಿರಬೇಕು. ಆಲೋಚನೆ– ನಿರ್ಧಾರಗಳನ್ನು ಸರಿಯಾಗಿ ತೆಗೆದುಕೊಳ್ಳದಿದ್ದರೆ ಅದು ಹೇಗಾಗುತ್ತದೆಂಬುದಕ್ಕೆ ಉದಾಹರಣೆ ಇದಾಗಿದೆ. ಯಾರೋ ಮಾಡಿದ ತಪ್ಪಿಗೆ ಯಾರೋ ಶಿಕ್ಷೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ಅನ್ಯಾಯವಾಗದ ಹಾಗೆ ಎಚ್ಚರಿಕೆಯಿಂದಿರಬೇಕು. ನೀತಿಗೆ ಯಾವಾಗಲೂ ಬೆಲೆ ಇದ್ದೇ ಇರುತ್ತದೆ. ಪ್ರತಿಯೊಬ್ಬರು ಸರಿಯಾದ ನೀತಿಯ ಆಚರಣೆಯನ್ನು ಪಾಲನೆ ಮಾಡಿದರೆ ಯಾವುದೇ ಅನಾಹುತ ಆಗುವುದಿಲ್ಲ. ಯಾರಾದರೂ ಸರಿ ಯಾವುದೇ ಅನಾಹುತಕ್ಕೆ ಎಡೆಮಾಡಿಕೊಡಬಾರದು.

- "ಘನ್ನಕೆ ಮುದ್ಯನ್ನಾಕುಂಡ ಜುಟ್ಟುಕು ಮಲ್ಲೆ ಪುಲಂಟೆ– ಹೊಟ್ಟಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು
- ಕಷ್ಟಮು ನಾನಾ ಪಟ್ಟನಾಡೆ ಆಪ್ತಡು– ಆಪತ್ತಿಗಾದವನೆ ನೆಂಟ
- ಕಷ್ಟಮು ಪಡಿ ದುಡ್ಯಾಲ ರಾಜನುತರ ತಿನ್ನಾಲ– ಆಳಾಗಿ ದುಡಿ ಅರಸನಾಗಿ ಉಣ್ಣು.
- ಅಯ್ಯೋದಂತ ಮಂಚಿದನಿಕೆ– ಆಗುವುದೆಲ್ಲ ಒಳ್ಳೆಯದಕ್ಕೆ
- ನಿಧಾನಮೆ ಪ್ರಧಾನಮು– ತಾಳಿದವನೇ ಬಾಳಿಯಾನು
- ದುಡ್ಡುಕಿಂತ ಗುಣಮು ಮುಖ್ಯಂ– ಹಣಕ್ಕಿಂತ ಗುಣವೇ ಮೇಲು"[೧೧]

ತಿನ್ನುವುದಕ್ಕೆ ಮುದ್ದೆ ಇಲ್ಲ ಅಂದರೂ ಜುಟ್ಟಿಗೆ ಮಲ್ಲಿಗೆ ಹೂವಂತೆ. ಅಂದರೆ ಅನಾವಶ್ಯಕವಾಗಿ ಆಡಂಬರ ಬೇಡ. ಅನುಕೂಲ, ಅವಶ್ಯಕತೆಗಳಿಗೆ ತಕ್ಕಂತೆ ಜೀವನಶೈಲಿ ಇರಬೇಕು. ಇಲ್ಲವಾದರೆ ತಿನ್ನೋದು ಬದನೆ ಹೇಳೋದು ವೇದಾಂತ ಅನ್ನೋಹಾಗೆ! ಯಾವಾಗಲೂ ಪ್ರಾಥಮಿಕ ಹಂತ ನೋಡಿಕೊಂಡು ಉಳಿದದ್ದು ಅವಶ್ಯಕತೆಗೆ ಅನುಗುಣವಾಗಿ ತಯಾರಿ ಮಾಡುವುದು ಒಳಿತು. ಹಾಗಂತ ಸುಮ್ಮನೆ ಕೂತರೆ ಜೀವನ ನಡೆಯುವುದಿಲ್ಲ. ಆಳಾಗಿ ದುಡಿದು ಅರಸನಾಗಿ ಊಟ ಮಾಡಬೇಕು. ಅಂದರೆ ಕೆಲಸದವರ ತರಹ ಮೈಮುರಿದು ಕೆಲಸ ಮಾಡಬೇಕು. ಅವರು ಕೆಲಸ ಮಾಡಿದ್ದಕ್ಕೆ ಪ್ರತಿಯಾಗಿ ಕೈತುಂಬಾ ಹಣ ಸಿಗುತ್ತದೆ. ಕೆಲವೊಂದು ಸಂದರ್ಭದಲ್ಲಿ ಕಷ್ಟ ಬಂದಾಗ ಆಪತ್ಕಾಲಕ್ಕೆ ಯಾರು ಆಗುತ್ತಾರೋ ಅವರೇ ನಿಜವಾದ ಮಿತ್ರರು ಅವರನ್ನು ಸದಾಕಾಲ ನೆನಪಿನಲ್ಲಿಟ್ಟುಕೊಳ್ಳಬೇಕು.ಅದಕ್ಕಾಗಿ ನಿಧಾನವಾಗಿ ಯೋಚನೆ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಸಮಾಧಾನದಿಂದ ಇದ್ದರೆ ಎಲ್ಲಾ ಕೆಲಸ ಕಾರ್ಯಗಳು ಆಗಲು ಸಾಧ್ಯವಾಗುತ್ತದೆ. ಅವಸರವೇ ಅಪಾಯಕ್ಕೆ ಕಾರಣ ಎಂಬಂತೆ ಮಾಡಬಾರದು. ಮುಖ್ಯವಾಗಿ ಹಣಕ್ಕಿಂತ ಗುಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಆಗ ನಿಜವಾದ ಬಣ್ಣ ಗುಣ ಗೊತ್ತಾಗಲು ಸಾಧ್ಯ.

- "ಕಷ್ಟಮು ಪಡಿದುಡ್ಯಾಲ ರಾಜನುತರ ತಿನ್ನಾಲು– ಆಳಾಗಿ ದುಡಿ ಅರಸನಾಗಿ ಉಣ್ಣು
- ಅಯ್ಯೋದಂತ ಮಂಚಿದೆನಿಕೆ– ಆಗುವುದೆಲ್ಲ ಒಳ್ಳೆಯದಕ್ಕೆ
- ಉಪ್ಪು ತಿನ್ನಾಡು ನೀಡ್ಲು ತಾಗುತಾಡು– ಉಪ್ಪು ತಿಂದವನು ನೀರು ಕುಡಿಯಲೇ ಬೇಕು.
- ಅತ್ತಕು ಒಕ ಕಾಲಮು ಕೋಡಲಮು ಒಕ ಕಾಲಮು– ಅತ್ತೆಗೊಂದು ಕಾಲ ಸೊಸೆಗೊಂದು ಕಾಲ
- ಸಿಂತನ್ಯಾರುನ್ನಾನಿಕಿ ಸಂತನಾನ ನಿದ್ರಂಟೆ– ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ರೆಯಂತೆ.
- ಯಾವ ಪುಟ್ಟುಗಡ್ಡನಾನ ಯಾವ್ ಪಾಮು ಉಂಟುದನೋ ಯಾರಿಕಿ ಗೊತ್ತು– ಯಾವ ಹುತ್ತದಲ್ಲಿ ಯಾವ ಹಾವು ಇದೆಯೋ ಯಾರಿಗೆ ಗೊತ್ತು

- ಸೊನ್ನಲು ಒಚ್ಚಿನ ಪಿಲ್ಲಕು ನ್ಯಾಲ ಕೊಮಿದು

  ಮೀಸಲು ಒಚ್ಚಿನ ವಾಣಿಕಿ ಪ್ರಪಂಚಂ ಕೊಮಿದು

  ಮೊಲೆ ಬಂದವಳಿಗೆ ನೆಲ ಕಾಣುವುದಿಲ್ಲ, ಮೀಸೆ ಬಂದವನಿಗೆ ದೇಶ ಕಾಣುವುದಿಲ್ಲ.
- ಸಂಸಾರಂ ಗುಟ್ಟು ವ್ಯಾದಿರಟ್ಟು– ಸಂಸಾರದ ಗುಟ್ಟು ವ್ಯಾದಿರಟ್ಟು
- ಇಚ್ಚಂದಿ ಬೆಳಸ್ತುದೆ ಜಡಿ ಬೆಟ್ಟಿಂದಿ ಕೊಳಸ್ತುದೆ– ಕೊಟ್ಟದ್ದು ಬೆಳೆಸುತ್ತದೆ, ಬಚ್ಚಿಟ್ಟದ್ದು ಕೊಳೆಸುತ್ತದೆ.
- ಅಂಗಳ ಮಾನುನ ತೆಲ್ಲಗ ನೋನಿಂಟಿನಾನ ನೆಲ್ಲಗೆ– ಒಳಗೊಂದು ಮಾತು ಹೊರಗೊಂದು ಮಾತು
- ಸೂಸನಕ್ಕೆ ಮಂಚ್ಯಾಡು ಕೋಸನಾಭಟ್ಟ– ನೋಡೋಕೆ ಚನ್ನಾಗಿದ್ದಾನೆ ಕೊಳಕು ಮನಸು
- ಒಕ್ಕ ಕೊನ್ನುಕೆ ಸುನ್ನಮು ಒಕ ಕೊನ್ನುಕಿ ನಯೆ– ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ
- ಎದ್ಲ ಪಂಡುವನಾನ ಎದ್ದಲ್‌ನ ಸೂಸ ಕೊಡದ್ರು

  ಗೌರಿ ಪಂಡುಗನಾಡ ಪಿಲ್ಲತ ಸೂಡ ಕೊಡದು– ಎತ್ತಿನ ಜಾತ್ರೆಯಲ್ಲಿ ಎತ್ತನ್ನು ನೋಡಕೂಡದು, ಗೌರಿ ಹಬ್ಬದಲ್ಲಿ ಹೆಣ್ಣುಮಕ್ಕಳನ್ನು ನೋಡಬಾರದು
- ಗ್ವಾಡತೆ ನೊಮ್ಮಿರೆನಿ ನೆರಿಪಿತ ತನ್ನಿವಟ್ಲು"೧೨

ಒಮ್ಮೊಮ್ಮೆ ಗಾದೆಗಳು ಒಂದೊಂದು ಘಟನೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುತ್ತವೆ. ಆ ಘಟನೆ ಕಾಲಕ್ರಮೇಣ ಮರೆತುಹೋಗಿ ಗಾದೆಗಳು ಉಳಿದುಕೊಂಡಿರುತ್ತವೆ. ಆ ಘಟನೆಗಳನ್ನೇ ಅನುಭವದ ಹಿನ್ನೆಲೆ ಎಂತಲೂ ಹೇಳಬಹುದಾಗಿದೆ. ಮೂಢನಂಬಿಕೆಗಳ ಹಿನ್ನೆಲೆಯಲ್ಲಿಯೂ ಗಾದೆಗಳು ಸೃಷ್ಟಿಯಾಗಿರಬಹುದು. ಕೇವಲ ಮೂಢನಂಬಿಕೆ ಮಾತ್ರವಲ್ಲ ನಾಡಿನ ಎಲ್ಲಾ ಜನ ವರ್ಗ, ಆಚರಣೆ, ಹಬ್ಬ ಹರಿದಿನ, ಸಂಪ್ರದಾಯ ಇವುಗಳ ಹಿನ್ನೆಲೆಯಲ್ಲಾ ಗಾದೆಗಳು ಪ್ರಚಾರಕ್ಕೆ ಬಂದಿವೆ. ಗಾದೆಗಳನ್ನು ವಿಂಗಡಿಸಿ ಅವುಗಳನ್ನು ವಿಭಾಗ ಮಾಡಿ ನೋಡುವುದು ಹೇಗೆ ಶ್ರಮ ಸಾಧ್ಯವೋ ಅದರ ಒಂದು ಶಾಖೆಯಿಂದ ಗಾದೆಯನ್ನೂ ವಿಭಾಗಕ್ಕೆ ಒಳಪಡಿಸಿ ನೋಡುವುದು ಸಮಸ್ಯೆ ಗಾದೆ ತನ್ನ ಶರೀರದಲ್ಲಿ ಎಷ್ಟು ಕಿರಿದೋ ಗುಣದಲ್ಲಿ ಅಷ್ಟೇ ಹಿರಿದು ಎಂಬ ವಿಷಯ ಈಗಾಗಲೇ ಎಲ್ಲರ ಅರಿವಿಗೆ ಬಂದ ವಿಷಯ. ಹಾಗೆ ಗುಣ ಹಿರಿದಾಗಿರುವ ಗಾದೆಯ ಲಕ್ಷಣವೇನು ಎಂಬುದಕ್ಕೆ ಯಾವ ವಿದ್ವಾಂಸರೂ ಸಮರ್ಪಕವಾಗಿ ಹೇಳಲಾಗಿಲ್ಲ. ಅನುಭವ ಸಾರವನ್ನೆಲ್ಲಾ ಗಾದೆಗಳ ಸ್ವರೂಪದಲ್ಲೇ ಹಿಡಿದಿಡಲಾಗದೇ ಒಂದು ವಿಚಿತ್ರ ಸಂಗತಿ. ಇದನ್ನೇ ಎ.ಕೆ ರಾಮಾನುಜನ್ ಅವರು ಗಾದೆ ಎಂಬ ವಿಷಯದ ವ್ಯಾಪ್ತಿಯನ್ನು ವೈವಿಧ್ಯತೆಯನ್ನು ಸಜೀವ ಸ್ಪಂದನವನ್ನು ಒಂದು ವಾಕ್ಯದ ಸೂತ್ರಕ್ಕೆ ಕತ್ತರಿಸಲು ಬರುವುದಿಲ್ಲ ಎಂದಿದ್ದಾರೆ.

ಇನ್ನು ಗಾದೆಗಳ ಹುಟ್ಟಿನ ನೆಲೆ ಬಹುಮಟ್ಟಿಗೆ ಗ್ರಾಮ ಪ್ರದೇಶವೇ. ಸದ್ಯಕ್ಕೆ ಬೇರೆ ಭಾಷೆಯ ಗಾದೆಗಳನ್ನು ಬಿಟ್ಟು ಕನ್ನಡದ ಗಾದೆಗಳನ್ನೇ ತೆಗೆದುಕೊಳ್ಳುವುದಾದರೆ ಕನ್ನಡದ ಮುಕ್ಕಾಲು ಮಪಾಲು ಗಾದೆಗಳು ಗ್ರಾಮೀಣ ಭಾಗದಲ್ಲಿ ಹುಟ್ಟಿದಂತೆ ಕಾಣುತ್ತವೆ. ಅಲ್ಲದೆ ಗಾದೆ ವ್ಯವಸಾಯದ ಹಿನ್ನೆಲೆಯಲ್ಲಿಯೇ ಸೃಷ್ಟಿಯಾಗಿರುತ್ತದೆ. ತದ ನಂತರ ಈ ಗಾದೆಗಳು ಬಹುಪಾಲು ಪುರುಷ ಸೃಷ್ಟಿಯೇ ಆಗಿರುತ್ತವೆ. ಯಾವ ಗಾದೆಯೂ ಗಂಡಿನ ನಿಂದನೆಯನ್ನು ಹೇಳುವುದಿಲ್ಲ. ಗಾದೆಗಳಲ್ಲಿ ಬಹಳ ಗೌರವದಿಂದಲೇ ಗಾದೆಯೆಂಬುದು ಬೀದಿಯ ಜ್ಞಾನ ಎಂಬ ಮಾತು ಸೃಷ್ಟಿಯಾಗಿರಬೇಕು.

"ತುಪ್ಪದಂತೆ ಇದ್ದರೂ ತುರುಕರನ್ನು ನಂಬಬಾರದು"

"ಬೆಲ್ಲದಂತೆ ಇದ್ದರೂ ಬ್ಯಾಡರನ್ನು ನಂಬಬೇಡ"

'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ' ಎಂಬ ಜನಪ್ರಿಯ ಗಾದೆಯನ್ನು ತೆಗೆದುಕೊಂಡರೆ ತಾಯಿಯ ಘನತೆಯನ್ನು ಕುರಿತಾಗಿ ಹೇಳುವ ಈ ಗಾದೆ ಜಗತ್ತಿನಾದ್ಯಂತ ಬೇರೆ ಬೇರೆ ರೂಪಗಳಲ್ಲಿಯೂ ಇರಬಹುದು. ಒಂದು ಬಗೆಯಲ್ಲಿ ಉಪ್ಪು ಅನಾದರಕ್ಕೆ ಈಡಾದ, ಆದರೆ ಅನಿವಾರ್ಯ ಬೇಕಾಗುವ ಪದಾರ್ಥ. ತಾಯಿಯೂ ಹಾಗೆಯೇ ಹೆಣ್ಣಿನ ಸ್ಥಾನ ಹಿಂದಿನ ಸಮಾಜದಲ್ಲಿ ಅಷ್ಟೇನೂ ಘನವಾದುದಾಗಿರಲಿಲ್ಲ. ಗಂಡಿನ ಹೊರವ್ಯವಹಾರಗಳಲ್ಲಿ ಆಕೆಯ ಪಾತ್ರವೇನೂ ಇರಲಿಲ್ಲ. ಮನೆಯ ಒಳಗೆ ಮಾತ್ರ ಆಕೆಯ ಓಡಾಟ. ಮನೆಯೊಳಗೂ ಒಂದು ಕೋಣೆಯಲ್ಲಿ ಮಾತ್ರ ಆಕೆಯ ಕೆಲಸ. ಆ ಕೋನೆಯಲ್ಲೂ ಆಕೆ ಮಾಡುವ ಅಡಿಗೆ ಹೊರಗಿನ ಗಂಡಸರ ನಾಲಗೆಯ ರುಚಿಯನ್ನು ಅನುಸರಿಸಿ ಇರಬೇಕೇ ಹೊರತು ಅವಳ ಬಾಯಿ ಸವಿಯನ್ನು ಅವಲಂಬಿಸಿ ಇರುವಂತಿಲ್ಲ. ಇಷ್ಟಾಗಿ ಆಕೆಗೆ ತನ್ನ ಮನಸ್ಸಿನ ರುಚಿ ಮುಖ್ಯವೂ ಅಲ್ಲ. ಮನೆಯ ಹಿರಿಯರ, ಮಕ್ಕಳ ರುಚಿಯೇ ಅಧಿಕ. ಯಾವ ಸಂದರ್ಭದಲ್ಲಿಯೂ ಆಕೆಗೆ ತಾನು ಪಡೆದ ಗಂಡು ಅಥವಾ ಹೆಣ್ಣು ಮಕ್ಕಳ ಮೇಲೆ ಮೋಹ ಕಡಿಮೆಯಾಗುವುದಿಲ್ಲ. ಹೆಣ್ಣು ಮಕ್ಕಳು ಕಷ್ಟಕ್ಕೆ ದಾರಿ ಎಂಬ ಭಾವನೆಯನ್ನು ಪುರುಷ ಪ್ರಧಾನ ಸಮಾಜವೇ ಹುಟ್ಟುಹಾಕಿದೆ ಹೊರತು ಹೆಣ್ಣು ತಾನಾಗಿದ್ದು ತನಗೆ ಹುಟ್ಟಿರುವ ಹೆಣ್ಣು ಮಗುವನ್ನು ಅನಾದಾರದಿಂದ ನೋಡುವುದಿಲ್ಲ. ತಾಯಂದಿರಿಗೆ ತನ್ನ ರೂಪ ಗುಣವನ್ನೇ ಹೋಲುವ ಹೆಣ್ಣು ಮಕ್ಕಳು ಇಷ್ಟ ಹೀಗಾಗಿ ತಾಯಂದಿರು ಹೆಣ್ಣುಮಕ್ಕಳ ಬಗ್ಗೆ ತಾಳುವ ಅನಾದಾರ ಅದು ಸಮಾಜದ ಕಡೆಯಿಂದ ಹುಟ್ಟಿಕೊಂಡಿದ್ದೇ ಹೊರತು ಹೆಣ್ಣಿನ ಅಂತರಂಗದಿಂದಲೇ ಬಂದಂತಹ ತಿಳಿವಳಿಕೆಯಲ್ಲ. ಈ ನಿಟ್ಟಿನಲ್ಲಿ ತಾಯಿಯ ತ್ಯಾಗ ದೊಡ್ಡದು ಮಕ್ಕಳಿಗಾಗಿ ಆಕೆ ಎದುರಿಸುವ ಕಷ್ಟ ಕಾರ್ಪಣ್ಯಗಳು ಬಗೆಬಗೆಯವುಗಳು ಇವೆಲ್ಲದರ ನಡುವೆ ತಾಯಿಯು ಮಕ್ಕಳ ತಾತ್ಸಾರಕ್ಕೂ ಒಳಗಾಗಬಹುದು.

ವಿವಾಹದ ನಂತರ ಮಕ್ಕಳು ಹೆಂಡಂದಿರ ಮೋಹಕ್ಕೆ ಒಳಗಾಗಿ ತಾಯಂದಿರನ್ನು ಮರೆಯಬಹುದು. ಸೊಸೆಯಾದರೂ ಅಷ್ಟೇ ಆಕೆ ತನ್ನ ಗಂಡನ ಸೇವೆಗೇ ಬಂದಿರಬಹುದು. ಉಳಿದವರ ಸಹಾಯಕ್ಕಲ್ಲ. ಎಂಬ ಭಾವನೆಯಲ್ಲಿಯೇ ಇರುವುದು ಹೆಚ್ಚು. ಮಗಳು ವಯಸ್ಸಿಗೆ ಬಂದ ಮೇಲೆ ಅನ್ಯರ ಎಡೆ

ಸೇರಿರುತ್ತಾಳೆ. ಹೀಗಾಗಿ ತಾಯಿಯ ವಯಸ್ಸು ಕಳೆದಂತೆಲ್ಲಾ ಒಂಟಿಯಾಗಿ ಬಿಡುವ ಸಾಧ್ಯತೆ ಹೆಚ್ಚು. ಹೀಗೆ ಒಂಟಿಯಾದಾಗಲೂ ಮಕ್ಕಳ ಬಗೆಗೆ ಆಕೆಯ ಮೋಹ ಕಡಿಮೆಯಾಗುವುದಿಲ್ಲ. ಹುಟ್ಟಿದ ದಿನ ತನ್ನ ಮಗ್ಗುಲಲ್ಲಿ ಮಲಗಿರುವ ತನ್ನ ಕಂದನ ಬಗ್ಗೆ ಆಕೆಗೆ ಯಾವ ರೀತಿಯ ಆಕರ್ಷಣೆ ಹುಟ್ಟಿರುತ್ತದೆಯೋ ಅದೇ ಮೋಹ ಬೆಳೆದ ಮಕ್ಕಳ ಮೇಲೂ ಉಳಿದಿರುತ್ತದೆ. ಈ ಅರ್ಥದಲ್ಲಿಯೇ ತಾಯಿಗಿಂತ ಬಂಧುವಿಲ್ಲ ಎಂಬ ಮಾತು ಹುಟ್ಟಿದ್ದು. ಉಪ್ಪಿಗಿಂತ ರುಚಿಯಿಲ್ಲ ಎಂಬ ಇನ್ನೊಂದು ಮಾತಿನೊಡನೆ ಸೇರಿಕೊಂಡು ಪ್ರಚಾರಕ್ಕೆ ಬಂದಿದೆ. ತಾಯಿಗೆ ಮನೆಯಲ್ಲಿ ಮಕ್ಕಳ ಮುಂದೆ, ಸಮಾಜದಲ್ಲಿ ಯಾವುದೇ ಪ್ರತ್ಯೇಕ ವ್ಯಕ್ತಿತ್ವ, ವರ್ಚಸ್ಸು, ಸ್ಥಾನಮಾನ ಎಂಬುದು ಇರುವುದಿಲ್ಲ ನಿಜ. ಆದರೆ ಆಕೆಯನ್ನು ಬಿಟ್ಟು ಮಕ್ಕಳಾಗಲೀ ಗಂಡನಾಗಲೀ ಬದುಕಲು ಸಾಧ್ಯವಿಲ್ಲ. ಎಲ್ಲರ ಹೊಟ್ಟೆ ತುಂಬುವ ಜೀವನ ದ್ರವ್ಯ ಆಕೆಯ ಕೈಯಿಂದಲೇ ಸಿದ್ದವಾಗಿರಬೇಕು. ಈ ದೃಷ್ಟಿಯಿದ್ದೂ ಅನಾದರಕ್ಕೆ ಒಳಗಾದವಳು. ಇದೇ ಸ್ಥಿತಿ ಉಪ್ಪಿನದ್ದೂ ಸಹ. ಯಾವುದೇ ಅಡುಗೆಗೆ ಉಪ್ಪಿಲ್ಲದೆ ರುಚಿ ಬರುವುದೇ ಇಲ್ಲ. ಆದರೆ ಉಪ್ಪಿಗೆ ಅಡುಗೆ ಮನೆಯಲ್ಲಿ ಪ್ರತ್ಯೇಕ ಸ್ಥಾನಮಾನ ಇದೆಯೇ ಎಂದರೆ ಇಲ್ಲ. ಅಡುಗೆಯ ಇತರ ಪರಿಕರಗಳಿಗೆ ಸ್ಥಾನಮಾನ ಇರಬಹುದು. ಸಕ್ಕರೆ, ಅಕ್ಕಿಗೆ ಇರಬಹುದು. ಆದರೆ ಉಪ್ಪಿಗೆ ಪ್ರತ್ಯೇಕ ರುಚಿಯಿಲ್ಲ. ಅದರ ಒಂದು ಚೂರನ್ನೂ ಬಾಯಿಗೆ ತೆಗೆದು ಹಾಕುವಂತಿರುವುದಿಲ್ಲ. ಅಡಿಗೆಗೆ ಉಪಯೋಗಿಸುವುದೊಂದನ್ನು ಬಿಟ್ಟರೆ ಬೇರೆ ಸಂದರ್ಭದಲ್ಲಿ ಅದರ ಅಗತ್ಯವೇ ಇಲ್ಲವೇನೋ ಎನ್ನುವಂತ ಭಾವ ಉಪ್ಪಿನ ಬಗೆಗೆ ಇರುತ್ತದೆ. ಇನ್ನೂ ಗಮನಿಸಬೇಕಾದ ಒಂದು ಮುಖ್ಯ ಸಂಗತಿ ತಾಯಿ ಮತ್ತು ಉಪ್ಪು ಇವೆರಡರ ಸ್ಥಾನಮಾನ ಇರುವುದು ಅಡಿಗೆ ಮನೆಯಲ್ಲಿಯೇ. ಹೀಗಾಗಿ 'ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ ಎಂಬೆರಡು ಮಾತು ಚೆನ್ನಾಗಿ ಹೊಂದಿಕೊಂಡು ಪ್ರಚಾರಕ್ಕೆ ಬಂದಿರುತ್ತದೆ.

ಹೀಗೆ ಗ್ರಾಮ ಸಮುದಾಯದ ನಡುವೆ ಅಸಂಖ್ಯಾತವಾಗಿ ವ್ಯವಸಾಯದ ಹಿನ್ನೆಲೆ, ಬಂಧು ಬಳಗದ ಹಿನ್ನೆಲೆ, ಹಬ್ಬ ಹರಿದಿನ ಸಂಪ್ರದಾಯಾಚರಣೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಗಾದೆಗಳು ಅಸ್ತಿತ್ವವನ್ನು ಉಳಿಸಿಕೊಂಡು ಪ್ರಯೋಗವಾಗುತ್ತಲಿದೆ. ಜನ ತಾವು ಹತ್ತು ಬಾರಿ ಆಡಿ ಸ್ಪಷ್ಟಪಡಿಸಬೇಕಾದ ಮಾತಿನ ಸಂದರ್ಭವನ್ನು ಒಂದು ಗಾದೆಯ ಮೂಲಕ ಆಡಿ ಮುಗಿಸಿಬಿಡುತ್ತಾರೆ. ಗ್ರಾಮ ಸಮುದಾಯದಲ್ಲಿ ಈ ಬಗೆಯ ಮಾತಿನ ಬಳಕೆ ಹೆಚ್ಚು. ಇದೇ ಗ್ರಾಮಸ್ಥರು ತಮ್ಮ ಮುಖ್ಯ ಕಸುಬು ಆದ ವ್ಯವಸಾಯಕ್ಕೆ ಮಳೆಯನ್ನೇ ನಂಬಿರುವುದು ಹೆಚ್ಚು. ಈ ಮಳೆ ಕುರಿತಾಗಿಯೂ ಅನೇಕ ಗಾದೆಗಳಿವೆ. ಆಯಾ ಕಾಲಕ್ಕೆ ಬರುವ ಮಳೆಯ ಗುಣಲಕ್ಷಣಗಳನ್ನೇ ಕುರಿತು ಗಾದೆಗಳು ಹುಟ್ಟಿಕೊಂಡಿವೆ. ಈ ಅಭಿಪ್ರಾಯವೂ ಕೂಡಾ ಗಾದೆಗಳೆಂಬವು ಪಟ್ಟಣಕ್ಕಿಂತ ಹಳ್ಳಿಗಳಲ್ಲಿಯೇ ಹುಟ್ಟಿ ಬೆಳೆದಿದ್ದು ಹೆಚ್ಚು ಎಂಬುದನ್ನು ಪುಷ್ಟೀಕರಿಸುತ್ತವೆ. ಇದರಿಂದ ಗಾದೆಗಳ ಉಗಮದ ಸಂದರ್ಭ, ಘಟನೆ ಇದರ ಗುಣ ಸ್ವರೂಪವನ್ನು ಸೂತ್ರೀಕರಿಸಿ ಹೇಳಲಾಗದಿದ್ದರೂ ಗಾದೆಗಳ ಹುಟ್ಟಿನ ಪರಿಸರವನ್ನಂತೂ ಗುರುತಿಸಬಹುದು.ಅಲ್ಲದೆ ಗಾದೆಗಳ ಭಾಷಾ ಪ್ರಯೋಗದ ಹಿನ್ನೆಲೆಯಲ್ಲಿ ಇದು

ಯಾವ ಪ್ರದೇಶದ ಗಾದೆಯಾಗಿರಬಹುದು ಎಂತಲೂ ಹೇಳಬಹುದಾಗಿರುತ್ತದೆ. ಉಳಿದಂತೆ ಗಾದೆಯ ಅರ್ಥವ್ಯಾಪ್ತಿ, ಹಿನ್ನೆಲೆ ಘಟನೆ ಇವನ್ನೆಲ್ಲಾ ಅರಿಯುವುದು ಕಷ್ಟ. ಅವುಗಳ ಸಂಖ್ಯೆ ಅರಿಯುವುದು ಸಮಸ್ಯೆಯೇ.

ಹೆಣ್ಣಿನ ನಿಂದನೆ ಬಹಳಷ್ಟು ಇರುತ್ತದೆ. ಹಾಗಾಗಿ ಭಾಷೆಗೆ, ಬದುಕಿಗೆ ಯಜಮಾನರೆನಿಸಿಕೊಂಡ ಗಂಡಸರೇ ಜವಬ್ದಾರರಂತೆ ವರ್ತಿಸಿದಾಗ ಸಾಹಿತ್ಯ ಸೃಷ್ಟಿಗೆ ಕವಿಗಳು ಹೇಗೆ ಕಾರಣರೋ ಹಾಗೆ ಗಾದೆಗಳ ಸೃಷ್ಟಿಗೆ ಗಂಡಸರೇ ಅವರ ವ್ಯವಸಾಯ ಜೀವನದ ಅನುಭವಗಳು ಕಾರಣವಾಗಿರುತ್ತದೆ. ಇದರ ವಿರುದ್ಧ ದಿಕ್ಕಿನಲ್ಲಿ ಹೆಂಗಸರು ಗಂಡಸರು ನಿಂದಿಸಿ ಆಡಿರುವ ಗಾದೆಗಳು ಕಡಿಮೆ. ಪುರುಷ ಪ್ರಧಾನ ಸಮಾಜದಲ್ಲಿ ಇದನ್ನು ಅನುಮಾನಿಸಿ ನೋಡುವಂತಿಲ್ಲ. ಇನ್ನೂ ಪಟ್ಟಣ ಪ್ರದೇಶಗಳಲ್ಲಿ ಗಾದೆಗಳ ಸೃಷ್ಟಿ ಕಡಿಮೆಯೆನ್ನಬೇಕು. ಪಟ್ಟಣದ ಯಾವುದೇ ವ್ಯಕ್ತಿ ಗ್ರಾಮೀಣ ವ್ಯವಸಾಯ ಕೊಡುವ ದೊಡ್ಡ ಅನುಭವವನ್ನು ತಂದುಕೊಡುವುದಿಲ್ಲ. ಅಥವಾ ಪುಸ್ತಕ ಜ್ಞಾನ, ಅಕ್ಷರ ಜ್ಞಾನ ಮುಂದಾಗುವುದಾದರ, ಗ್ರಾಮೀಣ ಭಾಷೆ ಸಹಜವಾಗಿಯೇ ಕಡಿಮೆಯಾಗುತ್ತದೆ. ಹೀಗಾಗಿ ಗಾದೆಗಳ ಹುಟ್ಟು ಪಟ್ಟಣ ಪ್ರದೇಶಗಳಿಗಿಂತ ಹಳ್ಳಿಗಳಲ್ಲಿಯೇ ಹೆಚ್ಚು. ಈಗಲೂ ಗಾದೆಗಳು ಜೀವಂತವಾಗಿರುವುದು ಗ್ರಾಮೀಣ ಪ್ರದೇಶಗಳಲ್ಲಿಯೇ ಎಂಬುದು ಸರ್ವವಿದಿತ. ಆದರೆ ಗ್ರಾಮೀಣ ಪ್ರದೇಶದಿಂದ ವಲಸೆ ಹೊರಟು ನಗರ ಪ್ರದೇಶದಲ್ಲಿ ವಿದ್ಯಾವಂತರಾಗಿ ನೆಲೆಸುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಪಟ್ಟಣಗಳಲ್ಲಿ ಬದುಕುವವರು ಅಲ್ಪಸ್ವಲ್ಪ ಬದಲಾವಣೆಗಳೊಡನೆ ಗಾದೆಗಳನ್ನು ಬಳಸುವುದಿದೆ. ಹೀಗೆ ಗಾದೆಗಳು ನೂರಾರು ವರ್ಷಗಳಲ್ಲಿ ಯಾವ್ಯಾವುದೋ ಘಟನೆಗಳ ಆಧಾರವಾಗಿ ಉಳಿದುಕೊಂಡು ಬಂದಿವೆ. ಯಾವ್ಯಾವ ಗಾದೆಯ ಹಿಂದೆ ಇತಿಹಾಸದ ಇಲ್ಲವೆ ಬದುಕಿನ ಯಾವ್ಯಾವ ಘಟನೆಗಳು ಅಡಗಿವೆಯೋ ಊಹಿಸುವುದು ಕಷ್ಟ. ಒಟ್ಟಿನಲ್ಲಿ ಜನಸಾಮಾನ್ಯರ ಬದುಕಿನ ಸ್ಮಾರಕಗಳಾಗಿ ಗಾದೆಗಳು ರೂಪು ಪಡೆದಿವೆ.

ಅತಿಯಾಸೆ ಗತಿಗೆಡಿಸಿತು, ಅತಿಸ್ನೇಹ ಗತಿಗೆಡಿಸಿತು ಇಂಥ ಗಾದೆ ಮಾತು ದೇಶದ ಎಲ್ಲೆಡೆ ಕಾಣಸಿಗುತ್ತದೆ. ಆಸೆ, ಸ್ನೇಹ ಎರಡೂ ಒಂದು ಸಮಪ್ರಮಾಣದಲ್ಲಿದ್ದರೆ ಅದು ಚಂದ ಕಾಣುತ್ತದೆ. ಅವುಗಳ ಬಳಕೆ ಹೆಚ್ಚಾದರೆ ಅದು ಗತಿಗೆಡುವ ಸಂದರ್ಭ ಹೆಚ್ಚಾಗುತ್ತದೆ. ಆಸೆಯನ್ನು ಕುರಿತೇ ಅನೇಕ ಧರ್ಮಗಳು ಹೇಳಿಕೆಗಳನ್ನು ನೀಡಿವೆ. ಆಸೆಯೇ ದುಃಖಕ್ಕೆ ಮೂಲ ಎಂಬ ಬುದ್ದನ ಹೇಳಿಕೆಯು ಸುಪ್ರಸಿದ್ಧವಾದುದಾಗಿದೆ. ಜೈನ ಧರ್ಮದ ಮೂಲ ಮಂತ್ರ ಕೂಡ ಅಹಿಂಸಾ ಪರಮೋ ಧರ್ಮ ಎಂಬುದು. ಈ ಎರಡೂ ಮುಖ್ಯ ಧರ್ಮಗಳ ಹೇಳಿಕೆಗಳು ಆಸೆಯನ್ನು ಕುರಿತದ್ದೇ ಆಗಿವೆ. ಹೇಳಿಕೆಗಳು ಸಾಮಾನ್ಯ ಬದುಕಿನಿಂದ ಹಿಡಿದು ಅರಮನೆಯ ಬದುಕಿನವರೆಗೆ ತಮ್ಮ ಅಭಿಪ್ರಾಯದ ಬೇರಳನ್ನು ತೋರಿಸುತ್ತವೆ. ಇಲ್ಲಿ ಸಾಮಾನ್ಯರ ವಿಚಾರವನ್ನು ಕೈಬಿಡಬಹುದು. ಆದರೆ ಈ ಆಸೆ ಎಂಬುದು ತನ್ನ ಕರಾಳ ಹಸ್ತಗಳನ್ನು ಚಾಚಿ ಬದುಕನ್ನು ಕೆಡಿಸಿದ್ದು ಎಂದರೆ ಅರಮನೆಗಳಲಿ ರಾಜ್ಯ ಸಾಧಿಸುವ, ನೆರಳನ್ನು ಹಿಡಿಯುವ ಅಗಾಧ ಆಸೆಯನ್ನು ತಲೆಯಲ್ಲಿ ಹೊತ್ತು ರಾಜ ಮಹಾರಾಜರು

ಅಸಂಖ್ಯ ಸೈನ್ಯ ಕಟ್ಟಿಕೊಂಡು ಯುದ್ಧದಲ್ಲಿ ನಿರತರಾಗುವುದು ಇತಿಹಾಸದ ಉದ್ದಕ್ಕೂ ಕಾಣಸಿಗುತ್ತದೆ. ಅವರೆಲ್ಲರೂ ಗೆಲ್ಲುತ್ತಾ ಸೋತಿದ್ದಾರೆ. ಸೋಲುತ್ತಲೇ ಸತ್ತಿರುತ್ತಾರೆ. ಆಸೆಗೋಸ್ಕರ ಹಿಂಸಾ ಮಾರ್ಗ ಹಿಡಿದಿರುತ್ತಾರೆ. ಇಂಥ ಹಿಂಸೆ ಮತ್ತು ಆಸೆಯ ಹಿನ್ನೆಲೆಯಲ್ಲಿ ಎರಡು ಮಹತ್ವದ ಹೇಳಿಕೆಗಳು ಜನಜೀವನದಲ್ಲಿ ಎಲ್ಲಕ್ಕಿಂತ ಮೊದಲೇ ಸೃಷ್ಟಿಗೊಂಡು ಪ್ರಚಾರಕ್ಕೆ ಬಂದಿವೆ. ಅದು 'ಅತಿಯಾಸೆ ಗತಿಗೇಡು' ಎಂಬ ಗಾದೆಯಾಗಿ ಸಾಮಾನ್ಯರ ಬಾಯಿಯಲ್ಲಿ ಪ್ರಚಾರಕ್ಕೆ ಬಂದಿದೆ. ಕೇವಲ ಅತಿಯಾಸೆಯಷ್ಟೇ ಅಲ್ಲ ಅತಿ ಸ್ನೇಹವೂ ಕೂಡ ವಿರಸಕ್ಕೆ ದಾರಿಯಾಗಬಹುದು. ಈ ಶಿಲೆ ಎನ್ನುವ ಮಾತೇ ಭಂಗಕ್ಕೆ ದಾರಿಯಾಗುವಂತದ್ದು ಇಷ್ಟಾಗಿ ಮನುಷ್ಯರಿಗೆ ಬದುಕಲು ಎಷ್ಟು ಅನುಕೂಲ ಇರಬೇಕೋ ಅಷ್ಟು ಇಲ್ಲದೆ ಹೋದರೆ ಆತ ಮನುಷ್ಯನಾಗಿ ಉಳಿಯಲಾರ ಎಂಬ ಮಾತೂ ಕೂಡ ಜಗತ್ತಿನಾದ್ಯಂತ ಪ್ರಚಾರದಲ್ಲಿದೆ. ಸತ್ತ ಮರುಗಳಿಗೆಯಲ್ಲಿಯೇ ಎಲ್ಲರೂ ಸತ್ತ ವ್ಯಕ್ತಿಯ ಬಗೆಗೆ ಕನಿಕರ ಇದ್ದರೂ ಅದು ಕೆಲ ಹೊತ್ತು ಮಾತ್ರ.

ಬಡವ ಮತ್ತೆ ಮತ್ತೆ ಬೇಡಿ ಏನನ್ನೂ ಪಡೆಯಲಾಗದು. ಹಾಗೆ ಬೇಡುತ್ತಾ ಹೋಗಿ ಅವನು ಬದುಕಿದ್ದರೂ ಹೆಣಕ್ಕೆ ಸಮಾನನಾಗಿ ಬಿಡುತ್ತಾನೆ. ಬದುಕಲು ಬೇಕಾದ ಅನುಕೂಲವೆಂಬುದು ಮೂಲಭೂತ ಅವಶ್ಯಕತೆ. ಅದನ್ನು ಪ್ರತಿಯೊಬ್ಬರೂ ಪಡೆಯಲೇಬೇಕು. ಪಡೆಯಲಾರದವನು ಮನುಷ್ಯನಾಗಿ ಉಳಿಯಲಾರ. ಜೀವ ಕಳೆದುಕೊಂಡಂತವನಾಗುತ್ತಾನೆ.

ಅತಿಯಾಸೆ ಗತಿಗೇಡು ಎಂಬ ಗಾದೆ ಯಾವ ದಿಕ್ಕಿನಲ್ಲಿ ಹುಟ್ಟಿಕೊಂಡಿದೆಯೋ ಅದರ ವಿರುದ್ಧ ದಿಕ್ಕಿನಲ್ಲಿಯೇ ಹಣವಿಲ್ಲದವನು ಹೆಣ ಎಂಬ ಗಾದೆಯೂ ಸೃಷ್ಟಿಯಾಗಿದೆ. ಅಂದರೆ ಯಾವ ಶಾಸ್ತ್ರ ಗ್ರಂಥವೂ, ಕಾವ್ಯವೂ ಹೇಳಲಾಗದ ಬದುಕಿನ ಮುಖ್ಯ ಸಂದೇಶವನ್ನು ಒಂದೆರಡು ಪದಗಳಲ್ಲಿ 'ಅತಿಯಾಸೆ ಗತಿಗೇಡು, ಹಣವಿಲ್ಲದವನು ಹೆಣಕೆ ಸಮ' ಎಂಬ ಎರಡು ಗಾದೆಗಳು ಹೇಳುತ್ತವೆ.

- ಅಮ್ಮನವರು ಪಟ್ಟಕ್ಕೆ ಬಂದಾಗ ಅಯ್ಯನವರು ಚಟ್ಟಕ್ಕೇರಿದರು.
- ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ
- ಅತ್ತೆಗೊಂದು ಕಾಲ ಸೊಸೆಗೊಂದು ಕಾಲ
- ನೂಲಿನಂತೆ ಸೀರೆ ಅಮ್ಮನಂತೆ ಮಗಳು
- ಹೆಂಗಸರ ಬುದ್ಧಿ ಮೊಣಕಾಲ ಕೆಳಗೆ
- ಹೆಂಡ್ರನ್ನ ತಾತ್ಸಾರ ಮಾಡಿದರೆ ಸಂಸಾರ ನಿಸ್ಸಾರವಾಗುತ್ತದೆ.
- ಹೆಣ್ಣುಮಕ್ಕಳು ಇದ್ದ ಮನೆ ಕನ್ನಡಿಯಾಂಗೆ
- ಹೆಣ್ಣಿಗೆ ಹಟವಿರಬಾರದು, ಗಂಡಿಗೆ ಚಟವಿರಬಾರದು
- ಹೆಣ್ಣಿಗೆ ಹೆಣ್ಣೇ ವೈರಿ

- ಹೆತ್ತವರಿಗೆ ಹೆಗ್ಗಣ ಮುದ್ದು
- ಹೇಳಿಕೆ ಮಾತುಕೇಳಿ ಹೆಂಡತೀನ ಬಿಟ್ಟ
- ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ
- ಕುಣಿಯಲಾರದವಳು ನೆಲಡೊಂಕು ಅಂದರಂತೆ
- ಒಲಿದರೆ ನಾರಿ ಮುನಿದರೆ ಮಾರಿ
- ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು
- ಅಕ್ಕ ನನ್ನವಳಾದ್ರೆ ಭಾವ ನನ್ನವನೇನು
- ಅಕ್ಕ ಸತ್ತರೆ ಅಮವಾಸ್ಯೆ ನಿಲ್ಲದು.

"ಬೇಡ ಕಳ್ಳ, ಮಾದಿಗ ಸುಳ್ಳ –ಈ ಗಾದೆ ಜಾತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಅನೇಕ ಗಾದೆಗಳಂತೆ ಇದೂ ಒಂದಾಗಿದೆ. ಜಾತಿ, ಕುಲ, ಗೋತ್ರ ಸಹಿತವಾದ ಭಾರತೀಯ ಸಮಾಜದಲ್ಲಿ ಆಯಾ ಜಾತಿಯ ಜೀವನ ಕ್ರಮ, ವೃತ್ತಿ, ಗುಣ ಇವುಗಳನ್ನು ಹಿಡಿದು ಹೊಗಳುವ ಇಲ್ಲವೇ ತೆಗಳುವ ಅನೇಕಾನೇಕ ಗಾದೆಗಳು ಪ್ರಚಾರದಲ್ಲಿವೆ. ಬೇಡ ನಾಯಕರು ಪಶುಪಾಲನೆಯ ಜೊತೆಗೆ ಯೋದವೃತ್ತಿ ಮತ್ತು ಬೇಟೆಯನ್ನು ಕೈಗೊಂಡಿದ್ದರು. ಯೋಧವೃತ್ತಿ ಬೇಟೆಯು ವಯಸ್ಸಿನ ಅಥವಾ ಇನ್ನಾವುದೇ ಕಾರಣದಿಂದ ತಪ್ಪಿದಾಗ ಪಶುಪಾಲನೆಯನ್ನಾದರೂ ಮಾಡಿ ಬದುಕಲು ಪ್ರಯತ್ನಿಸಬೇಕು. ಹಾಗೆ ಬಯಸಿದ ತಕ್ಷಣ ಅವನಿಗೆ ಆತ ಬಯಸಿದ ಪಶುಸಂಪತ್ತು ಸಿಕ್ಕುವ ಸಾಧ್ಯತೆಯಿರಲಿಲ್ಲ. ಆದರೆ ಬೇಟೆಯಾಡಿದ ಅಭ್ಯಾಸವೂ, ಯುದ್ಧ ಮಾಡಿದ್ದರ ಕಸುವೂ ಮೈಯ್ಯಲ್ಲಿ ಇರುತ್ತಿದ್ದುದರಿಂದ ಒಂದು ವೇಳೆ ಇನ್ನೊಬ್ಬನ ಗೂಡಿನ ಮೇಲೆ ಕಣ್ಣು ಹಾಕಿ ಒಂದು ಕುರಿ, ಒಂದು ಹಸು ಹೊಡೆದುಕೊಂಡು ಬರುವ ಸಾಧ್ಯತೆ ಇರುತ್ತಿತ್ತು. ಈಗಲೂ ಬೇಡರು ತಂತಮ್ಮ ಹಟ್ಟಿಗಳಿಗೆ ಒಂದು ಕುರಿ ಅಥವಾ ಒಂದು ಮೇಕೆಯನ್ನು ಇತರ ಹಟ್ಟಿಗಳಿಂದ ಹಾರಿಸಿಕೊಂಡು ಬರುವುದು ಸಹಜವೆಂದು ಬೇಡ ವಕ್ತೃಗಳೇ ಹೇಳುತ್ತಾರೆ. ಆದರೆ ಯಾವುದೇ ಕಾರಣಕ್ಕೂ ಇವರು ದೊಡ್ಡ ಪ್ರಮಾಣದಲ್ಲಿ ಕಳ್ಳತನ ಮಾಡುವುದಿಲ್ಲ. ಈ ಹಿನ್ನೆಲೆಯಲ್ಲಿ ಬೇಡ ಕಳ್ಳ ಎಂಬ ಮಾತು ಮಾದಿಗ ಸುಳ್ಳ ಎಂಬ ಮಾತಿನೊಂದಿಗೆ ರೂಢಿಗೆ ಬಂದಿರುತ್ತದೆ. ಈ ಗಾದೆಯ ಮುಂದುವರಿಕೆಯೇ ಆಗಿ 'ಬೆಲ್ಲದ ಹಂಗಿದ್ದರೂ ಬೇಡನನ್ನು ನಂಬಬಾರದು' 'ಜಾಲಿ ಸಾಕಿದರೆ ಕಾಲಿಗೆ ಮೂಲ ಬೇಡನನ್ನು ಸಾಕಿದರೆ ಜೀವಕ್ಕೆ ಮೂಲ' ಎಂಬ ಜಾತಿ ನಿಂದನೆಯ ಗಾದೆಗಳೂ ಹುಟ್ಟಿಕೊಂಡಿವೆ."[೧೩]

ಮಹಿಳೆಗೆ ಮುಕ್ತಿಯೆಂಬುದೇ ಇಲ್ಲ. ಮಹಿಳೆಯ ಮೇಲೆ ಕಟ್ಟುಪಾಡುಗಳನ್ನು ಹಾಕಿದರು. ಪುರುಷ ಪ್ರಧಾನ ವ್ಯವಸ್ಥೆಯ ತೆಕ್ಕೆಗೊಳಗಾಗಿಯೇ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಮಹಿಳೆ ಬಲಿಪಶುವಾದ ಸಂಗತಿ ಇತಿಹಾಸದ ಪ್ರಾಚೀನ ಹಾಗೂ ಇಂದಿನ ಕಾಲದವರೆಗೂ ನಿರತವಾಗಿ ನಡೆದುಕೊಂಡು ಬಂದಿರುವುದಕ್ಕೆ ಸಾಕ್ಷಿಯಾಗಿದೆ.

ಮಹಿಳೆ ತಾಯಿ, ಜನನಿ ಎನ್ನುತ್ತೇವೆ. ಭೂಮಿಗೆ ಹೋಲಿಸುತ್ತೇವೆ. ನಾವೆಲ್ಲಾ ಜನಸಿದ್ದು ತಾಯಿಯ ಗರ್ಭದಲ್ಲಿ ಎಂದು ಒಪ್ಪಿಕೊಂಡು ಬಾಳುತ್ತೇವೆ, ಆದರೆ ನಾವೇ ಇಂದು ಹೇಗಾಗಿದ್ದೇವೆ. ಎಂಬ ಸ್ಥಿತಿ ನೋಡಿದರೆ ಸೋಜಿಗವಾಗಿದೆ. ಮಹಿಳೆಯರನ್ನು ಮಾತೃದೇವೋಭವ ಎನ್ನುತ್ತೇವೆ. ಜನನಿ ಜನ್ಮ ಭೂಮಿಶ್ಚ ಎನ್ನುತ್ತೇವೆ. ದೇವರು ದೇವತೆಗಳಿಗೆ ಹೋಲಿಸುತ್ತೇವೆ. ಆಚಾರ, ವಿಚಾರ, ಪುರಾಣ, ಪುಣ್ಯಕತೆಗಳಲ್ಲಿ ಮಹಿಳೆಗೆ ಪ್ರಾಮುಖ್ಯತೆಯ ಸ್ಥಾನವನ್ನು ಕೊಟ್ಟಿದ್ದೇವೆ. ಪ್ರಸ್ತುತವಾದ ದಿನಗಳಲ್ಲಿ ಆಕೆಗೆ ನಾವು ಯಾವುದೇ ರೀತಿಯ ಸ್ಥಾನಮಾನಗಳನ್ನು ಕೊಟ್ಟಿಲ್ಲ. ನಾಲ್ಕು ಗೋಡೆಯ ಬಂಧನದಲ್ಲಿ ಇಟ್ಟಿದ್ದೇವೆ. ದೈಹಿಕವಾಗಿ, ಮಾನಸಿಕವಾಗಿ ಆಕೆಗೆ ಹಿಂಸೆಯನ್ನು ನೀಡಿದ್ದೇವೆ. ಪ್ರತಿಯೊಂದು ವಿಚಾರದಲ್ಲಿಯೂ ಆಕೆಗೆ ಮುಂದು ಮಾಡಿ ಹಿಂದೆ ನೋಡುವ ಪ್ರವೃತ್ತಿ ಇಲ್ಲವಾಗಿದೆ. ಕಾಲಿಗಿಂತ ಕಸವಾಗಿ ಕಂಡಿದ್ದಾರೆ.

೭.೫ ಒಗಟು

ಮಾನವ ಬುದ್ದಿಜೀವಿ. ಬುದ್ದಿ ಕೇವಲ ನಾಗರಿಕ ಅಥವಾ ಪಂಡಿತರ ಸೊತ್ತಲ್ಲ. ಅವರವರ ಬದುಕಿನ ಸಂಸ್ಕಾರ ಮತ್ತು ಪರಿಸರಕ್ಕನುಗುಣವಾಗಿ ಅಷ್ಟಿಷ್ಟು ಇದ್ದೇ ಇರುತ್ತದೆ. ಸಾಮಾನ್ಯನಿಗೆ ವಿದ್ಯೆಯಿಲ್ಲದಿದ್ದರೂ ಬುದ್ದಿ ಇರುತ್ತದೆ. ಜನಸಾಮಾನ್ಯರ ಕಲ್ಪನೆ ಒಬ್ಬರ ಪ್ರತಿಭೆಯಿಂದ ರೂಪುಗೊಂಡು ಅನುಭವವಾಗಿ ಸಾಹಿತ್ಯ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಇಂಥವುಗಳಲ್ಲಿ ಒಗಟು ಕಥೆಗಳು ಸೇರುತ್ತವೆ.

ಕೆಲವು ಸಂದಿಗ್ಧ ಸಮಯ ಮತ್ತು ವಿಷಯವಸ್ತುಗಳಲ್ಲಿ ಒಗಟುಗಳನ್ನು ಬಳಸುವುದು ಒಂದು ತಂತ್ರವಾಗಿ ಬಳಕೆಯಾಗಿದೆ. ಮಳೆ ಬರಿಸುವುದು, ಧಾನ್ಯ ಬೆಳೆಸುವುದು, ಕೊಯ್ಯುವುದು, ಶವಸಂಸ್ಕಾರ, ಮದುವೆ, ಹೂಳುವುದು, ಶ್ರಾದ್ಧ ಇವು ಸಂದಿಗ್ಧ ಕಾಲಗಳಾಗುತ್ತವೆ. ಸಂದಿಗ್ಧ ಸಮಯದಲ್ಲಿ ಒಂದು ಸಣ್ಣ ವಿಷಯ ಒಂದು ದೊಡ್ಡ ಸಮಸ್ಯೆಯನ್ನೇ ಬಿಡಿಸಬಹುದು. ಒಗಟನ್ನು ಬಿಡಿಸುವ ಅನುಕಂಪಿತ ಮಾಂತ್ರಿಕತೆ ಇದನ್ನು ನಡೆಸುವುದು. ಹೀಗಾಗಿ ಕೆಲವು ಋತುಮಾನಗಳು ಮತ್ತು ವಿಶೇಷ ಸಂದರ್ಭಗಳಲ್ಲಿ ಒಡ್ಡುವ ಒಗಟುಗಳು ಪುರಾತನ ಪದ್ಧತಿಯ ಪ್ರಕಾರ ವಿಷಮತೆಯನ್ನು ಹೋಗಲಾಡಿಸುತ್ತವೆ. ಇಂಥ ವಿಶೇಷ ಸಂದರ್ಭಗಳಲ್ಲಿ ಒಗಟನ್ನು ಒಡ್ಡಿ ಬಿಡಿಸುವ ಸಂಪ್ರದಾಯಕ್ಕೆ ಮೂಲ ಕಾರಣ ಪ್ರಾಯಶಃ ಜೀವನದಲ್ಲಿ ಒದಗಬಹುದಾದ ಕಷ್ಟಕಾರ್ಪಣ್ಯಗಳ ಸಮಸ್ಯೆಗಳನ್ನು ಸುಖಕರವಾಗಿ ಬಿಡಿಸಲಿ ಎಂಬುದಾಗಿರುತ್ತದೆ. ಇದಲ್ಲದೆ ನಮ್ಮ ಪ್ರಾಚೀನರು ಅನುವೇದನೆಯ ಮಾಂತ್ರಿಕತೆಯಲ್ಲಿ ನಂಬಿಕೆಯನ್ನು ಇಟ್ಟಿದ್ದುದೇ ಇದಕ್ಕೆ ಕಾರಣವಾಗಿದ್ದಿರಬೇಕು.

ಒಗಟಿನ ಆಸಕ್ತಿ ಮೂಲಭೂತವಾದದ್ದು, ಪ್ರಾಚೀನ ಕಾಲದಿಂದಲೂ ಬಂದ ಒಂದು ಆಕರ್ಷಣೆ ಚಟುವಟಿಕೆ. ಒಗಟುಗಳು ಶೈಕ್ಷಣಿಕ ಹಾಗೂ ಮನರಂಜನೆ ಈ ಎರಡೂ ಲಕ್ಷಣಗಳನ್ನು ಹೊಂದಿವೆ. ಯುವಕರು ಮನರಂಜನೆಗಾಗಿ ಒಗಟುಗಳನ್ನು ಪ್ರೀತಿಸಿದರೆ, ಮುದುಕರು ಅವುಗಳ ಬೋಧನಾತ್ಮಕ ಲಕ್ಷಣಗಳನ್ನು ಗಮನಿಸುತ್ತಾರೆ. ಒಗಟುಗಳ ವೈವಿಧ್ಯಪೂರ್ಣವಾದ ವಸ್ತುವಿನಲ್ಲಿ ಮತ್ತು ರೂಪದಲ್ಲಿ ಈ ಎರಡೂ ವಿಚಾರಗಳು ಪ್ರತಿಬಿಂಬಿತವಾಗಿವೆ. ಈ ಶೈಕ್ಷಣಿಕ ಹಾಗೂ

ಮನರಂಜಕ ಗುಣಗಳಿಂದಾಗಿಯೇ ಒಗಟುಗಳು ಸಾಮಾಜಿಕ ಮಹತ್ವವನ್ನು ಪಡೆದುಕೊಂಡಿವೆ. ಇದರಿಂದ ಅನೇಕ ಬುಡಕಟ್ಟುಗಳಲ್ಲಿ ನಿಷಿದ್ಧಗಳು ಅವುಗಳ ಉಪಯೋಗದೊಡನೆ ಸೇರಿಕೊಳ್ಳಲು ಕಾರಣವಾಗಿದೆ.

ಜನತೆಯ ಜೀವನದಲ್ಲಿ ಗಾದೆಗಳಿಗಿಂತ ಒಗಟುಗಳು ಹೆಚ್ಚು ಪರಿಮಿತವಾದ ಪಾತ್ರವೆಂದು ಹೇಳಬಹುದು. ಅನೇಕ ವೇಳೆ ಒಗಟುಗಳು ಸಮಾಜದ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಅವುಗಳ ಉಪಯೋಗ ಕೆಲವೊಂದು ನಿಷಿದ್ದತೆ ಮತ್ತು ಸಂಪ್ರದಾಯಗಳಿಂದ ಪರಿಮಿತವಾಗಿರುತ್ತದೆ. ಆದರೆ ಗಾದೆ ದಿನನಿತ್ಯದ ಭಾಷೆಯ ಭಾಗವಾಗಿಯೇ ಇರುತ್ತದೆ. ಆದ್ದರಿಂದ ಒಗಟುಗಳು ಗಾದೆಗಳಿಗಿಂತ ಹೆಚ್ಚು ಪರಿಮಿತ ಮತ್ತು ನಿರ್ದಿಷ್ಟವಾದ ಕಾರ್ಯಗಳನ್ನು ಹೊಂದಿರುತ್ತವೆ ಎಂದು ಹೇಳಬಹುದು. ಹಾಗಿದ್ದರೂ ಗಾದೆಗಳಂತೆ ಇವು ಕೂಡಾ ಜನತೆಯ ಸಂಸ್ಕೃತಿ ಮತ್ತು ಸಂಪ್ರದಾಯಗಳ ಅಖಂಡ ಭಾಗವಾಗಿಯೇ ಇರುತ್ತವೆ ಎಂಬುದನ್ನು ಮರೆಯಬಾರದು.

೧. “ಅಗಸ ಮಾಡಿದ ಮಡಿಕೆಯಲ್ಲ
ಕುಂಬಾರ ಮಾಡಿದ ಮಡಿಕೆಯಲ್ಲ
ಸೂರ್ಯನ ಕಣ್ಣಿಗೆ ಹೊಳಪಿಲ್ಲ – **ತೆಂಗಿನಕಾಯಿ**

೨. ಅಕ್ಕ ಅಕ್ಕ ಬಾವಿ ನೋಡು
ಬಾವಿಯೊಳಗೆ ನೀರು ನೋಡು
ನೀರಿನೊಳಗೆ ಬಳ್ಳಿ ನೋಡು
ಬಳ್ಳಿಗೊಂದು ಹೂವ ನೋಡು
ನಾನು ಯಾರು – **ದೀಪ**

೩. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ – **ಮಲ್ಲಿಗೆ ಹೂ**

೪. ಗುಡಿಯಿಂದೆ ಗುಟ್ಟಿಗಲ್ಲು – **ತುರುಬು**

೫. ನೂರಾರು ಮಕ್ಕಳಿಗೆ ಒಂದೇ ಉಡುದಾರ – **ಕಡ್ಡಿಪೊರಕೆ**

೬. ಕೈಯ್ಯಲ್ಲಿ ಜಜ್ಜಿದರೆ ನೂರಾರು ಮಕ್ಕಳು – **ಬೆಳ್ಳುಳ್ಳಿ**

೭ ದುಡ್ಡು ಕೊಟ್ಟು ತರೋದು, ಮುಂದೆ ಇಟ್ಟುಕೊಂಡು ಅಳೋದು – **ಈರುಳ್ಳಿ**

೮ ಅಡೀಲಿ ಕಂಚು, ನಡೂಲಿ ತಾಮ್ರ ಮೇಲೆ ಚಿನ್ನದ ಕಿರೀಟ – **ಈರುಳ್ಳಿ**

೯ ಹಸಿರು ಕೋಟೆಯೊಳಗೆ ಬಿಳಿಕೋಟೆ, ಬಿಳಿ ಕೋಟೆಯೊಳಗೆ ಕೆಂಪುಕೋಟೆ,

೧೦ ಕೆಂಪುಕೋಟೆಯೊಳಗೆ ಕಪ್ಪು ಸೈನಿಕರು – **ಕಲ್ಲಂಗಡಿಹಣ್ಣು**

೧೧ ಒಂದು ತೇಲುತ್ತೆ, ಒಂದು ಮುಳುಗುತ್ತೆ ಒಂದು ಕರಗುತ್ತೆ – **ಎಲೆ, ಅಡಿಕೆ, ಸುಣ್ಣ**

೧೨ ಅಪ್ಪನ ದುಡ್ಡು ಎಣಿಸೋಕೆ ಆಗೊಲ್ಲ, ಅಮ್ಮನ ಸೀರೆ ಮಡಿಸೋಕೆ ಆಗೊಲ್ಲ– **ನಕ್ಷತ್ರ, ಆಕಾಶ**

೧೩ ಅಪ್ಪ ಎಂದರೆ ಒಡೆಯುತ್ತೆ, ಅವ್ವ ಎಂದರೆ ಒಡೆಯೊಲ್ಲ – **ತುಟಿ**

೧೪ ಒಂದು ಹಣ್ಣು ಎತ್ತೋರು ಐದು ಜನ, ತಿನ್ನೋರು ಮೂವತ್ತೆರಡುಜನ ರುಚಿನೋಡೋದು ಒಬ್ಬ – **ಬೆರಳು, ಹಲ್ಲು, ನಾಲಗೆ**

೧೫ ಅಂಗಣ್ಣ ಮಂಗಣ್ಣ ಅಂಗಿ ಬಿಚ್ಚಿ ನುಂಗಣ್ಣ – **ಬಾಳೆಹಣ್ಣು**

೧೬ ಎರಡು ಚಕ್ರವುಟ್ಟು ಬಂಡಿಯಲ್ಲ

ಎರಡು ಕಣ್ಣುಂಟು ಪ್ರಾಣಿಯಲ್ಲ

ಕೊಂಬುಂಟು ಎತ್ತಲ್ಲ

ಹಾಗಾದರೆ ನಾನ್ಯಾರು – **ಬೀಸುವ ಕಲ್ಲು**

೧೭ ರೆಕ್ಕೆ ಇಲ್ಲದ ಪುಕ್ಕ ಎಲ್ಲೆಂದರಲ್ಲಿ ಹಾರಾಡುತ್ತೆ – **ಮನಸ್ಸು**

೧೮ ತಲೆ ಮ್ಯಾಗೆ ಹೊತ್ತು ಮಾರೋದಲ್ಲ

ತಕ್ಕಡಿಯಲ್ಲಿಟ್ಟು ತೂಗೋದಲ್ಲ

ಅದಿಲ್ಲದೆ ಯಾವ ಕಾರ್ಯ ಆಗೋದಿಲ್ಲ – **ಸೆಗಣಿ**

೧೯ ಹಸಿರು ಸೀರೆ ಉಟ್ಟುಕೊಂಡ್ಲು, ಬಂಗಾರದ ಗೆಜ್ಜೆ ತೊಟ್ಟುಕೊಂಡ್ಲು – **ಶೇಂಗಾ**

೨೦ ನೋಡೋಕೆ ಬೆಳ್ಳಗೆ ತಿಂದರೆ ಕೆಂಪಣ್ಣ – **ಸುಣ್ಣ**

೨೧ ಅಕ್ಕನ ಮನೆಗೆ ತಂಗಿ ಹೋಗೋದಿಲ್ಲ, ತಂಗಿ ಮನೆಗೆ ಅಕ್ಕ ಹೋಗೋದಿಲ್ಲ – **ಕಣ್ಣು**

೨೨ ಅಂಕು ಡೊಂಕಿನ ಮನೆ

ಬಡಗಿ ಕಟ್ಟಿದ ಮನೆ – **ಹುತ್ತ**

೨೩ ಅರ್ಧ ಇಟ್ಟಾಗ ಅಳುತ್ತಾಳೆ

ಪೂರಾ ಇಟ್ಟಾಗ ನಗುತ್ತಾಳೆ – **ಬಳೆ**

೨೪ ಕಪ್ಪುಂಟು ಕಸ್ತೂರಿಯಲ್ಲ

ಜಲವುಂಟು ಕೊಳವಲ್ಲ

ರೆಕ್ಕೆಯುಂಟು ಪಕ್ಷಿಯಲ್ಲ

ಅಕ್ಕ ಅತ್ರೆ ತಂಗಿ ಅಳ್ತಾಳೆ – **ಕಣ್ಣು**

೨೫ ಉತ್ತಿದ್ದಲ್ಲಾ ಬಿತ್ತಿದ್ದಲ್ಲಾ ಕಣ್ಣು ಬಿಡಲಿಲ್ಲ

ರಾಗಿ ಮೂಡಲಿಲ್ಲ ಮೆಟ್ಟು ಅತ್ತಲಿಲ್ಲ

ಕಾಳು ತೂರಲಿಲ್ಲ ಜರಿಡಿ ಇಡಿಯಲಿಲ್ಲ

ಕಣಜ ತುಂಬಲಿಲ್ಲ, ಪುಟ್ಟೀಲಿ ತುಂಬಿ ಹೊತ್ತು ಮಾರಿದರೆ

ಬೇಡ ಅನ್ನೋರಿಲ್ಲ – **ಉಪ್ಪು**

೨೬ ಚಿಪ್ಪುಂಟು ಆಮೆಯಲ್ಲ

ಜುಟ್ಟುಂಟು ಪೂಜಾರಿಯಲ್ಲ

ಮೂರು ಕಣ್ಣುಂಟು ಶಿವನಲ್ಲ – **ತೆಂಗಿನಕಾಯಿ**

೨೭ ಹಾರಿದರೆ ಹನುಮ

ಕೂಗಿದರೆ ರಾಮಾ

ಕುಂತರೆ ಮುನಿರಾಮ – **ಕಪ್ಪೆ**

೨೮ ಕರಿ ಹೊಲದಲ್ಲಿ ಒಂದು ಬಿಳಿದಾರೆ – **ಬೈತಲೆ**

೨೯ ಬಾಗಿಲು ಮಾತ್ರ ಬಡಿತದೆ ಶಬ್ದ ಮಾತ್ರ ಕೇಳೋದಿಲ್ಲ – **ಕಣ್ಣಿನ ರೆಪ್ಪೆ**

೩೦ ಪೆದ್ದುಮುಂಡೆ ಗಂಡ ದಾರಿಯಲ್ಲಿ ಅಡ್ಡಬಿದ್ದಾನೆ – **ಹೊಸ್ತಿಲು**

೩೧ ನೆಟ್ಟರೆ ಹುಟ್ಟೋದಿಲ್ಲ ಕಿತ್ತರೆ ಬಾಡೋದಿಲ್ಲ ಸುಟ್ರೆ ಇದ್ದಿಲು ಆಗೋದಿಲ್ಲ – **ಕೂದಲು**"[೧೪]

ಮ್ಯಾಸನಾಯಕ ಸಮುದಾಯದಲ್ಲಿ ಈ ತೆರನಾದ ಅನೇಕ ಒಗಟು ಕತೆಗಳಿವೆ. ಅವುಗಳಲ್ಲಿ ಒಂದನ್ನು ಇಲ್ಲಿ ಗಮನಿಸಬಹುದು. ಹರತಿಕೋಟೆಯ ರಾಜನ ಮಕ್ಕಳಲ್ಲಿ ಒಬ್ಬಳಾದ ಕರಿಯೋಬಿಯನ್ನು ಬಸವಿಗೆ ಬಿಟ್ಟಿದ್ದರು. ಆಕೆ ಪ್ರತ್ಯೇಕವಾದ ಅರಮನೆ ಕಟ್ಟಿಕೊಂಡಿದ್ದಳು. ತನ್ನ ಅರಮನೆಯ ಮುಂದೆ 'ಕಪ್ಪೆ ಕಲಕದ ನೀರು, ಬಿಸಿಲಿಗೆ ಬಾಡದ ಹೂ, ನಾಲ್ಕು ಏಣಿಸ ಹಸಿರು ಕಲ್ಲುಕಂಬ ತಲೆಗೆ ಮೆತ್ತನೆ ಕಲ್ಲು, ಕಾಯಿಸದೆ ಆಗಿರೋ ತುಪ್ಪ ಒಂದು ಕೊಂಬಿನ ಮೇಕೆ ಹೋತ ತಂದು ಕೊಟ್ಟವರಿಗೆ ಭೋಗ ಕೊಡ್ತೀವಿ ಇದನ್ನು ತರದೇ ಸೋತವರು ಸಾವಿರ ವರಹ ಸಂಪಾದಿಸಿರುತ್ತಾಳೆ. ಈ ಹೇಳಿಕೆಯ ಒಗಟನ್ನು ಕೇಳಿಸಿಕೊಂಡ ನಾಯಕರ ಹಟ್ಟಿಯ ಹಟ್ಟಿಮಲ್ಲಪ್ಪನಾಯಕ ಇವಳ ಒಗಟನ್ನು ಬಿಡಿಸಲು ಪ್ರಯತ್ನಿಸುತ್ತಾನೆ. ಆದರೆ ಈತನಿಂದ ಸಾಧ್ಯವಾಗುವುದಿಲ್ಲ. ಸೋತ ಮಲ್ಲಪ್ಪನಾಯಕ ಭ್ರಾಂತನಾಗಿ ಅಡವಿ ಸಂಚಾರ ಬೀಳುತ್ತಾನೆ. ಆಗ ಗೊಲ್ಲ ಸಮುದಾಯದ ಕರಡಿಬುಳ್ಳಣ್ಣ ಎಂಬ ವ್ಯಕ್ತಿ ಬೇಟಿಯಾಗುತ್ತಾನೆ. ಅವನು ಮಲ್ಲಪ್ಪ ನಾಯಕನಿಗೆ ಸಮಸ್ಯೆಯಾಗಿರುವ ಒಗಟನ್ನು ಬಿಡಿಸಿ ಹೇಳುತ್ತಾನೆ. ಉತ್ತರ ಪಡೆದ ಹಟ್ಟಿ ಮಲ್ಲಪ್ಪನಾಯಕ ಕರಿಯೋಬಿಗೆ ಹೋಗಿ ಹೇಳುತ್ತಾನೆ.

'ಎಳೆ ನೀರೆ ಕಪ್ಪೆಲದ ನೀರು, ನವಿಲುಗರಿಯೇ ಬಿಸಿಲಿಗೆ ಬಾಡದ ಹೂವು, ಮುಂಗುರುಬಳ್ಳಿಯೇ ನಾಲ್ಕು ಏಣಿನ ಹಸಿರು ಕಲ್ಲುಗಂಬ, ಕೈಯ ತೋಳು ತಲೆಗೆ ಮೆತ್ತನೆಯ ಕಲ್ಲು, ಜೇನು ತುಪ್ಪವೇ ಕಾಯಿಸದೆ ಆಗುವ ತುಪ್ಪ, ಕೋಳಿಯೇ ಒಂದು ಒಂದು ಕೋಡಿನ ಮೇಕೆ ಹೋತ' ಎಂದು ಬಿಡಿಸಿ ಹೇಳುತ್ತಾನೆ. ಆದರೆ ಕರಿಯೋಬಿಗೆ ಮಲ್ಲಪ್ಪನ ಮೇಲೆ ಸಂಶಯ ಬರುತ್ತದೆ. ಮೂಲದಲ್ಲಿ ಕುಳ್ಡಬುಳ್ಳಣ್ಣನೆ ಈ ಒಗಟನ್ನು ಬಿಡಿಸಿ ಹೇಳಿದ್ದಾನೆಂದು ತಿಳಿದುಕೊಳ್ಳುತ್ತಾಳೆ. ಹೀಗಾಗಿ ಮಲ್ಲಪ್ಪನಾಯಕನು ಅಸಹಾಯಕನಾಗಿ ಮರಳಿ ಹೋಗಬೇಕಾಗುತ್ತದೆ. ಒಗಟು ಬಿಡಿಸಿದ ಕುಳ್ಡಬುಳ್ಳಣ್ಣನನ್ನು ಕರಿಯೋಬಿ ಮೆಚ್ಚುತ್ತಾಳೆ.

ಅಕ್ಕ ತೌರಿಗೆ ಹೋಗುವ ಸಂದರ್ಭವನ್ನು ತಿಳಿಸುವ ಒಗಟು

ಸರ್ರನೆ ಹೋಗ್ತಾನೆ

ಗಂಡನ ಮನೆಗೆ ಬರುವಾಗ

ಹೆಜ್ಜೆ ಹೆಜ್ಜೆಗೂ ಕಣ್ಣೀರು ಸುರಿಸುತ್ತಾ

ನಿಧಾನವಾಗಿ ಬರುತ್ತಾಳೆ. –ಬಾವಿ, ಅಗ್ಗ, ಕೊಡ

ಜನಪದ ಸಾಹಿತ್ಯದಲ್ಲಿ ಸಂಸಾರ ಸಂಹಿತೆಯೆಂಬ ಮಾತಿಗೆ ಇದೊಂದು ಉದಾಹರಣೆ. ತೌರಿಗೂ ಹೆಣ್ಣಿಗೂ ಇರುವ ಸಂಬಂಧವನ್ನು ಜನಪದ ಕವಿಗಳು ಎಂದಿಗೂ ಮರೆಯಲಾರರು. ಹುಟ್ಟಿದ ತೌರಿಗೂ ಕೊಟ್ಟ ಗಂಡನ ಮನೆಗೂ ಹುಲ್ಲ ತಾರದೆ ಹೂವ ತರುವಂತೆ ಬಾಳಬೇಕಾಗುತ್ತದೆ ಹೆಣ್ಣು. ತೌರನ್ನು ಅಗಲಿ ಗಂಡನ ಮನೆಯಲ್ಲಿ ಇರಬೇಕಾದ ಹೆಣ್ಣಿಗೆ ತೌರು ಒಂದು ಅಚ್ಚಳಿಯದ ನೆನಪು. ಹೀಗೆ ಬಹಳ ಕಾಲ ಅಗಲಿಕೆಯಿಂದ ಪರಿತಪಿಸಿದ ಹೆಣ್ಣಿಗೆ ತೌರಿಗೆ ಹೋಗುವ ಅವಕಾಶ ಬಂದಾಗ ಅವಳಿಗಾಗುವ ಸಂತೋಷ ಕಾತರಗಳು ಅಷ್ಟಿಷ್ಟಲ್ಲ. ಆದರೆ ತೌರಿನಲ್ಲಿ ಉಳಿಯಲು ಸಾಧ್ಯವೆ? ಮತು ಗಂಡನ ಮನೆಗೆ ಬರುವಾಗ ಮೈಯೆ ಭಾರ ಮನವೆ ಭಾರವಾಗಿ ಮೊದಲಿನ ಕಾತರ ಕಾಣಬರುವುದಿಲ್ಲ. ಹೆಣ್ಣಿನ ಬಾಳನ್ನು ಸಹಾನುಭೂತಿಯಿಂದ ನೋಡಬಹುದಾದ ಯಾರಿಗೂ ಇದು ಖೇದ್ಯವಾದ ಸಂಗತಿ. ಈ ವಿಷಯವೆ ಮೇಲಿನ ಒಗಟಿನಲ್ಲಿ ರೂಪಕವನ್ನು ತಾಳಿದೆ. ಆದರೆ ಒಗಟು ಇಲ್ಲಿಗೆ ನಿಲ್ಲುವುದಿಲ್ಲ. ಅದು ಅರ್ಥಾಪೇಕ್ಷಿಯಾದುದು. ಈ ಒಗಟಿನ ನಿಜವಾದ ಅರ್ಥ ಬಾವಿಯಿಂದ ನೀರು ಸೇದುವುದು. ಕಾಲಿ ಬಿಂದಿಗೆಯನ್ನು ನೀರಿಗೆ ಬಿಟ್ಟಾಗ ಅನಿವಾರ್ಯವಾಗಿಯೇ ವೇಗವಾಗಿ ಹೋಗುತ್ತದೆ. ಆದರೆ ನೀರು ತುಂಬಿಕೊಂಡ ಬಿಂದಿಗೆ ಸೇದಿದ ಹಾಗೆಲ್ಲಾ ನೀರನ್ನು ಚೆಲ್ಲುತ್ತಾ ನಿಧಾನವಾಗಿ ಮೇಲಕ್ಕೆ ಬರುತ್ತದೆ. ಕಾಲಿ ಬಿಂದಿಗೆಗೆ ತೌರಿಗೆ ಹೋಗುವ ಹೆಣ್ಣಿನ ಚಿತ್ರವೂ ನೀರು ತುಂಬಿಕೊಂಡು ಮೇಲೇರುತ್ತ ಬಂದ ಬಿಂದಿಗೆಗ ತೌರಿನ ಭಾವನೆಗಳನ್ನು ಹೊತ್ತ ಭಾರ ಹೃದಯದ ಹೆಣ್ಣಿನ ಚಿತ್ರಣವೂ ಹೋಲಿಕೆಯಾಗಿದೆ. ತೌರಿಗೆ ಹೋಗುವಾಗಿನ ಶೂನ್ಯ ಹೃದಯದ ಹೆಣ್ಣು ಬರುವಾಗ ಚೈತನ್ಯವನ್ನು ತುಂಬಿಕೊಂಡು ಬಂದಳು ಎಂಬುದನ್ನು ಇದು ಧ್ವನಿಸುತ್ತದೆ.

ಹೋಲಿಕೆಗಾಗಿ ಈ ಕವಿ ವಸ್ತುವನ್ನು ಹುಡುಕಬೇಕಾಗಿಲ್ಲ. ಪರಿಚಿತವಿರುವ ವಸ್ತುವನ್ನು ಎಷ್ಟು ಸಮರ್ಪಕವಾಗಿ ಮತ್ತು ಸಮರ್ಥವಾಗಿ ಬಳಸಿಕೊಳ್ಳಬಹುದೆಂಬುದಕ್ಕೆ ಇದು ಸಾಕ್ಷಿ.

೭.೬ ಒಡಪುಗಳು

ಜನಪದ ಸಮುದಾಯದಿಂದ ಬಂದಿರುವ ಈ ಒಡಪುಗಳು ಸಮುದಾಯಗಳ ಮೂಲಭೂತವಾಗಿ ಸಮಾಜದ ಪರಂಪರಾಗತ ಸಂಸ್ಕೃತಿಯನ್ನು ಉತ್ತಮ ರೀತಿಯಲ್ಲಿ ಕಾಯ್ದುಕೊಂಡು ಬರಬಲ್ಲವು ಆದ್ದರಿಂದಲೇ ಜನಪದ ಒಡಪುಗಳು ಜನಪದ ಸಂಸ್ಕೃತಿಯ ಒಂದು ಅಂಗವಾಗಿ ಸಮಾಜದ ಸಂಸ್ಕೃತಿಯ ಕೆಲವು ಮುಖಗಳನ್ನು ಮಾತ್ರ ಪ್ರತಿನಿಧಿಸುವುದೇ ಇವುಗಳ ಗುಣ.

ಒಡಪು ಎಂದರೆ 'ಮನೆಯಲ್ಲಿ ಅಥವಾ ಶುಭಕಾರ್ಯಗಳಲ್ಲಿ ಅಥವಾ ಯಾವುದೇ ವಿಶೇಷ ಸಂದರ್ಭಗಳಲ್ಲಿ ಮುತ್ತೈದೆಯರು ಭಾಗವಹಿಸಿದಾಗ ಅವರ ಮಧ್ಯದಲ್ಲಿ ತನ್ನ ಗಂಡನ ಗುಣ ಗೌರವದ ಬಗ್ಗೆ ಬಳಸುವ ಮಾತಿನ ಮಾಲೆ ಒಡಪು.' ಇವು ಬೇಕಾದ ವಿಷಯ ವಸ್ತುಗಳನ್ನು ಒಳಗೊಂಡಿರಬಹುದು. ಇದನ್ನು ಒಪ್ಪಾ ಇಟ್ಟು ಹೇಳುವುದು. ಬಿಚ್ಚಿ ಹೇಳುವುದು, ಅರ್ಥ ಹಚ್ಚಿ ಹೇಳುವುದು, ವಿಶೇಷಣ ಹಚ್ಚಿ ಹೇಳುವುದು, ಚಾಟೋಕ್ತಿ, ಚತುರೋಕ್ತಿ, ಸಲಿಗೆ, ಭಕ್ತಿ, ಪ್ರೀತಿ, ಸವಿನುಡಿ, ಪರಸ್ಪರ ಹಾಸ್ಯ, ವಿಡಂಬನೆ, ಗಂಭೀರ ಗುಣ, ಸೌಂದರ್ಯ, ಕಲಾತ್ಮಕತೆಯ ಮೆರಗಿನಿಂದ ಕೂಡಿಕೊಂಡಿರುತ್ತದೆ. ತೆಗಳಿಕೆ, ವ್ಯಂಗ್ಯ, ಗೌರವ ಮತ್ತು ರಾಮಾಯಣ, ಮಹಾಭಾರತ ಪುರಾಣ, ಐತಿಹ್ಯದಂತ ಕತೆಗಳು, ಚಾರಿತ್ರಿಕ ಧರ್ಮ, ಆಧುನಿಕತೆ ಇತ್ಯಾದಿ ವಿಷಯಗಳನ್ನು ಒಳಗೊಂಡಿರುತ್ತವೆ.

ಸ್ತ್ರೀಯರ ಒಡಪುಗಳಲ್ಲಿ ಹುದುಗಿರುವ ಬದುಕಿನಾನುಭವ, ಕೌಟುಂಬಿಕ ಪರಿಸರ, ಸಾಮಾಜಿಕ ತಾರತಮ್ಯ ಮನೋಭಾವಗಳನ್ನು ವಾಸ್ತವಿಕ ಚಿತ್ರಣಕ್ಕೆ ಕನ್ನಡಿ ಹಿಡಿಯುವುದೇ ಆಗಿದೆ. ಮದುವೆ ಒಂದು ಸಮಾಜದ ವ್ಯವಸ್ಥೆಯಾಗಿರುವುದು ಮಾನವ ಸಮಾಜದಲ್ಲಿಯೇ ಅತಿ ಮುಖ್ಯ ಘಟನೆ ಜಗತಿನಲ್ಲೇ ಎಲ್ಲಾ ಜನಾಂಗಗಳಲ್ಲೂ ಆಯಾ ಜನಾಂಗದ ಪ್ರಧಾನ ಘಟನೆಯಾಗಿದೆ. ಮದುವೆಯ ವ್ಯವಸ್ಥೆ ಇಲ್ಲದಿದ್ದರೆ ಕುಟುಂಬ ವ್ಯವಸ್ಥೆ ಈಗಿನಂತೆ ಇರುತ್ತಿರಲಿಲ್ಲವೆಂದು ಅನಿಸುತ್ತದೆ. ಭಾರತೀಯ ಜನಪದರು ಬಹುಮಂದಿ ಹಿಂದೂ ಧಾರ್ಮಿಕ ವಿವಾಹ ಪದ್ಧತಿಯನ್ನು ಅನುಸರಿಸಿ ಮದುವೆ ಮಾಡುತ್ತಾರೆ.

ಈ ರೀತಿ ಸಮಾಜ ವ್ಯವಸ್ಥೆಯಾಗಿ ಸಂಪೂರ್ಣ ಹೊಂದಿಕೊಂಡು ಬಾಳಿದವರು ಜನಪದರು. ವ್ಯವಸ್ಥೆಯೇ ಜನಪದ ಸಂಪ್ರದಾಯ. ಮದುವೆಯಾಗುವ ಸ್ತ್ರೀ–ಪುರುಷರನ್ನು ಶಾಸ್ತ್ರೋಕ್ತವಾಗಿ ಮದುವೆ ಮಾಡಿ ಜೀವನ ಪೂರ್ತಿ ಅನ್ಯೋನ್ಯತೆಯಿಂದ ಕೂಡಿ ಬಾಳಲಿ ಎಂದು ಹರಸಿ ಒಂದು ಶುಭ ದಿನದಂದು ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಕಳುಹಿಸಿಕೊಡುವ ಪದ್ಧತಿ ಇಂದಿಗೂ ನಾವು ಕಾಣುತ್ತೇವೆ. ಹೀಗೆ ಸಮಾಜ ವ್ಯವಸ್ಥೆಗೆ ಹೊಂದಿಕೊಂಡು ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ

ಬಾಳುವಾಗ ತಮಗಾದ ಅನುಭವವನ್ನು, ಕಷ್ಟಸುಖಗಳನ್ನು ಒಡಪುಗಳ ಮುಖಾಂತರ ಅಭಿವ್ಯಕ್ತವಾಗಿರುವುದನ್ನು ಇಲ್ಲಿ ಕಾಣಬಹುದು.

ಜಾನಪದರು ತಮ್ಮ ಸಮಾಜದ ಸುತ್ತಮುತ್ತಲಿನ ಪರಿಸರದಂತೆ ಬಾಳುವುದು, ಸಮಾಜದ ರೀತಿನೀತಿಗಳನ್ನು ಅರಿತುಕೊಂಡು ಪರಂಪರೆಯನ್ನುಳಿಸಿಕೊಂಡು ಬದುಕಿದವರು. ತಾವು ಹುಟ್ಟಿ ಬೆಳೆದ ಮನೆ, ಕೊಟ್ಟ ಮನೆಯನ್ನು ಅತಿ ಹೆಮ್ಮೆಯಿಂದ, ಭಕ್ತಿ–ಭಾವದಿಂದ ಮತ್ತು ಸಂಪ್ರದಾಯ ನಂಬಿಕೆಗಳನ್ನು ನಂಬಿ ನಿಷ್ಠೆಯಿಂದ, ಕಷ್ಟ–ಸುಖಗಳಿಂದ ತಾಳ್ಮೆಯಿಂದ ಬಾಳುವಂತವರು ತಂದೆ–ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ಬಂಧು–ಬಳಗದವರು ತೋರುತ್ತಿರುವ ಪ್ರೀತಿ ವಾತ್ಸಲ್ಯಗಳನ್ನು ಒಡಪುಗಳ ಮುಖಾಂತರ ಹೇಳುವಳು.

"ಉಂಡ ತಿಂದ ಹೇಳುವೆ ನಮ್ಮ ತಂದೆ ತಾಯಿ ಹೆಸರು
ಉಟ್ಟಿ ತೊಟ್ಟ ಹೇಳುವೆ ಅಣ್ಣ ತಮ್ಮಂದಿರ ಹೆಸರ
ಹೋಗಿ ಬಂದು ಹೇಳುವೆ ಬಂಧು ಬಳಗದವರ ಹೆಸರು
ಕಡೇ ತನಕ ಹೇಳುವೆ ನನ್ನ ರಾಯರ ಹೆಸರು

ಹೀಗೆ ತನ್ನ ತವರಿನ ಸಿರಿಯನ್ನು ಹೇಳುವಳು. ಗಂಡನನ್ನು ನಂಬಿ ನೆಚ್ಚಿಕೊಂಡು, ಗಂಡನ ಶ್ರೇಯಸ್ಸಿಗೆ, ಪ್ರತಿಷ್ಟೆ ಬಗ್ಗೆ ಅವರು ನಂಬಿಕೆ ಹೊಂದಿರುತ್ತಾರೆ. ಹೀಗೆ ಸ್ತ್ರೀಯರು ಸಹಜ ಗುಣ ಪ್ರವೃತ್ತಿ ಉಳ್ಳವರಾಗಿ ಸಮಾಜದ ರೀತಿ ನೀತಿಗಳನ್ನು ಅರಿತುಕೊಂಡು ಬಾಳಿ ಬಂದಿರುವ ಸಮಾಜದ ಎಲ್ಲಾ ಜನಾಂಗದ ಜನರು ಮೇಲು–ಕೀಳು, ಶ್ರೀಮಂತ–ಬಡವ ಎಂಬ ತಾರತಮ್ಯವನ್ನು ಭಾವನೆಯಲ್ಲಿ ತಮ್ಮ ತಮ್ಮ ಅನುಭವಗಳನ್ನು ಹೇಳಿರುವುದನ್ನು ಅರಿಯಬಹುದು.

ನೀತಿಯಿಂದ ನಡೆದರೆ ಸಂಸಾರ
ನೀತಿಬಿಟ್ಟು ನಡೆದರೆ ಸಂಹಾರ
ಸೇವೆಯಲ್ಲಿಯೇ ನನ್ನ ಬಾಳಿನ ಬಂಗಾರ
ಹೆತ್ತ ಬಳ್ಳಿಗೆ ಹತ್ತು ಉಂಗುರ
ಮತ್ತೊಂದು ಬಳ್ಳಿಗೆ ಸುತ್ತುಂಗುರು
ಹತ್ತ ಮಂದಿಯಲ್ಲಿ ಕುಂತ
ಹೌದ ಅನ್ನಿಸಿಕೊಳ್ಳತಾರ
ಗಟ್ಟಿ ದೇಹ
ದೊಡ್ಡ ಮನಸ್ಸು

ದುಷ್ಟರಿಗೆ ಹೆದರಿ

ದೂರದಿಂದ ಇರತಾರ"[೧೫]

ಗಂಡನೆ ಸರ್ವಸ್ವವೆಂದು ಅವನನ್ನೇ ಅವಲಂಬಿಸಿಕೊಂಡು ನೀತಿಯಿಂದ ನಡೆಯುವವರು ಹಣಕ್ಕೆ ಆಸೆ ಮಾಡದ ಮಾತಿಗೆ ಸೋಲದ ಬುದ್ಧಿವಂತ ಗಂಡನನ್ನು ಕುರಿತು ಆತನು ಮಾಡುವ ಪ್ರತಿಯೊಂದು ಕಾರ್ಯವನ್ನು ಗೌರವದಿಂದ ವರ್ಣಿಸಿ ಹೇಳಿದ್ದಾಳೆ. ಗಂಡನೆ ದೇವರೆಂದು ಬಂದ ಹೆಣ್ಣು ಸುಃಖ ದುಃಖದಲ್ಲಿ ಪಾಲುದಾರಳಾಗಿ ತನ್ನ ಇಡೀ ಬದುಕನ್ನೇ ಹಿರಿದು ಮಾಡಿಕೊಂಡು ತನ್ನ ಗಂಡನ ಮನೆಯನ್ನು ಬೆಳಗುತ್ತಾ ಗಂಡ ಎಷ್ಟೇ ಕಟುಕ, ಕ್ರೂರಿ, ಸೋಮಾರಿ, ಜಿಪುಣನಾಗಿದ್ದರೂ ಅವನನ್ನು ಹಾಡಿ ಹೊಗಳಿ ಆರಾಧಿಸುತ್ತಾಳೆ. ಪೂಜಿಸುತ್ತಾಳೆ. ಪ್ರೀತಿಸುತ್ತಾ ದೇವರೆಂದು ಆರಾಧಿಸುತ್ತಾಳೆ. ಗಂಡನನ್ನು ಅತಿ ಗೌರವದಿಂದ ಸಾಹುಕಾರ, ಸರದಾರ, ಸುಬೇದಾರ, ಶೆಟ್ಟರು, ಗೌಡರು, ಯಜಮಾನರು ಮುಂತಾದ ಗೌರವ ಸೂಚಕಗಳಿಂದ ಅತೀ ಗೌರವಸೂಚಕಳಾಗಿ ಹೊಗಳಿ ಹೇಳುವಳು.

'ಹೆಣ್ಣು ಸಂಸಾರದ ಕಣ್ಣು' ಅವಳಲ್ಲಿ ಮಮತೆ, ಮಾದುರ್ಯ ಮೈದೋರಿದಂತಿದೆ. ದಾಂಪತ್ಯ ಜೀವನ ಸುಖದಲ್ಲಿ ಇದ್ದಾಗ ಅವಳು ಎಲ್ಲರನ್ನು ಮರೆತು ತನ್ನ ಗಂಡನನ್ನು ನಂಬಿ ಜೀವನವನ್ನು ಸುಖಮಯವಾಗಿ ಕಳೆಯುತ್ತಿದ್ದಾಗ ಬಾಳಿನಲ್ಲಿ ಒಂದಿಲ್ಲೊಂದು ಕಷ್ಟಗಳನ್ನುಂಡು ಬದುಕಿದವಳು, ಗಂಡನ ಕೋಪ, ಮುನಿಸು, ಹಗೆತನ, ಅಸೂಯೆ, ಸವತಿಯ ಮತ್ಸರ, ದುಃಖ, ಮನಸಿನ ನೋವು ಮುಂತಾದವುಗಳಿಂದ ಜೀವನದಲ್ಲಿ ನಿರಾಸೆ ತುಂಬಿದಾಗಲೂ ಗಂಡನ ವರ್ತನೆಯನ್ನು ತಿಳಿದು ಅಸಹಾಯಕಳಾಗಿ ಅವಳು ತನ್ನ ಮನಸ್ಥಾಪವನ್ನು ಗಂಡನ ದೋಷಗಳನ್ನು ಒಡಪುಗಳ ಮೂಲಕ ಎತ್ತಿಹೇಳಿ ಅವನನ್ನು ಒಳ್ಳೆಯ ದಾರಿಗೆ ತರಲು ಹವಣಿಸುತ್ತಾಳೆ. ದಾಂಪತ್ಯ ಜೀವನದ ಸವಿರಸಗಳೇ ಒಡಪುಗಳ ಬದುಕಿನ ವಿರಸವೂ ಸರಸವಾಗಿ ಅಣಕಿಸುವಲ್ಲಿ ಮಾದುರ್ಯವನ್ನು ಮಾಗಿದ ಪ್ರೇಮದ ಕಂಪನವನ್ನು ಕಾಣುತ್ತೇವೆ. ಒಡಪುಗಳನ್ನು ಹೇಳುವಾಗ ಜನಪದ ಗೀತೆಗಳಲ್ಲಿ ಮಿಡಿಯುವ ದಾಂಪತ್ಯ ಪ್ರೇಮವೇ ಇಲ್ಲಿ ಮಿಡಿಯುವುದನ್ನು ಕಾಣಬಹುದು. ಇವು ಹೆಚ್ಚಾಗಿ ಪ್ರಾಸಾನುಪ್ರಾಸಗಳನ್ನು ಹೊಂದಿರುತ್ತವೆ. ಗಂಡನ ಕುರಿತು ಎಷ್ಟು ಪ್ರೀತಿಯಿಂದ ಹೇಳುತ್ತಾಳೆಯೋ ಅಷ್ಟೇ ಅವನಲ್ಲಿದ್ದ ದೋಷಗಳನ್ನು ಎತ್ತಿ ಹೇಳಿದ್ದಾಳೆ. ಎಲ್ಲಾ ಕಷ್ಟಸುಖಗಳನ್ನು ಸಹಿಸಿಕೊಂಡರೂ ತನ್ನ ಗಂಡನ ಪ್ರೀತಿ ಇನ್ನೊಬ್ಬಳ ಮೇಲೆ ಹರಿಯಿತೆಂದರೆ ತಾಳಲಾರದೆ ನೋವನ್ನು

ಅಂಗಿಯ ಮ್ಯಾಲಂಗಿ ಛಂದೇನೋ ನನರಾಯ

ರಂಬಿ ಮ್ಯಾಲ ಪ್ರತಿರಂ । ಬಂದರ

ಛಂದೇನೋ ರಾಯ ಮನಿಯಾಗ

ಎಂದು ಗೀತೆಯಲ್ಲಿ ಗಂಡನನ್ನು ಸರಿದಾರಿಗೆ ತರಲು ಪ್ರಯತ್ನಿಸಿದಂತೆ ಒಡಪುಗಳಲ್ಲಿಯೂ ಕೂಡ ಗಂಡನ ನಡೆನುಡಿಯಲ್ಲಿದ್ದ ದೋಷಗಳನೊಡಪಿನ ಮುಖಾಂತರ ತೋಡಿಕೊಂಡಿದ್ದಾಳೆ.

ಬದನಿಕಾಯ ಭರತ

ತುದಿನಾಲಗೆ ಸೇರೆತ

ನನ್ನ ಮರೆತ

ಉಡಕಿನ್ಯಾರನ ಬೆರೆತ

ನಮ್ಮ ಸಮಾಜದಲ್ಲಿ ಉಡಕಿ, ಪವರದಾಕಿ, ದಾಸರಾಕಿ ಹಾಗೂ ವೇಶ್ಯೆಯರಿಗೆ ಗೌರವವಿಲ್ಲ ಕೀಳುಭಾವನೆಯಿಂದ ಕಾಣುವರು. ಅಂತವರ ಜೊತೆಗೆ ಬೆರೆತ ತನ್ನ ಗಂಡನಿಗೂ ಸಮಾಜದಲ್ಲಿ ಗೌರವ ದೊರೆಯದು ಎಂದು ವ್ಯಥೆಪಟ್ಟು 'ಮದುವೆಯಾಕಿನ ಮರೆತು, ಉಡುಕಿಯಾಕಿನ ಬೆರೆತ, ಸಗ್ದಾಕಿ ಕೂಡ ಬೆರೆತಾನು ನನ್ನ ಮಾತ್ರ ಮರೆತಾನು ಎಂದು ಹೇಳಿದ ಇಂತಹ ಒಡಪುಗಳು ಮೇಲ್ನೋಟಕ್ಕೆ ಒರಟು ಅಶ್ಲೀಲವೆನಿಸಿದರೂ ಅಂತರಾಳದ ದುಃಖವನ್ನು ತೋಡಿಕೊಂಡು ಒಡಪುಗಳ ಮುಖಾಂತರ ಸಮಯ ನೋಡಿ ಹೊರಹಾಕಿ ತನ್ನ ಮನಸ್ಸನ್ನು ಹಗುರ ಮಾಡಿಕೊಂಡಿದ್ದಾಳೆ. ಸಮಾಜದಲ್ಲಿ ಗಂಡು ಹೆಣ್ಣಿನ ಸ್ಥಾನಮಾನ ಅವರು ವಿಶಿಷ್ಟ ಪ್ರಸಂಗಗಳಲ್ಲಿ ನಡೆದುಕೊಳ್ಳುವ, ನಡೆಸಿಕೊಳ್ಳುವ ಮುಂತಾದ ವಿಷಯಗಳಿಂದ ಒಡಪುಗಳನ್ನು ಕಾಣಬಹುದು. ಒಂದು ವೇಳೆ ಸ್ತ್ರೀಯರು ಒಡಪುಗಳನ್ನು ಸೃಷ್ಟಿಸದೆ ಹೋಗಿದ್ದರೆ ಒಡಪು ಪ್ರಕಾರವೇ ಇರುತ್ತಿರಲಿಲ್ಲ ಎನಿಸುತ್ತದೆ. ಸ್ತ್ರೀಯರ ಒಡಪುಗಳಲ್ಲಿ ಕಲಾತ್ಮಕತೆ, ಮಾದುರ್ಯ, ಮೌನ, ಸೌಂದರ್ಯ, ರಸಿಕತೆ, ಗೌರವ, ಭಕ್ತಿ, ಪ್ರೇಮ, ವ್ಯಂಗ್ಯ, ದರ್ಪ, ಹಾಸ್ಯವೂ ಕಂಡುಬರುತ್ತದೆ. 'ಕೂಲಿ ಮಾಡಿದರೇನು ಕೋರಿ ಹೊತ್ತರೇನು ನಮಗ ಸಮ ರಾಯ ಬಡವೀನು' ಎನ್ನುವ ಸ್ತ್ರೀಯರು ಗಂಡನೇ ತನ್ನ ಪಾಲಿಗೆ ದೇವರೆಂದು ಬಾಳುವರು.

ಒಡಪುಗಳು ನಿಂತ ನೀರಲ್ಲ. ಅವು ಒಂದೇ ಕಡೆ ಇರುವುದಿಲ್ಲ. ಅವು ಹರಿಯುವ ಪ್ರವಾಹವಿದ್ದಂತೆ, ಏಕೆಂದರೆ ಅವು ಸ್ತ್ರೀಯರ ಜೊತೆಗೆ ಅಲೆದಾಡುತ್ತಾ ಇರುತ್ತವೆ. ಸ್ತ್ರೀಯರು ಗಂಡನ ಮನೆಯಿಂದ ತವರು ಮನೆಗೆ, ತವರು ಮನೆಯಿಂದ ಗಂಡನ ಮನೆಗೆ ಓಡಾಡುತ್ತಿರುತ್ತವೆ. ಮತ್ತು ಶುಭಕಾರ್ಯಗಳಲ್ಲಿ ಒಡಪುಗಳು ಗುಂಪು ಕಟ್ಟಿಕೊಂಡು ಹರಿದಾಡುತ್ತಿರುತ್ತವೆ. ಮುತ್ತೈದೆಯರ ತುದಿನಾಲಗೆಯ ಮೇಲೆ ಸದಾ ಸುಳಿದಾಡುತ್ತಿರುತ್ತವೆ. ಈ ರೀತಿಯಾಗಿ ಒಡಪುಗಳು ದಾಂಪತ್ಯ ಜೀವನದ ಸರಸ ವಿರಸಗಳ ಸಂಗಮ ಕ್ಷೇತ್ರದಂತೆ ಅವುಗಳ ಸ್ವರೂಪ ಇಂತಹುದೇ ಎಂದು ಹೇಳಲಿಕ್ಕೆ ಬಾರದ ರೀತಿಯಲ್ಲಿ ಒಡಪುಗಳು ಹೆಣ್ಣು ಮಕ್ಕಳಲ್ಲಿ ಇನ್ನೂ ಸಾಕಷ್ಟು ಸಂಖ್ಯೆಯಲ್ಲಿರುವುದನ್ನು ಮನಗಾಣಬಹುದು.

ಇನ್ನೂ ಕೆಲವು ಒಡಪುಗಳನ್ನು ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಚಾರಿತ್ರಿಕ, ಆಧುನಿಕತೆ ಇಂಥವುಗಳಲ್ಲಿ ಗಂಡನ ಗುಣ ಸಾಮರ್ಥ್ಯದ ಬಗ್ಗೆ ಅವರು ಒಡಪುಗಳನ್ನು ಹೆಣೆದು ಹೇಳುವ ಕಲೆ

ಆ ಹೆಣ್ಣು ಮಕ್ಕಳಲ್ಲಿ ಎದೆಯ ತುಂಬಾ ತುಂಬಿಕೊಂಡು ನಿಂತಿವೆ. ಹೆಸರು ಹೇಳು ಅಂದರೆ ಸಾಕು ಫಳಪಳ ಅಂತ ಹೇಳಿ ಬಿಡುವ ಕಲೆ ಅವರಲ್ಲಿದೆ.

೭.೭ ಮಹಿಳೆಯರಿಗೆ ಸಂಬಂಧಿಸಿದ ಜನಪದ ಆಟಗಳು

ಮನರಂಜನೆ ಮತ್ತು ದೈಹಿಕ, ಮಾನಸಿಕ, ಬೌದ್ಧಿಕ ಉಲ್ಲಾಸ ನೀಡುವ ಆಟವು ಮಾನವನಿಗೆ ಸಹಜ ಪ್ರವೃತ್ತಿಯಿಂದ ಬಂದದ್ದಾಗಿದೆ. ಶೈಶಾವಸ್ಥೆಯ ನಂತರ ಮಾನವನಿಗೆ ಸಹಜವಾಗಿ ಆಟಗಳ ಗೀಳು ಪ್ರಾರಂಭವಾಗುತ್ತದೆ. ವಯಸ್ಸಿಗೆ ಅನುಗುಣವಾಗಿ ಆಟಗಳು ಬೇರೆ ಬೇರೆ ಹಂತಗಳನ್ನು ದಾಟಿ ಬಂದಿವೆ. ಮನುಷ್ಯನು ಸಾಂಸ್ಕೃತಿಕವಾಗಿ ಬೆಳೆದಂತೆಲ್ಲಾ ಆಟಗಳೂ ಬೆಳೆಯುತ್ತಾ ಸಂಕೀರ್ಣಗೊಳ್ಳುತ್ತಾ ಬಂದಿರಬೇಕು. ಕೈಕಾಲು ಬಡಿಯುವುದು, ಕೈಕಾಲು ಜಾಡಿಸುತ್ತಾ ಕುಣಿಯುವುದು ಅಣಕಮಾಡಿ ತೋರಿಸುವುದು ಇವೆಲ್ಲಕ್ಕೂ ಆಟವೆಂದು ಕರೆಯಲಾಗುತ್ತದೆ. ಕುಳಿತಲ್ಲಿಯೇ ಮನಸ್ಸಿನಲ್ಲಿ ನೆನಪಿಸಿಕೊಂಡು ಆಟಗಾರರು ಸಲಕರಣೆ ಇಲ್ಲದಿದ್ದರೂ ಹಗಲುಗನಸು ಕಾಣುತ್ತಾ ಆಡುವಂತ ಆಟಗಳನ್ನು ಹಗಲುಗನಸಿನ ಆಟಗಳೆಂದು ಕರೆಯುತ್ತೇವೆ. ಯಾವುದೇ ಬಗೆಯ ವಿನೋದ, ಚೆಲ್ಲಾಟ ಅಥವಾ ಕಾಲಹರಣ ಮಾಡುವುದಕ್ಕಾಗಿ ಬಳಸುವ ಆಂಗಿಕ ಚಟುವಟಿಕೆಗಳನ್ನು ಆಟಗಳೆಂದು ಕರೆಯಬಹುದು. ಆಟದ ವಾಸ್ತವ ಉದ್ದೇಶ ಉತ್ಪಾದನೆಯಲ್ಲ. ಕೇವಲ ಮನರಂಜನೆ ಮತ್ತು ಸಂತೋಷ.

ಜಿ.ಎನ್.ರೋಸ್ ಅವರು "ವ್ಯಕ್ತಿಯ ಸ್ವಂತಿಕೆಯನ್ನು ಪ್ರದರ್ಶಿಸುವ ಎಲ್ಲ ಸಂತೋಷಕರ, ಸಾಹಸಗಳು ಮತ್ತು ರಚನಾತ್ಮಕ ಚಟುವಟಿಕೆಗಳೇ ಆಟ"[೧೬] ಎಂದು ಹೇಳಿದ್ದಾರೆ. ಕುಳಿತಲ್ಲಿಯೇ ಮರದ ತುಂಡು ಥವಾ ಕಲ್ಲುಗಳನ್ನು ಜೋಡಿಸಿ ಆಡುವ ಆಟಗಳನ್ನು ರಚನಾತ್ಮಕ ಆಟಗಳೆಂದು ಕರೆಯುತ್ತಾರೆ. ಮನೆ ಅಂಗಳದ ಹೊರಗೆ ಇಬ್ಬರು ಸೇರಿ ಎರಡು ತಂಡಗಳಾಗಿ ಆಡುವುದಕ್ಕೆ ಕ್ರಿಯಾತ್ಮಕ ಆಟಗಳೆಂದು ಕರೆಯುತ್ತಾರೆ.ಅಂಗ ಸಾಧನೆಗಳಾದ ಭಾರ ಎತ್ತುವುದು, ಕುಸ್ತಿ, ವ್ಯಾಯಾಮ ಮತ್ತು ಆಸನಗಳನ್ನು ಸಾಂಪ್ರದಾಯಿಕವಾಗಿ ಆಚರಿಸುವಂತಹ ಗುಳ್ಳವ್ವ, ಗುರ್ಜಿ, ಗೌರಿ, ನಾಗರ ಪಂಚಮಿ, ಜೋಕಾಲಿ, ಹುತ್ತಪ್ಪನಾಟ, ಜಿದ್ದಿನ ಆಟಗಳು ಮುಂತಾದವುಗಳು ಆಟಗಳೇ ವೃತ್ತಿಕಲೆಗಳಾಗಿ ಪಳಗಿಸಿಕೊಂಡ ಡೊಂಬರಾಟ, ಕೋಲಾಟ, ದಬ್ಬೆಯಾಟ, ತೊಗಲು ಗೊಂಬೆಯಾಟ ಇಂತಹ ಎಲ್ಲವುಗಳಿಗೂ ಆಟಗಳೆಂದು ಕರೆಯುತ್ತೇವೆ. ಅಷ್ಟೇ ಅಲ್ಲದೆ ಅಭಿನಯಕ್ಕೆ ಸೀಮಿತವಾದ ಪಗರಣಗಳು, ಮನೆಯ ಬಾಗಿಲ ಮುಂದೆ ಬಂದು ಕುಣಿಯುವ ವೇಷಗಾರರು, ರಂಗಮಂಟಪವೇರುವ ಸಣ್ಣಾಟ, ದೊಡ್ಡಾಟ, ಯಕ್ಷಗಾನ, ನಾಟಕ, ಚಲನಚಿತ್ರ ಇವುಗಳನ್ನೆಲ್ಲಾ ಆಟಗಳೆಂದೇ ಕರೆಯಲಾಗುತ್ತದೆ. ಇದೆಲ್ಲವೂ ಮೀರಿ ಜಗವೇ ಒಂದು ನಾಟಕ ಜೀವನವೇ ಒಂದು ಆಟ ಎಂದು ಅನೇಕ ಸಂದರ್ಭಗಳಲ್ಲಿ ಹೇಳಿಕೊಳ್ಳುತ್ತೇವೆ. ದಿನನಿತ್ಯದಲ್ಲಿ ಆಡುವ ಆಟಗಳಿಗೆ ಉತ್ಸಾಹದ ಆಟಗಳೆಂದು, ಹಬ್ಬ ಹರಿದಿನಗಳಲ್ಲಿ ಆಡುವ ಆಟಗಳಿಗೆ ಉತ್ಸವದ ಆಟಗಳೆಂದು ಪರಿಗಣಿಸಲಾಗುತ್ತದೆ. ಮತ್ತೆ ಕೆಲವುಗಳಿಗೆ ಆಚರಣೆಯ ಅಥವಾ ನಾಟಕೀಯ ಆಟಗಳೆಂದು ಕರೆಯುತ್ತೇವೆ. ಆಟಗಳನ್ನು ಪ್ರಾದೇಶಿಕ ವೈಶಿಷ್ಟ್ಯ, ಸಂದರ್ಭ ಭಾಗವಹಿಸುವವರ ಸಂಖ್ಯೆ, ಅಳತೆ, ವಯಸ್ಸು ಮುಂತಾದವುಗಳ

ಆಧಾರದ ಮೇಲೆ ಹೆಸರಿಸಲಾಗುತ್ತದೆ. ಕರ್ನಾಟಕವು ಮೊದಲಿನಿಂದಲೂ ಧೈರ್ಯ ಕಾರ್ಯಗಳಿಗೆ ಪ್ರಖ್ಯಾತವಾದ ನಾಡು ಎಂದು ಹೆಸರಾಗಿದೆ. ಇಲ್ಲಿಯ ಆಟ ಮತ್ತು ಶೌರ್ಯ ಪ್ರದರ್ಶನಗಳಲ್ಲಿ ಅವಿನಾಭಾವ ಸಂಬಂಧವಿದೆ. ನಾಗರಿಕತೆಯ ವ್ಯವಹಾರಕ್ಕೆ ಒಳಗಾದ ಜನತೆಯ ವ್ಯಾವಹಾರಿಕ ದೃಷ್ಟಿಕೋನವೇ ಇಡೀ ಬದುಕನ್ನು ಆವರಿಸಿಕೊಂಡಿರುವುದರಿಂದ ಮನರಂಜನೆ ಕೊಡುವಂತಹ ಬೌದ್ಧಿಕ ಕಸರತ್ತಿಗೆ ಪ್ರೇರಕವಾಗುವಂತಹ ಆಟಗಳನು ನಿರ್ಲಕ್ಷಿಸುತ್ತಾ ಬರಲಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಮ್ಯಾಸನಾಯಕ ಜನಾಂಗವು ತನ್ನದೆ ಆದ ಕೆಲವು ಆಟಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದೆ.

ಗೊಟಗುಣಿ ಆಟ

"ಇದೊಂದು ಮನೆಯ ಒಳಗಡೆ ಆಡುವ ಆಟವಾಗಿದೆ. ಇದಕ್ಕೆ ಗುಣಿಮಣಿ, ಪತ್ತಾಮಣಿ ಆಟವೆಂತಲೂ ಕರೆಯುತ್ತಾರೆ. ಮರದ ಹಲಗೆಯಿಂದ ಮಾಡಿದ ಈ ಮಣೆಯಲ್ಲಿ ಎರಡು ಸಾಲುಗಳನ್ನು ಏಳು ಗಣಿಗಳನ್ನು ಮಾಡಿ ಅವುಗಳಲ್ಲಿ ನಾಲ್ಕು ಐದು ಹುಣಸೆ ಬೀಜಗಳನ್ನು ತುಂಬಿರುತ್ತಾರೆ. ಇವುಗಳಿಗೆ 'ಕಾಯಿ', 'ಪತ್ರ' ಎಂದು ಕರೆಯುವುದುಂಟು. ಈ ಆಟವನ್ನು ಇಬ್ಬರು ಸ್ತ್ರೀಯರು ಸೇರಿ ಆಡುತ್ತಾರೆ. ಇಬ್ಬರಲ್ಲಿ ಒಂದು ಕಡೆಯ ಸಾಲನ್ನು ಒಬ್ಬರು, ಇನ್ನೊಂದು ಕಡೆಯ ಸಾಲನ್ನು ಮತ್ತೊಬ್ಬರು ತಮ್ಮದೆಂದು ಕರೆದುಕೊಳ್ಳುತ್ತಾರೆ. ಆಟ ಪ್ರಾರಂಭಿಸುವವರು ತಮ್ಮ ಕಡೆಯ ಸಾಲಿನಲ್ಲಿ ಗುಳಿಗಳಲ್ಲಿ ಯಾವುದಾದರೂ ಒಂದನ್ನು ಮುರಿದು (ತೆಗೆದು)ಕೊಂಡು ಮುಂದಿನ ಗುಳಿ(ಮನೆ)ಗಳಿಗೆ ಹಾಕಿಕೊಂಡು ಹೋಗುತ್ತಾರೆ. ಕಾಳು ಮುಗಿದಾಗ ಮುಂದಿನ ಮನೆಯ ಕಾಳುಗಳನ್ನು ತೆಗೆದುಕೊಂಡು ಮತ್ತೆ ಅದರ ಮುಂದಿನ ಮನೆಗಳಿಗೆ ಹಾಕುತ್ತಾ ಹೋಗಬೇಕು. ಕಾಳು ಮುಗಿದಾಗ ಮುಂದಿನ ಮನೆಯ ಕಾಳುಗಳನ್ನು ತೆಗೆದುಕೊಂಡು ಮತ್ತೆ ಅದರ ಮುಂದಿನ ಮನೆಗಳಿಗೆ ಹಾಕುತ್ತಾ ಹೋಗಬೇಕು. ನಡುವೆ ಎಲ್ಲೋ ಕಾಲಿ ಮನೆ ಸಿಗುತ್ತದೆ. ಆಗ ಅಲ್ಲಿಯೂ ಕಾಳು ಮುಗಿಯದಿದ್ದರೆ ಮನೆಯನ್ನು ಸವರಿ ಮುಂದಿನ ಮನೆಯ ಕಾಯಿಗಳನ್ನು ತಮ್ಮ ಮನೆಯ ಕಾಯಿಗಳೆಂದು ತಿಳಿದುಕೊಳ್ಳಬೇಕು."[೧೭] ಖಾಲಿಮನೆಗಳಿಗೆ ನಾಲ್ಕು ಕಾಳುಗಳು ಒಂದುಗೂಡಿದಾಗ 'ಸರುಕಟ್ಟಿದ' ಎಂದು ಅವುಗಳನ್ನು ಆ ಸಾಲಿನ ಮಹಿಳೆಯು ತೆಗೆದುಕೊಳ್ಳುತ್ತಾಳೆ. ಹೀಗೆ ಆಡುವಾಗ ಎಲ್ಲಾದರೂ ಎರಡು ಮನೆ ಕಾಲಿ ಸಿಕ್ಕರೆ ಅವರು ಆಡುವಂತಿಲ್ಲ. ಆಟ ಬಿಟ್ಟುಕೊಡಬೇಕಾಗುವುದು. ಆಗ ಮುಂದಿನವರು ಆಡಬೇಕಾಗುತ್ತದೆ. "ಹೀಗೆ ಆಟದ ಎಲ್ಲಾ ಕಾಯಿಗಳು ಮುಗಿಯುವವರೆಗೆ ಮುಂದುವರಿದು ಕೊನೆಯಾಗುತ್ತದೆ. ಯಾರೋ ಒಬ್ಬರು ಹೆಚ್ಚು ಕಾಳುಗಳನ್ನು ಗೆದ್ದಿರುತ್ತಾರೆ. ಇನ್ನೊಬ್ಬರಿಗೆ ಮನೆಗಳನ್ನು ತುಂಬಿಸಲು ಕಾಳು ಉಳಿಯದಿದ್ದಾಗ ಆಗುವಷ್ಟನ್ನು ತುಂಬಿ ಉಳಿದವುಗಳನ್ನು 'ಪಿಗ್ಗಿ ಬಿದ್ದಿವೆ' ಎಂದು ತಿಳಿದು ಬಟ್ಟೆ ತುಂಡು, ಕಾಗದದ ಚೂರುಗಳನ್ನು ಬಿಟ್ಟು ಉಳಿದ ಮನೆಗಳಲ್ಲಿ ಆಟ ಮುಂದುವರಿಸಬೇಕು. ಹೀಗೆ ಕೊನೆಯವರೆಗೂ ಆಡಿ ಒಂದು ಮನೆಯನ್ನು ತುಂಬಿಸಲಾರದಷ್ಟು

ಕಾಳುಗಳನ್ನು ಉಳಿಸಿಕೊಳ್ಳದೆ ಕಳೆದುಕೊಂಡವರೇ ಸೋತಂತೆ. ಈ ತೆರನ 'ಗೊಟಗುಣಿ' ಅಥವಾ 'ಗೋಳಿಮಣೆ' ಆಟ ಆಡಲಾಗುವುದು."[೧೮]

ಚೌಕಾಬಾರ ಆಟ

ಸ್ತ್ರೀಯರ ಆಟಗಳಲ್ಲಿ ಇದೊಂದು ಜನಪ್ರಿಯ ಆಟವಾಗಿದೆ. ಇಬ್ಬರು ಅಥವಾ ನಾಲ್ಕು ಮಂದಿ ಇದರಲ್ಲಿ ಭಾಗವಹಿಸಬಹುದು. ಈ ಆಟವನ್ನು ಎರಡು ತೆರನಾಗಿ ಬರೆದುಕೊಂಡು ಆಡಬಹುದು. ಐದು ಮನೆಯನ್ನು ಬರೆದುಕೊಂಡು ನಾಲ್ಕು ನಾಲ್ಕು ಕಾಯಿಗಳನ್ನು ಇಟ್ಟುಕೊಂಡು ಆಡುವುದು ಏಳು ಮನೆಯನ್ನು ಬರೆದುಕೊಂಡು ಆರು ಕಾಯಿಗಳನ್ನು ಇಟ್ಟುಕೊಂಡು ಆಡುವುದು.

ಐದು ಮನೆಯ ಆಟದಲ್ಲಿ ಎಂಟು ಕಟ್ಟೆಮನೆ ಹಾಗೂ ಒಂದು ಹೆಣ್ಣಿನ ಮನೆ ಇರುವುದು. ಆಟ ಪ್ರಾರಂಭಿಸುವವರು ಕವಡೆಗಳನ್ನು (ಕೆಲವು ಕಡೆಗಳಲ್ಲಿ ಹುಣಸೆ ಬೀಜಗಳನ್ನು ಬಳಸುತ್ತಾರೆ) ಬಳಸಿಕೊಂಡು ಕವಡೆಗಳನ್ನು ಚೆನ್ನಾಗಿ ಕುಲುಕಿ ನೆಲದ ಮೇಲೆ ಹಾಕಿದಾಗ ಅವುಗಳಲ್ಲಿ ಕೆಲವು ಬೋರಲು ಬೀಳುತ್ತವೆ. ಮತ್ತೆ ಕೆಲವು ಮುಖ ಮೇಲ್ಮಾಡಿಕೊಂಡು ಬೀಳುತ್ತವೆ. ಒಮ್ಮೊಮ್ಮೆ ನಾಲ್ಕು ಕವಡೆ ಅಂಗಾತ ಬೀಳುತ್ತದೆ. ಅದನ್ನು 'ಚೌಕ' ಎಂದು ಕರೆಯುತ್ತಾರೆ. ಕೆಲವು ಸಂದರ್ಭದಲ್ಲಿ ನಾಲ್ಕು ಬೋರಲು ಬಿದ್ದಾಗ 'ಬಾರ' ಎಂದು ಕರೆಯುತ್ತಾರೆ. ಇವುಗಳನ್ನು ಕ್ರಮವಾಗಿ ನಾಲ್ಕು ಅಥವಾ ಎಂಟು ಎಂದು ಸಂಕೇತಿಸಿ ಅಷ್ಟು ಮನೆಗಳನ್ನು ಎಣಿಸಿ ಕಾಯಿಯನ್ನು ನೆಡೆಸುತ್ತಾ ಮುಂದಿಡುತ್ತಾ ಹೋಗಬೇಕು. ಕಾಯಿಗಳು ಹೆಣ್ಣಿನ ಮನೆಗೆ ಹೋಗಬೇಕಾದರೆ ಒಳಗೆ ಪ್ರವೇಶಿಸಬೇಕು. ಅಂದರೆ ಎದುರಾಳಿಯ ಕಾಯಿಯನ್ನು ಒಡೆದಾಗ ಮಾತ್ರ ಅಂದರೆ 'ಹೊಡೆತರಗಾಯಿ' ಅಥವಾ ಕಡತಗಾಯಿ ಇಲ್ಲದೆ ಒಳ ಪ್ರವೇಶಿಸುವಂತಿಲ್ಲ. ಬೇಗ ಈ ಅವಕಾಶ ದೊರೆತು ಯಾರು ತಮ್ಮ ಎಲ್ಲಾ ಕಾಯಿಗಳನ್ನು 'ಹಣ್ಣು' ಮಾಡಿಕೊಳ್ಳುತ್ತಾರೋ ಅವರೇ ಗೆದ್ದಂತೆ. 'ಹೊಡೆತಲ್ಲಿಗಾಯಿ' ಸಿಗದಿದ್ದಲ್ಲಿ ಅವರು ಹೊರಗೇ ಸುತ್ತಬೇಕಾಗುತ್ತದೆ. ಕಟ್ಟೆಮನೆಗಳಲಿ ಹೊಡೆಯುವಂತಿಲ್ಲ. ಚೌಕ, ಬಾರ ಬಿದ್ದಾಗ ಮತ್ತು ಹೊಡೆತಲ್ಲಿಗಾಯಿ ಸಿಕ್ಕಾಗ ಮತ್ತೊಂದು (ಕೈಗೆ) ಆಟಕ್ಕೆ ಅವಕಾಶವಿರುತ್ತದೆ.

ಇದೇ ತೆರನಾಗಿ ಆರು ಕಾಯಿಯಾಟವನ್ನು ಆರು ಕವಡೆಗಳನ್ನು ಉಪಯೋಗಿಸಿ ಆಡಲಾಗುವುದು. ಇದರಲ್ಲಿ ಎರಡೆರಡು ಕಾಯಿಗಳನ್ನು ಜೊತೆಯಲ್ಲಿಯೇ ಮುಂದುವರಿಸುವ ಅವಕಾಶವಿದೆ. ಇದಕ್ಕೆ ಆಟದ ಮೊದಲೇ ಒಪ್ಪಂದ ಮಾಡಿಕೊಂಡಿರಬೇಕಾಗುತ್ತದೆ.

ಪೀಪಿ ಆಟ

ಇದು ಹುಡುಗಿಯರು ಆಡುವ ಆಟವಾಗಿದೆ. ಹುಡುಗಿಯರಿಬ್ಬರು ಕಪ್ಪೆಯ ರೀತಿ ಕುಪ್ಪಳಿಸುತ್ತಾ ಸುತ್ತುತ್ತಿರಬೇಕು. ಈ ರೀತಿ ಸುತ್ತುತ್ತಿರುವಾಗ ಒಂದೇ ಉಸುರಿನಲ್ಲಿ ಪೀ ಪೀ ಎಂದು ಕೂಗುತ್ತಿರುತ್ತಾರೆ. ಯಾರು ಮೊದಲು ಪೀ ಪೀ ಎನ್ನುವುದನ್ನು ನಿಲ್ಲಿಸುತ್ತಾರೆಯೋ ಅವರು ಸೋತಂತೆ.

ಜೋಡ್ ಕೈ ಆಟ

ಇಬ್ಬರು ಹುಡುಗಿಯರು ಎದುರು ಬದುರು ತಮ್ಮ ಹಸ್ತಗಳನ್ನು ಕತ್ತರಿಯಾಗಿಟ್ಟುಕೊಂಡು ಪರಸ್ಪರರ ಹಸ್ತಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿರುತ್ತಾರೆ. ಒಬ್ಬರನ್ನೊಬ್ಬರು ಜಗ್ಗುತ್ತಾ ಹಿಂದಕ್ಕೆ ಬಾಗಿ ಒಂದೇ ಸಮನೆ ತಿರುಗುತ್ತಾ ಆಟವಾಡುವುದು.

ಡಿಕ್ಕಿ ಹಬ್ಬ

ಪಾಲನಾಯಕ ಗಾದ್ರಿ ಗುಡ್ಡದ ಸಮೀಪದಲ್ಲಿ ಮಡಿದಿದ್ದರಿಂದ ಅವನ ಹೆಸರಿಗೆ ಗಾದ್ರಿ ಸೇರಿಕೊಂಡು 'ಗಾದ್ರಿ ಪಾಲನಾಯಕ'ನೆಂದು ಹೆಸರಾದ. ಚಿನ್ನಪಾಳನಾಯಕ ಕಂಪಳ ತೆಗೆದುಕೊಂಡು ನನ್ನಿವಾಳಕ್ಕೆ ಬಂದ. ಯಾಕೋ ದನಗಳಿಗೆ ಕೇಡಾಗೋಕೆ ಶುರುವಾದಾಗ ಪಂಚಾಂಗ ತೆಗೆಸಿದರು. 'ಬಂಗಾರದ ಹುಲಿಯ ಮೂರ್ತಿಯನ್ನು ಮಾಡಿ ಪೂಜಿಸಿದರೆ ಹುಲಿ, ಹುಲಿಮರಿಗಳನ್ನು ಕೊಂದ ದೋಷವು ಹರಿಯುತ್ತದೆ. ಹುಲಿಯ ಪಾಪ ಕಳೆಯುತ್ತೆ' ಎಂದು ತಿಳಿಸಿದಾಗ ಎತ್ತಿನ ಕಿಲಾರಿಗಳು, ಹಸಿರು ಮರ ಒಣಗಿ ಮತ್ತೆ ಚಿಗುರಿದರೆ, ದೇವರು ಮಾಡ್ತೀವಿ ಎಂದು ಹರಸಿಕೊಂಡರು. ಹಾಗೆಯೇ ಆಯಿತು. 'ಎತ್ತಿನ ಹಬ್ಬ' ದೀವಣಿಗೆ, ಗುಗ್ಗರಿ ಹಬ್ಬ, ಡಿಕ್ಕಿ ಹಬ್ಬ ಮಾಡಿದರೆ ನಿಮಗೆ ಒಲಿಯುತ್ತೇನೆ ಎಂದು ಬಂಗಾರ ದೇವರು (ಹುಲಿಯ ಮೂರ್ತಿಯನ್ನೇ ಬಂಗಾರ ದೇವರು ಎನ್ನುತ್ತಾರೆ) ಹೇಳಿತು. ಆಗಿನಿಂದ ಮಾಘದಲ್ಲಿ ಗುಗ್ಗರಿ ಹಬ್ಬ, ಡಿಕ್ಕಿ ಹಬ್ಬ, ಜೇಷ್ಠದಲ್ಲಿ ಎತ್ತಿನ ಹಬ್ಬ, ಕಾರ್ತಿಕದಲ್ಲಿ ದೀವಣಿಗೆ ಹಬ್ಬ ಮಾಡುವ ಕ್ರಮ ಪ್ರಾರಂಭವಾಯಿತು. ಗಾದ್ರಿ ಪಾಲನಾಯಕನನ್ನು 'ದೇವರು' ಮಾಡಿಕೊಂಡು ಪೂಜಿಸತೊಡಗಿದರು.

ಗಾದ್ರಿ ಪಾಲನಾಯಕನಿಗೆ ನವಣೆ ಧಾನ್ಯ ಸೇರದಿದ್ದರಿಂದ ಇಡೀ ಮ್ಯಾಸ ಮಂಡಲವೇ ನವಣೆ ಎಡೆ ಬಹಿಷ್ಕರಿಸಿ 'ನವಣಿ ಬತ್ತ' (ನವಣೆ ವೃತ)ಕ್ಕೆ ನಿಂತಿತು. ನನ್ನಿವಾಳದ ಒಕ್ಕಲಿನವರು. ೫೦-೬೦ ವರ್ಷಗಳಿಗೊಮ್ಮೆ ಮಿಂಚೇಲಿ ಅರಣ್ಯದಲ್ಲಿರುವ ಗಾದ್ರಿ ಪಾಲನಾಯಕ ಮತ್ತು ಹುಲಿ-ಗುಡ್ಡೆ (ಸಮಾಧಿ)ಗಳಗೆ ಹೋಗುತ್ತಾರೆ. ಗಾದ್ರಿ ಗುಡ್ಡಕ್ಕೆ ಹೋಗಿ ಬಂದರೆ 'ದೊರೆ' ಮತ್ತು 'ಪೂಜಾರಿ' ಸಾಯುತ್ತಾರೆ ಎಂಬ ನಂಬಿಕೆ ಇದೆ. ಆದ್ದರಿಂದ ದೊರೆ ಇನ್ನು ೫-೬ ವರ್ಷಕ್ಕೆ ಸಾಯಬಹುದು ಎನ್ನುವಾಗ ಗಾದ್ರಿ ಗುಡ್ಡಕ್ಕೆ ಹೋಗುತ್ತಾರೆ. ಆದರೆ ಬಚ್ಚಬೋರನ ಹಟ್ಟಿಯವರು ಗಾದರಿ ಪಾಲನಾಯಕನ 'ಬಲ್ಲದೇವರು' ತೆಗೆದುಕೊಂಡು ಬರುತ್ತಿದ್ದರು. ಪ್ರತಿ ವರ್ಷ ಗಾದ್ರಿ ಗುಡ್ಡಕ್ಕೆ ಹೋಗಿ 'ಪರವು' ಮಾಡಿಕೊಂಡು ಬರುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಮಳೆ-ಬೆಳೆ ಸಮಸ್ಯೆಯಿಂದ ೩-೫ ವರ್ಷಗಳಿಗೊಮ್ಮೆ ಹೋಗಿಬರುತ್ತಾರೆ.

ಗಾದ್ರಿ ಪಾಲನಾಯಕನ ಕತೆ ಸತ್ಯ-ಅಹಿಂಸೆಗಳ ಮುಖಾಮುಖಿಯಂತೆ ಕಾಣುತ್ತದೆ. ಗೋವಿನ ಕತೆಯಲ್ಲಿಯೂ ಇಂಥದ್ದೇ ಒಪ್ಪಂದ ಹುಲಿಯ ಸಾವಿಗೆ ಕಾರಣವಾಗುತ್ತದೆ. ಆಧರೆ ಇಲ್ಲಿ ಹಿಂಸೆಗೆ ಪ್ರತಿಹಿಂಸೆ ಎಂಬಂತೆ ಇಬ್ಬರ ದುರಂತದಲ್ಲಿ ಅಂತ್ಯವಾಗುತ್ತದೆ. ವಿಶಿಷ್ಟವಾದ ಪಶುಪಾಲಕ ಸಂಸ್ಕೃತಿಯಲ್ಲಿ

ಕಾಡುವ ವ್ಯಾಘ್ರವೇ ದೈವವಾಗಿ ಸೌಮ್ಯತೆಯನ್ನು ಪಡೆಯುತ್ತದೆ. ಅದನ್ನು ಕೆಣಕಿದವನೂ ದೇವರಾಗಿ ರೂಪುಗೊಳ್ಳುವ ಪರಿ ಸಾಂಸ್ಕೃತಿಕ ರೋಮಾಂಚನಗಳಲ್ಲೊಂದು

ಈ ಹಬ್ಬ ಬಂಗಾರ ದೇವರ ಪಿತ್ರಾರ್ಥವಾಗಿ ನಡೆಯುವಂತದ್ದು. ಏಕೆಂದರೆ ಈ ದೇವರಿಗೆ ತೆಂಗಿನಕಾಯಿ ಸೇರುವುದಿಲ್ಲ. ಹೀಗಾಗಿ ತೆಂಗಿನ ಕಾಯಿ ಒಡೆಯುವಂತಿಲ್ಲ. ಗಂಡು ಹುಲಿ ನೀರು ಕುಡಿದು ಸತ್ತರೆ, ಹೆಣ್ಣು ಹುಲಿ ನೀರು ಕುಡಿಯದೇ ಸತ್ತಿದ್ದರಿಂದ ನೀರುಳ್ಳ ತೆಂಗಿನಕಾಯಿ ಇದಕ್ಕೆ ಆಗುವುದಿಲ್ಲ. ತೆಂಗಿನಕಾಯಿ ಒಡೆಯುವ ಪ್ರಕ್ರಿಯೆಯನ್ನು ನೆರವೇರಿಸಲಾಗುತ್ತದೆ.

ಈ ದೇವರು ಇರುವ ನನ್ನಿವಾಳಕ್ಕೆ ಸಮೀಪದ ಹಟ್ಟಿಯನ್ನು ಬಂಗಾರದೇವರ ಹಟ್ಟಿ ಎಂದು ಕರೆಯುತ್ತಾರೆ. ಇದರ ಗುಡಿ ಕೂಡ ಗುಡಿಸಿಲಿನದ್ದು. ಸುತ್ತ ಲಕ್ಕಲಿ ಸೊಪ್ಪಿನ ಪೌಳಿ ಇದೆ. ಹುಲಿ ಪ್ರತಿಮೆಯನ್ನು ಗುಡಿಯಲ್ಲಿ ಕಾಣುವಂತೆ ಇಟ್ಟಿಲ್ಲ. ಮೂಲ ಮೂರ್ತಿಯಾದ ಆ ಹುಲಿಯ್ನು ಪೂಜಾರಿ ನೆಲದೊಳಗೆ ಬಚ್ಚಿಟ್ಟಿರುತ್ತಾನೆ. ಆ ನೆಲೆ ಅವನಿಗೆ ಮಾತ್ರ ಗೊತ್ತು. ವಿಶೇಷ ಸಂದರ್ಭಗಳಲ್ಲಿ ಮಾತ್ರ ಹೊರಗೆ ತೆಗೆದು ಪೂಜೆ ಸಲ್ಲಿಸಿ ಮತೆ ಹೂತು ಬಿಡುತ್ತಾನೆ. ಹೀಗಾಗಿ ಮೂಲ ದೇವರ ಹೆಸರಿನಲ್ಲಿ ಒಂದು ಪೆಟ್ಟಿಗೆ ದೇವರು ಮತ್ತು ಒಂದು ಅಲಗು ಮಾಡಿಕೊಂಡಿದ್ದಾರೆ. ಹೊರಗಡೆ ಹೊರಟಾಗ ಇವು ಉತ್ಸವಮೂರ್ತಿಗಳಾಗಿ ಹೋಗುತ್ತವೆ. ಹಟ್ಟಿಯೊಳಗೆ ಹೆಣ್ಣು ಮಕ್ಕಳ 'ರಜಸ್ಸು' ಪುಷ್ಪವತಿ ಆದಾಗ ಹನ್ನೊಂದು ದಿನಗಳ ತನಕ ಈ ದೇವರ ಗುಡಿಯ ಬಾಗಿಲು ತೆರೆಯುವುದಿಲ್ಲ. ಡಿಕ್ಕಿ ಹಬ್ಬಕ್ಕಾಗಿ ಬಂಗಾರ ದೇವರು ನನ್ನಿವಾಳಕ್ಕೆ ಬರುತ್ತದೆ. ಅದಕ್ಕೆ ಲಕ್ಕಲಿ ಸೊಪ್ಪಿನ ಪೌಳಿ ಇರುವ ಗುಡಿಸಲು ಗುಡಿಯನ್ನು ಬಂಗಾರ ದೇವರ ಹಬ್ಬಿರುವ ಮಾದರಿಯಂತಹುದನ್ನೇ ಇಲ್ಲಿ ನಿರ್ಮಿಸಿರುತ್ತಾರೆ. ಗುಗ್ಗರಿ ಹಬ್ಬಕ್ಕಾಗಿ ಆಗಮಿಸಿದ ಜಗಲೂರು ಪಾಪಯ್ಯ ಮತ್ತು ಬೊಮ್ಮದೇವರುಗಳಿಗೆ ಕೇವಲ ಗುಡಿಸಲು ಗುಡಿ ಕಟ್ಟುತ್ತಾರೆ.

ಡಿಕ್ಕಿ ಹಬ್ಬದಲ್ಲಿ ಭಾಗವಹಿಸುವ ಮಹಿಳೆಯರಲ್ಲಿ ಕಟ್ಟೆಮನೆ 'ದೊರೆ' ಮತ್ತು ಬಂಗಾರ ದೇವರ ಪೂಜಾರಿಗಳ ಕುಟುಂಬ ವರ್ಗದವರು, ಬಂಧುಗಳು ಇರುತ್ತಾರೆ. ಅತ್ತೆ ಸೊಸೆಯರು ಎದುರು ಬದುರು ಸಾಲುಗಳಲ್ಲಿ ಕುಳಿತಿರುತ್ತಾರೆ. ಹಳೆ ಕಾಲದ ವಯಸ್ಸಾದ ಮಹಿಳೆಯರು ಬಿಳಿ ಪತ್ತಲ (ಸೀರೆ) ಉಟ್ಟರೆ, ಈ ಕಾಲದ ಕಿರಿಯ ವಯಸ್ಸಿನವರು ಮಾಮೂಲು ಬಟ್ಟೆಗಳನ್ನು ಧರಿಸಿರುತ್ತಾರೆ. ಇವರಲ್ಲಿ ಪೂಜಾರಿಯ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಾರೆ. ಸಮೀಪದಲ್ಲೆ ದೇವರ ಎತ್ತುಗಳು, ಕಿಲಾರಿಗಳು ಇರುತ್ತಾರೆ.

ಪೂಜಾರಿ ಡಿಕ್ಕಿ ನಡೆಯುವ ಆವರಣದಲ್ಲಿ ಬೆಂಕಿ ಹಚ್ಚಿ ಅದು ಸುಟ್ಟ ನಂತರ ಸ್ಪರ್ಧಿಗಳ ಮೇಲೆ ಗೋಗಂಜು ಚೆಲ್ಲಿ ಅನುಮತಿ ನೀಡುತ್ತಾನೆ. ಅತ್ತೆ ಸೊಸೆಯರು ಉನ್ಮತ್ತರಾದವರಂತೆ ಒಬ್ಬರ ತಲೆಗಳನ್ನು ಒಬ್ಬರು ಓಡಿದು ಘಟ್ಟಿಸಿಕೊಳ್ಳುತ್ತಾರೆ. ಇದು ಕೆಲವೇ ಕ್ಷಣಗಳು ನಡೆಯುವ ಘಟನೆ. ಸ್ವಲ್ಪ ಹೊತ್ತು ಬಿಡುವು ಕೊಟ್ಟು ಮತ್ತೆ ಹೀಗೆ ಕೊನೆಯ ಮೂರನೆಯ ಸಲವೂ ಡಿಕ್ಕಿ ನಡೆಯುತ್ತದೆ. ಕೆಲವು ಅತ್ತೆ-ಸೊಸೆಯರು ಜುಟ್ಟು ಹಿಡಿದುಕೊಂಡು ಕುಸ್ತಿಗೆ ಇಳಿದು ಬಿಡುತ್ತಾರೆ. ಸುತ್ತಲೂ

ಅಡ್ಡಾಡುತ್ತಿರುವ ಬೆತ್ತದ ಕೋಲಿನವರು ಸಮಾಧಾನ ಮಾಡುತ್ತಾರೆ. ಇದು ಒಂದು ರೀತಿಯಲ್ಲಿ ಪಾರಂಪರಿಕ ವೈರಿಗಳಾದ ಅತ್ತೆ ಸೊಸೆಯರು ತಮ್ಮ ಆಕ್ರೋಶಗಳನ್ನು ಡಿಕ್ಕಿಯಲ್ಲಿ ಹೊರಕ್ಕೆ ಹಾಕಿ, ಒಂದು ರೀತಿಯ ಮಾನಸಿಕ ಬಿಡುಗಡೆ ಪಡೆಯುವ ಪ್ರಕ್ರಿಯೆಯೂ ಆಗಿದೆ. ಹುಲಿ–ಪಾಲನಾಯಕರ ಹೋರಾಟದ ಮುಖಾಮುಖಿಯ ಅನುಕರಣೆಯೆ ಈ ಹಬ್ಬ ಹೀಗೆ ಅನೇಕ ಒಗಟುಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿದೆ.

"ಡಿಕ್ಕಿ ಹಬ್ಬ ಚಳ್ಳಕೆರೆಯಿಂದ ವಾಯುವ್ಯ ದಿಕ್ಕಿಗೆ ಎಂಟು ಕಿ.ಮೀ ದೂರದಲ್ಲಿರುವ ನನ್ನಿವಾಳ ಮ್ಯಾಸಬೇಡರ ಒಂದು ಪ್ರಮುಖವಾದ ನೆಲೆ ಮತ್ತು ಅವರ ಸಾಂಸ್ಕೃತಿಕ ಕೇಂದ್ರ ನನ್ನಿವಾಳದ ಸುತ್ತ ೨–೩ಕಿ.ಮೀಗಳ ಅಂತರದಲ್ಲಿ ಹತ್ತಾರು ಮ್ಯಾಸಬೇಡರ ಹಟ್ಟಿಗಳಿವೆ. ಇಲ್ಲಿ ಅಪರೂಪಕ್ಕೆ ಡಿಕ್ಕಿ ಹಬ್ಬ ನಡೆಯುತ್ತದೆ. ಸುತ್ತಿನ ಹಟ್ಟಿಗಳಿಂದ ೧೨ ಪೆಟ್ಟಿಗೆ ದೇವರುಗಳು ಸೇರುತ್ತವೆ. ಹನ್ನೆರಡು ಪೆಟ್ಟಿಗೆ ದೇವರುಗಳಲ್ಲೊಂದಾದ ಬಂಗಾರ ದೇವರಿಗೆ ತೆಂಗಿನಕಾಯಿ ಸೇರುವುದಿಲ್ಲ. ಹೀಗಾಗಿ ಆ ದೇವರಿಗೆ ತೆಂಗಿನಕಾಯಿ ಒಡೆಯುವಂತಿಲ್ಲ. ಆದರೆ ತಲೆಯೆನಗೆ ತೆಂಗಿನಕಾಯಿ ಎಂದು ಭಾವಿಸಿ ಹರಕೆ ಹೊತ್ತ ಅತ್ತೆ ಸೊಸೆಯರು ಅಂದರೆ ನೆಂಟರು ಭಂಟರು ಒಬ್ಬರ ಜುಟ್ಟು (ತಲೆಕೂದಲು) ಮತ್ತೊಬ್ಬರು ಹಿಡಿದು ಒಬ್ಬರ ತಲೆಗೊಬ್ಬರು 'ಫಟ್ – ಫಟ್' ಕುಟ್ಟಿಕೊಳ್ಳುವ ಸ್ತ್ರೀಯ ಮೂಲಕ ಅಪರೋಕ್ಷವಾಗಿ ತೆಂಗಿನಕಾಯಿ ಅರ್ಪಿಸಿದ ತೃಪ್ತಿ ಪಡೆಯುತ್ತಾರೆ. ಸೋತವರು ಗೆದ್ದವರಿಗೆ ಕಜ್ಜಾಯ ಕೊಡಿಸಬೇಕಾಗಿರುವುದರಿಂದ ಇದೊಂದು ಆಟವೂ ಆಗುತ್ತದೆ."[೧೯] ಈ ಊರಿನ ಮತ್ತೊಂದು ವೈಶಿಷ್ಟ್ಯವೆಂದರೆ, "ಈ ಊರಿನ ಹೊಲ–ಮೇರೆಯಲ್ಲಿ ಒಂದೇ ಒಂದು ಕಾಗೆಯೂ ಪ್ರವೇಶಿಸುವುದಿಲ್ಲ. ಹಿಂದೆ ಮಾಂತ್ರಿಕನೊಬ್ಬ ಆ ರೀತಿ 'ಕಟ್ಟು' ಮಾಡಿದ ಕತೆ, ಡಿಕ್ಕಿ ಹಬ್ಬದ ಸಂದರ್ಭದಲ್ಲಿ ಹಾಡುವ ಸೋಬಾನೆ ಪದಗಳೊಂದಿಗೆ ತಳುಕು ಹಾಕಿಕೊಂಡಿರುವುದನ್ನು ಗಮನಿಸಬಹುದು."[೨೦]

ಕೊನೆ ಟಿಪ್ಪಣಿ

೦೧ ಬಸಮ್ಮ–ಬೇಡರಹಳ್ಳಿ, ೪೫ ವರ್ಷ, ಚಿತ್ರದುರ್ಗ(ಜಿ)

೦೨ ಕರಿಶೆಟ್ಟಿರುದ್ರಪ್ಪ, ಮ್ಯಾಸನಾಯಕರು, ಪು–೧೨೨

೦೩ ತಿಮ್ಮಕ್ಕ–ಬೇಡರಹಳ್ಳಿ, ೪೫ ವರ್ಷ, ಚಿತ್ರದುರ್ಗ(ಜಿ)

೦೪ ಪಾಪಮ್ಮ–ಕಂಪಳದೇವರಹಟ್ಟಿ, ೮೦ ವರ್ಷ, ಮೊಳಕಾಲ್ಮೂರು(ತಾ), ಚಿತ್ರದುರ್ಗ(ಜಿ)

೦೫ ಸಣ್ಣ ಓಬಕ್ಕ, ೨೯ ವರ್ಷ, ಮೊಳಕಾಲ್ಮೂರು(ತಾ), ಚಿತ್ರದುರ್ಗ(ಜಿ)

೦೬ ಎ.ಒ.ಬೋರಮ್ಮ, ಎಂ.ಎ.ಚೆನ್ನಮ್ಮ, ೪೫ ವರ್ಷ, ನೆಲಗೇತನಹಟ್ಟಿ, ಚಿತ್ರದುರ್ಗ(ತಾ),(ಜಿ)

೦೭ ಬೋರಮ್ಮ–ಕಾಟಪ್ಪನಹಟ್ಟಿ, ೭೦ ವರ್ಷ, ಚಳ್ಳಕೆರೆ(ತಾ)

೦೮ ಪಾಪಮ್ಮ–ಗೌರಸಮುದ್ರ, ೫೨ ವರ್ಷ, ಚಳ್ಳಕೆರೆ(ತಾ)

೦೯ ಪಾಪಮ್ಮ-ತುಮಕೂರ್ಲಳ್ಳಿ, ೫೦ ವರ್ಷ, ಮೊಳಕಾಲ್ಮೂರು(ತಾ)

೧೦ ಪಾಪಮ್ಮ-ತುಮಕೂರ್ಲಳ್ಳಿ, ೪೦ ವರ್ಷ, ಮೊಳಕಾಲ್ಮೂರು(ತಾ)

೧೧ ಪಾಪಕ್ಕ-ತುಮಕೂರ್ಲಳ್ಳಿ, ೪೦ ವರ್ಷ, ಮೊಳಕಾಲ್ಮೂರು(ತಾ)

೧೨ ಪಾಪಮ್ಮ-ತುಮಕೂರ್ಲಳ್ಳಿ, ೫೦ ವರ್ಷ, ಮೊಳಕಾಲ್ಮೂರು(ತಾ)

೧೩ ಜನಪದ ಸಾಹಿತ್ಯದಲ್ಲಿ ಮಹಿಳಾ ಪ್ರತಿಭಟನೆ, ಎಂ.ಫಿಲ್, ಆಂಗಿಕ ಪ್ರಬಂಧ(ಅಪ್ರಕಟಿತ)

೧೪ ಸುನಂದ, ೫೦ ವರ್ಷ, ರಾಯಪುರದ ಮ್ಯಾಸರಟ್ಟಿ, ಮೊಳಕಾಲ್ಮೂರು(ತಾ)

೧೫ ಬೋರಮ್ಮ, ೩೫ ವರ್ಷ, ಹಿರೇಹಳ್ಳಿ, ಚಳ್ಳಕೆರೆ(ತಾ)

೧೬ ಉದ್ಧೃತ-ಅರವಿಂದ ಮಾಲಗತ್ತಿ, ಉತ್ತರ ಕರ್ನಾಟಕದ ಜಾನಪದ ಆಟಗಳು(ಅಪ್ರಕಟಿತ), ಪು-೯೨

೧೭ ಕರಿಶೆಟ್ಟಿರುದ್ರಪ್ಪ, ಮ್ಯಾಸನಾಯಕರು, ಪು-೧೪೬

೧೮ ಅದೇ ಕೃತಿ, ಪು-೧೪೭

೧೯ ಮೀರಾಸಾಬಿಹಳ್ಳಿ ಶಿವಣ್ಣ, ಮ್ಯಾಸಮಂಡಲ, ಪು-೨೧

೨೦ ಅದೇ ಕೃತಿ, ಪು-೨೩

* * * *

ಅಧ್ಯಾಯ : ಎಂಟು

ಸಮಾರೋಪ

ಫಲಿತಗಳು

ಪರಾಮರ್ಶನ ಗ್ರಂಥಗಳು

ವಕ್ತೃಗಳ ವಿವರ

ಛಾಯಚಿತ್ರಗಳು ಮತ್ತು ನಕ್ಷೆ

ಅಧ್ಯಾಯ : ಎಂಟು

ಸಮಾರೋಪ

ಮ್ಯಾಸಬೇಡ ಸಮುದಾಯದ ಮಹಿಳೆಯರು ಒಂದು ಕಾಲಘಟ್ಟದಲ್ಲಿ ಪ್ರತ್ಯೇಕವಾದ ಜೀವನ ಶೈಲಿಯನ್ನು ರೂಡಿಸಿಕೊಂಡು ಬಂದಿದ್ದರು. ಅರಣ್ಯ ವಾಸಿಗಳಾಗಿ ಜೀವನ ಸಾಗಿಸಿಕೊಂಡು ಬಂದಿರು ಈ ಸಮುದಾಯದಲ್ಲಿ ಮಹಿಳೆ ಮತ್ತು ಪುರುಷರ ನಡುವೆ ಯಾವುದೇ ಅಂತರಗಳು ಕಂಡುಬರುವುದಿಲ್ಲ. ಪುರುಷನ ಪ್ರತಿಯೊಂದು ಕಾರ್ಯಗಳಲ್ಲೂ ಈ ಸಮುದಾಯದ ಮಹಿಳೆಯರು ತನ್ನ ಸಹಭಾಗಿತ್ವವನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಉದಾಹರಣೆಗೆ ಬೇಟೆ, ಪಶುಪಾಲನೆ, ಕೃಷಿ ಕಾರ್ಯಗಳಲ್ಲಿ ಪುರುಷನಂತೆಯೇ ತನ್ನನ್ನು ತೊಡಗಿಸಿಕೊಂಡು ಬಂದಿದ್ದಾಳೆ. ಈ ಮ್ಯಾಸಬೇಡ ಸಮುದಾಯದ ಮಹಿಳೆಯರು ಆಧುನಿಕ ಸಂದರ್ಭದಲ್ಲಿ ತನ್ನ ಜೀವನ ಶೈಲಿಯನ್ನು ಬದಲಾಯಿಸಿಕೊಂಡು ಬಂದಿದ್ದಾರೆ. ಆದರೆ ತನ್ನ ಮೂಲ ಪರಂಪರೆಯ ನಂಬಿಕೆ ಮತ್ತು ಮೌಲ್ಯಗಳನ್ನು ಧಾರ್ಮಿಕ ನೆಲೆಗಟ್ಟಿನಲ್ಲಿ ಮುಂದುವರೆಸಿಕೊಂಡು ಬಂದಿದ್ದಾರೆ. ಈ ಸಮುದಾಯದ ಮಹಿಳೆಗೆ ಸಾಮಾಜಿಕವಾದ ಕೆಲವು ಕಟ್ಟುಪಾಡುಗಳಿದ್ದರೂ ಇಚ್ಛಾ ಸ್ವತಂತ್ರವನ್ನು ಹೊಂದಿದ್ದಾಳೆ. ಹೀಗಾಗಿ ಪ್ರಾಚೀನ ದಿನಗಳಲ್ಲಿ ತನ್ನ ಬದುಕಿನ ವಿಕಸಿತ ಕ್ರಮದಲ್ಲಿ ಪುರುಷನೊಂದಿಗೆ ಬೇಟೆ, ಪಶುಪಾಲನೆ, ಕೃಷಿ ಕಾರ್ಯದಲ್ಲಿ ಪಾಲ್ಗೊಂಡು, ಕುಟುಂಬ ನಿರ್ವಹಣೆಯ ಜವಬ್ದಾರಿಯನ್ನು ನಿರ್ವಹಿಸಿದ್ದಾಳೆ. ಆಧುನಿಕ ಸಂದರ್ಭದಲ್ಲಿ 'ಸಾರ್ವತ್ರಿಕ ಶಿಕ್ಷಣ ನೀತಿ'ಯಿಂದಾಗಿ ಶಿಕ್ಷಣ ಪಡೆಯುವಲ್ಲಿಯೂ ಮುಂದಾಗಿ ಸಾಧನೆಗೈದಿದ್ದಾಳೆ. ಆದರೆ ಕೆಲವು ಭಾಗಗಳಲ್ಲಿ ಆರ್ಥಿಕತೆಯ ಸಂಕಷ್ಟದಿಂದಾಗಿ ಉನ್ನತ ಶಿಕ್ಷಣ ಪಡೆಯುವಲ್ಲಿ ಹಿಂದೆ ಬಿದ್ದಿದ್ದಾರೆಯೇ ಹೊರತು, ಅವರಿಗೆ ಶಿಕ್ಷಣ ಪಡೆಯುವ ಸಾಮರ್ಥ್ಯವಿಲ್ಲವೆಂದಲ್ಲ. ಇದಕ್ಕೆ ನಿದರ್ಶನವಾಗಿ ಹೇಳುವುದಾದರೆ, ಪುರಾಣ ಕಾಲದಲ್ಲಿಯೇ ಮಾತಂಗ ಮುನಿಗಳಿಂದ ಶಿಕ್ಷಣವನ್ನು ಪಡೆದ ಶಬರಿಯು ಬೇಡ ಬುಡಕಟ್ಟಿನ ಮಹಿಳೆಯಾಗಿದ್ದು, ಶಿಕ್ಷಣ ಪಡೆದ ಪ್ರಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರಳಾಗಿರುವುದು ತಿಳಿದುಬರುತ್ತದೆ.

ಜೀವನವೆಂದರೆ ನಿರಂತರ ಪರಿವರ್ತನೆ. ಹಳೆಯದ್ದನ್ನು ಸಂರಕ್ಷಿಸಬೇಕು ಹಾಗೂ ಬೇಡದ್ದನ್ನು ಬದಲಾಯಿಸಬೇಕು. ಬದಲಾವಣೆಯ ಮೂಲಕ ಸಮತೋಲನವನ್ನು, ಸಮನ್ವಯತೆಯನ್ನು ಕಾಪಾಡಿಕೊಳ್ಳಬೇಕು. ಒಂದು ಜನ ಸಮುದಾಯವು ತನ್ನ ಪರಿಸರದೊಂದಿಗೆ ಸಹಜೀವನ ನಡೆಸಲು ನೆರವಾಗುವ ಸಮಗ್ರ ಸಂಪ್ರದಾಯಗಳನ್ನು ಸಂಸ್ಕೃತಿ ಎಂದು ಭಾವಿಸಬಹುದು. ಈ ಸಂಸ್ಕೃತಿ

ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿತವಾಗುತ್ತದೆ. ಇದರೊಂದಿಗೆ ಔಚಿತ್ಯ, ಅನೌಚಿತ್ಯ ವಿವೇಕ, ಅವಿವೇಕವೆಲ್ಲವೂ ಒಳಗೊಂಡಿರುತ್ತದೆ. ಹಳೆಯ ಜೀವನ ಹೊಸತಿಗೆ ದಾರಿ ಮಾಡಿಕೊಡುತ್ತದೆ. ಹಾಗೆಯೇ ಎಲ್ಲವನ್ನೂ ಹುಡುಕುವ, ಸಂಶೋಧಿಸುವ, ನೆಲೆಬೆಲೆ ಕೊಡುವ ಪ್ರಕ್ರಿಯೆ ಆರಂಭವಾಗುತ್ತದೆ. ಇದೀಗ ಮಹಿಳಾ ಸಂಸ್ಕೃತಿ, ಮಹಿಳಾ ಚರಿತ್ರೆ, ಮಹಿಳಾ ಸಾಹಿತ್ಯ ಚರಿತ್ರೆ ಅನ್ವೇಷಣೆಗೆ ಹೊಸ ಆಯಾಮಗಳನ್ನು ಹುಡುಕುವುದು ಇವೆಲ್ಲಕ್ಕೂ ಉತ್ತರ ಹುಡುಕುವ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಯ ಸಂದರ್ಭ ಈಗ ಎದುರಾಗಿದೆ. ಸ್ತ್ರೀ ಸಮುದಾಯ ತನ್ನ ಅಸ್ತಿತ್ವದ ಶೋಧನೆಗೆ ತೊಡಗಿದೆ. ಪ್ರಾರಂಭದಲ್ಲಿ ಸ್ತ್ರೀ ಸಮುದಾಯವು ಸಾಮಾಜಿಕ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಸ್ತ್ರೀ ಪುರುಷ ಅಸಮಾನತೆಯ ಸಮಸ್ಯೆಗಳನ್ನು ತೀವ್ರವಾಗಿ ಪರಿಗಣಿಸಿತು. ತೀರಾ ಸಾಧಾರಣ ರೀತಿಯಲ್ಲಿ ಎಂದರೆ ಬೇಡಿಕೆ, ಮನವಿಗಳ ರೂಪದಲ್ಲಿ ಪ್ರಾರಂಭಿಸಲಾದ ಸ್ತ್ರೀಪರ ಚಳುವಳಿಗಳು ಇಂದು ಹಕ್ಕೊತ್ತಾಯ ಮಾಡಿ ಎದುರು ನಿಲ್ಲುವಷ್ಟು ಪ್ರಬಲವಾಗಿ ಬೆಳೆದಿವೆ. ಇಂಥ ಸಾಮುದಾಯಿಕ ಹೋರಾಟದ ಫಲವಾಗಿ ಪ್ರಭುತ್ವವು ಸ್ತ್ರೀ ಪುರುಷ ಸಮಾನತೆಯನ್ನು ತಾತ್ವಿಕವಾಗಿ ಬಹಿರಂಗವಾಗಿ ಘೋಷಿಸಲೇಬೇಕಾದ ಒತ್ತಡದಲ್ಲಿದೆ. ಭಾರತದ ಸಂವಿಧಾನ, ಕಾನೂನು, ಶಾಸನ ರಚನೆಗಳಲ್ಲಿ ಸ್ತ್ರೀಪರವಾದ ಅಂಶಗಳನ್ನು ಜೋಡಿಸುವುದು ಸರ್ಕಾರದ ಯೋಜನೆ ಮತ್ತು ಕಾರ್ಯಕ್ರಮಗಳಲ್ಲಿ ಸ್ತ್ರೀ ಸಮುದಾಯಕ್ಕೆಂದೇ ಗಣನೀಯ ಭಾಗವನ್ನು ಮೀಸಲಿಡುವುದು ಈಗ ಅನಿವಾರ್ಯವಾಗಿದೆ. ಕೇವಲ ಇಷ್ಟು ಮಾತ್ರದಿಂದ ಮಹಿಳೆಯರ ಸ್ಥಿತಿಗತಿ ಸುಧಾರಣೆಯಾಗಿ ಸ್ಥಾನಮಾನ ಮೇಲೆರುವುದಿಲ್ಲ. ಆದರೆ ಹೋರಾಟದ ಮುಂದಿನ ಹಂತಕ್ಕೆ ಇದು ಆಧಾರವಾಗುವುದು ಸ್ಪಷ್ಟ. ಆದರೆ ಇದರಿಂದ ಮೂಲಭೂತ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಇಡೀ ಸಮಾಜದ ಪಿತೃಪ್ರಧಾನ ವ್ಯವಸ್ಥೆಯ ಪ್ರವೃತ್ತಿಗಳಲ್ಲಿಯೇ ಮೂಲಭೂತ ಪರಿವರ್ತನೆಗಳನ್ನು ತರುವುದು ಖಂಡಿತ ಸುಲಭವಾದ ಕಾರ್ಯವಲ್ಲ ಆದರೆ ಸರ್ಕಾರವನ್ನೂ ಒಳಗೊಂಡು ಎಲ್ಲ ಸಾರ್ವಜನಿಕ ವಲಯಗಳಲ್ಲಿ ಸ್ತ್ರೀ ಸಮುದಾಯವು ಎದುರಿಸುತ್ತಿರುವ ತಾಂತ್ರಿಕ ಸಮಸ್ಯೆಗಳನ್ನು ಸಾಮುದಾಯಿಕ ಹೋರಾಟದಿಂದ ಪರಿಹರಿಸಿಕೊಳ್ಳಲು ಸಾಧ್ಯವಿದೆ. ಇದಕ್ಕೂ ಸಮಾಜದ ಎಲ್ಲ ಸದಸ್ಯರ ಬೌದ್ಧಿಕ ಹಾಗೂ ಮಾನಸಿಕ ಬೆಂಬಲ ಪಡೆಯಲು ಸಂವಾದ ಪ್ರಾರಂಭಿಸಬೇಕಾಗಿದೆ. ಮೊಟ್ಟಮೊದಲು ಮಾನವೀಯತೆಯನ್ನು ಜಾಗೃತಗೊಳಿಸಬೇಕಾಗಿದೆ. ಸ್ತ್ರೀ ಪುರುಷ ಅಸಮಾನತೆಯು ಮನುಕುಲಕ್ಕೆ ವಿನಾಶಕಾರಿಯಾದುದು ಎಂಬ ಸತ್ಯವನ್ನು ಸಮಾಜದ ಪ್ರಬಲ ಮಂದಿಗೆ ಮನವರಿಕೆ ಮಾಡಿಸುವ ಸಂದರ್ಭವಿದಗಿದೆ.

ದಿನನಿತ್ಯದ ಬದುಕಿನ ಸವಾಲುಗಳಲ್ಲಿ ಬಹುಮುಖ್ಯವಾದ ಮಹಿಳೆಯ ಜೈವಿಕ ಪಲ್ಲಟಗಳಾದ ಋತುಚಕ್ರ, ಜನನ ಸಂದರ್ಭಗಳು ಹಾಗೂ ಕೌಟುಂಬಿಕ ಸಂಗೋಪನೆ ಜವಾಬ್ದಾರಿಗಳೊಂದಿಗೆ ಕಲಿಕೆಯನ್ನು ಹೊಂದಿಸಿಕೊಳ್ಳುವುದು ಕೂಡಾ ಆಕೆಗೆ ದುಸ್ತರವಾಗಿದೆ. ತಾಯಿಯ ಬಸಿರು, ಬಾಣಂತನದ ಸಂದರ್ಭಗಳಲ್ಲಿ ಹೆಣ್ಣು ಮಕ್ಕಳು ತಾಯಿಯ ಹೊಣೆಗಾರಿಕೆಯನ್ನು ನಿರ್ವಹಿಸಬೇಕಾಗುತ್ತದೆ. ಕುಟುಂಬದ ದೈನಂದಿನ ಅಗತ್ಯಗಳಾದ ಆಹಾರ, ನೀರು, ಕಟ್ಟಿಗೆ, ಮೇವು ಇತ್ಯಾದಿಗಳನ್ನು ಸಂಗ್ರಹಿಸುವ ಮತ್ತು ಪೂರೈಸುವಲ್ಲಿ ಹೆಣ್ಣು ದಿನದ ಬಹುಕಾಲ ದುಡಿಯುವುದರಿಂದಲಾಕೆಗೆ ಬಿಡುವು

ದುರ್ಬಲವಾಗಿದೆ. ಈ ದುಡಿತಕ್ಕೆ ತಕ್ಕ ಆಹಾರದ ಪ್ರಮಾಣ ಇಲ್ಲದಿರುವುದು ಮತ್ತು ವಿಶ್ರಾಂತಿ ರಹಿತ ಜೀವನದಿಂದ ಮಹಿಳೆ ಅನಾರೋಗ್ಯದಿಂದ ಬಳಲುವಂತಾಗಿದೆ. ಶಿಕ್ಷಣದ ಕೊರತೆಯಿಂದ ಬೆನ್ನುಹತ್ತಿದ ಮೌಢ್ಯಗಳು ಇವೆಲ್ಲದರಿಂದ ಮಹಿಳೆಯರಲ್ಲಿ ವಿಶ್ವಾಸವಿಲ್ಲದಾಗಿವೆ. ಬತ್ತಿಹೋದ ಆತ್ಮವಿಶ್ವಾಸವನ್ನು ತುಂಬಲು ಭರವಸೆಯ ಹೆಜ್ಜೆಯನ್ನು ಇಡಲು ಸ್ತ್ರೀಯು ಶಿಕ್ಷಣದಿಂದ ಮಾತ್ರ ಸಾಧ್ಯ. ಒಂದು ನಿಗದಿತ ಪರಿಸರದಲ್ಲಿ ನೆಲೆ ನಿಲ್ಲಬೇಕಾದರೆ ಅಲ್ಲಿ ಆ ಸಮುದಾಯಗಳಿಗೆ ಸಾಮಾಜಿಕ, ಭೌಗೋಳಿಕ ಹಾಗೂ ಫಲವತ್ತಾದ ಮಣ್ಣು, ನೀರು ಹವಾಗುಣ ಪ್ರಮುಖ ಪಾತ್ರ ವಹಿಸುತ್ತವೆ. ಈ ಕಾರಣಾಂಶಗಳು ಮಾನವನ ಅಲೆಮಾರಿ ಜೀವನವನ್ನು ಅಂತ್ಯಗೊಳಿಸಿ ನೆಲೆ ನಿಲ್ಲುವಂತೆ ಮಾಡುತ್ತದೆ. ಇದರಿಂದ ಸಮುದಾಯಗಳು ಅಭಿವೃದ್ಧಿಗೊಂಡು ಸಮಾಜದ ಬೆಳವಣಿಗೆಗೆ ಪೂರಕವಾದ ಸದವಕಾಶವನ್ನು ಒದಗಿಸುತ್ತವೆ. ಅದರ ಜೊತೆಗೆ ಮನುಷ್ಯನಿಗೆ ಅಗತ್ಯವಾಗಿ ಬೇಕಾಗಿರುವ ಶಾಂತಿ, ಭದ್ರತೆ, ಸಹಕಾರ ಮತ್ತು ಬುದ್ಧಿಶಕ್ತಿ ಇತರ ಅಂಶಗಳು ಪ್ರಮುಖವಾದವು ಆಗಿವೆ. ಇದರಲ್ಲಿ ಮಾನವ ಸಮಾಜವು ಸಾಮಾಜಿಕ ಸಂಬಂಧಗಳ ಬಲೆಯಾಗಿದೆ. ಸಮಾಜದಲ್ಲಿ ಜೀವಿಸುವಂತಹ ಪ್ರತಿಯೊಂದು ಸಮುದಾಯಗಳು ಹಿಂದಿನಿಂದಲೂ ಅನುಸರಿಸಿಕೊಂಡು ಬಂದಂತಹ ಸಂಸ್ಕೃತಿ ಮತ್ತು ಸಾಮಾಜಿಕ ಅಂಶಗಳು ಪ್ರೇರಣಾದಾಯಕವಾಗಿರುತ್ತವೆ.

ಒಂದು ಸಮುದಾಯವನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಾಗ ಒಂದು ಪರಿಕಲ್ಪನೆ ಹಾಗೂ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳುವುದು ಅವಶ್ಯ. ಬುಡಕಟ್ಟು ಎಂದರೇನು? ಬುಡಕಟ್ಟಿನ ಮಹಿಳೆಯೆಂದರೆ ಯಾರು? ಎಂಬುದನ್ನು ಸ್ಪಷ್ಟಮಾಡಿಕೊಳ್ಳಬೇಕಾಗುತ್ತದೆ. 'ಬುಡ' ಎಂದರೆ ಮೂಲ, 'ಕಟ್ಟು' ಎಂದರೆ ಸಾಂಸ್ಕೃತಿಕ ಮೌಲ್ಯಗಳ ಕಟ್ಟುಕಟ್ಟಳೆ ಆಚರಣೆ, ಒಂದೇ ಮೂಲಕ್ಕೆ ಸೇರಿದ ಸಂಪ್ರದಾಯವನ್ನು ಪಾಲಿಸುವವರು ಬುಡಕಟ್ಟು ಜನ ವ್ಯಾಖ್ಯಾನಗಳು ಬುಡಕಟ್ಟನ್ನೇ ನಿಖರವಾಗಿ ವ್ಯಾಖ್ಯಾನಿಸಲಾರವು. ಆದ್ದರಿಂದ ಬುಡಕಟ್ಟು ಎಂದರೇನು ಎಂದು ಹೇಳುವುದು ಸುಲಭ. ಕರ್ನಾಟಕದ ಬುಡಕಟ್ಟೊಂದನ್ನು ಮೊದಲು ಧೀರ್ಘ ಅಧ್ಯಯನಕ್ಕೆ ಒಳಪಡಿಸಿದ ತೀ.ನಂ.ಶಂಕರನಾರಾಯಣ ಅವರು ಅಂಥದೊಂದು ಪ್ರಯತ್ನ ಮಾಡಿದ್ದಾರೆ. ಅವರು ಹೇಳುವಂತೆ ಭಾರತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಜಾತಿಗಳು ಮಾತ್ರವಲ್ಲದೆ ಹರಿಜನರು ಕೂಡಿದ ಐದನೇ ಜಾತಿಯೂ ಇದೆ. ಈ ಜಾತಿಗಳನ್ನು ಬಿಟ್ಟು ಉಳಿದ ಹಿಂದೂ ಸಾಮಾಜಿಕ ವರ್ಗಗಳನ್ನೆಲ್ಲ ಭಾರತದಲ್ಲಿ ಬುಡಕಟ್ಟುಗಳೆಂದು ಕರೆಯಬಹುದು.

ಕರ್ನಾಟಕವು ವಿವಿಧ ರೀತಿಯ ಕುಲ, ಜಾತಿ, ಧರ್ಮ, ಮತಗಳನ್ನು ಹೊಂದಿದೆ. ಇದರಲ್ಲಿ ಬೇಡ(ನಾಯಕ) ಸಮುದಾಯವು ಇಲ್ಲಿನ ಒಂದು ಆ ಭಾಗವಾಗಿ ಉಸಿರಾಡುತ್ತಿದೆ. ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ಮಂಗಳೂರು ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಮೈಸೂರು ಕರ್ನಾಟಕಗಳಲ್ಲಿ ನಾಯಕ ಜಾತಿಯವರು ಎಲ್ಲ ಜಾತಿ ಜನಾಂಗದವರ ಜೊತೆ ಸೇರಿಕೊಂಡು ಬದುಕುತ್ತಿದ್ದಾರೆ. ಇಂದಿನ ಬೇಡರು ನಾಗರೀಕ ಬದುಕಿಗೆ ಒಳಗಾಗಿದ್ದಾರೆ. ಬೇರೆ ಬೇರೆ ಜಾತಿ ಧರ್ಮಗಳಲ್ಲಿ ಸೇರಿಕೊಂಡು ಊರು ಕೇರಿಗಳಲ್ಲಿ ವಾಸ ಮಾಡುತ್ತಿರುವ ಇವರು ತಮ್ಮ ತನವನ್ನು ಉಳಿಸಿಕೊಂಡಿದ್ದಾರೆ.

ಬೇಡರ ಮಹಿಳೆ ಜನಪದ ಸಾಹಿತ್ಯದಲ್ಲಿಯೂ ತೊಡಗಿಸಿಕೊಂಡಿದ್ದಾಳೆ. ಅವಳು ಕಥೆ, ಗಾದೆ, ಒಗಟು, ಲಾವಣಿ, ಸೋಬಾನೆ ಪದಗಳನ್ನು ಹೇಳುವಲ್ಲಿ ತೊಡಗಿಸಿಕೊಂಡಿದ್ದಾಳೆ. ಹೀಗೆ ಬೇಡರ ಮಹಿಳೆ ಬಹುರೂಪಿಯಾಗಿ ತನ್ನ ಸಮುದಾಯದಲ್ಲಿ ರೂಢಿಸಿಕೊಂಡಿದ್ದಾಳೆ. ಅವಳು ತುಂಬ ಆ ಶ್ರಮಜೀವಿ. ಜೊತೆಗೆ ಅನಕ್ಷರಸ್ಥ ಗ್ರಾಮೀಣ ಬೇಡರ ಮಹಿಳೆ ಆರ್ಥಿಕವಾಗಿ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಇನ್ನು ಹೆಚ್ಚು ಪ್ರಮಾಣದಲ್ಲಿ ಗುರುತಿಸಿಕೊಳ್ಳಬೇಕಾಗಿದೆ. ಹಾಗಾಗಿ ಅವಳಿಗೆ ಶಿಕ್ಷಣದ ಅವಶ್ಯಕತೆ ತುಂಬಾ ಇದೆ. ಅವಳನ್ನು ಪುರುಷನ ಸರಿಸಮಾನವಾಗಿ ತರಬೇಕಾದರೆ ಶಿಕ್ಷಣದ ಮೂಲಕ ಆರ್ಥಿಕವಾಗಿ ಸಬಲೀಕರಣ ಮಾಡಬೇಕಾಗಿದೆ. ಹೆಚ್ಚಿನ ಬೇಡರ ಮಹಿಳೆ ರೈತರ ಕುಟುಂಬ ಹೊಂದಿದ್ದಾಳೆ. ಇವಳಿಗೆ ಶ್ರಮ, ಬಡತನ ಜೀವನ ಮೌಲ್ಯಗಳು ಸಹಜವಾಗಿ ಬೇಡರು ಸಾಂಸ್ಕೃತಿಕವಾಗಿ ವಿಸ್ತಾರವಾದ ಸಾಮಾಜಿಕ ಪ್ರಜ್ಞೆಯನ್ನು ಹೊಂದಿದ್ದಾರೆ. ಈ ಬೇಡರು ಇನ್ನಿತರ ಬುಡಕಟ್ಟಿನ ಸಾಂಸ್ಕೃತಿಕ ಪರಂಪರೆಗೆ ಸರಿಸಾಟಿಯಾಗಿ ನಿಲ್ಲುತ್ತಾರೆ.

ಫಲಿತಗಳು

ಪ್ರಸ್ತುತ ಸಂಶೋಧನ ವಿಷಯವಾಗಿರುವ 'ಮ್ಯಾಸಬೇಡ ಸಮುದಾಯದ ಮಹಿಳೆ' ಎಂಬ ಅಧ್ಯಯನದಲ್ಲಿ ಕಂಡುಕೊಂಡಿರುವ ಒಟ್ಟಾರೆ ಫಲಿತಗಳು ಈ ಮುಂದಿನಂತಿವೆ;

- ಬುಡಕಟ್ಟು ಸಮುದಾಯವಾಗಿರುವ ಮ್ಯಾಸಬೇಡ ಸಮುದಾಯದಲ್ಲಿ ಮಹಿಳೆಗೆ ಪುರುಷ ಸಮಾನವಾದ ಗೌರವಗಳು ಲಭಿಸಿವೆ. ಆದ್ದರಿಂದ ಇಲ್ಲಿ ಮಹಿಳೆಯು ಸ್ವತಂತ್ರವಾದ ನೆಲೆಯೊಳಗೆ ಕೌಟುಂಬಿಕ ಜವಬ್ದಾರಿಯನ್ನು ನಿರ್ವಹಿಸಿಕೊಂಡು ಬಂದಿದ್ದಾಳೆ.

- ಮ್ಯಾಸಬೇಡ ಸಮುದಾಯದಲ್ಲಿನ ಮಹಿಳೆಯು ನಾಗರಿಕತೆಯ ವಿಕಾಸ ಕ್ರಮದಲ್ಲಿ ತನ್ನ ಜೀವನ ಕ್ರಮದಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಪಾಲಿಸಿಕೊಂಡು ಬಂದಿದ್ದಾಳೆ. ಒಂದು ಕಾಲಕ್ಕೆ ಈ ಸಮುದಾಯದ ಮಹಿಳೆಯರು ರವಿಕೆ (ಕುಪ್ಪಸ)ವನ್ನು ತೊಡುತ್ತಿರಲಿಲ್ಲ. ಆದರೆ ಆಧುನಿಕ ಜೀವನ ಶೈಲಿಗೆ ತೆರೆದುಕೊಳ್ಳುತ್ತಿದ್ದಂತೆ ತನ್ನ ಉಡುಗೆಯಲ್ಲಿ ಬದಲಾವಣೆಗಳನ್ನು ಕಂಡುಕೊಂಡಿದ್ದಾಳೆ. ಆದರೆ ತನ್ನ ಮೂಲ ಸಾಂಸ್ಕೃತಿಕ ಚಹರೆಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ. ಅಗತ್ಯ ರೀತಿಯಲ್ಲಿ ಬದಲಾವಣೆಗೆ ತೆರೆದುಕೊಂಡಿದ್ದಾಳೆ.

- ಬೇಡ ಸಮುದಾಯದ ಮಹಿಳೆಯರು ಕೇವಲ ಕೌಟುಂಬಿಕ ನಿರ್ವಹಣೆಯ ಜವಬ್ದಾರಿಯನ್ನು ನಿರ್ವಹಿಸುವ ಮೂಲಕ ಅಡುಗೆ ಮನೆ, ಮಕ್ಕಳ ಪಾಲನೆ ಪೋಷಣೆಗೆ ಸೀಮಿತಗೊಂಡಿಲ್ಲ. ಪುರಾಣ ಮತ್ತು ಚರಿತ್ರೆಯ ಕಾಲದಿಂದಲೂ ಸಾಮಾಜಿಕ ವ್ಯವಸ್ಥೆಯಲ್ಲಿ ಅನ್ಯಾಯ, ಅಸಮಾನತೆಯಂತಹ ನೀತಿಗಳ ವಿರುದ್ಧ ಹೋರಾಟ ನಡೆಸಿಕೊಂಡು ಬಂದಿದ್ದಾರೆ. ಇದಕ್ಕೆ ನಿದರ್ಶನವಾಗಿ ಪುರಾಣ ಕಾಲದಲ್ಲಿನ ಶಬರಿ, ಚರಿತ್ರೆಯಲ್ಲಿ ದಾನಸಾಲಮ್ಮ, ಗೌರಸಂದ್ರ ಮಾರಮ್ಮ, ಅಕ್ಕರಾಯಮ್ಮ, ದಡ್ಲುಮಾರಮ್ಮ, ಮುಂಗುಲು ಮಾರಮ್ಮ, ಕಂಚವ್ವ, ಕಾಮವ್ವ,

ವೀರ ವನಿತೆ ಓಬವ್ವನಂತಹ ಧೀರ ಮಹಿಳೆಯರು ಕಂಡುಬರುತ್ತಾರೆ. ಹೀಗೆ ಆಧುನಿಕ ಸಂದರ್ಭದಲ್ಲೂ ಈ ಸಮುದಾಯದ ಮಹಿಳೆಯರು ತಮ್ಮ ಧೀಮಂತಿಕೆಯನ್ನು ಮೆರೆದಿದ್ದಾರೆ.

- ಮ್ಯಾಸಬೇಡ ಸಮುದಾಯವು ಆರ್ಥಿಕವಾಗಿ ತೀರಾ ಹಿಂದುಳಿದ ಸಮುದಾಯವಾಗಿದೆ. ಆದರೆ ಸಂಸ್ಕೃತಿ, ಆಚಾರ, ವಿಚಾರಗಳನ್ನು ಪಾಲಿಸಿಕೊಂಡು ಬಂದಿರುವುದನ್ನು ಗಮನಿಸಿದರೆ ಇದು ತನ್ನದೇ ಆದ ಸ್ವಾಭಿಮಾನವನ್ನು ಹೊಂದಿದ್ದು, ಯಾವುದೇ ಕಾರಣಕ್ಕೂ ತಮ್ಮ ಕುಲದ ಕಟ್ಟುಪಾಡುಗಳನ್ನು ಮೀರುವುದನ್ನು ಸಹಿಸಿಕೊಂಡು ಬಂದಿಲ್ಲ. ಈ ಕುಲಮೂಲದ ಕಟ್ಟುಪಾಡುಗಳನ್ನು ಕಾಪಾಡುವಲ್ಲಿ ಮಹಿಳೆಯು ತನ್ನದೆ ಆದ ಜವಬ್ದಾರಿಯನ್ನು ನಿರ್ವಹಿಸಿಕೊಂಡು ಬಂದಿದ್ದಾರೆ. ಇಲ್ಲಿನ ಸಂಸ್ಕೃತಿಯಲ್ಲಿ ಮಹಿಳೆಯರು ಸ್ವಾಭಿಮಾನದಿಂದ ಬಾಳಿ ಬದುಕಿದ್ದಾರೆ.
- ಮ್ಯಾಸಬೇಡ ಸಮುದಾಯವು ಅರಣ್ಯವಾಸಿ ಸಮುದಾಯವಾಗಿರುವುದರಿಂದ ಇವರಿಗೆ ಧೈರ್ಯ, ಹೊರಟುತನ ಪ್ರಕೃತಿ ಸಹಜವಾಗಿ ಮೈಗೂಡಿದೆ. ಆದರೆ ಈ ಗುಣ ಮಹಿಳೆಯರನ್ನು ಹೊರತುಪಡಿಸಿರುವುದಿಲ್ಲ. ಆದರೆ ಇಂದಿನ ಆಧುನಿಕ ಜೀವನ ಶೈಲಿಯ ನಾಜುಕಿನ ಜೀವನ ಕ್ರಮದಿಂದಾಗಿ, ಈ ಸಮುದಾಯದ ಮಹಿಳೆಯರು ನಯ, ನಾಜುಕಿನ ಜೀವನ ಶೈಲಿಗೆ ತೆರೆದುಕೊಂಡಿರುವುದು ಹೊಸ ತಲೆಮಾರಿನವರಲ್ಲಿ ಕಂಡುಬರುತ್ತದೆ.
- ಮ್ಯಾಸಬೇಡ ಸಮುದಾಯದ ಮಹಿಳೆಯರು ಇಂದು ಮುಕ್ತ ಶಿಕ್ಷಣ ನೀತಿಯಿಂದಾಗಿ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ ಈ ಮಹಿಳೆಯರು ಹಿಂದೆ ಬಿದ್ದಿಲ್ಲ. ಆದರೆ ಸಾಮಾಜದ ಅಸಮಾನತೆಯಿಂದಾಗಿ ಉನ್ನತ ರಾಜಕಾರಣದಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಸಾಧ್ಯವಾಗಿಲ್ಲ.
- ಮ್ಯಾಸಬೇಡ ಮಹಿಳೆಯು ತನ್ನದೆ ಆದ ಸಾಂಸ್ಕೃತಿಕ ಚಹರೆಗಳನ್ನು ಕಂಡುಕೊಂಡಿದ್ದು, ಈ ಸಾಂಸ್ಕೃತಿಕ ಚಹರೆಗಳನ್ನು ಮೂಲ ಸ್ವರೂಪದಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗದಿದ್ದರೂ ಪ್ರಾಸಂಗಿಕವಾಗಿ ಮತ್ತು ಸಂದರ್ಭಾನುಸಾರವಾಗಿ ಪಾಲಿಸಿಕೊಂಡು ಬಂದಿದ್ದಾರೆ.
- ಹೆಣ್ಣಿನಲ್ಲಿರುವ ಜೈವಿಕ ಶಕ್ತಿಯೇ ಪ್ರಕೃತಿಯ ಪ್ರಕ್ರಿಯೆಗಳಿಗೆ ಪ್ರಮುಖ ಕಾರಣ, ಹೆಣ್ಣಿನ ಸ್ವರೂಪದಲ್ಲಿ ದೈವವನ್ನು ಆರಾಧಿಸುವ ಸಂಪ್ರದಾಯ ಬೆಳೆದು ಬಂದಿತು. ಈ ಕಾರಣಕ್ಕಾಗಿಯೇ ಬುಡಕಟ್ಟು ಜನರು ಇಂದಿಗೂ ದೈವ ರೂಪದಲ್ಲಿ ಆರಾಧಿಸುವ ಬಹುಪಾಲು ದೈವಗಳು ಹೆಣ್ಣು ದೈವಗಳೇ ಆಗಿವೆ.,
- ಬಹುಪಾಲು ಭೂಮಿಯ ಒಡೆತನ ಮನೆಯ ಮುಖ್ಯಸ್ಥನದು, ಅಂದರೆ ಪುರುಷನದ್ದೇ ಆಗಿದೆ. ಭೂ ಒಡೆತನ ಹೊಂದಿರುವವರಲ್ಲಿ ಮಹಿಳೆಯರಿಗಿಂತ ಪುರುಷರ ಸಂಖ್ಯೆಯೇ ಅಧಿಕವಾಗಿರುತ್ತದೆ. ಒಂದು ವೇಳೆ ಮಹಿಳೆಯರ ಹೆಸರಿನಲ್ಲಿ ಭೂ ಒಡೆತನ ಇದ್ದಾಗಲೂ ಅದು ಪುರುಷ ಹಿತಾಸಕ್ತಿಗಳಿಗೆ ಅನುಗುಣವಾಗಿಯೇ ಬಳಕೆಯಾಗುತ್ತದೆ.

- ಮಹಿಳೆ ಮನೆಯಲ್ಲಿ ಸರ್ವ ರೀತಿಯ ಕೆಲಸ ಮಾಡಿದರೂ ಅದು ಕೆಲಸ ಅಥವಾ ದುಡಿಮೆ ಎಂದು ಪರಿಗಣಿಸದೆ ಮಹಿಳೆ ಕುಟುಂಬಕ್ಕೆ ಮಾಡುವ ಸೇವೆ ಅಥವಾ ಕರ್ತವ್ಯಗಳಾಗಿ ಪರಿಗಣಿಸಲ್ಪಡುತ್ತಿದೆ.
- ಕೃಷಿ ಕೆಲಸ ಮಾಡುವ ಈ ಸಮುದಾಯದವರಲ್ಲಿ ಪುರುಷರಿಗಿಂತ ಸ್ತ್ರೀಯರೇ ಅಧಿಕ ಸಂಖ್ಯೆಯಲ್ಲಿರುತ್ತಾರೆ.
- ಬೇಡ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಪುರುಷರಿಗಿಂತ ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ.
- ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಸೌಲಭ್ಯವನ್ನು ಪಡೆದುಕೊಳ್ಳುವಿಕೆ ಇನ್ನೂ ಪೂರ್ಣಗೊಂಡಿಲ್ಲ.
- ಬೇಡ ಸಮುದಾಯದಲ್ಲಿ ಕೆಲವು ಮಹಿಳೆಯರು ಶಿಕ್ಷಣವನ್ನು ಪಡೆದುಕೊಂಡು ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಸ್ಥರಾಗಿ ಆರ್ಥಿಕವಾಗಿ ಉತ್ತಮವಾಗಿರುವುದು ಕಂಡುಬರುತ್ತದೆ.

* * * *

ಪರಾಮರ್ಶನ ಗ್ರಂಥಗಳು

೦೧. ಅಕ್ಕಮಹಾದೇವಿ (ಅನು), ರಾಘವಯ್ಯ.ವಿ(ಮೂಲ), ಬುಡಕಟ್ಟು ನ್ಯಾಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೪.

೦೨. ಅಮರೇಶ್ ಯತಗಲ್, ವಾಲ್ಮೀಕಿ ಸಮುದಾಯ ಮತ್ತು ಸಂಸ್ಕೃತಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹಿರಿಯೂರು ತಾ, ಚಿತ್ರದುರ್ಗ, ೨೦೦೮.

೦೩. ಅಂಗಡಿ.ಎಸ್.ಎಸ್., ಜನಪದ ಸಾಹಿತ್ಯ ಭಾಷೆ, ವಿಕಾಸ ಪ್ರಕಾಶನ, ಶೋಧನ ಶಿಕ್ಷಕರ ಬಡಾವಣೆ, ಎಂ.ಪಿ.ಪ್ರಕಾಶ ನಗರ, ಹೊಸಪೇಟೆ ತಾ. ಬಳ್ಳಾರಿ, ೨೦೦೮.

೦೪. ಅಂಬಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ಚೇತನ್ ಬುಕ್ ಹೌಸ್, ಮೈಸೂರು, ೨೦೦೧.

೦೫. ಅಂಜನಪ್ಪ, ಮಹಿಳೆ ಮತ್ತು ದುಡಿಮೆ, ಬಿ.ಹೆಚ್. ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು, ೧೯೯೪.

೦೬. ಇಂದಿರಾ, ಮಹಿಳೆ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೦೭. ಈಶ್ವರಪ್ಪ.ಎಂ.ಜಿ., ಮ್ಯಾಸಬೇಡರು, ಐ.ಬಿ.ಹೆಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೨.

೦೮. ಉಷಾ.ಎಂ., ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೦೯. ಓಬಳೇಶ್ ಕೆ.ಎ., ಅಸ್ಮಿತೆ ಮತ್ತು ಆತ್ಮವಿಮರ್ಶೆ, ಅರುಣ್ ಪ್ರಕಾಶನ, ಬೆಂಗಳೂರು, ೨೦೧೭

೧೦. ಕೃಷ್ಣಮೂರ್ತಿ ಹನೂರು, ಜನಪದ ವೀರಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೩.

೧೧. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೨. ಕೃಷ್ಣಮೂರ್ತಿ ಹನೂರು, ಜನಪದ ಮತ್ತು ಬುಡಕಟ್ಟು ಗೀತೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೮.

೧೩. ಕೃಷ್ಣಮೂರ್ತಿ ಹನೂರು, ನುಡಿಶೋಧ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.

೧೪. ಕೃಷ್ಣಮೂರ್ತಿ ಹನೂರು, ಸಾವಿರದ ಸಿರಿ ಬೆಳಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೧೫. ಕೃಷ್ಣಮೂರ್ತಿ ಹನೂರು, ಬೇಡನಾಯಕರು ಒಂದು ಜನಪದ ಅಧ್ಯಯನ(ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೦.

೧೬. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೯.

೧೭. ಗಾಯತ್ರಿ ಎನ್, ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೫.

೧೮. ಗಾಯತ್ರಿ ನಾವಡ, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.

೧೯. ಗಿರಿಜಾ.ಟಿ., ಚಿತ್ರದುರ್ಗ ಜಿಲ್ಲಾ ದರ್ಶನ, ರೇಖಾ ಪ್ರಕಾಶನ, ದಾವಣಗೆರೆ, ೧೯೯೧.

೨೦. ಗುರುಪ್ರಸಾದ್.ಸಿ.ಟಿ., ಏಳು ಊರಿನ ದೇವತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೨೧. ಗುರುಲಿಂಗಯ್ಯ.ಎಂ., ಕರ್ನಾಟಕದ ಗೊಲ್ಲ ಸಮುದಾಯ, ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಕೇಶನ್ಸ್, ಬೆಂಗಳೂರು, ೨೦೦೧

೨೨. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೩. ಚಂದ್ರಶೇಖರ.ಟಿ.ಆರ್., ಕರ್ನಾಟಜ ಜನಗಣತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೨೪. ದುರುಗಪ್ಪ.ಎಂ.ಕೆ., ವಿಜಯನಗರೋತ್ತರ ಸಾಲಿನ ಬೇಡ ಜನಾಂಗ: ಚಾರಿತ್ರಿಕ ಅಧ್ಯಯನ, ವಾಲ್ಮೀಕಿ ಸಾಹಿತ್ಯ ಸಂಪದ, ಚಿತ್ರದುರ್ಗ, ೨೦೧೦.

೨೫. ನರಸಿಂಹಾಚಾರ್.ಆರ್(ಸಂ)., ಕರ್ನಾಟಕ ಕವಿ ಚರಿತೆ(ಸಂಪುಟ ೧, ೨, ೩)

೨೬. ನಾಯಕ.ಡಿ.ಬಿ., ಗಿರಿಜನ ಸಿರಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೩.

೨೭. ಪ್ರಭಾಕರ.ಎ.ಎಸ್., ಮ್ಯಾಸಬೇಡರ ಕಥನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೨೮. ಪ್ರಭಾಕರ.ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೯. ಪ್ರಭಾಕರ.ಎ.ಎಸ್., ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೩೦. ಪ್ರಶಾಂತ್.ಹೆಚ್.ಡಿ., ಕರ್ನಾಟಕ ರಾಜ್ಯಕೋಶ–೪ ಜನಸಮುದಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೩೧. ಪಾರ್ವತಮ್ಮ.ಸಿ., ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭..

೩೨. ಬಸವರಾಜ ಸಬರದ, ಜನಪದ ದೈವಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೩೩. ಬೈರೇಗೌಡ.ಎಂ., ಜಾನಪದ ವೈವಿಧ್ಯ, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು, ೧೯೯೯.

೩೪. ಬೋರಲಿಂಗಯ್ಯ.ಹಿ.ಚಿ., ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೩೫. ಮರಿಕುಂಟೆ ತಿಪ್ಪೇಸ್ವಾಮಿ, ಮೊಳಕಾಲ್ಮೂರು ದರ್ಶನ, ಪ್ರಣತಿ ಪ್ರಕಾಶನ, ಚಿತ್ರದುರ್ಗ, ೨೦೧೨.

೩೬. ಮೀರಾಸಾಬಿಹಳ್ಳಿ ಶಿವಣ್ಣ, ಗೊಲ್ಲ ಕಡಗ, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು, ೧೯೯೯.

೩೭. ಮೀರಾಸಾಬಿಹಳ್ಳಿ ಶಿವಣ್ಣ, ಮ್ಯಾಸಮಂಡಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೩೮. ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲರ ಸಂಸ್ಕೃತಿ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂಋುಉೂ, ೨೦೦೪.

೩೯. ಮೀರಾಸಾಬಿಹಳ್ಳಿ ಶಿವಣ್ಣ, ದುರುಗ ಜಾನಪದ, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು, ೧೯೯೯.

೪೦. ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲರ ಸಂಸ್ಕೃತಿ, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು, ೨೦೦೪.

೪೧. ಮುತ್ತಯ್ಯ.ಎಸ್.ಎಂ., ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೪೨. ಮೂರ್ತಿಶ್ವರಯ್ಯ.ಚಿ.ತಾ., ಮಹಿಳೆ, ಸಮಾಜ ಮತ್ತು ಕಾನೂನು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೨.

೪೩. ಮೈತ್ರಿ.ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೪೪. ಮೈತ್ರಿ.ಕೆ.ಎಂ., ಬುಡ್ಗ ಜಂಗಮರು, ಕರ್ನಾಟಕ ಬುಡ್ಗ ಜಂಗಮ ಸಂಘ, ಹೊಸಪೇಟೆ, ೨೦೦೫.

೪೫. ಮೈಲಹಳ್ಳಿ ರೇವಣ್ಣ, ಚಿತ್ರದುರ್ಗ ಸುತ್ತಿನ ಜಾನಪದ ಕಾವ್ಯಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೪.

೪೬. ಮೋಹನ್‌ಕೃಷ್ಣ ರೈ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೪೭. ಮಂಜುನಾಥ ಬೇವಿನಕಟ್ಟೆ, ಜನ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೪೮. ಮಂಜುನಾಥ ಬೇವಿನಕಟ್ಟೆ, ಕರ್ನಾಟಕ ಜಾನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೪೯. ಯೋಗೀಶ್ವರಪ್ಪ.ಡಿ.ಎನ್., ಹಾಗಲವಾಡಿ ನಾಯಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೫೦. ರತ್ನಮ್ಮ.ಕೆ.ಎಸ್ ಮತ್ತು ಗಾಯತ್ರಿ.ಸ.ನ(ಸಂ)., ಮಹಿಳಾ ಮೀಸಲಾತಿ, ಈಶ್ವರಿ ಪ್ರಕಾಶನ, ಮೈಸೂರು, ೨೦೦೫.

೫೧. ರವೀಂದ್ರನಾಥ.ಕೆ., ನುಂಕೆಮಲೆ ಸಿದ್ಧೇಶ್ವರ ಪುರಾಣ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು, ೨೦೦೭.

೫೨. ರಮೇಶ.ಸ.ಚಿ., ಬೇಟೆ : ಸಾಂಸ್ಕೃತಿಕ ಪದಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೫೩. ರಮೇಶ.ಸ.ಚಿ., ಶಿಕಾರಿ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೫೪. ರಮೇಶ.ಸ.ಚಿ., ಕರ್ನಾಟಕದ ಜಾನಪದ ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೫೫. ರಾಜಶೇಖರಪ್ಪ.ಬಿ., ಇತಿಹಾಸ ಕಥನ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧.

೫೬. ರಾಮದಾಸ ಎಸ್. ರೆಡ್ಡಿ, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯.

೫೭. ಲಕ್ಕಪ್ಪಗೌಡ.ಹೆಚ್.ಜೆ., ಜಾನಪದ ಗಂಗೋತ್ರಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೬.

೫೮ ಲಕ್ಕಪ್ಪಗೌಡ.ಹೆಚ್.ಜೆ., ಜಾನಪದ ಗಂಗೋತ್ರಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೭.

೫೯. ಲಕ್ಕಪ್ಪಗೌಡ.ಹೆಚ್.ಜೆ., ಕರ್ನಾಟಕ ಬುಡಕಟ್ಟುಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೮.

೬೦. ಲಕ್ಷ್ಮಣ ತೆಲಗಾವಿ, ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ: ಒಂದು ಶತಮಾನ, ವಾಲ್ಮೀಕಿ ಸಾಹಿತ್ಯ ಸಂಪದ, ಚಿತ್ರದುರ್ಗ, ೨೦೦೪.

೬೧. ಲಕ್ಷ್ಮಣ ತೆಲಗಾವಿ ಮತ್ತು ಶ್ರೀನಿವಾಸ.ಎಂ.ವಿ(ಸಂ)., ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಜೋಯಿಸರ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ, ೧೯೭೭.

೬೨. ಲಕ್ಷ್ಮೀದೇವಿ, ಬೇಟೆ ಪರಂಪರೆ ಬೇಡರ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೬೩. ವಿಠ್ಠಲರಾವ್ ಗಾಯಕ್ವಾಡ್, ಭಾರತೀಯ ಸ್ತ್ರೀ ಜೀವನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೬೪. ವಿರೂಪಾಕ್ಷಿ ಪೂಜಾರಹಳ್ಳಿ, ಗಾದರಿ ಪಾಲನಾಯಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೬೫. ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೬೬. ವಿರೂಪಾಕ್ಷಿ ಪೂಜಾರಹಳ್ಳಿ, ದಲಿತರು ಮತ್ತು ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೬೭. ವಿರೂಪಾಕ್ಷಿ ಪೂಜಾರಹಳ್ಳಿ, ತಳವಾರಿಕೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೬೮. ವಿರೂಪಾಕ್ಷಿ ಪೂಜಾರಹಳ್ಳಿ, ಕಾಮಗೇತಿ ವಂಶಜರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೬೯. ವಿರೂಪಾಕ್ಷಿ ಪೂಜಾರಹಳ್ಳಿ, ಚಿನ್ನಹಗರಿ ಸಿರಿ, ಚಿನ್ನಹಗರಿ ಪ್ರಕಾಶನ, ಬಳ್ಳಾರಿ, ೨೦೦೬.

೭೦. ವಿರೂಪಾಕ್ಷಿ ಪೂಜಾರಹಳ್ಳಿ, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೭೧. ವಿರೂಪಾಕ್ಷಿ ಪೂಜಾರಹಳ್ಳಿ, ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೭೨. ವಿರೂಪಾಕ್ಷಿ ಪೂಜಾರಹಳ್ಳಿ, ವಾಲ್ಮೀಕಿ ಮತ್ತು ತಿರುವಳ್ಳುವರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೭೩. ವೀಣಾ.ಎಂ.ಪಿ., ಮನೆ ಸಮಾಜ ಮತ್ತು ಸಂಸ್ಕೃತಿ, ನೆಲಮನೆ, ಮಂಡ್ಯ, ೨೦೦೦.

೭೪. ವೀರಣ್ಣ ದಂಡೆ, ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೨.

೭೫. ವೀರಭದ್ರ ನಾಯ್ಕ.ಪಿ., ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೭೬. ವೀರೇಂದ್ರ ಸಿಂಪಿ, ಸಮಗ್ರ ಜಾನಪದ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೭೭. ವೆಂಕಟಗಿರಿ ದಳವಾಯಿ, ಸಂಸ್ಕೃತಿ ಮಹಿಳಾ ಮಾಲಿಕೆ(ಸಂ-೯), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮.

೭೮. ಶ್ಯಾಮಲ.ಸಿ.ಆರ್., ಪೂರ್ವ ಕರ್ನಾಟಕ ಪಾಳೆಯಗಾರರು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೭೯. ಶಿವಮೂರ್ತಿ.ಎಂ., ಸಾಮಾಜಿಕ ಸಂಶೋಧನಾ ವಿಧಾನಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೫.

೮೦. ಶ್ರೀನಿವಾಸ.ಎಂ.ವಿ. ಮತ್ತು ಲಕ್ಷ್ಮಣ ತೆಲಗಾವಿ(ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಚಂದ್ರವಳ್ಳಿ ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ, ೧೯೭೬.

೮೧. ಶ್ರೀಮತಿ.ಹೆಚ್.ಎಸ್., ಸ್ತ್ರೀವಾದಿ ಚಿಂತನೆ ಕೆಲವು ಪ್ರಶ್ನೆಗಳು, ಸಂದೇಹಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೮೨. ಶ್ರೀಮತಿ.ಹೆಚ್.ಎಸ್., ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೮೩. ಶ್ರೀಮತಿ.ಹೆಚ್.ಎಸ್., ಮಹಿಳೆ ಶೋಷಣೆ ಸವಾಲುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೮೪. ಶೈಲಜಾ ಹಿರೇಮಠ, ಸ್ತ್ರೀ ಕಥನ, ಭೂವನ ಪ್ರಕಾಶನ, ಹೊಸಪೇಟೆ, ೨೦೦೩.

೮೫. ಶಂಕರನಾರಾಯಣ.ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಮೈಸೂರು, ೧೯೮೨.

೮೬. ಸಣ್ಣಪಾಪಯ್ಯ, ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು, ಭಂಡಾರ ಪ್ರಕಾಶನ, ರಾಯಚೂರು, ೨೦೦೯.

೮೭. ಸರಜೂಕಾಟ್ಕರ್, ವಾಲ್ಮೀಕಿ, ಸೃಷ್ಟಿ ಪಬ್ಲಿಕೇಷನ್ಸ್, ವಿಜಯನಗರ, ಬೆಂಗಳೂರು, ೨೦೦೮.

೮೮. ಸವಿತಾ ನಾಯಕ, ಬುಡಕಟ್ಟು ಮಹಿಳೆಯರ ಪ್ರಸಾದನ ಕಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೮೯. ಸಾ.ರ. ಅಬೂಬಕರ್, ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೯೦. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು, ೧೯೯೭.

೯೧. ಸೋಮಶೇಖರ.ಎಸ್.ವೈ., ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೯೨. ಸಂಧ್ಯಾರೆಡ್ಡಿ.ಕೆ.ಆರ್., ಮಹಿಳಾ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೩.

೯೩. ಹರ್ತಿಕೋಟೆ ವೀರೇಂದ್ರ ಸಿಂಹ, ಘಟ್ಟಿಹೊಸಹಳ್ಳಿ ಗಟ್ಟಿಗ, ವಾಲ್ಮೀಕಿ ಸಂಪದ, ಚಿತ್ರದುರ್ಗ, ೨೦೦೨.

೯೪. ಹುಲ್ಲೂರು ಶ್ರೀನಿವಾಸ ಜೋಯ್ಸರು, ಚಿತ್ರದುರ್ಗದ ಬಖೈರು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೮.

೯೫. ಹೆಬ್ಬಾಲೆ ಕೆ. ನಾಗೇಶ್, ಬಹುಸಂಸ್ಕೃತಿ ಮತ್ತು ದೇಸಿ ಜಾತ್ರೆಗಳ ಮಹಾ ಸಮನ್ವಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

೯೬. ರಂಗರಾಜ ವನದುರ್ಗ(ಸಂ), ಜನಪದ ಸಾಂಸ್ಕೃತಿಕ ವೀರರು, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ೨೦೦೭.

೯೭. ಶ್ರೀಮತಿ.ಎಚ್.ಎಸ್., ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೯೮. ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲ ಬುಡಕಟ್ಟು ವೀರರು, ಸಿ.ವಿ.ಜೆ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

ಪರಾಮರ್ಶನ ಲೇಖನಗಳು

೦೧. ಅರುಣ ಜೋಳದಕೂಡ್ಲಿಗಿ, ಬೇಡತಿಯರು ಸಮುದಾಯದೊಳಗಿನ ಸಂಘರ್ಷ, ಮಂಜುನಾಥ ಬೇವಿನಕಟ್ಟೆ(ಸಂ), ವಾಲ್ಮೀಕಿ ಸಮುದಾಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೦೨. ಕರಿಶೆಟ್ಟಿ ರುದ್ರಪ್ಪ – ನಾಯಕ(ಬೇಡ) ಜನಾಂಗದ ಸ್ಥೂಲ ಪರಿಚಯ, ಮಂಜುನಾಥ ಬೇವಿನಕಟ್ಟೆ(ಸಂ), ವ್ಯಾಧ ಚರಿತೆ ಬೇಡ ಕುಲಮೂಲದ ಕಥನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೭.

೦೩. ಕೃಷ್ಣಮೂರ್ತಿ ಹನೂರು – ಪ್ರಕೃತಿ ಮತ್ತು ಕುಲಮೂಲ ಸಂಗತಿಗಳು, ಲಕ್ಷ್ಮಣ ತೆಲಗಾವಿ(ಸಂ), ಚರಿತ್ರೆ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೦೪. ಗೀತಾ.ಎಂ., ಯಂಕಂಚಿ – ಬುಡಕಟ್ಟು ಸಂಪ್ರದಾಯಗಳಲ್ಲಿ ಆಹಾರ ಕುರಿತಾದ ನಂಬಿಕೆಗಳು, ಕೇಶವನ್ ಪ್ರಸಾದ್ ಕೆ. ಮತ್ತು ಗಂಗಾಧರ ದೈವಜ್ಞ(ಸಂ), ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

೦೫. ತಿಪ್ಪೇಸ್ವಾಮಿ ಟಿ. ಮರಿಕುಂಟೆ – ವೀರಗಲ್ಲು ಮಾಸ್ತಿಕಲ್ಲುಗಳು, ಸೋಮಶೇಖರ್.ಎಸ್.ವೈ(ಸಂ)., ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೦೬. ದುರುಗಪ್ಪ.ಎಂ.ಕೆ – ಸುರಪುರ ನಾಯಕರ ಕಾಲದ ಹಬ್ಬ, ಜಾತ್ರೆಗಳು, ತಾರೀಹಳ್ಳಿ ಹನುಮಂತಪ್ಪ(ಸಂ), ನಾಯಕರ ಮಹಾಸಂಸ್ಥಾನ ಸುರಪುರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೦೭. ಬಸವರಾಜ ಕೋಡಗುಂಟಿ – ಬುಡಕಟ್ಟುಗಳ ಭಾಷಾ ಪಠ್ಯಪುಸ್ತಕಗಳ ತಯಾರಿ ಒಂದು ಮಾತುಕತೆ, ಶ್ರೀನಿವಾಸ.ಎಲ್.(ಸಂ), ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೦೮. ಬಸವರಾಜ ಮಲಶೆಟ್ಟಿ – ನಾಯಕರ(ಬೇಡರ) ಶವಸಂಸ್ಕಾರ, ಹೆಬ್ಬಾಲೆ ಕೆ. ನಾಗೇಶ್(ಸಂ), ಜಾನಪದ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೦೯. ಮುತ್ತಯ್ಯ.ಎಸ್.ಎಂ – ಬುಡಕಟ್ಟು ನೆಲೆಯಲ್ಲಿ ಬೇಡರು, ಮೈತ್ರಿ.ಕೆ.ಎಂ. ಮತ್ತು ಚೆಲುವರಾಜು(ಸಂ), ಬುಡಕಟ್ಟು ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೦. ಮಂಜುನಾಥ ಬೇವಿನಕಟ್ಟೆ – ಸಾಂಸ್ಕೃತಿಕ ಸ್ಮೃತಿ : ಬೇಡ–ನಾಯಕ ಸಮುದಾಯ, ಹೆಬ್ಬಾಲೆ ಕೆ. ನಾಗೇಶ್(ಸಂ), ಜಾನಪದ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೧೧. ಮಾರುತಿ.ಎಸ್, ಬೇಡ ಸಮುದಾಯದ ಮುಂದಿನ ಸವಾಲುಗಳು

೧೨. ಜಗದೀಶ ಕುಮಾರ ಚ ನಾಯಕ, ಬುಡಕಟ್ಟು ಮಹಿಳಾ ಅಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಪಾತ್ರ

೧೩. ಯಶೋಧ.ಎಸ್, ಪರಿಶಿಷ್ಟ ಬುಡಕಟ್ಟಿನ ಜನರು ಶಿಕ್ಷಣ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು

೧೪. ಸಾಣೀಕೆರೆ ಸಣ್ಣೋಬಯ್ಯ – ಬೇಡರ ವಸತಿ ದಿಬ್ಬ, ಅಮರೇಶ ಯತಗಲ್(ಸಂ), ಏಕಲವ್ಯ, ರಂಗಮ್ಮ ರಾಮನಗೌಡ ಪಾಟೀಲ, ನವಿಲುಗುಡ್ಡ, ದೇವದುರ್ಗ ತಾ. ರಾಯಚೂರು. ಪು–೪೭

೧೫. ಸಿಧ್ಧಪ್ಪ ಎಂ. ಬೆಳಗಟ್ಟಿ, ಕರ್ನಾಟಕದ ಬೇಡರ ಬುಡಕಟ್ಟು ಮಹಿಳೆ : ಸಾಂಸ್ಕೃತಿಕ ವಿಶ್ಲೇಷಣೆ, ಹರ್ತಿಕೋಟೆ ವೀರೇಂದ್ರ ಸಿಂಹ ಮತ್ತು ಅಮರೇಶ ಯತಗಲ್(ಸಂ), ವಾಲ್ಮೀಕಿ ಮಂದಾರ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ ತಾ. ಚಿತ್ರದುರ್ಗ, ಪು–೨೨೦.

ಇಂಗ್ಲೀಷ್ ಪರಾಮರ್ಶನ ಗ್ರಂಥಗಳು

೦೧. Anantha Krishna lyer L. K - The Mysore Tribes and Castes Vol 2 - Mittal Publications, New Delhi, 1988.

೦೨. Anantha Krishna lyer L. K and Nanjundaiah (ed), The Mysore Tribes and Castes - Mysore University, Mysore, 1988.

೦೩. Rice B. L - Epigraphia of Carnatica Vol XI - Mysore Govt Central Press, Bangalore.

೦೪. Thurston Edgar and Rangachari K(ed) - Castes and Tribes of Southern India Vol I - Asian Education Services, New Delhi. 1987

೦೫. Thurston E - Castes and Tribes of Southern India Vol I - A/B Cosmo Publications, New Delhi, 1975.

೦೬. Sathyan B. N - Mysore State Gazatteer, Mysore Govt Central Press, Bangalore, 1967.

ನಿಘಂಟುಗಳು

೦೧. ಕನ್ನಡ - ಕನ್ನಡ - ಇಂಗ್ಲೀಷ್ ನಿಘಂಟು -

೦೨. ಕನ್ನಡ ರತ್ನಕೋಶ - ೧೯೭೭ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೪.

೦೩. ಕನ್ನಡ ವಿಶ್ವಕೋಶ ಸಂಪುಟ ೧ ಮತ್ತು ೨ - ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೦೪. ಸಂಕ್ಷಿಪ್ತ ಕನ್ನಡ ನಿಘಂಟು

೦೫. ತೆಲುಗು ಪದಕೋಶ, ತೆಲುಗು - ಕನ್ನಡ ನಿಘಂಟು, ಪಾಣ್ಯಂ ರಾಮ ಶೇಷಶಾಸ್ತ್ರಿ(ಸಂ), ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೫.

ದಿನಪತ್ರಿಕೆಗಳು

೦೧. ಕನ್ನಡ ಪ್ರಭ, ಫೆಬ್ರವರಿ - ೨೦೧೪.

೦೨. ಸಂಯುಕ್ತ ಕರ್ನಾಟಕ, ಮಾರ್ಚ್ - ೨೦೧೩.

೦೩. ಪ್ರಜಾವಾಣಿ, ಸೆಪ್ಟೆಂಬರ್ - ೧೪, ೧೬, ೧೭, ೧೮, ೨೦೧೫ ಮತ್ತು ಜನವರಿ ೨೨, ೨೦೧೫.

ನಿಯತಕಾಲಿಕೆಗಳು

೦೧. ಚರಿತ್ರೆ ಅಧ್ಯಯನ.

೦೨. ಜನಪದ, ಮಾಸಿಕ, ಬೆಂಗಳೂರು.

೦೩. ಜನಪದ ಜಗತ್ತು.

೦೪. ಪ್ರಬುದ್ಧ ಕರ್ನಾಟಕ.

೦೫. ವಾಲ್ಮೀಕಿ ಕರ್ನಾಟಕ, ಮಾಸಿಕ, ಬೆಂಗಳೂರು.

೦೬. ವಾಲ್ಮೀಕಿ ಬಂಧು, ಮಾಸಿಕ, ಧಾರವಾಡ.

೦೭. ವಾಲ್ಮೀಕಿ ವಾಣಿ, ಮಾಸಿಕ, ಚಿತ್ರದುರ್ಗ.

೦೮. ಸಂಶೋಧನ ತರಂಗ.

೦೯. ಜಾನಪದ ಕರ್ನಾಟಕ, ಕನ್ನಡ ವಿಶ್ವವಿದ್ಯಾಲಯ.

* * * *

ಮ್ಯಾಸಬೇಡ ಸಮುದಾಯದ ವಕ್ತೃಗಳ ವಿವರ

ಕ್ರ.ಸಂ	ಹೆಸರು	ವಯಸ್ಸು	ಉದ್ಯೋಗ	ಶಿಕ್ಷಣ	ಊರು	ಜಿಲ್ಲೆ
೦೧	ಪಾಪಮ್ಮ	೫೮	ಕೂಲಿ	ಇಲ್ಲ	ಕಂಪಳದೇವರಹಟ್ಟಿ	ಚಿತ್ರದುರ್ಗ
೦೨	ನಾಗಮ್ಮ	೪೫	ಕೂಲಿ	ಇಲ್ಲ	ನನ್ನಿವಾಳ	ಚಿತ್ರದುರ್ಗ
೦೩	ಪಾಲಮ್ಮ	೨೮	ಕೂಲಿ	ಇಲ್ಲ	ಮುತ್ತಯ್ಯನಹಟ್ಟಿ	ಚಿತ್ರದುರ್ಗ
೦೪	ಸಣ್ಣಪಾಲಯ್ಯ	೬೦	ವ್ಯವಸಾಯ	ಇಲ್ಲ	ಮ್ಯಾಸರಹಟ್ಟಿ	ಚಿತ್ರದುರ್ಗ
೦೫	ಬೋರಯ್ಯ	೫೦	ವ್ಯವಸಾಯ	ಇಲ್ಲ	ನೆಲಗೇತನಹಟ್ಟಿ	ಚಿತ್ರದುರ್ಗ
೦೬	ಶರಣಮ್ಮ	೫೨	ಕೂಲಿ	ಇಲ್ಲ	ಮುತ್ತಯ್ಯನಹಟ್ಟಿ	ಚಿತ್ರದುರ್ಗ
೦೭	ಲಕ್ಷ್ಮೀ	೨೬	ಗೃಹಿಣಿ	ಬಿ.ಎ	ರಾಯಪುರ	ಚಿತ್ರದುರ್ಗ
೦೮	ಬೊಮ್ಮಯ್ಯ	೩೬	ವ್ಯವಸಾಯ	ಇಲ್ಲ	ಗೋನೂರು	ಚಿತ್ರದುರ್ಗ
೦೯	ಅನ್ನಪೂರ್ಣ	೨೬	ಕೂಲಿ	ಇಲ್ಲ	ಬಚ್ಚಬೋರನಹಟ್ಟಿ	ಚಿತ್ರದುರ್ಗ
೧೦	ಪಾರ್ವತಮ್ಮ	೫೫	ಕೂಲಿ	ಇಲ್ಲ	ಸಾಸಲಟ್ಟಿ	ಚಿತ್ರದುರ್ಗ
೧೧	ಜಯಮಂಗಳ	೨೬	ಗೃಹಿಣಿ	ಬಿ ಇಡಿ	ಸೂರಮ್ಮನಹಳ್ಳಿ	ಚಿತ್ರದುರ್ಗ
೧೨	ಕೊಟ್ರಮ್ಮ	೩೪	ಗೃಹಿಣಿ	೮ನೇ ತರಗತಿ	ದೇವರಹಳ್ಳಿ	ಚಿತ್ರದುರ್ಗ
೧೩	ಬೋರಮ್ಮ	೪೦	ಕೂಲಿ	ಇಲ್ಲ	ಗೌರಸಮುದ್ರ	ಚಿತ್ರದುರ್ಗ
೧೪	ಪಾರ್ವತಮ್ಮ	೩೦	ಕೂಲಿ	ಇಲ್ಲ	ಚಳ್ಳಕೆರೆ	ಚಿತ್ರದುರ್ಗ
೧೫	ಪಾಲಯ್ಯ	೪೫	ಕೂಲಿ	ವ್ಯವಸಾಯ	ಹಾಯಕಲ್	ಚಿತ್ರದುರ್ಗ
೧೬	ಬೋರಯ್ಯ	೫೦	ವ್ಯಾಪಾರ	ಬಿ.ಎ	ಕೆಳಗೋಟೆ	ಚಿತ್ರದುರ್ಗ
೧೭	ಸಣ್ಣಪಾಪಮ್ಮ	೪೦	ಕೂಲಿ	ಪಿ.ಯು.ಸಿ	ಕಾಟಪ್ಪನಹಟ್ಟಿ	ಚಿತ್ರದುರ್ಗ
೧೮	ಜಯಲಕ್ಷ್ಮಿ	೩೦	ಗೃಹಿಣಿ	ಬಿ.ಎ,ಬಿ.ಇಡಿ	ನನ್ನಿವಾಳ	ಚಿತ್ರದುರ್ಗ
೧೯	ಮಂಜಮ್ಮ	೪೫	ಗೃಹಿಣಿ	ಎಂ.ಎ	ನೇರಲಗುಂಟೆ	ಚಿತ್ರದುರ್ಗ
೨೦	ಪಾಪಮ್ಮ	೨೬	ಗ್ರಾ.ಪಂ. ಸದಸ್ಯರು	ಎಂ.ಎ	ಸೂರಮ್ಮನಹಳ್ಳಿ	ಚಿತ್ರದುರ್ಗ

೨೧	ವಿಶಾಲಾಕ್ಷಿ	೩೨	ಕೂಲಿ	ಇಲ್ಲ	ತುಮಕೂರಲಹಳ್ಳಿ	ಚಿತ್ರದುರ್ಗ
೨೨	ಪಾಲಮ್ಮ	೪೫	ಕೂಲಿ	ಇಲ್ಲ	ಚಿನ್ನೋಬನಹಳ್ಳಿ	ಚಿತ್ರದುರ್ಗ
೨೩	ಪಾಪಮ್ಮ	೫೫	ಕೂಲಿ	ಇಲ್ಲ	ದೇವರಟ್ಟಿ	ಚಿತ್ರದುರ್ಗ
೨೪	ಸಾಕಮ್ಮ	೩೮	ಅಂಗನವಾಡಿ ಕಾರ್ಯಕರ್ತೆ	ಪಿ.ಯು.ಸಿ	ಸುಲ್ತಾನಿಪುರ	ಚಿತ್ರದುರ್ಗ
೨೫	ಪಾಪಮ್ಮ	೩೬	ಅಂಗನವಾಡಿ ಕಾರ್ಯಕರ್ತೆ	ಪಿ.ಯು.ಸಿ	ಮೇಗಳಹಳ್ಳಿ	ಚಿತ್ರದುರ್ಗ
೨೬	ಮುತ್ತಪ್ಪ	೬೫	ವ್ಯವಸಾಯ	ಇಲ್ಲ	ಕೋನಸಾಗರ	ಚಿತ್ರದುರ್ಗ
೨೭	ಬೊಮ್ಮಯ್ಯ	೭೫	ಕೃಷಿ	ಇಲ್ಲ	ಗೋನೂರು	ಚಿತ್ರದುರ್ಗ
೨೮	ಚಂದ್ರಪ್ಪ	೬೦	ವ್ಯವಸಾಯ	ಇಲ್ಲ	ಕಾಗಳಗೆರೆ	ಚಿತ್ರದುರ್ಗ
೨೯	ಓಬಳೇಶ್	೩೫	ಡ್ರೈವರ್	ಪಿ.ಯು.ಸಿ	ಕಾಗಳಗೆರೆ	ಚಿತ್ರದುರ್ಗ
೩೦	ಹನುಮಂತಮ್ಮ	೫೦	ಕೂಲಿ	ಇಲ್ಲ	ಬ್ಯಾಲಹಾಳ್	ಚಿತ್ರದುರ್ಗ
೩೧	ನಿರಂಜನ್.ಸಿ	೪೫	ವ್ಯಾಪಾರ	ಬಿ.ಎ	ಹಿರೇ ಕಬ್ಬಿಗೆರೆ	ಚಿತ್ರದುರ್ಗ
೩೨	ಗಂಗಮ್ಮ	೩೮	ಗೃಹಿಣಿ	ಪಿ.ಯು.ಸಿ	ಹಿರೇ ಕಬ್ಬಿಗೆರೆ	ಚಿತ್ರದುರ್ಗ
೩೩	ರೂಪ	೩೫	ಗೃಹಿಣಿ	ಬಿ.ಎ	ಬಳ್ಳೆಕಟ್ಟೆ	ಚಿತ್ರದುರ್ಗ
೩೪	ಕಂಪಳಪ್ಪ	೭೦	ಕೃಷಿ	ಇಲ್ಲ	ಗಂಜಿಗಟ್ಟೆ	ಚಿತ್ರದುರ್ಗ
೩೫	ಅರ್ಚನ	೨೮	ಶಿಕ್ಷಣ	ಎಂ.ಎ.,ಪಿಎಚ್.ಡಿ	ಇಂಗಳದಾಳ್	ಚಿತ್ರದುರ್ಗ
೩೬	ಈರಮ್ಮ	೩೦	ಶಿಕ್ಷಣ	ಎಂ.ಎ.,ಪಿಎಚ್.ಡಿ	ಕಮಲಾಪುರ	ಬಳ್ಳಾರಿ
೩೭	ನಿರ್ಮಲ	೨೭	ಶಿಕ್ಷಣ	ಎಂಎ	ಜಗಳೂರು	ದಾವಣಗೆರೆ
೩೮	ಸವಿತಾ	೩೦	ಗ್ರಾ.ಪಂ.ಸದಸ್ಯರು	ಪಿ.ಯು.ಸಿ	ಕಂದಗಲ್ಲು	ದಾವಣಗೆರೆ
೩೯	ನೇತ್ರಮ್ಮ	೩೬	ಅಂಗನವಾಡಿ ಕಾರ್ಯಕರ್ತೆ	ಪಿ.ಯು.ಸಿ	ಕಲ್ಕೆರೆ	ದಾವಣಗೆರೆ
೪೦	ಸುನಂದ	೪೫	ಗೃಹಿಣಿ	ಇಲ್ಲ	ಭರಮಸಾಗರ	ಚಿತ್ರದುರ್ಗ
೪೧	ಬಸಮ್ಮ	೪೦	ಕೂಲಿ	ಇಲ್ಲ	ದೊಡ್ಡೇರಿ	ಚಿತ್ರದುರ್ಗ
೪೨	ವಿದ್ಯಾವತಿ	೩೪	ಗೃಹಿಣಿ	ಇಲ್ಲ	ಹುಣಸೆಕಟ್ಟೆ	ಚಿತ್ರದುರ್ಗ
೪೩	ಮೇಘನ	೨೪	ಗೃಹಿಣಿ	ಬಿ.ಎ	ಮದಕರಿಪುರ	ಚಿತ್ರದುರ್ಗ

೪೪	ಸುನಂದ	೪೬	ಶಿಕ್ಷಕಿ	ಬಿ.ಎ	ಬಚ್ಚಬೋರಯ್ಯನಹಟ್ಟಿ	ಚಿತ್ರದುರ್ಗ
೪೫	ಹನುಮಂತಪ್ಪ	೮೦	ಕೃಷಿ	ಇಲ್ಲ	ಸಾಸಲು	ಚಿತ್ರದುರ್ಗ
೪೬	ಸಾವಿತ್ರಮ್ಮ	೬೫	ವ್ಯಾಪಾರ	ಇಲ್ಲ	ಬಿದರಿಕೆರೆ	ಚಿತ್ರದುರ್ಗ
೪೭	ಸುಮ	೨೫	ಗೃಹಿಣಿ	ಬಿ.ಎ	ಹಳಿಯೂರು	ಚಿತ್ರದುರ್ಗ
೪೮	ಚೈತ್ರ	૩೦	ಗೃಹಿಣಿ	ಪಿ.ಯು.ಸಿ	ಹರ್ತಿಕೋಟೆ	ಚಿತ್ರದುರ್ಗ
೪೯	ಸುನಂದ	૩೦	ಗೃಹಿಣಿ	೮ನೇ ತರಗತಿ	ಮಾರಮ್ಮನಹಳ್ಳಿ	ಚಿತ್ರದುರ್ಗ
೫೦	ರೂಪಮ್ಮ	೨೨	ಗೃಹಿಣಿ	ಪಿ.ಯು.ಸಿ	ದೇವರಟ್ಟಿ	ಚಿತ್ರದುರ್ಗ

ಛಾಯಾಚಿತ್ರಗಳು



ಮಾಹಿತಿ ನೀಡುತ್ತಿರುವ ಬೋರಯ್ಯ ನೆಲಗೇತೇನಹಟ್ಟಿ



ಮಾಹಿತಿ ನೀಡುತ್ತಿರುವ ಬೋರಜ್ಜಿ



ಮಾಹಿತಿ ನೀಡುತ್ತಿರುವ ಪದ್ಮಾವತಿ



ಅಂಗನವಾಡಿ ಕಾರ್ಯಕರ್ತೆ ಸುಲೋಚನಾ ಸಾಸಲಟ್ಟಿ



ಹೂ ಕಟ್ಟುತ್ತಿರುವ ಜಯಮ್ಮ ಮತ್ತು ಕುಟುಂಬದವರು



ವ್ಯಾಪಾರ ಮಾಡುತ್ತಿರುವ ಬೋರಮ್ಮ



ಕಾಳಿನ ಹಬ್ಬಕ್ಕೆ ಕಾಳು ಕೊಡುತ್ತಿರುವುದು



ಕೆಂಡ ತುಳಿಯುತ್ತಿರುವ ಸಾಕಮ್ಮ



ರಾಶಿಗೆ ಸೋಬಾನೆ ಹೇಳುತ್ತಿರುವುದು



ಕಂಪಳ ದೇವರಿಗೆ ಮಡಿಯಾಗಿರುವುದು



ಮಾರಮ್ಮನ ಹಬ್ಬದಲ್ಲಿ ಕೋಣ ಬಲಿಯಾಗಿರುವುದು



ಮಾರಮ್ಮನಿಗೆ ಬೇವಿನ ಸೀರೆ ಉಟ್ಟಿರುವುದು



ಋತುಮತಿ ಶಾಸ್ತ್ರ



ನಾಮಕರಣದ ತೊಟ್ಟಿಲು



ಮದುವೆಯಲ್ಲಿ ಹಾಲು ಬಿಡುವ ಶಾಸ್ತ್ರ



ಕಡಕಂಬದ ಮರ ಮಿಂಚೇರಿ ಗುಡ್ಡ


ಮದುವೆಯಾದ ನಂತರ ಮನೆಯ ಮುಂದೆ ಆರತಿಶಾಸ್ತ್ರ


ಮಿಂಚೇರಿ ಗುಡ್ಡದಲ್ಲಿ ನೀರಿನ ಒರತೆ



ಗಂಜಿಗಟ್ಟಿಯ ಹೊಂಡ



ಸತಿಗಲ್ಲಾದ ಕೆಂಚವ್ವ-ಕಾಮವ್ವ



ದೇವರ ಹಾಡು ಹೇಳುತ್ತಿರುವ ಬೋರಮ್ಮ- ಚೆನ್ನಮ್ಮ

Chitradurga



ಜಾನಪದ ಅಧ್ಯಯನ ವಿಭಾಗ